1925

ನವೆಂಬರ

೨೬-11-95
ರವಿವಾರ

ಶ್ರೀ ಆದಿದೇವಾನಂದ ಸ್ವಾಮಿಜಿಯವ-
ರಿಂದ ದತ್ತವಾದುದು.

ಬೆಂಗಳೂರು ಬಸವನಗುಡಿಯಲ್ಲಿರುವ

ಶ್ರೀರಾಮಕೃಷ್ಣಾಶ್ರಮ.

—o—

ಇದರ ಮುಖ್ಯವಾದ ಉದ್ದೇಶಗಳು:—

1. ಎಲ್ಲ ಮತಗಳೂ ಒಂದೇ ದೇವರನ್ನು ಬೇರೆ ಬೇರೆ ಹೆಸರಿನಿಂದಲೂ, ಹಾದಿಗಳಿಂದಲೂ ಪೂಜಿಸುತ್ತವೆಯೆಂಬ ವೇದಾಂತದ ತತ್ವಗಳನ್ನು ಸುಶಿಕ್ಷಿತರಾದ ಸನ್ಯಾಸಿಗಳ ಮೂಲಕ ಪ್ರಚಾರಗೊಳಿಸುವುದು.
2. ಜಾತಿಭೇದವಿಲ್ಲದೆ ಎಲ್ಲರನ್ನೂ ಭಗವದಂಶವೆಂದು ಭಾವಿಸಿ, ಅವರ ಕುಂದು ಕೊರತೆಗಳನ್ನು ನಿವಾರಣೆಮಾಡುವ ಮೂಲಕ ದೇವರ ಸೇವೆ ಮಾಡುವುದು.

ಈ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಆಶ್ರಮದಲ್ಲಿ ನಡೆಸುವ ಕೆಲಸಗಳು:—

1. ದೇವರ ನಿತ್ಯಪೂಜೆ.
2. ಎಲ್ಲ ಅವತಾರ ಪುರುಷರ ಮತ್ತು ಆಚಾರ್ಯರುಗಳ ವಾರ್ಷಿಕವರ್ಧಂತ್ಯುತ್ಸವಗಳು.
3. ಪ್ರತ್ಯಹವೂ ಆಗಂತುಕರೊಡನೆ ವೇದಾಂತವಿಚಾರ. (ಬೆಳಿಗ್ಗೆ 8-10 ಗಂಟೆಯು ವರೆಗೆ; ಸಾಯಂಕಾಲ 4-6 ಗಂಟೆಯು ವರೆಗೆ).
4. ಪ್ರತಿ ದಿನವೂ ಮಂಗಳಾರತಿ ಮತ್ತು ಸ್ತೋತ್ರಪಾಠ (ರಾತ್ರಿ 7-7½ ಗಂಟೆಯು ವರೆಗೆ)
5. ಪ್ರತಿ ಭಾನುವಾರವೂ ಸೆಂಟ್ರಲ್ ಜೈಲಿನಲ್ಲಿ ಸುಮಾರು 200 ಜನರಿಗೆ ಧರ್ಮೋಪದೇಶ.
6. ಪ್ರತಿ ಭಾನುವಾರವೂ ಆಶ್ರಮದಲ್ಲಿ ಸಾಯಂಕಾಲ 6-7 ವರಿಗೆ, ಆಶ್ರಮದ ಅಧ್ಯಕ್ಷರಿಂದ ಧರ್ಮವಿಷಯವಾದ ಉಪನ್ಯಾಸ.
7. ಅಡಿಗಡಿಗೆ ಕೇಳಿಕೊಂಡ ಜನರ ಇಷ್ಟಾನುಸಾರ, ಅವಕಾಶದೊರೆತಂತೆ ಬೆಂಗಳೂರಲ್ಲಿಯೂ ಇತರ ಕಡೆಗಳಲ್ಲಿಯೂ ಪ್ರಸಂಗಗಳು.

8. ಆಶ್ರಮದಲ್ಲಿರುವ ಪುಸ್ತಕಭಂಡಾರವನ್ನು ಎಲ್ಲರೂ ಉಚಿತವಾಗಿ
ಯೋಗಿಸಬಹುದು.

9. ಆಶ್ರಮವು ಕೆಲವು ವೇದಾಂತಗ್ರಂಥಗಳನ್ನು ಕನ್ನಡದಲ್ಲಿ ರಚಿಸು
ವುದು.

10. ಆಶ್ರಮದಲ್ಲಿ ಕನ್ನಡ, ತಮಿಳು, ತೆಲುಗು, ಇಂಗ್ಲೀಷಿನಲ್ಲಿ ವೇದ
ಪುಸ್ತಕಗಳೂ, ಶ್ರೀರಾಮಕೃಷ್ಣರ ಮತ್ತು ಅವರ ಸಾಧುಗಳ
ಪಠಗಳೂ ಮಾರಲ್ಪಡುತ್ತವೆ.


11. ವೇದಾಂತಮಾರ್ಗದಲ್ಲಿ ನಡೆಯಬೇಕೆಂಬುವರಿಗೆ ಆಶ್ರಮವು
ಸಹಾಯವನ್ನು ಕಲ್ಪಿಸಿಕೊಡುವುದು.

12. ಮಿಕ್ಕ ವಿಶೇಷ ವಿಷಯಗಳನ್ನು ಆಶ್ರಮದಲ್ಲಿರುವ ಸ್ವಾಮಿಗ
ತಿಳಿಯಬಹುದು.

III. ಆಶ್ರಮದಲ್ಲಿ ದೊರೆಯುವ ಕನ್ನಡದ ಪುಸ್ತಕಗಳು:—

ಲೀಲಾಪ್ರಸಂಗ—ಟಿ. ಯಸ್. ವೆಂಕಣ್ಣಯ್ಯ ಎಂ. ಎ.	೧ ೦
ಸ್ವಾಮಿ ಶಿಷ್ಯಸಂವಾದ—ಕೃಷ್ಣಶಾಸ್ತ್ರಿ	೧ ೮
ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆ— ಕೆ. ವಿ. ಪುಟ್ಟಪ್ಪ ಎಂ. ಎ.	೦ ೧೨
ಸ್ವಾಮಿ ವಿವೇಕಾನಂದರ ಕರ್ಮಯೋಗ	೦ ೧೨
ನನ್ನ ಆಚಾರ್ಯ—ವೈ. ಕೆ. ರಾಮಚಂದ್ರರಾವ್ ಬಿ. ಎ., ಎಲ್. ಸಿ. ಇ.	೦ ೬
ಶ್ರೀರಾಮಕೃಷ್ಣ ವಚನಾಮೃತ ಪ್ರಥಮಭಾಗ	೧ ೦
ಡಿಟ್ಟೋ ದ್ವಿತೀಯಭಾಗ	೧ ೦

ಬೆಂಗಳೂರು.
24—9—1935



ಶ್ರೀಃ.

ಶ್ರೀರಾಮಕೃಷ್ಣವಚನಾಮೃತ

ಪ್ರಥಮಭಾಗ



ಬೆಂಗಳೂರು ಬಸವನಗುಡಿಯಲ್ಲಿರುವ


ಶ್ರೀರಾಮಕೃಷ್ಣಾಶ್ರಮದಿಂದ ಪ್ರಕಟಿಸಲ್ಪಟ್ಟಿದೆ

ಪ್ರಥಮ ಮುದ್ರಣ

ಬೆಂಗಳೂರು ಸಿಟಿ

ಬಿ. ಶ್ರೀನಿವಾಸ ಅಯ್ಯಂಗಾರ್ಯರವರಿಂದ ಮುದ್ರಿತವಾಯಿತು

೧೯೨೫



ಶ್ರೀ ರಾಮಕೃಷ್ಣ ಪರಮಹಂಸ ದೇವರು.

శ్రీరామకృష్ణస్తోత్రం

[illegible]



ಶ್ರೀ ರಾಮಕೃಷ್ಣ ಪರಮಹಂಸ ದೇವರು.

ಶ್ರೀರಾಮಕೃಷ್ಣಸ್ತೋತ್ರ.

———o———

ರಾಗ—ಧನ್ಯಾಸಿ ಆದಿತಾಳ.

(" ರಾಮಮಂತ್ರವ ಜಪಿಸೋ " ಎಂಬಂತೆ.)

ರಾಮಕೃಷ್ಣರ ಭಜಿಸೋ। ಹೇ ಮನುಜಾ।
ರಾಮಕೃಷ್ಣರ ಭಜಿಸೋ॥ ಪಲ್ಲವಿ॥

ಭೂಮಿಯೊಳಗೆ ಸಂಸಾ। ರಾಮಯವೃತರ್ಗೆ ವ।
ಚೋಮೃತವೆರೆದು ಸು। ಕ್ಷೇಮವ ಬೀರಿದ॥ ಅನುಪಲ್ಲವಿ॥

ಅರಸರ ಬಸಿರೊಳು ಬಾರದೆ ಬಡತನ।
ವೆರಸಿದ ವಿಪ್ರವಂಶದೊಳುದಿಸಿ॥
ಧರೆಗತಿಶಯವಾದ ಯೋಗಸಾಧನೆಯಿಂದೆ।
ಪರಮಾತ್ಮನನೊಲಿಸಿದ ಯಮಿವರರನು ॥೧॥

ಮುಸಲಮಾನ ಕ್ರಿಸ್ತ ಶಾಕ್ತ ವೈಷ್ಣವ ಶೈವ।
ರೆಸೆವ ಮತಗಳ ಸಾಧನವ ಮಾಡಿ॥
ಮಿಸುಗುವೀಶ್ವರನೆಲ್ಲರಿಗವೊಂದೆಯೆಂದೆನು।
ತುಸುರಿ ಶಾಂತಿಯ ನೆಲೆಗೊಳಿಸಿದ ಮಹಿಮರ ॥೨॥

ದೂರ ಸಾರ್ಕೆಗಳಿಂದ ಸೂರಿಯನೇರೀತಿ।
ತೋರುವನಾರೀತಿ ದ್ವೈತಾದಿಯ॥
ಮೂರು ಮತಂಗಳಿಂದೀಶ್ವರಸಾಕ್ಷಾ।
ತ್ಕಾರವಾಗುವುದೆಂದುಸುರಿದ ಯೋಗಿಯ ॥೩॥

ಭಿನ್ನ ಭಿನ್ನ ಪ್ರಕೃತಿಗಳಿಗೆ ತಕ್ಕಂತೆ।
ಭಿನ್ನ ಭಿನ್ನಂಗಳಾದುವು ಪಥವು॥
ಸನ್ನುತಕರ್ಮಭಕ್ತಿಜ್ಞಾನಯೋಗಂಗ।
ಳೆನ್ನುತೊರೆದ ಸದ್ಗುರುಮಾರಾಯರ ॥೪॥

ವನಿತೆಹೇಮಂಗಳೆ ಭಗವಂತನ ಕಾಣ।
ಲೆನಿತೊ ವಿಶ್ರಾಂತಿಕಾರಣಗಳೆಂದು॥
ಜನರವನುಳಿದೊಡೆ ಪರಮಾತ್ಮನ ಪದ।
ವನಜದರ್ಶನ ಬೇಗವಹುದೆಂದು ಸಾರಿದ ॥೫॥

ಫಲಸಂಗಕರ್ತೃತ್ವತ್ಯಾಗವ ಮಾಡುತೆ।
ನೆಲದೊಳು ಲೋಕಸೇವೆಯ ಮಾಡಲು॥
ಸಲೆ ವಿಶ್ವರೂಪನಾದೀಶ್ವರಸೇವೆಯ।
ಫಲವಹುದೆಂದುಸಿರಿದ ಯತಿರಾಜರ ॥೬॥

ಧರ್ಮಾಚರಣೆಯಿಂದ ಋಷಿಭಾವ ಸುಸಮಾಧಿ।
ಬ್ರಹ್ಮಸಾಕ್ಷಾತ್ಕಾರ ಜನ್ಮಮೃತಿಗಳ॥
ಹಮ್ಮಿಲ್ಲ ಸಚ್ಚಿದಾನಂದರೂಪದ ಮುಕ್ತಿ।
ನೆಮ್ಮುವುದೆನುತುಪದೇಶಿಸಿದವರನು ॥೭॥

ಬ್ರಹ್ಮನನರಿದವ ಬ್ರಹ್ಮನೆಯಾಗುವ।
ಬ್ರಹ್ಮವಿದನು ಪರಗತಿವಡೆವ॥
ರಂಹದಿನೆಂದುಪದೇಶಿಸಿ ಶಿಷ್ಯರ।
ನಿರ್ಮಳಮನದೆ ತತ್ವದ ಬೇರನೂರಿದ ॥೮॥

ವೈರಾಗ್ಯಭಕ್ತಿಜ್ಞಾನವಿವೇಕದ।
ಸಾರತರಾತ್ಮಶಕ್ತಿಯನಿರಿಸಿ॥
ಆರಯೆ ಸಚ್ಛಿಷ್ಯರೊಳು ಜಗಕವರಿಂ ಪ್ರ।
ಚಾರವಪ್ಪಂತೆಸಗಿದ ಗುರುವರ್ಯರ ॥೯॥

ರಾಮಕೃಷ್ಣಾದ್ಯವತಾರಕಾಲದ ಧರ್ಮ।
ಸೀಮೆಯನೀಬದ್ಧ ಕಲಿಯುಗದೆ॥
ಭೂಮಿಯೊಳಗೆ ನಿಲಿಸಿದ ರಾಮಕೃಷ್ಣಶ್ರೀ।
ಸ್ವಾಮಿಪಾದವ ನಂಬಿ ಸುಖಿಯಾಗೊ ಮನುಜ ॥೧೦॥

ಅವತಾರಿಕೆ

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ॥
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ॥
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥

'ಆಯಾ ಕಾಲಗಳಲ್ಲಿ ಧರ್ಮಕ್ಕೆ ಅವನತಿಯುಂಟಾಗಿ ಅಧರ್ಮವು ತಲೆಯೆತ್ತುವುದೋ, ಆಯಾ ಕಾಲಗಳಲ್ಲಿ ನಾನು ಅವತರಿಸುತ್ತೇನೆ. ಸಜ್ಜನರನ್ನು ಪರಿಪಾಲಿಸಿ, ಪಾಪವನ್ನು ಹೋಗಲಾಡಿಸಿ, ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ, ನಾನು ಒಂದೊಂದು ಯುಗದಲ್ಲಿಯೂ ಅವತಾರವಮಾಡುತ್ತೇನೆ,' ಎಂದು ಪರಮಾತ್ಮನು ಗೀತೆಯಲ್ಲಿ ಅಪ್ಪಣೆಕೊಡಿಸಿದ್ದಾನೆ. ಅದರಂತೆಯೇ ಅವನು ಅಧರ್ಮಕ್ಕೆ ಕುಂದು ಬಂದಾಗಳೆಲ್ಲ ರಾಮಕೃಷ್ಣಾದ್ಯವತಾರಗಳನ್ನು ಮಾಡಿಯೂ, ಮಹಾತ್ಮರನ್ನು ಸೃಷ್ಟಿಸಿಯೂ ಅದನ್ನು ಉದ್ಧರಿಸಿ ರಕ್ಷಿಸಿದ್ದಾನೆ. ಚರಿತ್ರೆಗೆ ಗೋಚರವಾದ ಮೂರು ಸಾವಿರ ವರ್ಷಗಳಿಂದೀಚೆಗೆ ಮಹಾಮಹಿಮರಾದ ಗೌತಮ ಬುದ್ಧ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ, ಮಧ್ವಾಚಾರ್ಯ, ರಾಮಾನಂದ, ಕಬೀರ, ನಾನಕ, ಚೈತನ್ಯ, ಮುಂತಾದವರು ಭಾರತಭೂಮಿಯಲ್ಲಿಯೂ, ಝೋರಾಸ್ಟರ್, ಕಾನ್ಫ್ಯೂಷಿಯಸ್, ಯೇಸುಕ್ರಿಸ್ತ, ಮಹಮ್ಮದ ಮುಂತಾದವರು ಇತರಭೂಭಾಗಗಳಲ್ಲಿಯೂ ಅವತರಿಸಿ, ಆಯಾ ಕಾಲಗಳಲ್ಲಿ ಲುಪ್ತವಾಗಿ ಹೋಗಿದ್ದ ಮತಧರ್ಮಗಳನ್ನು ತಿದ್ದಿ, ನೇರಮಾಡಿ, ಆಯಾ ದೇಶಗಳಲ್ಲಿ ಶಿಷ್ಟಾಚಾರಗಳನ್ನೂ ಮತಧರ್ಮಗಳನ್ನೂ ನೆಲೆಗೊಳಿಸಿದರು. ಧರ್ಮೋದ್ಧಾರಕ್ಕಾಗಿ ಅವತಾರಗಳಾದ ಕೆಲವು ಕಾಲಾನಂತರದಲ್ಲಿ ಧರ್ಮಾಚರಣೆಗಳು ಜನರ ಮನದಲ್ಲಿ ಮಂಕಾಗಿ ತೋರುತ್ತ ಬರುವುದರಿಂದಲೂ, ಅನ್ಯ ಜನಾಂಗದವರ ಸಮ್ಮೇಳನ ಸಹವಾಸಗಳಿಂದ ಜನರಿಗೆ ಹೊಸಹೊಸದಾದ ಅನುಭವಗಳುಂಟಾಗುತ್ತ ಬರುವುದರಿಂದಲೂ, ಶಾಸ್ತ್ರಾಭ್ಯಾಸದಿಂದಲೂ ಸೃಷ್ಟಿಯಲ್ಲಿ ತೋರುವ ಅನುಭವದಿಂದಲೂ ಜ್ಞಾನವು ವೃದ್ಧಿಯಾಗುತ್ತ ಬರುವುದರಿಂದಲೂ, ಕಾಲಧರ್ಮವು ವಿಪರೀತವಾಗುತ್ತ ಬಂದಿದೆ. ಈ ಮಹನೀಯರು ಉಪದೇಶಿಸಿದ ಶಿಷ್ಟಾಚಾರ ಮತಧರ್ಮಗಳೆಲ್ಲವೂ ಅವರವರು ಬರೆದಿಟ್ಟಿರುವ ಗ್ರಂಥಗಳಲ್ಲಿಯೇ ಅಡಗಿಹೋಗಿವೆ. ಈಗ ಪ್ರಯಾಣಕ್ಕೆ ಸೌಕರ್ಯವು ಬಹುವಾಗಿ ಹೆಚ್ಚಿರುವುದರಿಂದಲೂ, ಪ್ರಪಂಚದಲ್ಲಿ ಆರ್ಥಿಕಸಂಪತ್ತು ಅತಿಶಯವಾಗಿ ವೃದ್ಧಿಯಾಗುತ್ತ ಬಂದಿರುವುದರಿಂದಲೂ, ಆಹಾರವ್ಯವಹಾರ, ವೇಷಭಾಷೆ, ಆಚಾರ, ಮತ ಸಂಪ್ರದಾಯಗಳಲ್ಲಿ ಭಿನ್ನರಾಗಿರುವ ಭಿನ್ನ ಭಿನ್ನ ಭೂಮಿಯವರು ಒಟ್ಟುಗೂಡುತ್ತ ಬಂದರು. ಈ ಸಕಲ ಜನಾಂಗದವರೂ ಕಲಿಪ್ರಾಬಲ್ಯದಿಂದ ಐಹಿಕಸಂಪತ್ತೇ ಪರಮಪುರುಷಾರ್ಥವೆಂದೆಣಿಸಿ, ತಮ್ಮ ತಮ್ಮ ಶಿಷ್ಟಾಚಾರಗಳೂ ಮತಧರ್ಮಗಳೂ ಏನೆಂಬುದನ್ನು ಅರಿಯದೆ, ಬರಿಯ ಮತಾಭಿಮಾನದಿಂದ, 'ನಮ್ಮ ಮತವೇ ಹೆಚ್ಚು; ಮಿಕ್ಕವೆಲ್ಲವೂ ಕೀಳು ;

ಎಂದು ಭಾವಿಸಿ, ಒಬ್ಬರೊಡನೊಬ್ಬರು ಜಗಳವಾಡುತ್ತ, ವಾದವಿವಾದವಾಡುತ್ತ ಬಂದರು. ಇದರಿಂದ ಧರ್ಮವು ಕಾಡ ಪಾಲಾಗುತ್ತ ಬಂದಿತು.

ಈ ರೀತಿಯಾಗಿ ಪ್ರಪಂಚದಲ್ಲಿ ಧರ್ಮವು ಅಳಿದು, ಅಧರ್ಮಗಳು ಪ್ರಬಲವಾಗುತ್ತ ಬರಲಾಗಿ, ಕರುಣಾಸಾಗರನಾದ ಜಗದೀಶ್ವರನು, 'ಅಯ್ಯೋ! ನಾನು ದೇಶಕಾಲ ವ್ಯವಹಾರಗಳಿಗೆ ತಕ್ಕಂತೆ ಒಂದೊಂದು ಕಡೆಯಲ್ಲಿಯೂ ಸದಾಚಾರ್ಯರ ಮೂಲಕ ಧರ್ಮೋಪದೇಶವನ್ನು ಮಾಡಿಸಿ, ಎಲ್ಲರೂ ನನ್ನೆಡೆಗೆ ಬರುವುದಕ್ಕೆ ಹಾದಿಯನ್ನು ತೋರಿದ್ದರೂ, ಇವರು ಕಲಿಪ್ರಾಚುರ್ಯದಿಂದ ಅಜ್ಞಾನಾಂಧಕಾರದಲ್ಲಿ ಬಿದ್ದು ಮುಂದರಿಯದೆ, ಸುಮ್ಮನೆ ದುರಾಚರಣೆಗಳಲ್ಲಿಯೂ, ವಾದವಿವಾದಗಳಲ್ಲಿಯೂ ತೊಳಲಿ ಕಂಗೆಡುತ್ತಿರುವರಲ್ಲ, ಈ ಒಂದೊಂದು ಮತದಲ್ಲಿಯೂ ಸಾರವಾದುದಾವುದು? ಎಂಬುದನ್ನು ಇನ್ನೊಮ್ಮೆ ಇವರಿಗೆ ಉಪದೇಶಿಸದಿದ್ದರೆ ಮಹದನರ್ಥವುಂಟಾದೀತು,' ಎಂದು ಮರುಗಿ, ಕ್ರಿಸ್ತಾಬ್ದ ೧೮೩೬ ರಲ್ಲಿ ವಂಗದೇಶದೊಳಗೆ ಶ್ರೀರಾಮಕೃಷ್ಣ ಪರಮಹಂಸರ ರೂಪದಿಂದ ಅವತಾರವಾಡಿದನು.

ಈ ಮಹಾಮಹಿಮರು ಬಾಲ್ಯದಲ್ಲಿಯೇ ಯೋಗಸಿದ್ಧಿಯನ್ನು ಪಡೆದು, ಈ ಭರತಖಂಡದೊಳಗೆ ಪ್ರಚಾರದಲ್ಲಿರುವ ಶೈವ, ವೈಷ್ಣವ, ಶಾಕ್ತ, ಮುಂತಾದ ವೈದಿಕಮತಗಳಲ್ಲಿಯೂ, ಕ್ರಿಸ್ತ, ಮಹಮ್ಮದ ಮುಂತಾದ ಇತರಮತಗಳಲ್ಲಿಯೂ, ಆಯಾ ಮತದವರ ಸಂಪ್ರದಾಯಾನುಸಾರವಾಗಿಯೇ ಸಾಧನೆಗಳನ್ನು ಮಾಡಿ, ಎಲ್ಲ ಮತಗಳಲ್ಲಿಯೂ ಏಕಪ್ರಕಾರವಾಗಿ ಬ್ರಹ್ಮಸಾಕ್ಷಾತ್ಕಾರವಾಡಿದರು.

"ಒಂದೊಂದು ಮತದವರೂ ತಮ್ಮ ತಮ್ಮ ಮತಾಚಾರ್ಯರು ಹೇಳಿರುವ ಕ್ರಮದಲ್ಲಿ ಸಾಧನೆಮಾಡುತ್ತ ಬಂದರೆ ಭಗವತ್ಸಾಕ್ಷಾತ್ಕಾರವಾಡಬಹುದು. ಒಂದೊಂದು ಮತವೂ ಭಗವಂತನ ಬಳಿಗೆ ಹೋಗುವ ಒಂದೊಂದು ದಾರಿ. ವೇದಾಂತಮತದಲ್ಲಿ ಹೇಳಿರುವ ಕರ್ಮ, ಜ್ಞಾನ, ಭಕ್ತಿ, ಯೋಗಗಳೆಂಬ ಮಾರ್ಗಗಳೇ ಎಲ್ಲ ಮತದಲ್ಲಿಯೂ ಪ್ರತಿಪಾದಿತವಾಗಿವೆ. ಈ ಒಂದೊಂದು ಮಾರ್ಗಾಚರಣೆಗೂ ಇಂದ್ರಿಯಸಂಯಮನವೀಗ ಪ್ರಥಮಸೋಪಾನ. ಇದಕ್ಕೆ ಕಾಮಿನೀಕಾಂಚನ ತ್ಯಾಗವೇ ಮುಖ್ಯವಾದ ಸಹಕಾರಿಸಾಧನ.

"ಮನುಷ್ಯನಿಗೆ ಸಾಮಾನ್ಯವಾಗಿ ಮೊತ್ತಮೊದಲು, 'ದೇವರಿದ್ದಾನೆ,' ಎಂಬ ವಿಶ್ವಾಸವೇ ಇರುವುದಿಲ್ಲ. ಸತ್ಕಾರ್ಯಗಳನ್ನು ಮಾಡುತ್ತ ಬಂದರೆ, ಆಗ ಅವನಿಗೆ, 'ಅಸ್ತಿ,' ಎಂಬ ಜ್ಞಾನವುಂಟಾಗುತ್ತದೆ- ಇನ್ನೂ ಹೆಚ್ಚಾಗಿ ಮಾಡುತ್ತ ಹೋದರೆ, 'ದೇವರು ದೂರದಲ್ಲಿ ಇದ್ದಾನೆ,' ಎಂದೂ, ಆ ಮೇಲೆ, 'ಹತ್ತಿರ ನಮ್ಮಲ್ಲಿಯೇ ಇದ್ದಾನೆ,' ಎಂದೂ, ಕೊನೆಗೆ, 'ಅವನೇ ಎಲ್ಲವೂ ಆಗಿದ್ದಾನೆ; ಅವನಲ್ಲದೆ ಆವುದೂ ಇಲ್ಲ,' ಎಂದೂ ತೋರುತ್ತದೆ. ಇದೀಗ ದ್ವೈತವಿಶಿಷ್ಟಾದ್ವೈತ ಅದ್ವೈತವಾದಗಳು.

"ಈ ಪ್ರಪಂಚದಲ್ಲಿ ಮನುಷ್ಯನಾಗಿ ಹುಟ್ಟಿದುದಕ್ಕೆ ಬ್ರಹ್ಮಸಾಕ್ಷಾತ್ಕಾರಮಾಡುವುದೇ ಪರಮೋದ್ದೇಶ. ಮನವನ್ನೆಲ್ಲ ಭಗವಂತನಲ್ಲಿಯೇ ಇರಿಸಿ ಸಾಧನೆಯನ್ನು ಮಾಡಿದ ಹೊರತು ಅವನನ್ನು ಪಡೆಯುವುದಕ್ಕಾಗುವುದಿಲ್ಲ."

ಈ ರೀತಿಯಾಗಿ ಈ ಅವತಾರಪುರುಷರು ಮತವಿಚಾರವನ್ನು ಸ್ಪಷ್ಟಪಡಿಸಿ, ದುರಭಿಮಾನದಿಂದ ಅನ್ಯಮತೀಯರನ್ನು ದೂರುವುದು ತಪ್ಪು, ಎಂದು ತಿಳಿಸಿ, ಒಬ್ಬೊಬ್ಬನೂ ಅವನವನ ಮತದಲ್ಲಿಯೇ ಅವನವನ ಇಷ್ಟದೇವತೆಯನ್ನು ಭಜಿಸುತ್ತ ತನ್ಮೂಲಕ ಪರಮಾತ್ಮನನ್ನು ಸಾಕ್ಷಾತ್ಕರಿಸಬಹುದು, ಎಂದು ಒತ್ತಿಹೇಳಿ, ಸಕಲ ಮತಧರ್ಮಗಳಿಗೂ ಐಕಕಂಠ್ಯವನ್ನು ಕಲ್ಪಿಸಿ, ಜನರಲ್ಲಿ ಮತವ್ಯಾಜದಿಂದ ದ್ವೇಷಾಸೂಯೆಗಳುಂಟಾಗುವುದಕ್ಕೆ ಎಷ್ಟು ಮಾತ್ರವೂ ಕಾರಣವಿಲ್ಲವೆಂದು ವಿಶದಪಡಿಸಿದ್ದಾರೆ.

ಈ ಮಹಾಮಹಿಮರು ಗಹನವಾದ ತತ್ತ್ವಾರ್ಥಗಳನ್ನು ಶಿಷ್ಯಮಂಡಲಿಗೆ ದಿನಗಟ್ಟಲೆಯ ವ್ಯಾವಹಾರಿಕ ದೃಷ್ಟಾಂತಗಳಿಂದ ಸುಲಭವಾಗಿ ಬೋಧೆಯಾಗುವಂತೆ ಉಪದೇಶಿಸಿದ್ದಾರೆ. ಪಂಡಿತ ಪಾಮರ ಸ್ತ್ರೀಬಾಲರಿಗೂ ಚೆನ್ನಾಗಿ ತಿಳಿಯುವ ರೀತಿಯಲ್ಲಿ ಅತ್ಯಂತದುರ್ಬೋಧವಾದ ವೇದಾಂತಾರ್ಥಗಳನ್ನು ಬಹು ಸುಲಭವಾದ ಉದಾಹರಣೆಗಳ ಮೂಲಕವಾಗಿಯೂ, ಕಥೆಗಳ ಮೂಲಕವಾಗಿಯೂ, ಉಪದೇಶಮಾಡಿರುತ್ತಾರೆ.

ಈ ಗುರುವರ್ಯರ ಉಪದೇಶಗಳನ್ನು ಇವರ ಅಂತರಂಗ ಶಿಷ್ಯರಾದ ಶ್ರೀಯುತ ಮಹೇಂದ್ರನಾಥಗುಪ್ತರವರು ಬಂಗಾಳೀಭಾಷೆಯಲ್ಲಿ ಪುಸ್ತಕರೂಪವಾಗಿ ರಚಿಸಿದ್ದಾರೆ. ಶ್ರೀಯುತಗುಪ್ತರು ಕಲಿಕತೆಯೊಳಗೆ ಒಂದು ದೊಡ್ಡ ಪಾಠಶಾಲೆಯ ಯಜಮಾನರು. ಅವರು ಆ ವಿದ್ಯಾಶಾಲೆಯ ಅಧ್ಯಕ್ಷಪದವಿಯನ್ನು ಅಲಂಕರಿಸಿದ್ದು ಈಗ ವಿಶ್ರಾಂತರಾಗಿದ್ದಾರೆ. ಅವರು ೧೮೮೨ ನೆಯ ಕ್ರಿಸ್ತಾಬ್ದದಲ್ಲಿ ಭಗವಾನ್ ಶ್ರೀರಾಮಕೃಷ್ಣರವರ ದರ್ಶನವನ್ನು ಮಾಡಿ, ಅವರ ಸಂಗಡಲೇ ಇದ್ದುಕೊಂಡು, ಅವರು ಭಕ್ತರೊಡನೆ ಮಾಡಿದ ಸಂಭಾಷಣೆಗಳನ್ನೆಲ್ಲ ಆಗಾಗಲೇ ಗುರುತುಮಾಡಿಕೊಂಡು, ಲೋಕೋಪಕಾರಬುದ್ಧಿಯಿಂದ ಐದು ಸಂಪುಟಗಳಿರುವ ಪುಸ್ತಕವನ್ನು ಬರೆದಿದ್ದಾರೆ. ಇದು ಇಂಗ್ಲೀಷ್, ಹಿಂದಿ, ಮರಾಠಿ, ತಮಿಳು, ಮಳೆಯಾಳ ಮುಂತಾದ ಭಾಷೆಗಳಿಗೆ ಪರಿವರ್ತನವಾಗಿದೆ. ಈ ಗ್ರಂಥದ ಕೆಲವು ಭಾಗವನ್ನು ಕನ್ನಡನುಡಿಗೆ ಪರಿವರ್ತನಮಾಡಲಾಗಿದೆ. ಇದನ್ನು ಕನ್ನಡಕ್ಕೆ ಭಾಷಾಂತರಮಾಡುವುದಕ್ಕೆ ಉದಾರಭಾವದಿಂದ ಅನುಮತಿಯನ್ನಿತ್ತಿರುವ ಶ್ರೀಯುತ ಗುಪ್ತರವರಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ.

ಇದನ್ನು ಪರಿವರ್ತಿಸುವುದಕ್ಕೋಸ್ಕರವಾಗಿಯೇ ಬಂಗಾಳೀಭಾಷೆಯನ್ನು ಕಲಿತುಕೊಂಡು, ಕನ್ನಡದಲ್ಲಿ ಪುಸ್ತಕವನ್ನು ಬರೆದು, ಅಲ್ಲಲ್ಲಿಯೇ ಹಾಡುಗಳನ್ನೂ ಪದ್ಯವೃತ್ತಗಳನ್ನೂ ರಚಿಸಿಕೊಟ್ಟ, ಕನ್ನಡಪಂಡಿತರೆಂದು ಖ್ಯಾತಿಪಡೆದು ಅನೇಕ ಗ್ರಂಥಗಳನ್ನು ರಚಿಸಿ, ಕರ್ಣಾಟ ಭಾಷಾಮಾತೆಯ ಸೇವೆಯಲ್ಲಿ ನಿರತರಾಗಿರುವ

ಶ್ರೀಮಾನ್ ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರವರಿಗೂ, ಈ ಪರಿವರ್ತನಕಾರ್ಯದಲ್ಲಿ ಇದೇ ರೀತಿಯಾಗಿ ಶ್ರಮವನ್ನು ವಹಿಸಿದ ಶ್ರೀಮಾನ್ ವಿದ್ವಾನ್ ಎನ್. ಎಸ್. ತಿರುನಾರಣಯ್ಯಂಗಾರ್ಯರವರಿಗೂ, ಪುಸ್ತಕವನ್ನು ಕ್ಷಿಪ್ರಕಾಲದಲ್ಲ ಅಂದವಾಗಿ ಮುದ್ರಿಸಿಕೊಟ್ಟ, ಮ|| ರಾ|| ಬಿ. ಶ್ರೀನಿವಾಸ ಅಯ್ಯಂಗಾರ್ಯರವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ಪುಸ್ತಕದಲ್ಲಿ ಐದು ಚಿತ್ರಗಳನ್ನು ಕೊಟ್ಟಿರುತ್ತೇವೆ. ಈ ಗ್ರಂಥಕ್ಕೆ ಅಧಿಷ್ಠಾತೃದೇವತೆಯೆನಿಸಿದ ಶ್ರೀರಾಮಕೃಷ್ಣ ಪರಮಹಂಸರವರ ಚಿತ್ರವನ್ನೂ, ಅವರು ಭಕ್ತರೊಡನೆ ಸಂಭಾಷಣೆ ಮಾಡಿ, ಧ್ಯಾನ ತಪಸ್ಸುಗಳನ್ನು ಮಾಡುತ್ತ, ವಾಸಿಸುತ್ತಿದ್ದ ಪುಣ್ಯಭೂಮಿಯಾದ ಶ್ರೀದಕ್ಷಿಣೇಶ್ವರ ದೇವಾಲಯದ ಚಿತ್ರವನ್ನೂ ಕೊಟ್ಟಿರುವುದು ಉಚಿತವಾಗಿಯೇ ಇದೆ.

ನಮ್ಮ ಭಗಿನಿಯರ ಉಪಯೋಗಕ್ಕಾಗಿ ಮಹಾಮಾತೆ ಶ್ರೀಶಾರದಾಮಣಿದೇವಿಯವರ ಚಿತ್ರವನ್ನೂ ಕೊಟ್ಟಿದ್ದೇವೆ. ಪರಿಶುದ್ಧಭಾವದಿಂದಲೂ ಬ್ರಹ್ಮಸಾಕ್ಷಾತ್ಕಾರದಿಂದಲೂ ಪಾತಿವ್ರತ್ಯಕ್ಕೂ ಶಿಷ್ಯಭಾವಕ್ಕೂ ಅನುಪಮವಾದ ಆದರ್ಶವೆನಿಸಿ, ಶ್ರೀರಾಮನಿ ಸೀತೆಯಂತೆಯೂ, ಶ್ರೀಕೃಷ್ಣನಿಗೆ ರಾಧೆಯಂತೆಯೂ ಶ್ರೀರಾಮಕೃಷ್ಣರ ಲೀಲೆಗೆ ಮುಖ್ಯಾಂಗವೆನಿಸಿ, ಆ ಮಹನೀಯರ ಅವತಾರೋದ್ದೇಶವನ್ನು ಸಫಲಗೊಳಿಸಿ ಈ ಮಹಾತಾಯಿಯು ಪ್ರಸಿದ್ಧಿಯಾಗಿದ್ದಾರೆ. ಇವರ ಚರಿತ್ರೆಯನ್ನು ತಿಳಿದವರು ಈ ಪಟವನ್ನು ನೋಡಿ ಸಂತೋಷದಲ್ಲಿ ಭಾಗಿಗಳಾಗುವುದರಲ್ಲ ಅನುಮಾನವಿಲ್ಲ.

ಭಗವಾನರ ಉಪದೇಶದಿಂದ ಆಧುನಿಕವಿದ್ಯಾಪರಿಣತರೆನಿಸಿದ್ದರೂ ಬಾಲ್ಯದಿಂದಲೇ ಸರ್ವಸಂಗಪರಿತ್ಯಾಗಮಾಡಿ ಸನ್ಯಾಸಿಗಳಾದ ಅವರ ಶಿಷ್ಯಮಂಡಲಿಯೊಡಗೂಡಿದ ಚಿತ್ರವೂ ಕೊಡಲ್ಪಟ್ಟಿದೆ.

ಈ ಶಿಷ್ಯವರ್ಗದಲ್ಲಿ ಮುಖಂಡರಾಗಿ, ಭಗವಾನರವರ ಪ್ರೇಮಪಾತ್ರವಾಗಿ ಅವರಿಂದಲೇ ವಿಶೇಷವಾಗಿ ಹೊಗಳಲ್ಪಟ್ಟ, ಸಕಲವಿದ್ಯಾಪಾರಂಗತರಾದ, ವೇದಾಂತಮತವನ್ನು ಅಮೇರಿಕಾ, ಯೂರೋಪ್ ಮುಂತಾದ ಭೂಮಂಡಲದಲ್ಲೆಲ್ಲ ಸ್ಥಾಪಿಸಿ, ಶ್ರೀಸ್ವಾಮಿವಿವೇಕಾನಂದರೆಂಬ ಸನ್ಯಾಸನಾಮದಿಂದ ಪ್ರಖ್ಯಾತನಾಗಿರುವ ನರೇಂದ್ರನ ಚಿತ್ರವನ್ನು ಈಗ್ರಂಥದಲ್ಲಿ ಕೊಟ್ಟಿರುವುದು ಸಮಂಜಸವಾಗಿದೆಯೆಂದು ಪಾಠಕಮಹಾಶಯರು ಒಪ್ಪದೆ ಇರಲಾರರು.

ಪರಮಹಂಸರು ತಮ್ಮ ತಪೋಬಲದಿಂದ ಸನಾತನಧರ್ಮಗಳನ್ನು ಆಧುನಿಕದೃಷ್ಟಿಯಿಂದ ಸಾಕ್ಷಾತ್ಕಾರಮಾಡಿಕೊಂಡಿದ್ದುದರಿಂದ, ಅವರ ವಾಕ್ಕು ಈಗಣ ಜನರ ಮನಸ್ಸನ್ನು ಆಕರ್ಷಿಸಿ ಅವರ ಹೃದಯದಲ್ಲಿ, ಚೆನ್ನಾಗಿ ನಾಟುತ್ತದೆ. ಅಜ್ಞರೂ, ಪ್ರಾಜ್ಞರೂ, ಜ್ಞಾನಿಗಳೂ, ಸಂಸಾರಿಗಳೂ, ಸನ್ಯಾಸಿಗಳೂ, ಸ್ತ್ರೀಯರೂ, ನಾನಾ

ಮತೀಯರೂ ಪರಮಹಂಸರ ಬಳಿಗೆ ಬಂದು, ತಮ್ಮತಮ್ಮ ಸಂಶಯಗಳನ್ನೆಲ್ಲ ಪರಿಹಾರಮಾಡಿಕೊಂಡು ಹೋಗಿದ್ದಾರೆ. ಅದರಿಂದ ಇಂತಹ ಸಂಭಾಷಣೆಗಳನ್ನೊಳಕೊಂಡಿರುವ ಈ ಗ್ರಂಥದಲ್ಲಿ ಚರ್ಚೆಗೆ ಬಾರದ ವಿಷಯಗಳೇ ಇರುವುದಿಲ್ಲ. ಕಠಿಣವಾದ ಸಂಸ್ಕೃತಭಾಷೆಯಲ್ಲಿ ಅಡಗಿರುವ ಶಾಸ್ತ್ರಾರ್ಥಗಳನ್ನು ಓದಿ ತಿಳಿಯಲಿಕ್ಕೆ ಅವಕಾಶವಿಲ್ಲದ ಈಗಣ ಜನರಿಗೆ ಈ ಗ್ರಂಥವು ಅತ್ಯಂತಪ್ರಯೋಜನಕಾರಿಯಾಗಿದೆ. ಇದರ ಸವಿಯನ್ನು ಕನ್ನಡನಾಡಿನ ಭ್ರಾತೃಭಗಿನಿಯರೆಲ್ಲರೂ ಆಸ್ವಾದಿಸಿ ಆನಂದಿಸಲೆಂದು ಸುಲಭವಾದ ಕನ್ನಡನುಡಿಗಳಿಂದ ಗ್ರಂಥವನ್ನು ಬರೆದು ಪ್ರಕಟಿಸಿದೆ.

ಈ ಅಮೋಘವಾದ ಗ್ರಂಥವು ಜ್ಞಾನಿಗಳಿಗೆ ಜ್ಞಾನವನ್ನೂ, ಅಜ್ಞರಿಗೆ ತಿಳಿವನ್ನೂ, ಸಂಸಾರಿಗಳಿಗೆ ಹಿತವಚನಗಳನ್ನೂ, ವಿದ್ವಾಂಸರಿಗೆ ವೈದುಷ್ಯವನ್ನೂ, ಮತಾನುಯಾಯಿಗಳಿಗೆ ಮತರಹಸ್ಯಗಳನ್ನೂ, ಬಾಲಕರಿಗೆ ಕಥೆಗಳನ್ನೂ, ಸ್ತ್ರೀಯರಿಗೆ ನೀತಿಬೋಧೆಯನ್ನೂ, ಕೀರ್ತನಕಾರರಿಗೆ ಕೀರ್ತನೆಗಳನ್ನೂ, ಸಾಮಾನ್ಯರಿಗೆ ಸಾಮಾನ್ಯಧರ್ಮಗಳನ್ನೂ, ಉಪದೇಶಿಸುತ್ತ ಕಲ್ಪವೃಕ್ಷದಂತೆ ಕೇಳಿದವರ ಇಷ್ಟಾರ್ಥಗಳನ್ನು ಸಲ್ಲಿಸಿಕೊಂಡು ಪ್ರಕಾಶಿಸುತ್ತಿದೆ. ಇದರಲ್ಲಿ ವಿಷಯಗಳು ಸಕಲಮತಸಮ್ಮತವಾಗಿ ನಿರೂಪಿತವಾಗಿರುವುದರಿಂದ, ಸ್ತ್ರೀಬಾಲವೃದ್ಧರಾದಿಯಾಗಿ ಕರ್ಣಾಟದೇಶಬಂಧುಗಳೆಲ್ಲರೂ ಈ ಉತ್ಕೃಷ್ಟಗ್ರಂಥವನ್ನು ನಿತ್ಯವೂ ಪಠಿಸಿ, ವಿವೇಕ ವೈರಾಗ್ಯ ಜ್ಞಾನಭಕ್ತಿಗಳೆಂಬ ಅಮೋಘಫಲಗಳನ್ನು ಸಂಪಾದಿಸಿ, ಪರಮಾತ್ಮನ ಅನುಗ್ರಹಕ್ಕೆ ಪಾತ್ರವಾಗಿ, ಇತೋಽಪ್ಯತಿಶಯವಾಗಿ ಪಾರಮಾರ್ಥಿಕಸುಖಸಂಪತ್ತಿಯನ್ನು ಪಡೆಯುತ್ತಾರೆಂದು ನಂಬಿದೆ.

೧೯೨೫ ಏಪ್ರೆಲ್ ೩ ನೆಯ ತೇದಿ.
ಬೆಂಗಳೂರು ಬಸವನಗುಡಿಯಲ್ಲಿರುವ
ಶ್ರೀರಾಮಕೃಷ್ಣಾಶ್ರಮ.

ಸೂಚೀಪತ್ರ

ಚಿತ್ರಪಟದ ವಿವರ

ಶ್ರೀಃ

ಶ್ರೀರಾಮಕೃಷ್ಣವಚನಾಮೃತ

ಪ್ರಥಮ ಖಂಡ

ಉಪಕ್ರಮಣಿಕೆ

ಶ್ರೀರಾಮಕೃಷ್ಣದೇವರ ಸಂಕ್ಷೇಪಚರಿತ್ರೆ

ಬಂಗಾಳದೇಶದ ಹುಗಲೀ ಜಿಲ್ಲೆಗೆ ಸೇರಿದ ದೇರೇ ಎಂಬ ಗ್ರಾಮದಲ್ಲಿ ಕ್ಷುಧಿರಾಮಚಟ್ಟೋಪಾಧ್ಯಾಯನೆಂಬ ಒಬ್ಬ ಬ್ರಾಹ್ಮಣನು ವಾಸಮಾಡಿಕೊಂಡಿದ್ದನು. ಅವನು ಬಹು ನಿಷ್ಠನು, ಪರಮ ಭಕ್ತ, ಸತ್ಕುಲಪ್ರಸೂತನು. ಅವನಿಗೆ ಚಂದ್ರಮಣಿದೇವಿಯೆಂಬ ಪತ್ನಿಯಿದ್ದಳು. ಆಕೆಯು ಸರಳತೆಯ ಪ್ರತಿಕೃತಿಯಂತೆಯೂ ದಯೆಯ ಮೂರ್ತಿಯಂತೆಯೂ ಇದ್ದಳು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳೂ ಒಂದು ಹೆಣ್ಣೂ ಆದರು. ಮೊದಲನೆಯ ಮಗನ ಹೆಸರು ರಾಮಕುಮಾರ. ಎರಡನೆಯವನ ಹೆಸರು ರಾಮೇಶ್ವರ. ಕ್ಷುಧಿರಾಮಚಟ್ಟೋಪಾಧ್ಯಾಯನು ಪತ್ನೀಪುತ್ರರೊಡನೆ ಆ ಗ್ರಾಮದಲ್ಲಿ ಸಂಸಾರಕಾರ್ಯವನ್ನು ನಿರ್ವಹಿಸಿಕೊಂಡಿದ್ದನು.

ಆ ಗ್ರಾಮದ ಯಜಮಾನನಾದ ಜಮಿನಾನುದಾರನು ಒಂದು ವ್ಯಾಜ್ಯದಲ್ಲಿ ತನ್ನ ಕಡೆಗೆ ಸುಳ್ಳು ಸಾಕ್ಷ್ಯವನ್ನು ಹೇಳಬೇಕೆಂದು ಕ್ಷುಧಿರಾಮನನ್ನು ಕೇಳಿದನು. ಸತ್ಯವಂತನಾದ ಆ ಬ್ರಾಹ್ಮಣನು ಸುಳ್ಳಾದ ಸಾಕ್ಷ್ಯವನ್ನು ಹೇಳಲಿಕ್ಕೆ ಒಪ್ಪಂಬಡದೆ ಜಮಿನಾನುದಾರನ ಮಾತನ್ನು ತಿರಸ್ಕರಿಸಿಬಿಟ್ಟನು. ಈ ರೀತಿ ಮಾಡಿದ ಮೇಲೆ, ತಾನು ಇನ್ನು ಆ ವೂರಲ್ಲಿ ಇದ್ದರೆ ಏನಾದರೂ ಹಾನಿತಟ್ಟದೆ ಇರದೆಂದು ಹೆದರಿ, ಕ್ಷುಧಿರಾಮನು ಆ ಗ್ರಾಮವನ್ನು ಬಿಟ್ಟು, ಅದಕ್ಕೆ ಮೂರು ಮೈಲಿಗಳ ದೂರದಲ್ಲಿರುವ ಮತ್ತೊಬ್ಬ ಜಮಿನಾನುದಾರನಿಗೆ ಸೇರಿದ ಕಾಮಾರ ಪುಕೂರ್ ಎಂಬ ಗ್ರಾಮಕ್ಕೆ, ಸಂಸಾರದೊಡನೆ ಒಕ್ಕಲು ಹೊರಟುಹೋದನು. ಇದು ಕಲಕತ್ತಾಗೆ ೧೨೦ ಮೈಲಿಗಳ ದೂರ ಪಶ್ಚಿಮದಲ್ಲಿದೆ.

ಅಲ್ಲಿಗೆ ಹೋಗಿ ನೆಲಸಿದ ಕೆಲವು ದಿನಗಳ ಮೇಲೆ ಕ್ಷುಧಿರಾಮನು ಗಯಾಕ್ಷೇತ್ರಕ್ಕೆ ಯಾತ್ರೆಹೋದನು. ಅಲ್ಲಿ ಶ್ರೀ ವಿಷ್ಣುಪಾದವನ್ನು ಆತನು ಅತ್ಯಂತಭಕ್ತಿಯಿಂದ ಪೂಜೆಮಾಡಿದನು. ಅವನ ಸೇವೆಗೂ ಗುಣಾತಿಶಯಗಳಿಗೂ ಮೆಚ್ಚಿ ಶ್ರೀಮಹಾವಿಷ್ಣುವು ಅವನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು 'ನಾನು ನಿನಗೆ ಮಗನಾಗಿ ಹುಟ್ಟುತ್ತೇನೆ' ಎಂದು ಹೇಳಿ, ಅಂತರ್ಧಾನನಾದನು. ಆ ದಿವಸವೇ ಒಂದು ದಿವ್ಯಜ್ಯೋತಿಯು ತನ್ನ ಉದರವನ್ನು ಪ್ರವೇಶಮಾಡಿದಂತೆ ಚಂದ್ರಮಣಿದೇವಿಯೂ ಕಂಡಳು. ಇದಾದ ಒಂಬತ್ತು ತಿಂಗಳಲ್ಲಿಯೇ ಈ ಚರಿತ್ರಪುರುಷರಾದ ಭಗವಾನ್ ಶ್ರೀರಾಮಕೃಷ್ಣರವರು ಕಾಮಾರಪುಕೂರ ಗ್ರಾಮದಲ್ಲಿ ಜನ್ಮಗ್ರಹಣವನ್ನು ಮಾಡಿದರು.

ಭಗವಾನರು ಅವತಾರ ಮಾಡಿದಾಗ ಬರೆಸಿದ ಜಾತಕವು ಸಿಕ್ಕಿರುವುದಿಲ್ಲ; ಆದುದರಿಂದ ಅವರ ಜನ್ಮದಿನದ ವಿಷಯದಲ್ಲಿ ಮತಭೇದಗಳಿವೆ.

ಭಗವಾನರು ೧೮೭೯-೧೮೮೦ ನೆಯ ಕ್ರಿಸ್ತಾಬ್ದದಲ್ಲಿ ಅಸ್ವಸ್ಥರಾಗಿದ್ದರು. ಆ ಕಾಲದಲ್ಲಿ ಅಂಬಿಕಾಚಾರ್ಯರು ಅವರ ಜಾತಕವನ್ನು ಬರೆದರು. ಅದರ ಮೇರೆಗೆ ಅವರ ಜನ್ಮದಿನವು ಬಂಗಾಳೀವರ್ಷ ೧೨೪೨-೧೦ ಫಾಲ್ಗುನ ಬುಧವಾರ ಶುಕ್ಲದ್ವಿತೀಯಾ ಪೂರ್ವಾಭಾದ್ರಾ ನಕ್ಷತ್ರವಾಗುತ್ತದೆ.

ಕ್ಷೇತ್ರನಾಥಭಟ್ಟರು ಬರೆದ ಜಾತಕರೀತ್ಯಾ ಅವರ ಜನ್ಮದಿನವು ಬಂಗಾಳೀವರ್ಷ ೧೨೪೪-೧೦ ಫಾಲ್ಗುನ ಬುಧವಾರ ಶುಕ್ಲ ದ್ವಿತೀಯಾ ಎಂದು ಗಣನೆಯಾಗುತ್ತದೆ. ಇದು ೧೮೩೬ ನೆಯ ಕ್ರಿಸ್ತಾಬ್ದದ ಫೆಬ್ರುವರಿ ತಿಂಗಳ ೨೦ ನೆಯ ತೇದಿಯಾಗುತ್ತದೆ. ಲಗ್ನದಲ್ಲಿ ಸೂರ್ಯ ಚಂದ್ರ ಬುಧರ ಯೋಗವಿದೆ; ಕುಂಭರಾಶಿ, ಗುರು ಶುಕ್ರರ ಯೋಗವೂ ಇದೆ. ಆದಕಾರಣದಿಂದ ಈ ಜಾತಕನು ಸಂಪ್ರದಾಯಕ್ಕೆ ಪ್ರಭುವಾಗುತ್ತಾನೆ, ಎಂಬದಾಗಿ ಆ ಜಾತಕದಲ್ಲಿ ಇದೆ.

ನಾರಾಯಣಜ್ಯೋತಿರ್ಭೂಷಣರು ಭಗವಾನರ ಜಾತಕವನ್ನು ಹೊಸದಾಗಿ ಗುಣಿಸಿ ಬರೆದಿದ್ದಾರೆ. ಅದು ಕಲಿಕತೆಯ ಬೇಲೂರು ಮಠದಲ್ಲಿದೆ. ಅದರ ಮೇರೆಗೆ ವಂಗವರ್ಷ ೧೨೪೨ ನೆಯ ಷಷ್ಠೀ ಫಾಲ್ಗುಣ ಬುಧವಾರಕ್ಕೆ ಸರಿಯಾದ, ೧೮೩೬ನೆಯ ಕ್ರಿಸ್ತಾಬ್ದ ಫೆಬ್ರುವರಿ ೧೭ ನೆಯ ತೇದಿಯ ಬೆಳಗಿನ ಜಾವದ ನಾಲ್ಕು ಗಂಟೆಯ ಸಮಯದಲ್ಲಿ ಭಗವಾನರು ಅವತರಿಸಿದಂತೆ ಗಣನೆಯಾಗುತ್ತದೆ.

ಗಯಾಕ್ಷೇತ್ರದ ಶ್ರೀ ಮಹಾವಿಷ್ಣುವಿನ ಅನುಗ್ರಹದಿಂದ ಜನಿಸಿದ ಈ ಶಿಶುವಿಗೆ ಕ್ಷುಧಿರಾಮಚಟ್ಟೋಪಾಧ್ಯಾಯನು ಗದಾಧರನೆಂದು ನಾಮಕರಣಮಾಡಿದನು. ಮಗುವು ಬಾಲ್ಯದಿಂದಲೂ ಸದಾ ಆನಂದಮಯವಾಗಿದ್ದಿತು. ಅದನ್ನು ಕಂಡರೆ ಆ ಗ್ರಾಮದ ಆಬಾಲವೃದ್ಧರಾದ ಹೆಂಗುಸರೂ ಗಂಡಸರೂ ಅತಿಶಯವಾಗಿ ಪ್ರೀತಿಸುತ್ತಿದ್ದರು.

ಗದಾಧರನಿಗೆ ಓದುವುದಕ್ಕೆ ತಕ್ಕ ವಯಸ್ಸು ಬಂದ ಕೂಡಲೇ ಅಕ್ಷರಾಭ್ಯಾಸ ಮಾಡಿಸಿ ಅವನನ್ನು ತಂದೆ ತಾಯಿಗಳು ಪಾಠಶಾಲೆಗೆ ಕಳುಹಿದರು. ಅಲ್ಲ ಹುಡುಗನು ಓದುವುದಕ್ಕೂ ಬರೆಯುವುದಕ್ಕೂ ತಕ್ಕ ಮಟ್ಟಿಗೆ ಕಲಿತುಕೊಂಡನು. ಗಣಿತ ವಿಚಾರವು ಅವನ ಬುದ್ಧಿಗೆ ಚೆನ್ನಾಗಿ ಹಾಯುತ್ತಿರಲಿಲ್ಲ. ತರುವಾಯ ಅವನು ಹೂಗಳನ್ನು ತಾನೇ ಕುಯ್ದು ತಂದು, ಮನೆಯಲ್ಲಿ ಶ್ರೀರಘುವೀರನ ವಿಗ್ರಹಕ್ಕೆ ನಿತ್ಯಪೂಜೆಯನ್ನು ಮಾಡುತ್ತಿದ್ದನು. ಆತನ ಶಾರೀರವು ಬಹುಸುಖಕರವಾಗಿದ್ದಿತು. ಆರಾದರೂ ಹಾಡುವುದನ್ನು ಕೇಳಿದೊಡನೆಯೇ ತಾನೂ ದಿವ್ಯವಾಗಿ ಹಾಡುತ್ತಿದ್ದನು.

ಅವರ ಮನೆಯ ಮಗ್ಗುಲಲ್ಲಿ ಲಾಹಾಮನೆತನದವರ ಗೃಹವಿದ್ದಿತು. ಅಲ್ಲಿ ಒಂದು ಅತಿಥಿಶಾಲೆಯೂ ಇದ್ದಿತು. ಅಲ್ಲಿಗೆ ಸಾಧುಗಳು ವಿಶೇಷವಾಗಿ ಬರುತ್ತಿದ್ದರು. ಗದಾಧರನು ಆ ಅತಿಥಿಶಾಲೆಯಲ್ಲಿ ಸಾಧುಸಂಗವನ್ನೂ ಶತ್ಸೇವೆಯನ್ನೂ ಮಾಡುತ್ತ, ಪುರಾಣವನ್ನು ಏಕಚಿತ್ತದಿಂದ ಕೇಳುತ್ತ, ರಾಮಾಯಣ ಭಾರತ ಭಾಗವತಗಳನ್ನು ಹೃದ್ಗತವಾಗುವಂತೆ ಮಾಡಿಕೊಂಡನು.

ಒಂದು ದಿನ ಸಮೀಪದಲ್ಲಿರುವ ಆನೂರೆಂಬ ಗ್ರಾಮಕ್ಕೆ ಹೋಗಬೇಕೆಂದು ಬಯಸಿ, ಅವನು ಹೊಲದ ಬದುವಿನ ಮೇಲೆ ನಡೆದುಕೊಂಡು ಹೋದನು. ಆಗ ಅವನು ಇದ್ದಕ್ಕಿದ್ದ ಹಾಗೆ ಅದ್ಭುತವಾದ ಜ್ಯೋತಿಯೊಂದನ್ನು ಕಂಡು, ಬಾಹ್ಯಶೂನ್ಯನಾದನು. ಅದನ್ನು ನೋಡಿದ ಜನರು ಅವನಿಗೆ ಮೂರ್ಛೆಯೆಂದು ಹೇಳಿದರು. ಆಗ ಅವನಿಗೆ ಹನ್ನೊಂದು ವಯಸ್ಸು. 'ಆ ಅದ್ಭುತಜ್ಯೋತಿಯನ್ನು ಕಂಡಾಗ ನನಗೆ ಭಾವಸಮಾಧಿಯಾಗಿದ್ದಿತು' ಎಂಬುದಾಗಿ ಭಗವಾನರೇ ಹೇಳುತ್ತಿದ್ದರು. ಈ ಮೇರೆಗೆ ಐದಾರು ವರ್ಷಗಳು ಕಳೆದ ಮೇಲೆ, ಕ್ಷುಧಿರಾಮಚಟ್ಟೋಪಾಧ್ಯಾಯನು ಪರಲೋಕವನ್ನೈದಿದನು.

ತಂದೆಯ ಮರಣಾನಂತರ ಭಗವಾನರು ತಮ್ಮ ಹಿರಿಯಣ್ಣನೊಡನೆ ಕಲಿಕತ್ತಾವಿಗೆ ಬಂದರು. ಆಗ ಅವರಿಗೆ ೧೭-೧೮ ವಯಸ್ಸಿರಬಹುದು. ಅವರು ಕಲಿಕತ್ತಾದಲ್ಲಿ ಕೆಲವು ದಿನ ನಾಥನ ತೋಟದಲ್ಲಿಯೂ, ಕೆಲವು ದಿನ ಜಾಮಾಪುಕೂರ ಗೋವಿಂದ ಚಾಟರ್ಜಿಯ ಮನೆಯಲ್ಲಿಯೂ, ಮತ್ತೆ ಕೆಲವು ದಿವಸ ಮಿತ್ರನ ಮನೆಯಲ್ಲಿಯೂ, ದೇವರ ಪೂಜೆಯನ್ನು ಮಾಡಿಕೊಂಡು ಇದ್ದರು.

ಕಲಿಕತ್ತಾವಿಗೆ ಐದು ಮೈಲಿಗಳ ದೂರದಲ್ಲಿರುವ ದಕ್ಷಿಣೇಶ್ವರದಲ್ಲಿ ರಾಣೀ ರಾಸಮಣಿಯು ೧೮೫೫ ನೆಯ ಕ್ರಿಸ್ತಾಬ್ದ ಮೇ ತಿಂಗಳ ೩೧ ನೆಯ ತೇದಿ ಗುರುವಾರದ ದಿವಸ, ಎಂದರೆ ಜಗನ್ನಾಥದ ಅವಭೃತದ ದಿವಸ, ಶ್ರೀಕಾಳೀಮಂದಿರವನ್ನು ಪ್ರತಿಷ್ಠೆ ಮಾಡಿದಳು. ಅಲ್ಲಿಗೆ ಭಗವಾನರ ಹಿರಿಯಣ್ಣಂದಿರಾದ ಪಂಡಿತ ರಾಮಕುಮಾರರು ಮೊದಲನೆಯ ಅರ್ಚಕರಾದರು. ಭಗವಾನರವರೂ ಕಲಿಕತ್ತಾವಿನಿಂದ ದಕ್ಷಿಣೇಶ್ವ

ರಕ್ಕೆ ಆಗಾಗ ಬಂದು ದೇವಾಲಯದ ಪೂಜಾಕಾರ್ಯವನ್ನು ನಡೆಯಿಸುತ್ತಿದ್ದರು. ಆಗ ಅವರಿಗೆ ೨೧-೨೨ ವಯಸ್ಸಾಗಿರಬಹುದು. ಅವರ ಕಿರಿಯಣ್ಣಂದಿರಾದ ರಾಮೇಶ್ವರರೂ ಅರ್ಚನಾವೃತ್ತಿಯನ್ನು ಕೈಕೊಂಡಿದ್ದರು. ರಾಮೇಶ್ವರನಿಗೆ ರಾಮಲಾಲನೆಂದೂ ಶಿವರಾಮನೆಂದೂ ಇಬ್ಬರು ಪುತ್ರರೂ, ಶ್ರೀಮತೀ ಲಕ್ಷ್ಮೀದೇವಿಯೆಂಬ ಪುತ್ರಿಯೂ ಇದ್ದಾರೆ.

ಭಗವಾನರು ಶ್ರೀ ಕಾಳೀದೇವಿಯನ್ನು ಪೂಜೆಮಾಡುತ್ತಿದ್ದರು. ಕೆಲವು ದಿವಸಗಳಲ್ಲಿಯೇ ಅವರ ಚಿತ್ತವೃತ್ತಿಯು ಬದಲಾಯಿಸಿ ಹೋಯಿತು. ಅವರು ಸದಾ ಅಂತರ್ಮುಖರಾಗಿ ಭಗವತಿಯ ಬಳಿಯಲ್ಲಿಯೇ ಕುಳ್ಳಿರುತ್ತ, ಪಂಚವಟಿಯಲ್ಲಿ ತುಲಸಿಯ ತೋಟವನ್ನು ಮಾಡಿ, ಭಗವಂತನ ದರ್ಶನವನ್ನು ಮಾಡಬೇಕೆಂದು ಪುರಾಣೋಕ್ತ ರೀತ್ಯಾ ಸಾಧನೆಯನ್ನು ಮಾಡುತ್ತ, ಶ್ರೀರಾಮಭಕ್ತರ ಸಂಗಡ ಶ್ರೀರಾಮನ ಸೇವೆಯನ್ನೂ ಮಾಡುತ್ತಿದ್ದರು.

ಭಗವಾನರ ಚಿತ್ತವೃತ್ತಿಯನ್ನು ನೋಡಿ, ಅವರ ಬಂಧುಗಳೆಲ್ಲರೂ ಇವರಿಗೆ ಮದುವೆಯನ್ನು ಮಾಡಿದರೆ ಬುದ್ಧಿಯು ಸರಿಯಾಗುವುದೆಂದು ಆಲೋಚಿಸಿ: ಕಾಮಾರಪುಕೂರಗ್ರಾಮಕ್ಕೆ ನಾಲ್ಕು ಮೈಲಿಯಲ್ಲಿರುವ ಜಯರಾಮವಾಡೀಗ್ರಾಮದ ವಾಸಿಯಾದ ರಾಮಚಂದ್ರಮುಖೋಪಾಧ್ಯಾಯನ ಮಗಳಾದ ಶಾರದಾಮಣಿದೇವಿಯೆಂಬ ಕನ್ಯೆಯನ್ನು ತಂದು, ೧೮೫೯ನೆಯ ಕ್ರಿಸ್ತಾಬ್ದದಲ್ಲಿ ವಿವಾಹವನ್ನು ಬೆಳೆಸಿದರು. ಆಗ ಭಗವಾನರಿಗೆ ೨೨-೨೩ ವಯಸ್ಸಿರಬಹುದು. ಅವರ ಪತ್ನಿಯಾದ ಶಾರದಾಮಣಿದೇವಿಗೆ ಆರು ವಯಸ್ಸು. ಮದುವೆಯಾದ ತರುವಾಯ ಶ್ರೀರಾಮಕೃಷ್ಣರು ಹಿಂತಿರುಗಿ ಬಂದು, ಎಂದಿನಂತೆ ದಕ್ಷಿಣೇಶ್ವರದಲ್ಲಿ ಭಗವತಿಯ ಪೂಜೆಯಲ್ಲಿ ನಿರತರಾಗಿದ್ದರು.

ಕೆಲವು ದಿನಗಳಲ್ಲಿ ಅವರಿಗೆ ಮತ್ತೆ ಭಾವಾಂತರವುಂಟಾಯಿತು. ಭಗವತಿಯಪೂಜೆಯನ್ನು ಮಾಡುತ್ತ ಅವರಿಗೆ ಅದ್ಭುತರೂಪಗಳ ದರ್ಶನವಾಗುತ್ತಿದ್ದಿತು. ಆರತಿಯನ್ನು ಮಾಡತೊಡಗಿದರೆ ಮುಗಿಯುತ್ತಲೇ ಇರಲಿಲ್ಲ. ಪೂಜೆಗೆ ಕುಳಿತರೆ ಅದೂ ಮುಗಿಯುತ್ತಿರಲಿಲ್ಲ. ಶ್ರೀಕಾಳಿಯ ಪೂಜೆಗಾಗಿ ಇಟ್ಟಿದ್ದ ಹೂಗಳನ್ನು ಅವರು ಒಂದೊಂದು ಸಲ ತಮ್ಮ ತಲೆಯ ಮೇಲೆಯೇ ಹಾಕಿಕೊಳ್ಳುತ್ತಿದ್ದರು. ಪೂಜೆಯನ್ನು ಮಾಡುವುದಕ್ಕೇ ಆಗುತ್ತಿರಲಿಲ್ಲ. ಅವರು ಉನ್ಮತ್ತರೋಪಾದಿಯಲ್ಲಿ ತಿರುಗಾಡುತ್ತಿದ್ದರು. ರಾಸಮಣಿರಾಣಿಯ ಅಳಿಯನಾದ ಮಥುರನು ಭಗವಾನರ ರೀತಿಯನ್ನು ಕಂಡು, ಇವರು ಮಹಾ ಪುರುಷರೆಂದರಿತು, ಅವರ ಸೇವೆಯನ್ನು ಮಾಡುತ್ತ, ಬೇರೆಯ ಬ್ರಾಹ್ಮಣರಿಂದ ದೇವಾಲಯದ ಪೂಜಾಕಾರ್ಯಗಳನ್ನು ನಡೆಯಿಸುತ್ತಿದ್ದನು. ಶ್ರೀರಾಮಕೃಷ್ಣರವರ ಭಾಗಿನೇಯನಾದ ಹೃದಯಮುಖೋಪಾಧ್ಯಾಯನು ಪೂಜೆಮಾಡುವುದಕ್ಕೂ ಭಗವಾನರನ್ನು ನೋಡಿಕೊಳ್ಳುವುದಕ್ಕೂ ನಿಯುಕ್ತನಾದನು.

ತರುವಾಯ ಭಗವಾನರಿಗೆ ದೇವಾಲಯದ ಪೂಜಾಕಾರ್ಯವು ತಪ್ಪಿತು. ಅವರಿಗೆ ನಾಮಮಾತ್ರಕ್ಕೆ ವಿವಾಹವಾಯಿತು. ಅವರು ಪತ್ನಿಯೊಡನೆ ಸಂಸಾರವನ್ನು ಮಾಡುತ್ತಿರಲಿಲ್ಲ. ಹಗಲೂ ಇರುಳೂ ಅವರು 'ತಾಯಿ, ತಾಯಿ' ಎಂದು ಕ್ರಂದಿಸುತ್ತ ಒಮ್ಮೆ ಜಡನಂತೆಯೂ, ಒಮ್ಮೆ ಉನ್ಮತ್ತನಂತೆಯೂ, ಮತ್ತೊಮ್ಮೆ ಬಾಲಕನಂತೆಯೂ ಇರುತ್ತಿದ್ದರು. ಕಾಮಿನೀಕಾಂಚನಗಳಲ್ಲಿ ಆಸಕ್ತರಾದವರನ್ನು ಕಂಡರೆ ಅವರು ಅವಿತುಕೊಂಡು ಬಿಡುತ್ತಿದ್ದರು. ಈಶ್ವರಭಕ್ತರನ್ನೂ ಈಶ್ವರವಿಷಯಕವಾದ ಮಾತನ್ನೂ ಬಿಟ್ಟು, ಬೇರೆ ಆವುದಕ್ಕೂ ಅವರು ಮನಗೊಡುತ್ತಿರಲಿಲ್ಲ.

ಈ ರೀತಿಯಲ್ಲಿ ಭಗವಾನರು ಇರುತ್ತಿದ್ದಾಗ, ಅವರನ್ನು ಹುಡುಕಿಕೊಂಡು ೧೮೫೯ ರಲ್ಲಿ ಬ್ರಾಹ್ಮಣಸನ್ಯಾಸಿನಿಯೊಬ್ಬಳು ದಕ್ಷಿಣೇಶ್ವರಕ್ಕೆ ಬಂದು, ಅವರಿಂದ ಬಿಲ್ವವೃಕ್ಷದ ಕೆಳಗೆ ತಂತ್ರೋಕ್ತವಾದ ಅನೇಕಸಾಧನಗಳನ್ನು ಮಾಡಿಸಿ, ಶ್ರೀಗೌರಾಂಗಮತವನ್ನು ತಿಳುಹುವ ಚೈತನ್ಯಚರಿತವೇ ಮುಂತಾದ ವೈಷ್ಣವಗ್ರಂಥಗಳನ್ನು ಅವರಿಗೆ ಶ್ರವಣಮಾಡಿಸಿದಳು.

ಕಾಳೀದೇವಾಲಯದಲ್ಲಿ ಅನ್ನಸತ್ರವೊಂದಿದೆ. ಅಲ್ಲಿಗೆ ಸಾಧುಗಳೂ ಸನ್ಯಾಸಿಗಳೂ ಸದಾ ಬರುತ್ತಿದ್ದಾರೆ. ೧೮೬೬ನೆಯ ಕ್ರಿಸ್ತಾಬ್ದದಲ್ಲಿ ತೋತಾಪುರಿಯೆಂಬ ಅದ್ವೈತನಗ್ನಸನ್ಯಾಸಿಯೊಬ್ಬನು ಆ ಸತ್ರಕ್ಕೆ ಬಂದನು. ಅವನು ಭಗವಾನರನ್ನು ನೋಡಿ 'ಅಯ್ಯಾ, ನಿನಗೆ ನಾನು ಅದ್ವೈತವೇದಾಂತವನ್ನು ಉಪದೇಶಿಸುತ್ತೇನೆ; ನೀನು ಒಳ್ಳೆಯ ಪಾತ್ರವಾಗಿದ್ದೀಯೆ' ಎಂದು ಹೇಳಿದನು. ಭಗವಾನರವರು ಮಹಾಮಾತೆಯ ಅಪ್ಪಣೆಯನ್ನು ಪಡೆದು, ಅದಕ್ಕೆ ಒಪ್ಪಿಕೊಂಡರು. ತೋತಾಪುರಿಯು ಅವರಿಗೆ ಮೊತ್ತಮೊದಲು ಸನ್ಯಾಸವನ್ನು ಕೊಟ್ಟು, ಬಳಿಕ ವೇದಾಂತವನ್ನು ಉಪದೇಶಿಸಿದನು. ಭಗವಾನರು ಮೂರು ದಿವಸಗಳಲ್ಲಿಯೇ ಸಿದ್ಧಿಯನ್ನು ಪಡೆದು ನಿರ್ವಿಕಲ್ಪಸಮಾಧಿಸ್ಥರಾದರು.

ತೋತಾಪುರಿಯಿಂದ ಅದ್ವೈತವೇದಾಂತವನ್ನು ಉಪದೇಶಗೊಳ್ಳುತ್ತಿರುವ ಭಗವಾನರನ್ನು ಕಂಡು, ಆ ಸನ್ಯಾಸಿನಿಯು 'ಅಪ್ಪ, ನೀನು ತೋತಾಪುರಿಯ ಅದ್ವೈತವೇದಾಂತವನ್ನು ಕೇಳಬೇಡ; ಅದರಿಂದ ಭಾವಭಕ್ತಿಗಳೆಲ್ಲವೂ ಕಮ್ಮಿಯಾಗಿ ಹೋಗುತ್ತವೆ' ಎಂದು ಹೇಳಿದಳು. ಜಗನ್ಮಾತೆಯಾದ ಭಗವತಿಯ ಅಪ್ಪಣೆಯ ಮೇರೆ ಭಗವಾನರು ವೇದಾಂತಶ್ರವಣಮಾಡುವುದಕ್ಕೆ ತೊಡಗಿದ್ದುದರಿಂದ ಸನ್ಯಾಸಿನಿಯ ಮಾತಿಗೆ ಕಿವಿಗುಡಲಿಲ್ಲ. ಆ ನಗ್ನಸನ್ಯಾಸಿಯು ಯಾವ ಊರಿನಲ್ಲಿಯೂ ಮೂರು ದಿನಗಳಿಗಿಂತ ಹೆಚ್ಚಾಗಿ ನಿಲ್ಲುತ್ತಲೇ ಇರಲಿಲ್ಲ. ಆವನು ಭಗವಾನರ ಅದ್ಭುತಯೋಗಸಿದ್ಧಿಯನ್ನು ಕಂಡು ಅವರ ಸಂಗಡಲೇ ಹನ್ನೊಂದು ತಿಂಗಳ ವರೆಗೆ ನಿಂತುಬಿಟ್ಟನು.

ವೈಷ್ಣವಪಂಡಿತನಾದ ವೈಷ್ಣವಚರಣನು ಅನೇಕಾವೃತ್ತಿ ಅಲ್ಲಿಗೆ ಬರುತ್ತಿದ್ದನು. ಕಲಿಕತೆಯ ಕುಲುತೋಲಾ ಪ್ರದೇಶದಲ್ಲಿ ನಡೆಯುವ ಚೈತನ್ಯಸಭೆಗೆ

ಅವನು ಭಗವಾನರನ್ನು ಕರೆದುಕೊಂಡು ಹೋದನು. ಆ ಸಭೆಯಲ್ಲಿ ಭಗವಾನರು ಭಾವಾವಿಷ್ಟರಾಗಿ ಶ್ರೀ ಚೈತನ್ಯದೇವನ ಆಸನದಲ್ಲಿ ಹೋಗಿ ಕುಳಿತುಕೊಂಡರು. ಆ ಸಭೆಗೆ ವೈಷ್ಣವಚರಣನೇ ಮುಖ್ಯಸ್ಥನು. ಅವನು ಮಥುರನನ್ನು ನೋಡಿ 'ಅಯ್ಯಾ, ಇವರ ಈ ಉನ್ಮಾದವು ಸಾಮಾನ್ಯವಾದುದಲ್ಲ; ಇದು ಪ್ರೇಮೋನ್ಮಾದ. ಇವರು ಈಶ್ವರನನ್ನು ನೋಡಬೇಕೆಂದು ಅತಿವ್ಯಾಕುಲಪಡುತ್ತ ಹುಚ್ಚರಂತೆ ಕಾಣಿಸಿಕೊಳ್ಳುತ್ತಾರೆ'. ಎಂದು ಹೇಳಿದನು. ಸನ್ಯಾಸಿಯೂ ವೈಷ್ಣವಚರಣನೂ ಭಗವಾನರ ಭಾವಾವಸ್ಥೆಯನ್ನು ನೋಡಿದ್ದರು. ಭಗವಾನರು ಚೈತನ್ಯದೇವನಂತೆ ಒಮ್ಮೆ ಬಾಹ್ಯದಶೆಯಲ್ಲಿಯೂ, ಒಮ್ಮೆ ಅರ್ಧಬಾಹ್ಯದಶೆಯಲ್ಲಿಯೂ, ಮತ್ತೊಮ್ಮೆ ಅಂತರ್ದಶೆಯಲ್ಲಿಯೂ ಎಂದರೆ ಜಡಸಮಾಧಿಯಲ್ಲಿಯೂ ಇರುತ್ತಿದ್ದರು.

ಅವರು ಭಗವತಿಯನ್ನು 'ತಾಯಿ, ತಾಯಿ' ಎಂದು ಕರೆದು ಕರೆದು, ಅಳುತ್ತ ಜಗನ್ಮಾತೆಯಾದ ಅವಳ ಸಂಗಡ ಮಾತನಾಡಿ, ಅವಳಿಂದಲೇ ಎಲ್ಲ ಉಪದೇಶವನ್ನೂ ಪಡೆಯುತ್ತಿದ್ದರು. ಭಗವಾನರು ಆಡಿಗಡಿಗೆ ಮಹಾಮಾತೆಯ ಸಂಗಡ 'ತಾಯೇ, ನೀನು ಹೇಳಿದ ಹಾಗೆ ಕೇಳುತ್ತೇನೆ. ನನಗೆ ಶಾಸ್ತ್ರವು ತಿಳಿಯದು; ನಾನು ಪಂಡಿತರನ್ನು ಕಂಡವನಲ್ಲ; ನೀನು ಹೇಳಿಕೊಟ್ಟರೆ ನನಗೆ ವಿಶ್ವಾಸ' ಎಂದು ವಿಜ್ಞಾಪಿಸಿಕೊಳ್ಳುತ್ತಿದ್ದರು. ಅವರು ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮನನ್ನೇ ತಾಯಿ ಎಂದು ಕರೆಯುತ್ತಿದ್ದರು.

ಶ್ರೀ ಕಾಳಿಯು ಭಗವಾನರಿಗೆ "ಅಪ್ಪಾ, ನೀನೂ ನಾನೂ ಒಂದೇ; ನೀನು ಭಕ್ತಿಭಾವವನ್ನು ಅವಲಂಬಿಸಿ ಜನರ ಮಂಗಳಕ್ಕೋಸ್ಕರ ಜೀವಿಸಿರು; ನಿನ್ನ ಬಳಿಗೆ ಬಹುಜನ ಭಕ್ತರು ಬರುತ್ತಾರೆ. ಅವರೆಲ್ಲರೂ ಪರಿಶುದ್ಧರು; ಕಾಮನಾಶೂನ್ಯರು; ವಿಷಯಾಸಕ್ತರಾದವರು ನಿನ್ನನ್ನು ಹೊದ್ದುವುದಿಲ್ಲ," ಎಂದು ಅನುಗ್ರಹಮಾಡಿದಳು.

ಜಗನ್ಮಾತೆಗೆ ಆರತಿಯಾಗುವಾಗ ಕಂಚಿನ ಗಂಟೆಯನ್ನು ಬಾಜಿಸುತ್ತಾರೆ. ಆ ವೇಳೆಯಲ್ಲಿ ಭಗವಾನರು ದೇವಾಲಯದ ಕುಟೀರದ ಮಾಳಿಗೆಯ ಮೇಲೆ ನಿಂತುಕೊಂಡು 'ಎಲೈ ಭಕ್ತರಿರಾ, ಎಲ್ಲಿ ಇದ್ದೀರಿ? ಏನ ಮಾಡುತ್ತಿದ್ದೀರಿ? ಬೇಗ ಬನ್ನಿರಿ' ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರು.

ಭಗವಾನರು ತಮ್ಮ ಜನನಿಯಾದ ಚಂದ್ರಮಣಿದೇವಿಯನ್ನು ಸಾಕ್ಷಾಜ್ಜಗನ್ಮಾತೆಯೆಂದೇ ತಿಳಿದು ಉಪಚರಿಸುತ್ತಿದ್ದರು. ಹೀಗಿರುವಾಗ ತಮ್ಮ ಹಿರಿಯಣ್ಣಂದಿರಾದ ರಾಮಕುಮಾರರು ಸ್ವರ್ಗಸ್ಥರಾದರು. ತಾಯಿಯು ಪುತ್ರಶೋಕದಿಂದ ಹಂಬಲಿಸುತ್ತಿದ್ದಳು. ಮೂರು ನಾಲ್ಕು ವರ್ಷಗಳು ಕಳೆದ ಬಳಿಕ ಭಗವಾನರು ಜನನಿಯನ್ನು ತಮ್ಮ ಬಳಿಗೇ ಕರೆಯಿಸಿಕೊಂಡು, ಪ್ರತಿದಿನವೂ ಆಕೆಯನ್ನು ಪೂಜಿಸುತ್ತ, ಆಕೆಯ ಶ್ರೀಪಾದಧೂಳಿಯನ್ನು ಗ್ರಹಿಸುತ್ತಿದ್ದರು.

ಶ್ರೀರಾಮಕೃಷ್ಣರು ಎರಡು ಸಲ ತೀರ್ಥಯಾತ್ರೆಯನ್ನು ಮಾಡಿದರು. ಮೊದಲನೆಯ ಸಲ, ಎಂದರೆ ಕ್ರಿಸ್ತಾಬ್ದ ೧೮೬೩, ರಲ್ಲಿ ಅವರು ತಮ್ಮ ತಾಯನ್ನು ಕರೆದುಕೊಂಡು ಶ್ರೀಯುತರಾಮಚಾಟರ್ಜಿಯೊಂದಿಗೂ ಮಥುರ ಬಾಬುವಿನ ಮಗನೊಂದಿಗೂ ಹೊರಟು, ವೈದ್ಯನಾಥ, ಕಾಶೀ, ಪ್ರಯಾಗೆ ಮುಂತಾದ ಸ್ಥಲಗಳಿಗೆ ಹೋಗಿದ್ದರು. ಕಾಶಿಗೆ ಆಗ ತಾನೇ ರೈಲು ಹಾಕಿದ್ದಿತು. ಆ ಯಾತ್ರೆಯಲ್ಲಿ ಅವರು ಹಗಲೂ ಇರುಳೂ ಸಮಾಧಿಸ್ಥಿತಿಯಲ್ಲಿ ಪ್ರಾಯಃ ಮತ್ತರಾಗಿಯೇ ಇರುತ್ತಿದ್ದರು. ಇದಾದ ಐದು ವರ್ಷಗಳ ತರುವಾಯ, ಎಂದರೆ ೧೮೬೮ನೆಯ ಕ್ರಿಸ್ತಾಬ್ದದಲ್ಲಿ, ಅವರು ಮತ್ತೊಮ್ಮೆ ತಮ್ಮ ಭಾಗಿನೇಯನಾದ ಹೃದಯನನ್ನು ಕರೆದುಕೊಂಡು, ಮಥುರಬಾಬು, ಅವನ ಪತ್ನಿ ಜಗದಂಬಾದಾಸಿ, ಇವರೊಡನೆ ಕಾಶೀ, ಪ್ರಯಾಗ, ಬೃಂದಾವನ ಮುಂತಾದ ಸ್ಥಲಗಳಿಗೆ ಯಾತ್ರೆ ಹೋಗಿದ್ದರು. ಕಾಶಿಯಲ್ಲಿದ್ದಾಗ ಭಗವಾನರು ಸಮಾಧಿಸ್ಥಿತಿಯಲ್ಲಿದ್ದು, ಮಣಿಕರ್ಣಿಕೆಯೊಳಗೆ ಚಿನ್ಮಯನಾದ ಶ್ರೀವಿಶ್ವನಾಥನು ಮುಮೂರ್ಷುಗಳ ಕರ್ಣದಲ್ಲಿ ತಾರಕಮಂತ್ರೋಪದೇಶಮಾಡುವುದನ್ನು ದರ್ಶನಮಾಡಿದರು. ಮೌನಿಯಾದ ತ್ರೈಲಿಂಗಸ್ವಾಮಿಯ ಸಂಗಡ ಮಾತನಾಡಿದರು. ಮಥುರೆಗೆ ಹೋದಾಗ, ಧ್ರುವಘಾಟಿನಲ್ಲಿ ವಸುದೇವನು ಕೃಷ್ಣನನ್ನು ಎತ್ತಿಕೊಂಡು ಹೋಗುವುದನ್ನೂ, ಬೃಂದಾವನದೊಳಗೆ ಸಂಜೆಯ ವೇಳೆಯಲ್ಲಿ ಹಸುವಿನ ಹಿಂಡು ಹಿಂತಿರುಗಿ ಬರುವಾಗ, ಗೋಪಾಲಮೂರ್ತಿಯಾದ ಶ್ರೀಕೃಷ್ಣನು ಅವುಗಳನ್ನು ಯಮುನಾನದಿಯನ್ನು ಹಾಯಿಸುವುದು ಮೊದಲಾದ ಲೀಲೆಗಳನ್ನೂ ಸಾಕ್ಷಾತ್ತಾಗಿ ದರ್ಶನಮಾಡಿ, ನಿಧುವನದಲ್ಲಿ ರಾಧಾಪ್ರೇಮದಿಂದ ಮತ್ತಳಾದ ಗಂಗಾಮಾತೆಯ ಸಂಗಡ ಆಲಾಪ ಮಾಡಿ ಸಂತುಷ್ಟಾಂತರಂಗರಾದರು.

ಶ್ರೀಯುತ ಕೇಶವಸೇನನು ವೇಲಘರ ತೋಟದಲ್ಲಿ ಶಿಷ್ಯಸಹಿತನಾಗಿ ಈಶ್ವರ ಧ್ಯಾನಮಾಡುವುದನ್ನು ನೋಡಲೋಸುಗ ಭಗವಾನರು ೧೮೭೫ ರಲ್ಲಿ ಭಾಗಿನೇಯನಾದ ಹೃದಯನೊಡನೆ ಹೋಗಿದ್ದರು. ಆಗ ಅದೇ ವರ್ಷದಲ್ಲಿ ಶ್ರೀರಾಮಕೃಷ್ಣರ ದರ್ಶನಕ್ಕಾಗಿ ನೇಪಾಲದ ಕ್ಯಾಪ್ಟನ್ ವಿಶ್ವನಾಥೋಪಾಧ್ಯಾಯ, ಸಿಂತಿಯ ಗೋಪಾಲ (ಮುದಿಗೋಪಾಲ), ಮಹೇಂದ್ರಕವಿರಾಜ, ಕೃಷ್ಣನಗರದ ಕಿಶೋರಿ, ಮಹಿಮಾಚರಣ ಮುಂತಾದವರು ಬರತೊಡಗಿದರು.

೧೮೭೯–೧೮೮೦ ರಲ್ಲಿ ಭಗವಾನರ ಅಂತರಂಗಭಕ್ತರು ಬಂದು ಅವರನ್ನು ದರ್ಶನಮಾಡಿದರು. ಆಗ ಅವರಿಗೆ ಉನ್ಮಾದಾವಸ್ಥೆಯು ಹೋಗಿಬಿಟ್ಟಿದ್ದಿತು. ಅವರು ಒಂದೊಂದು ಸಲ ಭಾವಸಮಾಧಿಯಲ್ಲಿ ಶಾಂತವಾಗಿ ಸಮಾನಂದದಿಂದಿರುತ್ತಿದ್ದರು. ಸಮಾಧಿಭಂಗವಾದಾಗ ಅವರು ಐದು ವರ್ಷದ ಮಗುವಿನಂತೆ ಸದಾ 'ತಾಯಿ, ತಾಯಿ' ಎಂದು ಕ್ರಂದಿಸುತ್ತಿದ್ದರು.

೧೮೭೯ ನೆಯ ಅಂತ್ಯಭಾಗದಲ್ಲಿ ರಾಮ, ಮನೋಮೋಹನ ಎಂಬಿವರಿಬ್ಬರು ಭಗವಾನರ ಭಕ್ತರಾದರು. ತರುವಾಯ ಚೂನೀ, ಲಾಟೂ, ನೃತ್ಯಗೋಪಾಲ, ತಾರಕ (ಸ್ವಾಮಿ ಶಿವಾನಂದ) ಮುಂತಾದವರು ಬಂದು ಸೇರಿದರು. ೧೮೮೧-೮೪ ನೆಯ ವರ್ಷದ ಮಧ್ಯಕಾಲದಲ್ಲಿ ನರೇಂದ್ರ (ಸ್ವಾಮಿ ವಿವೇಕಾನಂದ), ರಾಖಾಲ (ಸ್ವಾಮಿ ಬ್ರಹ್ಮಾನಂದ), ಭವನಾಥ, ಬಾಬೂರಾಮ (ಸ್ವಾಮಿ ಪ್ರೇಮಾನಂದ), ಬಲರಾಮ, ನಿರಂಜನ (ಸ್ವಾಮಿ ನಿರಂಜನಾನಂದ), ಮಾಸ್ಟರ್ (ಈ ಪುಸ್ತಕವನ್ನು ಬಂಗಾಳಿಯಲ್ಲಿ ಬರೆದಿರುವ ಮಹೇಂದ್ರನಾಥಗುಪ್ತ), ಯೋಗಿನ್ (ಸ್ವಾಮಿ ಯೋಗಾನಂದ), ಮುಂತಾದವರು ಶಿಷ್ಯವೃತ್ತಿಯನ್ನು ಅವಲಂಬಿಸಿದರು. ೧೮೮೩-೮೪ ರ ಮಧ್ಯಕಾಲದಲ್ಲಿ ಕಿಶೋರೀ, ಅಧರ, ನಿತ್ಯ, ಸಣ್ಣ ಗೋಪಾಲ, ವೇಲಘರದ ತಾರಕ, ಶರತ್ (ಸ್ವಾಮಿ ಶಾರದಾನಂದ) ಶಶೀ (ಸ್ವಾಮಿ ರಾಮಕೃಷ್ಣಾನಂದ) ಎಂಬವರೂ; ೧೮೮೪ ರಲ್ಲಿ ಸಾನ್ಯಾಲ, ಗಂಗಾಧರ, (ಸ್ವಾಮಿ ಅಖಂಡಾನಂದ) ಕಾಲೀ (ಸ್ವಾಮಿ ಅಭೇದಾನಂದ), ಗಿರೀಶ, ದೇವೇಂದ್ರ, ಶಾರದ (ಸ್ವಾಮಿ ತ್ರಿಗುಣಾತೀತ), ಕಾಲೀಪದ, ಉಪೇಂದ್ರ, ದ್ವಿಜ, ಹರಿ (ಸ್ವಾಮಿ ತುರೀಯಾನಂದ) ಮುಂತಾದವರೂ; ೧೮೮೫ ರಲ್ಲಿ ಸುಬೋಧ (ಸ್ವಾಮಿ ಸುಬೋಧಾನಂದ), ಚಿಕ್ಕ ನರೇಂದ್ರ, ಪಲ್ಟು, ಪೂರ್ಣ ನಾರಾಯಣ, ತೇಜಚಂದ್ರ, ಹರಿಪದ ಇವರೂ ಭಗವಾನರ ಶಿಷ್ಯರಾದರು. ಹೀಗೆಯೇ ಹರಮೋಹನ, ಯಜ್ಞೇಶ್ವರ, ಹಾಜರಾ, ಕ್ಷೀರೋದ, ಕೃಷ್ಣನಗರದ ಯೋಗಿನ್, ಮಣೀಂದ್ರ, ಭೂಪತಿ, ಅಕ್ಷಯ, ನವಗೋಪಾಲ, ವೇಲಘರದ ಗೋವಿಂದ, ಅಸಿತ, ಗಿರೀಂದ್ರ, ಅತುಲ, ದುರ್ಗಾಚರಣ, ಸುರೇಶ, ಪ್ರಾಣಕೃಷ್ಣ, ನವಚೈತನ್ಯ, ಹರಿಪ್ರಸನ್ನ (ಸ್ವಾಮಿ ವಿಜ್ಞಾನಾನಂದ), ಮಹೇಂದ್ರಮುಖರ್ಜಿ, ಪ್ರಿಯಮುಖರ್ಜಿ, ಸಾಧು ಪ್ರಿಯನಾಥ, ಮನ್ಮಥ, ವಿನೋದ, ತುಲಸೀ (ಸ್ವಾಮಿ ನಿರ್ಮಲಾನಂದ), ಹರಿ, ಮುಸ್ತಫೀ, ವಸಾಖ, ಕಥಕ ಠಾಕೂರ, ಬ್ರಹ್ಮಚಾರೀ ಶಶೀ, ನಿತ್ಯಗೋಪಾಲ (ಗೋಸ್ವಾಮೀ), ಕೊನ್ನಗರದ ವಿಪಿನವಿಹಾರಿ, ಧೀರೇಂದ್ರ, ಹಲಧರ, ರಾಖಾಲ ಮುಂತಾದವರು ಬಂದು ಸೇರಿದರು.

ಈಶ್ವರ ವಿದ್ಯಾಸಾಗರ, ಶಶಧರಪಂಡಿತ, ಡಾಕ್ಟರ್ ರಾಜೇಂದ್ರ, ಡಾಕ್ಟರ್ ಸರಕಾರ, ಬಂಕಿಮ ಚಾಟರ್ಜಿ, ಅಮೇರಿಕದ ಕುಕ್, ಭಕ್ತವಿಲ್ಲಿಯಂ, ಮಿಸಿರ ಸಾಹೇಬ, ಮಾಯಿಕೇಲ್ ಮಧುಸೂದನ, ಕೃಷ್ಣದಾಸಪಾಲ, ಪಂಡಿತ ದೀನಬಂಧು, ಪಂಡಿತ ಶ್ಯಾಮಾಪದ, ಡಾಕ್ಟರ್ ರಾಮನಾರಾಯಣ, ಡಾಕ್ಟರ್ ದುರ್ಗಾಚರಣ, ರಾಧಿಕಾಗೋಸ್ವಾಮಿ, ಶಿಶಿರ (ಘೋಷ,) ನವೀನ (ಮುನ್ಷೀ), ನೀಲಕಂಠ ಎಂಬ ಮಹಾಶಯರೂ ಭಗವಾನರ ಸಂದರ್ಶನವನ್ನು ಮಾಡಿದರು.

ಭಗವಾನರವರನ್ನು ತ್ರೈಲಿಂಗಸ್ವಾಮಿಯು ಕಾಶೀಕ್ಷೇತ್ರದಲ್ಲಿಯೂ ಗಂಗಾಮಾತೆಯು ಬೃಂದಾವನದಲ್ಲಿಯೂ ನೋಡಿದರು. ಆಕೆಯು ಭಗವಾನರನ್ನು ಶ್ರೀರಾಧೆಯೆಂದೆಣಿಸಿ ಬೃಂದಾವನದಿಂದ ಅವರು ಊರಿಗೆ ಹೋಗುವುದಕ್ಕೆ ಸಮ್ಮತಿಸಲಿಲ್ಲ.

ಅಂತರಂಗಭಕ್ತರು ಭಗವಾನರ ಬಳಿಗೆ ಬರುವುದಕ್ಕೆ ಮುಂಚಿತವಾಗಿ ಕೃಷ್ಣ ಕಿಶೋರ, ಮಧುರ, ಶಂಭುಮಲ್ಲಿಕ, ನಾರಾಯಣಶಾಸ್ತ್ರಿ, ಇಂದೇಶದ ಗೌರೀ ಪಂಡಿತ, ಅಚಲಾನಂದ, ಚಂದ್ರರೆಂಬಿವರು ಅವರ ದರ್ಶನವನ್ನು ಮಾಡುತ್ತಿದ್ದರು. ವರ್ಧಮಾನರಾಜನ ಸಭಾಪಂಡಿತ ಪದ್ಮಲೋಚನನೂ, ಆರ್ಯಸಮಾಜದ ದಯಾನಂದಸರಸ್ವತಿಯೂ ಅವರನ್ನು ದರ್ಶನಮಾಡಿದ್ದರು. ಭಗವಾನರ ಜನ್ಮಭೂಮಿಯಾದ ಕಾಮಾರಪುಕೂರ್, ಸಿವಡ, ಶ್ಯಾಮಾಬಜಾರ್ ಮುಂತಾದ ಪ್ರಾಂತ್ಯಗಳಲ್ಲಿ ಹಲವರು ಭಕ್ತರು ಭಗವಾನರನ್ನು ಕಂಡಿದ್ದರು. ಬ್ರಾಹ್ಮಭಕ್ತರನೇಕರು ಅವರ ಬಳಿಗೆ ಅಡಿಗಡಿಗೆ ಬರುತ್ತಿದ್ದರು. ಅವರಲ್ಲಿ ಕೇಶವ, ವಿಜಯ, ಕಾಲೀ, ವಸು, ಪ್ರತಾಪ, ಶಿವನಾಥ, ಅಮೃತ, ತ್ರೈಲೋಕ್ಯ, ಕೃಷ್ಣವಿಹಾರಿ, ಮಣಿಲಾಲ, ಉಮೇಶ, ಹೀರಾನಂದ, ಭವಾನೀ, ನಂದಲಾಲ ಮುಂತಾದವರು ಮುಖ್ಯರು.

ಪರಮಹಂಸರವರೂ ಬ್ರಾಹ್ಮಭಕ್ತರನ್ನು ನೋಡುವುದಕ್ಕೆ ಹೋಗುತ್ತಿದ್ದರು. ಅವರು ಒಮ್ಮೆ ಆದಿಬ್ರಹ್ಮಸಮಾಜವನ್ನು ನೋಡುವುದಕ್ಕೆ, ಮಧುರನೊಡನೆ ಉಪಾಸನೆಯ ವೇಳೆಯಲ್ಲಿ, ಮಹಾಕವಿ ರವೀಂದ್ರಠಾಕೂರನ ತಂದೆಯಾದ ದೇವೇಂದ್ರನಾಥ ಠಾಕೂರನ ಮನೆಗೆ ಹೋಗಿದ್ದರು. ಹಾಗೆಯೇ ಕೇಶವನ ಸಾಧಾರಣಸಮಾಜವನ್ನೂ ಉಪಾಸನೆಯ ವೇಳೆಯಲ್ಲಿ ನೋಡಲಿಕ್ಕೆ ಹೋಗಿದ್ದರು. ಕೇಶವನು ಕೂಡ, ಅಡಿಗಡಿಗೆ ಏಕಾಕಿಯಾಗಿಯೂ, ಶಿಷ್ಯರೊಡನೆಯೂ ಭಗವಾನರನ್ನು ನೋಡುವುದಕ್ಕೆ ಬರುತ್ತಿದ್ದನು. ಭಗವಾನದಾಸಬಾವಾಜಿಯೆಂಬವನನ್ನು ಪರಮಹಂಸರು ಕಾಲನಾದಲ್ಲಿ ಸಂದರ್ಶನಮಾಡಿದರು. ಆಗ ಬಾವಾಜಿಯು ಅವರ ಭಾವಾವಸ್ಥೆಯನ್ನು ನೋಡಿ 'ನೀವು ಮಹಾಪುರುಷರು, ಚೈತನ್ಯದೇವನ ಆಸನದಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹರು,' ಎಂದು ಹೇಳಿದನು.

ಭಗವಾನರು ಸರ್ವಧರ್ಮವನ್ನೂ ಸಮನ್ವಯಮಾಡಬೇಕೆಂದು ವೈಷ್ಣವ, ಶಾಕ್ತ, ಶೈವ ಮುಂತಾದ ಮತಗಳನ್ನು ಸಾಧನೆಮಾಡಿದುದಲ್ಲದೆ 'ಅಲ್ಲಾ' ಎನ ಜಪವನ್ನೂ, ಯೇಸುಕ್ರಿಸ್ತನ ಧ್ಯಾನವನ್ನೂ ಮಾಡಿದರು. ಅವರ ಕೊಟಡಿಯಲ್ಲಿ ಅನೇಕ ದೇವತೆಗಳ ಚಿತ್ರಪಟಗಳೂ, ಬುದ್ಧದೇವನ ಮೂರ್ತಿಯೂ ಇವೆ. ಜಲದಲ್ಲಿ ಮುಳುಗಿ ಹೋಗುತ್ತಿದ್ದ ಪೀಟರೆಂಬ ಶಿಷ್ಯನನ್ನು ಯೇಸುಕ್ರಿಸ್ತನು ಉದ್ಧರಿಸುವ ಚಿತ್ರವೂ ಇದೆ. ಈಗಲೂ ಆ ಕೊಟಡಿಗೆ ಇಂಗ್ಲಿಷ್ ಮತ್ತು ಅಮೇರಿಕನ್ ಭಕ್ತರು ಬಂದು ಭಗವಾನರ ಧ್ಯಾನವನ್ನೂ ಚಿಂತೆಯನ್ನೂ ಮಾಡುತ್ತಾರೆ.

ಒಂದು ದಿನ ಭಗವಾನರು ಮಹಾಮಾತೆಯೊಡನೆ 'ತಾಯೇ, ಕ್ರಿಸ್ತಭಕ್ತರು ಹೇಗೆ ಉಪಾಸನೆಮಾಡುತ್ತಾರೆಯೋ ನೋಡಬೇಕು, ತೋರಿಸು,' ಎಂದು ವ್ಯಾಕುಲತೆಯಿಂದ ಬೇಡಿಕೊಂಡರು. ಕೆಲವು ದಿನಗಳಾದ ಮೇಲೆ ಅವರು ಕಲಿಕತ್ತಾವಿಗೆ

ಹೋಗಿ, ಒಂದು ಕ್ರೈಸ್ತಮಂದಿರದ ಮುಂದೆ ಉಪಾಸನೆಯ ವೇಳೆಯಲ್ಲಿ ನಿಂದು ನೋಡಿ, ಹಿಂತಿರುಗಿ ಬಂದು, ಭಕ್ತರ ಸಂಗಡ 'ಕಾಳೀದೇವಾಲಯದ ಪಾರುಪತ್ಯಗಾರನ ದಿಗಿಲಿನಿಂದ ನಾನು ಕ್ರಿಸ್ತಮಂದಿರದೊಳಗೆ ಹೋಗಲಿಲ್ಲ; ಒಳಗೆ ಹೋದರೆ ನನ್ನನ್ನು ಕಾಳೀದೇವಸ್ಥಾನಕ್ಕೆ ಬಿಡುತ್ತಾರೆಯೋ, ಇಲ್ಲವೋ, ಎಂದು ಅಂಜಿಕೆಯಾಯಿತು,' ಎಂದು ಹೇಳಿದರು.

ಪರಮಹಂಸರಿಗೆ ಹಲವು ಮಂದಿ ಸ್ತ್ರೀಯರೂ ಭಕ್ತರಾಗಿದ್ದರು. ಒಬ್ಬ ಮುದುಕಿಯು ಶ್ರೀ ಕೃಷ್ಣಜಪವನ್ನು ಮಾಡಿ ಗೋಪಾಲನನ್ನು ಸಾಕ್ಷಾತ್ತಾಗಿ ದರ್ಶನ ಮಾಡಿದ್ದಳು. ಆಕೆಯನ್ನು ಜನರು 'ಗೋಪಾಲನ ತಾಯಿ' ಎನ್ನುತ್ತಿದ್ದರು. ಅವಳು ಶ್ರೀರಾಮಕೃಷ್ಣರನ್ನು ಗೋಪಾಲನೆಂದು ಭಾವಿಸುತ್ತಿದ್ದಳು. ಭಗವಾನರೂ ಅವಳನ್ನು 'ತಾಯಿ' ಎಂದೂ, 'ಗೋಪಾಲನತಾಯಿ' ಎಂದೂ ಕರೆಯುತ್ತಿದ್ದರು. ಸ್ತ್ರೀಯರೆಲ್ಲರೂ ಭಗವತಿಯ ಸ್ವರೂಪವೆಂದು ತಿಳಿದು, ಅವರನ್ನು ಆ ಭಾವದಿಂದಲೇ ಪೂಜಿಸುತ್ತ, 'ಹೆಂಗಳಲ್ಲಿ ಮಾತೃಭಾವವು ತಲೆದೋರುವ ವರೆಗೂ, ಈಶ್ವರನಲ್ಲಿ ಶುದ್ಧವಾದ ಭಕ್ತಿಯುಂಟಾಗುವವರೆಗೂ, ಅವರ ಹತ್ತಿರ ಪುರುಷರು ಸೇರದೆ ತುಂಬ ಎಚ್ಚರಿಕೆಯಿಂದಿರಬೇಕು. ಸ್ತ್ರೀಯರು ಪರಮಭಕ್ತೆಯರಾಗಿದ್ದರೂ ಅವರ ಸಂಪರ್ಕವು ತಕ್ಕುದಲ್ಲ,' ಎಂದು ನಿಷೇಧಿಸುತ್ತಲಿದ್ದರು.

ಭಗವಾನರಿಗೆ ಅಸಂಖ್ಯಾತರಾದ ಭಕ್ತರಿದ್ದರು. ಅವರಲ್ಲಿ ಕೆಲವರು ಗುಪ್ತವಾಗಿಯೂ, ಕೆಲವರು ಪ್ರಕಟವಾಗಿಯೂ ಇದ್ದಾರೆ. ಎಲ್ಲರ ಹೆಸರನ್ನೂ ಹೇಳುವುದಕ್ಕಾಗುವುದಿಲ್ಲ. ಅವರನ್ನು ಬಾಲ್ಯದಲ್ಲಿಯೇ ರಾಮಕೃಷ್ಣ, ಪಶೂ, ತುಲಸೀ, ಶಾಂತಿ, ಶಶೀ, ವಿಪಿನ, ಹೀರಲಾಲ, ನಗೇಂದ್ರ, ಮಿತ್ರ, ಉಪೇಂದ್ರ, ಸುರೇಂದ್ರ, ಸುರೇಶ್ ಮುಂತಾದವರು ದರ್ಶನಮಾಡಿದ್ದರು. ಚಿಕ್ಕ ವಯಸ್ಸಿನ ಸ್ತ್ರೀಯರೂ ನೋಡಿದ್ದರು. ಅವರೆಲ್ಲರೂ ಈಗಲೂ ಪರಮಹಂಸರ ಭಕ್ತರಾಗಿದ್ದಾರೆ.

ಪರಮಹಂಸರವರು ೫೧-೫೨ ವರ್ಷಗಳ ಕಾಲ ಮಾನವಶರೀರವನ್ನು ಧಾರಣೆ ಮಾಡಿದ್ದರು. ಅವರು ಪರಂಧಾಮವನ್ನು ಪಡೆದ ತರುವಾಯದಲ್ಲಿಯೂ ಅವರಿಗೆ ಹಲವು ಮಂದಿ ಭಕ್ತರಾಗಿದ್ದಾರೆ. ಈಗಲೂ ಆಗುತ್ತಲೂ ಇದ್ದಾರೆ. ಅವರ ಭಕ್ತಪರಿವಾರವು ಮದರಾಸು, ಲಂಕಾ, ವಾಯುವ್ಯಪ್ರಾಂತ್ಯ, ರಾಜಪುತ್ರಸ್ಥಾನ, ಕುಮಾರ್, ನೇಪಾಳ, ಬೊಂಬಾಯಿ, ಪಂಜಾಬು, ಜಪಾನ್, ಅಮೇರಿಕಾ, ಇಂಗ್ಲೆಂಡು ಮುಂತಾದ ಸ್ಥಳಗಳಲ್ಲೆಲ್ಲ ಹರಡಿಕೊಂಡಿದೆ. ಇನ್ನು ಮುಂದೆ ಅತಿಶಯವಾಗಿ ಹೆಚ್ಚುತ್ತಲೂ ಇದೆ.

ಎರಡನೆಯ ಖಂಡ

ಶ್ರೀಕಾಳಿಕಾದೇವಾಲಯ ಮತ್ತು ಉದ್ಯಾನ.

ಕಲಿಕತಾವಿಗೆ ಐದು ಮೈಲಿಗಳ ಉತ್ತರದಲ್ಲಿ ದಕ್ಷಿಣೇಶ್ವರವೆಂಬೊಂದು ಗ್ರಾಮ ಇದೆ. ಅಲ್ಲಿ ಗಂಗೆಯ ದಡದಲ್ಲಿ ರಾಸಮಣಿರಾಣಿಯು ಪ್ರತಿಷ್ಠೆಮಾಡಿಸಿದ ಶ್ರೀಕಾಳಿಕಾ ದೇವಾಲಯವಿದೆ. ಅಲ್ಲಿಗೆ ಕಲಿಕತಾವಿನಿಂದ ನೆಲದಮೇಲೆಯೂ ಬರಬಹುದು, ದೋಣಿಯ ಮೇಲೆಯೂ ಬರಬಹುದು. ದೋಣಿಯಿಂದ ಬರುವವರು ವಿಶಾಲವಾದ ಸೋಪಾನಪಂಗ್ತಿಯನ್ನುಳ್ಳ ಘಟ್ಟವನ್ನು ಹತ್ತಿ ಪೂರ್ವಾಭಿಮುಖವಾಗಿ ಶ್ರೀಕಾಳಿಕಾ ದೇವಾಲಯವನ್ನು ಪ್ರವೇಶಮಾಡುತ್ತಾರೆ. ಆ ಘಟ್ಟದಲ್ಲಿಯೇ ಪರಮಹಂಸರು ನಿತ್ಯವೂ ಸ್ನಾನವನ್ನು ಮಾಡುತ್ತಿದ್ದರು.

ಈ ಸೋಪಾನಪಂಗ್ತಿಯ ಮೇಲುಗಡೆಯಲ್ಲಿ ದೊಡ್ಡದಾದ ಒಂದು ಮಂಟಪ ಇದೆ. ಅದರಲ್ಲಿ ದೇವಾಲಯದ ಕಾವಲುಗಾರರಿರುತ್ತಾರೆ. ಅವರ ಹಗ್ಗದ ಮಂಚ ಗಳೂ, ಮಾವಿನ ಮರದ ಪೆಟ್ಟಿಗೆಗಳೂ, ಲೋಟಾಗಳೂ ಅಲ್ಲಿ ಇಟ್ಟಾದಿರುತ್ತವೆ. ಸ್ನಾನಕ್ಕೆ ಬರುವ ಆ ಗ್ರಾಮದವರು ಆ ಮಂಟಪದಲ್ಲಿ ಕುಳಿತುಕೊಂಡು ಮಾತು ಕತೆಗಳನ್ನಾಡುತ್ತ, ಮೆಯ್ಗೆ ಎಣ್ಣೆಯನ್ನು ಹಾಕಿಕೊಳ್ಳುತ್ತಾರೆ. ಸಾಧುಗಳೂ, ಫಕೀರರೂ, ವೈಷ್ಣವರೂ, ವೈಷ್ಣವಿಯರೂ ದೇವರ ಪ್ರಸಾದಕ್ಕಾಗಿ ಬಂದು, ಅಲ್ಲಿ ನೈವೇದ್ಯದ ವೇಳೆಯನ್ನು ನಿರೀಕ್ಷಿಸುತ್ತ ಕುಳಿತುಕೊಳ್ಳುತ್ತಾರೆ. ಕೆಲವು ಸಮಯಗ ಳಲ್ಲಿ ಕಾವಿಯ ಬಟ್ಟೆಯುಟ್ಟು ಕಯ್ಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿರುವ ಭೈರವಿ ಯರು ಕೂಡ ಅವರೊಡನೆ ಕುಳಿತಿರುವುದುಂಟು. ಆ ಮಂಟಪಕ್ಕೆ ಉತ್ತರದಲ್ಲಿ ಆರು ಶಿವದೇವಾಲಯಗಳೂ, ದಕ್ಷಿಣದಲ್ಲಿ ಆರು ಶಿವದೇವಾಲಯಗಳೂ ಇವೆ.

ಶಿವಮಂದಿರಗಳಿಗೂ ಮಂಟಪಕ್ಕೂ ಮೂಡಲಾಗಿ ಇಟ್ಟಿಗೆಯ ನೆಲಗಟ್ಟಿನ ವಿಶಾಲವಾದ ಅಂಗಳವಿದೆ. ಅಂಗಳದ ಮುಂದೆ ಒಂದೇ ಸಾಲಿನಲ್ಲಿ ಎರಡು ದೇವಾ ಲಯಗಳಿವೆ. ಉತ್ತರ ಪಾರ್ಶ್ವದಲ್ಲಿರುವುದು ಶ್ರೀರಾಧಾಕಾಂತದೇವಾಲಯ. ದಕ್ಷಿ ಣದಲ್ಲಿರುವುದು ಭಗವತಿಯಾದ ಶ್ರೀಕಾಳಿಯ ದೇವಸ್ಥಾನ. ಶ್ರೀರಾಧಾಕಾಂತ ದೇವಾಲಯದಲ್ಲಿ ಪಶ್ಚಿಮಮುಖವಾಗಿ ಶ್ರೀಕೃಷ್ಣನ ವಿಗ್ರಹವೂ, ಅದರ ಮಗ್ಗುಲಲ್ಲಿ ಶ್ರೀರಾಧೆಯ ವಿಗ್ರಹವೂ ಸಿಂಹಪೀಠದ ಮೇಲೆ ಸ್ಥಾಪಿತವಾಗಿವೆ. ದೇವಸ್ಥಾನಕ್ಕೆ ಸಾವಟಿಗೆಗಳನ್ನು ಹತ್ತಿ ಹೋಗಬೇಕು. ಅದರ ನೆಲಕ್ಕೆ ನುಣುಪಾಗಿಯೂ, ಅಂದ ವಾಗಿಯೂ ಇರುವ ಚೌಕವಾದ ಕಲ್ಲುಗಳು ಹಾಸಲ್ಪಟ್ಟಿವೆ. ದೇವಾಲಯದ ಮುಂದಿ ರುವ ಮುಖಮಂಟಪದಲ್ಲಿ ಒಂದು ಲಸ್ತ್ರವನ್ನು ತೂಗುಹಾಕಿದ್ದಾರೆ. ಅದು ಈಗ

ಉಪಯೋಗದಲ್ಲಿ ಇಲ್ಲ. ಆದುದರಿಂದ ಅದರ ಮೇಲೆ ದೂಳು ಕೂರದಂತೆ ಒಂದು ಕೆಂಪು ಬಟ್ಟೆಯನ್ನು ಮುಚ್ಚಿದ್ದಾರೆ. ಅಲ್ಲಿ ಸದಾ ಒಬ್ಬ ಕಾವಲುಗಾರನು ಇರುತ್ತಾನೆ. ಮಧ್ಯಾಹ್ನದ ವೇಳೆಯಲ್ಲಿ ಬಿಸಿಲು ಬೀಳದಂತೆ ದೇವಾಲಯದ ಪಶ್ಚಿಮದಲ್ಲಿರುವ ಗವಾಕ್ಷಗಳಿಗೆ ಮರೆಯಾಗಿ ಲಾಮುಂಚದ ತಟ್ಟೆಗಳನ್ನು ಇಳಿಯಬಿಡುತ್ತಾರೆ. ಗರ್ಭಗೃಹದ ಆಗ್ನೇಯಭಾಗದಲ್ಲಿ ಗಂಗಾಜಲಪೂರ್ಣವಾದ ಗಡಿಗೆಯೊಂದಿದೆ. ದೇವಾಲಯದ ಮಹಾದ್ವಾರದ ಹತ್ತಿರ, ದೇವರ ಶ್ರೀಪಾದತೀರ್ಥ ತುಂಬಿದ ಒಂದು ಪಾತ್ರವನ್ನು ಇಟ್ಟಿದ್ದಾರೆ. ಭಕ್ತರು ಬಂದು, ದೇವರಿಗೆ ನಮಸ್ಕಾರಮಾಡಿ, ಬಳಿಕ ಆ ತೀರ್ಥವನ್ನು ತೆಗೆದುಕೊಳ್ಳುತ್ತಾರೆ. ಭಗವಾನ್ ಶ್ರೀರಾಮಕೃಷ್ಣರವರು ಮೊದಲು ಕ್ರಿಸ್ತಾಬ್ದ ೧೮೫೫-೧೮೫೬ ರಲ್ಲಿ ಈ ದೇವಾಲಯದಲ್ಲಿಯೇ ಅರ್ಚಕರಾಗಿದ್ದರು.

ದಕ್ಷಿಣಪಾರ್ಶ್ವದ ದೇವಾಲಯದಲ್ಲಿ ಸುಂದರವಾದ ಶ್ಯಾಮಶಿಲೆಯ ಕಾಳಿಯ ಮೂರ್ತಿಯಿರುತ್ತದೆ. ಆ ಮಹಾಮಾತೆಗೆ **ಭವತಾರಿಣೀ** ಎಂದು ಹೆಸರು. ಈ ದೇವಸ್ಥಾನದ ನೆಲಕ್ಕೆ ನುಣುಪಾಗಿಯೂ, ಅಂದವಾಗಿಯೂ, ಇರುವ ಚೌಕನಾದ ಬಿಳಿಯ ಮತ್ತು ಕರಿಯ ಕಲ್ಲುಗಳು ಹಾಸಲ್ಪಟ್ಟಿವೆ. ಗರ್ಭಗೃಹದಲ್ಲಿ, ಎತ್ತರವಾದ ವೇದಿಯ ಮೇಲೆ, ರಜತಮಯವಾದ ಸಹಸ್ರದಳದ ಪದ್ಮಪೀಠವಿದೆ. ಅದರ ಮೇಲೆ ಶ್ವೇತಶಿಲಾನಿರ್ಮಿತವಾದ ಶಿವಮೂರ್ತಿಯು ದಕ್ಷಿಣಶಿರಸ್ಕನಾಗಿ ಮಲಗಿದ್ದಾನೆ. ಅವನ ಹೃದಯದ ಮೇಲೆ ಶ್ಯಾಮಶಿಲೆಯಿಂದ ಮಾಡಿದ ಕಾಲಿಯ ಮೂರ್ತಿಯು ಪ್ರತಿಷ್ಠಿತವಾಗಿದೆ. ಆ ಮಹಾಮಾತೆಯು ಕಾಶೀಪೀತಾಂಬರವನ್ನುಟ್ಟು, ಮೂರು ಕಣ್ಣುಗಳುಳ್ಳವಳಾಗಿ, ಸಕಲಾಲಂಕಾರಮಂಡಿತಳಾಗಿ ರಂಜಿಸುತ್ತಲಿದ್ದಾಳೆ. ಆಕೆಯ ಪಾದಪದ್ಮಗಳಲ್ಲಿ ಅರ್ಚನೆಮಾಡಿದ ಜಪಾಕುಸುಮಗಳೂ, ಬಿಲ್ವದಳಗಳೂ ಇವೆ. ಕಾಲುಸರ, ಗೆಜ್ಜೆ, ರುಳಿ, ಕಾಲ ಬಳೆ, ಕಾಲುಂಗರ, ಪಾಡಗ, ಪಿಲ್ಲಿ ಮುಂತಾದ ಆಭರಣಗಳು ಪಾದಗಳಲ್ಲಿ ಶೋಭಿಸುತ್ತಲಿವೆ ಪರಮಹಂಸದೇವರು ಮಥುರ ಬಾಬುವಿಗೆ ಹೇಳಿ ತರಿಸಿದ ಪಂಜಾಬು ದೇಶದ ಪಾದಾಭರಣವೂ ಮಾತೆಯ ಪಾದಗಳಲ್ಲಿ ಒಪ್ಪುತ್ತಿದೆ. ತೋಳಿನಲ್ಲಿ ನಾಗಮುರಿ, ವಂಕಿ, ಮುಂತಾದ ಸ್ವರ್ಣಾಭರಣಗಳೂ, ಹಸ್ತಗಳಲ್ಲಿ ಹಲವು ವಿಧವಾದ ಬಳೆಗಳೂ, ಕಡಗಗಳೂ, ಬೆರಲುಗಳಲ್ಲ ನವರತ್ನಖಚಿತವಾದ ಉಂಗುರುಗಳೂ ಇವೆ. ಬಿಳಿಯ ಮುತ್ತಿನ ಹಾರ, ಮೂವತ್ತೆರಡು ಎಳೆಯ ಚಿನ್ನದ ಸರಪಣಿ, ನಕ್ಷತ್ರಮಾಲೆ, ಸುವರ್ಣಮಯವಾದ ರುಂಡಮಾಲೆ ಇವುಗಳು ಭಗವತಿಯ ಕೊರಳಿನಲ್ಲಿ ಅಂದವಾಗಿ ತೋರುತ್ತಲಿವೆ. ಮಹಾಮಾತೆಯ ಕರ್ಣಂಗಳಲ್ಲಿ ಓಲೆ, ಸರಪಣಿ, ಜುಮುಕಿ, ಚಂದ್ರಮುರು ಮುಂತಾದ ವಿಚಿತ್ರವಾದ ಕರ್ಣಾಭರಣಗಳು ತಳತಳಿಸುತ್ತಿವೆ. ಮೂಗಿನಲ್ಲಿ ಮೂಗ ಬೊಟ್ಟು, ಅರ್ಧಚಂದ್ರ, ಬುಲಾಕು ಮುಂತಾದುವು ಕಂಗೊಳಿಸುತ್ತಿವೆ. ತಲೆಯಲ್ಲಿ ದಿವ್ಯವಾದ ಕಿರೀಟವು ನಿಗನಿಗಿಸುತ್ತಿದೆ. ಭಗವತಿಯ ವಾಮಹಸ್ತಗಳೆರಡರಲ್ಲಿ ನರಕಪಾಲವೂ, ಕತ್ತಿಯೂ ಇವೆ.

ಬಲಗೈಗಳೆರಡರಲ್ಲಿ ಅಭಯಮುದ್ರೆ ವರದಮುದ್ರೆಗಳು. ನಡುವಿನಲ್ಲಿ ಚಿನ್ನದ ನರಕರಾ ಕೃತಿಯ ಎಳೆ, ಜೇವಿನ ಕಾಯ ಆಕಾರದ ಗೆಜ್ಜೆ ಮತ್ತು ಒಡ್ಯಾಣಗಳು ವಿರಾಜಿಸುತ್ತಿವೆ. ದೇವಾಲಯದೊಳಗೆ ಈಶಾನ್ಯಭಾಗದಲ್ಲಿ ಸುಸಜ್ಜಿತವಾದ ಶಯ್ಯೆಯೊಂದಿದೆ. ಅಲ್ಲಿಯೇ ಭಗವತಿಗೆ ಶಯನೋತ್ಸವ. ಒಂದು ಕಡೆ ಗೋಡೆಯಲ್ಲಿ ಚಾಮರವನ್ನು ಸಿಕ್ಕಿಸಿದ್ದಾರೆ. ಪರಮಹಂಸರವರು ಎಷ್ಟೋ ಸಲ ಈ ಚಾಮರವನ್ನು ಹಿಡಿದು ಭಗವತಿಯ ಸೇವೆಯನ್ನು ಮಾಡಿದ್ದಾರೆ. ಜಗತಿಯ ಮೇಲೆ ಪದ್ಮಾಸನದಲ್ಲಿ ನೀರನ್ನು ತುಂಬಿದ ಬೆಳ್ಳಿಯ ಗಿಂಡಿಯಿದೆ. ಕೆಳಗೆ ಸಾಲಾಗಿ ಜಲಪೂರಿತವಾದ ಘಟಗಳಿವೆ. ಇವು ಮಹಾಮಾತೆಯ ಪಾನೀಯಪಾತ್ರಗಳು. ಪದ್ಮಾಸನದ ಮೇಲೆ ಪಶ್ಚಿಮದಿಕ್ಕಿನಲ್ಲಿ ಅಷ್ಟಧಾತುನಿರ್ಮಿತವಾದ ಸಿಂಹವೂ, ಪೂರ್ವದಿಕ್ಕಿನಲ್ಲಿ ತ್ರಿಶೂಲ, ಗೋಧಿಕೆ (ಉಡು) ಗಳೂ, ಆಗ್ನೇಯದಲ್ಲಿ ನರಿಯೂ, ದಕ್ಷಿಣದಲ್ಲಿ ಕರಿಯ ಕಲ್ಲಿನ ಬಸವನೂ, ಈಶಾನ್ಯದಲ್ಲಿ ಹಂಸೆಯೂ ಇವೆ. ಜಗತಿಯ ಮೆಟ್ಟಿಲ ಮೇಲೆ ರಜತಸಿಂಹಪೀಠದಲ್ಲಿ ನಾರಾಯಣಮೂರ್ತಿಯ ಸಾಲಿಗ್ರಾಮವಿದೆ. ಒಂದು ಮಗ್ಗುಲಲ್ಲಿ ಪರಮಹಂಸದೇವರಿಗೆ ಸನ್ಯಾಸಿಯಿಂದ ದೊರೆತ ರಾಮಲಾಲನೆಂಬ ಹೆಸರಿನ ಶ್ರೀರಾಮಚಂದ್ರ ವಿಗ್ರಹವೂ, ಬಾಣೇಶ್ವರ ಶಿವ ಮತ್ತು ಇತರ ದೇವತಾವಿಗ್ರಹಗಳೂ ಇವೆ. ಭವತಾರಿಣಿಯು ದಕ್ಷಿಣಮುಖಳಾಗಿದ್ದಾಳೆ. ಅವಳ ಇದಿರಿಗೆ ಜಗಲಿಯ ಕೆಳಗಡೆಯಲ್ಲಿ ಒಂದು ಘಟವು ಸ್ಥಾಪಿತವಾಗಿದೆ. ಅದರ ಮುಂದೆ ಸಿಂದೂರರಂಜಿತವಾಗಿ, ನಾನಾ ಕುಸುಮಭೂಷಿತವಾಗಿ, ಪುಷ್ಪಮಾಲಾಲಂಕೃತವಾಗಿರುವ ಮಂಗಳಪಾತ್ರೆಯೊಂದಿದೆ. ಒಂದು ಕಡೆಯಲ್ಲಿ ಭಗವತಿಯ ಮುಖಮಜ್ಜನಕ್ಕೋಸ್ಕರ ಜಲಪೂರಿತವಾದ ತಾಮ್ರದ ಗಿಂಡಿಯನ್ನು ಇಟ್ಟಿದ್ದಾರೆ. ದೇವಿಯ ಶಿರೋಭಾಗದಲ್ಲಿ ವಿತಾನವಿದೆ. ಹಿಂದುಗಡೆಯಲ್ಲಿ ದಿವ್ಯವಾದ ಪೀತಾಂಬರವನ್ನು ಇಳಿಯ ಬಿಟ್ಟಿದ್ದಾರೆ. ಜಗತಿಯ ನಾಲ್ಕು ಕಡೆಯಲ್ಲಿಯೂ ಬೆಳ್ಳಿಯ ಕಂಬಗಳಿವೆ. ಅವುಗಳ ಮೇಲೆ ಮಹಾರ್ಘವಾದ ಮೇಲು ಕಟ್ಟು ಇದೆ. ಅದರಿಂದ ಭಗವತಿಯ ಮೂರ್ತಿಯು ಅತ್ಯುಜ್ವಲವಾಗಿ ಕಂಗೊಳಿಸುತ್ತಲಿದೆ. ದೇವಾಲಯಕ್ಕೆ ಎರಡು ದ್ವಾರಗಳಿವೆ. ಕಿಟಕಿಗಳಿಗೆ ಭದ್ರವಾದ ಬಾಗಿಲುಗಳಿಟ್ಟಿವೆ. ದೇವಸ್ಥಾನದ ಬಾಗಿಲ ಬಳಿಯಲ್ಲಿ ಒಬ್ಬ ಕಾವಲುಗಾರನಿದ್ದಾನೆ. ಅಲ್ಲಿ ಪಂಚಪಾತ್ರದಲ್ಲಿ ದೇವರ ಶ್ರೀಪಾದತೀರ್ಥವಿಟ್ಟಿದೆ. ದೇವಾಲಯದ ಭುವನೇಶ್ವರಿಯು ನವರತ್ನರಂಜಿತವಾಗಿದೆ. ಕೆಳಗಡೆಯಲ್ಲಿ ನಾಲ್ಕು ಶಿಖರಗಳಿವೆ. ಅದರ ಮೇಲುಗಡೆಯಲ್ಲಿ ಮತ್ತೆ ನಾಲ್ಕು ಶಿಖರಗಳಿವೆ. ಇವೆಲ್ಲಕ್ಕಿಂತ ಎತ್ತರವಾಗಿ ನಡುಗಡೆಯಲ್ಲಿ ಗೋಪುರವಿದೆ. ಈಗ ಒಂದು ಶಿಖರವು ಮೇಲುಗಡೆಯಲ್ಲಿ ಸ್ವಲ್ಪ ಮುರಿದು ಹೋಗಿದೆ. ಪರಮಹಂಸರವರು ಈ ದೇವಾಲಯದಲ್ಲಿಯೂ ಅರ್ಚನೆಯನ್ನು ಮಾಡುತ್ತಿದ್ದರು.

ಭಗವತಿಯ ದೇವಸ್ಥಾನದ ಮುಂದುಗಡೆಯಲ್ಲಿ, ಸುಂದರವಾಗಿಯೂ, ವಿಶಾಲಗಿಯೂ ಇರುವ ರಂಗಮಂಟಪವಿದೆ. ಅದರ ಮೇಲುಗಡೆಯ ಮುಂದಿನ ಕೈಪಿಡಿಯ

ಗೋಡೆಯಲ್ಲಿ ಮಹಾದೇವ, ನಂದೀ, ಭೃಂಗೀ ಮುಂತಾದ ವಿಗ್ರಹಗಳಿವೆ. ಭಗವಾನರು ಮೊತ್ತಮೊದಲು ಮಹಾದೇವನಿಗೆ ಕೈಜೋಡಿಸಿ ಪ್ರಣಾಮಮಾಡಿ, ತರುವಾಯ ಕಾಳೀಮಂದಿರಕ್ಕೆ ಹೋಗುತ್ತಿದ್ದರು ಆ ಮಂಟಪಕ್ಕೆ ಉತ್ತರದಲ್ಲಿಯೂ, ದಕ್ಷಿಣದಲ್ಲಿಯೂ, ಬಲು ಎತ್ತರವಾದ ಕಲ್ಲ ಕಂಬಗಳನ್ನು ನಿಲ್ಲಿಸಿ ಅವುಗಳ ಮೇಲೆ ಬೋದಿಗೆಗಳನ್ನು ಹಾಕಿ ಎತ್ತರವಾಗಿ ತಾರಸಿಮಾಡಿದ್ದಾರೆ. ಈ ಕಂಬಗಳ ಪೂರ್ವಕ್ಕೂ, ಪಶ್ಚಿಮಕ್ಕೂ ಒಂದೊಂದು ಅಂಗಳವಿದೆ. ಪೂಜಾಕಾಲದಲ್ಲಿಯೂ, ಮಹೋತ್ಸವದ ಸಮಯದಲ್ಲಿಯೂ, ಭಗವತಿಯ ವಿಶೇಷೋತ್ಸವದಿವಸಗಳಲ್ಲಿಯೂ, ರಂಗಮಂಟಪದಲ್ಲಿ ಯಕ್ಷಗಾನಗಳನ್ನು ಆಡುತ್ತಾರೆ. ರಾಸಮಣಿಯ ಅಳಿಯನಾದ ಮಧುರಬಾಬುವು, ಭಗವಾನರ ಅಪ್ಪಣೆಯಂತೆ, ಇಲ್ಲಿಯೇ ಧಾನ್ಯರಾಶಿಗಳನ್ನು ದೇವಿಗೆ ನಿವೇದನಮಾಡಿ, ಬಡವರಿಗೆಲ್ಲ ಹಂಚಿಕೊಟ್ಟನು. ಇಲ್ಲಿಯೇ ಪರಮಹಂಸದೇವರು ಬಹಿರಂಗವಾಗಿ ಭೈರವಿಯ ಪೂಜೆಯನ್ನು ಮಾಡಿದರು. ಈ ಮಂಟಪಕ್ಕೆ ದಕ್ಷಿಣದಲ್ಲಿಯೇ ಬಲಿಸ್ಥಾನವಿದೆ.

ಅಂಗಳದ ಪ್ರಾಕಾರದೊಳಗೆ ಪಶ್ಚಿಮದಿಕ್ಕಿನಲ್ಲಿ ದ್ವಾದಶಶಿವಮಂದಿರಗಳೂ, ಮಿಕ್ಕ ಮೂರು ಕಡೆಗಳಲ್ಲಿಯೂ ಮಚ್ಚಿನ ತಾರಸಿಯ ಮನೆಗಳೂ ಇವೆ. ಪೂರ್ವದಿಕ್ಕಿನ ಕೊಟಡಿಗಳಲ್ಲಿ ಶ್ರೀಭಂಡಾರ, ಭಕ್ಷ್ಯಶಾಲೆ, ವಿಷ್ಣುವಿನ ಪಾಕಶಾಲೆ, ನೈವೇದ್ಯಶಾಲೆ, ಮಿಕ್ಕ ದೇವರ ಪಾಕಶಾಲೆ, ಭಗವತಿಯ ಪಾಕಶಾಲೆ, ಅತಿಥಿಶಾಲೆ ಮುಂತಾದುವು ಇವೆ. ಅತಿಥಿಶಾಲೆಯಲ್ಲಿ ಭೋಜನವನ್ನು ಮಾಡದಿರುವ ಸಾಧುಗಳೂ, ಅತಿಥಿಗಳೂ ಪಾರುಪತ್ಯಗಾರನಿಂದ ಚೀಟನ್ನು ತೆಗೆದುಕೊಂಡು ಹೋಗಿ, ಭಂಡಾರದಿಂದ ಭೋಜನಸಾಮಗ್ರಿಗಳನ್ನು ತೆಗೆದುಕೊಳ್ಳುತ್ತಾರೆ. ವಿಷ್ಣುವಿನ ಪಾಕಶಾಲೆಯಲ್ಲಿ ಮಾಂಸಸಂಬಂಧವಿಲ್ಲದ ಅಡುಗೆಯಾಗುತ್ತದೆ. ಭಗವತಿಗೇ ಪ್ರತ್ಯೇಕವಾದ ಪಾಕಶಾಲೆಯಿದೆ. ಅದರ ಮುಂದೆ ದಾಸಿಯರು ದೊಡ್ಡ ಈಳಿಗೆಯ ಮಣೆಗಳನ್ನು ಇಟ್ಟುಕೊಂಡು ಮತ್ಸ್ಯಗಳನ್ನು ಹಚ್ಚುತ್ತ ಕುಳಿತುಕೊಳ್ಳುತ್ತಾರೆ. ಅಮಾವಾಸ್ಯೆಯ ದಿವಸ ಮಹಾಮಾತೆಗೆ ಆಡನ್ನು ಬಲಿಕೊಡುತ್ತಾರೆ. ನಿತ್ಯವೂ ಹನ್ನೊಂದು ಗಂಟೆಯ ಸಮಯದಲ್ಲಿ ನಿವೇದನವಾಗುತ್ತದೆ. ಆವೇಳೆಗೆ ಸಾಧುಗಳೂ, ವೈಷ್ಣವರೂ, ಅತಿಥಿಗಳೂ, ಬಡವರೂ, ಒಬ್ಬೊಬ್ಬರು ಒಂದೊಂದು ಎಲೆಯನ್ನಿಟ್ಟುಕೊಂಡು, ಅತಿಥಿಶಾಲೆಯಲ್ಲಿ ಕುಳಿತುಕೊಂಡಿರುತ್ತಾರೆ. ಬ್ರಾಹ್ಮಣರಿಗೇ ಬೇರೆ ಸ್ಥಳ, ಕೆಲಸ ಮಾಡುವ ಬ್ರಾಹ್ಮಣರಿಗೇ ಪ್ರತ್ಯೇಕವಾದ ಸ್ಥಳ; ಪಾರುಪತ್ಯಗಾರನ ಕೊಟಡಿಗೇ ಪ್ರಸಾದವು ಹೋಗುತ್ತದೆ. ದೇವಸ್ಥಾನದ ಯಜಮಾನರಿರುವ ಮನೆಗೂ ಪ್ರಸಾದವನ್ನು ಕಳುಹಿಸುತ್ತಾರೆ.

ಅಂಗಳದ ದಕ್ಷಿಣದಲ್ಲಿ ಕಾಗದಪತ್ರಗಳನ್ನು ಇಟ್ಟಿರುವ ಮನೆಯೂ, ಕರಣಿಕರು ಮುಂತಾದ ಕೆಲಸಗಾರರ ಮನೆಗಳೂ ಸಾಲಾಗಿ ಇವೆ. ಪಾರುಪತ್ಯಗಾರನೂ,

ಗುಮಾಸ್ತೆಯೂ ಸದಾ ಅಲ್ಲಿಯೇ ಇರುತ್ತಾರೆ. ಭಂಡಾರಿ, ಸೇವಕ, ದಾಸಿ, ಅಡುಗೆಯವರು, ಅರ್ಚಕ, ಪರಿಚಾರಕ, ಕಾವಲುಗಾರರು ಎಲ್ಲರೂ ಸರ್ವದಾ ಅಲ್ಲಿಯೇ ಓಡಾಡುತ್ತಾರೆ. ಕೆಲವು ಕೊಟ್ಟಡಿಗಳಲ್ಲಿ ದೇವಾಲಯಕ್ಕೆ ಸೇರಿದ ರತ್ನಗಂಬಳಿ, ಗುಡಾರ ಮುಂತಾದುವುಗಳನ್ನು ಇಟ್ಟು, ಬೀಗ ಹಾಕಿದ್ದಾರೆ. ಅಲ್ಲಿಯೇ ಮತ್ತೆ ಕೆಲವು ಕೊಟಡಿಗಳನ್ನು ಪರಮಹಂಸರವರ ಜನ್ಮೋತ್ಸವದಿನಗಳಲ್ಲಿ ಉಗ್ರಾಣಮಾಡಿಕೊಳ್ಳುತ್ತಿದ್ದರು. ಅದರ ದಕ್ಷಿಣದಲ್ಲಿ ಮಹಾಮಹೋತ್ಸವಕಾಲದಲ್ಲಿ ಅಡುಗೆಯ ಕೆಲಸವು ನಡೆಯುತ್ತಿದ್ದಿತು.

ಅಂಗಳದ ಉತ್ತರಪಾರ್ಶ್ವದ ಕೊಟಡಿಗಳಿಗೆ ಸರಿಯಾಗಿ ನಡುವೆ ಒಂದು ಬಾಗಿಲಿದೆ. ನದಿಯ ಘಟ್ಟದ ಮೇಗಣ ಮಂಟಪದಲ್ಲಿರುವಂತೆ ಅಲ್ಲಿಯೂ ಕಾವಲುಗಾರರಿದ್ದಾರೆ. ಒಳಗೆ ಬರಬೇಕಾದವರು ಆ ಎರಡು ಬಾಗಿಲುಗಳ ಹೊರಗೇ ತಮ್ಮ ಜೋಡುಗಳನ್ನು ಬಿಟ್ಟು ಬಿಡಬೇಕು.

ಅಂಗಣದ ವಾಯುವ್ಯಮೂಲೆಯಲ್ಲಿ, ಎಂದರೆ ಶಿವಮಂದಿರಗಳ ಉತ್ತರಕ್ಕೆ ಸರಿಯಾಗಿ, ಶ್ರೀಪರಮಹಂಸದೇವರ ಕೊಟ್ಟಡಿಯು ಇದೆ. ಅದು ಸುಮಾರು ಇಪ್ಪತ್ತು ಅಡಿಗಳ ಉದ್ದವೂ, ಇಪ್ಪತ್ತು ಅಡಿಗಳ ಅಗಲವೂ, ಇರುವ ಚೌಕನಾಗಿರುವ ಕೋಣೆ. ಅದರ ಪಶ್ಚಿಮಕ್ಕೆ ಅರ್ಧಮಂಡಲಾಕಾರವಾದ ವರಾಂಡವಿದೆ. ಅಲ್ಲಿ ಭಗವಾನರು ಪಶ್ಚಿಮಮುಖರಾಗಿ ನಿಂದು, ಗಂಗೆಯನ್ನು ದರ್ಶನಮಾಡುತ್ತಿದ್ದರು. ಈ ವರಾಂಡದ ಪಕ್ಕದಲ್ಲಿ ಹಾದಿ. ಅದರ ಪಶ್ಚಿಮಕ್ಕೆ ಪುಷ್ಪೋದ್ಯಾನ, ಅದರ ಮಗ್ಗುಲಲ್ಲಿ ಗಂಗೆಯ ತಡಿಗಟ್ಟು. ಅದರ ಆಚೆಯೇ ಕಲಕಲನಾದಿನಿಯೂ, ಸರ್ವತೀರ್ಥಸ್ವರೂಪಿಣಿಯೂ, ಪಾವನಜೀವನೆಯೂ ಆದ ಗಂಗೆ, ಭಗವಾನರ ಕೋಣೆಗೆ ಉತ್ತರದಲ್ಲಿ ಚೌಕನಾದ ನಡಮೆಯಿದೆ. ಅದರ ಉತ್ತರಕ್ಕೆ ಉದ್ಯಾನ, ಉದ್ಯಾನದ ಬಡಗಲಲ್ಲಿ ಇನ್ನೊಂದು ಹೂದೋಟ, ಅದರ ಪಕ್ಕದಲ್ಲಿ ಎರಡು ಅಂತಸ್ತುಗಳಿರುವ ವಾದ್ಯಶಾಲೆಯಿದೆ. ಅದರ ಕೆಳಗಣ ಅಂತಸ್ತಿನಲ್ಲಿ ಪರಮಹಂಸರವರ ವೃದ್ಧರೂ, ಪೂಜ್ಯರೂ ಆದ ಮಾತೆಯೂ, ಅವರ ಪತ್ನಿಯವರೂ ವಾಸಮಾಡಿಕೊಂಡಿದ್ದರು. ವಾದ್ಯಶಾಲೆಯ ಮಗ್ಗುಲಲ್ಲಿ ಬಕುಳದ ಗಿಡವಿದೆ. ಅಲ್ಲಿಯೇ ಬಕುಳತಲದ ಘಟ್ಟ. ಆಗ್ರಾಮದ ಹೆಂಗುಸರೆಲ್ಲರೂ ಸ್ನಾನಮಾಡುವುದಕ್ಕೆ ಆ ಘಟ್ಟಕ್ಕೇ ಹೋಗುತ್ತಾರೆ. ಅಲ್ಲಿಯೇ ಭಗವಾನರ ವೃದ್ಧ ಜನನಿಯು ೧೮೭೭ ನೆಯ ಕ್ರಿಸ್ತವರ್ಷದಲ್ಲಿ ದಿವಂಗತರಾದರು. ಪರಮಹಂಸದೇವರ ಕೋಣೆಗೆ ಪೂರ್ವದಿಕ್ಕಿನಲ್ಲಿರುವ ಪ್ರಾಕಾರದ ನಡುವೆ ಒಂದು ಎತ್ತರವಾದ ಗೋಡೆಯಿದೆ. ಇದರಿಂದ ಪ್ರಾಕಾರವು ಎರಡು ದೊಡ್ಡ ಅಂಗಳಗಳಂತಿದೆ. ದಕ್ಷಿಣಭಾಗದ ಅಂಗಳಕ್ಕೆ ಇದಿರಾಗಿ ದೇವಾಲಯವಿದೆ. ಉತ್ತರ ಪಾರ್ಶ್ವದ ಅಂಗಳದಿದಿರಿಗೆ ತೋಟವಿದೆ. ದಕ್ಷಿಣಭಾಗದ ಅಂಗಳದಲ್ಲಿ ಪರಮಹಂಸರವರು ಭಕ್ತಗಣದೊಡನೆ ಕುಳಿತು, ಭಗವದ್ವಿಷಯವಾದ ಮಾತುಗಳನ್ನಾಡುತ್ತ, ಕೀರ್ತನ

ಗಳನ್ನು ಮನೋಹರವಾಗಿ ಹಾಡುತ್ತಿದ್ದರು. ಉತ್ತರಪಾರ್ಶ್ವದ ಅಂಗಳದಿಂದ ಭಕ್ತರು ಪರಮಹಂಸದೇವರ ಬಳಿಗೆ ಬಂದು ಅವರ ಜನ್ಮೋತ್ಸವವನ್ನು ನಡಯಿಸು ತ್ತಿದ್ದರು. ಪರಮಹಂಸರವರು ಅಲ್ಲಿಯೇ ಅವರ ಸಂಗಡ ಕುಳಿತು ಎಷ್ಟೋ ಸಲ ಪ್ರಸಾದವನ್ನು ಸ್ವೀಕರಿಸಿದ್ದಾರೆ. ಶ್ರೀಯುತ ಕೇಶವಸೇನನು ತನ್ನ ಶಿಷ್ಯಗಣದೊಡನೆ ಬಂದು, ಅಲ್ಲಿಯೇ ಕುಳಿತು, ಪರಮಹಂಸರೊಡನೆ ಆನಂದದಿಂದ ಮಾತನಾಡುತ್ತ, ಎಷ್ಟೋ ಸಾರಿ ತೆಂಗಿನಕಾಯಿ, ಬುರಗಲು, ಪೂರಿ, ಮಿಷ್ಟಾನ್ನಾದಿಗಳನ್ನು ಅವರ ಸಂಗಡ ತಿಂದಿದ್ದಾನೆ. ಅಲ್ಲಿಯೇ ಭಗವಾನರು ನರೇಂದ್ರನನ್ನು ಕಂಡು ಸಮಾಧಿಸ್ಥ ರಾಗಿದ್ದರು.

ಬಕುಲತಲದ ಸಮೀಪದಲ್ಲಿಯೇ ಪಂಚವಟಿಯಿದೆ. ಅಲ್ಲಿಯ ಮರಗಳ ಬುಡ ದಲ್ಲಿ ಕುಳಿತು ಭಗವಾನರು ಅನೇಕವಾಗಿ ಸಾಧನೆಗಳನ್ನು ಮಾಡಿದರು. ಅವರು ಸದಾ ಭಕ್ತರೊಂದಿಗೆ ಅಲ್ಲಿಯೇ ತಿರುಗಾಡುತ್ತಿದ್ದರು. ಅವರು ಒಂದೊಂದುವೇಳೆ, ಅರ್ಧರಾತ್ರಿಯಲ್ಲಿ ನಿದ್ದೆಯಿಂದೆದ್ದು, ಅಲ್ಲಿಗೆ ಹೊರಟುಹೋಗುತ್ತಿದ್ದರು. ಪರಮ ಹಂಸರು ಬೃಂದಾವನದಿಂದ ಮಣ್ಣನ್ನು ತಂದುಹಾಕಿ ಆಲ, ಅರಳಿ, ಜೀವು, ನೆಲ್ಲಿ, ಬಿಲ್ವ ಈ ಐದು ಜಾತಿಯ ವೃಕ್ಷಗಳನ್ನು ಬೆಳಸಿ, ಆ ಪ್ರದೇಶಕ್ಕೆ ಪಂಚವಟೀ ಎಂದು ಹೆಸರಿಟ್ಟರು. ಅದಕ್ಕೆ ಸೇರಿದಂತೆ ಒಂದು ಪರ್ಣಶಾಲೆಯನ್ನು ಕಟ್ಟಿಕೊಂಡು ಭಗವಾ ನರು ಅಲ್ಲಿ ಬಹುವಾಗಿ ತಪಸ್ಸನ್ನೂ, ಈಶ್ವರಧ್ಯಾನವನ್ನೂ ಮಾಡುತ್ತಿದ್ದರು. ಆ ಕುಟೀರವು ಇದ್ದ ತಾವಿನಲ್ಲಿ ಈಗ ಒಂದು ತಾರಸಿಯ ಮನೆಯಿದೆ. ಪಂಚವಟಿಯ ಉತ್ತರದಲ್ಲಿ, ಅದಕ್ಕೆ ಸೇರಿದಂತೆಯೇ, ಪುರಾತನವಾದ ವಟವೃಕ್ಷವೊಂದಿದೆ. ಅದರೊ ಡನೆ ಒಂದು ಅರಳಿಯ ಮರವು ಸೇರಿಕೊಂಡು, ಎರಡೂ ಒಂದೋ ಎಂಬಂತಿವೆ. ಅದು ಹಳೆಯ ಕಾಲದ ಮರವಾದುದರಿಂದ ಅದರಲ್ಲಿ ಪೊಟರೆಗಳು ತುಂಬ ಇವೆ. ಅದು ಸಕಲಪಕ್ಷಿಸಮಾಕೀರ್ಣವಾಗಿಯೂ, ವಿವಿಧಜಂತುನಿವಾಸಸ್ಥಾನವಾಗಿಯೂ ಇದೆ. ಮರದ ಬುಡದಲ್ಲಿ ಇಟ್ಟಿಗೆಗಳಿಂದ ಗುಂಡಾಗಿ ಅಂದವಾದ ಜಗಲಿಯನ್ನು ಕಟ್ಟಿದ್ದಾರೆ. ಆ ಜಗಲಿಗೆ ಒಂದು ಕಡೆ ಮೆಟ್ಟಿಲುಗಳಿವೆ. ಜಗಲಿಯ ವಾಯುವ್ಯಭಾಗ ದಲ್ಲಿ ಕುಳಿತು ಪರಮಹಂಸರು ತುಂಬ ಸಾಧನೆಗಳನ್ನು ಮಾಡುತ್ತ, ಕರುವಿಗಾಗಿ ವ್ಯಾಕುಲಪಡುವ ಹಸುವಿನಂತೆ, ಭಗವಂತನಿಗಾಗಿ ವ್ಯಾಕುಲಪಡುತ್ತ, ಎಷ್ಟೋ ಸಲ ಮೊರೆಯಿಟ್ಟಿದ್ದಾರೆ. ಪವಿತ್ರವಾದ ಆ ಆಸನದ ಮೇಲೆ ಕುಳಿತುಕೊಳ್ಳುವುದಕ್ಕೆ ಯೋ ಗ್ಯರಾದ ಮಹಾಪುರುಷರು ಈಗ ಯಾರೂ ಇಲ್ಲವೋ ಎಂಬಂತೆ, ಆ ವಟವೃಕ್ಷದೊಡ ನಿರುವ ಅರಳಿಯ ಮರದ ಕೊಂಬೆಯೊಂದು ಅರ್ಧ ಮುರಿದುಕೊಂಡು ಬಿದ್ದಿದೆ.

ಪಂಚವಟಿಗೆ ಉತ್ತರದಲ್ಲಿ ತಂತಿಯನ್ನು ಬಿಗಿದು ಬೇಲಿ ಹಾಕಿದ್ದಾರೆ. ಆ ಬೇಲಿ ಯ ಆಚೆಗೆ ಸರ್ಪೆಯ ಗಿಡಗಳಿವೆ. ಅದರ ಪೂರ್ವಕ್ಕೆ ಬಿಲ್ವವೃಕ್ಷವಿರುತ್ತದೆ. ಅದರ ಬುಡದಲ್ಲಿ ಕುಳಿತುಕೊಂಡು ಪರಮಹಂಸರು ಬಹುಕಠಿಣವಾದ ಸಾಧನೆಗಳನ್ನು



ದಕ್ಷಿಣೇಶ್ವರದ ಶ್ರೀ ಕಾಳಿಕಾದೇವಾಲಯ.

ಮಾಡಿದರು. ಆ ವೃಕ್ಷಗಳ ಆಚೆಗೆ ಎತ್ತರವಾದ ಆವರಣದ ಗೋಡೆಯಿದೆ. ಅದರ ಉತ್ತರಕ್ಕೆ ಸರಕಾರದ ಮದ್ದಿನ ಮನೆಯಿರುತ್ತದೆ. ಅಂಗಳದ ಬಾಗಿಲಿಂದ ಹೊರಗೆ, ಉತ್ತರಮುಖವಾಗಿ ನೋಡಿದರೆ, ಮುಂದೆ ಎರಡು ಅಂತಸ್ತಿನ ಮನೆಯು ಕಾಣುತ್ತದೆ. ದೇವಾಲಯಕ್ಕೆ ಬಂದಾಗ, ರಾಣೀರಾಸಮಣಿಯೂ, ಆವಳ ಅಳಿಯ ಮಥುರ ಬಾಬುವೂ, ಆ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಅವರು ಜೀವಿಸಿದ್ದಾಗ, ಪರಮಹಂಸರು ಆ ಮನೆಯ ಕೆಳಗಿನ ಅಂತಸ್ತಿನ ಪಡುವಣ ಕೋಣೆಯಲ್ಲಿ ಇರುತ್ತಿದ್ದರು. ಅಲ್ಲಿಂದ ವಕುಲತಲದ ಘಟ್ಟಕ್ಕೆ ಹೋಗಿ ಬರಬಹುದು, ಗಂಗಾದರ್ಶನವನ್ನೂ ಮಾಡಬಹುದು.

ಅಂಗಳದ ಬಾಗಿಲಿಗೂ ಆ ಮನೆಗೂ ನಡುವೆ, ಹಾದಿಯಿದೆ. ಅಲ್ಲಿ ಪೂರ್ವದಿಕ್ಕಿಗೆ ಹೋದರೆ ಬಲಗಡೆಯಲ್ಲಿ ಸೋಪಾನಕಟ್ಟಿದ ಕೊಳವಿದೆ. ಕಾಳೀದೇವಾಲಯದ ಪೂರ್ವಕ್ಕೆ ಸರಿಯಾಗಿ ಮುಸರೆಯನ್ನು ತೊಳೆಯುವ ಘಟ್ಟವೂ, ಹಾದಿಯ ಬಳಿಯಲ್ಲಿ ಇನ್ನೊಂದು ಘಟ್ಟವೂ ಇದೆ. ಆ ಘಟ್ಟದ ಬಳಿಯಲ್ಲಿ ಒಂದು ಜಾತಿಯ ಮರವಿದೆ. ಆದುದರಿಂದ ಆ ಪ್ರದೇಶಕ್ಕೆ ಗಾಜಿತಲಾ ಎನ್ನುತ್ತಾರೆ. ಆ ಹಾದಿಯಲ್ಲಿ ಸ್ವಲ್ಪ ಪೂರ್ವಕ್ಕೆ ಹೋದರೆ ಒಂದು ಬಾಗಿಲಿದೆ. ತೋಟದಿಂದ ಆಚೆಗೆ ಹೋಗುವುದಕ್ಕೆ ಇದೇ ಹೆಬ್ಬಾಗಿಲು. ಈ ಹೆಬ್ಬಾಗಿಲಲ್ಲಿಯೇ ಆಲಂಬಜಾರ್, ಕಲಿಕತಾ ಜನರು ಸದಾ ತಿರುಗಾಡುತ್ತಾರೆ. ದಕ್ಷಿಣೇಶ್ವರದವರು ಸಣ್ಣದಾದ ಮತ್ತೊಂದು ಬಾಗಿಲಿಂದ ಬರುತ್ತಾರೆ. ಕಲಿಕತಾವಿಂದ ರಸ್ತೆಯಲ್ಲಿ ಬರುವವರು ಸಾಮಾನ್ಯವಾಗಿ ದೊಡ್ಡ ಬಾಗಿಲಿಂದಲೇ ಕಾಲಿಯ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಒಬ್ಬ ಕಾವಲುಗಾರನಿದ್ದಾನೆ. ಪರಮಹಂಸರು ರಾತ್ರಿಯಲ್ಲಿ ಕಲಿಕತಾವಿಂದ ಕಾಳೀದೇವಾಲಯಕ್ಕೆ ನೆಲದ ಹಾದಿಯಲ್ಲಿ ಬಂದರೆ, ಆ ಕಾವಲುಗಾರನು ಹೆಬ್ಬಾಗಿಲನ್ನು ತೆರೆದು ಅವರನ್ನು ಒಳಗೆ ಬಿಡುತ್ತಿದ್ದನು. ಆದುದರಿಂದ ಅವರು ಅವನಿಗೆ ಪೂರಿ, ಪಾಯಸ ಮುಂತಾದ ಭಗವತ್ಪ್ರಸಾದವನ್ನು ಕೊಡುತ್ತಿದ್ದರು.

ಪಂಚವಟಿಗೆ ಮೂಡಲಲ್ಲಿ ಹಂಸಪುಷ್ಕರಿಣಿಯೆಂಬ ಕೊಳವಿದೆ. ಅದಕ್ಕೆ ಬಡಗಲಾಗಿ ಅಶ್ವಶಾಲೆಯೂ, ಗೋಶಾಲೆಯೂ ಇವೆ. ಗೋಶಾಲೆಯ ಪೂರ್ವದಿಕ್ಕಿನಲ್ಲಿ ಸಣ್ಣ ಬಾಗಿಲಿದೆ. ಅಲ್ಲಿಂದ ದಕ್ಷಿಣೇಶ್ವರಕ್ಕೆ ಹೋಗಿ ಬರಬಹುದು. ದೇವಾಲಯದ ಅರ್ಚಕರೂ, ಕರ್ಮಕರರೂ, ತಮ್ಮ ಸಂಸಾರವನ್ನು ದಕ್ಷಿಣೇಶ್ವರದಲ್ಲಿ ಇಟ್ಟಿದ್ದಾರೆ. ಅವರೂ, ಅವರ ಹೆಂಡಿರು ಮಕ್ಕಳೂ, ಈ ದಾರಿಯಲ್ಲಿಯೇ ಓಡಾಡುತ್ತಾರೆ. ಉದ್ಯಾನದ ದಕ್ಷಿಣದಿಂದ ವಕುಲತಲಾ ಮತ್ತು ಪಂಚವಟಿಗೆ ಗಂಗೆಯೊತ್ತಿನಲ್ಲಿಯೇ ಒಂದು ಹಾದಿಯು ಹೋಗುತ್ತದೆ. ಅದರ ಇಕ್ಕೆಲಗಳಲ್ಲಿಯೂ ಹೂಗಿಡುಗಳಿವೆ. ಗಾಜೀತಲದಿಂದ ಪರ್ಣಶಾಲೆಯ ವರೆಗೂ, ಹಂಸಪುಷ್ಕರಣಿಯ ಮೂಡಲಲ್ಲಿಯೂ ನಾನಾಜಾತಿಯ ಹೂಗಿಡುಗಳೂ, ಫಲವೃಕ್ಷಗಳೂ ಇವೆ. ಒಂದು ಕೊಳವೂ ಇದೆ. ಬೆಳಗಿನ ಜಾವದಲ್ಲಿ, ಮೂಡ

ಗಡೆಯು ಇನ್ನೂ ಕೆಂಪಾಯಿತೋ ಇಲ್ಲವೋ ಎನ್ನುವಾಗ, ಮಂಗಲಾರತಿಯ ಮಧುರ ಧ್ವನಿಯೂ, ವಾದ್ಯಗಳ ಶ್ರಾವ್ಯಘೋಷವೂ ಆಗುತ್ತದೆ. ಆ ಸಮಯದಲ್ಲಿ ಭಗವತಿಯು ಪುಷ್ಪೋದ್ಯಾನದೊಳಗೆ ಹೂಗಳನ್ನು ಕುಯ್ಯುತ್ತಾರೆ. ಗಂಗೆಯ ದಡದಲ್ಲಿ ಪಂಚವಟಿಯ ಮುಂದೆ ಬಿಲ್ವವೃಕ್ಷವೂ, ಸುಗಂಧಬಂಧುರವಾದ ಪುಷ್ಪವೃಕ್ಷಗಳೂ ಇವೆ. ಪರಮಹಂಸರವರಿಗೆ ಮಾಧವೀ, ಮಲ್ಲಿಕಾ, ಗುಲಾಬಿ ಮುಂತಾದ ಹೂಗಳೆಂದರೆ ತುಂಬ ಇಷ್ಟ. ಅವರು ಬೃಂದಾವನದಿಂದ ಮಾಧವೀಲತೆಯೊಂದನ್ನು ತಂದು ನಟ್ಟರು. ಹಂಸಪುಷ್ಕರಿಣಿಯ ಮಗ್ಗುಲಲ್ಲಿ ಒಂದು ಸಂಪಗೆಯ ಗಿಡುವೂ, ದಾಸವಾಳ, ಗುಲಾಬೀ, ಕಾಂಚನಪುಷ್ಪಗಳ ಗಿಡುಗಳೂ ಇವೆ. ಹಾದಿಯ ಮೇಲುಗಡೆ ಅಪರಾಜಿತಾ, ಅದರ ಬಳಿಯಲ್ಲಿ ಜಾಜಿ, ಇನ್ನೊಂದು ಕಡೆ ಶೇಫಾಲಿಕಾ ಎಂಬ ವೃಕ್ಷಗಳಿವೆ. ದ್ವಾದಶ ಶಿವಾಲಯಗಳ ಬಳಿಯಲ್ಲಿ ಬಿಳಿಯ ಕಣಿಗಿಲೆ, ಕೆಂಪು ಕಣಿಗಿಲೆ, ಗುಲಾಬಿ, ಜಾಜಿ, ಮಲ್ಲಿಗೆ ಮುಂತಾದ ಗಿಡುಗಳಿವೆ. ಮಹಾದೇವನ ಪೂಜೆಗೆ ಬೇಕಾದ ದುತ್ತೂರದ ಗಿಡುಗಳು ಕೆಲವೆಡೆಯಲ್ಲಿ ಇವೆ. ಇಟ್ಟಿಗೆಯಿಂದ ಕಟ್ಟಿದ ಬೃಂದಾವನಗಳಲ್ಲಿ ತುಲಸಿಯ ಗಿಡುಗಳು ಬೆಳೆದಿವೆ. ವಾದ್ಯಶಾಲೆಗೆ ದಕ್ಷಿಣದಲ್ಲಿ ದುಂಡು ಮಲ್ಲಿಗೆ, ಜಾಜಿ, ಸುಗಂಧರಾಜ, ಗುಲಾಬಿ ಗಿಡುಗಳು ಬೆಳೆದಿರುತ್ತವೆ. ಸೋಪಾನದ ಬಳಿಯಲ್ಲಿ, ಪದ್ಮ ಕರವೀರ, ಕೋಕಿಲಾಕ್ಷಗಳೂ, ಪರಮಹಂಸರವರ ಕೋಣೆಯ ಪಕ್ಕದಲ್ಲಿ ಒಂದೆರಡು ಕೃಷ್ಣಚೂಡಾವೃಕ್ಷಗಳೂ, ಅವುಗಳ ಮಗ್ಗುಲಲ್ಲಿ ಜಾಜಿ, ಸುಗಂಧರಾಜ, ಗುಲಾಬಿ, ಮಲ್ಲಿಗೆ, ದಾಸವಾಣ, ಬಿಳಿಯ ಮತ್ತು ಕೆಂಪು ಕಣಿಗಿಲೆ, ಪಂಚಮುಖದ ದಾಸವಾಣ, ಚೀಣೆಯದಾಸವಾಣ ಮುಂತಾದ ಹೂಗಿಡುಗಳೂ, ಬಳ್ಳಿಗಳೂ ಇವೆ. ಪರಮಹಂಸರೂ ಹೂಗಳನ್ನು ಕುಯ್ಯುತ್ತಿದ್ದರು. ಒಂದು ದಿನ, ಪಂಚವಟಿಯ ಮುಂದಿರುವ ಬಿಲ್ವವೃಕ್ಷದಲ್ಲಿ ದಳವನ್ನು ಕುಯ್ಯುತ್ತಿದ್ದಾಗ, ಮರದಿಂದ ಒಂದು ಚಕ್ಕೆಯೆದ್ದಿತು. ಅದನ್ನು ಕಂಡು ಭಗವಾನರು, 'ಭಗವಂತನು ಎಲ್ಲದರಲ್ಲಿಯೂ ಇದ್ದಾನೆ. ಚಕ್ಕೆಯೆದ್ದುದರಿಂದ ಈ ಮರಕ್ಕೆ ಎಷ್ಟು ನೋವಾಗಿರಬಹುದೋ' ಎಂದು ವ್ಯಥೆಪಟ್ಟರು. ಇನ್ನೊಂದು ದಿನ ಹೂಗಳನ್ನು ಕುಯ್ಯುವುದಕ್ಕೆ ಹೋದಾಗ, ಒಂದೊಂದು ಕುಸುಮವೂ ವಿರಾಣ್ಮೂರ್ತಿಯ ಶಿರೋಭಾಗದಲ್ಲಿದ್ದು ಶೋಭೆಯನ್ನು ಪಡೆದಂತೆ ಕಾಣಬಂದಿತು. ಅಂದಿನಿಂದ ಅವರು ಹೂವನ್ನು ಕುಯ್ಯುತ್ತಿರಲಿಲ್ಲ.

ಭಗವತಿಯ ದೇವಾಲಯವು ಆನಂದದ ನಿಕೇತನವಾಗಿದೆ. ಅಲ್ಲಿ ರಾಧಾಕಾಂತ, ಭವತಾರಿಣೀ, ಮಹಾದೇವ, ಮುಂತಾದ ದೇವರ ನಿತ್ಯಪೂಜೆಯೂ, ರಾಗಭೋಗಾದಿಗಳೂ, ಅತಿಥಿಸೇವೆಯೂ, ನಡೆಯುತ್ತಿವೆ. ಒಂದು ಪಾರ್ಶ್ವದಲ್ಲಿ ಬಹು ದೂರದ ವರೆಗೂ ಭಾಗೀರಥಿಯ ದರ್ಶನವಾಗುತ್ತದೆ. ಅಲ್ಲಿ ಸುಗಂಧಯುತವಾದ, ನಾನಾವರ್ಣರಂಜಿತವಾದ, ಪುಷ್ಪೋದ್ಯಾನವಿದೆ. ಮಹಾಪುರುಷರೊಬ್ಬರು ಅಲ್ಲಿ ಹಗಲೂ ಇರುಳೂ ಈಶ್ವರಪ್ರೇಮದಿಂದ ಮತ್ತರಾಗುತ್ತಿದ್ದಾರೆ. ಆನಂದಮಯಿಗೆ

ನಿತ್ಯೋತ್ಸವವು ನಡೆಯುತ್ತಿದೆ. ವಾದ್ಯಶಾಲೆಯಲ್ಲಿ ಸದಾ ನಾನಾರಾಗಗಳನ್ನು ಬಾಜಿಸುತ್ತಿದ್ದಾರೆ. ಬೆಳಿಗ್ಗೆ ಮಂಗಳಾರತಿಯ ವೇಳೆಯಲ್ಲಿ ಒಂದು ಸಲ, ಒಂಬತ್ತು ಗಂಟೆಗೆ ಅರ್ಚನೆಯಾಗುವಾಗ ಒಂದು ಸಲ, ಭೋಗಾರತಿಯಾದ ಬಳಿಕ ಶಯನೋತ್ಸವಕಾಲದಲ್ಲಿ ಒಂದು ಬಾರಿ, ನಾಲ್ಕು ಗಂಟೆಯ ಸಮಯದಲ್ಲಿ ದೇವದೇವಿಯರಿಗೆ ಉತ್ಥಾನ ಮುಖಮಜ್ಜನಗಳು ನಡೆಯುವಾಗ ಒಂದು ಸಲ, ಸಂಜೆಯ ಆರತಿಯಾಗುವಾಗ ಒಂದು ಆವೃತ್ತಿ, ಕೊನೆಗೆ ರಾತ್ರೆ ಒಂಬತ್ತು ಗಂಟೆಯಲ್ಲಿ ಉಪಚಾರಾನಂತರ ಶಯನೋತ್ಸವಕಾಲದಲ್ಲಿ ಒಮ್ಮೆ, ಈ ರೀತಿ ಮಂಗಳವಾದ್ಯಗಳಾಗುತ್ತವೆ.

ಮೂರನೆಯ ಖಂಡ

ಮೊದಲನೆಯ ಪರಿಚ್ಛೇದ

ಮಾಸ್ಟರ ಪ್ರಥಮದರ್ಶನ

ತವ ಕಥಾಮೃತಂ ತಪ್ತಜೀವನಂ।
ಕವಿಭಿರೀಡಿತಂ ಕಲ್ಮಷಾಪಹಂ।
ಶ್ರವಣಮಂಗಳಂ ಶ್ರೀಮದಾತತಂ
ಭುವಿ ಗೃಣಂತಿ ಯೇ ಭೂರಿದಾ ಜನಾಃ॥

ಶ್ರೀಮದ್ಭಾಗವತ–ಗೋಪೀಗೀತಾ-ರಾಸಪಂಚಾಧ್ಯಾಯ

[ನಿನ್ನ ಕಥಾಮೃತವು ಸಂಸಾರದಲ್ಲಿ ಬೆಂದವರಿಗೆ ಜೀವನರೂಪವಾಗಿದೆ. ಅದು ಕವಿಗಳಿಂದ ಸ್ತುತಿಸಲ್ಪಡುತ್ತಿದೆ. ಅದು ಪಾಪಗಳನ್ನು ಹೋಗಲಾಡಿಸುತ್ತದೆ. ಅದನ್ನು ಕೇಳಿದವರಿಗೆ ಮಂಗಳವಾಗುತ್ತದೆ. ಅದು ಶ್ರೀಮಂತರಲ್ಲಿ ಹರಡಿದೆ. ನಿನ್ನ ಈ ಕಥಾಮೃತವನ್ನು ಇತರರಿಗೆ ತಿಳಿಸುವವರು ಮಹಾ ಧರ್ಮಾತ್ಮರು.]

ಗಂಗಾತೀರದ ದಕ್ಷಿಣೇಶ್ವರದಲ್ಲಿ ಮಹಾಮಾತೆಯಾದ ಕಾಳಿಯ ದೇವಾಲಯವಿದೆ. ಅದರ ಪ್ರಾಕಾರದಲ್ಲಿಯೇ ಶ್ರೀರಾಮಕೃಷ್ಣಪರಮಹಂಸರವರು ಒಂದು ಕೋಣೆಯಲ್ಲಿ ವಾಸಮಾಡುತ್ತಿದ್ದಾರೆ. ಅವರ ಭಕ್ತರು ತಮಗೆ ಅವಕಾಶವು ದೊರೆತ ಹಾಗೆಲ್ಲ ಅವರ ದರ್ಶನವನ್ನು ಮಾಡುವುದಕ್ಕೆ ತಂಡತಂಡವಾಗಿ ಬರುತ್ತಲೇ ಇದ್ದಾರೆ.

ಮನೆಯ ಬಾಗಿಲು ಆವಾಗಲೂ ತೆರೆದೇ ಇದೆ. ಆರು ಬರುವುದಕ್ಕೂ ತಡೆಯಿಲ್ಲ. ಬಂದವರೆಲ್ಲರೂ ಭಗವಾನರ ಸಂಗಡ ಮಾತನಾಡಬಹುದು. ಅವರ

ದರ್ಶನಕ್ಕಾಗಿ, ಸಾಧುಗಳು, ಪರಮಹಂಸರು, ಹಿಂದುಗಳು, ಕ್ರಿಸ್ತರು, ಬ್ರಹ್ಮಜ್ಞಾನಿಗಳು, ಶಾಕ್ತರು, ವೈಷ್ಣವರು, ಗಂಡಸರು, ಹೆಂಗುಸರು ಮುಂತಾಗಿ ಸಕಲರೂ ಬರುತ್ತಾರೆ. ರಾಣೀರಾಸಮಣಿಯು ಧನ್ಯಳು. ಆಕೆಯ ಸುಕೃತಬಲದಿಂದಲೇ ಈ ದೇವಾಲಯವು ಪ್ರತಿಷ್ಠಿತವಾಗಿದೆ. ಜನರು ಬಂದು, ಜಂಗಮಮೂರ್ತಿಯಾದ ಆ ಮಹಾಪುರುಷರನ್ನು ದರ್ಶನಮಾಡುತ್ತಲೂ, ಪೂಜಿಸುತ್ತಲೂ ಇದ್ದಾರೆ.

ಕ್ರಿಸ್ತಾಬ್ದ ೧೮೮೩ ನೆಯ ಫಿಬ್ರುವರಿ ೨೨ ನೆಯ ತೇದಿ ಬೃಹಸ್ಪತಿವಾರದ ದಿವಸ ಭಗವಾನರು ಶ್ರೀಯುಕ್ತ ಕೇಶವಸೇನ, ಜೋಸೆಫ್ ಕುಕ್ ಇವರೊಡನೆ ಜಹಜಿನಲ್ಲಿ ತಿರುಗಾಡಿಕೊಂಡು ಬರುವುದಕ್ಕೆ ಹೋಗಿದ್ದರು. ಕೆಲವು ದಿವಸಗಳಾದ ಮೇಲೆ ಭಗವಾನರ ಜನ್ಮೋತ್ಸವವು ನಡೆಯಿತು. ಮಾರ್ಚಿಯ ತಿಂಗಳು ಬಂದಿತು. ವಸಂತಕಾಲ. ಈ ದಿವಸ ರವಿವಾರ. ಸಂಜೆಯಾಗುತ್ತ ಬಂದಿದೆ.

ಮಾಸ್ಟರು ಭಗವಾನರ ಮನೆಗೆ ಬಂದನು. ಅವನಿಗೆ ಇದೇ ಭಗವಾನರ ಪ್ರಥಮ ದರ್ಶನ. ಮನೆಯ ತುಂಬ ಜನರು ತುಂಬಿಹೋಗಿದ್ದರು. ಎಲ್ಲರೂ ನಿಸ್ತಬ್ಧರಾಗಿ ಭಗವಾನರ ವಚನಾಮೃತವನ್ನು ಪಾನಮಾಡುತ್ತಿದ್ದರು. ಭಗವಾನರು ಒಂದು ಸಣ್ಣ ಮಂಚದ ಮೇಲೆ ಪೂರ್ವಾಭಿಮುಖರಾಗಿ ಕುಳಿತಿದ್ದರು. ಅವರು ನಸುನಗೆಗೂಡಿದವರಾಗಿ, ಭಗವದ್ವಿಷಯವನ್ನು ವಿವರಿಸುತ್ತಲಿದ್ದಾರೆ. ಭಕ್ತರೆಲ್ಲರೂ ನೆಲದ ಮೇಲೆ ಕುಳಿತುಕೊಂಡಿದ್ದಾರೆ.

(ಕರ್ಮತ್ಯಾಗವು ಯಾವಾಗ?)

ಮಾಸ್ಟರು ಆಶ್ಚರ್ಯದಿಂದ ನೋಡುತ್ತ, "ಇದೇನು! ಸಾಕ್ಷಾತ್ ಶುಕಮುನಿಯು ಭಾಗವತವನ್ನು ಹೇಳುತ್ತಿದ್ದಾನೆಯೋ, ಇಲ್ಲಿಯೇ ಸರ್ವತೀರ್ಥಗಳೂ ಸಮಾಗಮವಾಗಿವೆಯೋ, ಶ್ರೀಚೈತನ್ಯದೇವನು ಜಗನ್ನಾಥಕ್ಷೇತ್ರದಲ್ಲಿ ರಾಮಾನಂದ, ಸ್ವರೂಪ ಮುಂತಾದ ಭಕ್ತರೊಡನೆ ಭಗವಂತನ ನಾಮಗುಣಗಳನ್ನು ಕೀರ್ತನೆಮಾಡುತ್ತಲಿದ್ದಾನೆಯೋ," ಎಂದು ಭಾವಿಸಿಕೊಂಡನು. "ಹರಿ, ರಾಮ, ಎಂದು ಒಮ್ಮೆ ಹೇಳಿದ ಮಾತ್ರದಿಂದಲೇ ಆರಿಗೆ ಶರೀರದಲ್ಲಿ ರೋಮಾಂಚವು ಉಂಟಾಗುವುದೋ, ಆರ ಕಣ್ಣುಗಳಲ್ಲಿ ಆನಂದಬಾಷ್ಪಗಳು ಕೋಡಿಯಾಗಿ ಹರಿಯುತ್ತವೆಯೋ, ಅಂಥವರಿಗೆ ಸಂಧ್ಯಾದಿಕರ್ಮಗಳೊಂದೂ ಆವಶ್ಯಕವಿಲ್ಲ; ಅವರೀಗ ಕರ್ಮತ್ಯಾಗಕ್ಕೆ ಅಧಿಕಾರಿಗಳು, ಅವರನ್ನು ಕರ್ಮವು ತಾನಾಗಿಯೇ ಬಿಟ್ಟುಹೋಗುತ್ತದೆ. ಆಗ ಕೇವಲ ರಾಮನಾಮ, ಹರಿನಾಮ, ಶುದ್ಧ ಓಂಕಾರಗಳನ್ನು ಜಪಿಸುತ್ತಿದ್ದರೆ ಸಾಕು. **ಸಂಧ್ಯೆಯು ಗಾಯತ್ರಿಯಲ್ಲಿ ಲಯವಾಗುತ್ತದೆ. ಗಾಯತ್ರಿಯು ಓಂಕಾರದಲ್ಲಿ ಲಯವಾಗುತ್ತದೆ. ಇದು ಸತ್ಯ.** ತಿಳಿದುಕೊಳ್ಳಿರಿ" ಎಂಬದಾಗಿ ಭಗವಾನರು ಭಕ್ತರಿಗೆ ಹೇಳಿದರು.

ಮಾಸ್ಟರು, ಪರಾಹನಗರದಲ್ಲಿ ಸಿಧೂರನೊಡನೆ ತೋಟಗಳನ್ನು ತಿರುಗಿಕೊಂಡು, ಭಗವಾನರ ಬಳಿಗೆ ಬಂದಿದ್ದಾನೆ. ಈ ದಿವಸ ಭಾನುವಾರ. ವಿಶ್ರಾಮವಿರುವುದರಿಂದ ಅವನು ನಡೆದುಕೊಂಡು ಬಂದಿದ್ದಾನೆ. ಅವನು ಕೊಂಚ ಹೊತ್ತಿಗೆ ಮುಂಚೆ, ಶ್ರೀಯುತ ಪ್ರಸನ್ನವಾದೂಡರ ತೋಟದಲ್ಲಿ ತಿರುಗಾಡುತ್ತಿದ್ದನು. ಆಗ ಸಿಧೂರನು ಅವನನ್ನು ನೋಡಿ, 'ಗಂಗಾತೀರದಲ್ಲಿ ಸುಂದರವಾದ ತೋಟವೊಂದಿದೆ. ಅದನ್ನು ನೋಡಿಕೊಂಡು ಬರೋಣ, ಬಾ, ಅಲ್ಲಿ ಪರಮಹಂಸರೊಬ್ಬರು ಇದ್ದಾರೆ' ಎಂದು ಹೇಳಿದನು.

ಸಿಧೂರನೂ ಮಾಸ್ಟರೂ, ತೋಟದ ತಲೆಬಾಗಿಲಿಂದ ಒಳಗೆ ಬಂದು, ನೆಟ್ಟಗೆ ಭಗವಾನರು ಇದ್ದ ಕೋಣೆಗೆ ಹೋದರು. ಮಾಸ್ಟರು ಆ ಸ್ಥಳವನ್ನು ನೋಡಿ ಆಶ್ಚರ್ಯಪಟ್ಟು, 'ಅಹಹ! ಇದು ಎಂತಹ ಸುಂದರವಾದ ಸ್ಥಾನ! ಇವರು ಎಂತಹ ಸುಂದರ ಮೂರ್ತಿ! ಇವರ ಮುಖದಲ್ಲಿ ಎಂತಹ ಮಧುರವಾದ ಮಾತುಗಳು! ಇಲ್ಲಿಂದ ಆಚೆಗೆ ಹೋಗಬೇಕೆಂದರೆ ಮನಸ್ಸೇ ಬರುವುದಿಲ್ಲವಲ್ಲ. ನಾನು ಎಲ್ಲಿಗೆ ಬಂದಿದ್ದೇನೆಯೋ ಎಂಬುದನ್ನು ಒಂದು ಸಲ ನೋಡಿಕೊಂಡು, ಮತ್ತೆ ಇಲ್ಲಿಗೆ ಬಂದು ಕುಳಿತುಕೊಳ್ಳುತ್ತೇನೆ,' ಎಂದು ಭಾವಿಸಿ ಕೊಂಡನು.

ಅದರಂತೆ ಅವನು ಸಿಧೂರನ ಸಂಗಡ ಹೊರಗೆ ಬರುವ ವೇಳೆಗೆ ಸರಿಯಾಗಿ, ಆರತಿಯ ಮಧುರಧ್ವನಿಯಾಯಿತು. ಶಂಖ, ಮೃದಂಗ, ತಾಳ, ಜಾಗಟೆಗಳೆಲ್ಲವನ್ನೂ ಏಕಕಾಲದಲ್ಲಿ ಧ್ವನಿಮಾಡಿದರು. ತೋಟದ ದಕ್ಷಿಣದಿಕ್ಕಿನ ವಾದ್ಯಶಾಲೆಯಿಂದ ಮನೋಹರವಾದ ಗೀತಧ್ವನಿಯು ಕೇಳಿಸುತ್ತಿದ್ದಿತು. ಆ ಶಬ್ದವೆಲ್ಲವೂ ಭಾಗೀರಥಿಯ ವಕ್ಷಸ್ಥಳದಲ್ಲಿ ಓಲಾಡುತ್ತ, ಬಹುದೂರದ ವರೆಗೆ ಹೋಗಿ, ಎಲ್ಲಿಯೋ ಸೇರಿಹೋಯಿತು. ಹೂಗಳ ವಾಸನೆಯನ್ನು ಬೀರುತ್ತ ವಸಂತಕಾಲದ ಗಾಳಿಯು ಮೆಲ್ಲಮೆಲ್ಲನೆ ಬೀಸುತ್ತಿದ್ದಿತು. ಆಗ ಚಂದ್ರೋದಯವಾಯಿತು. ನಾಲ್ಕು ಕಡೆಯಲ್ಲಿಯೂ ದೇವರಿಗೆ ಆರತಿಯಾಗುತ್ತಿದ್ದಿತು. ಮಾಸ್ಟರು ದ್ವಾದಶಶಿವಮಂದಿರಗಳಲ್ಲಿಯೂ, ಶ್ರೀ ಕಾಳಿಕಾದೇವಾಲಯದಲ್ಲಿಯೂ, ಶ್ರೀರಾಧಾಕಾಂತದೇವಸ್ಥಾನದಲ್ಲಿಯೂ, ಆರತಿಯಾಗುವುದನ್ನು ದರ್ಶನಮಾಡಿ ಬಹು ಸಂತೋಷಪಟ್ಟನು. ಸಿಧೂರನು ಅವನಿಗೆ 'ರಾಸಮಣಿಯು ಕಟ್ಟಿಸಿದ ದೇವಾಲಯವು ಇದೇ, ಇಲ್ಲಿ ನಿತ್ಯವೂ ಸೇವೆಯು ನಡೆಯುತ್ತಿದೆ. ಬಹುಜನ ಸಾಧುಗಳೂ ಬಡವರೂ ಇಲ್ಲಿಗೆ ಬಂದು, ದೇವರ ದರ್ಶನವನ್ನು ಮಾಡಿ, ಪ್ರಸಾದವನ್ನು ಸ್ವೀಕರಿಸುತ್ತಾರೆ' ಎಂದನು.

ಅವರಿಬ್ಬರೂ ಮಾತನಾಡುತ್ತ ಕಾಳೀದೇವಾಲಯದ ದೊಡ್ಡ ಪ್ರಾಕಾರದೊಳಗೆ ತಿರುಗುತ್ತಿದ್ದು, ಮತ್ತೆ ಭಗವಾನ್ ಶ್ರೀರಾಮಕೃಷ್ಣರ ಕೋಣೆಯ ಮುಂದೆ ಬಂದು ನಿಂದರು. ಆಗ ಮನೆಯ ಬಾಗಿಲು ಮುಚ್ಚಿದ್ದಿತು. ಮಾಸ್ಟರು ಇಂಗ್ಲಿಷ್ ಮರ್ಯಾದೆಯನ್ನು ಬಲ್ಲವನು. ಆದುದರಿಂದ ಏಕಾಏಕಿ ಒಳಗೆ ಹೋಗಲಿಲ್ಲ. ಆಗ ತಾವೇ ಒಳಗೆ

ಧೂಪವನ್ನು ಹಾಕಿದೆ. ಬಾಗಿಲಲ್ಲಿ ವೃಂದೆಯೆಂಬ ದಾಸಿಯು ನಿಂತಿದ್ದಳು. ಮಾಸ್ಟರು ಅವಳನ್ನು ಕುರಿತು, 'ಇಲ್ಲಿ ಸಾಧುಗಳೊಬ್ಬರು ಇದ್ದಾರೆಯೇನು?' ಎಂದು ಕೇಳಿದನು.

ವೃಂದೆ:—ಅಹುದು. ಈ ಮನೆಯಲ್ಲಿಯೇ ಇದ್ದಾರೆ.

ಮಾಸ್ಟರು:—ಎಷ್ಟು ದಿನಗಳಿಂದಿದ್ದಾರೆ?

ವೃಂದೆ:—ಬಹು ದಿವಸಗಳಿಂದಲೂ ಇದ್ದಾರೆ.

ಮಾಸ್ಟರು:—ಒಳ್ಳೆಯದಮ್ಮಾ, ಅವರೇನು, ಬಹುವಾಗಿ ಪುಸ್ತಕಗಿಸ್ತಕಗಳನ್ನು ಓದುತ್ತಾರೆಯೋ?

ವೃಂದೆ:—ಇದೇನು ಹೀಗೆ ಕೇಳುತ್ತಿದ್ದೀರಿಯಪ್ಪಾ? ಅವರಿಗೆ ಪುಸ್ತಕಗಿಸ್ತಕಗಳೇಕೆ? ಎಲ್ಲ ಅವರ ಬಾಯಲ್ಲಿಯೇ ಇದೆ.

ಮಾಸ್ಟರು ಆಗ ತಾನೇ ಪುಸ್ತಕವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ಬಿ. ಎ. ಪ್ಯಾಸುಮಾಡಿಕೊಂಡು ಬಂದಿದ್ದನು. ಆದುದರಿಂದ, ಭಗವಾನರು ಪುಸ್ತಕವೋದುವುದಿಲ್ಲವೆಂದು ಕೇಳಿ, ತುಂಬ ಆಶ್ಚರ್ಯಪಟ್ಟನು. ಆವನು ವೃಂದೆಯನ್ನು ನೋಡಿ, 'ಅಮ್ಮ, ಸಾಧುಗಳು ಈಗ ಒಳಗೆ ಸಂಧ್ಯಾವಂದನೆಯನ್ನು ಮಾಡುತ್ತಿದ್ದಾರೆಯೇನೋ? ನಾವು ಒಳಗೆ ಹೋಗಬಹುದೇ? ನೀನು ಅವರಿಗೆ ಹೇಳುತ್ತೀಯಾ?' ಎಂದು ಕೇಳಿದನು.

ವೃಂದೆ:—ನೀವು ಒಳಗೆ ಹೋಗಿರಪ್ಪ. ಒಳಗೆ ಹೋಗಿ ಕುಳಿತುಕೊಳ್ಳಿರಿ.

ಸಿಧೂರನೂ ಮಾಸ್ಟರೂ ಒಳಗೆ ಹೋಗಿ ನೋಡಿದರು. ಅಲ್ಲಿ ಭಗವಾನರು ಒಬ್ಬರೇ ಮಂಚದ ಮೇಲೆ ಕುಳಿತಿದ್ದರು. ಬೇರೆ ಆರೂ ಇರಲಿಲ್ಲ. ಕೊಟಡಿಯಲ್ಲಿ ಧೂಪಹಾಕಿದೆ. ಬಾಗಿಲುಗಳೆಲ್ಲ ಮುಚ್ಚಿವೆ. ಮಾಸ್ಟರು ಅಂಜಲಿಬದ್ಧನಾಗಿ ಭಗವಾನರಿಗೆ ನಮಸ್ಕಾರಮಾಡಿದನು. ಶ್ರೀರಾಮಕೃಷ್ಣರು 'ಕುಳಿತುಕೊಳ್ಳಿರಿ' ಎಂದು ಹೇಳಿದರು. ತರುವಾಯ ಅವನೂ ಸಿಧೂರನೂ ನೆಲದ ಮೇಲೆ ಕುಳಿತುಕೊಂಡರು. ಬಳಿಕ ಭಗವಾನರು ಅವರನ್ನು ನೋಡಿ 'ನೀವು ಎಲ್ಲಿಯವರು? ನಿಮ್ಮ ಉದ್ಯೋಗವಾವುದು? ಆವ ಕಾರ್ಯಕ್ಕಾಗಿ ವರಾಹನಗರಕ್ಕೆ ಬಂದಿದ್ದೀರಿ?' ಎಂದು ಕೇಳಿದರು.

ಭಗವಾನರು ಕೇಳಿದುದಕ್ಕೆಲ್ಲ ಮಾಸ್ಟರು ಸರಿಯಾಗಿ ಉತ್ತರವನ್ನು ಕೊಟ್ಟು, ಅವರು ಅಡಿಗಡಿಗೆ ಭಾವಾವಿಷ್ಟರಾಗುವುದನ್ನು ನೋಡಿದನು. ಕೆಲವರು ಬಲೆಯನ್ನು ಹರವಿ, ಮೀನ ಹಿಡಿಯುವುದಕ್ಕೆ ಕುಳಿತುಕೊಳ್ಳುತ್ತಾರೆ. ಮೀನು ಬಂದು ಎರೆಯನ್ನು ಕಚ್ಚಿದರೆ ಬೆಂಡು ಅಲುಗಾಡುತ್ತದೆ. ಅವರು ಆಗ ಬಲು ಎಚ್ಚರಿಕೆಯಿಂದ ಬೆಂಡನ್ನೇ ಏಕದೃಷ್ಟಿಯಿಂದ ನೋಡುತ್ತಾರೆ. ಈ ರೀತಿಯಾದ ಏಕಾಗ್ರತೆಯು ಭಗವಂತನ ವಿಷಯದಲ್ಲಿ ಇರುವುದಾದರೆ, ಅದೇ ಭಾವಾವಸ್ಥೆಯೆನ್ನಿಸಿಕೊಳ್ಳುತ್ತದೆ.

ಸಂಜೆಯಾದ ಬಳಿಕ ಭಗವಾನರು ಈ ರೀತಿಯಾಗಿ ಭಾವಾವಿಷ್ಟರಾಗುತ್ತಿದ್ದರು. ಒಂದೊಂದು ಬಾರಿ ಒಮ್ಮೆಯೇ ಅವರಿಗೆ ಬಾಹ್ಯಜ್ಞಾನವು ತಪ್ಪಿಹೋಗುತ್ತಿದ್ದಿತು. ಮಾಸ್ಟರು ಅದನ್ನು ಇತರರಿಂದ ಆ ಮೇಲೆ ಕೇಳಿ ತಿಳಿದುಕೊಂಡನು; ಮುಂದೆ ತಾನೂ ಸಾಕ್ಷಾತ್ತಾಗಿ ಹಲವು ಸಲ ನೋಡಿದನು.

ಮಾಸ್ಟರು :—ತಾವು ಈಗ ಸಂಧ್ಯಾವಂದನೆಯನ್ನು ಮಾಡುತ್ತಿದ್ದೀರಿ. ನಾವು ಹೋಗಿ ಬರುತ್ತೇವೆ

ಶ್ರೀರಾಮಕೃಷ್ಣ :—(ಭಾವಸ್ಥರಾಗಿ) ಇಲ್ಲ, ಸಂಧ್ಯಾಮುಂತಾದುದೇನೂ ಇಲ್ಲ.

ಬಳಿಕ ಮಾಸ್ಟರು ಭಗವಾನರ ಸಂಗಡ ಕೊಂಚ ಹೊತ್ತಿನ ವರೆಗೆ ಮಾತನಾಡುತ್ತಿದ್ದು, ಅವರಿಗೆ ಪ್ರಣಾಮವನ್ನು ಮಾಡಿ, 'ಹೋಗಿ ಬರುತ್ತೇವೆ,' ಎಂದು ಹೇಳಿದನು.

ಶ್ರೀರಾಮಕೃಷ್ಣ :—ಇನ್ನೊಂದು ಸಲ ಬನ್ನಿರಿ.

ಮಾಸ್ಟರು ಹಿಂತಿರುಗಿ ಹೋಗುವಾಗ, 'ಇವರು ಎಷ್ಟು ಸೌಮ್ಯರು! ಇವರ ಬಳಿಗೆ ಇನ್ನೊಂದಾವೃತ್ತಿ ಬರಬೇಕೆಂಬ ಇಚ್ಛೆಯುಂಟಾಗುತ್ತಿದೆ. ಪುಸ್ತಕವನ್ನು ಓದದಿದ್ದರೆ ಆರು ತಾನೇ ದೊಡ್ಡವರಾದಾರು? ಇದೇನು ಆಶ್ಚರ್ಯ! ಇಲ್ಲಿಗೆ ಇನ್ನೊಂದು ಸಲ ಬರಬೇಕೆನ್ನಿಸುತ್ತಲಿದೆಯಲ್ಲ. ಇನ್ನೊಂದು ಸಲ ಬಾರೆಂದು ಇವರೂ ಹೇಳಿದ್ದಾರೆ. ಆಗಲಿ, ನಾಳೆಯೋ ನಾಡಿದ್ದೋ ಬೆಳಿಗ್ಗೆ ಬರುತ್ತೇನೆ,' ಎಂದು ಆಲೋಚಿಸಿಕೊಂಡನು.

ಎರಡನೆಯ ಪರಿಚ್ಛೇದ

ದ್ವಿತೀಯದರ್ಶನ. ಗುರುಶಿಷ್ಯಸಂವಾದ

ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ॥

[ಅಖಂಡಮಂಡಲಾಕಾರವಾದ, ಚರಾಚರಾತ್ಮಕವಾದ, ಈ ಪ್ರಪಂಚವು ಭಗವಂತನಿಂದ ಪೂರ್ಣವಾಗಿದೆ. ಅಂತಹ ಭಗವಂತನ ಚರಣಗಳನ್ನು ತೋರಿಕೊಡುವ ಶ್ರೀಗುರುವಿಗೆ ನಮಸ್ಕಾರವು.]

ಬೆಳಿಗ್ಗೆ ಅಷ್ಟು ಹೊತ್ತಿಗೇ ಮಾಸ್ಟರಿಗೆ ಭಗವಾನರ ದ್ವಿತೀಯದರ್ಶನವಾಯಿತು. ಆಗ ಎಂಟು ಗಂಟೆಯ ಹೊತ್ತು. ಭಗವಾನರು ಆಗ ತಾನೇ ಕ್ಷೌರಮಾಡಿಸಿಕೊಳ್ಳುವ

ದಕ್ಕೆ ಹೋಗಿದ್ದರು. ಚಳಿ ಹೆಚ್ಚಾಗಿದ್ದಿತು. ಆದಕಾರಣ ಅವರು ಮೋಲ್ ಎಂಬ ಚಿಟ್ಟೆಲಿಯ ಜಾತಿಯ ಒಂದು ಪ್ರಾಣಿಯ ತೊಗಲನ್ನು ಹೊದ್ದಿದ್ದರು. ಅದರ ಅಂಚಿಗೆ ಶಾಲನ್ನು ಹಾಕಿ ಹೊಲಿದಿದ್ದಿತು. ಅವರು ಮಾಸ್ಟರನ್ನು ನೋಡಿ, 'ಬಂದೆಯಾ, ಇಲ್ಲಿಯೇ ಕುಳಿತುಕೋ', ಎಂದು ಹೇಳಿದರು.

ಅವರು ಆಗ್ನೇಯದ ವಾರಂಡದಲ್ಲಿ ಮಾಸ್ಟರ ಸಂಗಡ ಮಾತನಾಡುತ್ತಿದ್ದರು. ಕ್ಷೌರಕನು ಬಂದನು. ಭಗವಾನರು ಅಲ್ಲಿಯೇ ಕುಳಿತುಕೊಂಡು ಕ್ಷೌರಮಾಡಿಸಿಕೊಳ್ಳುತ್ತ, ಆಗಾಗ ಮಾಸ್ಟರೊಡನೆ ಮಾತನಾಡುತ್ತಿದ್ದರು. ಅವರ ಮೈಯ್ಯ ಮೇಲೆ ತೊಗಲಿನ ಹೊದ್ದಿಕೆ, ಕಾಲಿನಲ್ಲಿ ಜೋಡು, ಮೊಗದಲ್ಲಿ ನಗೆ, ಮಾತನಾಡುವಾಗ ಕೊಂಚ ಉಗ್ಗು.

ಶ್ರೀರಾಮಕೃಷ್ಣ :—(ಮಾಸ್ಟರೊಡನೆ) ಅಯ್ಯಾ, ನಿನ್ನ ಮನೆಯೆಲ್ಲಿ?

ಮಾಸ್ಟರು: —ಸ್ವಾಮೀ, ಕಲಿಕತೆಯಲ್ಲಿ.

ಶ್ರೀರಾಮಕೃಷ್ಣ :—ಇಲ್ಲಿ ಆರ ಮನೆಗೆ ಬಂದಿದ್ದೀಯೆ?

ಮಾಸ್ಟರು :—ನನ್ನ ದೊಡ್ಡ ಅಕ್ಕನ ಮನೆಗೆ ಬಂದಿದ್ದೇನೆ. ಈಶಾನಕವಿರಾಜನ ಮನೆಗೆ.

ಶ್ರೀರಾಮಕೃಷ್ಣ :—ಓಹೋ, ಈಶಾನನ ಮನೆಗೇ?

(ಕೇಶವಚಂದ್ರಸೇನನಿಗಾಗಿ ಭಗವಾನರು ಕಾಳಿಯ ಬಳಿಯಲ್ಲಿ ಮೊರೆಯಿಡುವುದು)

ಶ್ರೀರಾಮಕೃಷ್ಣ :—ಅಯ್ಯಾ, ಕೇಶವನು ಈಗ ಹೇಗಿದ್ದಾನೆ? ಅವನು ತುಂಬ ಅಸ್ವಸ್ಥನಾಗಿದ್ದನು.

ಮಾಸ್ಟರು :—ಅಹುದು, ನಾನೂ ಹಾಗೆಯೇ ಕೇಳಿದ್ದೆನು. ಈಗ ಅವನಿಗೆ ಗುಣವಾಗಿರಬಹುದು.

ಶ್ರೀರಾಮಕೃಷ್ಣ :—ಕೇಶವನಿಗೆ ಗುಣವಾದರೆ, ಎಳನೀರನ್ನೂ ಸಕ್ಕರೆಯನ್ನೂ ಅರ್ಪಿಸುತ್ತೇನೆಂದು ಮಹಾಮಾತೆಗೆ ಹರಸಿಕೊಂಡಿದ್ದೆನು. ಬೆಳಗಿನ ಜಾವದಲ್ಲಿ ನನಗೆ ಎಚ್ಚರವಾಗುತ್ತಿದ್ದಿತು. ಆಗ ನಾನು 'ತಾಯೇ, ಕೇಶವನ ರೋಗವನ್ನು ಪರಿಹರಿಸಿ ಅವನಿಗೆ ಗುಣಮಾಡು; ಅವನಿಲ್ಲದೆ ಹೋದರೆ ನಾನು ಕಲಿಕತೆಗೆ ಹೋದಾಗ ಆರೊಡನೆ ಮಾತನಾಡಲಿ, ಅವನಿಗೆ ಮೇಲಾದರೆ, ಎಳನೀರನ್ನೂ ಸಕ್ಕರೆಯನ್ನೂ ಒಪ್ಪಿಸುತ್ತೇನೆ', ಎಂದು ಮಹಾಮಾತೆಯ ಹತ್ತಿರ ಮೊರೆಯಿಡುತ್ತಿದ್ದೆನು. ಅಯ್ಯ, ಕುಕ್ ಸಾಹೇಬನೆಂಬ ಒಬ್ಬನು ಬಂದಿದ್ದಾನೆಯಲ್ಲವೇ? ಅವನು ಲೆಕ್ಚರನ್ನು ಕೊಟ್ಟನೋ? ನನ್ನನ್ನು ಕೇಶವನು ಜಹಜಿನಲ್ಲಿ ಕರೆದುಕೊಂಡು ಹೋಗುತ್ತಿದ್ದನು. ಅಲ್ಲಿ ಕುಕ್ ಸಾಹೇಬನೂ ಇದ್ದನು.

ಮಾಸ್ಟರು:—ಸ್ವಾಮೀ, ನಾನೂ ಹೀಗೆಯೇ ಕೇಳಿದ್ದೆನು. ಕ[illegible]ಕ್ ಸಾಹೇಬನ ಲೆಕ್ಚರನ್ನು ಕೇಳಲಿಲ್ಲ. ನನಗೆ ಅವನ ಸಂಗತಿಯಾವುದೂ [illegible]ತ್ತಿಲ್ಲ.

(ಗೃಹಸ್ಥನ ಮತ್ತು ತಂದೆಯ ಕರ್ತವ್ಯ)

ಶ್ರೀರಾಮಕೃಷ್ಣ :—ಪ್ರತಾಪನ ಅಣ್ಣನು ಬಂದು ಕೆಲವು ದಿನಗಳ ವರೆಗೆ ಇಲ್ಲಿಯೇ ಇದ್ದನು. ಅವನಿಗೆ ಆವ ಉದ್ಯೋಗವೂ ಇಲ್ಲ, ಇಲ್ಲಿಯೇ ಇರುತ್ತೇನೆಂದು ಹೇಳಿದನು. ಅವನು ಹೆಂಡತಿಯನ್ನೂ, ಮಕ್ಕಳನ್ನೂ, ಮಾವನ ಮನೆಯಲ್ಲಿ ಬಿಟ್ಟಿದ್ದಾನೆಂದು ಕೇಳಿದೆನು. ಅವನಿಗೆ ತುಂಬ ಮಕ್ಕಳು. ನಾನು ಅವನನ್ನು ನೋಡಿ, 'ನಿನಗೆ ಮನೆತುಂಬ ಮಕ್ಕಳಿದ್ದಾರೆ. ಅವರನ್ನು ಇನ್ನಾರಾದರೂ ಸಲಹುತ್ತಾರೆಯೇ? ಹೆಂಡಿರು ಮಕ್ಕಳನ್ನು ಬೇರೊಬ್ಬರು ಸಲಹುವುದೂ, ಅವರನ್ನು ಮಾವನ ಮನೆಯಲ್ಲಿ ಬಿಟ್ಟಿರುವುದೂ, ಅವಮಾನವಲ್ಲವೇ?' ಎಂದು ಬಹುವಾಗಿ ಬಯ್ದು, 'ಆವುದಾದರೂ ಉದ್ಯೋಗಕ್ಕೆ ಸೇರಿಕೋ' ಎಂದು ಹೇಳಿದೆನು. ಬಳಿಕ ಅವನು ಇಲ್ಲಿಂದ ಹೊರಟು ಹೋದನು.

ಮೂರನೆಯ ಪರಿಚ್ಛೇದ

ಮಾಸ್ಟರ ಅಹಂಕಾರ ಖಂಡನ

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ॥

[ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದವನ ಕಣ್ಣನ್ನು ಜ್ಞಾನವೆಂಬ ಅಂಜನದಿಂದೊಡಗೂಡಿದ ಸಲಾಕೆಯಿಂದ ಬಿಡಿಸಿದ ಶ್ರೀಗುರುವಿಗೆ ನಮಸ್ಕಾರ.]

ಶ್ರೀರಾಮಕೃಷ್ಣ :—(ಮಾಸ್ಟರನ್ನು ಕುರಿತು) ನಿನಗೆ ಮದುವೆಯಾಗಿದೆಯೇ?

ಮಾಸ್ಟರು :—ಸ್ವಾಮೀ, ಆಗಿದೆ.

ಶ್ರೀರಾಮಕೃಷ್ಣ :—(ಆಶ್ಚರ್ಯದಿಂದ ಬೆಚ್ಚಿದವರಾಗಿ) ಅಬ್ಬಬ್ಬ! ರಾಮಲಾಲ, ಇವನಿಗೆ ಮದುವೆಯಾಗಿದೆಯಂತೆ!

ರಾಮಲಾಲನು ಭಗವಾನರ ಅಣ್ಣನ ಮಗ; ಕಾಳೀದೇವಾಲಯದ ಪೂಜಾರಿ.

ಮಾಸ್ಟರು ಭಗವಾನರ ಮಾತನ್ನು ಕೇಳಿ ಆಶ್ಚರ್ಯದಿಂದ, ಅಪರಾಧಿಯಂತೆ ತಲೆಬಾಗಿಸಿಕೊಂಡು, 'ಮದುವೆಮಾಡಿಕೊಂಡರೆ ತಪ್ಪೇ? ಎಂದು ಭಾವಿಸಿಕೊಂಡನು.

'ನಿನಗೆ ಮಕ್ಕಳುಂಟೋ' ಎಂದು ಭಗವಾನರು ಮಾಸ್ಟರನ್ನು ಮತ್ತೆ ಕೇಳಿದರು. ಮಾಸ್ಟರ ಎದೆಯು 'ಡಬ, ಡಬ' ಎಂದು ಹೊಡೆದುಕೊಳ್ಳುತ್ತಿದ್ದಿತು. ಅವನು ದಿಗಿಲುಪಟ್ಟುಕೊಂಡು, 'ಸ್ವಾಮೀ, ನನಗೆ ಮಕ್ಕಳಿವೆ', ಎಂದು ಹೇಳಿದನು.

ಆ ಮಾತನ್ನು ಕೇಳಿ ಭಗವಾನರು ವ್ಯಸನಪಟ್ಟವರಾಗಿ, 'ಅಯ್ಯೋ, ಇವನಿಗೆ ಮಕ್ಕಳೂ ಇವೆಯಂತೆ!' ಎಂದರು. ಮಾಸ್ಟರು ಈ ರೀತಿ ತಿರಸ್ಕೃತನಾದುದರಿಂದ ಬೆಪ್ಪಾದನು. ಅವನ ಅಹಂಕಾರವು ಮುರಿಯತೊಡಗಿತು. ಕೊಂಚ ಹೊತ್ತಿನ ಮೇಲೆ ಭಗವಾನ್ ಶ್ರೀರಾಮಕೃಷ್ಣರು ಅವನನ್ನು ಕೃಪಾದೃಷ್ಟಿಯಿಂದ ನೋಡಿದವರಾಗಿ ಪ್ರೀತಿಯಿಂದ ಅವನೊಡನೆ ಮಾತನಾಡುತ್ತ, 'ಅಯ್ಯ, ನಿನ್ನಲ್ಲಿ ಒಳ್ಳೆಯ ಲಕ್ಷಣಗಳಿವೆ, ಅವು ನಿನ್ನ ಮುಖದಿಂದಲೂ ಕಣ್ಣುಗಳಿಂದಲೂ ಗೊತ್ತಾಗುತ್ತವೆ. ಒಳ್ಳೆಯದು. ನಿನ್ನ ಹೆಂಡತಿಯ ಸ್ವಭಾವವು ಎಂಥದು? ವಿದ್ಯಾಶಕ್ತಿಯೋ, ಅವಿದ್ಯಾಶಕ್ತಿಯೋ?' ಎಂದರು.

(ವಿದ್ಯೆ ಎಂದರೆ ಏನು ? ಪ್ರತಿಮಾಪೂಜೆ)

ಮಾಸ್ಟರು :—ಸ್ವಾಮೀ, ಅವಳೇನೋ ಒಳ್ಳೆಯವಳು; ಆದರೆ ವಿದ್ಯಾವತಿಯಲ್ಲ.

ಶ್ರೀರಾಮಕೃಷ್ಣ :—(ಕೋಪಗೊಂಡು) ನೀನೇನು ತುಂಬ ವಿದ್ಯಾವಂತನೊ?

ಭಗವಾನರು ಆವುದನ್ನು ವಿದ್ಯೆಯೆನ್ನುತ್ತಾರೆ, ಮತ್ತಾವುದನ್ನು ಅವಿದ್ಯೆಯೆನ್ನುತ್ತಾರೆ, ಎಂಬ ವಿಷಯವನ್ನು ಮಾಸ್ಟರು ಅರಿಯನು. ಓದು ಬರೆಹ ಬಂದವರೀಗ ವಿದ್ಯಾವಂತರೆಂಬದಾಗಿ ಅವನು ಇದುವರೆಗೂ ತಿಳಿದುಕೊಂಡಿದ್ದನು. ಈಗೀಗ ಅವನ ಈ ಭ್ರಮೆಯು ಹೋಗುತ್ತ ಬಂದಿತು. 'ಭಗವಂತನನ್ನು ತಿಳಿಯುವ ವಿದ್ಯೆಯೇ ವಿದ್ಯೆ; ಮಿಕ್ಕುವೆಲ್ಲವೂ ಅವಿದ್ಯೆ,' ಎಂದು ಅವನು ಈಚೆಗೆ ತಿಳಿದುಕೊಂಡನು. ನೀನು ವಿದ್ಯಾವಂತನೋ?' ಎಂದು ಭಗವಾನರು ಅವನನ್ನು ಕೇಳಿದಾಗ, ಅವನ ಅಹಂಕಾರಕ್ಕೆ ತುಂಬ ಗಾಸಿಯಾಯಿತು.

ಶ್ರೀರಾಮಕೃಷ್ಣ :—ನಿನಗೆ ಸಾಕಾರದಲ್ಲಿ ವಿಶ್ವಾಸವೋ? ನಿರಾಕಾರದಲ್ಲಿ ವಿಶ್ವಾಸವೋ ?

ಮಾಸ್ಟರು ಆಶ್ಚರ್ಯಪಟ್ಟವನಾಗಿ, 'ಸಾಕಾರದಲ್ಲಿ ವಿಶ್ವಾಸವಿದ್ದರೆ, ನಿರಾಕಾರದಲ್ಲಿ ವಿಶ್ವಾಸವುಂಟಾದೀತೇ? ಭಗವಂತನು ನಿರಾಕಾರನೆಂಬ ಭಾವನೆಯಿದ್ದರೆ, ಸಾಕಾರನೆಂದು ಅವನನ್ನು ಹೇಗೆ ನಂಬಲಾದೀತು? ಪರಸ್ಪರವಿರುದ್ಧವಾದ ಈ ಎರಡು ಅವಸ್ಥೆಗಳೂ ಸತ್ಯವಾದೀತೇ? ಸ್ವಭಾವವಾಗಿ ಬಿಳುಪಾಗಿರುವ ಹಾಲು ಕಪ್ಪಾಗಿಯೂ ಇರುವುದುಂಟೇ? ' ಎಂದು ಭಾವಿಸಿದವನಾಗಿ, ಭಗವಾನರನ್ನು ಕುರಿತು, 'ಸ್ವಾಮೀ, ನನಗೆ ನಿರಾಕಾರದಲ್ಲಿ ವಿಶ್ವಾಸ; ನಿರಾಕಾರಭಾವವೇ ಒಳ್ಳೆಯದೆಂದು ತೋರುತ್ತದೆ', ಎಂದು ಹೇಳಿದನು.

ಶ್ರೀರಾಮಕೃಷ್ಣ :—ಹಾಗೆಯೋ? ಸರಿ, ಸರಿ, ಅವುದಾದರೂ ಒಂದರಲ್ಲಿ ವಿಶ್ವಾಸವಿದ್ದರೆ ಸಾಕು. ನಿನಗೆ ನಿರಾಕಾರದಲ್ಲಿ ವಿಶ್ವಾಸವಿದೆಯೋ? ಅದೂ ಒಳ್ಳೆಯದೇ. ಆದರೆ, 'ಇದೇ ಸತ್ಯ, ಮಿಕ್ಕುವೆಲ್ಲವೂ ಅಸತ್ಯ', ಎಂಬದಾಗಿ ಮಾತ್ರ ತಿಳಿಯಬೇಡ. ಸಾಕಾರವೂ ಸತ್ಯ, ನಿರಾಕಾರವೂ ಸತ್ಯವೆಂಬುದಾಗಿ ತಿಳಿ; ಪರಂತು ನಿನಗೆ ಆವುದರಲ್ಲಿ ವಿಶ್ವಾಸವಿದೆಯೋ ಅದನ್ನೇ ಚೆನ್ನಾಗಿ ಹಿಡಿದುಕೋ.

ಸಾಕಾರ ನಿರಾಕಾರಗಳೆರಡೂ ಸತ್ಯವೆಂಬ ಮಾತನ್ನು, ಮಾಸ್ಟರು ಬಾರಿಬಾರಿಗೂ ಕೇಳಿ ಆಶ್ಚರ್ಯಪಟ್ಟುಕೊಂಡನು. ಅವನು ಓದಿದ ಪುಸ್ತಕಗಳಲ್ಲಿ ಎಲ್ಲಿಯೂ ಈ ರೀತಿ ಹೇಳಿರಲಿಲ್ಲ. ಇದರಿಂದ ಅವನ ಅಹಂಕಾರವು ಮೂರನೆಯ ಸಲ ಚೂರ್ಣವಾಗಿ ಹೋಯಿತು. ಆದರೂ ಸಂಪೂರ್ಣವಾಗಿ ಹೋಗಲಿಲ್ಲ. ಅದಕಾರಣ ಅವನು ಇನ್ನೂ ತರ್ಕಮಾಡತೊಡಗಿ, 'ಭಗವಂತನು ಸಾಕಾರನೆಂಬ ವಿಶ್ವಾಸವು ಇದ್ದರೂ ಇರಲಿ; ಆದರೆ ಅವನು ಮಣ್ಣಿನ ಗೊಂಬೆಯಲ್ಲವಲ್ಲಾ!' ಎಂದು ಕೇಳಿದನು.

ಶ್ರೀರಾಮಕೃಷ್ಣ :—ಮಣ್ಣಿನ ಗೊಂಬೆಯೇಕೆ? ಚಿನ್ಮಯಮೂರ್ತಿ.

ಮಾಸ್ಟರಿಗೆ ಆ ಮಾತು ಅರ್ಥವಾಗಲಿಲ್ಲ.

ಆಗ ಅವನು "ಸ್ವಾಮೀ, ಮಣ್ಣಿನ ಗೊಂಬೆಯನ್ನು ಪೂಜಿಸುವವರಿಗೆ, 'ಇದು ದೇವರಲ್ಲ, ಬರಿಯ ಮಣ್ಣಿನ ಗೊಂಬೆ. ಮಣ್ಣಿಗೆ ಪೂಜೆಮಾಡುವುದು ಸರಿಯಲ್ಲ; ಪ್ರತಿಮೆಯ ಮುಂದೆ ಕುಳಿತು, ದೇವರನ್ನು ಉದ್ದೇಶಮಾಡಿಕೊಂಡೇ ಪೂಜಿಸಬೇಕು' ಎಂಬದಾಗಿ ಹೇಳುವುದು ಒಳ್ಳೆಯದಲ್ಲವೇ?" ಎಂದು ಕೇಳಿದನು.

(ಲೆಕ್ಚರೂ ಭಗವಾನ್ ಶ್ರೀರಾಮಕೃಷ್ಣರೂ)

ಶ್ರೀರಾಮಕೃಷ್ಣ :—(ಕೋಪದಿಂದ) ನಿಮ್ಮ ಕಲಿಕತೆಯ ಜನರಿಗೆ ಬರಿಯ ಲೆಕ್ಚರ ಹೇಳುವುದು, ತಿಳಿಸುವುದು ಇಷ್ಟೇ. ನಿಮಗೇ ಅವುದೂ ಗೊತ್ತಿಲ್ಲ. ಇನ್ನೊಬ್ಬರಿಗೆ ಏನ ಹೇಳಿಕೊಡುತ್ತೀರಿ? ಅವನು ಈ ಪ್ರಪಂಚವನ್ನು ನಿರ್ಮಿಸಿ ಚಂದ್ರ, ಸೂರ್ಯ, ಋತು, ಮನುಷ್ಯ, ಜೀವಜಂತು ಇವುಗಳನ್ನು ಸೃಷ್ಟಿಸಿದ್ದಾನೆಯೋ, ಅವನು ಜೀವಿಗಳ ಆಹಾರಕ್ಕೆ ಉಪಾಯವನ್ನು ಕಲ್ಪಿಸಿಕೊಟ್ಟಿದ್ದಾನೆಯೋ, ಜೀವಿಗಾಗಿ ಮಳೆಯನ್ನು ಸುರಿಸಿ, ಮಕ್ಕಳ ಪೋಷಣೆಗಾಗಿ ತಂದೆತಾಯಿಗಳಲ್ಲಿ ಪ್ರೀತಿಯನ್ನು ಇಟ್ಟಿದ್ದಾನೆಯೋ, ಆಭಗವಂತನೇ ತಿಳಿಸುತ್ತಾನೆ. ಇಷ್ಟೊಂದು ಉಪಾಯಗಳನ್ನು ಕಲ್ಪಿಸಿದವನು ಇನ್ನೂ ಆವಶ್ಯಕವಾದ ಉಪಾಯಗಳನ್ನು ಕಲ್ಪಿಸಲರಿಯನೇ? ನಮಗೆ ವಿಷಯವನ್ನು ತಿಳುಹುವುದು ಆವಶ್ಯಕವೆಂದು ಅವನ ಚಿತ್ತಕ್ಕೆ ಬಂದರೆ, ಆಗ ಅವನೇ ಪ್ರಕಾರಾಂತರದಿಂದ ತಿಳಿಸಿಕೊಡುತ್ತಾನೆ. ಅವನು ಅಂತ

ಯ[illegible]ಮಿಯಲ್ಲವೇ? ಮಣ್ಣಿನ ಗೊಂಬೆಯನ್ನು ಪೂಜಿಸುವುದು ಸರಿಯಲ್ಲ ವೆ[illegible] ಹೇಳುವುದಾದರೆ, ಆ ಮೂಲಕವಾಗಿ ತನ್ನನ್ನೇ ಪೂಜಿಸುತ್ತಾರೆಂಬು ದನ್ನು ಭಗವಂತನು ಅರಿಯನೇ? ಈ ಪ್ರತಿಮಾಪೂಜೆಯಿಂದಲೇ ಅವನ ಸಂತುಷ್ಟನಾಗುತ್ತಾನೆ. ಇದಕ್ಕಾಗಿ ನಿನಗೇತಕ್ಕೆ ತಲೆ ಶೂಲೆ? ನಿನಗ ಏತರಿಂದ ಜ್ಞಾನವೂ ಭಕ್ತಿಯೂ ಉಂಟಾಗುತ್ತದೆಯೋ, ಅದಕ್ಕಾಗಿ ನೀನು ಪ್ರಯತ್ನಪಡು.

ಭಗವಾನರು ಹೇಳಿದ ಈ ಮಾತಿನಿಂದ ಮಾಸ್ಟರ ಅಹಂಕಾರವು ಒಂದೇ ಸಲಕ್ಕೆ ಪುಡಿಯೆದ್ದು ಹೋಯಿತು. 'ಇವರು ಹೇಳುವುದು ಸರಿ; ಇತರರಿಗೆ ನಾನೇಕೆ ಉಪ ದೇಶಮಾಡಲಿ; ನಾನೇನು ಈಶ್ವರನನ್ನು ಬಲ್ಲೆನೇ? ಅಥವಾ ನನಗೆ ಭಗವಂತನಲ್ಲಿ ಭಕ್ತಿ ಯಾದರೂ ಇದೆಯೇ? 'ತನಗಿಲ್ಲದ ದೇವರು ತಮ್ಮಡಿಗೆ ವರ ಕೊಟ್ಟ' ಎಂಬಾತೆ ನನ್ನ ಬಾಳು ಆಗಿದೆ. ನನಗೇ ಆವುದೂ ತಿಳಿಯದು, ನಾನು ಆವುದನ್ನೂ ಕೇಳಿ ತಿಳಿದ ವನೂ ಅಲ್ಲ; ಹೀಗಿರುವಾಗ ಇನ್ನೊಬ್ಬರಿಗೆ ಉಪದೇಶಮಾಡುವುದು ಎಂತಹ ನಗೆ ಗೀಡಾದ ಮಾತು? ಬುದ್ಧಿಯಿಲ್ಲದವನೀಗ ಹೀಗೆ ಮಾಡುತ್ತಾನೆ. ಇನ್ನೊಬ್ಬರಿಗೆ ಹೇಳಿಕೊಡಬೇಕೆಂದರೆ ಇದೇನು, ನಾನು ಓದಿದ ಗಣಿತಶಾಸ್ತ್ರವೇ? ಸಾಹಿತ್ಯವೇ? ಅಲ್ಲ, ಇತಿಹಾಸವೇ? ಇದು ಈಶ್ವರತತ್ತ್ವ. ಇವರು ಅಪ್ಪಣೆ ಕೊಡಿಸುವುದೇ ಸಮಂ ಜಸವಾಗಿ ತೋರುತ್ತಿದೆ.' ಎಂದು ಮಾಸ್ಟರು ಭಾವಿಸಿಕೊಂಡನು.

ಭಗವಾನರ ಸಂಗಡ ಅವನ ತರ್ಕವು ಒಮ್ಮೆಯೇ ಪ್ರಾರಂಭವಾಗಿ, ಒಮ್ಮೆಯೇ ಕೊನೆಗಂಡಿತು.

ಶ್ರೀರಾಮಕೃಷ್ಣ—:(ಮಾಸ್ಟರನ್ನು ಕುರಿತು) ನೀನು ಮಣ್ಣಿನ ಪ್ರತಿಮೆಯನ್ನು ಪೂಜಿಸುವುದೆಂದೆಯಲ್ಲವೇ? ಅದರಿಂದಲೂ ಪ್ರಯೋಜನವಿಲ್ಲದೆ ಇಲ್ಲ. ಭಗವಂತನೇ ಹಲವು ಬಗೆಯಾದ ಪೂಜಾವಿಧಾನಗಳನ್ನು ಏರ್ಪಡಿಸಿದ್ದಾನೆ. ಸಕಲಜಗನ್ನಿಯಾಮಕನಾದ ಅವನೇ, ಜನರ ಯೋಗ್ಯತೆಗೆ ತಕ್ಕಂತೆ, ಹಲವು ಬಗೆಯಾದ ಪೂಜೆಗಳನ್ನು ನಿಯಮಿಸಿದ್ದಾನೆ. ತಾಯಿಯು ಮಕ್ಕಳ ರುಚಿಗೂ ಜೀರ್ಣಶಕ್ತಿಗೂ ತಕ್ಕಂತೆ ಅಡುಗೆಯನ್ನು ಮಾಡುತ್ತಾಳೆ. ಒಬ್ಬಾಕೆಗೆ ಐದು ಮಕ್ಕಳು. ಮನೆಗೆ ಅಡುಗೆಗೋಸ್ಕರ ಮೀನುಗಳನ್ನು ತಂದಿದ್ದಾರೆ. ಕೆಲವರಿಗೆ ಅದರಿಂದ ಸಾರನ್ನೂ, ಕೆಲವರಿಗೆ ಪಲ್ಲೆಯವನ್ನೂ, ಕೆಲವರಿಗೆ ಅನ್ನವನ್ನೂ, ಮತ್ತೆ ಕೆಲವರಿಗೆ ಜೋಂಡವನ್ನೂ ಮಕ್ಕಳ ಜೀರ್ಣಶಕ್ತಿಗೂ, ರುಚಿಗೂ ತಕ್ಕಂತೆ, ಅವಳು ಮಾಡಿ ಬಡಿಸುತ್ತಾಳೆ. ತಿಳಿ ಯಿತೋ?

ಮಾಸ್ಟರು :—ಸ್ವಾಮೀ, ತಿಳಿಯಿತು.

ನಾಲ್ಕನೆಯ ಪರಿಚ್ಛೇದ

ಭಕ್ತಿಯ ಉಪಾಯ

ಸಂಸಾರಸಾಗರೇ ಘೋರೇ ಕರ್ಣಧಾರಸ್ವರೂಪಕಃ ।
ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥

[ಸಾಗರದಿಂದ ದಾಟಿಸುವ ನಾವಿಕನಂತೆ, ಘೋರವಾದ ಸಂಸಾರದಿಂದ ಉದ್ಧರಿಸುವ ಪರಮಗುರುವಾದ ಶ್ರೀರಾಮಕೃಷ್ಣರಿಗೆ ನಮಸ್ಕಾರವು.]

ಮಾಸ್ಟರು :—(ವಿನಯದಿಂದ) ಭಗವಂತನಲ್ಲಿ ಮನಸ್ಸುಂಟಾಗಬೇಕಾದರೆ ಏನ ಮಾಡಬೇಕು.

ಶ್ರೀರಾಮಕೃಷ್ಣ :—ಸದಾ ಅವನ ನಾಮೋಚ್ಚಾರಣೆ, ಭಜನೆ, ಗುಣಕಥನಗಳನ್ನು ಮಾಡುತ್ತಿರಬೇಕು, ಎಂದರೆ ಭಕ್ತರ ಮತ್ತು ಸಾಧುಗಳ ಬಳಿಗೆ ಅಡಿಗಡಿಗೆ ಹೋಗುತ್ತಿರಬೇಕು; ಹಗಲೂ ಇರುಳೂ ಸಂಸಾರಕಾರ್ಯದಲ್ಲಿಯೂ, ವಿಷಯಚಿಂತೆಯಲ್ಲಿಯೂ ಮನಸ್ಸು ಇರುತ್ತಿದ್ದರೆ, ಅದು ಭಗವಂತನ ಕಡೆಗೆ ಹೇಗೆ ತಾನೇ ಹೋಗಲಾದೀತು? ಆಗಾಗ ನಿರ್ಜನವಾದೆಡೆಗೆ ಹೋಗಿ, ಭಗವಂತನನ್ನು ಧ್ಯಾನಿಸುವುದು ಆವಶ್ಯಕ. ಮೊತ್ತಮೊದಲು ನಿರ್ಜನಪ್ರದೇಶಕ್ಕೆ ಹೋಗಿ ಸಾಧನೆಮಾಡದಿದ್ದರೆ, ದೇವರಲ್ಲಿ ಮನಸ್ಸನ್ನು ನಿಲ್ಲಿಸುವುದು ಬಹುಕಷ್ಟ. ಗಿಡುವು ಎಳಸಾಗಿರುವಾಗ, ಅದರ ಸುತ್ತಲೂ ಬೇಲಿಯನ್ನು ಹಾಕಬೇಕು. ಇಲ್ಲದಿದ್ದರೆ ಹಸುಗಳೂ ಆಡುಗಳೂ ಅದನ್ನು ಕಿತ್ತು ತಿಂದುಹಾಕಿಬಿಡುತ್ತವೆ.

'ವನದಲ್ಲಿಯೂ, ಮನದಲ್ಲಿಯೂ, ಮನೆಯ ಮೂಲೆಯಲ್ಲಿಯೂ, ಭಗವಂತನನ್ನು ಧ್ಯಾನಮಾಡುತ್ತಿರಬೇಕು.' ಸದಾ ಸದಸದ್ವಿಚಾರವನ್ನು ಮಾಡಬೇಕು. ಈಶ್ವರನೇ ಸತ್, ಎಂದರೆ ನಿತ್ಯವಸ್ತು; ಮಿಕ್ಕುವೆಲ್ಲವೂ ಅಸತ್, ಎಂದರೆ ಅನಿತ್ಯವಾದುವು, ಎಂಬುದಾಗಿ ವಿಚಾರಮಾಡುತ್ತ, ಅನಿತ್ಯವಾದುವನ್ನು ಮನದಿಂದ ತ್ಯಾಗಮಾಡಬೇಕು.

ಮಾಸ್ಟರು :—(ವಿನೀತನಾಗಿ) ಸಂಸಾರದಲ್ಲಿ ಹೇಗೆ ಇರಬೇಕು?

(ಗೃಹಸ್ಥಸನ್ಯಾಸ ಮತ್ತು ನಿರ್ಜನ ಸಾಧನ)

ಶ್ರೀರಾಮಕೃಷ್ಣ :—ಎಲ್ಲ ಕೆಲಸಗಳನ್ನೂ ಮಾಡು; ಆದರೆ ಮನಸ್ಸನ್ನು ಮಾತ್ರ ಭಗವಂತನಲ್ಲಿ ಇಟ್ಟಿರು. ತಂದೆ, ತಾಯಿ, ಹೆಂಡಿರು, ಮಕ್ಕಳಿವರನ್ನೂ ನಿನಗೆ ತುಂಬ ಬೇಕಾದವರೆಂಬ ಭಾವನೆಯಿಂದ ಸೇವೆಮಾಡು;

ಆದ[illegible]ನಗೂ ಅವರಿಗೂ ಆವ ತೆರದ ಸಂಬಂಧವೂ ಇಲ್ಲವೆಂಬುದನ್ನು ಮ[illegible]ಗೆ ಚೆನ್ನಾಗಿ ತಿಳಿದುಕೊಂಡಿರು.

ದೊಡ್ಡ[illegible]ನುಷ್ಯರ ಮನೆಯಲ್ಲಿ ದಾಸಿಯು ಮನೆಗೆಲಸಗಳನ್ನೆಲ್ಲ ಮಾಡುತ್ತಾಳೆ. ಆದರೆ ಅವಳ ಮನವೆಲ್ಲ ಊರಲ್ಲಿರುವ ತನ್ನ ಮನೆಯ ಮೇಲೆಯೇ ಇರು ತ್ತದೆ. ಅವಳು ಯಜಮಾನನ ಮಕ್ಕಳನ್ನು 'ನನ್ನ ರಾಮ, ನನ್ನ ಹರಿ' ಎಂದು ಹೇಳುತ್ತ, ತನ್ನ ಮಕ್ಕಳಂತೆಯೇ ಸಾಕಿ, ದೊಡ್ಡವರನ್ನಾಗಮಾಡು ತ್ತಾಳೆ. ಪರಂತು ತನಗೂ ಅವರಿಗೂ ಆವುದೊಂದು ಸಂಬಂಧವೂ ಇಲ್ಲ ವೆಂದು ಅವಳು ಮನದಲ್ಲಿ ಚೆನ್ನಾಗಿ ತಿಳಿದುಕೊಂಡಿದ್ದಾಳೆ.

ಆಮೆಯು ನೀರಿನಲ್ಲಿ ಓಡಾಡುತ್ತಿದ್ದರೂ, ಅದರ ಮನಸ್ಸೆಲ್ಲ ನೆಲದ ಮೇಲೆ ಇರುವ ತನ್ನ ಮೊಟ್ಟೆಯ ಮೇಲೆಯೇ ಇರುತ್ತದೆ. ಹಾಗೆಯೇ ಸಂಸಾ ರದ ಕೆಲಸಗಳನ್ನು ನೀನು ಮಾಡುತ್ತಿದ್ದರೂ, ಈಶ್ವರನಲ್ಲಿ ಮನಸ್ಸನ್ನಿಟ್ಟಿರು.

ಭಗವಂತನಲ್ಲಿ ಭಕ್ತಿಯಿಡದೆ ಸಂಸಾರದಲ್ಲಿ ಇರುವುದಾದರೆ, ಅದರಲ್ಲಿ ಸಿಕ್ಕು ಬೀಳುತ್ತೀಯೆ. ವಿಪತ್ತು, ಶೋಕ, ತಾಪಗಳಿಂದ ಬೆಂದು ಬಳಲುತ್ತೀಯೆ. ವಿಷಯವನ್ನು ಚಿಂತಿಸುತ್ತ ಬಂದ ಹಾಗೆಲ್ಲ, ಅದರಲ್ಲಿ ಆಸಕ್ತಿಯು ಹೆಚ್ಚಿ ಹೋಗುತ್ತದೆ. ಕಯ್ಗೆ ಎಣ್ಣೆಯನ್ನು ಸವರಿಕೊಂಡು ಹಲಸಿನ ಹಣ್ಣನ್ನು ಬಿಡಿಸಬೇಕು. ಇಲ್ಲದಿದ್ದರೆ ಕಯ್ಯೆಲ್ಲಾ ಅಂಟಾಗುತ್ತದೆ. ಈಶ್ವರಭಕ್ತಿ ಯೆಂಬ ಎಣ್ಣೆಯನ್ನು ಸಂಪಾದಿಸಿಕೊಂಡರೆ ಸಂಸಾರವೆಂಬ ಹಲಸಿನ ಹಣ್ಣಿನಲ್ಲಿ ಕಯ್ಯಿಕ್ಕಬಹುದು. ಇಂಥ ಭಕ್ತಿಯುಂಟಾಗಬೇಕಾದರೆ ನಿರ್ಜನಪ್ರದೇಶದಲ್ಲಿರಬೇಕು. ಬೆಣ್ಣೆಯನ್ನು ತೆಗೆಯಬೇಕಾದರೆ, ಜನರಿಲ್ಲದ ಕಡೆಯಲ್ಲಿ ಹಾಲಿಗೆ ಹೆಪ್ಪನ್ನು ಹಾಕಬೇಕು. ಹೆಪ್ಪು ಹಾಕಿದ ಹಾಲನ್ನು ಅಲ್ಲಾಡಿಸಿದರೆ, ಮೊಸರು ಆಗುವುದಿಲ್ಲ. ಬಳಿಕ ಎಲ್ಲ ಕೆಲಸಗಳನ್ನೂ ಬಿಟ್ಟು ನಿರ್ಜನಪ್ರದೇಶದಲ್ಲಿ ಕುಳಿತು, ಮೊಸರನ್ನು ಕಡೆದರೆ, ಬೆಣ್ಣೆಯು ಬರುತ್ತದೆ. ನಿರ್ಜನಪ್ರದೇಶದಲ್ಲಿ ಭಗವಂತನ ಮೇಲೆ ಮನವನ್ನಿಟ್ಟರೆ ಜ್ಞಾನಭಕ್ತಿವೈರಾಗ್ಯ ಗಳು ಉಂಟಾಗುತ್ತವೆ; ಸಂಸಾರದಲ್ಲಿ ಮನಸ್ಸನ್ನಿರಿಸಿದರೆ ಬರಿಯ ಕಾಮಿನೀ ಕಾಂಚನದ ಚಿಂತೆಯುಂಟಾಗಿ, ಅದು ಕೆಟ್ಟು ಹೋಗುತ್ತದೆ.

ಸಂಸಾರವೆಂಬುದೇ ನೀರು, ಜ್ಞಾನವೆಂಬುದೇ ಹಾಲು. ಈ ನೀರಿಗೆ ಆ ಹಾಲನ್ನು ಸೇರಿಸಿದರೆ, ಎರಡೂ ಮಿಶ್ರವಾಗಿ ಹೋಗುತ್ತದೆ. ಅಪ್ಪಟವಾದ ಹಾಲನ್ನು ಬೇರೆಮಾಡುವುದಕ್ಕಾಗುವುದಿಲ್ಲ. ಹಾಲಿಗೆ ಹೆಪ್ಪುಹಾಕಿ, ಮೊಸರನ್ನುಮಾಡಿ, ಬೆಣ್ಣೆಯನ್ನು ತೆಗೆದಿಕ್ಕಿದರೆ, ಅದು ನೀರಿನಲ್ಲಿ ತೇಲುತ್ತದೆ. ಆದುದರಿಂದ ನಿರ್ಜನವಾದ ಪ್ರದೇಶದಲ್ಲಿ ಸಾಧನೆಮಾಡಿ, ಮೊದಲು ವಿಜ್ಞಾನರೂಪವಾದ

ಬೆಣ್ಣೆಯನ್ನು ತೆಗೆಯಬೇಕು. ಈ ಬೆಣ್ಣೆಯನ್ನು ಸಂಸಾರವೆಂಬ ನೀರಿನಲ್ಲಿ ಇಕ್ಕಿದರೂ ಮಿಶ್ರವಾಗದೆ ತೇಲುತ್ತದೆ.

ದೇವರ ಧ್ಯಾನದೊಡನೆ, ವಿಚಾರಮಾಡುವುದೂ ಅತ್ಯವಶ್ಯ. ವಿಚಾರವೆಂದರೇನು? ಕಾಮಿನೀಕಾಂಚನಗಳು ನಿತ್ಯವಲ್ಲ; ಈಶ್ವರನೊಬ್ಬನೇ ನಿತ್ಯನು; ಹಣದಿಂದೇನಾಗುತ್ತದೆ? ನಿಲ್ಲುವ ತಾವು, ಉಡುವ ಬಟ್ಟೆ, ಸೆಕ್ಕುವ ಗಂಜಿ ಇಷ್ಟಕ್ಕೆ ಮಾತ್ರ ಅದು ಉಪಯೋಗವಾಗುತ್ತದೆ. ಅದರಿಂದ ಭಗವಂತನು ದೊರೆಯುವುದಿಲ್ಲ. ಆದಕಾರಣದಿಂದ ಹಣವು ಜೀವನದ ಉದ್ದೇಶವಾಗಲಾರದು, ಎಂದು ಆಲೋಚನೆಮಾಡುವುದು. ಇದನ್ನೇ ವಿಚಾರವೆಂದು ಹೇಳುತ್ತಾರೆ, ತಿಳಿಯಿತೋ?

ಮಾಸ್ಟರ್:—ಸ್ವಾಮೀ, ತಿಳಿಯಿತು. ನಾನು ಈಗತಾನೇ ಪ್ರಬೋಧಚಂದ್ರೋದಯನಾಟಕವನ್ನು ಓದಿದ್ದೇನೆ, ಅದರಲ್ಲಿ ವಸ್ತುವಿಚಾರವಿದೆ.

ಶ್ರೀರಾಮಕೃಷ್ಣ:—ಓಹೋ! ವಸ್ತುವಿಚಾರವಿದೆಯೋ? ಹಣದಲ್ಲಿ ತಾನೇ ಏನಿದೆ? ಸುಂದರವಾದ ದೇಹದಲ್ಲಿ ಎಲುಬು, ಕೊಬ್ಬು, ಮಾಂಸ, ರಕ್ತ, ಮಲಮೂತ್ರಗಳೀಗ ಇರುತ್ತವೆ. ಮನುಷ್ಯನು ಭಗವಂತನಲ್ಲಿ ಮನಸನ್ನಿಡದೆ, ಹೇಯವಾದ ಈ ವಸ್ತುಗಳಲ್ಲಿ ಏಕೆ ಮನಸ್ಸನ್ನು ಇಡಬೇಕು? ಈಶ್ವರನನ್ನು ಏಕೆ ಮರೆಯಬೇಕು?

(ಈಶ್ವರ ದರ್ಶನದ ಉಪಾಯ)

ಮಾಸ್ಟರ್:—ನಾವು ದೇವರನ್ನು ನೋಡುವುದಕ್ಕಾಗುತ್ತದೆಯೇ?

ಶ್ರೀರಾಮಕೃಷ್ಣ:—ಹೂಂ, ಅವಶ್ಯವಾಗಿ ಆಗುತ್ತದೆ. ಆಗಾಗ ವಿಜನವಾದ ಸ್ಥಳದಲ್ಲಿ ಇರುತ್ತ, ಭಗವಂತನ ನಾಮೋಚ್ಚಾರಣ, ಗುಣಕಥನ. ಸಂಕೀರ್ತನ ಮತ್ತು ವಸ್ತುವಿಚಾರಗಳನ್ನು ಮಾಡುತ್ತಿರಬೇಕು.

ಮಾಸ್ಟರು:—ನಾವು ಹೇಗಿದ್ದರೆ ಭಗವಂತನನ್ನು ಕಾಣಬಹುದು?

ಶ್ರೀರಾಮಕೃಷ್ಣ:-ತುಂಬ ವ್ಯಾಕುಲಪಟ್ಟು ಅವನನ್ನು ಕಾಣಬೇಕೆಂದು ಅತ್ತರೆ, ಭಗವಂತನನ್ನು ನೋಡಬಹುದು. ಜನರು, ಹೆಂಡಿರು ಮಕ್ಕಳಿಗೋಸ್ಕರ, ಒಂದು ಬಿಂದಿಗೆಯ ತುಂಬ ಕಣ್ಣೀರನ್ನು ಸುರಿಸುತ್ತಾರೆ. ಹಣಕ್ಕಾಗಿ ಕಣ್ಣೀರಲ್ಲಿ ತೇಲಿ ಹೋಗುತ್ತಾರೆ. ಈಶ್ವರನಿಗಾಗಿ ಅರು ತಾನೇ ಅಳುವರು? ಅವನನ್ನು ಕೂಗುವ ರೀತಿಯಲ್ಲಿ ಕೂಗಬೇಕು, ಎಂದು ಹೇಳುತ್ತ ಈರೀತಿ ಗಾನ ಮಾಡಿದರು.

(ಕೊಡುವ ಕರ್ತ ಬೇರೆ' ಎಂಬಂತೆ)

ಕೂಗು ಕೂಗು ಮನವೇ। ಮಾತೆಯು। ಕೂಗುವ ರೀತಿಯಲಿ॥
ಕ ' ಕಾಳಿ ತಾಂ। ಬೇಗನೆ ನಿನ್ನೆಡೆ। ಗಾಗಿ ಬಾರದೆಯೆ। ಹೋಗುವಳೆ॥
ವ ನಕದೆಂತುಟೆಂದು। ವಿಜನತೆ। ತನಗೆ ದೊರೆಯುತಿಹುದು॥
ಮಿನುಪ ಜಪಾಸುಮ। ವನು ಪತ್ರೆಗಳನು। ವಿನುತಭಕ್ತಿಚಂ। ದನ ... ತೆ
ಮಾತೆಯು ಮೆಲ್ಲಡಿಗೆ। ನೋಡುವೊ। ಡೇತೆರದಿಂದೊಲಿದು
ನೂತಲತಾಂತ। ವ್ರಾತದಂಜಲಿಯ। ನೋತು ನೀಡುತುಂ। ಕ ... ತೆ॥

ವ್ಯಾಕುಲತೆಯು ಅರುಣೋದಯದಂತೆ; ಅರುಣೋದಯವಾದ ಬೇ ಸಿಯೇ, ಸೂರ್ಯನು ತಾನಾಗಿಯೇ ಕಾಣಿಸಿಕೊಳ್ಳುತ್ತಾನೆ. ಅದರಂತೆಯೇ, ವ್ಯಾಕುಲತೆಯುಂಟಾದರೆ ತಾನಾಗಿಯೇ ಭಗವಂತನ ದರ್ಶನವುಂಟಾಗುತ್ತದೆ.

ಜನರಿಗೆ ಲೋಕವಿಷಯದಲ್ಲಿ ಎಷ್ಟು ಆಸೆಯಿದೆಯೋ, ತಾಯಿಗೆ ಮಕ್ಕಳ ಮೇಲೆ ಎಷ್ಟು ಅಕ್ಕರೆಯಿದೆಯೋ, ಹೆಂಡತಿಗೆ ಗಂಡನ ಮೇಲೆ ಎಷ್ಟು ಅನುರಾಗವಿದೆಯೋ, ಆ ಮೂರು ಬಗೆಯ ಅಭಿಮಾನವನ್ನೂ ಭಗವಂತನಲ್ಲಿ ಇಟ್ಟರೆ, ಅವನನ್ನು ಕಾಣಬಹುದು.

ವ್ಯಾಕುಲನಾಗಿ ಭಗವಂತನಿಗೆ ಮೊರೆಯಿಡಬೇಕು. ಬೆಕ್ಕಿನ ಮರಿಗೆ ಮಿಯಾವ್, ಮಿಯಾವ್ ಎಂದು ಕೂಗುವುದೊಂದೇ ಗೊತ್ತು. ಅದನ್ನು ತಾಯಿಯು ಒಂದೊಂದು ವೇಳೆ ಅಡುಗೆಯ ಮನೆಯಲ್ಲಿಯೂ, ನೆಲದ ಮೇಲೆಯೂ, ಹಾಸುಗೆಯ ಮೇಲೆಯೂ ಇರಿಸುತ್ತದೆ. ಮರಿಯು ಇಟ್ಟ ಕಡೆಯಲ್ಲಿಯೇ ಬಿದ್ದಿರುತ್ತದೆ. ತನಗೇನಾದರೂ ತೊಂದರೆಯಾದರೆ, ಅದು ಸುಮ್ಮಗೆ ಮಿಯಾವ್, ಮಿಯಾವ್ ಎಂದು ಮಟ್ಟಿಗೆ ಅರಚಿಕ್ಕೊಳ್ಳುತ್ತದೆ. ಅದಕ್ಕೆ ಮತ್ತೇನೂ ತಿಳಿಯದು. ಮರಿಯ ಸದ್ದನ್ನು ಕೇಳಿದೊಡನೆಯೇ ತಾಯಿ ಬೆಕ್ಕು ಎಲ್ಲಿದ್ದರೂ ಬಂದು ಬಿಡುತ್ತದೆ.

ಐದನೆಯ ಪರಿಚ್ಛೇದ

ತೃತೀಯ ದರ್ಶನ

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿಚಾತ್ಮನಿ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ॥

[ಯೋಗಿಯು ಎಲ್ಲದರಲ್ಲಿಯೂ ಸಮದೃಷ್ಟಿಯುಳ್ಳವನು; ಆತ್ಮನನ್ನು ಸರ್ವಭೂತಗಳಲ್ಲಿಯೂ ಇರುವಂತೆಯೂ, ಸರ್ವಭೂತಗಳನ್ನು ಆತ್ಮನಲ್ಲಿರುವಂತೆಯೂ ಅವನು ಕಾಣುತ್ತಾನೆ.]

ಮಾರ್ಚಿ ೫

ನರೇಂದ್ರ, ಭವನಾಥ ಮತ್ತು ಮಾಸ್ಟರು

ಮಾಸ್ಟರು ವರಾಹನಗರದೊಳಗೆ ತನ್ನ ಅಕ್ಕನ ಮನೆಯಲ್ಲಿ ಇದ್ದನು. ಭಗವಾನ್ ಶ್ರೀರಾಮಕೃಷ್ಣರವರ ದರ್ಶನವನ್ನು ಮಾಡಿದಂದಿನಿಂದ, ಅವರ ಆನಂದಮಯವಾದ ಮುಖವನ್ನು ನೋಡಬೇಕು, ಅವರ ಅಮೃತಮಯವಾದ ಮಾತುಗಳನ್ನು ಕೇಳಬೇಕು ಎಂದು ಆಗಿ ಅವನು ಸದಾ ಚಿಂತಿಸುತ್ತಿದ್ದನು. 'ಈ ದರಿದ್ರಬ್ರಾಹ್ಮಣನು ಗಭೀರವಾದ ತತ್ವಗಳನ್ನೆಲ್ಲ ಹೇಗೆ ಕಂಡು ಹಿಡಿದನು? ಹೇಗೆ ಅವುಗಳನ್ನು ತಿಳಿದುಕೊಂಡನು?' ಎಂದು ಅವನಿಗೆ ಮನಸ್ಸಿನಲ್ಲಿ ಆಲೋಚನೆಯುಂಟಾಯಿತು. ಇದುವರೆಗೂ ಎಲ್ಲಾ ವಿಷಯಗಳನ್ನೂ ಈ ರೀತಿ ಸುಲಭವಾಗಿ ತಿಳಿಸತಕ್ಕವರನ್ನು ಮಾಸ್ಟರು ನೋಡಿಯೇ ಇರಲಿಲ್ಲ. 'ಅವರ ಬಳಿಗೆ ಆವಾಗ ಹೋಗುತ್ತೇನೆ? ಆವಾಗ ಅವರ ದರ್ಶನವನ್ನು ಮಾಡುತ್ತೇನೆ?' ಎಂಬದಾಗಿ ಅವನು ಹಗಲೂ ಇರುಳೂ ಹಂಬಲಿಸುತ್ತಿದ್ದನು.

ಭಾನುವಾರವು ಬಂದಿತು. ಆ ದಿನ ಮಧ್ಯಾಹ್ನ ೩-೪ ಗಂಟೆಯ ಹೊತ್ತಿಗೆ ಅವನು ವರಾಹನಗರದ ನೇಪಾಲಬಾಬುವಿನೊಡನೆ ದಕ್ಷಿಣೇಶ್ವರದ ತೋಟಕ್ಕೆ ಬಂದನು. ಭಗವಾನ್ ಶ್ರೀರಾಮಕೃಷ್ಣರು ಪೂರ್ವಪರಿಚಿತವಾಗಿರುವ ಕೊಟ್ಟಡಿಯ ಚಿಕ್ಕ ಮಂಚದ ಮೇಲೆ ಕುಳಿತುಕೊಂಡಿದ್ದರು. ಕೊಟ್ಟಡಿಯ ತುಂಬ ಜನರು ತುಂಬಿದ್ದರು. ಭಾನುವಾರವಾದುದರಿಂದ ಎಲ್ಲರಿಗೂ ವಿರಾಮವಾಗಿದೆ. ಆದುದರಿಂದ ಭಕ್ತರೆಲ್ಲರೂ ಭಗವಾನರ ಸಂದರ್ಶನಕ್ಕಾಗಿ ಬಂದಿದ್ದಾರೆ. ಮಾಸ್ಟರನ್ನು ಇದುವರೆಗೂ ಅವರು ಆರೂ ನೋಡಿರಲಿಲ್ಲ. ಅವನು ಜನರ ಸಂದಣಿಯಲ್ಲಿ ಒಂದು ಕಡೆಯೊಳಗೆ ಕುಳಿತುಕೊಂಡನು. ಭಗವಾನರು ಭಕ್ತರೊಡನೆ ಮಾತನಾಡುತ್ತಿದ್ದರು.

ಭಗವಾನರು ಹತ್ತೊಂಬತ್ತು ವಯಸ್ಸಿನ ಹುಡುಗನೊಬ್ಬನ ಕಡೆಗೆ ತಿರುಗಿಕೊಂಡು ಅವನ ಸಂಗಡ ಆನಂದವಾಗಿ ಮಾತನಾಡುತ್ತಿದ್ದರು. ಆ ಹುಡುಗನ ಹೆಸರು ನರೇಂದ್ರ; ಅವನು ಕಾಲೇಜಿನಲ್ಲಿ ಓದುತ್ತಿದ್ದನು; ಸಾಧಾರಣ ಬ್ರಹ್ಮಸಮಾಜಕ್ಕೆ ಹೋಗಿ ಬರುತ್ತಿದ್ದನು. ಅವನ ಕಣ್ಣುಗಳು ಉಜ್ವಲವಾಗಿದ್ದುವು. ಮಾತುಗಳು ತೇಜಃ ಪರಿಪೂರ್ಣವಾಗಿದ್ದುವು. ಅವನಲ್ಲಿ ಭಕ್ತನ ಚಿಹ್ನೆಗಳು ಕಾಣಬರುತ್ತಲಿದ್ದಿತು.

ಭಗವಾನರು ವಿಷಯಾಸಕ್ತಸಂಸಾರಸಂಬಂಧವಾದ ಮಾತನಾಡುತ್ತಿರಬಹುದೆಂದು ಮಾಸ್ಟರು ಊಹಿಸಿದನು. 'ವಿಷಯಾಸಕ್ತರಾದ ಸಂಸಾರಿಗಳು ಈಶ್ವರವಿಚಾರ ಮಾಡುವವರನ್ನೂ, ಧರ್ಮವಿಚಾರಮಾಡುವವರನ್ನೂ ನಿಂದಿಸುತ್ತಾರೆ. ಲೋಕದಲ್ಲಿ ದುಷ್ಟರು ಹೆಚ್ಚು. ಅವರೊಂದಿಗೆ ವ್ಯವಹಾರಮಾಡುವುದು ಹೇಗೆ!' ಎಂಬ ಮೊದಲಾದ ಮಾತುಗಳು ನಡೆಯುತ್ತಿದ್ದುವು.

ಶ್ರೀರಾ[illegible]ಕೃಷ್ಣ :—(ನರೇಂದ್ರನನ್ನುಕುರಿತು) ನರೇಂದ್ರ, ಸಂಸಾರಿಗ[illegible] ವಿಷ[illegible]ವಾಗಿ ಏನೇನೋ ಆಡಿಕೊಳ್ಳುತ್ತಾರೆ. ಅದಕ್ಕೆ ನೀನು ಏನ[illegible]ತ್ತೀಯೆ? ಆನೆಯು ಹೋಗುತ್ತಿರುವಾಗ ಅದರ ಹಿಂದುಗಡೆಯಲ್ಲಿ ಎ[illegible] ಕ್ಷುದ್ರ ಜಂತುಗಳು ಅರಚಿಕೊಳ್ಳುತ್ತವೆ. ಪರಂತು ಆನೆಯು [illegible] ನೋಡುವುದೇ ಇಲ್ಲ. ನಿನ್ನನ್ನು ಆರಾದರೂ ದೂರಿದರೆ [illegible] ತ್ತೀಯೆ?

ನರೇಂದ್ರ :—ನಾಯಿಗಳು ಬಗುಳುತ್ತವೆ, ಎಂದುಕೊಳ್ಳುತ್ತೇನೆ.

ಶ್ರೀರಾಮಕೃಷ್ಣ:—(ನಗುತ್ತ) ಹಾಗಲ್ಲವಪ್ಪ, ಅಷ್ಟು ದೂರ ಹೋಗಬಾರದು. (ಎಲ್ಲರೂ ನಗುತ್ತಾರೆ) ಭಗವಂತನು ಸರ್ವಭೂತಗಳಲ್ಲಿಯೂ ಇದ್ದಾನೆ. ಒಳ್ಳೆಯವರ ಸಂಗಡ ಹೆಚ್ಚಾಗಿ ಸಹವಾಸಮಾಡಬಹುದು. ಕೆಟ್ಟವರ ಬಳಿಗೆ ಹೋಗದೆ ದೂರದಲ್ಲಿಯೇ ನಿಲ್ಲಬೇಕು. ಹುಲಿಯಲ್ಲಿ ನಾರಾಯಣ ನಿದ್ದಾನೆಂದು ಹೇಳಿ, ಅದನ್ನು ತಬ್ಬಿಕೊಳ್ಳುವುದಕ್ಕೆ ಹೋಗುವುದುಂಟೇ? (ಎಲ್ಲರೂ ನಗುತ್ತಾರೆ) ಹುಲಿಯಲ್ಲಿ ನಾರಾಯಣನಿರುವನಾದರೆ, ಅದನ್ನು ಕಂಡು ಓಡಿಹೋಗುವುದೇಕೆ, ಎನ್ನುವೆಯೋ? 'ಓಡಿಹೋಗು', ಎನ್ನುವನಲ್ಲಿಯೂ ನಾರಾಯಣನಿದ್ದಾನೆ. ಆ ನಾರಾಯಣನ ಮಾತನ್ನು ಕೇಳದಿರಬಹುದೇ? ಈ ವಿಷಯದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ, ಕೇಳು.

ಒಂದು ಕಾಡಿನಲ್ಲಿ ಒಬ್ಬ ಸಾಧುವು ತಪಸ್ಸನ್ನು ಮಾಡಿಕೊಂಡಿದ್ದನು. ಅವನಿಗೆ ಹಲವು ಮಂದಿ ಶಿಷ್ಯರಿದ್ದರು. ಒಂದು ದಿವಸ ಆ ಸಾಧುವು, 'ಸರ್ವಭೂತಗಳಲ್ಲಿಯೂ ನಾರಾಯಣನಿದ್ದಾನೆ, ಎಂದು ತಿಳಿದು, ಎಲ್ಲರಿಗೂ ನಮಸ್ಕಾರಮಾಡಬೇಕು' ಎಂದು ಶಿಷ್ಯರಿಗೆ ಉಪದೇಶಮಾಡಿದನು. ಹೀಗಿರುವಲ್ಲಿ ಒಂದು ದಿನ ಶಿಷ್ಯನೊಬ್ಬನು, ಸಮಿತ್ತನ್ನು ತರುವುದಕ್ಕೋಸ್ಕರ, ವನಕ್ಕೆ ಹೋದನು. 'ಒಂದು ಮದಿಸಿದ ಆನೆಯು ಬರುತ್ತಿದೆ. ಆರು ಎಲ್ಲಿದ್ದರೂ ನಿಲ್ಲಬೇಡಿರಿ; ಬೇಗ ಓಡಿಹೋಗಿರಿ', ಎಂಬ ಸದ್ದು ಕೇಳಿಸಿತು. ಎಲ್ಲರೂ ಕೂಡಲೇ ಓಡಿಹೋದರು. ಶಿಷ್ಯನು ಓಡಿಹೋಗದೆ ಅಲ್ಲಿಯೇ ನಿಂತುಕೊಂಡು, 'ಆನೆಯಲ್ಲಿ ನಾರಾಯಣನಿದ್ದಾನೆ; ನಾನೇಕೆ ಓಡಿಹೋಗಲಿ' ಎಂದು ತರ್ಕಮಾಡುತ್ತ, ಆನೆಗೆ ನಮಸ್ಕರಿಸಿ, ಅದನ್ನು ಸ್ತೋತ್ರಮಾಡತೊಡಗಿದನು. ಅಲ್ಲಿಂದ ಅಲ್ಲಾಡಲಿಲ್ಲ. ಆನೆಯ ಮಾವುತನು, 'ಓಡಿಹೋಗು, ಓಡಿಹೋಗು', ಎಂದು ಗಟ್ಟಿಯಾಗಿ ಕೂಗಿಕೊಂಡನು. ಆದರೂ ಶಿಷ್ಯನು ಕದಲಲಿಲ್ಲ ಕೊನೆಗೆ ಆನೆಯು ಅವನನ್ನು ಸುಂಡಿಲಿಂದೆತ್ತಿ, ಒಂದು ಕಡೆಗೆ ಬಿಸಾಟು ಹೊರಟುಹೋಯಿತು. ಶಿಷ್ಯನಿಗೆ ತುಂಬ ಪೆಟ್ಟಾಯಿತು.

ಅವನು ಜ್ಞಾನತಪ್ಪಿ ಬಿದ್ದಿದ್ದನು. ಈ ಸುದ್ದಿಯನ್ನು ಕೇಳಿ, ಗುರುವು ಮಿಕ್ಕ ಶಿಷ್ಯರೊಡನೆ ಕಾಡಿಗೆ ಬಂದು, ಅವನನ್ನು ಆಶ್ರಮಕ್ಕೆ ಎತ್ತಿಕೊಂಡು ಹೋಗಿ, ಔಷಧವನ್ನು ಕೊಟ್ಟು, ಉಪಚರಿಸಿದನು. ಕೊಂಚ ಹೊತ್ತಿನ ತರು [illegible], ಅವನು ಚೇತರಿಸಿಕೊಂಡನು. ಆಗ ಅವನನ್ನು ನೋಡಿ, ಉಳಿದ [illegible] 'ಅಯ್ಯಾ, ಆನೆಯು ಬರುತ್ತಿದೆ' ಎಂದು ಕೂಗಿಕೊಳ್ಳುತ್ತಿ [illegible], ನೀನೇಕೆ ಓಡಿಹೋಗದೆ ಸುಮ್ಮನೆ ನಿಂತುಕೊಂಡಿದ್ದೆ?' ಎಂದು ಕೇಳಿದರು. 'ಮನುಷ್ಯ, ಜೀವ, ಜಗತ್ತು ಮುಂತಾಗಿ ಎಲ್ಲದರಲ್ಲಿಯೂ ನಾರಾಯಣನು ಇದ್ದಾನೆ' ಎಂದು ಗುರುಗಳು ಉಪದೇಶಮಾಡಿದ್ದರು; ಆದಕಾರಣ, ಗಜನಾರಾಯಣನು ಬರುವುದನ್ನು ಕಂಡರೂ, ನಾನು ಸರಿದು ಹೋಗಲಿಲ್ಲ' ಎಂದು ಆತನು ಬದಲನ್ನು ಹೇಳಿದನು. ಆಗ ಗುರುವು ಅವನನ್ನು ನೋಡಿ, 'ಅಯ್ಯಾ, ಆನೆಯಲ್ಲಿ ನಾರಾಯಣನಿರುವುದೇನೋ ಸತ್ಯ; ಆದರೆ ಮಾವುತನಲ್ಲಿರುವ ನಾರಾಯಣನು 'ಓಡಿಹೋಗು' ಎಂದು ನಿನಗೆ ಎಚ್ಚರಿಕೆಕೊಟ್ಟನು. ಅವನ ಮಾತನ್ನೇಕೆ ನೀನು ಕೇಳದೆಹೋದೆ?' ಎಂದು ಹೇಳಿದನು. (ಎಲ್ಲರೂ ನಗುತ್ತಾರೆ)

'ಆಪೋ ನಾರಾಯಣಃ' ಎಂದರೆ 'ನೀರು ನಾರಾಯಣನು' ಎಂದು ಶಾಸ್ತ್ರದಲ್ಲಿ ಹೇಳಿದೆ. ಆದರೆ ಒಂದು ನೀರು, ದೇವರ ಪೂಜೆಗೆ ಉಪಯೋಗವಾಗುತ್ತದೆ. ಇನ್ನೊಂದರಲ್ಲಿ ಮುಖವನ್ನು ತೊಳೆಯುತ್ತಾರೆ. ಮತ್ತೊಂದರಲ್ಲಿ ಮುಸರೆಯನ್ನು ತೊಳೆಯುತ್ತಾರೆ. ಬೇರೊಂದರಲ್ಲಿ ಬಟ್ಟೆಯೊಗೆಯುತ್ತಾರೆ. ಇವುಗಳನ್ನು ಕುಡಿಯುವುದಕ್ಕೂ, ದೇವರ ಪೂಜೆಗೂ, ಬಳಸಿಕೊಳ್ಳುವುದಿಲ್ಲ.

ಇವರಂತೆಯೇ ಸಾಧು, ಅಸಾಧು, ಭಕ್ತ, ಅಭಕ್ತರೆಂಬ ಸಕಲರ ಹೃದಯದಲ್ಲಿಯೂ ಭಗವಂತನಿದ್ದಾನೆ. ಆದರೆ ಅಸಾಧು, ಅಭಕ್ತ, ದುಷ್ಟರೊಡನೆ ವ್ಯವಹಾರವನ್ನು ಬಳೆಸುವುದು ಸರಿಯಲ್ಲ. ಸ್ನೇಹವೂ ತಕ್ಕುದಲ್ಲ. ಕೆಲವರೊಡನೆ ಮಾತನಾಡಬಹುದು; ಇನ್ನು ಕೆಲವರೊಡನೆ ಅದೂ ಕೂಡದು.

ಒಬ್ಬ ಭಕ್ತ:- ಮಹಾಶಯರೇ, ದುಷ್ಟರು ಕೇಡ ಮಾಡಿದರೂ, ಮಾಡುವುದಕ್ಕೆ ಬಂದರೂ, ನಾವು ಸುಮ್ಮನೆ ಇರಬೇಕೋ?

(ಗೃಹಸ್ಥನೂ ತಮೋಗುಣವೂ)

ಶ್ರೀರಾಮಕೃಷ್ಣ:—ಜನರೊಂದಿಗಿರುವಾಗ, ಅವರಿಂದ ನಮಗೆ ಕೇಡು ತಟ್ಟದ ಇರುವುದಕ್ಕೋಸ್ಕರ, ನಾವು ಸ್ವಲ್ಪತಮೋಗುಣವನ್ನು ಪ್ರದರ್ಶಿಸಬೇಕು. ಆದರೆ ಕೆಡುಕನ್ನು ಮಾಡಿದವನಿಗೆ, ಬದಲಿಗೆ ಕೆಡುಕನ್ನು ಮಾಡಬಾರದು.

ಒಂದು ಹೊಲದಲ್ಲಿ ಗೊಲ್ಲರು ದನಗಳನ್ನು ಕಾಯುತ್ತಿದ್ದರು. ಅಲ್ಲಿ ಭಯವಾದ, ವಿಷಸರ್ಪವೊಂದಿದ್ದಿತು. ಅದಕ್ಕೆ ಹೆದರಿಕೊಂಡು ಎಲ್ಲರೂ ಎಚ್ಚರಿಕೆಯಿಂದಿದ್ದರು. ಒಂದು ದಿನ ಬ್ರಹ್ಮಚಾರಿಯೊಬ್ಬನು ಆ [illegible] ಕಡೆಗೆ ಬರುತ್ತಿದ್ದನು. ಅದನ್ನು ಕಂಡು, ದನ ಕಾಯುವವ[illegible], 'ಬುದ್ಧಿ, ಆ ಕಡೆ ಹೋಗಬೇಡಿರಿ, ಅಲ್ಲಿ ಒಂದು ವಿಷದ [illegible] ಎಂದು ಹೇಳಿದರು. ಅದನ್ನು ಕೇಳಿ ಬ್ರಹ್ಮಚಾರಿಯು, 'ಅಪ್ಪ, ಅದ[illegible] ಏನ ಮಾಡೀತು? ನಾನು ಮಂತ್ರವಾದಿ', ಎಂದು ಹೇಳಿ, ಆ ಹಾದಿಯಲ್ಲಿಯೇ ಬರುತ್ತಿದ್ದನು. ದನಕಾಯುವವರೆಲ್ಲರೂ ಅಂಜಿಕೊಂಡು ಬ್ರಹ್ಮಚಾರಿಯ ಸಂಗಡ ಹೋಗಲಿಲ್ಲ. ಸರ್ಪವು ಕೋಪದಿಂದ ಬುಸುಗುಟ್ಟುತ್ತ, ಹೆಡೆಯೆತ್ತಿಕೊಂಡು, ಅವನ ಬಳಿಗೆ ಓಡಿಬಂದಿತು. ಆಗ ಬ್ರಹ್ಮಚಾರಿಯು ಒಂದು ಮಂತ್ರವನ್ನು ಹೇಳಿದನು. ಕೂಡಲೇ ಆ ಹಾವು ಒಂದು ಮಣ್ಣಿನ ಹುಳವಂತೆ ಅವನ ಕಾಲ ಹತ್ತಿರ ಬಿದ್ದಿತು. ಆಗ ಬ್ರಹ್ಮಚಾರಿಯು ಅದನ್ನು ನೋಡಿ, 'ನೀನೇಕೆ ಇತರರಿಗೆ ಹಿಂಸೆಮಾಡುತ್ತ ತಿರುಗುತ್ತಿದ್ದೀಯೆ? ನಿನಗೆ ನಾನು ಮಂತ್ರೋಪದೇಶಮಾಡುತ್ತೇನೆ. ಅದನ್ನು ಜಪಿಸುತ್ತಿದ್ದರೆ ನಿನಗೆ ಭಗವಂತನಲ್ಲಿ ಭಕ್ತಿಯುಂಟಾಗಿ, ಅವನ ಲಾಭವಾಗುತ್ತದೆ. ಹಿಂಸೆಯಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ', ಎಂದು ಹೇಳಿ, ಅದಕ್ಕೆ ಮಂತ್ರೋಪದೇಶ ಮಾಡಿದನು. ಸರ್ಪವು ಮಂತ್ರವನ್ನು ಪಡೆದು, ಗುರುವಿಗೆ ನಮಸ್ಕರಿಸಿ, 'ಸ್ವಾಮೀ ಗುರುಗಳೇ, ಈ ಮಂತ್ರವನ್ನು ಸಾಧನೆಮಾಡುವುದು ಹೇಗೆ?' ಎಂದು ಕೇಳಿತು. ಆತನು ಅದಕ್ಕೆ, 'ನೀನು ಈ ಮಂತ್ರವನ್ನು ಜಪಿಸುತ್ತಿರು. ಆರನ್ನೂ ಹಿಂಸಿಸಬೇಡ. ನಾನು ಮರಳಿ ಇಲ್ಲಿಗೆ ಬರುತ್ತೇನೆ,' ಎಂದು ಹೇಳಿ ಹೊರಟುಹೋದನು.

ಕೆಲವು ದಿವಸಗಳು ಕಳೆದುವು. ಸರ್ಪವು ಒಬ್ಬರನ್ನೂ ಕಚ್ಚುವುದಕ್ಕೆ ಬರುತ್ತಿರಲಿಲ್ಲ; ಅದನ್ನು ಕಂಡು, ಗೊಲ್ಲರು, 'ಈ ಹಾವು ಕಚ್ಚುವುದಕ್ಕೆ ಬರುವುದಿಲ್ಲ; ಕಲ್ಲಿಂದ ಹೊಡೆದರೂ ಕೋಪಗೊಳ್ಳುವುದಿಲ್ಲ; ಇದು ಮಣ್ಣಿನ ಹುಳುವಂತಿದೆ', ಎಂದುಕೊಂಡು, ಅದರಬಾಲವನ್ನು ಹಿಡಿದೆಳೆದು ತಿರುಗಿಸಿ, ಅದನ್ನು ಚೆನ್ನಾಗಿ ಅಪ್ಪಳಿಸಿಬಿಟ್ಟರು. ಅದರ ಬಾಯಿಂದ ರಕ್ತವು ಸುರಿಯತೊಡಗಿತು. ಅದಕ್ಕೆ ಪ್ರಜ್ಞೆ ತಪ್ಪಿತು. ಅಲ್ಲಾಡಲಿಲ್ಲ. ಅದನ್ನು ಕಂಡು, ಇದು ಸತ್ತುಹೋಯಿತೆಂದುಕೊಂಡು, ಗೊಲ್ಲರೆಲ್ಲರೂ ಹೊರಟುಹೋದರು.

ಅತ್ತ, ಹಾವಿಗೆ ಇರುಳು ಸರಿಹೊತ್ತಿನ ವೇಳೆಗೆ ಜ್ಞಾನಬಂದಿತು. ಅದು ಬಲು ಬಳಲಿ, ಹೇಗೋ ಬಿಲಕ್ಕೆ ಹೋಗಿ ಸೇರಿಕೊಂಡಿತು. ಅದಕ್ಕೆ ಮೈಯ್ಯೆಲ್ಲಾ ಜಜ್ಜಿಹೋಗಿದ್ದಿತು. ಹರಿದಾಡುವುದಕ್ಕೂ ತ್ರಾಣವಿರಲಿಲ್ಲ. ಕೆಲವು

ದಿನಗಳಲ್ಲಿ ಅದು ಬರಿಯ ಮೂಳೆಯೂ ಚರ್ಮವೂ ಆಗಿಹೋಯಿತು. ಅದು ಆಹಾರಕ್ಕೆ ರಾತ್ರಿವೇಳೆ ಮಾತ್ರ ಹೊರಗೆ ಬರುತ್ತಲಿದ್ದಿತು. ಹಗಲಲ್ಲಿ ಅಂಜಿಕೆಯಿಂದ ಈಚೆಗೆ ತಲೆಯನ್ನೇ ಹಾಕುತ್ತಿರಲಿಲ್ಲ; ಮಂತ್ರೋಪದೇಶ [illegible]ದಿನಿಂದಲೂ, ಅದು ಒಬ್ಬರಿಗೂ ಹಿಂಸೆಯನ್ನು ಮಾಡುತ್ತಿರಲಿಲ್ಲ, [illegible]ದಿನಿ, ಎಲೆ, ಗಿಡುವಿಂದುದುರಿದ ಹಣ್ಣು, ಇವುಗಳನ್ನು ತಿಂದುಕೊಂಡು, [illegible]ನ್ನು ಮಾ[illegible] ಜೀವಧಾರಣೆಯನ್ನು ಮಾಡಿಕೊಂಡಿದ್ದಿತು.

ಎರಡು ವರ್ಷದ ಬಳಿಕ, ಬ್ರಹ್ಮಚಾರಿಯು ಮರಳಿ ಆ ಹಾದಿಯಲ್ಲಿಯೇ ಬಂದು, ಹಾವನ್ನು ಹುಡುಕಿದನು. ಅದು ಸತ್ತುಹೋಯಿತೆಂದು ದನ ಕಾಯುವವರು ಹೇಳಿಬಿಟ್ಟರು. ಬ್ರಹ್ಮಚಾರಿಯು ನಂಬಲಿಲ್ಲ. ಮಂತ್ರಸಿದ್ಧಿಯಾದಲ್ಲದೆ ದೇಹತ್ಯಾಗವಾಗುವುದಿಲ್ಲವೆಂದು ಅವನಿಗೆ ಗೊತ್ತು. ಆದುದರಿಂದ ಅವನು ಅದನ್ನು ಹುಡುಕಿ, ಅದರ ಹೆಸರನ್ನು ಹಿಡಿದು ಕೂಗಿದನು. ಗುರುವಿನ ಕೊರಲನ್ನು ಕೇಳಿ, ಹಾವು ಬಿಲದಿಂದ ಈಚೆಗೆ ಬಂದು, ಭಕ್ತಿಯಿಂದ ಅವನಿಗೆ ನಮಸ್ಕಾರಮಾಡಿತು. 'ನೀನು ಕ್ಷೇಮವಾಗಿದ್ದೀಯಾ?' ಎಂದು ಅವನು ಅದನ್ನು ಕೇಳಲಾಗಿ, 'ಹೂಂ' ಎಂದು ಅದು ಉತ್ತರ ಕೊಟ್ಟಿತು. ಬಳಿಕ ಆತನು ಸರ್ಪವನ್ನು ನೋಡಿ, ನೀನೇಕೆ ಹೀಗೆ ತಾರಿ ಹೋಗಿದ್ದೀಯೆ?' ಎಂದನು. ಅದಕ್ಕೆ ಹಾವು ಬ್ರಹ್ಮಚಾರಿಯನ್ನು ನೋಡಿ, 'ಬುದ್ಧೀ, ಒಬ್ಬರಿಗೂ ಹಿಂಸೆಮಾಡಕೂಡದೆಂದು ತಮ್ಮ ಅಪ್ಪಣೆಯಾಗಿದ್ದಿತು. ಹಾಗೆಯೇ ಇದ್ದುಕೊಂಡು, ಮರದ ಎಲೆ ಹಣ್ಣುಗಳನ್ನು ತಿಂದುಕೊಂಡಿದ್ದೇನೆ. ಅದರಿಂದ ಮೈಯ್ಯು ಕೃಶವಾಗಿರಬಹುದು' ಎಂದು ಹೇಳಿತು. ಈಗ ಸತ್ವಗುಣವು ಬಂದಿದ್ದುದರಿಂದ ಹಾವು ಆರ ಮೇಲೆಯೂ ಕೋಪದಿಂದ ಬೀಳುತ್ತಿರಲಿಲ್ಲ. ಗೊಲ್ಲರು ತನ್ನನ್ನು ಕೊಲ್ಲುವುದಕ್ಕೆ ಮಾಡಿದ ಸಂಚನ್ನು ಅದು ಮರೆತದ್ದಿತು. ಆಗ ಬ್ರಹ್ಮಚಾರಿಯು, 'ಎಲೈ, ಬರಿಯ ಅಸಾರವಾದ ತಿಂಡಿಯನ್ನು ತಿನ್ನುವುದರಿಂದ ಮಾತ್ರವೇ ಹೀಗಾಗಿರಲಾರದು; ಇನ್ನಾವುದೋ ಕಾರಣವಿರಬೇಕು. ಜ್ಞಾಪಕಮಾಡಿಕೋ,' ಎಂದು ಹೇಳಿದನು. ಆಗ ಗೊಲ್ಲರು ತನ್ನನ್ನು ಕೊಲ್ಲಬೇಕೆಂದು ಮಾಡಿದ್ದ ಸಂಚು ಅದರ ನೆನಪಿಗೆ ಬಂದಿತು. ಗುರುಗಳೇ, ನಿಜ, 'ಈಗ ನೆನಪಾಯಿತು; ಒಂದು ದಿನ ಗೊಲ್ಲರು ನನ್ನನ್ನು ಕೊಲ್ಲುವುದಕ್ಕೆ ಬಂದರು. ನನ್ನ ಮನಸ್ಸು ಬದಲಾಯಿಸಿಹೋಗಿದೆ. ನಾನು ಆರನ್ನೂ ಕಚ್ಚುವುದಿಲ್ಲ. ಅವ ವಿಧವಾದ ಅನಿಷ್ಟವನ್ನೂ ಉಂಟುಮಾಡುವುದಿಲ್ಲ, ಎಂಬುದನ್ನು ಅವರೇನ ಬಲ್ಲರು?' ಎಂದು ಹೇಳಿತು. ಅದನ್ನು ಕೇಳಿ ಬ್ರಹ್ಮಚಾರಿಯು, 'ಛೀ, ಭ್ರಷ್ಟ, ನಿನ್ನನ್ನು ರಕ್ಷಿಸಿಕೊಳ್ಳುವುದಕ್ಕೇ ನಿನಗೆ ತಿಳಿಯದೇ? ನೀನು

ಯಾರನ್ನೂ ಕಚ್ಚಬೇಡವೆಂದು ನಾನು ನಿನಗೆ ಹೇಳಿದೆನು. ಬು[illegible] ಹೆದರಿಸಬೇಡವೆಂದು ಹೇಳಿದೆನೇ ? ಕೇಡ ಮಾಡುವುದಕ್ಕೆ ಬರು[illegible] ಬುಸ್ಸೆಂದು ಎದ್ದು ಹೆದರಿಸಬೇಕು. ಅವರಿಂದ ನಮಗೆ ತೊಂದರೆ[illegible] ದಿರುವುದಕ್ಕೋಸ್ಕರ, ಅವರಿಗೆ ಹೆದರಿಕೆಯನ್ನು ಉಂಟುಮ[illegible] ಅವರ ಮೇಲೆ ವಿಷವನ್ನು ಕಾರಿ, ಅವರಿಗೆ ಹಿಂಸೆಯನ್ನು, ನೀನ[illegible]ಡ ಬಾರದು', ಎಂದು ಹೇಳಿದನು.

(ಎಲ್ಲ ಜನರೂ ಒಂದೇ ರೀತಿಯಲ್ಲ)

ಶ್ರೀರಾಮಕೃಷ್ಣ :—ಈಶ್ವರಸೃಷ್ಟಿಯಲ್ಲಿ, ನಾನಾವಿಧವಾದ ಜೀವಜಂತು, ವೃಕ್ಷ ಮುಂತಾದುವುಗಳಿವೆ. ಪ್ರಾಣಿಗಳೊಳಗೆ ಒಳ್ಳೆಯವೂ ಉಂಟು; ಕೆಟ್ಟವೂ ಉಂಟು; ಹುಲಿಯಂತೆ ಹಿಂಸ್ರಜಂತುಗಳೂ ಇವೆ, ಅಮೃತ ದಂತಿರುವ ಫಲವನ್ನು ಕೊಡುವ ವೃಕ್ಷಗಳೂ ಇವೆ, ವಿಷಯಮಯವಾದ ಫಲವನ್ನು ಬಿಡುವ ವೃಕ್ಷಗಳೂ ಇವೆ. ಹಾಗೆಯೇ ಜನರಲ್ಲಿಯೂ ಒಳ್ಳೆ ಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಸಾಧುಗಳೂ ಇರುತ್ತಾರೆ, ಅಸಾಧುಗಳೂ ಇರುತ್ತಾರೆ; ಸಂಸಾರಿಗಳೂ ಉಂಟು, ಭಕ್ತರೂ ಉಂಟು.

ಜೀವರು ನಿತ್ಯ, ಬದ್ಧ, ಮುಕ್ತ, ಮುಮುಕ್ಷು,' ಎಂಬ ನಾಲ್ಕು ಬಗೆಯಾಗಿ ದ್ದಾರೆ. ನಾರದಾದಿಗಳು ನಿತ್ಯಜೀವರು. ಇವರು ಸಂಸಾರವನ್ನು ತ್ಯಜಿಸಿ, ಜೀವರ ಮಂಗಲಕ್ಕಾಗಿಯೇ, ಎಂದರೆ, ಜೀವರಿಗೆ ಸನ್ಮಾರ್ಗವನ್ನು ಉಪ ದೇಶಿಸುವುದಕ್ಕಾಗಿಯೇ ಅವತರಿಸುತ್ತಾರೆ.

ಕೇವಲ ವಿಷಯದಲ್ಲಿಯೇ ಆಸಕ್ತರಾಗಿ, ಭಗವಂತನನ್ನು ಮರೆತು, ಅವನ ಚಿಂತೆ ಯನ್ನು ಮಾಡದಿರುವ ಜೀವರೇ ಬದ್ಧರು.

ಮುಕ್ತಿಯಾಗಬೇಕೆಂದು ಬಯಸುವವರು ಮುಮುಕ್ಷುಜೀವರು. ಅವರಲ್ಲಿ ಕೆಲವರಿಗೆ ಮುಕ್ತಿಯು ದೊರೆಯುವುದು, ಕೆಲವರಿಗೆ ಈ ಜನ್ಮದಲ್ಲಿ ಸಿಕ್ಕುವುದಿಲ್ಲ.

ಸಂಸಾರದೊಳಗೆ ಕಾಮಿನೀ ಕಾಂಚನಗಳಿಂದ ಬದ್ಧರಾಗದೆ, ಸಾಧು ಮಹಾತ್ಮ ರಂತೆ ವಿಷಯಚಿಂತೆಯನ್ನು ಮನಸ್ಸಿನಲ್ಲಿ ಇಡದೆ, ಸದಾ ಹರಿಪಾದಪದ್ಮ ಗಳನ್ನು ಚಿಂತಿಸುತ್ತಿರುವವರೇ ಮುಕ್ತರೆನ್ನಿಸಿಕೊಳ್ಳುತ್ತಾರೆ.

ಕೊಳದಲ್ಲಿ ಬಲೆಯನ್ನು ಬೀಸಿದರೆ, ಕೆಲವು ಮೀನುಗಳು ಅದರಲ್ಲಿ ಬೀಳುವುದೇ ಇಲ್ಲ. ಇವನ್ನು ನಿತ್ಯಜೀವರಿಗೆ ಉಪಮೆಯೆನ್ನಬಹುದು. ತುಂಬ ಮೀನು

ಗಳು ಬಲೆಗೆ ಬೀಳುತ್ತವೆ. ಅವುಗಳಲ್ಲಿ ಕೆಲವು ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡುತ್ತವೆ. ಅವುಗಳೇ ಮುಮುಕ್ಷುಜೀವರಿಗೆ ಉಪಮೆಯೆನ್ನಬಹುದು. ಹಲವಕ್ಕೆ ತಪ್ಪಿಸಿಕೊಂಡುಹೋಗುವುದಕ್ಕೆ ಆಗುವುದೇ [illegible]ಲ. ಅವು ತಪ್ಪಿಸಿಕೊಂಡು ಹೋಗುವುದಕ್ಕೆ ಯತ್ನಿಸುವುದೂ ಇಲ್ಲ. [illegible] ಬಲೆಯನ್ನು ಕಚ್ಚಿಕೊಂಡು ಹೋಗಿ, ಕೆಸರಲ್ಲಿ ಮೂತಿಯನ್ನು [illegible], 'ಇನ್ನು ನಮಗೇನು ಭಯ; ನಾವು ನೆಮ್ಮದಿಯಾಗಿದ್ದೇವೆ' ಎಂದು [illegible]ಕೊಂಡಿರುತ್ತವೆ. ಬೆಸ್ತರು ಬಲೆಯನ್ನು ನೀರಿನಿಂದೆಳೆದು ನೆಲದ ಮೇಲೆ ಹಾಕುತ್ತಾರೆಂದು ಅವು ಅರಿಯವು. ಅವುಗಳನ್ನು ಬದ್ಧಜೀವರಿಗೆ ಹೋಲಿಸಬಹುದು.

(ಸಂಸಾರಿಗಳೂ ಬದ್ಧಜೀವರೂ)

ಬದ್ಧಜೀವರು, ಸಂಸಾರದಲ್ಲಿ ಕಾಮಿನೀಕಾಂಚನಗಳಿಂದ ಕೈಕಾಲುಗಳು ಕಟ್ಟಲ್ಪಟ್ಟವರಾಗಿ, 'ಈ ಸಂಸಾರದೊಳಗೆ ಕಾಮಿನೀಕಾಂಚನಗಳಿಂದಲೇ ನಮಗೆ ಸುಖವುಂಟಾಗುತ್ತದೆ; ಮತ್ತಾವ ಭಯವೂ ಇಲ್ಲ' ಎಂದು ತಿಳಿದುಕೊಳ್ಳುತ್ತಾರೆ. ಇದರಿಂದಲೇ ತಮಗೆ ಮೃತ್ಯುವುಂಟಾಗುವುದೆಂಬುದನ್ನು ಅವರು ಅರಿಯರು. ಬದ್ಧಜೀವನು ಸಾಯುವಾಗ, ಅವನ ಹೆಂಡತಿಯು 'ಅಯ್ಯೋ, ನೀವೇನೋ ಹೊರಟುಹೋಗುತ್ತೀರಿ; ನನಗೇನು ಗತಿ' ಎಂದು ಗೋಳಿಡುತ್ತಾಳೆ. ಮರಣೋನ್ಮುಖನಾದ ಜೀವನು, 'ಅಯ್ಯೋ, ಇದೇಕೆ ದೀಪವು ಇಷ್ಟು ದೊಡ್ಡದಾಗಿ ಉರಿಯುತ್ತಿದೆ, ಬತ್ತಿಯನ್ನು ಕೊಂಚ ಒಳಕ್ಕೆ ಎಳೆಯಿರಿ' ಎಂದು ಸನ್ನೆಮಾಡುತ್ತಾನೆ. ಅಹಹಾ! ಇದೆಂಥ ಮಾಯೆ? ಅವರು ಈಶ್ವರಚಿಂತೆಯನ್ನು ಮಾಡುವುದೇ ಇಲ್ಲ, ಸಮಯವುಸಿಕ್ಕಿದರೂ, ಕಂಡಕಂಡ ಪೊಳ್ಳುಹರಟೆಗಳನ್ನು ಹೊಡೆಯುತ್ತಾರೆ. ಇಲ್ಲವಿದ್ದರೆ, ಕೆಲಸಕ್ಕೆ ಬಾರದ ಕಾರ್ಯಗಳನ್ನು ಮಾಡುತ್ತಾರೆ. 'ಇದೇನು?' ಎಂದು ಕೇಳಿದರೆ, 'ನಮಗೆ ಸುಮ್ಮನಿರುವುದಕ್ಕೆ ಆಗುವುದಿಲ್ಲ; ಬೇಲಿಯನ್ನು ಕಟ್ಟುತ್ತೇವೆ' ಎಂದು ಹೇಳುತ್ತಾರೆ, ಇಲ್ಲದಿದ್ದರೆ ಇಸಪೇಟನ್ನಾದರೂ ಆಡುತ್ತ ಹೊತ್ತನ್ನು ಕಳೆದುಬಿಡುತ್ತಾರೆ. (ಎಲ್ಲರೂ ಸ್ತಬ್ಧರಾಗಿದ್ದಾರೆ.)

ಆರನೆಯ ಪರಿಚ್ಛೇದ

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ ॥
ಅಸಮ್ಮೂಢಸ್ಸಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥

[ಆವನು ಭಗವಂತನಾದ ನನ್ನನ್ನು ಜನ್ಮರಹಿತನೆಂದೂ, ... ಲೋಕಮಹೇಶ್ವರನೆಂದೂ, ತಿಳಿಯುತ್ತಾನೆಯೋ, ಅವನು ಮೂಢನ... ಪಾಪಗಳಿಂದಲೂ ಬಿಡಲ್ಪಡುತ್ತಾನೆ.]

(ಉಪಾಯ, ವಿಶ್ವಾಸ)

ಒಬ್ಬ ಭಕ್ತ :—ಮಹಾಶಯರೇ, ಈ ರೀತಿಯಾದ ಸಂಸಾರಿಗಳು ಉತ್ತಾರಣೆಯಾಗುವುದಕ್ಕೆ ಉಪಾಯವಾವುದೂ ಇಲ್ಲವೋ?

ಶ್ರೀರಾಮಕೃಷ್ಣ :—ಇಲ್ಲದೆಯೇನು ? ಆಗಾಗ ನಿರ್ಜನದಲ್ಲಿದ್ದುಕೊಂಡು ಸಾಧುಸಂಗವನ್ನೂ, ಭಗವಂತನ ಧ್ಯಾನವನ್ನೂ, ಸದಸದ್ವಿಚಾರವನ್ನೂ ಮಾಡಬೇಕು. 'ನನಗೆ ಭಕ್ತಿಯನ್ನೂ, ವಿಶ್ವಾಸವನ್ನೂ ಅನುಗ್ರಹಿಸು' ಎಂದು ಭಗವಂತನಲ್ಲಿ ಮೊರೆಯಿಡಬೇಕು. ಭಗವಂತನನ್ನು ಪಡೆಯುವುದಕ್ಕೆ ವಿಶ್ವಾಸವೊಂದಿದ್ದರೆ ಸಾಕು. ಅದಕ್ಕಿಂತ ಹೆಚ್ಚಾದ ವಸ್ತುವೇ ಇಲ್ಲ.

(ಕೇದಾರನನ್ನು ನೋಡಿ,) ವಿಶ್ವಾಸದಲ್ಲಿ ಎಷ್ಟು ಶಕ್ತಿಯುಂಟು, ಬಲ್ಲೆಯಾ? ಶ್ರೀರಾಮಚಂದ್ರನು ಸ್ವಯಂ ಪೂರ್ಣಬ್ರಹ್ಮನಾದ ನಾರಾಯಣನು; ಲಂಕೆಗೆ ಹೋಗುವುದಕ್ಕೋಸ್ಕರ ಅವನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದನು. ಆದರೆ, ರಾಮನಾಮದಲ್ಲಿ ಅತಿಶಯವಾದ ವಿಶ್ವಾಸವಿದ್ದುದರಿಂದ, ಸೇತುವಿಲ್ಲದೆಯೇ ಹನುಮಂತನು ಸಮುದ್ರವನ್ನು ದಾಟಿಬಿಟ್ಟನು, ಎಂಬ ದಾಗಿ ಪುರಾಣದಲ್ಲಿ ಹೇಳಿರುತ್ತದೆ. (ಎಲ್ಲರೂ ನಗುತ್ತಾರೆ.)

ಒಬ್ಬನು ಲಂಕೆಯಿಂದ ಸಮುದ್ರವನ್ನು ಹಾದುಕೊಂಡು ಬರಬೇಕಾಯಿತು. ವಿಭೀಷಣನು ಒಂದು ಪತ್ರದ ಮೇಲೆ ರಾಮನಾಮವನ್ನು ಬರೆದು, ಆ ಪತ್ರವನ್ನು ಆ ಮನುಷ್ಯನ ಬಟ್ಟೆಯ ಕೊನೆಯಲ್ಲಿ ಗಂಟು ಹಾಕಿ, 'ಇನ್ನು ನೀನೇನೂ ಅಂಜಬೇಡ; ದೃಢವಾಗಿ ವಿಶ್ವಾಸವಿಟ್ಟುಕೊಂಡು ಹೊರಡು, ನೀರಿನ ಮೇಲೆ ನಡೆದುಕೊಂಡು ಹೊರಟು ಹೋಗಬಹುದು. ಆದರೆ ನೋಡಿಕೋ, ನೀನೇನಾದರೂ ಅವಿಶ್ವಾಸಮಾಡಿದರೆ ಒಡನೆಯೇ ನೀರಲ್ಲಿ

ಮುಳುಗಿಹೋಗುತ್ತೀಯೆ' ಎಂದು ಹೇಳಿ ಕಳುಹಿದನು. ಆ ಮನುಷ್ಯನು ಅದೇ ಮೇರೆ, ನೀರಿನ ಮೇಲೆ ಸುಖವಾಗಿ ನಡೆದು ಹೋದನು. ಸ್ವಲ್ಪದೂರ ಹೋದ ಮೇಲೆ, 'ವಿಭೀಷಣನು ನನ್ನ ಬಟ್ಟೆಯಲ್ಲಿ ಏನನ್ನು ಕಟ್ಟಿ ಹಾಕಿದ್ದಾನೆ, ನೋಡಬೇಕು', ಎಂದು ಅವನಿಗೆ ಅತಿಶಯವಾದ ಕುತೂಹಲವುಂಟಾಯಿತು. ಗಂಟನ್ನು ಬಿಚ್ಚಿ, ಪತ್ರವನ್ನು ತೆಗೆದು ನೋಡಿದನ್ನು ಮೇಲೆ ಅದರಲ್ಲಿ 'ರಾಮ' ಎಂದು ಬರೆದಿದ್ದಿತು. ಅದನ್ನು ಕಂಡು ಅವನು, 'ಛೇ! ಇಷ್ಟೇಯೇ! ಬರಿಯ ರಾಮನಾಮವಿದೆ', ಎಂದು ಆಲೋಚನೆಮಾಡಿದನು. ಈ ರೀತಿ ಅವಿಶ್ವಾಸಮಾಡಿದುದರಿಂದ ಅವನು ಒಡನೆಯೇ ನೀರಿನಲ್ಲಿ ಮುಳುಗಿಹೋದನು.

ಭಗವಂತನಲ್ಲಿ ದೃಢವಾದ ವಿಶ್ವಾಸವುಳ್ಳವನು ಗೋ ಬ್ರಾಹ್ಮಣ ಸ್ತ್ರೀವಧೆಗಳನ್ನು ಮಾಡಿದ್ದರೂ, ಆ ವಿಶ್ವಾಸದ ಬಲದಿಂದ, ಪಾಪಗಳ ದೆಸೆಯಿಂದ ಬಿಡುಗಡೆಯನ್ನು ಪಡೆಯುತ್ತಾರೆ. ಅಂಥವನು, 'ಮುಂದೆ ನಾನು ಇನ್ನಾವ ಪಾಪವನ್ನು ಮಾಡುವುದಿಲ್ಲ', ಎಂದು ಹೇಳಿಬಿಟ್ಟರೆ ಸಾಕು. ಅವನಿಗೆ ಆವ ಭಯವೂ ಇರುವುದಿಲ್ಲ, ಎಂದು ಹೇಳುತ್ತ, ಭಗವಾನರು ಈ ರೀತಿ ಹಾಡತೊಡಗಿದರು.

"ಸ್ವಾಮಿದೇವನೆ ಲೋಕಪಾಲನೆ" ಎಂಬಂತೆ

ದುರ್ಗೆ ದುರ್ಗೇ ದುರ್ಗೆಯೆನುತೆ ಭರ್ಗಜಾಯೆ ನಾನು ಸಾಯೆ।
ದುರ್ಗತನನು ಪೊರೆಯದೆಂತು। ನಿರ್ಗಮಿಸುವೆ ಹೇಳು ತಾಯೆ॥
ಸ್ತ್ರೈಣಹತ್ಯೆ ವಿಪ್ರವಧೆಯು। ಭ್ರೂಣಹತ್ಯೆ ಮದ್ಯಪಾನ।
ಧೇನುವಧೆಯು ಬಹುಳಪಾಪ। ವೇನ ಮಾಡಲರಿವುವೆನ್ನ॥

(ನರೇಂದ್ರನೂ ಹೋಮಾಪಕ್ಷಿಯೂ)

ಕೆಟ್ಟ ಹುಡುಗನು ತಂದೆಯ ಹತ್ತಿರ ಸಾಧುವಿನಂತೆ ಇರುತ್ತಾನೆ. ಮಂಟಪದಲ್ಲಿ ಆಡುವಾಗ ಅವನಿರುವ ರೀತಿಯೇ ಬೇರೆ. (ನರೇಂದ್ರನನ್ನು ತೋರಿಸಿ) ಈ ಹುಡುಗರನ್ನು ನೋಡು. ಇವರ ರೀತಿಯೇ ಬೇರೆ. ಇವರು ನಿತ್ಯಸಿದ್ಧರು, ಆವಾಗಲೂ ಸಂಸಾರದಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಇವರು ಚಿಕ್ಕಂದಿನಲ್ಲಿಯೇ ಜಾಣರಾಗಿ ಭಗವಂತನ ಕಡೆಗೆ ಹೋಗುತ್ತಿದ್ದಾರೆ. ಜೀವರನ್ನು ಉದ್ಧರಿಸುವುದಕ್ಕೋಸ್ಕರ ಇವರು ಸಂಸಾರಕ್ಕೆ ಬರುತ್ತಾರೆ. ವಸ್ತುತಃ ಇವರಿಗೆ ಸಂಸಾರದಲ್ಲಿ ಆಸಕ್ತಿಯಿರುವುದಿಲ್ಲ. ಇವರಿಗೆ ಕಾಮಿನೀಕಾಂಚನಗಳಲ್ಲಿ ಆವಾಗಲೂ ಆಸೆಯೇ ಇಲ್ಲ.

ವೇದದಲ್ಲಿ ಹೋಮಾಪಕ್ಷಿಯ ಕಥೆಯಿದೆ. ಅದು ಆಕಾಶದಲ್ಲಿ ಬಲು ಮೇಲೆ ಹಾರುತ್ತಿದೆ. ಅಲ್ಲಿಯೇ ಮೊಟ್ಟೆಯನ್ನು ಹಾಕುತ್ತದೆ. ಹುಟ್ಟಿದೊಡನೆಯೇ

ಮೊಟ್ಟೆಯು ಕೆಳಗೆ ಬೀಳುತ್ತದೆ. ಈ ರೀತಿ ಅದು ಅನೇಕದಿವಸಗ[illegible]ಗೆ ಬೀಳುತ್ತಲೇ ಇರುತ್ತದೆ. ಬೀಳುವಾಗಲೇ ಮೊಟ್ಟೆಯೊಡೆದು ಮರಿ[illegible]ಗುತ್ತದೆ. ಮೊಟ್ಟೆಯಿಂದ ಹೊರಗೆ ಬಂದ ಕೂಡಲೇ, ಮರಿಯು [illegible]ರಿಯುತ್ತದೆ. ಅದಕ್ಕೆ ರೆಕ್ಕೆಗಳೂ ಹುಟ್ಟುತ್ತವೆ. ಆದರ[illegible]ಇ[illegible]ತ್ತಲೇ ಇದೆ. 'ನಾನು ನೆಲದ ಮೇಲೆ ಬಿದ್ದರೆ ಚೂ[illegible], ನನ್ನ[illegible]ೀಸೆ', ಎಂದು ಅದು ತಿಳಿದುಕೊಂಡು, ನೆಲವನ್ನು ನೋಕುವ[illegible]ನಿಸ್ಸಾಗನ[illegible]ದಲೇ ಮೇಲಕ್ಕೆ ಹಾರಿ, ತಾಯ ಬಳಿಗೆ ಹೋಗಿ ಸೇರಿಕೊಳ್ಳುತ್ತದೆ.

ನರೇಂದ್ರನು ಎದ್ದುಹೋದನು.

ಸಭೆಯಲ್ಲಿ ಕೇದಾರ, ಪ್ರಾಣಕೃಷ್ಣ, ಮಾಸ್ಟರ್ ಮುಂತಾದ ಬಹುಜನರು ಇದ್ದರು.

ಶ್ರೀರಾಮಕೃಷ್ಣ:—ನರೇಂದ್ರನು ಓದುವುದರಲ್ಲಿಯೂ, ಹಾಡುವುದರಲ್ಲಿಯೂ, ಬಾಜಿಸುವುದರಲ್ಲಿಯೂ, ತುಂಬ ಜಾಣನು. ಆ ದಿನ ಅವನು ಕೇದಾರನೊಡನೆ ತರ್ಕಮಾಡುತ್ತ, ಅವನ ಪೂರ್ವಪಕ್ಷಗಳನ್ನೆಲ್ಲ ಖಂಡಿಸಿಬಿಟ್ಟನು. (ಭಗವಾನರೂ ಮಿಕ್ಕವರೂ ನಗುತ್ತಾರೆ.)

(ಮಾಸ್ಟರನ್ನು ನೋಡಿ), ಇಂಗ್ಲೀಷಿನಲ್ಲಿ ತರ್ಕಶಾಸ್ತ್ರದ ಗ್ರಂಥಗಳಿವೆಯೋ ?

ಮಾಸ್ಟರು :—ಸ್ವಾಮೀ, ಇವೆ.

ಶ್ರೀರಾಮಕೃಷ್ಣ :—ಅಯ್ಯ, ಅವು ಹೇಗಿವೆ ಹೇಳು, ಕೇಳೋಣ.

ಮಾಸ್ಟರು:—(ಈಗ ಕಷ್ಟದಲ್ಲಿ ತೊಡಕಿಕೊಂಡನು) ಭಗವಾನರನ್ನು ನೋಡಿ, ಸ್ವಾಮೀ, ಸಾಧಾರಣಸಿದ್ಧಾಂತದಿಂದ ವಿಶೇಷಸಿದ್ಧಾಂತವನ್ನು ಸಾಧಿಸುವುದು ಒಂದು ರೀತಿ. ಹೇಗೆಂದರೆ, ಮನುಷ್ಯರೆಲ್ಲರೂ ಸಾಯುತ್ತಾರೆ, ಪಂಡಿತರು ಮನುಷ್ಯರು, ಆದುದರಿಂದ ಪಂಡಿತರೂ ಸಾಯುತ್ತಾರೆ. ಇದಲ್ಲದೆ ವಿಶೇಷವ್ಯಾಪ್ತಿಯಿಂದ ಸಾಧಾರಣಸಿದ್ಧಾಂತವನ್ನು ಸಾಧಿಸುವುದು, ಎಂಬ ಮತ್ತೊಂದು ರೀತಿಯೂ ಉಂಟು. ಹೇಗೆಂದರೆ, ಈ ಕಾಗೆಯೂ ಕಪ್ಪು, ಆ ಕಾಗೆಯೂ ಕಪ್ಪು, ಆವ ಕಾಗೆಯನ್ನು ನೋಡಿದರೂ ಕಪ್ಪು, ಆದುದರಿಂದ ಕಾಗೆಗಳೆಲ್ಲವೂ ಕಪ್ಪು. ಈ ಸಿದ್ಧಾಂತಕ್ಕೆ ಅವ್ಯಾಪ್ತಿಯುಂಟಾಗಬಹುದು. ಹುಡುಕುತ್ತ ಹೋದರೆ, ಎಲ್ಲಿಯಾದರೂ ಒಂದು ಬಿಳಿಯ ಕಾಗೆಯು ಸಿಕ್ಕಿದರೂ ಸಿಕ್ಕಬಹುದು.

ಸಾಧಾರಣಸಿದ್ಧಾಂತದಿಂದ ವಿಶೇಷಸಿದ್ಧಾಂತಕ್ಕೆ ಇನ್ನೂ ಒಂದು ದೃಷ್ಟಾಂತವಿದೆ. ಅದೇನೆಂದರೆ, ಮಳೆ ಬೀಳುವ ಕಡೆ ಮೋಡವಿದೆ, ಅಥವಾ ಇದ್ದಿತು.

[illegible] ಇಲ್ಲಿ ಮಳೆ ಬೀಳುತ್ತದೆ, ಆದುದರಿಂದ ಇಲ್ಲಿ ಮೋಡವಿದೆ. ಈ ರೀತಿ ಹೇಳು ವುದು ಸಾಧಾರಣಸಿದ್ಧಾಂತ, ವಿಶೇಷದಿಂದ ಸಾಧಾರಣಕ್ಕೆ ಇನ್ನೊಂದು ಬಗೆಯ ದೃಷ್ಟಾಂತವಿದೆ. ಅದೇನೆಂದರೆ, ಈ ಮನುಷ್ಯನಿಗೆ ಮೂವತ್ತೆರಡು ಹಲ್ಲುಗಳಿವೆ. ಮತ್ತಾವನನ್ನು ನೋಡಿದರೂ ಅವನಿಗೂ ಮೂವತ್ತೆರಡು [illegible]ಗಳಿವೆ. ಆದುದರಿಂದ ಎಲ್ಲರಿಗೂ ಮೂವತ್ತೆರಡು ಹಲ್ಲುಗಳಿವೆ, ಎಂಬ [illegible]ದ ಸಿದ್ಧಾಂತಗಳ ವಿಚಾರವು ಇಂಗ್ಲೀಷರ ನ್ಯಾಯಶಾಸ್ತ್ರದಲ್ಲಿ ಇರು [illegible]

ಶ್ರೀರಾಮಕೃಷ್ಣರು ಪ್ರಶ್ನೆಯನ್ನು ಮಟ್ಟಿಗೆ ಹಾಕಿದರು. ಮಾಸ್ಟರ ಉತ್ತರ ವನ್ನು ಕೇಳುತ್ತ, ಅವರು ಅನ್ಯಮನಸ್ಕರಾಗಿ ಹೋದರು. ಆದುದರಿಂದ, ಆ ವಿಚಾರ ದಲ್ಲಿ ಬೇರೆ ಆವ ಮಾತೂ ನಡೆಯಲಿಲ್ಲ.

ಏಳನೆಯ ಪರಿಚ್ಛೇದ

ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥ ಗೀತಾ. ೨-೫೩

[ಶಾಸ್ತ್ರಾರ್ಥಗಳನ್ನು ಕೇಳಿ, ಅವುಗಳಂತೆ ಆಚರಿಸಿ, ವಿವೇಕದಿಂದೊಡಗೂಡಿದ ನಿನ್ನ ಬುದ್ಧಿಯು ಯಾವಾಗ ಏಕರೂಪವಾಗಿ ನಿಲ್ಲುವುದೋ, ಆಗ ಜ್ಞಾನಯೋಗವೆಂಬ ಆತ್ಮಸಾಕ್ಷಾತ್ಕಾರವನ್ನು ಹೊಂದುತ್ತೀಯೆ.]

ಸಮಾಧಿ.

ಸಭೆಯು ಪೂರೈಸಿತು. ಭಕ್ತರು ಇಲ್ಲಿಯೂ ಅಲ್ಲಿಯೂ ತಿರುಗಾಡುತ್ತಿದ್ದಾರೆ. ಮಾಸ್ಟರು ಪಂಚವಟೀ ಮುಂತಾದ ಕಡೆ ಸುತ್ತುತ್ತಿದ್ದಾನೆ. ಸುಮಾರು ಐದು ಗಂಟೆಯ ಹೊತ್ತು. ಅವನು ಕೊಂಚ ಹೊತ್ತಿನ ಮೇಲೆ ಶ್ರೀರಾಮಕೃಷ್ಣರವರ ಕೊಟಡಿಯ ಬಳಿಗೆ ಬಂದು ನೋಡಿದನು. ಅದರ ಉತ್ತರಪಾರ್ಶ್ವದ ಸಣ್ಣ ವಾರಂಡದಲ್ಲಿ ಒಂದು ಅದ್ಭುತವ್ಯಾಪಾರವು ನಡೆಯುತ್ತಲಿದ್ದಿತು.

ಶ್ರೀರಾಮಕೃಷ್ಣರವರು ಅಲುಗಾಡದೆ ನಿಂತಿದ್ದಾರೆ. ನರೇಂದ್ರನು ಹಾಡುತ್ತಿ ದ್ದಾನೆ. ಮೂರು ನಾಲ್ಕು ಜನ ಭಕ್ತರು ನಿಂತುಕೊಂಡಿದ್ದಾರೆ. ಮಾಸ್ಟರು ಗಾನ

ದಿಂದ ಆಕೃಷ್ಟನಾಗಿ, ಅಲ್ಲಿಗೆ ಬಂದು ಸೇರಿದನು. ಭಗವಾನರ ದಿವ್ಯಗಾ... ಹೊರತು, ಇಂಥ ಮಧುರಕಂಠವನ್ನು ಅವನು ಎಲ್ಲಿಯೂ, ಎಂದೂ ಕೇಳಿ... ಅವನು ಭಗವಾನರನ್ನು ಕಂಡು ಆಶ್ಚರ್ಯಪಟ್ಟನು. ಅವರು ಅಲ್ಲಾಡದೆ ನಿಂ... ಕಣ್ಣಿನ ಎವೆಗಳು ಆಡುತ್ತಿರಲಿಲ್ಲ. ಉಸಿರು ಆಡುತ್ತಿದೆಯೋ, ಇಲ್ಲವೋ... ಇದ್ದಿತು. ಇದೇನೆಂದು ಒಬ್ಬನನ್ನು ಕೇಳಲಾಗಿ, ಇದು ಸಮಾಧಿ..., ನನ್ನ... ಹೇಳಿದನು. ಇದನ್ನು ಮಾಸ್ಟರು ಎಂದೂ ನೋಡಿದವನಲ್ಲ; ಕೇ...ನನ್ನಾಗನ...ಇಲ್ಲ. ಭಗವಂತನನ್ನು ಧ್ಯಾನಮಾಡಿದರೆ, ಮನುಷ್ಯನು ಈ ರೀತಿ ಬಾಹ್ಯ... ಗುವು ದುಂಟೇ?, ಎಂದು ಅವನು ಅತ್ಯಾಶ್ಚರ್ಯದಿಂದ ಆಲೋಚಿಸುತ್ತಿದ್ದನು.

ಭಕ್ತಿವಿಶ್ವಾಸಗಳು ಎಷ್ಟರ ಮಟ್ಟಿಗೆ ಹೆಚ್ಚಿದರೆ, ಈ ರೀತಿ ಬಾಹ್ಯಶೂನ್ಯರಾಗು ತ್ತಾರೆ, ಎಂಬುದನ್ನು ಮಾಸ್ಟರು ಅರಿಯನು.

ನೆನೆ ನೆನೆ ಮನವೆ ಚಿದ್ಘನನ ನಿರಂಜನ। ನನು ನವರಾಗರಂಜಿತನ॥
ಅನುಪಮತೇಜನ ನಿಂದಿತಕೋಟಿ ಚಂ। ದ್ರನನು ಮೋಹನಮೂರ್ತಿ ಹರಿಯ॥
ಭಜಕ ಮನೋರಂಜಕನನು ನೋಳ್ಪೊಡೆ। ವಿಜಿತಸೌದಾಮಿನೀಪ್ರಭನ।
ನಿಜದಿಂದೆ ಪುಳಕಕಂಪನಗಳನೊದವಿಸಿ। ಸುಜನರ ನಲಿದಾಡಿಸುವನ॥

ಈ ಹಾಡಿನ ನಾಲ್ಕನೆಯ ನುಡಿಯನ್ನು ಹೇಳುತ್ತಿರುವಾಗ ಭಗವಾನರ ಮೆಯ್ಯು ಕಂಪಿಸಿತು. ಅವರಿಗೆ ರೋಮಾಂಚವುಂಟಾಯಿತು. ಕಣ್ಣುಗಳಿಂದ ಆನಂದಬಾಷ್ಪವು ಹರಿಯುತ್ತಿದ್ದಿತು. ಅವರು ಆಗಾಗ ಆವುದನ್ನೋ ಕಂಡು ನಗುತ್ತಿದ್ದರು. ಶಶಿಕೋಟಿ ವಿನಿಂದಿತವಾಗಿಯೂ, ಅಸದೃಶವಾಗಿಯೂ, ಇರುವ ರೂಪವನ್ನು ಅವರು ದರ್ಶನ ಮಾಡುತ್ತಿದ್ದಾರೆಯೋ! ಭಗವಂತನ ಚಿನ್ಮಯರೂಪವನ್ನು ದರ್ಶಿಸುತ್ತಾ ಇದ್ದಾ ರೆಯೋ! ಎಷ್ಟು ಸಾಧನೆ ಮಾಡಿದರೆ, ಎಷ್ಟು ತಪವನ್ನು ಮಾಡಿದರೆ, ಎಷ್ಟು ಭಕ್ತಿ ವಿಶ್ವಾಸಗಳಿದ್ದರೆ, ಭಗವಂತನ ಈ ತೆರದ ದರ್ಶನವಾದೀತು! ಮತ್ತೆ ಗಾನ ವಾಗುತ್ತಿದೆ.

ಚೇತಃ ಕಮಲಾಸನದೊಳಗಾತನ। ಪಾಥೋಜಸಮಪದಯುಗವ।
ಆತು ಶಾಂತಿಯನೊಂದೆ ನಯನದೊಳಾನಂದ। ಜಾತಾಂಬುಗಳನು ಸೂಸಿಸುವ॥

ಮರಳಿ ಅದೇ ಭುವನಮೋಹಕವಾದ ನಗೆ. ಅದೇ ತೆರದಲ್ಲಿ ಶರೀರವು ನಿಶ್ಚಂಚ ಲವಾಗಿದೆ. ಕಣ್ಣ ರೆಪ್ಪೆಗಳು ಹೊಡೆಯುವುದಿಲ್ಲ. ಮತ್ತೆ ಅವರು ಆ ಅಪೂರ್ವವಾದ ರೂಪವನ್ನು ಕಾಣುತ್ತಿದ್ದಾರೆಯೋ? ಇಲ್ಲವೇ, ಆ ರೂಪದರ್ಶನದಿಂದುಂಟಾದ ಆನಂದಸಾಗರದಲ್ಲಿ ತೇಲುತ್ತಿದ್ದಾರೆಯೋ? ನರೇಂದ್ರನು ಮತ್ತೆ ಹಾಡಿದನು.

ಬೇಗ ಚಿದಾನಂದಸಾಗರದೊಳು ಭಕ್ತಿ। ಯೋಗಾವೇಶದೆ ಬಂದು।
ಏಗಳುಂ ಮೂಡಿ ಮುಳ್ಗಾಡುವ ನೃಪನು। ರಾಗದೊಳನುಗೊಳಿಸುವನ॥

ವನ್ನ ... ಮಾಧಿಯ ಮತ್ತು ಪ್ರೇಮಾನಂದದ ಈ ಅದ್ಭುತ ಚಿತ್ರವನ್ನು ಮನದಲ್ಲಿ ಇಟ್ಟು ... ಮಾಸ್ಟರು ತನ್ನ ಮನೆಗೆ ಹೋದನು. ಅವನಿಗೆ ಅಡಿಗಡಿಗೂ ಹೃದಯೋ ... ಕಾರಿಯಾದ ಹಾಡಿನ

...ಗ ಚಿದಾನಂದಸಾಗರದೊಳು ಭಕ್ತಿ। ಯೋಗಾವೇಶದ ಬಂದು।
... ಮೂಡಿ ಮುಳ್ಕಾಡುವಸ್ವೈಪನು। ರಾಗದೊಳನುಗೊಳಿಸುವನ।

...ಕ್ಕನೆಯ ನುಡಿಯು ನೆನಪಿಗೆ ಬರುತ್ತಲಿದ್ದಿತು.

ಎಂಟನೆಯ ಪರಿಚ್ಛೇದ

ಚತುರ್ಥದರ್ಶನ

ಯಂ ಲಬ್ಧ್ವಾಚಾಪರಂ ಲಾಭಂ ಮನ್ಯತೇನಾಧಿಕಂ ತತಃ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ॥ ಗೀತಾ. ೬—೨೨

[ಯೋಗವನ್ನು ಪಡೆದವನು, ಮಿಕ್ಕಾವ ಲಾಭವನ್ನೂ ಯೋಗಕ್ಕಿಂತ ಅಧಿಕವಾದುದೆಂದು ತಿಳಿಯುವುದಿಲ್ಲ; ಯೋಗಿಯು ಬಹು ದುಃಖಕಾರಿಗಳಾದ ವಿಷಯಗಳಿಂದಲೂ ಶೋಚಿಸುವುದಿಲ್ಲ.]

ಮರುದಿವಸವೂ ವಿರಾಮವಿದ್ದಿತು. ಮಾಸ್ಟರು ಮರಳಿ ಮೂರು ಗಂಟೆಯ ವೇಳೆಗೆ ಬಂದನು. ಶ್ರೀರಾಮಕೃಷ್ಣರವರು ಪೂರ್ವಪರಿಚಿತವಾದ ಕೊಟ್ಟಡಿಯಲ್ಲಿ ಕುಳಿತುಕೊಂಡಿದ್ದರು. ನೆಲದ ಮೇಲೆ ಚಾಪೆಯು ಹಾಸಿದ್ದಿತು. ಅದರ ಮೇಲೆ ನರೇಂದ್ರ, ಭವನಾಥ, ಮತ್ತು ಇನ್ನಿಬ್ಬರು ಕುಳಿತುಕೊಂಡಿದ್ದರು. ಅವರೆಲ್ಲರೂ ಹತ್ತೊಂಬತ್ತು ಇಪ್ಪತ್ತು ವಯಸ್ಸಿನ ಹುಡುಗರು.

ಶ್ರೀರಾಮಕೃಷ್ಣರವರು ಚಿಕ್ಕ ಮಂಚದ ಮೇಲೆ ಕುಳಿತು, ಮುಗುಳುನಗೆಯೊಡನೆ, ಅವರ ಸಂಗಡ ಮಾತನಾಡುತ್ತಿದ್ದರು. ಮಾಸ್ಟರು ಒಳಗೆ ಬಂದುದನ್ನು ಕಂಡು, 'ಓಹೋ! ಇವನು ಮತ್ತೆ ಬಂದನು' ಎಂಬದಾಗಿ ಭಗವಾನರು ಆ ಹುಡುಗರಿಗೆ ಹೇಳಿ ನಕ್ಕರು. ಅದನ್ನು ನೋಡಿ ಅವರೆಲ್ಲರೂ ನಕ್ಕರು. ಮಾಸ್ಟರು ಒಳಗೆ ಬಂದು, ಭಗವಾನರಿಗೆ ಸಾಷ್ಟಾಂಗನಮಸ್ಕಾರಮಾಡಿ ಕುಳಿತುಕೊಂಡನು. ಅವನು ಮೊತ್ತ ಮೊದಲು, ನಿಂತುಕೊಂಡು, ಇಂಗ್ಲಿಷಿನವರಂತೆ ಕೈ ಜೋಡಿಸಿ, ನಮಸ್ಕಾರಮಾಡುತ್ತಿದ್ದನು. ಈ ದಿನ ಸಾಷ್ಟಾಂಗನಮಸ್ಕಾರಮಾಡುವುದನ್ನು ಕಲಿತು

ಕೊಂಡನು. ತಾವು ಏತಕ್ಕೆ ನಕ್ಕರೆಂಬುದನ್ನು ಭಗವಾನರು ನರೇಂದ್ರ... ಳಿಗೆ ಹೇಳುತ್ತಿದ್ದರು.

ಶ್ರೀರಾಮಕೃಷ್ಣ:—ಅಪ್ಪಾ! ಕೇಳಿರಿ. ಒಂದು ನವಿಲಿಗೆ ಸಂಜೆಯ ... ಗಂಟೆಯ ಸಮಯದಲ್ಲಿ ಒಂದು ದಿನ ಅಫೀಮನ್ನು ತಿನ್ನಿಸಿದ್ದ... ಮಿನ ಮತ್ತತೆಯನ್ನು ಕೇಳಿದುಕೊಂಡು, ಅದು ನಿತ್ಯವೂ ..., ನನ್ನ ... ಗಂಟೆಯ ಹೊತ್ತಿಗೇ ಬರತೊಡಗಿತು. (ಎಲ್ಲರೂ ನಗ...)

ಇವನು ಸರಿಯಾದ ಮಾತನಾಡುತ್ತಾರೆಂದು ಮಾಸ್ಟರು ತಿಳಿದು...ಕೊಂಡನು. ಮನೆಗೆ ಹೋದರೂ, ಹಗಲೂ ಇರುಳೂ 'ಅವರನ್ನು ಆವಾಗ ನೋಡುತ್ತೇನೆ? ಆವಾಗ ಅವರನ್ನು ಕಾಣುತ್ತೇನೆ?' ಎಂದು ಅವನನ್ನು ಮನಸ್ಸು ಸದಾ ಇತ್ತ ಎಳೆಯುತ್ತಿದ್ದಿತು. ಬೇರೆ ಎಲ್ಲಿಗೆ ಹೋಗುವುದಕ್ಕೂ ಇಷ್ಟವಾಗುತ್ತಿರಲಿಲ್ಲ. ಕಾಲುಗಳು ಅವನನ್ನು ಇತ್ತ ಕಡೆಗೇ ಎಳೆದುಕೊಂಡು ಬರುತ್ತಿದ್ದುವು. 'ಭಗವಾನರು ಹುಡುಗರೊಡನೆ ಸಮವಯಸ್ಕರಂತೆ ಹುಡುಗಾಟವಾಡುತ್ತಿದ್ದಾರೆ', ಎಂದು ಮಾಸ್ಟರು ಮನದಲ್ಲಿ ಭಾವಿಸಿಕೊಂಡನು. ಹಾಸ್ಯದ ತರಂಗಗಳೆದ್ದು ಆನಂದದ ಸಂತೆಯು ಕೂಡಿದಂತಿದ್ದಿತು. ಇದನ್ನು ಕಂಡು ಮಾಸ್ಟರು ತುಂಬ ಅಚ್ಚರಿಗೊಂಡನು.

ನಿನ್ನೆಯ ದಿವಸ ನಾನೆಂದೂ ನೋಡದಿದ್ದ ಸಮಾಧಿಯೂ, ಪ್ರೇಮಾನಂದವೂ, ಇವರಿಗೇ ಉಂಟಾಗಿದ್ದಿತೇ! ಏನಿದು! ಅವರೇ ಈ ದಿನ ಪ್ರಾಕೃತರಂತೆ ವ್ಯವಹರಿಸುತ್ತಿದ್ದಾರೆಯೇ? ನನಗೆ ಮೊದಲನೆಯ ದಿವಸ ಉಪದೇಶಮಾಡಿದಾಗ ನನ್ನನ್ನು ಇವರೇ ತಿರಸ್ಕರಿಸಿದರೇ? 'ನೀನು ಮಾತ್ರ ಜ್ಞಾನಿಯೋ', ಎಂದು ನನ್ನನ್ನು ಇವರೇ ಕೇಳಿದರೇನು? ಸಾಕಾರನಿರಾಕಾರಗಳೆರಡೂ ಸತ್ಯವೆಂಬದಾಗಿ ಇವರೇ ನನಗೆ ಉಪದೇಶಮಾಡಿದರೇ? ಈಶ್ವರನು ಸತ್ಯ, ಮಿಕ್ಕುವೆಲ್ಲವೂ ಅನಿತ್ಯವೆಂದು ನನಗೆ ಇವರೇ ಬುದ್ಧಿಗಲಿಸಿದರೇ? ಸಂಸಾರದಲ್ಲಿ ದಾಸಿಯಂತಿರಬೇಕೆಂದು ಇವರೇ ಬೋಧಿಸಿದರೇನು?' ಎಂಬುದಾಗಿ ಮಾಸ್ಟರು ಮನದಲ್ಲಿ ಭಾವಿಸಿಕೊಂಡನು.

ಭಗವಾನ್ ಶ್ರೀರಾಮಕೃಷ್ಣರು ಒಂದೊಂದು ಸಲ ಮಾಸ್ಟರನ್ನು ಆನಂದದಿಂದ ನೋಡುತ್ತಿದ್ದರು. ಅದನ್ನು ಕಂಡು ಮಾಸ್ಟರು ಅಚ್ಚರಿಗೊಂಡವನಾಗಿ ಕುಳಿತಿದ್ದನು. ಆಗ ಭಗವಾನರು ರಾಮಲಾಲನನ್ನು ನೋಡಿ, 'ಎಲ ರಾಮಲಾಲ, ಕಂಡೆಯಾ, ಇವನಿಗೆ ಕೊಂಚ ಹೆಚ್ಚಾಗಿ ವಯಸ್ಸಾಗಿದೆ. ಆದುದರಿಂದ, ಇವರೆಲ್ಲರೂ ಇಷ್ಟೊಂದು ನಗುತ್ತಿದ್ದರೂ, ಇವನು ಮಟ್ಟಿಗೆ ಬಹುಗಂಭೀರವಾಗಿ ಮಾತನಾಡದೆ ಕುಳಿತಿದ್ದಾನೆ,' ಎಂದು ಹೇಳಿದರು. ಆಗ ಮಾಸ್ಟರಿಗೆ ಇಪ್ಪತ್ತೇಳು ವಯಸ್ಸು.

ಪರಮಭಕ್ತನಾದ ಹನುಮಂತನ ಮಾತು ಬಂದಿತು. ಭಗವಾನರ ಕೊಟಡಿಯ ಗೋಡೆಯಲ್ಲಿ ಒಂದು ಕಡೆ ಆಂಜನೇಯನ ಪಟವಿದ್ದಿತು. ಅದನ್ನು ಭಕ್ತರೆಲ್ಲರಿಗೂ

ವನ್ನ[illegible]

[illegible]ಸುತ್ತ ಭಗವಾನರು, ' ಇವನ ಭಾವ[illegible]ಹುದು, ನೋಡಿರಿ; ಧನ, ಮಾನ, [illegible]ಗಳಲ್ಲಿ ಇವನಿಗೆ ಈಷದಪಿ ಆಸೆಯಿಲ್ಲ. ಪರಂತು ಭಗವಂತನಲ್ಲಿ ಇವನಿಗೆ [illegible]ಕ್ತಿ, ಇವನು ಸ್ಫಟಿಕದ ಕಂಬದಿಂದ ಬ್ರ[illegible]ಮ್ಮಾಸ್ತ್ರವನ್ನು ತೆಗೆದುಕೊಂಡು ಓಡಿ [illegible]ವನ್ನು ತೋರಿದರೆ, ಅದರ ಆಸೆಗಾ[illegible] ಇವನು ಅಸ್ತ್ರವನ್ನು ಬಿಸಾಡುತ್ತಾನೆ [illegible]ಕೊಂಡು, ಮಂಡೋದರಿಯು [illegible]ನಾನಾವಿಧಗಳಾದ ಫಲಗಳನ್ನು ತಂ[illegible]ಳು. ಹನುಮಂತನು ಅದಕ್ಕೆಲ್ಲ[illegible]ಳಾಗ ತಕ್ಕ ಕೂಸೇ! ಅವನು ಈ [illegible]ಹೇಳಿದನು.

(' ಇಂಥಾ ಹೆಣ್ಣನು ನಾನೆಲ್ಲಿ ಕಾಣೆನು ' ಎಂಬಂತೆ)

ಸಿಕ್ಕಿತು ಹಣ್ಣೀಗ । ಮಿಕ್ಕ ಹಣ್ಣುಗಳೊಳ । ಗಕ್ಕರೆಯೆನಗಿಲ್ಲವು ॥
ಮೋಕ್ಷಫಲದ ರಾಮ। ಭಕ್ತಿಯೆನ್ನುವ ಕಲ್ಪ। ವೃಕ್ಷವೆನ್ನಯ ಹೃದ। ಯಕ್ಷೇತ್ರದೆ ಹುಟ್ಟಿ ॥
ರಾಮನೆಂಬುವ ಕಲ್ಪ। ಭೂಮೀಜದಡಿಯಲ್ಲಿ । ಪ್ರೇಮದಿಂದಲೆ ಕುಳಿತು ಇರುತಿರಲು
ಈ ಮಹಿಯೊಳಗಾನು। ಕಾಮಿತಫಲಗಳ। ನಾಮಹಾತರುವಿಂದ। ಲೇ ಮಿಗಿಲಾಂಪೆನು ॥
ಹಣ್ಣ ಮಾತಿದು ಹಣ । ದಣ್ಣಗಳೇ ಕೇಳಿ । ಬಣ್ಣಮಾತುಗಳಾಡುವುದಿಲ್ಲವು ॥
ಜಿಣ್ಣಣಿಗರು ಕೊಟ್ಟ । ಹಣ್ಣನು ಕೊಳ್ಳುವ । ಚಿಣ್ಣನೆಂದೆನ್ನನೀ । ವೆಣ್ಣಿಸದಿರುವುದು ॥

ಭಗವಾನರು ಈ ಹಾಡನ್ನು ಹಾಡಿ, ಹಾಗೆಯೇ ಭಾವಾವಿಷ್ಟರಾದರು. ಅವರ ದೇಹವು ನಿಶ್ಚಂಚಲವಾಯಿತು. ಕಣ್ಣ ಎವೆಗಳು ಮಿಡುಕುತ್ತಿರಲಿಲ್ಲ. ಮೆಯ್ಯು ಕಟ್ಟಿಗೆಯಂತಾಯಿತು. ಫೋಟೋವಿನ ಚಿತ್ರದೋಪಾದಿಯಲ್ಲಿ ಅವರು ಕುಳಿತಿದ್ದರು. ಭಕ್ತರೆಲ್ಲರೂ ಇದುವರೆಗೂ ನಗುತ್ತಿದ್ದವರು, ಈಗ ಏಕದೃಷ್ಟಿಯಿಂದ ಆ ಅದ್ಭುತಾವಸ್ಥೆಯನ್ನು ನೋಡತೊಡಗಿದರು. ಮಾಸ್ಟರು ಆ ಅವಸ್ಥೆಯನ್ನು ಎರಡನೆಯ ಸಲ ದರ್ಶನಮಾಡಿದನು.

ಬಲು ಹೊತ್ತಾದ ಬಳಿಕ ಭಗವಾನರ ಭಾವಸ್ಥಿತಿಯು ಪರಿವರ್ತನವಾಯಿತು. ಅವರ ದೇಹವು ಅಲುಗಾಡಿತು. ಮುಖದಲ್ಲಿ ಮಂದಹಾಸವು ಮೂಡಿತು. ಇಂದ್ರಿಯಗಳು ತಮ್ಮ ವ್ಯಾಪಾರವನ್ನು ಮಾಡತೊಡಗಿದವು. ಅವರ ಕಣ್ಣುಗಳಿಂದ ಆನಂದಾಶ್ರುವು ಹರಿಯುತ್ತಿದ್ದಿತು. ಭಗವಾನರು ರಾಮನಾಮವನ್ನು ಜಪಿಸುತ್ತಿದ್ದರು.

ಅದನ್ನು ನೋಡಿ ಮಾಸ್ಟರು, 'ಹುಡುಗರೊಡನೆ ಹುಡುಗಾಟವಾಡುತ್ತಿದ್ದವರು ಈ ಮಹಾಪುರುಷರೇನೋ!', ಎಂದು ಮನದಲ್ಲಿ ಭಾವಿಸಿದನು. ಭಗವಾನರು ಆಗ ಐದು ವಯಸ್ಸಿನ ಬಾಲಕನ ಅವಸ್ಥೆಯಲ್ಲಿದ್ದರು.

ಭಗವಾನರು ಪ್ರಕೃತಿಸ್ಥರಾಗಿ, ಪ್ರಾಕೃತರಂತೆ ವ್ಯವಹಾರಮಾಡುತ್ತ, ನರೇಂದ್ರನನ್ನೂ ಮಾಸ್ಟರನ್ನೂ ಕೂಗಿ, ' ನೀವಿಬ್ಬರೂ ಇಂಗ್ಲೀಷಿನಲ್ಲಿ ಮಾತನಾಡಿರಿ; ನಾನು ಕೇಳುತ್ತೇನೆ ', ಎಂದು ಹೇಳಿದರು.

ಆ ಮಾತನ್ನು ಕೇಳಿ, ಅವರಿ... ನಕ್ಕು, ಕೊಂಚಹೊತ್ತಿನ ವರೆಗೆ, ... ಳಿಗೆ ಯಲ್ಲಿ ಮಾತನಾಡುತ್ತಿದ್ದರು. ಭಗ...ನರ ಮುಂದೆ ಮಾತನಾಡುವುದೆಂದರೆ ... ರಿಗೆ ಅಂಜಿಕೆ. ಅವನ ವಾದವಿ... ದಗಳೆಲ್ಲವೂ ಭಗವಾನರ ಅನುಗ್ರಹದಿಂ... ಹೋಗಿದ್ದುವು. ಭಗವಾನರು ...ಳಿದರೂ, ಅವನಿಗೆ ಇಂಗ್ಲೀಷಿನಲ್ಲಿ ... ವುದಕ್ಕೆ ಆಗಲಿಲ್ಲ.

ಒಂಬತ್ತನೆಯ ಪರಿಚ್ಛೇದ

ತ್ವಮಕ್ಷರಂ ಪರಮಂ ವೇದಿತವ್ಯಂ ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ॥
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ ಸನಾತನಸ್ತ್ವಂ ಪುರುಷೋಮತೋ ಮೇ॥
[ಗೀತಾ ೧೧–೧೮

[ನೀನು ನಾಶರಹಿತನು; ನಿನ್ನನ್ನು ಎಲ್ಲರೂ ತಿಳಿದುಕೊಳ್ಳಬೇಕು; ನೀನು ಎಲ್ಲಕ್ಕಿಂತಲೂ ದೊಡ್ಡವನು; ನೀನು ಸಮಸ್ತಪ್ರಪಂಚಕ್ಕೂ ಕಾರಣಭೂತನು; ನೀನು ವ್ಯಯರಹಿತನು; ಶಾಶ್ವತವಾದ ಧರ್ಮಪಾಲಕನು; ನೀನು ನಿತ್ಯನಾದ ಪುರುಷನು, ಎಂದು ನಾನು ನಂಬಿಕೊಂಡಿದ್ದೇನೆ.]

(ಅಂತರಂಗ ಭಕ್ತರೊಡನೆ—ನಾನು ಆರು?)

ಐದು ಗಂಟೆಯಾಯಿತು. ಕೆಲವರು ಭಕ್ತರು ತಮ್ಮ ಮನೆಗಳಿಗೆ ಹೋದರು. ನರೇಂದ್ರನೂ ಮಾಷ್ಟರೂ ಅಲ್ಲಿಯೇ ಇದ್ದರು. ನರೇಂದ್ರನು ಮುಖವನ್ನು ತೊಳೆಯುವುದಕ್ಕಾಗಿ ಚೆಂಬನ್ನು ತೆಗೆದುಕೊಂಡು, ಹಂಸಪುಷ್ಕರಿಣಿಯ ಬಳಿಯಿರುವ ಸರ್ವೆಗಿಡಗಳ ಬಳಿಗೆ ಹೋದನು. ಮಾಷ್ಟರು ದೇವಾಲಯದಲ್ಲಿ ಇತ್ತಕಡೆಗೂ, ಅತ್ತಕಡೆಗೂ ಸುತ್ತಾಡುತ್ತಿದ್ದನು. ಕೊಂಚ ಹೊತ್ತಾದ ಮೇಲೆ, ಅವನು, ಕುಟಿಯಿಂದ ಹೊರಟು, ಹಂಸಪುಷ್ಕರಿಣಿಯ ಹತ್ತಿರಕ್ಕೆ ಬಂದನು. ಅದರ ದಕ್ಷಿಣದಿಕ್ಕಿನ ಪಾವಟಿಗೆಯ ಮೇಲೆ ಭಗವಾನರು ನಿಂತುಕೊಂಡಿದ್ದರು. ನರೇಂದ್ರನು ಚೆಂಬನ್ನು ಹಿಡಿದುಕೊಂಡು ಮುಖವನ್ನು ತೊಳೆದುಕೊಳ್ಳುತ್ತಿದ್ದನು. ಭಗವಾನರು ನರೇಂದ್ರನನ್ನು ನೋಡಿ, 'ಅಯ್ಯಾ, ನೀನು ಆಡಿಗಡಿಗೆ ಬರುತ್ತಾ ಇರು. ಈಗ ಹೊಸದಾಗಿ ನೀನು ಬಂದಿದ್ದೀಯೆ, ಪ್ರಥಮಸಮಾಗಮವಾದ ಬಳಿಕ, ನೂತನ ವರನಂತೆ ಎಲ್ಲರೂ ಬೇಗಬೇಗ ಬರುತ್ತಾರೆ. (ಮಾಷ್ಟರೂ ನರೇಂದ್ರನೂ ನಗುತ್ತಾರೆ.) ನೀನು ಬೇಗ ಬೇಗ ಬರುತ್ತಿರುವೆಯಾ?', ಎಂದು ಕೇಳಿದರು. ನರೇಂದ್ರನು ಬ್ರಾಹ್ಮಸಮಾಜದ

ಆದರ[illegible]ವನು ನಗುತ್ತ, 'ಸ್ವಾಮೀ, ಆಗಲಿ[illegible] ಹೇಳಿದನು. ಸ್ಯೂವರೂ ಕೊಳ
ತು[illegible]ಟಿಗೆ ಬರುತ್ತಿದ್ದರು. ಆಗ ಭಗವಾ[illegible] ಮಾಸ್ಟರನ್ನು ನೋಡಿ, "ಅಯ್ಯ,
ನ[illegible]ಕ್ಕಳು ಹೋರಿಯನ್ನು ಕೊಳ್ಳುವು[illegible]ಕ್ಕಾಗಿ ಸಂತೆಗೆ ಹೋಗುತ್ತಾರೆ.
[illegible]ಹೋರಿಯ ಬಾಲದ ಅಡಿಯಲ್ಲಿ ಕುಯ್ಯ[illegible]ಟ್ಟ ನೋಡಿ, 'ಇದು ಒಳ್ಳೆಯದು,
[illegible]ದಲ್ಲ,' ಎಂದು ತಿಳಿಯುತ್ತಾರೆ. [illegible]ಲದ ಕೆಳಗೆ ಕುಯ್ಯಿಟ್ಟಕೂಡಲೇ
[illegible] ಸುಮ್ಮನೆ ಬಿದ್ದುಕೊಳ್ಳುತ್ತ[illegible]ೀ, ಅದನ್ನು ಅವರು ಕೊಳ್ಳ
[illegible]ಆವ ಹೋರಿಯು ನೆಗೆದಾಡು[illegible]ೋ ಅದನ್ನೇ ಕೊಳ್ಳುತ್ತಾರೆ.
[illegible] ಇಂತಹ ಹೋರಿಯಂತೆ ಇದ್ದಾನೆ. [illegible]ನಲ್ಲ ಒಳ್ಳೆಯ ತೇಜಸ್ಸು ಇರು
ತ್ತದೆ," ಎಂದು ಹೇಳುತ್ತಾ ಭಗವಾನರು ನಕ್ಕು, 'ಅಯ್ಯ, ಮತ್ತೆ ಕೆಲವರಿದ್ದಾರೆ.
ಅವರು ನೆನೆಯಿಕ್ಕಿದ ಅವಲಕ್ಕಿಯಂತೆ ಹಿಡಿತವಾಗಲಿ, ಸಾರವಾಗಲಿ, ಇಲ್ಲದೆ, ಆವ
ಕೆಲಸವನ್ನು ಹಿಡಿದರೂ, ನಶೆನಶಿಯಿಂದ ಮುಗಿಸುವುದೇ ಇಲ್ಲ.', ಎಂದು ಹೇಳಿ
ದರು.

ಸಂಜೆಯಾಯಿತು. ಭಗವಾನರು ಮಾಸ್ಟರನ್ನು ನೋಡಿ, 'ನೀನು ನರೇಂದ್ರನ
ಸಂಗಡ ಮಾತನಾಡಿ, ಅವನು ಆವ ರೀತಿಯ ಹುಡುಗನೆಂಬುದನ್ನು ನನಗೆ ತಿಳಿಸು',
ಎಂದು ಹೇಳಿ, ಈಶ್ವರಧ್ಯಾನಾಸಕ್ತರಾದರು.

ಆರತಿಯಾಯಿತು. ಬಲು ಹೊತ್ತಾದ ಮೇಲೆ, ಮಾಸ್ಟರು ಗಂಗಾಘಟ್ಟದ
ಮಂಟಪದ ಪಶ್ಚಿಮದಲ್ಲಿ ನರೇಂದ್ರನನ್ನು ನೋಡಿದನು. ಇಬ್ಬರೂ ಮಾತನಾಡುತ್ತಿ
ದ್ದರು. 'ನಾನು ಬ್ರಹ್ಮಸಮಾಜಕ್ಕೆ ಸೇರಿದ್ದೇನೆ. ಕಾಲೇಜಿನಲ್ಲಿಓದುತ್ತಿದ್ದೇನೆ,'
ಎಂದು ನರೇಂದ್ರನು ಮಾಸ್ಟರಿಗೆ ಹೇಳಿದನು.

ರಾತ್ರಿಯಾಯಿತು. ಮಾಸ್ಟರು ಹೋಗಿಬರುತ್ತೇನೆಂದು ಹೇಳಿ, ಅಪ್ಪಣೆಯನ್ನು
ತೆಗೆದುಕೊಂಡನು. ಅವನಿಗೆ ಹೋಗುವುದಕ್ಕೆ ಮನಸ್ಸೇ ಬಾರದಿಲ್ಲ. ಆದುದರಿಂದ
ಅವನು ನರೇಂದ್ರನ ಹತ್ತಿರದಿಂದ ಹೊರಟು ಬಂದು, ಶ್ರೀರಾಮಕೃಷ್ಣರನ್ನು ಹುಡುಕು
ತ್ತಿದ್ದನು. ಅವರ ಸುಮಧುರವಾದ ಗಾನವನ್ನು ಕೇಳಿ, ಅವನ ಮನಸ್ಸು ಮುಗ್ಧವಾಗಿ
ಹೋಗಿದ್ದಿತು. ಅವರ ಶ್ರೀಮುಖದಿಂದ ಮತ್ತೊಮ್ಮೆ ಗಾನವನ್ನು ಕೇಳಬೇಕೆಂದು
ಅವನಿಗೆ ತುಂಬ ಆಸೆ; ಕಾಳೀದೇವಾಲಯದ ಮುಂದುಗಡೆಯ ನಾಟ್ಯಮಂದಿರದಲ್ಲಿ
ಭಗವಾನರು ಏಕಾಕಿಯಾಗಿ ಶತಪಥಮಾಡುತ್ತಿದ್ದರು. ಅದನ್ನು ಮಾಸ್ಟರು ಕಂಡನು.
ಕಾಳೀದೇವಾಲಯದಲ್ಲಿ, ಭಗವತಿಯ ಇಕ್ಕೆಲಗಳಲ್ಲಿಯೂ ದೀವಿಗೆಗಳು ಉರಿಯುತ್ತಿ
ದ್ದುವು. ವಿಶಾಲವಾದ ಆ ನಾಟ್ಯಮಂದಿರದಲ್ಲಿ ಮಾತ್ರ ಒಂದೇ ಒಂದು ಬೆಳಕು,
ಆದುದರಿಂದ ಅದು ಕತ್ತಲಾಗಿಯೇ ಇದ್ದಿತು.

ಭಗವಾನರ ಗಾನವನ್ನು [illegible] ಮಾಸ್ಟರು ಮಂತ್ರದಿಂದ ಮುಗ್ಧವ [illegible] ಳಿಗೆ ದಂತೆ ಮುಗ್ಧನಾಗಿ ಹೋಗಿದ್ದನು. [illegible] ಕ ಅವನು ಸಂಕುಚಿತಭಾವದಿಂದ, [illegible] ಕೃಷ್ಣರನ್ನು ನೋಡಿ, 'ಈ ದಿವಸ [illegible] ಇನ್ನೂ ಗಾನವಾಗುತ್ತದೆಯೇ?', [illegible] ದನು. ಅದಕ್ಕೆ ಅವರು 'ಈ [illegible] ನ ಗಾನವಾಗುವುದಿಲ್ಲ' ಎಂದು ಹೇ [illegible] ಏನನ್ನೋ ನೆನಸಿಕೊಂಡು, '[illegible] ಗಾದರೆ ಒಂದು ಕೆಲಸಮಾಡು. [illegible] ತ್ತೆ ಯಲ್ಲಿ ಬಲರಾಮನ ಮನೆಗೆ [illegible] ತ್ತೇನೆ, ಅಲ್ಲಿಗೆ ನೀನು ಬಾ, [illegible] ನನ್ನ [illegible] ಗು ತ್ತದೆ', ಎಂದು ಹೇಳಿದರು. [illegible]

ಮಾಸ್ಟರು :—ಅಪ್ಪಣೆ.

ಭಗವಾನರು :—(ಮಾಸ್ಟರನ್ನು ನೋಡಿ) ನೀನು ಬಲರಾಮುವಸುವನ್ನು ಬಲ್ಲೆಯಾ?

ಮಾಸ್ಟರು:—ಸ್ವಾಮೀ, ಇಲ್ಲ.

ಶ್ರೀರಾಮಕೃಷ್ಣ :—ಬೋಸಪಾಡಾದಲ್ಲಿ ಅವನ ಮನೆ.

ಮಾಸ್ಟರು :—ಅಪ್ಪಣೆ; ವಿಚಾರಿಸುತ್ತೇನೆ.

ಶ್ರೀರಾಮಕೃಷ್ಣ :—(ಮಾಸ್ಟರ ಸಂಗಡ ನಾಟ್ಯಮಂದಿರದಲ್ಲಿ ತಿರುಗಾಡುತ್ತ, ಅವನನ್ನು ನೋಡಿ) ಅಯ್ಯ, ನೀನು ನನ್ನನ್ನು ಏನೆಂದು ತಿಳಿದುಕೊಂಡಿದ್ದೀಯೆ?

ಮಾಸ್ಟರು ಸುಮ್ಮನಿದ್ದನು. ಭಗವಾನರು ಮತ್ತೆ ಅವನನ್ನು ನೋಡಿ, 'ಅಯ್ಯ, ನನಗೆ ಎಷ್ಟಾಣೆಯ ಜ್ಞಾನವಿದೆ, ಹೇಳು', ಎಂದು ಕೇಳಿದರು.

ಮಾಸ್ಟರು :—ಆಣೆಯ ಜ್ಞಾನವೆಂಬ ಮಾತು ನನಗೆ ಅರ್ಥವಾಗುವುದಿಲ್ಲ. ಈ ರೀತಿಯಾದ ಜ್ಞಾನವನ್ನಾಗಲಿ, ಪ್ರೇಮವನ್ನಾಗಲಿ, ಭಕ್ತಿಯನ್ನಾಗಲಿ, ವಿಶ್ವಾಸವನ್ನಾಗಲಿ, ವೈರಾಗ್ಯವನ್ನಾಗಲಿ, ಔದಾರ್ಯವನ್ನಾಗಲಿ, ಮತ್ತೆಲ್ಲಿಯೂ, ಎಂದೂ, ನೋಡಿಲ್ಲ.

ಭಗವಾನರು ಆ ಮಾತನ್ನು ಕೇಳಿ ನಕ್ಕರು.

ಹೀಗೆ ಕೆಲವು ಹೊತ್ತು ಮಾತನಾಡುತ್ತಿದ್ದು, ಮಾಸ್ಟರು ನಮಸ್ಕಾರಮಾಡಿ, ಹೋಗಿ ಬರುತ್ತೇನೆಂದು, ಭಗವಾನರ ಅಪ್ಪಣೆಯನ್ನು ಬೇಡಿದನು. ಅವನು ಹೆಬ್ಬಾಗಿಲ ವರೆಗೆ ಹೋಗಿ, ಏನನ್ನೋ ನೆನಸಿಕೊಂಡು ಹಿಂತಿರುಗಿ ನಾಟ್ಯಮಂದಿರದಲ್ಲಿ ಭಗವಾನರ ಬಳಿಗೆ ಬಂದನು.

ಅರಣ್ಯಮಧ್ಯದಲ್ಲಿ ಸಿಂಹವು ಏಕಾಕಿಯಾಗಿ ಸಂಚರಿಸುತ್ತದೆ. ಅದರಂತೆಯೇ ಭಗವಾನರು ಕ್ರೀಡಾಲೋಕದ ಆ ನಾಟ್ಯಮಂದಿರದಲ್ಲಿ ಏಕಾಕಿಯಾಗಿ ತಿರುಗಾಡುತ್ತ,

[illegible] ಸಿಂಹಕ್ಕೆ ಒಂಟಿಯಾಗಿ ಇರುವು[illegible] ಒಂಟಿಯಾಗಿ ಸಂಚರಿಸುವುದೂ [illegible] ಅದಕ್ಕೆ ಇನ್ನೊಂದರ ಜತೆಯೂ ಬೇಕಿ[illegible]

[illegible]ಸ್ಟರು ವಿಸ್ಮಯದಿಂದ ಆ ಮಹಾಪು[illegible]ಷನ ದರ್ಶನವನ್ನು ಮತ್ತೊಮ್ಮೆ ಮ[illegible]

[illegible] ಅವನನ್ನು ನೋಡಿ, 'ಇದೇಕೋ[illegible], ತಿರುಗಿ ಬಂದೆ?', ಎಂದು ಕೇಳಿ[illegible]

ಮಾಸ್ಟರು :—ಸ್ವಾಮೀ, ಅದು ದೊಡ್ಡವರ ಮನೆ; ಹೋದರೆ, ನನ್ನನ್ನು ಒಳಗೆ ಬಿಡುತ್ತಾರೆಯೋ ಇಲ್ಲವೋ? ಅದರಿಂದ ನಾನು ಅಲ್ಲಿಗೆ ಬರಬಾರದೆಂದು ಆಲೋಚನೆಮಾಡಿದ್ದೇನೆ. ಇಲ್ಲಿಗೇ ಬಂದು ತಮ್ಮ ದರ್ಶನವನ್ನು ಮಾಡುತ್ತೇನೆ.

ಶ್ರೀರಾಮಕೃಷ್ಣ :—ಏಕಪ್ಪ? ಅಲ್ಲಿ ನೀನು ನನ್ನ ಬಳಿಗೆ ಹೋಗಬೇಕೆಂದು ಹೇಳಿದರೆ, ನಿನ್ನನ್ನು ಆರಾದರೂ ನನ್ನ ಹತ್ತಿರಕ್ಕೆ ಕರೆದುಕೊಂಡು ಬಂದು ಬಿಡುತ್ತಾರೆ.

ಮಾಸ್ಟರು 'ಅಪ್ಪಣೆ' ಎಂದು ಹೇಳಿ, ಪುನಃ ಪ್ರಣಾಮಮಾಡಿ, ಭಗವಾನರನ್ನು ಬೀಳುಕೊಂಡನು.

ನಾಲ್ಕನೆಯ ಖಂಡ

(ಕಲಿಕತೆಯ ಶ್ರೀ ಈಶ್ವರಚಂದ್ರ ವಿದ್ಯಾಸಾಗರನೊಡನೆ ಶ್ರೀರಾಮಕೃಷ್ಣರ ಮೇಲನ)

ಮೊದಲನೆಯ ಪರಿಚ್ಛೇದ

(ಶ್ರೀಯುಕ್ತ ವಿದ್ಯಾಸಾಗರನ ಮನೆ)

ಈ ದಿನ ಶನಿವಾರ, ೧೮೮೨ ನೆಯ ಕ್ರಿಸ್ತಾಬ್ದದ ೫ ನೆಯ ಆಗಸ್ಟು, ಮಧ್ಯಾಹ್ನ ನಾಲ್ಕು ಗಂಟೆಯ ಸಮಯ.

ಭಗವಾನ್ ಶ್ರೀರಾಮಕೃಷ್ಣರವರು ಕಲಿಕತೆಯ ರಾಜಬೀದಿಯಿಂದ ಒಂದು ಕುದುರೆಯ ಬಂಡಿಯನ್ನು ಮಾಡಿಕೊಂಡು, ವಾದೂಡಬಾಗಾನಿನ ಕಡೆಗೆ ಬರುತ್ತಿದ್ದಾರೆ. ಅವರ ಸಂಗಡ ಹಾಜರಾ, ಭವನಾಥ ಮತ್ತು ಮಾಸ್ಟರು ಇದ್ದಾರೆ. ಎಲ್ಲರೂ ವಿದ್ಯಾಸಾಗರನ ಮನೆಗೆ ಹೋಗುತ್ತಿದ್ದಾರೆ.

ಹುಗಲೀ ಜಿಲ್ಲೆಯೊಳಗಿರುವ ಕಾಮಾರ ಪುಕೂರೆಂಬ ಗ್ರಾಮವೇ, ಭಗ... ಜನ್ಮಭೂಮಿ. ಇದು ವಿದ್ಯಾಸಾಗರನ ಜನ್ಮಭೂಮಿಯಾದ ವೀರಸಿಂಹಗ್ರಾ... ಹತ್ತಿರದಲ್ಲಿದೆ. ಭಗವಾನರು, ವಿದ್ಯಾಸಾಗರನ ದಯಾವಿಚಾರವನ್ನು ... ದಿಂದಲೂ ಕೇಳುತ್ತಿದ್ದರು. ... ಅವರು ದಕ್ಷಿಣೇಶ್ವರದ ... ಲ್ಲಿ ಇರುವುದರಿಂದ, ಅವನ ದ... ಮತ್ತು ಪಾಂಡಿತ್ಯದ ವಿಚಾ... ಗಳನ್ನು ಇನ್ನೂ ಹೆಚ್ಚಾಗಿ ... ತ್ತಿದ್ದಾರೆ. ಮಾಸ್ಟರು ವಿದ್ಯಾ... ಪಾಠ ಶಾಲೆಯಲ್ಲಿ ಉಪಾಧ್ಯಾಯನು. ‘ವಿದ್ಯಾಸಾಗರನ ಬಳಿಗೆ ನನ್ನನ್ನು ಕರೆದು ಕೊಂಡು ಹೋಗುವೆಯಾ? ಅವನನ್ನು ನೋಡಬೇಕೆಂದು ನನಗೆ ತುಂಬ ಆಸೆ ಯಿದೆ,’ ಎಂದು ಒಂದು ದಿನ ಭಗವಾನರು ಮಾಸ್ಟರನ್ನು ಕೇಳಿದರು. ಅವನು ಅದನ್ನು ವಿದ್ಯಾಸಾಗರನಿಗೆ ಹೇಳಿದನು. ಅದನ್ನು ಕೇಳಿ, ವಿದ್ಯಾಸಾಗರನು ಆನಂದಿತ ನಾಗಿ, ‘ಒಂದು ಶನಿವಾರದ ದಿನ ಮಧ್ಯಾಹ್ನ ನಾಲ್ಕು ಗಂಟೆಯ ವೇಳೆಯಲ್ಲಿ, ನಿನ್ನ ಸಂಗಡ ಅವರನ್ನು ಇಲ್ಲಿಗೆ ಕರೆದುಕೊಂಡು ಬಾ’, ಎಂದು ಮಾಸ್ಟರಿಗೆ ಹೇಳಿದನು. ಒಂದು ಸಲ ಮಾತ್ರ, ‘ಅವರು ಎಂಥ ಪರಮಹಂಸರು? ಕಾವಿಯ ಬಟ್ಟೆಯನ್ನು ಧರಿಸಿದ್ದಾರೆಯೋ’ ಎಂದು ವಿದ್ಯಾಸಾಗರನು ಮಾಸ್ಟರನ್ನು ಕೇಳಿದನು. ಅದಕ್ಕೆ ಮಾಸ್ಟರು ಅವನೊಡನೆ, “ಸ್ವಾಮೀ, ಅವರು ಅದ್ಭುತಪುರುಷರು. ಕೆಂಪು ಅಂಚಿನ ಬಿಳಿಯ ಬಟ್ಟೆಯನ್ನು ಉಡುತ್ತಾರೆ, ಅಂಗಿಯನ್ನು ತೊಡುತ್ತಾರೆ. ಕಾಲಿನಲ್ಲಿ ಹೊಸದಾಗಿ ಬಣ್ಣಹಾಕಿದ ಜೋಡನ್ನು ಮೆಟ್ಟುತ್ತಾರೆ. ರಾಸಮಣಿಯ ಕಾಲೀ ದೇವಾಲಯದ ಒಂದು ಕೋಣೆಯಲ್ಲಿ ವಾಸಮಾಡುತ್ತಾರೆ. ಮನೆಯೊಳಗೆ ಒಂದು ಮಂಚವಿದೆ. ಮಂಚಕ್ಕೆ ಸೊಳ್ಳೆಯ ತೆರೆಯನ್ನು ಕಟ್ಟಿದೆ. ಮಂಚದ ಮೇಲೆ ಹಾಸಿಗೆಯೊಂದಿದೆ. ಅವರು ಅದರ ಮೇಲೆ ಮಲಗುತ್ತಾರೆ. ಅವರಲ್ಲಿ ಸನ್ಯಾಸಿಗಳ ಬಾಹ್ಯ ಚಿಹ್ನೆಯೊಂದೂ ಇಲ್ಲ. ಆದರೆ ಭಗವಂತನ ಧ್ಯಾನವಲ್ಲದೆ, ಬೇರಾವ ಚಿಂತೆಯೂ ಅವರಿಗೆ ಇಲ್ಲ. ಅವರು ಹಗಲೂ ಇರುಳೂ ಈಶ್ವರಧ್ಯಾನವನ್ನೇ ಮಾಡು ತ್ತಿದ್ದಾರೆ,” ಎಂದು ಹೇಳಿದನು.

ಬಂಡಿಯು ದಕ್ಷಿಣೇಶ್ವರದ ಕಾಲೀಮಂದಿರದಿಂದ ಹೊರಟು, ಸೇತುವೆಯನ್ನು ದಾಟಿ, ಶಾಮಬಜಾರದಿಂದ ಆಮಹರ್ಸ್ಟ್ ಬೀದಿಗೆ ಬರುತ್ತಿದೆ. ಈಗ ವಾದೂಡ ಬಾಗಾನಿನ ಹತ್ತಿರಕ್ಕೆ ಬರುತ್ತಿದ್ದೇವೆಂದು ಭಕ್ತರು ಹೇಳುತ್ತಿದ್ದಾರೆ. ಭಗವಾನರು ಬಾಲಕರಂತೆ ಮಾತನಾಡುತ್ತ ಬರುತ್ತಿದ್ದಾರೆ. ಬಂಡಿಯು ಆಮಹರ್ಸ್ಟ್ ಬೀದಿಗೆ ಬಂದ ಕೂಡಲೇ, ಭಗವಾನರು ಇದ್ದಕ್ಕಿದ್ದಂತೆ ಭಾವಾಂತರರಾದರು. ಅವರಿಗೆ ಈಶ್ವರಾವೇಶವಾಗುವುದಕ್ಕೆ ಉಪಕ್ರಮವಾಯಿತು.

ಬಂಡಿಯು ಕೈಲಾಸವಾಸೀ ರಾಮಮೋಹನರಾಯರ ತೋಟದ ಹತ್ತಿರ ಬರುತ್ತಿದೆ. ಭಗವಾನರು ಭಾವಾಂತರರಾದುದನ್ನು ಮಾಸ್ಟರು ನೋಡಲಿಲ್ಲ.

ಆದರ... ... ರಾಮಮೋಹನರಾಯನ ಮನೆ,' ಎಂದು ... ನನು ದಡದಡನೆ ಹೇಳಿದನು. ಭಗ ... ಅದಕ್ಕೆ ಅಸಮಾಧಾನಗೊಂಡವರಾಗಿ, 'ಈಗ ಆಮಾತುಗಳೆಲ್ಲ ಚೆನ್ನಾಗಿಲ್ಲ' ... ಹೇಳಿದರು. ಅವರು ಭಾವಾವಿಷ್ಟರಾಗು... ದ್ದಾರೆ.

... ವಿದ್ಯಾಸಾಗರನ ಮನೆಯ ... ದೆ ನಿಂತಿತು. ಅದು ಎರಡು ಅಂತಸ್ತಿನ್ನ ಮನೆ. ಇಂಗ್ಲೀಷರ ಮನೆಗಳಂತಿದ್ದಿ... ಹೋ... ಆ ಸ್ಥಲದ ಒಳಗೆ ನಡುಗಡೆ ಯಲ್ಲಿ ಮನೆ; ನಾಲ್ಕು ಕಡೆಗೂ ಆವರಣದ ಗೋಡೆ... ಮನೆಯ ಪಡುವಣ ಅಂಚಿನಲ್ಲಿ ಹೆಬ್ಬಾಗಿಲು. ಅದಕ್ಕೆ ತೆಂಕಲಾಗಿ ಮತ್ತೊಂದು ಬಾಗಿಲು. ಹೆಬ್ಬಾಲಿಗೂ ಮನೆಗೂ ನಡುವೆ, ಎರಡು ಕಡೆಯಲ್ಲಿಯೂ ಹೂಗಿಡುಗಳಿದ್ದುವು. ಪಶ್ಚಿಮದಿಕ್ಕಿನಲ್ಲಿ ಮೇಲಕ್ಕೆ ಹೋಗುವುದಕ್ಕೆ ಕೆಳಗಿನಿಂದ ಮೆಟ್ಟಿಲುಗಳಿವೆ. ವಿದ್ಯಾಸಾಗರನು ಮಹಡಿಯ ಮೇಲೆ ಇದ್ದಾನೆ. ಮೆಟ್ಟಿಲಿಂದ ಹತ್ತಿ ಮೇಲಕ್ಕೆ ಹೋದರೆ, ಉತ್ತರಕ್ಕೆ ಒಂದು ಕೊಠಡಿ, ಅದರ ಪೂರ್ವದಲ್ಲಿ ಒಂದು ಹಜಾರ, ಹಜಾರಕ್ಕೆ ದಕ್ಷಿಣಪೂರ್ವದಲ್ಲಿ ಒಂದು ಕೋಣೆ, ಅಲ್ಲಿಯೇ ವಿದ್ಯಾಸಾಗರನು ಮಲಗುವುದು. ನೆಟ್ಟಗೆ ದಕ್ಷಿಣಕ್ಕೆ ಇನ್ನೊಂದು ಕಿರುಮನೆಯಿದೆ. ಅದು ಬಹುಮೂಲ್ಯವಾದ ಪುಸ್ತಕಗಳಿಂದ ತುಂಬಿದೆ. ಹಜಾರ ದೊಳಗೆ ಗೋಡೆಯೊತ್ತಿನಲ್ಲಿ ಹಲವು ಬೀರುಗಳಿವೆ. ಅವುಗಳಲ್ಲಿ ಸುಂದರವಾಗಿ ರಟ್ಟು ಕಟ್ಟಿದ ಪುಸ್ತಕಗಳು ಅಂದವಾಗಿ ಇಡಲ್ಪಟ್ಟಿವೆ. ಹಜಾರದೊಳಗೆ ಮೂಡಲಲ್ಲಿ ಒಂದು ಮೇಜೂ, ಕುರ್ಚಿಗಳೂ ಇವೆ. ವಿದ್ಯಾಸಾಗರನು ಪಶ್ಚಿಮಮುಖನಾಗಿ ಕುಳಿತು ಕೆಲಸಮಾಡುತ್ತಾನೆ. ಅವನನ್ನು ನೋಡುವುದಕ್ಕೂ, ಅವನೊಡನೆ ಮಾತನಾಡು ವುದಕ್ಕೂ ಬರುವವರು, ಅಲ್ಲಿರುವ ಕುರ್ಚಿಗಳ ಮೇಲೆ ಕೂರುತ್ತಾರೆ. ಮೇಜಿನ ಮೇಲೆ ಕಾಗದ, ಲೇಖಿನಿ, ಮಸಿಯ ಕುಡಿಕೆ, ಹಸಿಯ ಕಾಗದ, ಮುಂತಾದ ಲೇಖನಸಾಮ ಗ್ರಿಗಳಿವೆ. ತುಂಬ ಕಾಗದಗಳೂ, ಹೊಲಿದ ಲೆಕ್ಕದ ಪುಸ್ತಕಗಳೂ ಇಟ್ಟಿವೆ. ವಿದ್ಯಾ ಸಾಗರನು ಓದುವ ಒಂದೆರಡು ಪುಸ್ತಕಗಳು ಕೂಡ ಇವೆ. ಆ ಕಾಷ್ಠಾಸನಕ್ಕೆ ನೇರವಾಗಿ ದಕ್ಷಿಣದಲ್ಲಿರುವ ಕೊಟ್ಟಡಿಯೊಳಗೆ, ಮಂಚವೂ ಹಾಸಿಗೆಯೂ ಇವೆ. ಅದು ವಿದ್ಯಾಸಾಗರನ ಮಲಗುವ ಮನೆ.

ಮೇಜಿನ ಮೇಲೆ ಕಾಗದಗಳನ್ನು ಜೋಡಿಸಿ, ಭಾರವನ್ನು ಹೇರಿದ್ದಾರೆ. ಅವುಗಳೊಳಗೆ ಏನ ಬರೆದಿದೆ? 'ನನ್ನ ಮಗನು ವಿಕಲಾಂಗನು, ತಬ್ಬಲಿ, ಅವನನ್ನು ನೋಡಿಕೊಳ್ಳುವರಾರೂ ಇಲ್ಲ. ತಾವೇ ಅವನನ್ನು ನೋಡಿಕೊಳ್ಳಬೇಕು,' ಎಂಬ ದಾಗಿ ವಿಧವೆಯೊಬ್ಬಳು ಬರೆದುಕೊಂಡಿದ್ದಾಳೆ. 'ನಾನು ಖರಮಾತಾವಿಗೆ ಹೋ ದೆನು. ಅಲ್ಲಿ ಕಾಲಕ್ಕೆ ಸರಿಯಾಗಿ ಮಾಸಾಶನವು ಸಿಕ್ಕುತ್ತಿಲ್ಲ. ನನಗೆ ಬಹುಕಷ್ಟ ವಾಗಿದೆ,' ಎಂದು ಒಬ್ಬ ಬಡವನು ಬಿನ್ನವಿಸಿಕೊಂಡಿದ್ದಾನೆ. 'ನಾನು ವೇತನ ವನ್ನು ಕೊಡದ ವಿದ್ಯಾರ್ಥಿಯಾಗಿ ತಮ್ಮ ಪಾಠಶಾಲೆಗೆ ಸೇರಿದ್ದೇನೆ. ನನಗೆ ಪುಸ್ತಕ ವನ್ನು ಕೊಳ್ಳುವುದಕ್ಕೂ ಸತಿಯಿಲ್ಲ,' ಎಂಬದಾಗಿ ಬಡಹುಡುಗನೊಬ್ಬನು ಹೇಳಿ

ಕೊಂಡಿದ್ದಾನೆ. 'ನನ್ನ ಹೆಂಡಿರು ಮಕ್ಕಳಿಗೆ ತಿನ್ನುವುದಕ್ಕಿಲ್ಲ. ನನಗೆ ... ದರೂ ಒಂದು ಕೆಲಸವನ್ನು ಮಾಡಿಕೊಡಬೇಕು', ಎಂದು ಮತ್ತೊಬ್ಬನು ...ಡಿಕೊಂಡಿದ್ದಾನೆ. 'ನನ್ನ ಒಡಹುಟ್ಟಿದವಳು ವಿಧವೆ. ಅವಳ ಭಾರವೆಲ್ಲ ನನ್ನ ಮೇಲೆ ಬಿದ್ದಿದೆ. ಬರುವ ವೇತನವು ... ಕಾಗುವುದಿಲ್ಲ,' ಎಂದು ಪಾಠ... ಶಿಕ್ಷಕನೊಬ್ಬನು ಬಿನ್ನವಿಸಿಕೊಂಡಿದ್ದಾನೆ 'ಇಲ್ಲ ನಾನು ಕಷ್ಟದಲ್ಲಿ ... ಕೊಂಡಿದ್ದೇನೆ. ತಾವು ದೀನಬಂಧು ... ನನಗೆ ಕೊಂಚ ಹಣವನ್ನು ಕಳುಹಿಸಿ ಕೊಟ್ಟು, ಆಸನ್ನವಿಪತ್ತಿನಿಂದ ನನ್ನನ್ನು ರಕ್ಷಿಸಬೇಕು,' ಎಂಬವಾಗಿ ಒಬ್ಬನು ವಿಲಾಯತಿಯಿಂದ ಪ್ರಾರ್ಥನೆಮಾಡಿಕೊಂಡಿದ್ದಾನೆ. 'ಮಧ್ಯಸ್ಥವಾಗಬೇಕೆಂದು ನಾವು ದಿನವನ್ನು ಗೊತ್ತುಮಾಡಿದ್ದೇವೆ. ಆ ದಿನ, ತಾವು ಬಿಜಯಮಾಡಿಸಿ, ನಮ್ಮ ವ್ಯಾಜ್ಯವನ್ನು ತೀರಿಸಿಕೊಡಬೇಕು,' ಎಂದು ಇನ್ನೊಬ್ಬನು ಬರೆದುಕೊಂಡು ಇದ್ದಾನೆ.

ಭಗವಾನರು ಬಂಡಿಯಿಂದ ಕೆಳಗೆ ಇಳಿದರು. ಮಾಸ್ಟರು ಹಾದಿಯನ್ನು ತೋರುತ್ತ, ಅವರನ್ನು ಮನೆಯೊಳಗೆ ಕರೆದುಕೊಂಡು ಹೋಗುತ್ತಾನೆ. ಭಗವಾನರು ಬೆಳೆದಿರುವ ಹೂಗಿಡುಗಳ ನಡುವೆ ಬರುತ್ತ, ಅಂಗಿಯ ಗುಂಡಿಯಲ್ಲಿ ಕಯ್ಯನ್ನಿಟ್ಟುಕೊಂಡು, 'ಅಂಗಿಯ ಗುಂಡಿಯು ಬಿಚ್ಚಿಹೋಗಿದೆ. ಇದರಿಂದ ದೋಷವೇನೂ ಇಲ್ಲವೇ ?' ಎಂದು ಮಾಸ್ಟರನ್ನು ಕೇಳಿದರು. ಭಗವಾನರ ಮೆಯ್ಯ ಮೇಲೆ ಒಂದು ಲಾಂಗ್‌ಕ್ಲಾತಿನ ಅಂಗಿ, ಒಂದು ಕೆಂಪು ಅಂಚಿನ ಬಟ್ಟೆ. ಹೆಗಲ ಮೇಲೆ ಬಟ್ಟೆಯ ಸೆರಗು. ಪಾದದಲ್ಲಿ ಬಣ್ಣಹಾಕಿದ ಜೋಡು. ಆಗ ಮಾಸ್ಟರು, 'ತಾವು ಇದಕ್ಕಾಗಿ ಚಿಂತಿಸತಕ್ಕದ್ದಿಲ್ಲ. ಇದರಿಂದ ತಮಗೇನೂ ದೋಷವಿಲ್ಲ. ಗುಂಡಿಯನ್ನು ತಾವು ಹಾಕಿಕೊಳ್ಳಬೇಕಾದ ಆವಶ್ಯಕತೆಯೂ ಇಲ್ಲ,' ಎಂದು ಹೇಳಿದನು. ಬಾಲಕನಿಗೆ ಬುದ್ಧಿ ಹೇಳಿದರೆ, ಅವನು ಹೇಗೆ ನಿಶ್ಚಿಂತನಾಗಿರುವನೋ, ಹಾಗೆ ಭಗವಾನರೂ ಆ ಮಾತನ್ನು ಕೇಳಿ ನಿಶ್ಚಿಂತರಾದರು.

ದ್ವಿತೀಯ ಪರಿಚ್ಛೇದ

ವಿದ್ಯಾಸಾಗರ.

ಭಗವಾನರು ಭಕ್ತರೊಡನೆ ಮೆಟ್ಟಿಲಿಂದ ಮೇಲಕ್ಕೆ ಹತ್ತಿ, ಬಡಗಲಲ್ಲಿರುವ ಕೋಣೆಗೆ ನೆಟ್ಟಗೆ ಪ್ರವೇಶಮಾಡಿದರು. ವಿದ್ಯಾಸಾಗರನು ಕೊಟ್ಟಡಿಯ ಉತ್ತರದಲ್ಲಿ, ದಕ್ಷಿಣಾಭಿಮುಖನಾಗಿ ಕುಳಿತುಕೊಂಡಿದ್ದನು. ಮುಂದುಗಡೆ ಉದ್ದವಾದ ನಾಲ್ಕು ಮೂಲೆಯ ಮಿರುಗುವ ಮೇಜು, ಅದರ ಪೂರ್ವದ ಅಂಚಿನಲ್ಲಿ ಪಶ್ಚಿಮಮುಖವಾಗಿ

ಅದರ ಹಿಂದೆ ಒಂದು ಬೆಂಚು, ಮೇಜಿನ ಪೂರ್ವಭಾಗದಲ್ಲಿಯೂ, ಪಶ್ಚಿಮದಲ್ಲಿಯೂ, ಕುರ್ಚಿ ಕುರ್ಚಿಗಳಿದ್ದುವು. ವಿದ್ಯಾಸಾಗರನು ಒಬ್ಬಿಬ್ಬರು ಸ್ನೇಹಿತರೊಡನೆ ಮಾತನಾಡುತ್ತಿದ್ದನು.

ಶ್ರೀರಾಮಕೃಷ್ಣರು ಕೊಟ್ಟಡಿಯನ್ನು ಪ್ರವೇಶಮಾಡಿದ ಕೂಡಲೇ, ವಿದ್ಯಾಸಾಗರನು ಎದ್ದುನಿಂತು, ಅವರಿಗೆ ಅಭ್ಯರ್ಥನೆಯನ್ನು ಮಾಡಿದನು. ಭಗವಾನರು ಎಡಗಯ್ಯನ್ನು ಮೇಜಿನ ಮೇಲೆ ಇರಿಸಿಕೊಂಡು, ಪಶ್ಚಿಮಾಭಿಮುಖರಾಗಿ, ಮೇಜಿನ ಪೂರ್ವದಿಕ್ಕಿನಲ್ಲಿ ನಿಂತಿದ್ದಾರೆ. ಅವರ ಹಿಂದೆಯೇ ಬೆಂಚು ಇರುವಲ್ಲಿ ಅವರು ಪೂರ್ವಪರಿಚಿತರಂತೆ ಏಕದೃಷ್ಟಿಯಿಂದ ವಿದ್ಯಾಸಾಗರನನ್ನು ನೋಡಿ ನಸುನಗುತ್ತಿದ್ದಾರೆ.

ವಿದ್ಯಾಸಾಗರನಿಗೆ ೬೨-೬೩ ವಯಸ್ಸು ಆಗಿರಬಹುದು. ಆತನು ಭಗವಾನರಿಗಿಂತ ೧೬-೧೭ ವಯಸ್ಸು ದೊಡ್ಡವನು. ಅವನು ಥಾನುಬಟ್ಟೆಯನ್ನು ಉಟ್ಟಿದ್ದನು. ಕಾಲಿನಲ್ಲಿ ಜೋಡು, ಮೆಯ್ಯ ಮೇಲೆ ಫ್ಲಾನಲಿನ ಅರೆದೋಳ ಅಂಗಿಯನ್ನು ಹಾಕಿಕೊಂಡಿದ್ದನು. ತಲೆಯ ನಾಲ್ಕು ಕಡೆಯನ್ನೂ ಒರಿಸ್ಸಾ ದೇಶದವರಂತೆ ಕ್ಷೌರಮಾಡಿಸಿಕೊಂಡಿದ್ದನು. ಮಾತನಾಡುವಾಗ ಅವನ ಹಲ್ಲುಗಳು ಉಜ್ವಲವಾಗಿ ಕಾಣುತ್ತಿದ್ದುವು. ಅವನು ಅವುಗಳನ್ನು ಕಟ್ಟಿಸಿಕೊಂಡಿದ್ದಾನೆ. ಅವನ ತಲೆಯು ತುಂಬ ದಪ್ಪ. ಹಣೆಯು ಎತ್ತರವಾಗಿದ್ದಿತು. ಅವನ ಆಕಾರವು ಕೊಂಚ ಕುಳ್ಳು. ಅವನು ಬ್ರಾಹ್ಮಣನು. ಆದುದರಿಂದ ಕೊರಲಲ್ಲಿ ಜನಿವಾರವಿದ್ದಿತು.

ವಿದ್ಯಾಸಾಗರನು ತುಂಬ ಗುಣವುಳ್ಳವನು. ಅವನ ಮೊದಲನೆಯ ಗುಣ,- ವಿದ್ಯಾನುರಾಗ. 'ನಾನು ಎಷ್ಟೋ ಓದಬೇಕೆಂದು ಬಹುವಾಗಿ ಆಸೆಯಿಟ್ಟುಕೊಂಡಿದ್ದೆನು. ಈಗ ಏನ ತಾನೇ ಮಾಡಿದ್ದೇನೆ? ಸಂಸಾರದಲ್ಲಿ ಬಿದ್ದು. ಅದಕ್ಕೆ ಸಮಯವೇ ಸಿಕ್ಕಲಿಲ್ಲ', ಎಂದು ಮಾಸ್ಟರೊಂದಿಗೆ ಹೇಳಿಕೊಂಡು, ಅವನು ನಿಜವಾಗಿಯೂ ಅತ್ತುಬಿಟ್ಟನು. ಅವನ ಎರಡನೆಯ ಗುಣ,- ಸರ್ವಜೀವದಲ್ಲಿಯೂ ದಯೆ. ವಿದ್ಯಾಸಾಗರನು ದಯಾಸಾಗರನು. ಗೌಳಿಗರು ಹಸುವಿನ ಹಾಲನ್ನು ಕರುಗಳಿಗೆ ಬಿಡದೆ ಕರೆದುಕೊಳ್ಳುವುದನ್ನು ಕಂಡು, ಅವನು ಬಹುದಿನಗಳ ವರೆಗೆ ಹಾಲ ಕುಡಿಯುವುದನ್ನೇ ನಿಲ್ಲಿಸಿಬಿಟ್ಟನು. ದೇಹದಲ್ಲಿ ತುಂಬ ಅಸುಸ್ಥತೆಯಾದಾಗ ಅವನು ಬಹುಕಾಲದ ಮೇಲೆ ಹಾಲನ್ನು ತೆಗೆದುಕೊಳ್ಳುತ್ತಿದ್ದನು. ಕುದುರೆಯು ತನ್ನ ಕಷ್ಟವನ್ನು ಹೇಳಿಕೊಳ್ಳಲಾರದೆಂದು ಮರುಗಿ, ಅವನು ಬಂಡಿಯನ್ನು ಏರುತ್ತಲೇ ಇರಲಿಲ್ಲ. ಒಂದು ದಿನ ಕೂಲಿಯವನೊಬ್ಬನು, ಕಾಲರಾ ರೋಗದಿಂದ ಪೀಡಿತನಾಗಿ, ಹಾದಿಯಲ್ಲಿ ಬಿದ್ದಿದ್ದನು. ಹತ್ತಿರದಲ್ಲಿ ಅವನ ಗೂಡೆಯೂ ಬಿದ್ದಿದ್ದಿತು. ಅದನ್ನು ಕಂಡು, ವಿದ್ಯಾಸಾಗರನು ಅವನನ್ನು ತನ್ನ ಮನೆಗೆ ತಾನೇ ಎತ್ತಿಕೊಂಡು ಹೋಗಿ ಉಪಚರಿಸಿದನು. ಅವನ ಮೂರನೆಯ ಗುಣ,- ಸ್ವಾತಂತ್ರ್ಯಪ್ರಿಯತೆ. ಮೇಲಣ ಅಧಿಕಾರಿಗಳೊಡನೆ ತನಗೆ

ಏಕಾಭಿಪ್ರಾಯವಿಲ್ಲದಿರುವುದಕ್ಕೆ ... ದರಿಂದ, ಅವನು ಸಂಸ್ಕೃತಪಾಠಶಾಲೆಯ ಅಧ್ಯಕ್ಷಪದವಿಯನ್ನೇ ಬಿಟ್ಟುಬಿಟ್ಟ. ಅವನ ನಾಲ್ಕನೆಯ ಗುಣ,–ಲೋಕಾಪೇಕ್ಷೆಯನ್ನು ಮಾಡುತ್ತಿರಲಿಲ್ಲ. ಒಬ್ಬ ಉಪಾಧ್ಯಾಯನಲ್ಲಿ ಅವನಿಗೆ ತುಂಬ ಪ್ರೀತಿಯಿದ್ದಿತು. ಆತನ ಮಗಳ ಮದುವೆಯಲ್ಲಿ, ಹೆಣ್ಣಿಗೆ ಕೊಡುವ ಉಡುಗೊರೆಯನ್ನು ತನ್ನ ಕಂಕುಳಲ್ಲಿ ಇರುಕಿಕೊಂಡು ಹೊರಟನು. ಅವನ ಐದನೆಯ ಗುಣ,–ಮಾತೃಭಕ್ತಿ ಮತ್ತು ಮನಸ್ಥೈರ್ಯ. ಅವನ ತಾಯಿಯು, 'ಈಶ್ವರ, ನೀನು ಈ ತಮ್ಮನ ಮದುವೆಗಾದರೂ ಬಾರದಿದ್ದರೆ, ನನ್ನ ಮನಸ್ಸಿಗೆ ತುಂಬ ಕೊರತೆಯಾಗುತ್ತದೆ', ಎಂದು ಹೇಳಿದಳು. ಅದಕ್ಕಾಗಿ ಅವನು ... ತಯಿಂದ ಕಾಲ ನಡೆಯಲ್ಲಿ ಹೊರಟನು. ಹಾದಿಯಲ್ಲಿ ದಾಮೋದರ ನದಿ. ದೋಣಿ ಇರಲಿಲ್ಲ. ಆದುದರಿಂದ, ಅವನು ಈಜಿಕೊಂಡು ನದಿಯನ್ನು ದಾಟಿ, ಒದ್ದೆಯ ಬಟ್ಟೆಯೊಡನೆಯೇ ಮದುವೆಯ ರಾತ್ರಿ ವೀರಸಿಂಹ ಗ್ರಾಮಕ್ಕೆ ಹೋಗಿ, ತಾಯಿ ಹತ್ತಿರ ನಿಂತುಕೊಂಡು, 'ಅಮ್ಮಾ, ಬಂದಿದ್ದೇನೆ,' ಎಂದು ಹೇಳಿದನು.

(ಶ್ರೀರಾಮಕೃಷ್ಣರಿಗೆ ವಿದ್ಯಾಸಾಗರನ ಪೂಜೆ)

ಭಗವಾನರು ಭಾವಾವಿಷ್ಟರಾಗಿದ್ದು, ಕೊಂಚ ಹೊತ್ತಿನ ಮೇಲೆ ನಿಂತುಕೊಂಡಿದ್ದಾರೆ. ಭಾವಾವಸ್ಥೆಯು ಭಂಗವಾಗುವುದಕ್ಕಾಗಿ ಮಧ್ಯೇ ಮಧ್ಯೇ ನೀರ ಕುಡಿಯುತ್ತೇನೆಂದು ಹೇಳುತ್ತಿದ್ದಾರೆ. ಅವರನ್ನು ನೋಡಲಿಕ್ಕಾಗಿ, ಮನೆಯ ಮಕ್ಕಳೂ, ಸ್ನೇಹಿತರೂ ಬಂದು ನಿಂತಿದ್ದಾರೆ.

ಭಗವಾನರು ಭಾವಾವಿಷ್ಟರಾಗಿ ಬೆಂಚಿನ ಮೇಲೆ ಕುಳಿತಿದ್ದಾರೆ. ಓದುವುದಕ್ಕಾಗಿ ವಿದ್ಯಾಸಾಗರನಿಂದ ಸಹಾಯ್ಯವನ್ನು ಪಡೆಯುವುದಕ್ಕೋಸ್ಕರ, ೧೭–೧೮ ವಯಸ್ಸಿನ ಹುಡುಗನೊಬ್ಬನು ಬಂದು, ಅದೇ ಬೆಂಚಿನ ಮೇಲೆ ಕುಳಿತಿದ್ದಾನೆ. ಭಾವಾವಿಷ್ಟರಾದ ಪರಮಹಂಸರು, ಋಷಿಗಳ ಅಂತರ್ದೃಷ್ಟಿಯಂತೆ, ಆ ಹುಡುಗನ ಮನದಲ್ಲಿರುವುದನ್ನೆಲ್ಲ ತಿಳಿದವರಾಗಿ, ಕೊಂಚ ಸರಿದು ಕುಳಿತುಕೊಂಡು, 'ಹೇ ಮಾತೇ, ಈ ಹುಡುಗನಿಗೆ ಸಂಸಾರಾಸಕ್ತಿಯು ಹೆಚ್ಚಾಗಿದೆ. ಇದು ನಿನ್ನ ಅವಿದ್ಯಾಸಂಸಾರ. ಇವನು ಅವಿದ್ಯೆಯ ಹುಡುಗನು', ಎಂದು ಭಾವದಲ್ಲಿ ಹೇಳಿದರು. ಬ್ರಹ್ಮವಿದ್ಯೆಗಾಗಿ ಆರು ವ್ಯಾಕುಲರಾಗಿಲ್ಲವೋ, ಅವರಿಗೆ ಅರ್ಥಕರಿಯಾದ ಈ ವಿದ್ಯಾರ್ಜನೆಯು ಕೇವಲ ಶ್ರಮವನ್ನುಂಟುಮಾಡುತ್ತದೆ. ಹೀಗೆಂದು ಭಗವಾನರು ಹೇಳುತ್ತಿದ್ದಾರೆಯೋ?

ವಿದ್ಯಾಸಾಗರನು ಆತುರದಿಂದ ಒಬ್ಬನಿಗೆ ನೀರ ತರುವಂತೆ ಹೇಳಿ, ಮಾಸ್ಟರನ್ನು ನೋಡಿ, 'ಏನಾದರೂ ಫಲಾಹಾರವನ್ನು ತರಿಸಿದರೆ, ಇವರು ಸ್ವೀಕರಿಸುತ್ತಾರೆಯೋ' ಎಂದು ಕೇಳಿದನು. ಅದಕ್ಕೆ ಅವನು, 'ತರಿಸಬಾರದೇಕೆ, ಸ್ವಾಮೀ,' ಎಂದು ಹೇಳಿದನು. ಆಗ ವಿದ್ಯಾಸಾಗರನು ಆತುರದಿಂದ ಒಳಗೆ ಹೋಗಿ, ಸಿಹಿಯಾದ

ಫಲಾಹಾರಸಾಮಗ್ರಿಗಳನ್ನು ತಂದು, 'ಇವು [illegible]ರ್ವಮಾನದಿಂದ ಬಂದಿವೆ', ಎಂದು ಹೇಳಿ, ಭಗವಾನರಿಗೆ ಕೊಂಚ ಕೊಟ್ಟನು. ಹಾಜ[illegible]ವಿಗೂ ಭವನಾಥನಿಗೂ ಕೊಂಚ ಕೊಡಿಸಿದನು. ಮಾಸ್ಟರಿಗೆ ಕೊಡುವುದಕ್ಕೆ ಬ[illegible]ಾಗ ವಿದ್ಯಾಸಾಗರನು, 'ಇವನು ಮನೆಯ ಹುಡುಗ. ಇವನಿಗೇನು ತಡೆ', ಎಂದು [illegible]ದನು. ಪರಮಹಂಸರು ವಿದ್ಯಾಸಾಗರನಿಗೆ ಒಬ್ಬ ಭಕ್ತಬಾಲಕನ ವೃತ್ತಾಂತವನ್ನು [illegible]ವರಿಸಿದರು. ಆ ಬಾಲಕನು ಆಗ ಅವರ ಇದಿರಿಗೆ ಕುಳಿತಿದ್ದನು. ಭಗವಾನ[illegible]ನನ್ನು ನೋಡಿ, 'ಈ ಹುಡುಗನು ಅಂತಸ್ಸಾರವುಳ್ಳವನು. ಫಲ್ಗುನದಿಯಲ್ಲಿ [illegible]ಮೇಲೆ ಬರಿಯ ಮರಳಿದ್ದರೂ, ತೋಡಿದರೆ ಒಳಗೆ ನೀರು ಹರಿಯುವುದು ಹೇಗೆ ಕಾಣುತ್ತದೆಯೋ, ಹಾಗೆಯೇ ಇವನು, ಮೇಲೆ ಏನೂ ಕಾಣದಿದ್ದರೂ, ಅಭ್ಯಂತರದಲ್ಲಿ ಸಾರವುಳ್ಳವನಾಗಿದ್ದಾನೆ,' ಎಂದು ಹೇಳಿದರು.

ಫಲಾಹಾರವಾದ ಬಳಿಕ, ಭಗವಾನರು ವಿದ್ಯಾಸಾಗರನ ಸಂಗಡ ಮಾತನಾಡುತ್ತಿದ್ದರು. ಅವರನ್ನು ನೋಡುವುದಕ್ಕೆ ಆ ಕೋಣೆಯ ತುಂಬ ಜನರು ತುಂಬಿದ್ದಾರೆ. ಕೆಲವರು ಕುಳಿತಿದ್ದಾರೆ. ಕೆಲವರು ನಿಂತಿದ್ದಾರೆ.

ಶ್ರೀರಾಮಕೃಷ್ಣ :—ಈ ದಿನ ಸಾಗರವನ್ನು ಸೇರಿದೆನು. ಇದುವರೆಗೆ ಕಾಲುವೆಯ ನೀರು, ಗದ್ದೆಯ ನೀರು, ಅಷ್ಟಪ್ಪ ಎಂದರೆ ನದಿ, ಇವುಗಳನ್ನು ಮಾತ್ರ ನೋಡಿದ್ದೆನು. ಈ ದಿವಸ ಸಾಗರವನ್ನು ನೋಡುತ್ತಿದ್ದೇನೆ. (ಎಲ್ಲರೂ ನಗುತ್ತಾರೆ.)

ವಿದ್ಯಾಸಾಗರ :—(ನಗುತ್ತ), ಹಾಗಾದರೆ ಇಲ್ಲಿಂದ ಉಪ್ಪು ನೀರನ್ನು ತೆಗೆದುಕೊಂಡು ಹೋಗಬಹುದು. (ಎಲ್ಲರೂ ನಗುತ್ತಾರೆ)

ಶ್ರೀರಾಮಕೃಷ್ಣ :—ಇಲ್ಲ ಸ್ವಾಮೀ, ಇಲ್ಲ, ಉಪ್ಪು ನೀರೇಕೆ. ನೀವು ಅವಿದ್ಯಾಸಾಗರರೇ? ವಿದ್ಯಾಸಾಗರರು. (ಎಲ್ಲರೂ ನಗುತ್ತಾರೆ.) ನೀವು ಕ್ಷೀರಸಮುದ್ರ (ಎಲ್ಲರೂ ನಗುತ್ತಾರೆ.)

ವಿದ್ಯಾಸಾಗರ :—ತಾವು ಹಾಗೆ ಹೇಳಬಹುದು, ನಿಜ.

ರಾಮಕೃಷ್ಣ :—ನಿಮ್ಮದು ಸಾತ್ವಿಕಕರ್ಮ, ಹೆಚ್ಚಾದ ಸಾತ್ವಿಕಗುಣದಿಂದ ಮಿಶ್ರವಾದ ರಜೋಗುಣ. ಸತ್ವದಿಂದ ದಯೆಯುಂಟಾಗುತ್ತದೆ. ದಯೆಗಾಗಿ ಮಾಡುವ ಕರ್ಮವೆಲ್ಲ ರಾಜಸಿಕಕರ್ಮವೇ ಸರಿ. ಆದರೆ ಈ ರಜೋಗುಣವು ಸತ್ತ್ವದ ರಜೋಗುಣ, ಇದರಿಂದ ದಯೆಯುಂಟಾಗುತ್ತದೆ. ಇದು ದೋಷವಲ್ಲ. ಶುಕದೇವಾದಿಗಳು ಜನರಿಗೆ ಈಶ್ವರವಿಷಯವಾದ ಶಿಕ್ಷೆಯನ್ನು ಕೊಡುವುದಕ್ಕಾಗಿ ದಯೆಯನ್ನು ಇಟ್ಟಿದ್ದರು. ನೀವು ಅನ್ನದಾನ ವಿದ್ಯಾದಾನಗಳನ್ನು

ಮಾಡುತ್ತೀರಿ ಅದು ... ಯದು. ಪರಂತು, ಅವನ್ನು ನಿಷ್ಕಾಮದಿಂದ ಮಾಡಬಲ್ಲರಾದರೆ, ಅ...ಂದ ನಿಮಗೆ ಭಗವಲ್ಲಾಭವಾಗುತ್ತದೆ. ಕೆಲವರು ಹೆಸರಿಗೋಸ್ಕರವಾಗಿ...ೂ, ಕೆಲವರು ಪುಣ್ಯಕ್ಕೋಸ್ಕರವಾಗಿಯೂ, ಕರ್ಮಗಳನ್ನು ಮಾಡು...ತ್ತಾರೆ. ಅವರ ಕರ್ಮವು ನಿಷ್ಕಾಮಕರ್ಮವಲ್ಲ; ನೀವು ಸಿದ್ಧರಾಗಿಯೆ...ದ್ದೀರಿ.

ವಿದ್ಯಾಸಾಗರ:—ಮ... ...ಯುರೇ, ಹೇಗೆ ಸಿದ್ಧನಾಗಿದ್ದೇನೆ?

ಶ್ರೀರಾಮಕೃಷ್ಣ:—(ನ...ತ್ತ) ಉರುಳಿಗೆಡ್ಡೆಯೂ, ಪಡವಲ ಕಾಯಿಯೂ ಸಿದ್ಧವಾದರ (ಬೆಂದರೆ), ಮೃದುವಾಗುತ್ತವೆ. ತಾವು ತುಂಬ ಮೃದುವಾಗಿದ್ದೀರಿ. ಅದರಿಂದಲೇ ತಮಗೆ ಅಷ್ಟೊಂದು ದಯೆ (ನಗುತ್ತಾರೆ.)

ವಿದ್ಯಾಸಾಗರ:—(ನಗುತ್ತ), ಕಲೆಸಿದ ಉದ್ದಿನ ಹಿಟ್ಟು, ಸಿದ್ಧವಾದರೂ ಗಟ್ಟಿಯಾಗಿಯೇ ಇರುವುದಿಲ್ಲವೇ? (ಎಲ್ಲರೂ ನಗುತ್ತಾರೆ.)

ಶ್ರೀರಾಮಕೃಷ:—ನೀವು ಹಾಗಲ್ಲ, ಸ್ವಾಮೀ. ಬರಿಯ ಪಂಡಿತರು ಅರ್ಧಪಕ್ವವಾಗಿರುತ್ತಾರೆ. ಅವರಿಗೆ ಇತ್ತಲೂ ಇಲ್ಲ; ಅತ್ತಲೂ ಇಲ್ಲ. ರಣಹದ್ದು ಬಲು ಮೇಲಕ್ಕೆ ಹಾರುತ್ತದೆ. ಪರಂತು, ಹೆಣಗಳಿರುವ ಕಡೆಯಲ್ಲಿಯೇ, ಅದಕ್ಕೆ ದೃಷ್ಟಿ. ರಣಹದ್ದು ಕೊಳೆಯುವುವನ್ನೂ, ಜೀವವಿಲ್ಲದುವುಗಳನ್ನೂ ಹುಡುಕುವಂತೆ, ಬರಿಯ ಪಂಡಿತರೂ, ನಾಮಮಾತ್ರಪಂಡಿತರೂ ಕಾಮಿನಿಯಲ್ಲಿಯೂ ಕಾಂಚನದಲ್ಲಿಯೂ ಆಸಕ್ತರಾಗಿದ್ದಾರೆ. ದಯೆ, ಭಕ್ತಿ ವೈರಾಗ್ಯಗಳೇ ಗ ವಿದ್ಯೆಯ ಐಶ್ವರ್ಯ.

ವಿದ್ಯಾಸಾಗರನು ಮಾತನಾಡದೆ ಕೇಳುತ್ತಿದ್ದಾನೆ. ಎಲ್ಲರೂ ಏಕದೃಷ್ಟಿಯಿಂದ ಈ ಆನಂದಮಯಪುರುಷನನ್ನು ನೋಡುತ್ತ ಅವರ ಕಥಾಮೃತವನ್ನು ಪಾನಮಾಡುತ್ತಿದ್ದಾರೆ.

ಮೂರನೆಯ ಪರಿಚ್ಛೇದ

ಜ್ಞಾನಯೋಗ ಅಥವಾ ವೇದಾಂತವಿಚಾರ

ವಿದ್ಯಾಸಾಗರನು ಮಹಾಪಂಡಿತನು. ಅವನು ಸಂಸ್ಕೃತಪಾಠಶಾಲೆಯಲ್ಲಿ ಓದುತ್ತಿದ್ದಾಗ, ತನ್ನ ತರಗತಿಯ ಹುಡುಗರಲ್ಲೆಲ್ಲಾ ಸರ್ವೋತ್ಕೃಷ್ಟನೆನಿಸಿ, ಒಂದೊಂದು ಪರೀಕ್ಷೆಯಲ್ಲಿಯೂ ಮೊದಲನೆಯವನಾಗಿ, ಸ್ವರ್ಣಪದಕಗಳನ್ನೂ ಛಾತ್ರವೃತ್ತಿ

ಯನ್ನೂ (Scholarship) ಪಡೆದನು. ಆಮೇಲೆ ಸ್ವಲ್ಪ ಕಾಲದಲ್ಲೇ ಬರುತ್ತ, ಅವನು ಆ ಸಂಸ್ಕೃತ ಪಾಠಶಾಲೆಗೇ ಮುಖ್ಯೋಪಾಧ್ಯಾಯನಾದನು. ಅವನಿಗೆ ಸಂಸ್ಕೃತವ್ಯಾಕರಣ ದಲ್ಲಿಯೂ, ಕಾವ್ಯದಲ್ಲಿಯೂ, ವಿಶೇಷವಾದ ಪಾರದರ್ಶಿತೆಯಿದ್ದಿತು. ಅಧ್ಯವಸಾಯ ಗುಣದಿಂದ, ಅವನು, ತಾನೇ ಪ್ರಯತ್ನಪಟ್ಟು ಇಂಗ್ಲೀಷನ್ನೂ ಕಲಿತುಕೊಂಡನು.

ಅವನು ಧರ್ಮವಿಷಯದಲ್ಲಿ ಆರಿಗೂ ಶಿಕ್ಷೆಯನ್ನು ಕೊಡುತ್ತಿರಲಿಲ್ಲ. ದರ್ಶನಾದಿಗ್ರಂಥಗಳನ್ನೆಲ್ಲ ಓದಿಕೊಂಡಿದ್ದನು. ಒಂದು ಸಲ ಮಾಷ್ಟರು ಅವನನ್ನು ಕುರಿತು, 'ತಾವು ಹಿಂದೂದರ್ಶನವನ್ನು ಹೇಗೆ ಭಾವಿಸಿದ್ದೀರಿ?' ಎಂದು ಕೇಳಿದನು. ಆತನು ಅದಕ್ಕೆ, 'ಅವೆಲ್ಲವೂ ನನಗೆ ತಿಳಿದಿದೆ; ಅದನ್ನು ಅರಿಯಬೇಕೆಂದು ಆರಾದರೂ ನನ್ನಲ್ಲಿಗೆ ಬಂದರೆ, ನಾನು ಅವರಿಗೆ ಹೇಳಿಕೊಡಲಾರೆನು,' ಎಂದು ಹೇಳಿದನು. ವಿದ್ಯಾಸಾಗರನು ವೈದಿಕರಂತೆ ಶ್ರಾದ್ಧಾದಿಧರ್ಮಕರ್ಮಗಳನ್ನೆಲ್ಲ ಮಾಡುತ್ತಾನೆ; ಕೊರಲಲ್ಲಿ ಉಪವೀತವನ್ನು ಹಾಕಿಕೊಂಡಿದ್ದಾನೆ. ಎಲ್ಲ ಕಾಗದಗಳನ್ನೂ ಬಂಗಾಳಿಯಲ್ಲಿಯೇ ಬರೆಯುತ್ತಾನೆ. ಅವುಗಳಲ್ಲಿ, 'ಶ್ರೀಃ, ಶ್ರೀಹರಿಶ್ಶರಣಂ', ಎಂದು ಮೊತ್ತ ಮೊದಲು ಭಗವಂತನಿಗೆ ವಂದನೆಮಾಡುತ್ತಾನೆ.

ಒಂದು ದಿನ ಮಾಷ್ಟರು, 'ನಿಮಗೆ ಈಶ್ವರಸಂಬಂಧವಾದ ಭಾವನೆಯೇನಿದೆ?' ಎಂದು ವಿದ್ಯಾಸಾಗರನನ್ನು ಕೇಳಿದನು. ಆ ಮಾತಿಗೆ ಆತನು, 'ಭಗವಂತನನ್ನು ಅರಿಯುವುದಕ್ಕೆ ಆವ ಉಪಾಯವೂ ಇಲ್ಲ. ಈ ಸಂದರ್ಭದಲ್ಲಿ ಏನ ಮಾಡಬೇಕು. ಹೇಗಿರುವುದು ಉಚಿತವೆಂದು ನಮ್ಮ ಅಂತರಂಗಕ್ಕೆ ತೋರುವುದೋ, ಆ ರೀತಿ ಇರುವುದು ನಮ್ಮ ಕರ್ತವ್ಯ. ಎಲ್ಲರೂ ಇದೇ ರೀತಿಯಾಗಿ ಭಾವಿಸಿಕೊಂಡು ನಡೆದರೆ, ಪೃಥಿವಿಯು ಸ್ವರ್ಗವಾಗಿ ಹೋಗುತ್ತದೆ. ಜಗತ್ತಿಗೆ ಮಂಗಳವಾಗುವಂತೆ ಒಬ್ಬೊಬ್ಬನೂ ಪ್ರಯತ್ನಮಾಡಬೇಕು,' ಎಂದು ಹೇಳಿದನು.

ವಿದ್ಯೆ ಅವಿದ್ಯೆಗಳ ವಿಷಯವಾಗಿ ಮಾತನಾಡುತ್ತಿದ್ದಾಗ, ಭಗವಾನರು ಬ್ರಹ್ಮಜ್ಞಾನವಿಷಯವಾಗಿ ಮಾತನ್ನೆತ್ತಿದರು. ವಿದ್ಯಾಸಾಗರನು ಮಹಾಪಂಡಿತನು. ಷಡ್ದರ್ಶನಗಳನ್ನೂ ಬಲ್ಲವನು. ಆದರೆ ಈಶ್ವರವಿಷಯವನ್ನು ಕೊಂಚವಾಗಲಿ ತಿಳಿದಿರಲಿಲ್ಲ.

(ಬ್ರಹ್ಮನು ನಿರ್ಲಿಪ್ತನು. ದುಃಖಾದಿಗಳು ಜೀವರ ಸಂಬಂಧದಲ್ಲಿ)

ಶ್ರೀರಾಮಕೃಷ್ಣ :—ಬ್ರಹ್ಮನು ವಿದ್ಯೆ ಮತ್ತು ಅವಿದ್ಯೆಗಳಿಗೆ ಅತ್ತತ್ತ; ಅವನು ಮಾಯಾತೀತನು. ಈ ಜಗತ್ತಿನಲ್ಲಿ ವಿದ್ಯಾಮಾಯೆ ಅವಿದ್ಯಾಮಾಯೆಗಳೆಂದು ಎರಡಿವೆ. ಜ್ಞಾನಭಕ್ತಿಗಳೂ, ಕಾಮಿನೀಕಾಂಚನಗಳೂ ಇವೆ. ಸತ್ತೂ ಇದೆ, ಅಸತ್ತೂ ಇದೆ. ಒಳ್ಳೆಯದೂ ಇದೆ. ಕೆಟ್ಟುದೂ ಇದೆ. ಆದರೂ ಬ್ರಹ್ಮನು ನಿರ್ಲಿಪ್ತನು. ಒಳ್ಳೆಯದು, ಕೆಟ್ಟುದು ಎಂಬಿವು ಜೀವರ ಪಕ್ಷದಲ್ಲಿಯೇ; ಇವುಗಳಲ್ಲಿ ಭಗವಂತನಿಗೆ ಆವ ಸಂಬಂಧವೂ ಇಲ್ಲ.

ದೀಪದ ಮುಂದೆ ಒಬ್ಬನ[illegible]ವತವನ್ನು ಓದುತ್ತಾನೆ, ಒಬ್ಬನು ಸುಳ್ಳು ಪತ್ರವನ್ನು ಬರೆಯುತ್ತಾ[illegible] ಆದರೆ ದೀಪವು ನಿರ್ಲಿಪ್ತವಾಗಿಯೇ ಇದೆ. ಸೂರ್ಯನು ಒಳ್ಳೆಯವರ ಮ[illegible]ಲೆಯೂ ಬೆಳಕನ್ನು ಬೀರುತ್ತಾನೆ, ಕೆಟ್ಟವರ ಮೇಲೆಯೂ ಬೀರುತ್ತಾ[illegible].

ಆದರೆ ದುಃಖ, ಪಾಪ, [illegible]ಂತಿಯೆಂಬಿವೆಲ್ಲವೂ ಏತಕ್ಕೆ ? ಇವೆಲ್ಲವೂ ಜೀವರ ಸಂಬಂಧದಲ್ಲಿ; ಬ್ರ[illegible] ನಿರ್ಲಿಪ್ತನು. ಹಾವಿನಲ್ಲಿ ವಿಷವಿದೆ, ಇತರರನ್ನು ಕಡಿದರೆ ಅವರು [illegible]ತ್ತಾರೆ. ಪರಂತು, ಹಾವಿಗೆ ಅದರಿಂದ ಏನೂ ಆಗುವುದಿಲ್ಲ.

(ಬ್ರಹ್ಮವು ಅನಿರ್ವಚನೀಯ, ಅವ್ಯಪದೇಶ್ಯ.)

ಬ್ರಹ್ಮವು ಏನೆಂಬುದನ್ನು ಬಾಯಿಂದ ಹೇಳಲಾಗುವುದಿಲ್ಲ. ಎಲ್ಲ ವಸ್ತುಗಳೂ ಉಚ್ಛಿಷ್ಟ. ಬಾಯಿಂದ ಹೇಳಲೂ, ಓದಲೂ ಬೇಕಾಗುವ, ವೇದ, ಶಾಸ್ತ್ರ, ಪುರಾಣ, ದರ್ಶನ, ತಂತ್ರ ಎಂಬಿವೆಲ್ಲವೂ ಎಂಜಲು. ಆದರೆ ಆವ ವಸ್ತುವು ಆವ ತೆರದಿಂದಲೂ ಎಂಜಲಾಗುವುದಿಲ್ಲವೋ, ಆ ವಸ್ತುವೇ ಬ್ರಹ್ಮವು. ಬ್ರಹ್ಮನು ಏನೆಂಬುದನ್ನು ಇದು ವರೆಗೆ ಆರೂ ಬಾಯಿಂದ ಹೇಳಬಲ್ಲವರು ಇಲ್ಲ.

ವಿದ್ಯಾಸಾಗರನು (ಸ್ನೇಹಿತರಿಗೆ) ಆಹಾ! ಇದು ದಿವ್ಯವಾದ ಮಾತು. ಈಗ ನಾನು ಒಂದು ಹೊಸದಾದ ವಿಷಯವನ್ನು ಕಲಿತುಕೊಂಡೆನು.

ಶ್ರೀರಾಮಕೃಷ್ಣ :—ಒಬ್ಬ ತಂದೆಗೆ ಇಬ್ಬರು ಹುಡುಗರು. ಅವನು ಹುಡುಗರಿಬ್ಬರಿಗೂ ಬ್ರಹ್ಮವಿದ್ಯೆಯನ್ನು ಕಲಿಸಬೇಕೆಂದು ಬಯಸಿ, ಇಬ್ಬರನ್ನೂ ಗುರುವಿನ ಬಳಿಯಲ್ಲಿ ಬಿಟ್ಟನು. ಕೆಲವು ವರ್ಷಗಳ ಮೇಲೆ, ಮಕ್ಕಳಿಬ್ಬರೂ ಗುರುಗೃಹದಿಂದ ಹಿಂತಿರುಗಿ ತಂದೆಯ ಬಳಿಗೆ ಬಂದು, ಅವನಿಗೆ ಸಾಷ್ಟಾಂಗ ನಮಸ್ಕಾರಮಾಡಿದರು. ಇವರ ಬ್ರಹ್ಮಜ್ಞಾನವು ಹೇಗಿದೆಯೆಂದು ತಿಳಿಯಬೇಕೆಂಬ ಕುತೂಹಲವು ತಂದೆಗೆ ಉಂಟಾಯಿತು. ಅವನು ದೊಡ್ಡ ಮಗನನ್ನು ನೋಡಿ, ' ಮಗೂ, ನೀನು ಎಲ್ಲವನ್ನೂ ಓದಿದ್ದೀಯೆ. ಬ್ರಹ್ಮವು ಹೇಗಿದೆ ಹೇಳು, ನೋಡೋಣ, ' ಎಂದನು. ಆಗ ಹಿರಿಯ ಮಗನು ವೇದದಿಂದ ನಾನಾ ಋಕ್ಕುಗಳನ್ನು ಅನುವಾದಮಾಡುತ್ತ, ಬ್ರಹ್ಮಸ್ವರೂಪವನ್ನು ವಿವರಿಸತೊಡಗಿದನು. ತಂದೆಯು ಸುಮ್ಮನಿದ್ದನು. ಕಿರಿಯ ಮಗನೊಡನೆ ಪ್ರಸ್ತಾಪಮಾಡಿದಾಗ, ಅವನು ಮುಖವನ್ನು ತಗ್ಗಿಸಿಕೊಂಡು, ಏನನ್ನೂ ಹೇಳದೆ ಸುಮ್ಮನಿದ್ದನು. ಬಾಯಿಂದ ಒಂದು ಮಾತನ್ನೂ ಆಡಲಿಲ್ಲ. ಅದನ್ನು ಕಂಡು, ತಂದೆಯು ಸುಪ್ರೀತನಾಗಿ, ' ಅಪ್ಪ, ನೀನೇನೋ

ಬ್ರಹ್ಮವೇನೆಂಬುದನ್ನೂ, ಅದನ್ನು ಹೇಳಿ ಹೇಳಲಾಗುವುದಿಲ್ಲವೆಂಬುದನ್ನೂ, ತಕ್ಕ ಮಟ್ಟಿಗೆ ತಿಳಿದುಕೊಂಡಿದ್ದೀಯೆ' ಎಂದು ಹೇಳಿದನು.

ಬ್ರಹ್ಮಸ್ವರೂಪವನ್ನು ನಾವು ಬಲ್ಲೆವೆಂದು ಜನರು ತಿಳಿದುಕೊಂಡಿದ್ದಾರೆ. ಒಂದು ಸಣ್ಣ ಇರುವೆಯು ಸಕ್ಕರೆಯ ಬೆಟ್ಟಕ್ಕೆ ಹೋಗಿ, ಒಂದು ಕಾಳನ್ನು ತಿಂದು ಹೊಟ್ಟೆಯನ್ನು ತುಂಬಿಕೊಂಡಿತು. [illegible]ವಾಯ, ಅದು ಮತ್ತೊಂದು ಕಾಳನ್ನು ಕಚ್ಚಿಕೊಂಡು ತನ್ನ ಗೂಡಿಗೆ ಹೋಯ್ತು, ಈ ಸಲ ಬಂದು ಆ ಬೆಟ್ಟವನ್ನೆಲ್ಲ ತರುತ್ತೇನೆಂದು ಭಾವಿಸಿಕೊಳ್ಳುತ್ತೆ. ಕ್ಷುದ್ರಜೀವರೆಲ್ಲರೂ ಈ ರೀತಿಯಾಗಿಯೇ ತಿಳಿದುಕೊಳ್ಳುತ್ತಾರೆ. ಬ್ರಹ್ಮನು ಮನೋವಾಗತೀತನೆಂಬುದನ್ನು ಅವರು ಅರಿಯರು.

ಎಷ್ಟೇ ದೊಡ್ಡವರಾದರೂ ಆಗಲಿ, ಅವರು ಬ್ರಹ್ಮವನ್ನು ಅರಿತಿದ್ದಾರೆಯೇನು? ಶುಕದೇವಾದಿಗಳು ಕೂಡ, ದೊಡ್ಡ ಇರುವೆಗಳಂತೆ, ಸಕ್ಕರೆಯ ಬೆಟ್ಟದಲ್ಲಿ ಏಳೆಂಟು ಕಾಳುಗಳನ್ನು ಮಾತ್ರ ಬಾಯೊಳಗೆ ಕಚ್ಚಿಕೊಂಡು ಬರಬಲ್ಲವರಾಗಿದ್ದರು.

(ಬ್ರಹ್ಮನು ಸಚ್ಚಿದಾನಂದಸ್ವರೂಪನು. ಬ್ರಹ್ಮಜ್ಞಾನವೂ ನಿರ್ವಿಕಲ್ಪ ಸಮಾಧಿಯೂ)

ಹಾಗಾದರೆ ವೇದಪುರಾಣಗಳು ಏನ ಹೇಳುತ್ತವೆ? ಅವು ಬ್ರಹ್ಮಸ್ವರೂಪವನ್ನು ಹೇಗೆ ತಿಳಿಸುತ್ತವೆ? ಒಬ್ಬನು ಸಾಗರವನ್ನು ನೋಡಿಕೊಂಡು ಬಂದನು. ಅವನನ್ನು ನೋಡಿ ಮತ್ತೊಬ್ಬನು ಕಡಲು ಹೇಗಿದ್ದಿತೆಂದು ಕೇಳಿದನು. ಅದಕ್ಕೆ ಅವನು, 'ಹಾ! ಏನ ನೋಡಿದೆ? ಅಪ್ಪಪ್ಪ! ಎಂತಹ ದೊಡ್ಡ ಅಲೆಗಳು!' ಎಂದು ಹೇಳಿದನು. ಬ್ರಹ್ಮನ ವಿಷಯವೂ ಹೀಗೆಯೇ. 'ಭಗವಂತನು ಆನಂದಸ್ವರೂಪನು, ಸಚ್ಚಿದಾನಂದನು,' ಎಂದು ವೇದದಲ್ಲಿ ಹೇಳಿದೆ. ಶುಕದೇವಾದಿಗಳು, ಈ ಬ್ರಹ್ಮಸಾಗರದ ತಡಿಯಲ್ಲಿ ನಿಂದು, ದರ್ಶನ ಸ್ಪರ್ಶನಗಳನ್ನು ಮಾಡಿದ್ದರು. ಅವರು ಈ ಸಾಗರದಲ್ಲಿ ಸ್ನಾನಮಾಡಲಿಲ್ಲವೆಂದು ಕೆಲವರ ಮತ. ಆ ಸಾಗರದಲ್ಲಿ ಮುಳುಗಿದರೆ, ಮರಳಿ ಬರುವ ಸಂಭವವೇ ಇಲ್ಲ.

ಸಮಾಧಿಸ್ಥನಾದರೆ ಬ್ರಹ್ಮಜ್ಞಾನವುಂಟಾಗುತ್ತದೆ; ದೇವರ ದರ್ಶನವಾಗುತ್ತದೆ. ಆ ಅವಸ್ಥೆಯಲ್ಲಿ ವಿಚಾರವು ನಿಂತು ಹೋಗುತ್ತದೆ. ಮನುಷ್ಯನು ಮೌನಿಯಾಗುತ್ತಾನೆ. ಬ್ರಹ್ಮನು, ಎಂತಹ ವಸ್ತುವೆಂದು ಹೇಳುವುದಕ್ಕೆ, ಅವನಿಂದ ಆಗುವುದಿಲ್ಲ.

ಉಪ್ಪಿನ ಗೊಂಬೆಯೊಂದು, ಸಮುದ್ರದ ಆಳವನ್ನು ತಿಳಿದುಬರುವುದಕ್ಕೆ, ಕಡಲ ಬಳಿಗೆ ಹೋಯಿತು. (ಎಲ್ಲರೂ ನಗುತ್ತಾರೆ) ನೀರಿನಲ್ಲಿ ಇಳಿದ ಕೂಡಲೇ ಅದು ಕರಗಿಹೋಯಿತು. ಪರಂತು ಅದು ಆವ ಸುದ್ದಿಯನ್ನು ಹೇಳೀತು?

ಸಮಾಧಿಸ್ಥನಿಗೆ ಬ್ರಹ್ಮಜ್ಞಾನ[illegible]ಟಾದರೆ, ಅವನು ಅದನ್ನು ತಿಳಿಸಲಾರನೇ ? ಎಂದು ಒಬ್ಬನು ಕೇಳಿದ[illegible]

ಶ್ರೀರಾಮಕೃಷ್ಣ :—ಶಂಕ[illegible]ಚಾರ್ಯರು, ಲೋಕ ಶಿಕ್ಷೆಗೋಸ್ಕರ, 'ವಿದ್ಯೆಯ ಅಹಂಕಾರವನ್ನು ಇಟ್ಟು[illegible]ಂಡಿದ್ದರು. ಬ್ರಹ್ಮದರ್ಶನವಾದರೆ ಮನುಷ್ಯನು ಸುಮ್ಮನಾಗುತ್ತಾನೆ. [illegible]ಲ್ಲಿಯ ವರೆಗೆ ಈಶ್ವರದರ್ಶನವಾಗುವುದಿಲ್ಲವೋ ಅಲ್ಲಿಯ ವರೆಗೇ ವಿಚ[illegible]ಣ್ಣೆಯು ಎಲ್ಲಿಯ ವರೆಗೆ ತುಪ್ಪವಾಗುವುದಿಲ್ಲವೋ ಅಲ್ಲಿಯ ವರೆಗೇ ಕ[illegible]ಂದು ಸದ್ದಾಗುತ್ತದೆ. ಎಲ್ಲವೂ ತುಪ್ಪವಾದ ಮೇಲೆ, ಆವ ಸದ್ದೂ ಇರುವುದಿಲ್ಲ. ಕಾದ ತುಪ್ಪದೊಳಗೆ, ಹಸಿಯ ಪೂರಿಯನ್ನು ಹಾಕಿದರೆ, ಅದು ಚೆನ್ನಾಗಿ ಬೇಯುವ ವರೆಗೂ ಸದ್ದು ಆಗುತ್ತದೆ. ಬೆಂದ ತರುವಾಯ, ಸದ್ದು ಅಡಗಿ ಹೋಗುತ್ತದೆ. ಸಮಾಧಿಸ್ಥಪುರುಷನು ಲೋಕಶಿಕ್ಷೆಗೋಸ್ಕರ ಸಮಾಧಿಯಿಂದ ಇಳಿದು ಬರುತ್ತಾನೆ. ಜನರೊಂದಿಗೆ ಮಾತನ್ನೂ ಆಡುತ್ತಾನೆ.

ಜೇನು ನೊಣವು ಹೂವಿನಲ್ಲಿ ಕುಳಿತುಕೊಳ್ಳುವ ವರೆಗೂ, ಝೇಂಕರಿಸುತ್ತಿರುತ್ತದೆ. ಹೂವಿನಲ್ಲಿ ಕುಳಿತು, ಮಧುಪಾನಮಾಡುವುದಕ್ಕೆ ಆರಂಭಿಸಿದರೆ ಅದರ ಸದ್ದು ನಿಂತು ಹೋಗುತ್ತದೆ. ಮಧುಪಾನಮಾಡಿ ಮುಗಿಸಿದ ಬಳಿಕ ಒಂದೊಂದು ತಡವೆ, ಅದು ಗುಯ್, ಗುಯ್, ಎಂದು ಸದ್ದುಮಾಡುತ್ತದೆ.

ಕೆರೆಯೊಳಗೆ ಗಡಿಗೆಯಲ್ಲಿ ನೀರ ತುಂಬುವಾಗ 'ಬಕ್, ಬಕ್' ಎಂದು ಸದ್ದಾಗುತ್ತದೆ. ಗಡಿಗೆಯು ತುಂಬಿದ ಬಳಿಕ ಸದ್ದಾಗುವುದಿಲ್ಲ. (ಎಲ್ಲರೂ ನಗುತ್ತಾರೆ) ಒಂದು ಗಡಿಗೆಯಿಂದ ಇನ್ನೊಂದು ಗಡಿಗೆಯನ್ನು ತುಂಬುವಾಗಲೂ ಸದ್ದಾಗುತ್ತದೆ. (ನಗುತ್ತಾರೆ)

ನಾಲ್ಕನೆಯ ಪರಿಚ್ಛೇದ

ಜ್ಞಾನವೂ ವಿಜ್ಞಾನವೂ

ದ್ವೈತಾದ್ವೈತ ವಿಶಿಷ್ಟಾದ್ವೈತವಾದ ಸಮನ್ವಯ

ಶ್ರೀರಾಮಕೃಷ್ಣ :—ಋಷಿಗಳು ಬ್ರಹ್ಮಜ್ಞಾನವುಳ್ಳವರಾಗಿದ್ದರು. ವಿಷಯಬುದ್ಧಿಯು ಲೇಶಮಾತ್ರವಿದ್ದರೂ, ಬ್ರಹ್ಮಜ್ಞಾನವು ಉಂಟಾಗುವುದಿಲ್ಲ.

ಋಷಿಗಳು ಎಷ್ಟು ಕಷ್ಟಪಡುತ್ತಿದ್ದರೇ!? ಬೆಳಗಿನ ಜಾವದಲ್ಲಿಯೇ ಆಶ್ರಮದಿಂದ ಅವರು ಹೊರಟುಹೋಗುತ್ತಿದ್ದರು. ಒಬ್ಬರೇ ದಿನವೆಲ್ಲ ಧ್ಯಾನ ಚಿಂತೆಯನ್ನು ಮಾಡುತ್ತಿದ್ದರು. ರಾತ್ರಿಯಲ್ಲಿ ಆಶ್ರಮಕ್ಕೆ ಮರಳಿ ಬಂದು, ಸ್ವಲ್ಪ ಫಲಮೂಲಗಳನ್ನು ಭುಜಿಸುತ್ತಿದ್ದರು. ದರ್ಶನ, ಸ್ಪರ್ಶನ, ಶ್ರವಣಾದಿ ವಿಷಯುಗಳಿಂದ ಮನವನ್ನು ಬೇರೆಯಾಗಿ ಇಡುತ್ತಿದ್ದರು. ಆದುದರಿಂದಲೇ ಅವರು ಬ್ರಹ್ಮನನ್ನು ತಿಳಿಯುತ್ತಿದ್ದರು ಹೋ!

...

ಕಲಿಯುಗದಲ್ಲಿ ಅನ್ನಗತಪ್ರಾಣ; ದೇಹಬುದ್ಧಿಯು ಹೋಗುವುದಿಲ್ಲ. ಈ ಸ್ಥಿತಿಯಲ್ಲಿ 'ಸೋಹಂ' ಎಂದು ಹೇಳುವುದು ಸರಿಯಾಗಿಲ್ಲ. ಎಲ್ಲವನ್ನು ಮಾಡಲಿಕ್ಕೂ ಹೋಗುತ್ತಾನೆ, ಆದರೆ ನಾನೇ ಬ್ರಹ್ಮನೆಂದು ಹೇಳುತ್ತಾನೆ. ಅದು ತಕ್ಕುದಲ್ಲ. ಆರು ವಿಷಯವನ್ನು ತ್ಯಾಗಮಾಡಲಾರರೋ, ಆರ 'ನಾನು' ಎಂಬುದು ಆವ ರೀತಿಯಿಂದಲೂ ಹೋಗುವುದಿಲ್ಲವೋ, ಅವರು 'ನಾನು ದಾಸನು, ನಾನು ಭಕ್ತನು,' ಎಂಬ ಅಭಿಮಾನವಿಟ್ಟುಕೊಳ್ಳುವುದು ಒಳ್ಳೆಯದು. ಭಕ್ತಿಮಾರ್ಗದಲ್ಲಿ ನಿಂತರೂ ಭಗವಂತನನ್ನು ಪಡೆಯಬಹುದು. ಮೆಟ್ಟಿಲುಗಳನ್ನು ಒಂದೊಂದಾಗಿ ಬಿಡುತ್ತ ಬಿಡುತ್ತ, ಮಹಡಿಯನ್ನು ಸೇರುವಂತೆ, ಜ್ಞಾನಿಯಾದವನು 'ಇದಲ್ಲ', 'ಇದಲ್ಲ' ಎನ್ನುತ್ತ, ವಿಷಯಬುದ್ಧಿಯೆಲ್ಲವನ್ನೂ ಒಂದೊಂದಾಗಿ ತ್ಯಾಗಮಾಡಿದರೆ, ಬ್ರಹ್ಮವನ್ನು ತಿಳಿಯುತ್ತಾನೆ. ಆದರೆ ವಿಜ್ಞಾನಿಯು ವಿಶೇಷರೂಪದಿಂದ ಭಗವಂತನನ್ನು ನೋಡಿ, ಅವನೊಡನೆ ಆಲಾಪವನ್ನೂ ಮಾಡುತ್ತಾನೆ. ಮಹಡಿಯು ಇಟ್ಟಿಗೆ, ಗಾರೆ, ಸುಣ್ಣಗಳಿಂದ ಕಟ್ಟಲ್ಪಟ್ಟಿರುವಂತೆಯೇ, ಮೆಟ್ಟಿಲುಗಳೂ ಅವುಗಳಿಂದಲೇ ಕಟ್ಟಲ್ಪಟ್ಟಿವೆ, ಎಂಬದಾಗಿ ಅವನು ತಿಳಿಯುತ್ತಾನೆ. 'ಇದಲ್ಲ, ಇದಲ್ಲ ಎಂದು ತಿಳಿಯುತ್ತ, ಆವುದು ಬ್ರಹ್ಮವೆಂದು ಬೋಧೆಯಾಗುತ್ತದೆಯೋ, ಅದೇ ಜೀವಜಗತ್ತುಗಳೆಲ್ಲವೂ ಆಗಿವೆ. ಆವುದು ನಿರ್ಗುಣವೋ, ಅದೇ ಸಗುಣ.' ವೆಂದು ವಿಜ್ಞಾನಿಯು ಅರಿಯುತ್ತಾನೆ.

ಜನರು ಮಹಡಿಯ ಮೇಲೆ ತುಂಬ ಹೊತ್ತಿನ ವರೆಗೆ ನಿಲ್ಲುವುದಕ್ಕಾಗುವುದಿಲ್ಲ. ಇಳಿದು ಬಂದು ಬಿಡುತ್ತಾರೆ. ಆರು ಸಮಾಧಿಸ್ಥರಾಗಿ ಬ್ರಹ್ಮದರ್ಶನವನ್ನು ಮಾಡುತ್ತಾರೆಯೋ, ಅವರೇ ಅಲ್ಲಿಂದ ಇಳಿದು ಬಂದು, ಭಗವಂತನೇ ಜೀವಜಗತ್ತುಗಳಾಗಿ ಇದ್ದಾನೆಂದು ಕಾಣುತ್ತಾರೆ. ಸ, ರಿ, ಗ, ಮ, ಪ, ಧ, ನಿ, ಎಂಬ ಸಪ್ತಸ್ವರಗಳೊಳಗೆ, 'ನಿ' ಎಂಬ ಸಪ್ತಮಸ್ವರದಲ್ಲಿ ತುಂಬ ಹೊತ್ತಿನ ವರೆಗೆ ಇರುವುದಕ್ಕಾಗುವುದಿಲ್ಲ. 'ನಾನು' ಎಂಬುದು ಹೋಗುವುದಿಲ್ಲ. ಆಗ 'ನಾನು, ಎಂಬ ವಸ್ತುವೂ, ಈ ಜೀವಜಗತ್ತುಗಳೆಲ್ಲವೂ

ಭಗವಂತನೇ ಆಗಿದ್ದಾನೆ ಎಂದು ತಿಳಿಯುತ್ತದೆ. ಈ ತಿಳುವಳಿಕೆಯ ಹೆಸರೇ ವಿಜ್ಞಾನ.

ಜ್ಞಾನಿಗಳ ಪಥವೂ ಪಥವೇ; ಜ್ಞಾನಭಕ್ತಿಗಳ ಮಾರ್ಗವೂ ಮಾರ್ಗವೇ. ಭಕ್ತಿಯ ಹಾದಿಯೂ ಹಾದಿಯೇ. ಜ್ಞಾನಯೋಗವೂ ಸತ್ಯ. ಭಕ್ತಿಪಥವೂ ಸತ್ಯ. ಎಲ್ಲ ಹಾದಿಯಿಂದಲೂ ಭಗವಂತನ ಬಳಿಗೆ ಹೋಗಬಹುದು. ಅವನು **'ನಾನು' ಎಂಬುದನ್ನು ಎಲ್ಲಿಯ ವರೆಗೆ ಇರಿಸಿದ್ದಾನೆಯೋ, ಅಲ್ಲಿಯ ವರೆಗೆ ಭಕ್ತಿಪಥವೇ ಸುಲಭವಾದುದು.**

'ಬ್ರಹ್ಮನು ಸುಮೇರುವಿನಂತೆ ಅಚಲನು, ನಿಷ್ಕ್ರಿಯನು; ಈ ಜಗತ್ತೂ, ಸಂಸಾರವೂ, ಅವನ ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿಂದ ಆಗಿವೆ; ಅವನು ನಿರ್ಲಿಪ್ತನು', ಎಂದು ವಿಜ್ಞಾನಿಯು ತಿಳಿಯುತ್ತಾನೆ.

ವಿಜ್ಞಾನಿಯು ಬ್ರಹ್ಮನನ್ನೇ ಭಗವಂತನೆಂದೂ, ಗುಣಾತೀತನನ್ನೇ ಷಡೈಶ್ವರ್ಯಪೂರ್ಣನಾದ ಭಗವಂತನೆಂದೂ ತಿಳಿಯುತ್ತಾನೆ. ಈ ಜೀವ, ಜಗತ್ತು, ಮನಸ್ಸು, ಬುದ್ಧಿ, ಭಕ್ತಿ, ವೈರಾಗ್ಯ, ಜ್ಞಾನವೆಲ್ಲವೂ ಭಗವಂತನ ಐಶ್ವರ್ಯ. (ನಗುತ್ತ) ಆವ ಯಜಮಾನನ ಮನೆಗೆ ಬಾಗಿಲುಗಳಿಲ್ಲವೋ, ಇದ್ದರೂ ವಿಕ್ರಯವಾಗಿ ಹೋಗಿರುವವೋ, ಅವನು ಎಂತಹ ಯಜಮಾನ! (ಎಲ್ಲರೂ ನಗುತ್ತಾರೆ) ಈಶ್ವರನು ಷಡೈಶ್ವರ್ಯಪೂರ್ಣನು. ಅವನಿಗೆ ಐಶ್ವರ್ಯವಿಲ್ಲದಿದ್ದರೆ, ಅವನನ್ನು ಆರು ತಾನೇ ಗೌರವಿಸುತ್ತಾರೆ?

(ಭಗವಂತನು ವಿಭುರೂಪದಲ್ಲಿ ಒಬ್ಬನು, ಆದರೆ ಶಕ್ತಿವಿಶೇಷ.)

ಈ ಜಗತ್ತು ಎಂತಹ ವಿಚಿತ್ರವಾದುದು, ನೋಡಿರಿ. ಎಷ್ಟು ಬಗೆಯ ವಸ್ತುಗಳು! ಚಂದ್ರ, ಸೂರ್ಯ, ನಕ್ಷತ್ರ ಮುಂತಾದುವು. ಎಷ್ಟುಬಗೆಯ ಜೀವಿಗಳು! ದೊಡ್ಡದು, ಸಣ್ಣದು, ಒಳ್ಳೆಯದು, ಕೆಟ್ಟದು, ಬಲವುಳ್ಳವು, ಬಲಹೀನವಾದುವು.

ವಿದ್ಯಾಸಾಗರ :—ಭಗವಂತನು ಏಕೆ ಕೆಲವಕ್ಕೆ ಹೆಚ್ಚು ಶಕ್ತಿಯನ್ನೂ, ಕೆಲವಕ್ಕೆ ಕಡಿಮೆಯಾದ ಶಕ್ತಿಯನ್ನೂ ಕೊಟ್ಟಿದ್ದಾನೆ?

ಶ್ರೀರಾಮಕೃಷ್ಣ :—ಅವನು ಇರುವೆಗಳ ವರೆಗೆ ಸರ್ವಭೂತಗಳಲ್ಲಿಯೂ ವಿಭುರೂಪದಿಂದ ಇದ್ದಾನೆ. ಆದರೆ ಶಕ್ತಿಯಲ್ಲಿ ಹೆಚ್ಚು ಕಮ್ಮಿಯಿದೆ. ಹಾಗಿಲ್ಲದಿದ್ದರೆ, ಒಬ್ಬನು ಹತ್ತು ಜನರನ್ನು ಸೋಲಿಸುವುದಕ್ಕೂ, ಒಬ್ಬನ ಬಳಿಯಿಂದ ಹಲವರು ಪಲಾಯನಮಾಡುವುದಕ್ಕೂ ಆಗುತ್ತಿರಲಿಲ್ಲ. ಹಾಗಿಲ್ಲದಿದ್ದರೆ, ಇಷ್ಟು ಜನರು ನಿಮ್ಮನ್ನು ಏಕೆ ಗೌರವಿಸುತ್ತಾರೆ? ನಿಮಗೇನಾದರೂ ಎರಡು ಕೊಂಬುಗಳು ಬೆಳೆದಿವೆಯೋ? (ಎಲ್ಲರೂ ನಗುತ್ತಾರೆ.)

ಇತರರಿಗಿಂತಲೂ ಹೆಚ್ಚಾಗಿ ನಿಮ್ಮಲ್ಲಿ ದಯೆಯೂ ಇದೆ, ವಿದ್ಯೆಯೂ ಇದೆ. ಅದಕ್ಕಾಗಿ ಜನರು ನಿಮ್ಮನ್ನು ಗೌರವಿಸುತ್ತಾರೆ; ನಿಮ್ಮನ್ನು ನೋಡುವುದಕ್ಕೆ ಬರುತ್ತಾರೆ. ಇದು ನಿಮಗೆ ತಿಳಿಯದೇ? (ವಿದ್ಯಾಸಾಗರನು ಮಂದಮಂದವಾಗಿ ನಗುತ್ತಿದ್ದಾನೆ.)

(ಬರಿಯ ಪಾಂಡಿತ್ಯ ; ಪುಸ್ತಕ ವಿದ್ಯೆಯು ಶ್ರೇಷ್ಠವಲ್ಲ, ಭಕ್ತಿಯೇ ಸಾರ)

ಶ್ರೀರಾಮಕೃಷ್ಣ :—ಬರಿಯ ಪಾಂಡಿತ್ಯದಿಂದೇನೂ ಪ್ರಯೋಜನವಿಲ್ಲ. ಭಗವಂತನನ್ನು ಪಡೆಯುವುದಕ್ಕಾಗಿಯೂ ಅವನನ್ನು ಅರಿಯುವುದಕ್ಕಾಗಿಯೂ, ಪುಸ್ತಕವೋದುವುದು. ಒಬ್ಬನು ಸಾಧುವಿನ ಪುಸ್ತಕದಲ್ಲಿ ಏನಿದೆಯೆಂದು ಕೇಳಿದನು. ಸಾಧುವು ಪುಸ್ತಕವನ್ನು ತೆರೆದು ತೋರಿಸಿದನು. ಹಾಳೆ ಹಾಳೆಯಲ್ಲಿಯೂ 'ಓಂ ರಾಮಃ' ಎಂದು ಬರೆದಿದ್ದಿತು. ಮತ್ತೇನೂ ಬರೆದಿರಲಿಲ್ಲ.

ಗೀತೆಯ ಅರ್ಥವೇನು? ಹತ್ತು ಸಾರಿ 'ಗೀತಾ, ಗೀತಾ,' ಎಂದು ಹೇಳಿದರೆ, 'ತ್ಯಾಗೀ, ತ್ಯಾಗೀ,' ಎಂದಾಗುತ್ತದೆ. 'ಎಲೆ ಜೀವನೇ, ಎಲ್ಲವನ್ನೂ ತ್ಯಾಗಮಾಡಿ ಭಗವಂತನನ್ನು ಪಡೆಯುವುದಕ್ಕೆ ಪ್ರಯತ್ನಮಾಡು,' ಎನ್ನುವುದೇ ಗೀತೆಯ ಉಪದೇಶ. ಸಾಧುವಾಗಲಿ, ಸಂಸಾರಿಯಾಗಲಿ, ಮನಸ್ಸಿನಿಂದ ಎಲ್ಲ ಆಸಕ್ತಿಯನ್ನೂ ಬಿಟ್ಟುಬಿಡಬೇಕು.

ಶ್ರೀ ಚೈತನ್ಯದೇವರು ದಕ್ಷಿಣದಲ್ಲಿ ತೀರ್ಥಯಾತ್ರೆಮಾಡುತ್ತಿದ್ದಾಗ, ಒಬ್ಬನು ಗೀತೆಯೋದುತ್ತಿರುವುದನ್ನು ಕಂಡರು. ಸ್ವಲ್ಪದೂರದಲ್ಲಿ ಇನ್ನೊಬ್ಬನು ಕುಳಿತುಕೊಂಡು ಕೇಳುತ್ತಿದ್ದನು. ಅವನು ಅಳುತ್ತ, ಕಣ್ಣೆಲ್ಲವೂ ಒದ್ದೆಯಾಗಿದ್ದಿತು. ಅದನ್ನು ಕಂಡು ಚೈತನ್ಯಸ್ವಾಮಿಗಳು, 'ಇದೆಲ್ಲವನ್ನೂ ನೀವು ತಿಳಿದುಕೊಳ್ಳಬಲ್ಲಿರೋ,' ಎಂದು ಕೇಳಿದರು. ಅದಕ್ಕೆ ಆತನು, 'ಸ್ವಾಮೀ, ನಾನು ಈ ಶ್ಲೋಕಗಳ ಅರ್ಥವನ್ನು ಕೊಂಚವೂ ತಿಳಿದುಕೊಳ್ಳಲಾರೆನು,' ಎಂದನು. 'ಹಾಗಾದರೆ ಏಕೆ ಅಳುತ್ತಿದ್ದೀರಿ?' ಎಂದು ಅವರು ಮತ್ತೆ ಕೇಳಿದರು. ಆಗ ಆ ಭಕ್ತನು, 'ಸ್ವಾಮೀ, ಅರ್ಜುನನ ರಥವನ್ನು ನೋಡುತ್ತೇನೆ. ಅದರ ಮುಂದುಗಡೆಯಲ್ಲಿ ಪರಮಾತ್ಮನೂ ಅರ್ಜುನನೂ ಮಾತನಾಡುತ್ತಿದ್ದಾರೆ. ಅದನ್ನು ಕಂಡು ನಾನು ಅಳುತ್ತೇನೆ' ಎಂದು ಉತ್ತರಕೊಟ್ಟನು.

ಅಯ[illegible]ಯ ಪರಿಚ್ಛೇದ

([illegible]ಕ್ತಿಯೋಗದ ರಹಸ್ಯ)

ಶ್ರೀರಾಮಕೃಷ್ಣ:—[illegible]ಯು ಏಕೆ ಭಕ್ತಿಯಲ್ಲಿ ನಿಲ್ಲುತ್ತಾನೆ? 'ಅಹಂಕಾರವ ಳಿಯದಿರುವುದರಿ[illegible]ದು ಇದರ ಉತ್ತರ. ಸಮಾಧಿಯಲ್ಲಿ ಅಹಂಕಾರವು ಹೋಗುತ್ತದೆ. ಸಾಧಾರಣಸ್ಥಿತಿಗೆ ಬಂದರೆ ಅದು ಪುನಃ ಬರುತ್ತದೆ. ಸಾಧಾರಣಮನುಷ್ಯರಿಗೆ ಅಹಂಕಾರವು ಹೋಗುವುದೇ ಇಲ್ಲ. ಅರಳಿಯ ಮರವನ್ನು ಕಡಿದು ಹಾಕಿದರೂ, ಮಾರನೆಯ ದಿನವೇ ಹೊಸದಾದ ಮೊಳಕೆಯು ಹುಟ್ಟಿಕೊಳ್ಳುತ್ತದೆ. (ಎಲ್ಲರೂ ನಗುತ್ತಾರೆ.)

ಜ್ಞಾನಲಾಭವಾದ ಮೇಲೆಯೂ, ಅಹಂಕಾರವು ಎಲ್ಲಿಂದಲೋ ಬಂದು ಪುನಃ ಸೇರಿಕೊಳ್ಳುತ್ತದೆ. ನೀನು ಕನಸಿನಲ್ಲಿ ಹುಲಿಯನ್ನು ನೋಡಿ ಎಚ್ಚರಗೊಂಡ ಮೇಲೆಯೂ, ನಿನ್ನ ಎದೆಯು 'ಡಬ, ಡಬ,' ಎಂದು ಹೊಡೆದುಕೊಳ್ಳುತ್ತದೆ. ಜೀವರ ಅಹಂಕಾರವಿರುವ ವರೆಗೂ ಬಹುಕಷ್ಟ. ಹಸುವು 'ಹಂಬಾ, ಹಂಬಾ,' (ನಾನು, ನಾನು) ಎಂದು ಕೂಗುತ್ತದೆ. ಅದರಿಂದ ಅದಕ್ಕೆ ತುಂಬ ತೊಂದರೆ. ಅದನ್ನು ನೇಗಿಲಿಗೆ ಕಟ್ಟುತ್ತಾರೆ. ಅದರ ಮೈಯ್ಯ ಮೇಲೆ ಬಿಸಿಲು ಕಾಯುತ್ತದೆ; ಮಳೆಯು ಸುರಿಯುತ್ತದೆ. ಅದನ್ನು ಕಟುಕನು ಕಡಿಯುತ್ತಾನೆ ಅದರ ಚರ್ಮದಿಂದ ಜೋಡ ಮಾಡಿ ತುಳಿಯುತ್ತಾರೆ. ಡೋಳನ್ನು ಮಾಡಿ ಹೊಡೆಯುತ್ತಾರೆ. (ಎಲ್ಲರೂ ನಗುತ್ತಾರೆ.)

ಆದರೂ ಬಿಡುಗಡೆಯಿಲ್ಲ. ಅದರ ನರಗಳಿಂದ ಮಿಣೆಯನ್ನು ಮಾಡುತ್ತಾರೆ. ಮಿಣೆಯು ಹತ್ತಿಯೆಕ್ಕುವನ ಬಿಲ್ಲಿಗೆ ದಾರವಾಗುತ್ತದೆ. ಆಗ ಆ ಮಿಣೆಯು 'ನಾನು' ಎಂದು ಹೇಳದೆ, 'ತುಹೂಂ, ತುಹೂಂ,' ಎನ್ನುವಾಗ ಅದಕ್ಕೆ ಬಿಡುಗಡೆ. 'ಹೇ ಈಶ್ವರ, ನಾನು ದಾಸ, ನೀನು ಪ್ರಭು; ನಾನು ಕೂಸು, ನೀನು ತಾಯಿ,' ಎಂದು ಹೇಳಿ.

ರಾಮನು ಹನುಮಂತನನ್ನು ನೋಡಿ, 'ಅಯ್ಯಾ, ನೀನು ನನ್ನನ್ನು ಹೇಗೆ ಭಾವಿಸಿದ್ದೀಯೆ?' ಎಂದು ಕೇಳಿದನು. ಅದಕ್ಕೆ ಹನುಮಂತನು, "ರಾಮ, ಎಲ್ಲಿಯ ವರೆಗೆ ನನ್ನಲ್ಲಿ 'ನಾನು' ಎಂಬ ಬುದ್ಧಿಯು ಇರುವುದೋ, ಅಲ್ಲಿಯ ವರೆಗೆ ನೀನು ಪೂರ್ಣ, ನಾನು ಅಂಶ; ನೀನು ಪ್ರಭು, ನಾನು ದಾಸ, ಎಂಬದಾಗಿ ಕಾಣುತ್ತೇನೆ. ನನಗೆ ತತ್ತ್ವಜ್ಞಾನವುಂಟಾದಾಗ, 'ನೀನೇ ನಾನು; ನಾನೇ ನೀನು' ಎಂಬದಾಗಿ ಕಾಣುತ್ತೇನೆ" ಎಂದು ಉತ್ತರಕೊಟ್ಟನು.

ಸೇವ್ಯ ಸೇವಕ ಭಾವವು ಒಳ್ಳೆಯದು ; 'ನಾನು' ಎಂಬುದು ಬಹುಶಃ ಹೋಗುವುದೇ ಇಲ್ಲ. ಹಾಗಾದರೆ ಆ ಬುದ್ಧಿಯು ಮಗನದು, ದಾಸನೆಂಬ 'ನಾನು' ಆಗಿರಲಿ.

ಅಹಂಕಾರ ಮಮಕಾರಗಳೆರಡೂ ಅಜ್ಞಾನದಿಂದುಂಟಾಗುತ್ತವೆ. 'ಹೇ ಈಶ್ವರ, ನೀನು ಕರ್ತನು ; ಮನೆ, ಹೆಂಡತಿ, ಮಕ್ಕಳು, ಜನರು, ನಂಟರು, ಇಷ್ಟರು ಎಂಬಿವೆಲ್ಲವೂ ನಿನ್ನ ವಸ್ತುಗಳು,' ಎಂಬ ಭಾವವು ಜ್ಞಾನದಿಂದುತ್ಪನ್ನವಾಗುತ್ತದೆ.

ಮೃತ್ಯುವನ್ನು ಆವಾಗಲೂ ನೆನಪಿನಲ್ಲಿಟ್ಟಿರುವುದು ಒಳ್ಳೆಯದು ; ಸತ್ತ ಬಳಿಕ ಆವುದೂ ಇರುವುದಿಲ್ಲ. ಜನರು ಹಳ್ಳಿಗಳಿಂದ ಕಲಿಕತ್ತಾವಿಗೆ ಕೆಲಸ ಮಾಡುವುದಕ್ಕೆ ಬರುವಂತೆ, ನಾವು ಕೆಲವು ಕರ್ತವ್ಯಗಳನ್ನು ಮಾಡುವುದಕ್ಕಾಗಿ ಈ ಲೋಕಕ್ಕೆ ಬಂದಿದ್ದೇವೆ. ದೊಡ್ಡಮನುಷ್ಯನ ತೋಟದ ಗುಮಾಸ್ತೆಯು ಆರಾದರೂ ತೋಟವನ್ನು ನೋಡುವುದಕ್ಕೆ ಬಂದರೆ, 'ಇದು ನಮ್ಮ ತೋಟ, ಈ ಕೆರೆಯು ನಮ್ಮ ಕೆರೆ,' ಎಂದು ಹೇಳುತ್ತಾನೆ. ಆದರೆ ಯಜಮಾನನು ಬಂದು, ಗುಮಾಸ್ತನಲ್ಲಿ ತಪ್ಪ ಕಂಡು ಹಿಡಿದು, ಅವನನ್ನು ಕೆಲಸದಿಂದ ತೆಗೆದುಹಾಕಿಬಿಟ್ಟರೆ, ತನ್ನ ಮಾವಿನ ಮರದ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೂ ಅವನಿಗೆ ಯೋಗ್ಯತೆಯಿರುವುದಿಲ್ಲ. ಯಜಮಾನನೇ ಅದನ್ನು ಆಳಿನ ಕಯ್ಯಿಂದ ಅವನಿಗೆ ಕೊಟ್ಟು ಕಳುಹಬೇಕು. (ನಗುತ್ತಾರೆ.)

ರೋಗಿಯ ತಾಯಿಯನ್ನು ನೋಡಿ ವೈದ್ಯನು, 'ಅಮ್ಮ, ನಿಮಗೆ ಅಂಜಿಕೆಯೇಕೆ? ನಾನು ನಿಮ್ಮ ಮಗನಿಗೆ ಗುಣಮಾಡಿಕೊಡುತ್ತೇನೆ,' ಎಂದು ಹೇಳುತ್ತಾನೆ. ಈಶ್ವರನು ಕರ್ತನೆಂಬುದನ್ನು ಮರೆತು, ತಾನೇ ಕರ್ತನೆಂದು ವೈದ್ಯನು ತಿಳಿದುಕೊಂಡಿದ್ದಾನೆ. ಆಗ ಭಗವಂತನು, 'ಎಲಾ, ನಾನು ಇವನನ್ನು ಕೊಲ್ಲುತ್ತೇನೆ. ವೈದ್ಯನು ಬದುಕಿಸಿಕೊಡುತ್ತೇನೆಂದು ಹೇಳುತ್ತಿದ್ದಾನೆಯಲ್ಲ,' ಎಂದು ನಗುತ್ತಾನೆ. ಅಣ್ಣತಮ್ಮಂದಿರು, ಹಗ್ಗವನ್ನು ಹಿಡಿದು ಭೂಮಿಯನ್ನು ವಿಭಾಗಮಾಡಿಕೊಳ್ಳುತ್ತ, 'ಹಗ್ಗದ ಈ ಕಡೆ ನನ್ನದು, ಆ ಕಡೆ ನಿನ್ನದು,' ಎಂದು ಹೇಳಿಕೊಳ್ಳುತ್ತಾರೆ. ಆಗಲೂ ಭಗವಂತನು, 'ಇದೇನು? ಸಮಸ್ತಬ್ರಹ್ಮಾಂಡವೂ ನನ್ನದು; ಅವರು ಈ ಕಡೆ ನನ್ನದು, ಆ ಕಡೆ ನಿನ್ನದು, ಎನ್ನುತ್ತಿದ್ದಾರೆಯಲ್ಲ,' ಎಂದುಕೊಂಡು ಮತ್ತೊಮ್ಮೆ ನಗುತ್ತಾನೆ.

(ಉಪಾಯ, ವಿಶ್ವಾಸ ಮತ್ತು ಭಕ್ತಿ)

ಶ್ರೀರಾಮಕೃಷ್ಣ :—ವಿಚಾರಮಾಡಿ ಭಗವಂತನನ್ನು ತಿಳಿಯುವುದಕ್ಕಾದೀತೇ? ಅವನಿಗೆ ಶರಣಾಗತನಾಗಿ, ಅವನಿಗೆ ದಾಸನಾಗಿ ಮೊರೆಯಿಡಬೇಕು, (ನಗುತ್ತ, ವಿದ್ಯಾಸಾಗರನೊಡನೆ,) ನಿಮ್ಮ ಅಭಿಪ್ರಾಯವೇನು?

ವಿದ್ಯಾಸಾಗರ :—(ಮೃದುಹಾಸದಿಂದ) ಅದನ್ನು ಒಂದು ದಿನ ತಮ್ಮೊಡನೆ ಏಕಾಂತವಾಗಿ ಹೇಳುತ್ತೇನೆ. (ಎಲ್ಲರೂ ನಗುತ್ತಾರೆ.)

ಶ್ರೀರಾಮಕೃಷ್ಣ :—ಪಾಂಡಿತ್ಯದ್ವಾರಾ ವಿಚಾರಮಾಡಿ ಭಗವಂತನನ್ನು ತಿಳಿಯುವುದಕ್ಕಾಗುವುದಿಲ್ಲ ಎಂದು ಹೇಳಿ ಪ್ರೇಮೋನ್ಮತ್ತರಾಗಿ ಹಾಡುತ್ತಾರೆ.

(ಈಶ್ವರನನ್ನು ಹೊದ್ದುವುದೇ ಕಷ್ಟ; ಅವನ ಆಚೆ ಹೋಗಲಾಗುವುದೇ ಇಲ್ಲ.)

'ಚಿಂತೆಯ [illegible]ಕೋ' ಎಂಬ ಮಟ್ಟಿನಂತೆ.

ಎಂತುಟರಿವರೋ ಕಾಳಿ। ಯಿಂತುಟೆಂಬುದ॥
ಚಿಂತಿಸಲಾರು ದರ್ಶನಂಗ। ಳಿಂ ತಿಳಿಯಲಿಕಾಗದವಳ॥ ಪಲ್ಲವಿ॥
ಎಸೆವ ಮೂಲಾಧಾರದಿಂದ। ಮಿಸುಪ ಸಹಸ್ರಾರದಿಂದ।
ಒಸೆದು ಯೋಗಿಸಮಿತಿ ಚಿಂ। ತಿಸಂತುಮಿರ್ಪರೆಂದುಮವಳ ॥೧॥

ಹಂಸಿಯಾಗಿ ಪದ್ಮವನದೆ। ಹಂಸನೊಡನೆ ರಮಿಸುತಿಹಳ॥
ತಾಂ ಶರೀರಿಗಳೊಳು ನಿಂದು। ಕಾಂಕ್ಷೆಯಾದ ತೆರದೊಳಿಹಳ ॥೨॥

ಪ್ರಣವದಾ ಪ್ರಮಾಣವಾಗಿ। ಯೆಣಿಸಲಾತ್ಮಾ ರಾಮರಾತ್ಮೆ ॥
ಗಣಿಸೆ ಕಂಜಜಾಂಡಗಳನು। ಕುಣಿಕೆಗೊಳಿಸಿ ಪೊಡೆಯೊಳಿಹಳ ॥೩॥

ಕಡಲನೀಸಿ ಪೋಪೆನೆಂಬ। ಜಡನ ತೆರದೆ ಸಸಿಯು ಕರದೆ॥
ಪಿಡಿವೆನೆಂಬ ಗುಜ್ಜನಂತೆ। ಪಿಡಿವೆವವಳನೆಂಬರಕಟ॥ ॥೪॥

ಕಾಳಿಯಿಂರವನಿಂತುಟೆಂದು। ಕಾಲನಂತೆ ತಿಳಿವರಾರು॥
ಲೀಲೆಯಿಂ ಪ್ರಸಾದ ಹೃದಯು। ದಾಲಯುದೊಳು ನೆಲಸಿದವಳ ॥೫॥

'ಗಣಿಸೆ ಕಂಜಜಾಂಡಗಳನು ಕುಣಿಕೆಗೊಳಿಸಿ ಪೊಡೆಯೊಳಿಹಳ ಎಂತುಟರಿವರು', 'ಚಿಂತಿಸಲಾರು ದರ್ಶನಂಗ| ಳಿಂ ತಿಳಿಯಲಿಕಾಗದವಳ' ಎಂದು ಪ್ರಸಾದನು ಹೇಳಿದ್ದಾನೆ, ನೋಡಿರಿ. ಆದುದರಿಂದಲೇ ಪಾಂಡಿತ್ಯದಿಂದ ಭಗವಂತನನ್ನು ಪಡೆಯಲಾಗುವುದಿಲ್ಲ.

(ವಿಶ್ವಾಸದ ಶಕ್ತಿ, ಈಶ್ವರವಿಶ್ವಾಸವೂ, ಮಹಾಪಾತಕವೂ)

ವಿಶ್ವಾಸವೂ ಭಕ್ತಿಯೂ ಬೇಕು. ವಿಶ್ವಾಸದಲ್ಲಿ ಎಷ್ಟು ಶಕ್ತಿಯುಂಟು, ಕೇಳಿರಿ. ಒಬ್ಬನು ಲಂಕೆಯಿಂದ ಸಮುದ್ರವನ್ನು ಹಾದುಕೊಂಡು ಬರಬೇಕಾಯಿತು. ಆಗ ವಿಭೀಷಣನು, 'ಈ ವಸ್ತುವನ್ನು ನೀನು ಬಟ್ಟೆಯ ಕೊಸೆಯಲ್ಲಿ ಗಂಟುಹಾಕಿಕೊಂಡು ಹೋಗು, ನಿರ್ವಿಘ್ನವಾಗಿ ಹೊರಟು ಹೋಗುತ್ತೀಯೆ. ನೀರಿನ ಮೇಲೆ ನೀನು ನಡೆದುಕೊಂಡು ಹೋಗಬಹುದು. ಆದರೆ ಗಂಟನ್ನು ಮಾತ್ರ ಬಿಚ್ಚಬೇಡ. ಬಿಚ್ಚಿ ನೋಡಿದರೆ, ಮುಳುಗಿ ಹೋಗುತ್ತೀಯೆ' ಎಂದು ಹೇಳಿದನು. ಆ ಮನುಷ್ಯನು ಸುಖವಾಗಿ

ಸಮುದ್ರದ ಮೇಲೆ ಹೊರಟುಹೋದನು. ವಿಶ್ವಾಸದಲ್ಲಿ ಇಷ್ಟು ಶಕ್ತಿ. ಸ್ವಲ್ಪದೂರ ಹೋದ ಮೇಲೆ ಅವನು, 'ನೀರಿನ ಮೇಲೆ ನಡೆದುಕೊಂಡು ಹೋಗುವುದಕ್ಕಾಗುವಂತೆ, ನನಗೆ ಆವ ಪದಾರ್ಥವನ್ನು ವಿಭೀಷಣನು ಕೊಟ್ಟಿರಬಹುದು,' ಎಂದು ಆಲೋಚನೆಮಾಡಿಕೊಂಡು, ಬಟ್ಟೆಯ ಕೊನೆಯಲ್ಲಿದ್ದ ಗಂಟನ್ನು ಬಿಚ್ಚಿ ನೋಡಿದನು. ಅದರಲ್ಲಿ ಬರಿಯ ರಾಮನಾಮವನ್ನು ಬರೆದ ಪತ್ರವೊಂದಿದ್ದಿತು. 'ಓಹೋ! ಇಷ್ಟೇಯೇ' ಎಂದು ಅವನು ಭಾವಿಸಿದನು. ಕೂಡಲೇ ನೀರಿನಲ್ಲಿ ಮುಳುಗಿಹೋದನು.

ರಾಮನಲ್ಲಿ ಹನುಮಂತನಿಗೆ ಎಷ್ಟು ವಿಶ್ವಾಸ! ಆ ವಿಶ್ವಾಸಗುಣದಿಂದಲೇ ಅವನು ಸಮುದ್ರವನ್ನು ದಾಟಿದನು. ಆದರೆ ಸ್ವಯಂ ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಬೇಕಾಯಿತು.

ಶ್ರೀರಾಮಕೃಷ್ಣ :—ಭಗವಂತನಲ್ಲಿ ವಿಶ್ವಾಸವಿದ್ದುದೇ ಆದರೆ, ಪಾಪವನ್ನೇ ಮಾಡಲಿ, ಮಹಾಪಾತಕವನ್ನೇ ಮಾಡಲಿ, ಕೊಂಚವೂ ಭಯವಿಲ್ಲ.

ಹೀಗೆಂದು ಹೇಳಿ ಭಗವಾನ್ ಶ್ರೀರಾಮಕೃಷ್ಣರವರು, ಭಕ್ತರ ಭಾವವನ್ನು ಆರೋಪಿಸಿಕೊಂಡು, ಮತ್ತರಾಗಿ ವಿಶ್ವಾಸದ ಮಾಹಾತ್ಮ್ಯವನ್ನು ಕುರಿತು,

ದುರ್ಗೇ ದುರ್ಗೇ ದುರ್ಗೆಯೆನುತೆ। ಭರ್ಗಜಾಯೆ ನಾನು ಸಾಯೆ॥
ದುರ್ಗತನನು ಪೊರೆಯುದೆಂತು। ನಿರ್ಗಮಿಸುವೆ ಪೇಳು ತಾಯೆ॥

ಈ ರೀತಿ ಹಾಡಿದರು.

ಆರನೆಯ ಪರಿಚ್ಛೇದ

ಈಶ್ವರ ಭಕ್ತಿಯು ಜೀವನದ ಉದ್ದೇಶ್ಯ

ವಿಶ್ವಾಸವೂ ಭಕ್ತಿಯೂ ಮುಖ್ಯವಾಗಿ ಬೇಕು. ಭಕ್ತಿಯಿಂದ ಭಗವಂತನನ್ನು ಸಹಜವಾಗಿ ಹೊದ್ದಬಹುದು. ಅವನು ಭಾವವಿಷಯನು. ಎಂದು ಹೇಳುತ್ತ, ಭಗವಾನ್ ಶ್ರೀರಾಮಕೃಷ್ಣರವರು ಮತ್ತೆ ಹಾಡತೊಡಗಿದರು.

(" ಕೊಡುವ ಕರ್ತ ಬೇರೆ " ಎಂಬಂತೆ)

ಚಿತ್ತವೆಯೆಂತರಿವೈ ಭಗವ। ತ್ತತ್ವವನೊರೆ ನೀನು।
ಕತ್ತಲೆಯೊಳಗು। ನ್ಮತ್ತನಂತೆ ಮನ। ಕತ್ತಲಾದವನ। ಭಾವವಿಷಯನನು॥ ಪಲ್ಲವಿ
ಶಶಿಯುನೊಳಗು ಮಾಡೋ। ಮೊದಲೊಳು। ವಿಶದಶಕ್ತಿಯಿಂದ।
ಎಸೆವುದೊಳಗೆ ಚೋರ। ವಸತಿ ಬೆಳಕು ಬರೆ। ಮುಸುಳಿ ಹೋಗುವುದು। ಮುಸುಳ ಗುಡದಿರದ॥ ॥೧॥

ಆರು ದರ್ಶನಗಳಿಂ। ದಮನನು। ಸಾರಬಲ್ಲರುಂಟೇ।
ಆರಯಲಾಗವು। ಸಾರದೆ ತಂತ್ರವಿ। ಚಾರದೆ ನಿಗಮದ। ಪಾರವಿಷಯದದ॥ ೨
ಹಿರಿಯ ಭಕ್ತಿರಸದಿಂ। ದಾತನು। ಸುರಸಿಕನೆನಿಸಿಹನು।
ಇರಿಸುತೆ ಭಾವದೊ। ಳರರೆ ಯೋಗಿಜನ। ವಿರಚಿಸಿಯೋಗವ ನಿರುವರು ಪಲದಿನ॥
ಭಾವವುದಿಸಲೊಡನೇ। ಆತನು। ಭಾವಿಸೆ ಸಾರುವನು।
ಏವಗೆ ಕಬ್ಬಿನ। ಪಾವ ತೆರದೊಳಂ। ಭಾವಿಸೆ ಸೂಜೀ। ಗ್ರಾವವಿಡಿವವೊಲು॥ ೪
ಮಾತೃಭಾವದಿಂದ। ಪ್ರಸಾದನು। ತಾತತ್ವವನೊರೆದ
ಏತೆರದಿಂ ಜನ। ಜಾತದ ಮುಂಗಡೆ। ಮಾತನಾಡುವುದೆ। ಚೇತವರಿವುದನು॥ ೫

(ಸಮಾಧಿ)

ಹಾಡುತ್ತ ಹಾಡುತ್ತ, ಭಗವಾನರು ಸಮಾಧಿಸ್ಥರಾಗುತ್ತಿದ್ದಾರೆ. ಕೈಗಳು ಅಂಜಲಿಬದ್ಧವಾಗಿವೆ. ದೇಹವು ಉನ್ನತವಾಗಿ ಸ್ಥಿರವಾಗಿದೆ. ಕಣ್ಣುಗಳು ನಿಷ್ಪಂದವಾಗಿವೆ. ಅವರು ಪಶ್ಚಿಮಮುಖರಾಗಿ ಬೆಂಚಿನ ಮೇಲೆ ಕುಳಿತು ಕಾಲುಗಳನ್ನೆಳ್ಳಿಡಿಸುತ್ತಿದ್ದಾರೆ. ಈ ಅದ್ಭುತಾವಸ್ಥೆಯನ್ನು ಎಲ್ಲರೂ ಕತ್ತೆತ್ತಿ ನೋಡುತ್ತಿದ್ದಾರೆ. ಪಂಡಿತವಿದ್ಯಾಸಾಗರನೂ ಏಕದೃಷ್ಟಿಯಿಂದ ನೋಡುತ್ತಿದ್ದಾನೆ.

ಭಗವಾನರು ಪ್ರಕೃತಿಸ್ಥರಾದರು. ಅವರು ನಿಟ್ಟುಸಿರನ್ನು ಬಿಟ್ಟು, ನಸುನಗೆಯೊಡನೆ ಪುನಃ ಮಾತನಾಡುತ್ತಾರೆ. ಭಾವ, ಭಕ್ತಿ, ಎಂದರೆ ಭಗವಂತನಲ್ಲಿ ಇರಿಸುವ ಪ್ರೀತಿ. ಆವನು ಬ್ರಹ್ಮನೋ, ಅವನನ್ನೇ ಮಾತೆಯೆಂದು ಕರೆಯುತ್ತಾರೆ.

ಮಾತೃಭಾವದಿಂದ। ಪ್ರಸಾದನು। ತಾತತ್ತ್ವವನೊರೆದ।
ಏತೆರದಿಂ ಜನ। ಜಾತದ ಮುಂಗಡೆ। ಮಾತನಾಡುವುದೆ। ಚೇತವರಿವುದನು॥

ರಾಮಪ್ರಸಾದನು ಮನಸ್ಸನ್ನು ಕುರಿತು, 'ಮಾತನಾಡುವುದೆ ಚೇತವರಿವುದನು', ಎಂದು ಹೇಳಿದ್ದಾನೆ. ವೇದವು ಆವುದನ್ನು ಬ್ರಹ್ಮವೆಂದು ಕರೆಯುತ್ತದೆಯೋ, ಅದನ್ನೇ ನಾವು 'ಮಾತೆ,' ಎಂದು ಕರೆಯುತ್ತೇವೆ. ಆವನು ನಿರ್ಗುಣನೋ, ಅವನು ಸಗುಣನೂ ಆಹುದು. ಆವನು ಬ್ರಹ್ಮನೋ, ಅವನೇ ಶಕ್ತಿ; ಭಗವಂತನು ನಿಷ್ಕ್ರಿಯನಾಗಿರುವಾಗ ಅವನನ್ನು ಬ್ರಹ್ಮವೆನ್ನುತ್ತೇವೆ. ಅವನು ಸವ್ಯಾಪಾರನಾಗಿ ಸೃಷ್ಟಿ, ಸ್ಥಿತಿ, ಪ್ರಲಯಗಳನ್ನು ಮಾಡುತ್ತಿದ್ದರೆ, ಜಗ ಅವನನ್ನು ಆದ್ಯಾಶಕ್ತಿಯೆಂದೂ, ಕಾಳಿಯೆಂದೂ, ಕೂಗುತ್ತೇವೆ.

ಬ್ರಹ್ಮನಿಗೂ ಶಕ್ತಿಗೂ ಭೇದವಿಲ್ಲ. ಅಗ್ನಿಯೆಂದರೆ ಸುಡುವ ಶಕ್ತಿಯೆಂದು ಗೊತ್ತು, ಸುಡುವ ಶಕ್ತಿಯೆಂದರೆ ಅಗ್ನಿಯೆಂದು ಗೊತ್ತು. ಒಂದನ್ನು

ಮೊದಲು ಗೊತ್ತುಮಾಡಿಕೊಂಡರೆ, ಮತ್ತೊಂದು ತಾನೇ ಗೊತ್ತಾಗುತ್ತದೆ.

ಭಗವಂತನನ್ನು ಮಾತೆಯೆಂದೂ ಕೂಗುತ್ತಾರೆ. ತಾಯಿಯು ಪ್ರೇಮಪಾತ್ರವಾದ ವಸ್ತುವಲ್ಲವೇ ? ಈಶ್ವರನಲ್ಲಿ ಪ್ರೀತಿಯಿರಿಸುವುದಕ್ಕಾದರೆ, ಅವನನ್ನು ಹೊದ್ದಬಹುದು. ಭಾವ, ಭಕ್ತಿ, ಪ್ರೀತಿ, ವಿಶ್ವಾಸ, ಇವೆಲ್ಲವೂ ಇರಬೇಕು. ಇನ್ನೊಂದು ಹಾಡನ್ನು ಕೇಳು.

(ಉಪಾಯ, ಮೊದಲು ವಿಶ್ವಾಸ, ಆಮೇಲೆ ಭಕ್ತಿ)

‘ ಈಶನ ಕರುಣೆಯನಾಶಿಸು ವಿನಯದಿ’ ಎಂಬಂತೆ

ಮನದಲಿ ಮಾತೆಯ। ನನುದಿನವುಂ ಚಿಂ। ತನೆಯನೆ ಮಾಡುತಲಿರುತಿರಲು।
ಎನಿತೆನಿತೋ ಭಾ। ವನೆಗಳುದಯಿಸುವು। ವನವರತವು ಹೃದಯಾಂಗಣದೆ॥
ದೇವಿಯ ಭಕ್ತಿಯ। ಭಾವದೊಳೀವಗೆ। ತೀವಿಹುದಾ ತೆರದೊಳಗೈಸೆ।
ತೀವಿದಪುದು ಫಲ। ದೇವಿಯೊಲಿವುದಕೆ। ಭಾವದ ಭಕ್ತಿಯೆ ಕಾರಣವು॥
ಕಾಳೀಪಾದಸು। ಧಾಲಲಿತಹ್ರದ। ದೋಲಾಡುತುಮಿರುತಿರೆ ಮನವು।
ಆಲಿಸು ಪೂಜಾ। ಯಾಗ ಹೋಮಂಗಳ। ಕೇಳಿಕೆಯಾವುದುಮಿಲ್ಲಿಲ್ಲ।

ಚಿತ್ತವು ತದ್ಗತವಾಗಬೇಕೆಂದರೆ, ಭಗವಂತನಲ್ಲಿ ಅತ್ಯಂತ ಪ್ರೀತಿಯನ್ನಿಡುವುದು. ಭಗವಂತನು ಅಮೃತದ ಮಡುವಲ್ಲವೇ? ಆ ಮಡುವಿನಲ್ಲಿ ಮುಳುಗಿದರೆ, ಮನುಷ್ಯನು ಅಮರನಾಗುತ್ತಾನೆ, ಸಾಯುವುದಿಲ್ಲ. ‘ ಈಶ್ವರ, ಈಶ್ವರ’ ಎಂದು ಹೆಚ್ಚಾಗಿ ಹೇಳುತ್ತಿದ್ದರೆ ಹುಚ್ಚು ಹಿಡಿಯುತ್ತದೆ, ಎಂಬುದಾಗಿ ಕೆಲವರು ಎನ್ನುತ್ತಾರೆ. ಅದು ನಿಜವಲ್ಲ. ಈಶ್ವರನು ಅಮೃತದ ಹ್ರದ, ಸುಧಾಸಾಗರ, ಭಗವಂತನು ಅಮೃತವೆಂದು ವೇದಗಳು ಹೇಳುತ್ತಿವೆ. ಆ ಅಮೃತದಲ್ಲಿ ಮುಳುಗಿದರೆ, ಮಾನವನು ಅಮರನಾಗುತ್ತಾನೆಯೇ ಹೊರತು, ಸಾಯುವುದಿಲ್ಲ.

(ನಿಷ್ಕಾಮಕರ್ಮ ಅಥವಾ ಕರ್ಮಯೋಗ, ಲೋಕೋಪಕಾರ.)

ಪೂಜಾ, ಹೋಮ, ಯಾಗ, ಯಜ್ಞಗಳೊಂದೂ ಬೇಕಿಲ್ಲ. ಭಗವಂತನಲ್ಲಿ ನಿಜವಾದ ಭಕ್ತಿಯಿದ್ದರೆ, ಈ ಕರ್ಮಗಳ ಆವಶ್ಯಕತೆಯೇ ಹೆಚ್ಚಾಗಿ ಇರುವುದಿಲ್ಲ. ಗಾಳಿಯಿಲ್ಲದೆ ಇದ್ದರೆ ಬೀಸಣಿಗೆಯು ಬೇಕು. ದಕ್ಷಿಣದಿಕ್ಕಿನಿಂದ ತಾನಾಗಿ ಗಾಳಿಯು ಬೀಸತೊಡಗಿದರೆ, ಬೀಸಣಿಗೆಯೇತಕ್ಕೆ ?

ನೀವು ಮಾಡುವ ಕೆಲಸಗಳೆಲ್ಲ ಬಲು ಒಳ್ಳೆಯ ಕೆಲಸಗಳು. ಆದರೆ, ‘ ನಾನು ಕರ್ತಾ’, ಎಂಬ ಅಹಂಕಾರವನ್ನು ತೊರೆದು, ನಿಷ್ಕಾಮಭಾವದಿಂದ ಕಾರ್ಯಗಳನ್ನು ಮಾಡುವುದಕ್ಕಾದರೆ, ನಿಮಗೆ ತುಂಬ ಶ್ರೇಯಸ್ಸಾಗುತ್ತದೆ. ಹೀಗೆ ನಿಷ್ಕಾಮಕರ್ಮವನ್ನು ಮಾಡುತ್ತ ಬಂದರೆ, ಈಶ್ವರನಲ್ಲಿ ಭಕ್ತಿಯೂ.

ಹೆಚ್ಚಾದ ಪ್ರೀತಿಯೂ, ಉಂಟಾಗುತ್ತವೆ. ಈ ವಿಧವಾಗಿ ನಿಷ್ಕಾಮಕರ್ಮ ವನ್ನು ಮಾಡುತ್ತಿದ್ದರೆ ಈಶ್ವರಲಾಭವಾಗುತ್ತದೆ.

ಆದರೆ, ಭಗವಂತನಲ್ಲಿ ಎಷ್ಟೆಷ್ಟು ಭಕ್ತಿಯುಂಟಾಗುತ್ತದೆಯೋ, ನಿಮ್ಮ ಕರ್ಮ ಗಳು ಅಷ್ಟಷ್ಟು ಕಮ್ಮಿಯಾಗಿ ಹೋಗುತ್ತವೆ. ಮನೆಯಲ್ಲಿ ಸೊಸೆಯರು ಬಸಿರಿಯರಾದರೆ, ಅತ್ತೆಯು ಅವರ ಕೆಲಸವನ್ನು ಕಮ್ಮಿಮಾಡುತ್ತಾಳೆ. ಬಸಿರು ಹೆಚ್ಚುತ್ತ ಬಂದ ಹಾಗೆಲ್ಲ, ಅತ್ತೆಯು ಅವರ ಕೆಲಸವನ್ನು ಇನ್ನೂ ಕಮ್ಮಿ ಮಾಡುತ್ತ ಬರುತ್ತಾಳೆ. ಹತ್ತು ತಿಂಗಳು ತುಂಬಿದರೆ, ಹೊಟ್ಟೆಯ ಮಗುವಿಗೆ ಏನಾದರೂ ಹಾನಿಯಾದೀತೆಂದೂ, ಹೆರಿಗೆಯಲ್ಲಿ ಏನಾದರೂ ಕಷ್ಟವಾದೀತೆಂದೂ ಹೆದರಿ, ಅವರಾಗಿಯೇ ಕೆಲಸಮಾಡುವುದಕ್ಕೆ ಬಂದರೂ, ಅತ್ತೆಯು ಸೊಸೆಯರನ್ನು ಕೆಲಸಮಾಡುವುದಕ್ಕೆ ಬಿಡುವುದೇ ಇಲ್ಲ. (ನಗು ತ್ತಾರೆ.) ನೀವು ಇತರರ ಉಪಕಾರಕ್ಕಾಗಿ ಮಾಡುವ ಈ ಕರ್ಮವೆಲ್ಲ ನಿಮ್ಮ ನಲ್ಮೆಯಲ್ಲಿಯೇ ಪರಿಣಾಮವಾಗುತ್ತದೆ. ನಿಷ್ಕಾಮಭಾವದಿಂದ ಕರ್ಮವನ್ನು ಮಾಡಬಲ್ಲಿರಾದರೆ, ನಿಮಗೆ ಚಿತ್ತಶುದ್ಧಿಯುಂಟಾಗುತ್ತದೆ. ಈಶ್ವರನಲ್ಲಿ ಪ್ರೀತಿ ಯುಂಟಾಗುತ್ತದೆ, ಪ್ರೀತಿಯುಂಟಾದರೇನೇ ಭಗವಂತನನ್ನು ಪಡೆಯಬ ಹುದು. ಮನುಷ್ಯನು ಲೋಕಕ್ಕೆ ಉಪಕಾರವನ್ನು ಮಾಡುವುದಕ್ಕಾಗುವು ದಿಲ್ಲ. ಆವನು ಚಂದ್ರ ಸೂರ್ಯರನ್ನು ಮಾಡಿದನೋ, ತಂದೆ ತಾಯಿಯರ ಅಂತರಂಗದಲ್ಲಿ ಸ್ನೇಹವನ್ನೂ, ಮಹಾತ್ಮರಲ್ಲಿ ದಯೆಯನ್ನೂ, ಸಾಧುಗಳ ಲ್ಲಿಯೂ ಭಕ್ತರಲ್ಲಿಯೂ ಕರುಣೆಯನ್ನೂ ಅನುಗ್ರಹಿಸಿದ್ದಾನೆಯೋ, ಆ ಭಗ ವಂತನೇ ಲೋಕಕ್ಕೆ ಉಪಕಾರಮಾಡುತ್ತಾನೆ. ಕಾಮನಾಶೂನ್ಯರಾಗಿ ಆರು ಕರ್ಮವನ್ನು ಮಾಡುತ್ತಾರೆಯೋ, ಅವರು ತಮಗೇ ನಲ್ಮೆಯನ್ನು ಮಾಡಿಕೊಳ್ಳುತ್ತಾರೆ.

(ನಿಷ್ಕಾಮಕರ್ಮವು ಉದ್ದೇಶ್ಯವು, ಈಶ್ವರದರ್ಶನ.)

ಒಳಗೆ ಚಿನ್ನವಿದೆ. ಅದು ಇದುವರೆಗೂ ತಿಳಿದಿಲ್ಲ. ಕೊಂಚ ಮಣ್ಣು ಮುಚ್ಚಿ ಕೊಂಡಿದೆ. ಒಂದಾವೃತ್ತಿ ಸೂಚನೆಯು ತಿಳಿದರೆ, ಇತರಕರ್ಮಗಳನ್ನೆಲ್ಲ ಬಿಟ್ಟುಅದನ್ನೇ ಹುಡುಕುತ್ತೀರಿ. ಮನೆಯ ಸೊಸೆಗೆ ಮಗುವಾದರೆ, ಸೊಸೆಯು ತನ್ನ ಪ್ರಾಣವನ್ನೆಲ್ಲ ಮಗುವಿನಲ್ಲಿಯೇ ಇಟ್ಟಿರುತ್ತಾಳೆ. ಅದ ರೊಂದಿಗೇ ಓಡಾಟ. ಅತ್ತೆಯು ಆವಳಿಂದ ಮನೆಗೆಲಸವನ್ನು ಮಾಡಿಸು ವುದಿಲ್ಲ. (ಎಲ್ಲರೂ ನಗುತ್ತಾರೆ.)

'ಇನ್ನೂ ಮುಂದೆ ಹೋಗು.' ಎಂಬ ಕಥೆಯನ್ನು ಕೇಳಿ. ಒಬ್ಬನು ಮರ ವನ್ನು ಕಡಿಯುತ್ತಿದ್ದನು. 'ಮುಂದೆ ಹೋಗು,' ಎಂದು ಒಬ್ಬ ಬ್ರಹ್ಮ

ಚಾರಿಯು ಅವನಿಗೆ ಹೇಳಿದನು. ಆ ಕಡೆಗೆ ಹೋಗಿ ಗಂಧದ ಮರವನ್ನು ಕಂಡನು. ಮತ್ತೆ ಸ್ವಲ್ಪ ದಿನಗಳಾದ ಮೇಲೆ, 'ಬ್ರಹ್ಮಚಾರಿಯು ಈ ಕಡೆ ಗಂಧದ ಮರದ ವರೆಗೇ ಹೋಗೆಂದು ಹೇಳಿರಲಿಲ್ಲ', ಎಂದು ಭಾವಿಸಿ, ಮುಂದೆ ಹೋದನು. ಅಲ್ಲಿ ಬೆಳ್ಳಿಯ ಗಣಿಯನ್ನು ಕಂಡನು. ಇನ್ನು ಕೆಲವು ದಿನಗಳ ತರುವಾಯ ಇನ್ನೂ ಮುಂದೆ ಹೋಗಿ ನೋಡಿದನು. ಚಿನ್ನದ ಗಣಿಯು ಕಾಣಿಸಿತು. ಅದಾದ ಬಳಿಕ, ಕೇವಲ ವಜ್ರಮಾಣಿಕ್ಯಗಳು ಸಿಕ್ಕಿದುವು. ಇವೆಲ್ಲವನ್ನೂ ಪಡೆದು, ಒನ್ನೆಯೇ ಅವನು ಕೋಟ್ಯಧೀಶ್ವರನಾದನು. ಹಾಗೆಯೇ ನೀವೂ 'ಮುಂದೆ ಹೋಗಿರಿ.'

ನಿಷ್ಕಾಮಕರ್ಮವನ್ನು ಮಾಡಬಲ್ಲಿರಾದರೆ, ಈಶ್ವರನಲ್ಲಿ ಪ್ರೀತಿಯುಂಟಾಗುತ್ತದೆ. ಬರಬರುತ್ತ ಭಗವಂತನ ದಯೆಯಿಂದ ಅವನನ್ನು ಹೊಂದಬಹುದು. ಈಶ್ವರನನ್ನು ನೋಡಬಹುದು. ನಾನು ನಿಮ್ಮ ಕೂಡೆ ಮಾತನಾಡುವಂತೆ, ನೀವೂ ಅವನೊಡನೆ ಮಾತನಾಡಬಹುದು. (ಎಲ್ಲರೂ ನಿಶ್ಶಬ್ದ.)

ಸಪ್ತಮ ಪರಿಚ್ಛೇದ

ಭಗವಾನರು ಅಹೇತುಕಕೃಪಾಸಿಂಧು

ಎಲ್ಲರೂ ನಿಸ್ತಬ್ಧರಾಗಿ, ಆಶ್ಚರ್ಯದಿಂದ ಭಗವಾನರ ಮಾತುಗಳನ್ನು ಕೇಳುತ್ತಿದ್ದರು. ವಾಣಿಯೇ ಸಾಕ್ಷಾತ್ತಾಗಿ ಶ್ರೀರಾಮಕೃಷ್ಣರವರ ಜಿಹ್ವೆಯಿಂದ ಅವತರಿಸಿ, ವಿದ್ಯಾಸಾಗರನನ್ನು ನೆಪಮಾಡಿಕೊಂಡು, ಜೀವರ ನಲ್ಮೆಗಾಗಿ ಮಾತನಾಡುತ್ತಿದ್ದಾಳೆಯೋ, ಎಂಬಂತಿದೆ.

ಶ್ರೀರಾಮಕೃಷ್ಣ:—(ವಿದ್ಯಾಸಾಗರನನ್ನು ನೋಡಿ ನಗುತ್ತ,) ನಾನು ಈಗ ಹೇಳಿದುದೆಲ್ಲ ಹೆಚ್ಚು. ತಾವು ಎಲ್ಲವನ್ನೂ ಬಲ್ಲಿರಿ. ಆದರೆ ತಮಗೆ ಅದೆಲ್ಲ ತಿಳಿದಿದೆಯೆಂದು ಗೊತ್ತಿಲ್ಲ. ವರುಣನ ಬಂಡಾರದಲ್ಲಿ ಜೇಕಾದಷ್ಟು ರತ್ನಗಳಿವೆ. ಪರಂತು, ವರುಣರಾಜನು ಇಷ್ಟಿದೆಯೆಂದು ಅರಿಯನು.

ವಿದ್ಯಾಸಾಗರ:—(ನಗುತ್ತ) ತಾವು ಹಾಗೆ ಹೇಳಬಹುದು.

ಶ್ರೀರಾಮಕೃಷ್ಣ:—(ನಗುತ್ತ) ದೊಡ್ಡ ಮನುಷ್ಯರಿಗೆ ಮನೆಯ ಆಳುಗಳ ಹೆಸರೆಲ್ಲ ಗೊತ್ತಿರುವುದಿಲ್ಲ. ಮನೆಯೊಳಗೆ ಆವ ಕಡೆ, ಎಷ್ಟು ಬೆಲೆ

ಯುಳ್ಳ ಪದಾರ್ಥಗಳಿವೆಯೆಂಬುದೂ ಅವರಿಗೆ ತಿಳಿಯದು. (ಎಲ್ಲರೂ ನಗುತ್ತಾರೆ.)

ಆ ಮಾತುಗಳನ್ನು ಕೇಳಿ, ಎಲ್ಲರೂ ಸಂತೋಷಗೊಂಡು ಸುಮ್ಮನಿದ್ದರು. ಭಗವಾನರು ಮತ್ತೆ ವಿದ್ಯಾಸಾಗರನೊಡನೆ ಮಾತನಾಡತೊಡಗಿದರು.

ಶ್ರೀರಾಮಕೃಷ್ಣ:-- (ನಗೆಯೊಡನೆ) ತಾವು ಒಂದು ದಿನ ರಾಸಮಣಿಯ ತೋಟವನ್ನು ನೋಡುವುದಕ್ಕೆ ಬರಬಾರದೇ? ಅದು ತುಂಬ ಪ್ರಶಸ್ತವಾದ ಸ್ಥಳ.

ವಿದ್ಯಾಸಾಗರ:—ಬಾರದಿದ್ದೇನೆಯೇ? ತಾವು ಇಲ್ಲಿಗೆ ಬಂದ ಬಳಿಕ, ನಾನು ತಮ್ಮ ಬಳಿಗೆ ಬಾರದಿರುವುದುಂಟೇ?

ಶ್ರೀರಾಮಕೃಷ್ಣ:—ನನ್ನ ಬಳಿಗೇ? ಛೇ! ಛೇ!

ವಿದ್ಯಾಸಾಗರ:—ಅದೇನು, ಹಾಗೆ ಹೇಳುತ್ತೀರಿ?

ಶ್ರೀರಾಮಕೃಷ್ಣ:—(ನಗುತ್ತ,) ನಾವು ಮೀನ ಹಿಡಿಯುವ ದೋಣಿ. ಕಾಲುವೆಯಲ್ಲಿಯೂ, ಗದ್ದೆಯ ನೀರಿನಲ್ಲಿಯೂ, ನದಿಗಳಲ್ಲಿಯೂ, ಹೋಗಬಲ್ಲೆವು. ತಾವು ದೊಡ್ಡ ಹಡಗು. ಅಲ್ಲಿಗೆ ಬಂದರೆ, ಆಳ ಸಾಲದೆ, ಎಲ್ಲಿ ಸಿಕ್ಕಿಕೊಳ್ಳುತ್ತೀರೋ! (ಎಲ್ಲರೂ ನಗುತ್ತಾರೆ.)

ವಿದ್ಯಾಸಾಗರನು ನಗೆಮೊಗದೊಡನೆ ಮಾತನಾಡದಿದ್ದಾನೆ. ಭಗವಾನರು ನಗುತ್ತಿದ್ದಾರೆ.

ಶ್ರೀರಾಮಕೃಷ್ಣ:—ಈಗ ಅದರಲ್ಲಿ ಹಡಗೂ ಹೋಗಬಹುದು.

ವಿದ್ಯಾಸಾಗರ:—(ನಗುತ್ತ) ಅಹುದು. ಇದು ಮಳೆಗಾಲ. (ಎಲ್ಲರೂ ನಗುತ್ತಾರೆ.)

ಮಾಸ್ಟರು:—(ಸ್ವಗತ,) ನವವೃಷ್ಟಿಯೂ, ನವಾನುರಾಗದ ಸಮಯವೂ, ಹೆಚ್ಚು ತಗ್ಗುಗಳನ್ನು ಅರಿಯದು.

ಭಗವಾನರು ಭಕ್ತರೊಡನೆ ಎದ್ದು ನಿಂತರು. ಅವರನ್ನು ಬಂಡಿಯಲ್ಲಿ ಕುಳ್ಳಿರಿಸುವುದಕ್ಕಾಗಿ ವಿದ್ಯಾಸಾಗರನೂ ತನ್ನವರೊಡನೆ ಎದ್ದು ನಿಂತುಕೊಂಡನು.

ಭಗವಾನರು ಇಷ್ಟು ಹೊತ್ತು ಏಕೆ ನಿಂತಿದ್ದಾರೆ? ಮೂಲಮಂತ್ರವನ್ನು ಜಪಮಾಡುತ್ತ ಭಾವಾವಿಷ್ಟರಾಗುತ್ತಿದ್ದಾರೆ. ಅವರು ಅಹೇತುಕಕೃಪಾಸಿಂಧು. ಇಲ್ಲಿಂದ ಪಯಣಮಾಡುವಾಗ, ವಿದ್ಯಾಸಾಗರನ ಆಧ್ಯಾತ್ಮಿಕಮಂಗಳಕ್ಕಾಗಿ ಮಾತೆಯನ್ನು ಕುರಿತು ಪ್ರಾರ್ಥನೆಮಾಡುತ್ತಿದ್ದಾರೆಂದು ತೋರುತ್ತದೆ.

ಭಗವಾನರು, ಭಕ್ತನೊಬ್ಬನ ಕಯ್ಯನ್ನು ಹಿಡಿದುಕೊಂಡು, ಮೆಟ್ಟಿಲನ್ನು ಇಳಿದು ಬರುತ್ತಿದ್ದಾರೆ. ವಿದ್ಯಾಸಾಗರನು ಕಯ್ಯಲ್ಲಿ ಜೀಪವನ್ನು ಹಿಡಿದುಕೊಂಡು, ತನ್ನವರೊಡನೆ ಹಾದಿಯನ್ನು ತೋರಿಸುತ್ತ ಮುಂದೆ ಮುಂದೆ ಹೋಗುತ್ತಿದ್ದಾನೆ. ಇಂದು

ಬಹುಳ ಷಷ್ಠೀ. ಇನ್ನೂ ಬೆಳದಿಂಗಳು ಬಂದಿಲ್ಲ. ಕತ್ತಲು ಕವಿದ ತೋಟವನ್ನು ಹಾದು, ಎಲ್ಲರೂ ಆ ಸಣ್ಣ ಬೆಳಕನ್ನು ನೋಡಿಕೊಂಡು, ಆವರಣದ ಬಾಗಿಲ ಬಳಿಗೆ ಬಂದು ಸೇರಿದರು.

ಶ್ರೀರಾಮಕೃಷ್ಣರು ಬಾಗಿಲ ಬಳಿಗೆ ಬಂದರು. ಇದಿರಿಗೆ ಬಂಗಾಳಿಯವರಂತೆ ಬಟ್ಟೆಯನ್ನು ಉಟ್ಟುಕೊಂಡು, ಗಡ್ಡ ಮೀಸೆಗಳನ್ನು ಬಿಟ್ಟುಕೊಂಡಿರುವ, ಗೌರ ವರ್ಣದ ಪುರುಷನೊಬ್ಬನು ನಿಂತಿದ್ದನು. ಅವನಿಗೆ ೩೬-೩೭ ವಯಸ್ಸು. ಅವನು ತಲೆಗೆ ಸಿಕ್ಕರೋಪಾದಿಯಲ್ಲಿ ಬಿಳಿಯ ಪಾಗನ್ನು ಹಾಕಿಕೊಂಡಿದ್ದನು. ಕಾಲಿನಲ್ಲಿ ಜೋಡೂ. ಮೈಯ್ಯ ಮೇಲೆ ಅಂಗಿಯೂ, ಇದ್ದುವು. ಅಂಗಿಯ ಮೇಲೆ ಉತ್ತರೀಯವಿರಲಿಲ್ಲ. ಅವನು ಶ್ರೀರಾಮಕೃಷ್ಣರನ್ನು ನೋಡಿದ ಕೂಡಲೇ, ಅವರಿಗೆ ಸಾಷ್ಟಾಂಗನಮಸ್ಕಾರಮಾಡಿದನು. ಎದ್ದು ನಿಂತ ಮೇಲೆ, ಭಗವಾನರು ಅವನನ್ನು ನೋಡಿ, 'ಬಲರಾಮ, ನೀನೇ? ಇದೇನು, ಈ ನಿಶೆಯಲ್ಲಿ ಬಂದಿದ್ದೀಯೆ?', ಎಂದು ಕೇಳಿದರು.

ಬಲರಾಮ :—(ನಗುತ್ತ) ನಾನು ಬಂದು ಬಲು ಹೊತ್ತಾಯಿತು. ಆಗಳಿಂದಲೂ ಇಲ್ಲಿಯೇ ನಿಂತಿದ್ದೇನೆ.

ಶ್ರೀರಾಮಕೃಷ್ಣ :—ಒಳಗೆ ಏತಕ್ಕೆ ಬಾರಲಿಲ್ಲ?

ಬಲರಾಮ :—ಸ್ವಾಮೀ, ಎಲ್ಲರೂ ತಮ್ಮ ಮಾತುಗಳನ್ನು ಕೇಳುತ್ತಿರುವಾಗ, ನಡುವೆ ನಾನು ಬಂದು, ಎಲ್ಲರಿಗೂ ಅಸಹ್ಯವುಂಟುಮಾಡಲೇ? (ಎಂದು ನಕ್ಕನು.)

ಭಗವಾನರು ಭಕ್ತರೊಡನೆ ಬಂಡಿಯನ್ನು ಏರಿದರು.

ವಿದ್ಯಾಸಾಗರ :—(ಮಾಸ್ಟರೊಡನೆ, ಮೆಲ್ಲಗೆ) ಬಾಡಿಗೆಯನ್ನು ಕೊಡಲೇ?

ಮಾಸ್ಟರು :—ಸ್ವಾಮೀ, ಬೇಡ. ಕೊಟ್ಟು ಆಗಿದೆ.

ವಿದ್ಯಾಸಾಗರನೂ ಮಿಕ್ಕವರೂ ಭಗವಾನರಿಗೆ ನಮಸ್ಕಾರಮಾಡಿದರು.

ಬಂಡಿಯು ಉತ್ತರಮುಖವಾಗಿ ನಿಂತಿದೆ. ಅದು ದಕ್ಷಿಣೇಶ್ವರದ ಕಾಳಿಕಾ ದೇವಾಲಯಕ್ಕೆ ಹೋಗುತ್ತದೆ. ಎಲ್ಲರೂ ಅದನ್ನೇ ನೋಡುತ್ತ, 'ಈ ಮಹಾ ಪುರುಷ ನಾರು? ಇವನಿಗೆ ಈಶ್ವರನಲ್ಲಿ ಎಷ್ಟೊಂದು ಭಕ್ತಿ! ಈತನು ಮನೆಮನೆಗೂ ಹೋಗಿ, ಈಶ್ವರನಲ್ಲಿ ಭಕ್ತಿಮಾಡುವುದೇ ಜೀವನದ ಉದ್ದೇಶವೆಂದು ಉಪದೇಶಿಸು ತ್ತಾನೆ,' ಎಂಬದಾಗಿ ಭಾವಿಸಿಕೊಂಡು ನಿಂತಿದ್ದರು.

ಐದನೆಯ ಖಂಡ

ಮೊದಲನೆಯ ಪರಿಚ್ಛೇದ

ಭಗವಾನ್ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಭಕ್ತರೊಡನೆ

ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಭಕ್ತರೊಡನೆ ವಿರಾಜಿಸುತ್ತಿದ್ದಾರೆ. ಈ ದಿವಸ ಗುರುವಾರ. ಕ್ರಿ. ಶ. ೧೮೮೨ ನೆಯ ಆಗಸ್ಟು ತಿಂಗಳ ೨೪ ನೆಯ ತೇದಿ.

ಈಗ ಭಗವಾನರೊಡನೆ ಹಾಜರಾಮಹಾಶಯ, ರಾಮಲಾಲ, ರಾಖಾಲ ಮುಂತಾದವರು ಇರುತ್ತಿದ್ದಾರೆ. ರಾಮಲಾಲನು ಭಗವಾನರ ಅಣ್ಣನ ಮಗ. ಅವನು ಕಾಳಿಕಾದೇವಾಲಯದಲ್ಲಿ ಪೂಜೆಮಾಡುತ್ತಾನೆ. ಮಾಸ್ಟರು ಬಂದು, ಈಶಾನ್ಯದ ಉದ್ದವಾದ ವಾರಂಡದಲ್ಲಿ, ಭಗವಾನರು ಹಾಜರನೊಡನೆ ಮಾತನಾಡುತ್ತಿರುವುದನ್ನು ಕಂಡು, ಅಲ್ಲಿಗೆ ಹೋಗಿ, ಅವರ ಶ್ರೀಪಾದಪದ್ಮಗಳಿಗೆ ಸಾಷ್ಟಾಂಗನಮಸ್ಕಾರಮಾಡಿದನು.

ಭಗವಾನರು :—(ನಗೆಮೊಗದೊಡನೆ, ಮಾಸ್ಟರನ್ನು ನೋಡಿ) ಇನ್ನು ಒಂದೆರಡು ಸಲ, ಈಶ್ವರವಿದ್ಯಾಸಾಗರನನ್ನು ನೋಡುವುದರಲ್ಲಿ ಗುಣವಿದೆ. ಚಿತ್ರಗಾರನು ಮೊದಲು ಆಕಾರವನ್ನು ಗುರುತು ಮಾಡಿಕೊಂಡು, ಆ ಮೇಲೆ, ಅಲ್ಲಲ್ಲಿಗೆ ತಕ್ಕತಕ್ಕ ಬಣ್ಣಗಳನ್ನು ಬಳಿಯುತ್ತಾನೆ. ಗೊಂಬೆ ಮಾಡುವವನು, ಮೊದಲು ಜೇಡಿ ಮಣ್ಣಿನಿಂದ ಒಂದು ಆಕಾರವನ್ನು ಮಾಡಿಕೊಂಡು, ಆ ಮೇಲೆ, ಅದರ ಎಲ್ಲ ಕಡೆಗಳನ್ನೂ ಮಣ್ಣಿನಿಂದ ನಯ ಮಾಡಿಕೊಂಡು, ಒಟ್ಟಿಗೆ ಎಲ್ಲಕ್ಕೂ ಬಿಳಿಯ ಬಣ್ಣವನ್ನು ಬಳಿದು, ತರುವಾಯ, ತನಗೆ ಇಷ್ಟ ಬಂದ ಬಣ್ಣವನ್ನು ಕೊಡುತ್ತಾನೆ. ಹೀಗೆ ಮೇಲೆ ಮೇಲೆ ಕೆಲಸ ಮಾಡುತ್ತಿರಬೇಕು. ಈಶ್ವರವಿದ್ಯಾಸಾಗರನಲ್ಲಿ ಎಲ್ಲ ಗುಣಗಳೂ ಸಿದ್ಧವಾಗಿವೆ. ಆದರೆ ಕೊಂಚ ಮುಚ್ಚಿಕೊಂಡಿವೆ. ಅವನು ಬಹುವಾಗಿ ಸತ್ಕಾರ್ಯಗಳನ್ನು ಮಾಡುತ್ತಿದ್ದಾನೆ. ಆದರೆ ತನ್ನ ಒಳಗೆ ಏನಿದೆಯೆಂಬುದನ್ನು ಅವನು ಅರಿಯನು. ಅವನಲ್ಲಿ ಚಿನ್ನವು ಮುಚ್ಚಿಕೊಂಡಿದೆ. ಅಂತರ್ಯದಲ್ಲಿ ಭಗವಂತನಿದ್ದಾನೆ. ಅದು ಅವನಿಗೆ ತಿಳಿದರೆ, ಅವನು ಮಿಕ್ಕ ಕೆಲಸಗಳನ್ನೆಲ್ಲ ಬಿಟ್ಟು, ವ್ಯಾಕುಲದೊಡನೆ ಭಗವಂತನಿಗೆ ಮೊರೆಯಿಡಬೇಕೆಂದು ಆಸೆಪಡುತ್ತಾನೆ.

ಭಗವಾನರು ನಿಂತುಕೊಂಡು, ಮಾಸ್ಟರೊಡನೆ ಮಾತನಾಡುತ್ತ, ವಾರಂಡ ದಲ್ಲಿ ಅಡಿಗಡಿಗೆ ತಿರುಗಾಡುತ್ತಿದ್ದರು.

(ಕಾಮಿನೀಕಾಂಚನಗಳೆಂಬ ಬಿರುಗಾಳಿಯನ್ನು ಹಾದುಹೋಗುವುದಕ್ಕೆ ಸಾಧನೆ.)

ಶ್ರೀರಾಮಕೃಷ್ಣ:—ಅಂತರ್ಯದಲ್ಲಿ ಏನಿದೆಯೆಂದು ಅರಿಯುವುದಕ್ಕಾಗಿ, ಸ್ವಲ್ಪ ಸಾಧನೆಯನ್ನು ಮಾಡಬೇಕು.

ಮಾಸ್ಟರು:—ಸಾಧನೆಯನ್ನು ಜೀವಾವಧಿ ಮಾಡುತ್ತಿರಬೇಕೋ?

ಶ್ರೀರಾಮಕೃಷ್ಣ:—ಇಲ್ಲ, ಮೊತ್ತ ಮೊದಲು, ಬಿದ್ದು ಎದ್ದು, ಶ್ರಮಪಡಬೇಕಾ ಗುತ್ತದೆ. ಆ ಮೇಲೆ ಅಷ್ಟು ಕಷ್ಟಪಡಬೇಕಾದುದಿಲ್ಲ. ಅಲೆಯೂ ಬಿರುಗಾಳಿ ಯೂ ಎದ್ದಿರುವಾಗ, ಹಡಗು ತೀರುವನ್ನು ಹಾದು ಹೋಗುವ ವರೆಗೂ, ನಾವಿಕನು ನಿಂತುಕೊಂಡು, ಹಡಗಿನ ನಡೆಸುವ ಯಂತ್ರವನ್ನು ಹಿಡಿ ದಿರುತ್ತಾನೆ. ಅದು ತೀರುವನ್ನು ಹಾದು ಹೋಗಿ, ಗಾಳಿಯೂ ಅನುಕೂಲ ವಾಗಿ ಬೀಸತೊಡಗಿದರೆ, ಆಗ ಅವನು ಯಂತ್ರದ ಮೇಲೆ ಸುಮ್ಮನೆ ಕುಳಿತುಕೊಂಡು, ಪಟಗಳನ್ನು ಕಟ್ಟುವುದಕ್ಕೆ ಏರ್ಪಾಟನ್ನು ಮಾಡಿ, ತಾನು ಹಾಯಾಗಿ ತಂಬಾಕನ್ನು ಸಿದ್ಧಪಡಿಸುತ್ತ, ಕುಳಿತುಕೊಳ್ಳುತ್ತಾನೆ. ಹೆಣ್ಣು ಹೊನ್ನುಗಳೆಂಬ ಬಿರುಗಾಳಿಯನ್ನು ಹಾದು ಹೋದ ಮೇಲೆಯೇ, ಶಾಂತಿಯುಂಟಾಗುತ್ತದೆ.

(ಶ್ರೀರಾಮಕೃಷ್ಣರೂ ಯೋಗತತ್ವವೂ, ಯೋಗಭ್ರಷ್ಟ, ಯೋಗಾವಸ್ಥೆ, ನಿವಾತನಿಷ್ಕಂಪಮಿವ ಪ್ರದೀಪಂ. ಯೋಗಕ್ಕೆ ತಡೆ.)

ಕೆಲವರಲ್ಲಿ ಯೋಗಿಗಳ ಲಕ್ಷಣಗಳಿವೆ. ಆದರೆ ಅವರುಬಲು ಎಚ್ಚರಿಕೆಯಾಗಿರ ಬೇಕು. ಹೆಣ್ಣು ಹೊನ್ನುಗಳಿಂದ ಯೋಗಕ್ಕೆ ವ್ಯಾಘಾತವುಂಟಾಗುತ್ತದೆ, ಸ್ವಲ್ಪ ಭೋಗದ ವಾಸನೆಯು ಇದ್ದರೂ, ಯೋಗಿಯು ಭ್ರಷ್ಟನಾಗಿ ಸಂಸಾರದಲ್ಲಿ ಬಂದು ಬೀಳುತ್ತಾನೆ. ಅದು ತೀರಿ ಹೋದ ಬಳಿಕ, ಮರಳಿ ಅವನು ಭಗವಂತನ ಬಳಿಗೇ ಹೊರಟು ಹೋಗುತ್ತಾನೆ. ಮತ್ತೆ ಅವನಿಗೆ ಅದೇ ಯೋಗಾವಸ್ಥೆಯು ಉಂಟಾಗುತ್ತದೆ. ನೀನು ಮೀನ ಹಿಡಿಯುವ ಯಂತ್ರವನ್ನು ನೋಡಿದ್ದೀಯಾ?

ಮಾಸ್ಟರು:—ಸ್ವಾಮೀ ಇಲ್ಲ, ನಾನು ನೋಡಿಲ್ಲ.

ಶ್ರೀರಾಮಕೃಷ್ಣ:—ಅದು ನಮ್ಮೂರ ಕಡೆಯಿದೆ. ಉದ್ದವಾದ ಬೊಂಬನ್ನು ನೆಲದಲ್ಲಿ ಹೂಳಿ, ಅದರ ತುದಿಗೆ ಹಗ್ಗವನ್ನು ಕಟ್ಟಿ ಬಗ್ಗಿಸಿ, ಹಗ್ಗದ

ಕೊನೆಗೆ ಗಾಳವನ್ನು ತಗುಲಿಸಿ, ಗಾಳಕ್ಕೆ ಎರುಬು ಹುಳುವನ್ನು ಸಿಕ್ಕಿಸಿ, ಹಗ್ಗವನ್ನು ನೀರಿಗೆ ಎಸೆಯುತ್ತಾರೆ. ಮೀನು ಬಂದು, ಗಾಳದಲ್ಲಿ ಸಿಕ್ಕಿಸಿ ರುವ ಹುಳುವನ್ನು ತಿಂದ ಕೂಡಲೇ, ಜೊಂಬು, ದಢಾರೆಂದು ಸದ್ದುಮಾಡಿ ಕೊಂಡು, ಮುನ್ನಿನಂತೆ ನೆಟ್ಟಗೆ ನಿಲ್ಲುತ್ತದೆ. ನೆಟ್ಟಗೆ ನಿಂತಿರುವ ಜೊಂಬೇ ಯೋಗಿಯ ಮನಸ್ಸು.

ತಕ್ಕಡಿಯ ಒಂದು ಕಡೆಗೆ ಭಾರವನ್ನು ಹಾಕಿದರೆ, ಮೇಲಿನ ಮುಳ್ಳೂ, ಕೆಳಗಿನ ಮುಳ್ಳೂ, ಒಂದೇ ಮುಖವಾಗಿರುವುದಿಲ್ಲ. ಕೆಳಗಿನ ಮುಳ್ಳೇ ಮನಸ್ಸು; ಮೇಲಿನ ಮುಳ್ಳೇ ಈಶ್ವರನು. ಎರಡು ಮುಳ್ಳುಗಳೂ ಒಂದು ಮುಖ ವಾಗಿರುವುದೇ ಯೋಗವೆನ್ನಿಸಿಕೊಳ್ಳುತ್ತದೆ.

ಮನಸ್ಸು ಸ್ಥಿರವಾಗಿಲ್ಲದಿದ್ದರೆ, ಯೋಗವಾಗುವುದಿಲ್ಲ. ಸಂಸಾರವೆಂಬ ಗಾಳಿಯು ಮನಸ್ಸೆಂಬ ದೀವಿಗೆಯನ್ನು ಆವಾಗಲೂ ಅಲ್ಲಾಡಿಸಿಬಿಡು ತ್ತದೆ. ಆ ದೀಪವು ಕೊಂಚವೂ ಅಲ್ಲಾಡದಿದ್ದರೆ, ಆ ಸ್ಥಿತಿಯೇ ಯೋಗ ವೆನ್ನಿಸುತ್ತದೆ.

ಕಾಮಿನೀಕಾಂಚನಗಳು ಯೋಗಕ್ಕೆ ವಿಘಾತಿಯನ್ನುಂಟುಮಾಡುತ್ತವೆ. ವಿಚಾರ ಮಾಡಿ ನೋಡು. ಹೆಂಗುಸರ ಮೈಯ್ಯಲ್ಲಿ ಏನಿದೆ? ರಕ್ತ, ಮಾಂಸ, ಕೊಬ್ಬು, ನರ, ದೊಳ್ಳು, ಕ್ರಿಮಿ, ಮಲ, ಮೂತ್ರ, ಇಷ್ಟೇ. ಇಂತಹ ದೇಹದಲ್ಲಿ ವ್ಯಾಮೋಹವೇಕೆ?

ತ್ಯಾಗಮಾಡಬೇಕೆಂಬ ಉದ್ದೇಶದಿಂದ, ನಾನು ರಾಜಸಿಕಭಾವವನ್ನು ಒಂದು ಸಲ ಕೈಕೊಂಡೆನು. ಒಳ್ಳೆಯ ಜರಿಯಂಚಿನ ಬಟ್ಟೆಯುಡಬೇಕೆಂದು ಆಸೆ ಯಾಯಿತು. ಬೆರಳಿಗೆ ಉಂಗುರವನ್ನಿಡಬೇಕೆಂದು ತೋರಿತು. ಉದ್ದವಾದ ಕೊಳವೆಯಿರುವ ಗುಡುಗುಡಿಯಿಂದ, ತಂಬಾಕನ್ನು ಸೇವಿಸಬೇಕೆಂಬ ಇಚ್ಛೆ ಯುಂಟಾಯಿತು. ನಾನು ಒಳ್ಳೆಯ ಜರಿಯಂಚಿನ ಬಟ್ಟೆಯನ್ನು ಉಟ್ಟೆನು. ಅದನ್ನು ಮಧುರಬಾಬುವು ತಂದುಕೊಟ್ಟನು. ಅದನ್ನು ಧರಿಸಿದ ಕೊಂಚ ಹೊತ್ತಿನ ಮೇಲೆ, ನಾನು, 'ಎಲೆ ಮನವೇ, ಇದರ ಹೆಸರೇ ಜರಿಯಂಚಿನ ಬಟ್ಟೆ', ಎಂದು ಹೇಳಿ, ಕೂಡಲೇ ಅದನ್ನು ತೆಗೆದು ಬಿಸುಟೆನು. ಮತ್ತೆ ಅದರ ಮೇಲೆ ಅಭಿಲಾಷೆಯುಂಟಾಗಲಿಲ್ಲ. ತರುವಾಯ ನಾನು, 'ಎಲೆ ಮನಸ್ಸೇ, ಇದರ ಹೆಸರೇ ಶಾಲು, ಇದರ ಹೆಸರೇ ಉಂಗುರ, ಇದರ ಹೆಸರೇ ಉದ್ದವಾದ ಕೊಳವೆಯಿರುವ ಗುಡುಗುಡಿಯಿಂದ ತಂಬಾಕನ್ನು ಸೇವಿಸುವುದು', ಎಂದು ಹೇಳಿ, ಅವುಗಳನ್ನೆಲ್ಲ ದೂರಕ್ಕೆ ಬಿಸುಟೆನು. ಮತ್ತೆ ಅವುಗಳ ಮೇಲೆ ಮನಸ್ಸು ಹೋಗಲಿಲ್ಲ.

ಸಂಜೆಯಾಗುತ್ತ ಬಂದಿತು. ಮನೆಯ ಆಗ್ನೇಯದ ವಾರಂಡದೊಳಗೆ, ಬಾಗಿಲ ಹತ್ತಿರ, ಭಗವಾನರು ಮಣಿಯೊಡನೆ ಏಕಾಂತವಾಗಿ ಮಾತನಾಡುತ್ತಿದ್ದಾರೆ.

ಶ್ರೀರಾಮಕೃಷ್ಣ :—ಯೋಗಿಗಳ ಮನಸ್ಸು ಸದಾ ಭಗವಂತನಲ್ಲಿ ನಿಂತಿರುತ್ತದೆ. ಸರ್ವದಾ ಆತ್ಮಸ್ಥ. ಹಕ್ಕಿಯು ತನ್ನ ಮೊಟ್ಟೆಯ ಮೇಲೆ ಕುಳಿತು, ಮನವನ್ನೆಲ್ಲ ಅದರಲ್ಲಿಯೇ ಇರಿಸಿ, ಮೇಲಕ್ಕೆ ಮಾತ್ರ, ಎಲ್ಲಿಯೋ ನೋಡುತ್ತಿರುತ್ತದೆ. ಆ ರೀತಿಯಾದ ಶೂನ್ಯದೃಷ್ಟಿಯಿಂದಿರುವ ಕಣ್ಣುಗಳನ್ನು ನೋಡಿದರೆ, ಯೋಗಿಯೆಂಬುದು ಗೊತ್ತಾಗುತ್ತದೆ. ಒಳ್ಳೆಯದು, ನನಗೆ ಆ ಚಿತ್ರವನ್ನು ತಂದು ತೋರಿಸುತ್ತೀಯಾ ?

ಮಣಿ :—ಅಪ್ಪಣೆ, ಎಲ್ಲಿಯಾದರೂ ಸಿಕ್ಕುವುದೋ ನೋಡುತ್ತೇನೆ.

—————

ಎರಡನೆಯ ಪರಿಚ್ಛೇದ

ಗುರುಶಿಷ್ಯ ಸಂವಾದ

—————

(ಅಂತರಂಗದ ಮಾತು)

ಸಂಜೆಯಾಯಿತು. ದೀವಿಗೆಯನ್ನು ಹೊತ್ತಿಸುವವನು, ಕಾಳೀದೇವಾಲಯದಲ್ಲಿಯೂ, ರಾಧಾಕಾಂತದೇವಾಲಯದಲ್ಲಿಯೂ, ಇತರ ಕೋಣೆಗಳಲ್ಲಿಯೂ, ದೀಪಗಳನ್ನು ಹೊತ್ತಿಸಿದನು. ಭಗವಾನರು ಸಣ್ಣ ಮಂಚದ ಮೇಲೆ ಕುಳಿತು, ಜಗನ್ಮಾತೆಯನ್ನು ಧ್ಯಾನಿಸುತ್ತಲೂ, ಭಗವನ್ನಾಮವನ್ನು ಸಂಕೀರ್ತನಮಾಡುತ್ತಲೂ, ಇದ್ದಾರೆ. ಮನೆಯಲ್ಲಿ ಧೂಪವನ್ನು ಹಾಕಿದ್ದಾರೆ. ಒಂದು ಮೂಲೆಯಲ್ಲಿ ದೀಪದ ಕಂಬವೊಂದು ಉರಿಯುತ್ತಿದೆ. ಕೊಂಚ ಹೊತ್ತಾದ ಮೇಲೆ, ಶಂಖವನ್ನೂ ಗಂಟೆಯನ್ನೂ ಬಾಜಿಸುವ ಸದ್ದಾಯಿತು. ಕಾಳಿಕಾದೇವಾಲಯದಲ್ಲಿ ಆರತಿಯಾಗುತ್ತಿದೆ. ಈ ದಿವಸ ಶುಕ್ಲಪಕ್ಷ ದಶಮೀ. ಬೆಳುದಿಂಗಳು ಎಲ್ಲೆಲ್ಲಿಯೂ ಉಜ್ವಲವಾಗಿದೆ.

ಆರತಿಯಾದ ಮೇಲೆ, ಶ್ರೀರಾಮಕೃಷ್ಣರು ಸಣ್ಣ ಮಂಚದ ಮೇಲೆ ಕುಳಿತುಕೊಂಡು, ಮಣಿಯ ಸಂಗಡ ಏಕಾಕಿಯಾಗಿ ಅದಾವುದೋ ಮಾತುಗಳನ್ನಾಡುತ್ತಿದ್ದಾರೆ. ಮಣಿಯು ನೆಲದ ಮೇಲೆ ಕುಳಿತಿದ್ದಾನೆ.

(ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ॥ ಗೀತಾ. ೨–೪೭)

ಶ್ರೀರಾಮಕೃಷ್ಣ :—ನಿಷ್ಕಾಮಕರ್ಮವನ್ನು ಮಾಡು. ಈಶ್ವರವಿದ್ಯಾಸಾಗರನು ಮಾಡುವ ಕರ್ಮಗಳೆಲ್ಲವೂ ಒಳ್ಳೆಯವು, ಅವನು ನಿಷ್ಕಾಮಕರ್ಮವನ್ನು ಮಾಡುವುದಕ್ಕೆ ಪ್ರಯತ್ನಿಸುತ್ತಾನೆ.

ಮಣಿ :......ಅಪ್ಪಣೆ, ನಿಜ. ಕರ್ಮವಿರುವ ವರೆಗೂ ಭಗವಂತನನ್ನು ಪಡೆಯುವುದಕ್ಕಾಗುತ್ತದೆಯೇ? ರಾಮನೂ ಕಾಮನೂ ಒಟ್ಟಾಗಿರುವುದಕ್ಕಾದೀತೇ? 'ರಾಮನಿರುವ ಕಡೆ ಕಾಮನಿಲ್ಲ; ಕಾಮನಿರುವ ಕಡೆ ರಾಮನಿಲ್ಲ,' ಎಂದು ಮೊನ್ನೆಮೊನ್ನೆ ನಾನು ಹಿಂದಿಯ ಪುಸ್ತಕದಲ್ಲಿ ಒಂದು ಪದ್ಯವನ್ನು ಓದಿದ್ದೆನು.

ಶ್ರೀರಾಮಕೃಷ್ಣ :—ಎಲ್ಲ ಕರ್ಮಗಳನ್ನೂ ಮಾಡಲೇ ಬೇಕು. ಭಗವಂತನ ಗುಣವನ್ನು ಕೊಂಡಾಡುವುದೂ ಕರ್ಮ, ನಾಮಕೀರ್ತನೆಯನ್ನು ಮಾಡುವುದೂ ಕರ್ಮ, 'ನಾನೇ ಅವನು,' ಎಂಬ ಸೋಹಂವಾದಿಗಳ ಧ್ಯಾನವೂ ಕರ್ಮ, ಉಸಿರನ್ನು ಬಿಡುವುದೂ ಕರ್ಮ; ಕರ್ಮವನ್ನು ತ್ಯಾಗಮಾಡುವುದಕ್ಕೆ ಆಗುವುದೇ ಇಲ್ಲ. ಆದುದರಿಂದ ಕರ್ಮವನ್ನೇನೋ ಮಾಡು; ಆದರೆ ಫಲವನ್ನು ಮಾತ್ರ ಭಗವಂತನಲ್ಲಿ ಸಮರ್ಪಿಸು.

ಮಣಿ :—ಅಪ್ಪಣೆ, ಹೆಚ್ಚಾಗಿ ಹಣವನ್ನು ಸಂಪಾದಿಸುವುದಕ್ಕೆ ಪ್ರಯತ್ನ ಮಾಡಬಹುದೇ?

ಶ್ರೀರಾಮಕೃಷ್ಣ :—ವಿದ್ಯಾಸಂಸಾರಕ್ಕಾದರೆ ಆಗಬಹುದು. ಸದುಪಾಯದಿಂದ ಬೇಕಾದಷ್ಟು ಪ್ರಯತ್ನಮಾಡು, ಆದರೆ ಸಂಪಾದನೆಮಾಡುವುದೇ ಉದ್ದೇಶವಲ್ಲ. ಈಶ್ವರನ ಸೇವೆಯನ್ನು ಮಾಡುವುದೀಗ ಉದ್ದೇಶ. ಹಣದಿಂದ ಈಶ್ವರಸೇವೆಯಾಗುವುದಾದರೆ, ಆಗ ಅದಕ್ಕೆ ದೋಷವಿಲ್ಲ.

ಮಣಿ :—ಸ್ವಾಮೀ, ಹೆಂಡಿರು ಮಕ್ಕಳನ್ನು ಎಷ್ಟು ದಿನದ ವರೆಗೆ ಕಾಪಿಡಬೇಕು?

ಶ್ರೀರಾಮಕೃಷ್ಣ :—ಅವರಿಗೆ ಉಣ್ಣುವುದಕ್ಕೂ, ಉಡುವುದಕ್ಕೂ, ತೊಂದರೆಯಾಗಬಾರದು. ಮಕ್ಕಳು ದೊಡ್ಡವರಾಗಿ ಸಂಸಾರವನ್ನು ನೋಡಿಕೊಳ್ಳುವುದಕ್ಕೆ ಸಮರ್ಥರಾದರೆ, ಆಗ ಆ ಭಾರವನ್ನು ನಾವು ವಹಿಸಬೇಕಾದುದಿಲ್ಲ. ಪಕ್ಷಿಯು, ಮರಿಗೆ ಮೇವನ್ನು ಹುಡುಕುವುದಕ್ಕೆ ಕಲಿಸುತ್ತದೆ. ಆ ಮೇಲೆ ಮರಿಯು ಮರಳಿ ತನ್ನ ಹತ್ತಿರಕ್ಕೆ ಮೇವಿಗಾಗಿ ಬಂದರೆ, ಅದನ್ನು ಕುಕ್ಕಿ ಓಡಿಸಿಬಿಡುತ್ತದೆ.

ಮಣಿ :—ಕರ್ಮವನ್ನು ಎಲ್ಲಿಯ ವರೆಗೆ ಮಾಡಬೇಕು ?

ಶ್ರೀರಾಮಕೃಷ್ಣ :—ಕಾಯಿ ಬಿಟ್ಟ ಮೇಲೆ, ಹೂವು ನಿಂತೀತೇ? ಈಶ್ವರ ಲಾಭವಾದ ಬಳಿಕ, ಕರ್ಮವನ್ನು ಮಾಡಬೇಕಾದುದಿಲ್ಲ ; ಮಾಡುವುದಕ್ಕೆ ಮನಸ್ಸೂ ಬರುವುದಿಲ್ಲ.

ಕುಡುಕನು ಹೆಂಡವನ್ನು ತುಂಬ ಕುಡಿದು ಬಿಟ್ಟರೆ, ಅವನಿಗೆ ಜ್ಞಾನವು ತಪ್ಪಿ ಹೋಗುತ್ತದೆ. ಕೊಂಚವೇ ಕುಡಿದರೆ, ತನ್ನ ಕೆಲಸಗಿಲಸಗಳನ್ನು ಮಾಡಿ ಕೊಳ್ಳುತ್ತಾನೆ. ನಾವು ಭಗವಂತನನ್ನು ಸಮೀಪಿಸಿದ ಹಾಗೆಲ್ಲ, ಅವನು ನಮ್ಮ ಕರ್ಮಗಳನ್ನು ಕಮ್ಮಿಮಾಡಿಕೊಡುತ್ತಾನೆ, ಭಯವಿಲ್ಲ. ಸೊಸೆ ಯು ಬಸಿರಾದರೆ, ಅತ್ತೆಯು, ಅವಳ ಕೆಲಸವನ್ನು ಬರುತ ಬರುತ ಕಮ್ಮಿ ಮಾಡುತ್ತಾಳೆ. ಹತ್ತು ತಿಂಗಳು ತುಂಬಿದರೆ, ಅವಳಿಂದ ಕೆಲಸವನ್ನೇ ಮಾಡಿಸುವುದಿಲ್ಲ. ಮಗುವು ಹುಟ್ಟಿದ ಮೇಲೆ, ಅದನ್ನು ಆಡಿಸಿಕೊಂಡಿರು ವುದಕ್ಕೇ ಅವಳನ್ನು ಬಿಟ್ಟುಬಿಡುತ್ತಾಳೆ.

ಗೃಹಿಣಿಯು ಮೊದಲು ಮನೆಯ ಕೆಲಸಗಳನ್ನೆಲ್ಲ ಮುಗಿಸಿಕೊಂಡು, ಆಮೇಲೆ ನಿಶ್ಚಿಂತಳಾಗಿರುತ್ತಾಳೆ.

ಅವಳು ಅಡುಗೆಯ ಮನೆಯ ಕೆಲಸವನ್ನೂ, ಮತ್ತೆ ಬೇರೆ ಕೆಲಸಗಳನ್ನೂ, ತೀರಿಸಿಕೊಂಡು ಸ್ನಾನಮಾಡುವುದಕ್ಕೆ ಹೋಗುತ್ತಾಳೆ. ಆ ಮೇಲೆ ಹಿಂತಿ ರುಗಿ ನೋಡುವುದೂ ಇಲ್ಲ ; ಕೂಗಿದರೆ ಬರುವುದೂ ಇಲ್ಲ.

(ಈಶ್ವರಲಾಭ. ಈಶ್ವರದರ್ಶನವೆಂತು ? ಉಪಾಯವಾವುದು ?)

ಮಣಿ :—ಅಪ್ಪಣೆ. ಈಶ್ವರಲಾಭವೆಂದರೇನು ? ಆವುದನ್ನು ಈಶ್ವರದರ್ಶನ ವೆನ್ನುತ್ತಾರೆ? ಏನ ಮಾಡಿದರೆ ಅದು ಆಗುತ್ತದೆ ?

ಶ್ರೀರಾಮಕೃಷ್ಣ :—ಈಶ್ವರನ ಹಾದಿಯಲ್ಲಿ ನಡೆವರನ್ನೂ, ಈಶ್ವರನನ್ನು ಪಡೆವರನ್ನೂ, ವೈಷ್ಣವರು ಪ್ರವರ್ತಕ, ಸಾಧಕ, ಸಿದ್ಧ, ಪರಮಸಿದ್ಧ ಎಂಬ ನಾಲ್ಕು ತರಗತಿಗಳಾಗಿ ವಿಂಗಡಿಸಿದ್ದಾರೆ. ಆವನು, ಈಗ ತಾನೇ ಹಾದಿಯನ್ನು ಹಿಡಿದಿರುತ್ತಾನೆಯೋ, ಅವನು ಪ್ರವರ್ತಕನು. ಆವನು ಸಾಧನೆಯನ್ನೂ, ಭಜನೆಯನ್ನೂ ಮಾಡುತ್ತಾನೆಯೋ, ಎಂದರೆ ಪೂಜೆ, ಜಪ, ತಪ, ಧ್ಯಾನ, ನಾಮಗುಣಕೀರ್ತನೆ, ಇವುಗಳನ್ನು ಮಾಡುತ್ತಾನೆ ಯೋ, ಅವನು ಸಾಧಕನು. ಆವನು, 'ಭಗವಂತನು ಇದ್ದಾನೆ,' ಎಂಬ ಜ್ಞಾನವನ್ನು ಪಡೆಯುತ್ತಾನೆಯೋ, ಅವನೇ ಸಿದ್ಧನು. ಇದಕ್ಕೆ ವೇದಾಂತ ದಲ್ಲಿ ಒಂದು ಉಪಮೆಯಿದೆ ; ಅದೇನೆಂದರೆ. ಕತ್ತಲೆಯ ಮನೆಯೊಳಗೆ ಯಜಮಾನನು ಮಲಗಿದ್ದಾನೆ. ಒಬ್ಬನು ಬಂದು ಕಯ್ಯಿಂದ ತಡವರಿ

ಸುತ್ತ, ಅವನನ್ನು ಹುಡುಕುತ್ತಾನೆ. ಕಯ್ಗೆ ಸೋಫಾ ಸಿಕ್ಕಿದರೆ. ಇದಲ್ಲ; ಕಿಟಿಕಿಯು ಸಿಕ್ಕಿದರೆ, ಇದಲ್ಲ; ಬಾಗಿಲು ಸಿಕ್ಕಿದರೆ, ಇದಲ್ಲ, ಎನ್ನುತ್ತಾನೆ. ಕೊನೆಗೆ ಅವನ ಕಯ್ಯು ಮಲಗಿರುವ ಯಜಮಾನನ ಮೇಲೆ ಬೀಳುತ್ತದೆ. ಆಗ ಅವನು, 'ಇವನೇ ಯಜಮಾನನು,' ಎಂದು ತಿಳಿದುಕೊಳ್ಳುತ್ತಾನೆ. ಎಂದರೆ ಅವನಿಗೆ 'ದೇವರಿದ್ದಾನೆ,' ಎಂಬ ಜ್ಞಾನವು ಉಂಟಾಗುತ್ತದೆ. ಈ ಉಪಮೆಗೆ 'ನೇತಿ' ಮಾರ್ಗವೆಂತಲೂ ಹೆಸರು. 'ನೇತಿ' ಮಾರ್ಗವೆಂದರೆ, ಆತ್ಮವು ಶರೀರವಲ್ಲ, ಪ್ರಾಣವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ, ಆನಂದವಲ್ಲ, ಇವೆಲ್ಲಕ್ಕಿಂತಲೂ ಬೇರೆಯಾದುದು ಎಂದು ಅಭಿಪ್ರಾಯ. ಪ್ರೇಮ ಪೂರ್ವಕವಾಗಿ ಆವನು ಈಶ್ವರನೊಡನೆ ವಿಶೇಷವಾಗಿ ಆಲಾಪಮಾಡುತ್ತಾನೆಯೋ, ಅವನು ಪರಮಸಿದ್ಧನು. ಸಿದ್ಧನಿಗೆ ಈಶ್ವರಲಾಭವು ಮಟ್ಟಿಗೆ ಆಗುತ್ತದೆ. ಪರಮಸಿದ್ಧನು ಈಶ್ವರನೊಂದಿಗೆ ಅತಿಶಯವಾಗಿ ಆಲಾಪ ಮಾಡುತ್ತಾನೆ.

ಭಗವಲ್ಲಾಭವಾಗಬೇಕಾದರೆ,*ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಾಧುರ್ಯ ಗಳೆಂಬ ಆವುವಾದರೂ ಒಂದು ಭಾವವನ್ನು ಆಶ್ರಯಿಸಿ ಭಕ್ತನು ಸಾಧನೆಯನ್ನು ಮಾಡುತ್ತಿರಬೇಕು.

ಶಾಂತ:—ಋಷಿಗಳಂತೆ, ಅವರಿಗೆ ಭೋಗದ ವಾಸನೆಯು ಎಳ್ಳಷ್ಟೂ ಇಲ್ಲ. ಪತ್ನಿಗೆ ಪತಿಯಲ್ಲಿರುವ ನಿಷ್ಠೆಯ ಹಾಗೆ. ತನ್ನ ಪತಿಯೇ ಮನ್ಮಥನೆಂದು ಪತ್ನಿಯು ಭಾವಿಸಿಕೊಳ್ಳುತ್ತಾಳೆ.

---

*ಇವು ಭಕ್ತರ ಸಾಧನೆಗಳು ಶಾಂತವೆಂದರೆ, ಭಕ್ತನು ಸದಾ ದೇವರನ್ನೇ ಮನದಲ್ಲಿ ಇಟ್ಟುಕೊಂಡು ಚಿಂತಿಸುತ್ತಿರುವುದು. ಈ ಭಾವವು ಹೆಚ್ಚಿದರೆ, ಭಕ್ತನು ದಾಸನಂತೆ ಸರ್ವದಾ ಭಗವಂತನ ಸೇವೆಯನ್ನು ಮಾಡಬೇಕೆಂದು ಅಪೇಕ್ಷಿಸುತ್ತಾನೆ. ಈ ಎರಡು ಭಾವಗಳಲ್ಲಿಯೂ ದೇವರು ತನಗಿಂತ ತುಂಬ ದೊಡ್ಡವನೆಂದು ತಿಳಿದು, ಭಕ್ತನು ಸ್ವಲ್ಪ ದೂರದಿಂದಲೇ, ಅವನ ಧ್ಯಾನದಲ್ಲಿಯೂ ಸೇವೆಯಲ್ಲಿಯೂ ನಿರತನಾಗುತ್ತಾನೆ. ಈ ಭಾವಗಳು ಹೆಚ್ಚಿದರೆ, ಸಖ್ಯವೆಂಬ ಭಾವವು ಉಂಟಾಗುತ್ತದೆ. ಆಗ ಭಕ್ತನಿಗೆ ಭಗವಂತನ ಮಾಹಾತ್ಮ್ಯಜ್ಞಾನವು ಮರೆತುಹೋಗಿ, ಅವನಲ್ಲಿ ಅತಿಶಯವಾದ ಪ್ರೇಮವುಂಟಾಗಿ, ಅವನು ತನ್ನ ಸ್ನೇಹಿತನೆಂಬ ಭಾವದಿಂದ ವರ್ತಿಸುತ್ತಾನೆ ಈ ಭಾವವು ಹೆಚ್ಚುತ್ತ ಬಂದರೆ, ಭಕ್ತನು ಭಗವಂತನನ್ನು ತನ್ನ ಮಗುವೆಂದು ಎಣಿಸಿಕೊಂಡು, ತನ್ನ ಪ್ರೀತಿಯೂ ಆದರವೂ ಇಲ್ಲದಿದ್ದರೆ, ಅವನಿಗೆ ಎಲ್ಲಿ ಕೇಡಾಗುವುದೋ, ಎಂದು ಹೆದರಿ ಹಮ್ಮೈಸುತ್ತಾನೆ. ವಾತ್ಸಲ್ಯವೆಂಬ ಈ ಭಾವವು ಉಲ್ಬಣವಾದರೆ, ಆಗ ಭಕ್ತನು ತನ್ನ ತನುಮನಂಗಳೆಂಬ ಸರ್ವಸ್ವವನ್ನೂ ಭಗವಂತನಲ್ಲಿ ಅರ್ಪಿಸಿ, ಸ್ತ್ರೀಯು ತನ್ನ ಪ್ರಿಯತಮನನ್ನು ಆವ ಭಾವದಿಂದ ಕಾಣುವಳೋ, ಹಾಗೆಯೇ ತಾನು ಭಗವಂತನನ್ನು ಕಾಣುತ್ತಾನೆ. ಶಾಂತ ದಾಸ್ಯ ಮುಂತಾದ ಮೇಲೆ ವಿವರಿಸಿದ ಭಾವಗಳಲ್ಲಿ, ಮುಂದೆ ಮುಂದೆ ಹೇಳುವ ಭಾವಗಳು, ಅವುಗಳ ಹಿಂದೆ ಹೇಳಿದ ಭಾವಗಳನ್ನೆಲ್ಲ ಒಳಕೊಳ್ಳುತ್ತವೆ.—(ಚೈತನ್ಯಚರಿತಾಮೃತ)

ದಾಸ್ಯ :—ಹನುಮಂತನಂತೆ, ರಾಮನ ಕಾರ್ಯವನ್ನು ಮಾಡುವಾಗ, ಅವನು ಸಿಂಹದಂತೆ ಇರುತ್ತಿದ್ದನು. ಹೆಂಡತಿಯಲ್ಲಿಯೂ ದಾಸಭಾವವಿದೆ. ಅವಳು ತನ್ನ ಪ್ರಾಣವನ್ನಾದರೂ ಒತ್ತೆಯಿಟ್ಟು ಪತಿಸೇವೆಯನ್ನು ಮಾಡುತ್ತಾಳೆ. ತಾಯಲ್ಲಿಯೂ ದಾಸಭಾವವಿದೆ, ಯಶೋದೆಯೋಪಾದಿಯಲ್ಲಿ.

ಸಖ್ಯ :—ಶ್ರೀದಾಮಾದಿಗಳಂತೆ, ಬಾ, ಬಾ, ಬಂದು ಹತ್ತಿರ ಕುಳಿತುಕೋ, ಎನ್ನುವುದು; ಶ್ರೀದಾಮಾದಿಗಳು ಕೃಷ್ಣನಿಗೆ ತಾವು ಎಂಜಲ ಮಾಡಿದ ಫಲ ಗಳನ್ನು ತಿನ್ನುವುದಕ್ಕೆ ಕೊಡುತ್ತಿದ್ದರು. ಒಂದೊಂದು ಸಲ ಅವನ ಹೆಗಲ ಮೇಲೆಯೂ ಹತ್ತಿಕೊಳ್ಳುತ್ತಿದ್ದರು.

ವಾತ್ಸಲ್ಯ :—ಯಶೋದೆಯಂತೆ, ಇದು ಹೆಂಡಿರಲ್ಲಿಯೂ ಇದೆ. ಹೆಂಡಿರು, ಪತಿಗೆ ತಮ್ಮ ಪ್ರಾಣವನ್ನಾದರೂ ಸಮರ್ಪಿಸಿ ಭೋಜನಮಾಡಿಸುತ್ತಾರೆ. ಮಕ್ಕಳು ಹೊಟ್ಟೆತುಂಬ ತಿಂದು ಆಡುವುದಕ್ಕೆ ಹೋದರೆ, ತಾಯಿಗೆ ಬಹು ಸಂತೋಷ; ಕೃಷ್ಣನಿಗೆ ತಿನ್ನಿಸಬೇಕೆಂದು ಯಶೋದೆಯು ಕಯ್ಯಲ್ಲಿ ಬೆಣ್ಣೆ ಯಿಟ್ಟುಕೊಂಡು ಓಡಾಡುತ್ತಿದ್ದಳು.

ಮಾಧುರ್ಯ :—ರಾಧೆಯಂತೆ, ಹೆಂಡತಿಯಲ್ಲಿಯೂ ಮಾಧುರ್ಯವಿದೆ. ಇದ ರೊಳಗೆ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯಗಳೆಂಬ ಮಿಕ್ಕ ಭಾವಗಳೆಲ್ಲವೂ ಅಡಗಿಹೋಗುತ್ತವೆ.

ಮಣಿ :—ಈ ಕಣ್ಣಿನಿಂದ ಈಶ್ವರನನ್ನು ದರ್ಶನಮಾಡಬಹುದೇ ?

ಶ್ರೀರಾಮಕೃಷ್ಣ :—ಈ ಚರ್ಮದ ಕಣ್ಣುಗಳಿಂದ ಭಗವಂತನನ್ನು ನೋಡು ವುದಕ್ಕಾಗುವುದಿಲ್ಲ. ಸಾಧನೆಯನ್ನು ಮಾಡುತ್ತ ಬಂದರೆ, ನಮಗೆ ಒಂದು ಪ್ರೇಮಶರೀರವು ಉಂಟಾಗುತ್ತದೆ. ಅದಕ್ಕೆ ಪ್ರೇಮಚಕ್ಷುಸ್ಸೂ, ಪ್ರೇಮ ಕರ್ಣಗಳೂ ಇವೆ. ಆ ಚಕ್ಷುಸ್ಸಿನಿಂದ ಭಗವಂತನನ್ನು ದರ್ಶನಮಾಡ ಬಹುದು. ಆ ಕಿವಿಗಳಿಂದ ಅವನ ಮಾತನ್ನು ಕೇಳಬಹುದು. ಆ ಶರೀರಕ್ಕೆ ಪ್ರೇಮದ ಲಿಂಗವೂ, ಯೋನಿಯೂ ಉಂಟು.

ಆ ಮಾತನ್ನು ಕೇಳಿ, ಮಣಿಯು ಅಹಹಾ! ಎಂದು ನಕ್ಕನು. ಅದಕ್ಕೆ ಭಗವಾ ನರು ಕೋಪಗೊಳ್ಳದೆ, ಮತ್ತೆ ಹೇಳ ತೊಡಗಿದರು.

ಶ್ರೀರಾಮಕೃಷ :—ಈ ಪ್ರೇಮಶರೀರವು ಆತ್ಮನೊಡನೆ ರಮಿಸುತ್ತದೆ.

(ಮಣಿಯು ಗಂಭೀರವಾದನು.)

ಶ್ರೀರಾಮಕೃಷ್ಣ:—ಈಶ್ವರನಲ್ಲಿ ಹೆಚ್ಚಾಗಿ ಪ್ರೀತಿಯಿಲ್ಲದಿದ್ದರೆ, ಏನೂ ಆಗುವು ದಿಲ್ಲ. ಅತಿಶಯವಾದ ಪ್ರೀತಿಯಿದ್ದರೆ, ಎಲ್ಲವೂ ನಾಲ್ಕು ಕಡೆಯಲ್ಲಿಯೂ

ಈಶ್ವರಮಯವಾಗಿ ಕಾಣುತ್ತದೆ. ಕಾಮಾಲೆಯು ಉಲ್ಬಣವಾದರೆ, ಎಲ್ಲವೂ ಹಳದಿಯ ಬಣ್ಣವಾಗಿ ಕಾಣಿಸುವುದಿಲ್ಲವೇ?

ಆಗ 'ಅವನೇ ನಾನು,' ಎಂಬ ಜ್ಞಾನವು ಉಂಟಾಗುತ್ತದೆ. ಕುಡುಕನು ತುಂಬ ಮತ್ತನಾದರೆ, 'ನಾನೇ ಕಾಳಿ', ಎಂದು ಹೇಳುತ್ತಾನೆ.

ಗೋಪಿಯರು ಪ್ರೇಮೋನ್ಮತ್ತರಾಗಿ 'ನಾನೇ ಕೃಷ್ಣ' ನೆಂದು ಹೇಳುತ್ತಿದ್ದರು. ಹಗಲೂ ಇರುಳೂ ಭಗವಂತನನ್ನೇ ಧ್ಯಾನಿಸುತ್ತಿದ್ದರೆ, ಎತ್ತ ನೋಡಿದರೂ ಅವನ ದರ್ಶನವಾಗುತ್ತದೆ. ದೀಪದ ಬೆಳಕನ್ನು ಏಕದೃಷ್ಟಿಯಿಂದ ನೋಡುತ್ತ ಇದ್ದರೆ, ನಾಲ್ಕು ದಿಕ್ಕಿನಲ್ಲಿಯೂ ಆ ಬೆಳಕೇ ಕಾಣುತ್ತದೆ.

(ಈಶ್ವರದರ್ಶನವು ಭ್ರಮೆಯೋ? ಸಂಶಯಾತ್ಮಾ ವಿನಶ್ಯತಿ.)

ಹಾಗೆ ಕಾಣುವ ದೀಪದ ಬೆಳಕು, ವಾಸ್ತವವಾದ ಬೆಳಕಲ್ಲವೆಂದು ಮಣಿಯು ಭಾವಿಸಿಕೊಂಡನು. ಅಂತರ್ಯಾಮಿಯಾದ ಭಗವಾನರು ಅವನನ್ನು ನೋಡಿ, 'ಚೈತನ್ಯವಸ್ತುವನ್ನು ಧ್ಯಾನಮಾಡಿದರೆ, ಅದು ಅಚೈತನ್ಯವಾಗುವುದಿಲ್ಲ. ಈಶ್ವರನನ್ನು ಹೆಚ್ಚಾಗಿ ಧ್ಯಾನ ಮಾಡಿದರೆ, ಹುಚ್ಚು ಹಿಡಿದು ಹೋಗುತ್ತದೆಯೆಂದು ಶಿವನಾಥನು ಹೇಳಿದನು. ಚೈತನ್ಯವಸ್ತುವನ್ನು ಚಿಂತಿಸಿದರೆ, ಅದು ಅಚೈತನ್ಯವಾದೀತೇ? ಎಂದು ನಾನು ಅವನಿಗೆ ಬದಲನ್ನು ಹೇಳಿದೆನು,' ಎಂದರು.

ಮಣಿ:—ಅಪ್ಪಣೆ. ತಿಳಿಯಿತು. ಅನಿತ್ಯವಾದ ವಿಷಯಚಿಂತನೆಯನ್ನು ಆರೂ ಮಾಡಬಾರದಲ್ಲವೇ? ನಿತ್ಯಚೈತನ್ಯಸ್ವರೂಪನಾದ ಭಗವಂತನಲ್ಲಿ ಮನವನ್ನು ನಿಲ್ಲಿಸಿದರೆ, ಮನುಷ್ಯನು ಹೇಗೆ ತಾನೇ ಅಚೈತನ್ಯನಾದಾನು?

ಶ್ರೀರಾಮಕೃಷ್ಣ:—(ಪ್ರಸನ್ನರಾಗಿ) ಇದೇ ಭಗವತ್ಕೃಪೆ. ಆ ಕೃಪೆಯಿಲ್ಲದಿದ್ದರೆ, ಸಂಶಯವು ಹೋಗುವುದಿಲ್ಲ.

ಆತ್ಮಸಾಕ್ಷಾತ್ಕಾರವಾಗದಿದ್ದರೆ ಸಂಶಯವು ಪರಿಹಾರವಾಗುವುದಿಲ್ಲ.

ಭಗವಂತನ ಕೃಪೆಯುಂಟಾದರೆ ಭಯವಿಲ್ಲ. ಮಗುವು ತಂದೆಯ ಕಯ್ಯನ್ನು ಹಿಡಿದುಕೊಂಡಿದ್ದರೂ, ಬೀಳುವ ಸಂಭವವುಂಟು. ಪರಂತು, ತಂದೆಯು ಮಗುವಿನ ಕಯ್ಯನ್ನು ಹಿಡಿದುಕೊಂಡಿದ್ದರೆ, ಅದು ಬೀಳುವ ಭಯವೇ ಇರುವುದಿಲ್ಲ. ಭಗವಂತನು ನಮ್ಮಲ್ಲಿ ಕೃಪೆ ಮಾಡಿದರೆ, ನಮ್ಮ ಅನುಮಾನಗಳನ್ನೆಲ್ಲ ಪರಿಹರಿಸಿ, ನಮಗೆ ತನ್ನ ದರ್ಶನವನ್ನು ಕೊಡುತ್ತಾನೆ. ನಮಗೆ ಕೊಂಚವೂ ಕಷ್ಟವಾಗುವುದಿಲ್ಲ. ಭಗವಂತನನ್ನು ಪಡೆಯಬೇಕೆಂಬ ಕಾತರಭಾವದಿಂದ, ಸದಾ ಅವನಿಗೆ ಮೊರೆಯಿಡುತ್ತಾ, ಸಾಧನಗಳನ್ನು ಮಾಡುತ್ತಿದ್ದರೆ, ಅವನ ಕೃಪೆಯುಂಟಾಗುತ್ತದೆ. ಮಗುವು ಓಡುತ್ತ ಬಂದರೆ, ತಾಯಿಗೆ

ಮರುಕವು ಹೆಚ್ಚು. ಅವಳು ಮರೆಯಲ್ಲಿದ್ದರೂ ಈಚೆಗೆ, ಬಂದು ಕಾಣಿಸಿಕೊಳ್ಳುತ್ತಾಳೆ.

'ಭಗವಂತನು ಪತಕ್ಕೋಸ್ಕರ ನಮ್ಮನ್ನು ಆರೀತಿ ಓಡಿ ಬರುವಂತೆ ಮಾಡಬೇಕು?' ಎಂದು ಮಣಿಯು ಭಾವಿಸಿಕೊಂಡನು. ಅವನ ಅಂತರಂಗವನು ಅರಿತು ಭಗವಾನರು, 'ಅಯ್ಯ, ಒಂದೊಂದು ವೇಳೆ, ನಮ್ಮನ್ನು ಓಡಿಬರುವಂತೆ ಮಾಡುವುದು ಅವನ ಇಚ್ಛೆ. ಅದರಿಂದ ಅವನು ಆನಂದಪಡುತ್ತಾನೆ. ಅವನು ತನ್ನ ಲೀಲಾ ಮಾತ್ರದಿಂದ ಈ ಸಂಸಾರವನ್ನು ನಿರ್ಮಾಣ ಮಾಡಿದ್ದಾನೆ. ಈ ರಚನೆಯ ಹೆಸರೇ ಮಹಾ ಮಾಯೆ. ಆದಕಾರಣ ಶಕ್ತಿ ರೂಪಿಣಿಯಾದ ಆ ತಾಯಿಗೆ ನಾವು ಶರಣಾಗತರಾಗಬೇಕು. ಅವಳು ನಮ್ಮನ್ನು ಮಾಯಾಪಾಶದಿಂದ ಕಟ್ಟಿಹಾಕಿದ್ದಾಳೆ. ಆ ಕಟ್ಟನ್ನು ನಾವು ಹರಿಯಬಲ್ಲೆವಾದರೆ, ಆಗಳೀಗ ನಮಗೆ ಈಶ್ವರದರ್ಶನವಾಗುತ್ತದೆ. ಎಂದು ಹೇಳಿದರು.

(ಆದ್ಯಾಶಕ್ತಿ, ಮಹಾಮಾಯೆಯೂ, ಶಕ್ತಿ ಸಾಧನೆಯೂ.)

ಶ್ರೀರಾಮಕೃಷ್ಣ :—ಆದ್ಯಾಶಕ್ತಿಯ ಕೃಪೆಯನ್ನು ಪಡೆದರೆ, ಅವಳು ನಮಗೆ ಒಲಿಯುತ್ತಾಳೆ ಅವಳೇ ಮಹಾಮಾಯೆ. ಅವಳು ಜಗತ್ತಿಗೆ ಮೋಹ ವುಂಟುಮಾಡುತ್ತ, ಸೃಷ್ಟಿ ಸ್ಥಿತಿ ಪ್ರಲಯಗಳನ್ನು ಮಾಡುತ್ತಾಳೆ. ಅವಳು ಅಜ್ಞಾನವನ್ನು ಮಾಡಿ, ಅದನ್ನು ನಮ್ಮಲ್ಲಿ ಇರಿಸಿದ್ದಾಳೆ. ಆ ಮಹಾಮಾಯೆಯು ಎಡೆಗೊಟ್ಟರೆ, ಒಳಗೆ ಹೋಗಬಹುದು. ಹೊರಗಡೆಯಲ್ಲಿಯೇ ಇದ್ದರೆ, ಹೊರಗಣ ವಸ್ತುಗಳನ್ನು ಮಟ್ಟಿಗೆ ಕಾಣಬಹುದು. ಅಂಥವನಿಗೆ ನಿತ್ಯವಾದ ಸಚ್ಚಿದಾನಂದಪುರುಷನ ದರ್ಶನವೇನೂ ಆಗುವುದಿಲ್ಲ. ಮಧುಕೈಟಭರು ಸಂಹೃತರಾದಾಗ, ಬ್ರಹ್ಮಾದಿದೇವತೆಗಳು ಮಹಾಮಾಯೆಯನ್ನು ಸ್ತುತಿಸಿದರೆಂಬುದಾಗಿ ಚಂಡೀಪುರಾಣದಲ್ಲಿ ಹೇಳಿರುತ್ತದೆ.

ಶಕ್ತಿಯೇ ಜಗತ್ತಿಗೆ ಮೂಲಾಧಾರ. ಆ ಆದ್ಯಾಶಕ್ತಿಯಲ್ಲಿಯೇ ವಿದ್ಯೆಯೂ ಅವಿದ್ಯೆಯೂ ಇವೆ. ಅವಿದ್ಯೆ ಎಂದರೆ ಹೆಣ್ಣು ಹೊನ್ನುಗಳು. ಇವು ಮೋಹಕಾರಿಗಳು. ವಿದ್ಯೆ ಎಂದರೆ ಭಕ್ತಿ, ದಯೆ, ಪ್ರೇಮ, ಜ್ಞಾನಾದಿಗಳು. ಇವು ಇದ್ದರೆ, ಈಶ್ವರನ ಬಳಿಗೆ ಹೋಗಲಾಗುತ್ತದೆ.

ಆದುದರಿಂದ, ಆ ಅವಿದ್ಯೆಯನ್ನು ಪ್ರಸನ್ನವಾಗುವಂತೆ ಮಾಡಬೇಕು. ಇದೇ ಶಕ್ತಿಪೂಜೆಗೆ ಕಾರಣ.

ದಾಸೀಭಾವ, ವೀರಭಾವ, ಸಂತಾನಭಾವಗಳೆಂಬ ಅನೇಕ ವಿಧಗಳಾದ ಭಾವಗಳಿಂದ ಅವಳನ್ನು ಪೂಜಿಸಿ ಒಲಿಸಿಕೊಳ್ಳಬೇಕು. ವೀರಭಾವವೆಂದರೆ ಪತ್ನಿಯೆಂಬ ಭಾವದಿಂದ ಅವಳನ್ನು ಒಲಿಸುವುದು.

ಶಕ್ತಿಸಾಧನೆಯೇ! ಎಲ್ಲ ಬಗೆಯ ಸಾಧನೆಯೂ ಬಹುಕಷ್ಟ. ಬಾಯ ಮಾತಿನಲ್ಲಿ ಆಗುವುದಿಲ್ಲ.

ನಾನು ಮಹಾಮಾತೆಯನ್ನು ಎರಡು ವರ್ಷಗಳ ವರೆಗೆ, ಸಖೀಭಾವದಿಂದಲೂ, ದಾಸೀ ಭಾವದಿಂದಲೂ ಸಾಧನೆ ಮಾಡಿದೆನು. ನನ್ನದು ಸಂತಾನಭಾವ. ತರುಣಿಯರ ಸ್ತನಗಳನ್ನು, ಮಾತೆಯ ಸ್ತನಗಳಂತೆ ತಿಳಿಯುತ್ತೇನೆ.

ಹೆಣ್ಣು ಮಕ್ಕಳೆಲ್ಲರೂ ಶಕ್ತಿಯ ಒಂದೊಂದು ರೂಪು. ಮದುವೆಯಾಗುವಾಗ ಪಶ್ಚಿಮದ ಕಡೆ, ವರನ ಕೈಯ್ಯಲ್ಲಿ ಒಂದು ಚೂರಿಯನ್ನು ಕೊಡುತ್ತಾರೆ. ಬಂಗಾಳದಲ್ಲಿ ಒಂದು ಕತ್ತಿಯನ್ನು ಕೊಡುತ್ತಾರೆ. ಶಕ್ತಿರೂಪಿಣಿಯಾದ ವಧುವಿನ ಸಾಹಾಯ್ಯದಿಂದ, ವರನು ಮಾಯಾಪಾಶವನ್ನು ಛೇದಿಸಿಬಿಡುತ್ತಾ ನೆಂಬುದು ಇದರ ಅಭಿಪ್ರಾಯ. ಇದನ್ನೇ ವೀರಭಾವವೆಂದು ಹೇಳುತ್ತಾರೆ. ನಾನು ಈ ಭಾವದಿಂದ ಮಹಾಮಾತೆಯನ್ನು ಪೂಜೆಮಾಡಲಿಲ್ಲ. ನನ್ನದು ಸಂತಾನಭಾವ.

ಕನ್ಯೆಯು ಶಕ್ತಿಯ ರೂಪು. ಮದುವೆಯ ಕಾಲದಲ್ಲಿ ವರನು ಹೆಣ್ಣಿನ ಹಿಂದೆ ಮಾತನಾಡದೆ ಕುಳಿತಿರುತ್ತಾನೆ. ಆದರೆ ಕನ್ಯೆಯೇನೋ ನಿರ್ಭಯವಾಗಿ ರುತ್ತಾಳೆ.

(ಭಗವಂತನ ದರ್ಶನವಾದ ತರುವಾಯು, ಅವನ ಐಶ್ವರ್ಯವು ಮರೆತುಹೋಗುತ್ತದೆ.)

ಈಶ್ವರನ ಲಾಭವಾದ ಮೇಲೆ, ಅವನ ಹೊರಗಣ ಐಶ್ವರ್ಯವೂ, ಅವನ ಪ್ರಪಂ ಚದ ಐಶ್ವರ್ಯವೂ ಮರೆತು ಹೋಗುತ್ತವೆ. ಭಗವಂತನ ದರ್ಶನವಾದ ತರುವಾಯ, ಅವನ ಐಶ್ವರ್ಯದಲ್ಲಿ ಮನಸ್ಸು ನಿಲ್ಲುವುದಿಲ್ಲ. ಈಶ್ವರನ ಆನಂದ ದಲ್ಲಿ ಮಗ್ನರಾದರೆ, ಭಕ್ತರು ಮಿಕ್ಕುದಾವುದನ್ನೂ ಲೆಕ್ಕಿಸುವುದಿಲ್ಲ. ನರೇಂದ್ರ ನನ್ನು ನೋಡಿದಾಗ, 'ನಿನ್ನ ಹೆಸರೇನು ? ನಿಮ್ಮ ಮನೆಯೆಲ್ಲಿ ?', ಎಂದು ಕೇಳುವುದಕ್ಕೇ ತೋರುವುದಿಲ್ಲ. ಮಾತನಾಡುವುದಕ್ಕೆ ತಾನೇ ಹೊತ್ತೆಲ್ಲಿದೆ? 'ಈ ದಿವಸ ಆವ ತಿಥಿ' ಎಂಬದಾಗಿ ಒಬ್ಬನು. ಹನುಮಂತನನ್ನು ಕೇಳಿ ದನು. ಅದಕ್ಕೆ ಆಂಜನೇಯನು, 'ಅಣ್ಣಾ, ನನಗೆ ವಾರ, ತಿಥಿ, ನಕ್ಷತ್ರ ವೊಂದೂ ಗೊತ್ತಿಲ್ಲ. ನನಗೆ ಸದಾ, ಶ್ರೀರಾಮನ ಧ್ಯಾನವೊಂದೇ ಗೊತ್ತು' ಎಂದು ಹೇಳಿದನು.

ಆರನೆಯ ಖಂಡ

ದಕ್ಷಿಣೇಶ್ವರದಲ್ಲಿ ನರೇಂದ್ರ ಮುಂತಾದ ಅಂತರಂಗ ಭಕ್ತರೊಡನಿರುವುದು.

ಪ್ರಥಮ ಪರಿಚ್ಛೇದ

(ಶ್ರೀರಾಮಕೃಷ್ಣಭಗವಾನರ ೧೮೫೮ ಇಸವಿಯ ಪ್ರಥಮಪ್ರೇಮೋದ್ಗಾರ)

ಈ ದಿನ ಶ್ರೀರಾಮಕೃಷ್ಣರವರು ಬಹುಳಾನಂದದಲ್ಲಿ ಇದ್ದಾರೆ. ದಕ್ಷಿಣೇಶ್ವರದ ಕಾಳಿಕಾದೇವಾಲಯಕ್ಕೆ ನರೇಂದ್ರನು ಬಂದಿದ್ದಾನೆ. ಕೆಲವರು ಅಂತರಂಗ ಭಕ್ತರೂ ಬಂದಿದ್ದಾರೆ. ನರೇಂದ್ರನು ಭಗವಾನರ ಕೊಟಡಿಗೆ ಬಂದು, ಸ್ನಾನಮಾಡಿ, ಪ್ರಸಾದ ವನ್ನು ಸ್ವೀಕರಿಸಿದ್ದಾನೆ.

ಇಂದು ಸೋಮವಾರ, ೧೮೮೨ ನೆಯ ಅಕಟೋಬರು ೧೬ ನೆಯ ತೇದಿ. ಬರುವ ಗುರುವಾರ ಸಪ್ತಮಿಯೇ ಶ್ರೀ ದುರ್ಗಾಪೂಜೆ.

ಭಗವಾನರ ಬಳಿಯಲ್ಲಿ ಹಾಜರಾ, ರಾಖಾಲ ಮತ್ತು ರಾಮಲಾಲ ಇವರು ಇದ್ದಾರೆ. ನರೇಂದ್ರನ ಸಂಗಡ, ಬ್ರಹ್ಮಜ್ಞಾನಿ ಬಾಲಕರು ಒಬ್ಬಿಬ್ಬರು ಬಂದಿದ್ದಾರೆ. ಇಂದು ಮಾಸ್ಟರೂ ಬಂದು ಇದ್ದಾನೆ.

ನರೇಂದ್ರನು ಭಗವಾನರ ಸಂಗಡಲೇ ಊಟಮಾಡಿದನು. ಭೋಜನವಾದ ತರುವಾಯ, 'ಇಲ್ಲಿ ನೆಲದ ಮೇಲೆ ಹಾಸಿಗೆಯನ್ನು ಹಾಸಿರಿ; ನರೇಂದ್ರಾದಿ ಭಕ್ತರು ವಿಶ್ರಮಿಸಿಕೊಳ್ಳಲಿ', ಎಂದು ಪರಮಹಂಸರು ಹೇಳಿದರು. ಚಾಪೆಯ ಮೇಲೆ ಹಾಸಿಗೆಯೂ, ಒರಗು ದಿಂಬುಗಳೂ ಹಾಕಿವೆ. ಭಗವಾನರು, ನರೇಂದ್ರನ ಬಳಿ ಯಲ್ಲಿ ಬಾಲಕರೋಪಾದಿಯಲ್ಲಿ ಕುಳಿತುಕೊಂಡು, ನಸುನಗೆಯಿಂದ ನರೇಂದ್ರನನ್ನು ನೋಡುತ್ತ, ಭಕ್ತರೊಡನೆ-ವಿಶೇಷವಾಗಿ ನರೇಂದ್ರನೊಡನೆ-ಅತ್ಯಾನಂದದಿಂದ ತಮ್ಮ ಅವಸ್ಥೆಯನ್ನೂ ಚರಿತೆಯನ್ನೂ ಕಥೆಯಂತೆ ಹೇಳುತ್ತಿದ್ದಾರೆ.

ಶ್ರೀರಾಮಕೃಷ್ಣ:—(ನರೇಂದ್ರ ಮುಂತಾದ ಭಕ್ತರೊಡನೆ) "ನನಗೆ ಈ ಅವಸ್ಥೆ ಯುಂಟಾದ ಮೇಲೆ, ಕೇವಲವಾಗಿ ಈಶ್ವರನ ಕಥೆಗಳನ್ನೇ ಕೇಳಬೇಕೆಂಬ ಕುತೂಹಲ ವುಂಟಾಯಿತು. 'ಎಲ್ಲಿ ಭಾಗವತ, ಎಲ್ಲಿ ಅಧ್ಯಾತ್ಮರಾಮಾಯಣ, ಎಲ್ಲಿ ಮಹಾಭಾರತ ಗಳ ಕಥಾಶ್ರವಣವಾಗುತ್ತದೆ,' ಎಂದು ಹುಡುಕುತ್ತ, ನಾನು ಅಲೆಯುತ್ತಿದ್ದೆನು. ಅಧ್ಯಾತ್ಮರಾಮಾಯಣವನ್ನು ಕೇಳುವುದಕ್ಕಾಗಿ, ಎಂಡೇದಾರ ಕೃಷ್ಣಕಿಶೋರನ ಬಳಿಗೆ ಹೋಗುತ್ತಿದ್ದೆನು.

"ಕೃಷ್ಣಕಿಶೋರನಿಗೆ ಎಂತಹ ವಿಶ್ವಾಸ! ಅವನು ವೃಂದಾವನಕ್ಕೆ ಹೋಗಿದ್ದನು. ಅಲ್ಲಿ ಒಂದು ದಿನ ಅವನಿಗೆ ನೀರಡಿಕೆಯಾಯಿತು. ಬಾವಿಯ ಹತ್ತಿರಕ್ಕೆ ಹೋದನು. ಅಲ್ಲಿ ಒಬ್ಬ ಮನುಷ್ಯನು ನಿಂತಿದ್ದನು. ಕೃಷ್ಣಕಿಶೋರನು, ನೀರ ಸೇದಿಕೊಡೆಂದು, ಅವನನ್ನು ಕೇಳಿದನು. ಅದಕ್ಕೆ ಅವನು, 'ಸ್ವಾಮೀ, ನಾನು ಕೀಳು ಜಾತಿಯವನು, ತಾವು ಬ್ರಾಹ್ಮಣರು, ತಮಗೆ ನಾನು ಹೇಗೆ ನೀರ ಸೇದಿಕೊಡಲಿ?' ಎಂದನು. ಆ ಮಾತಿಗೆ ಕೃಷ್ಣಕಿಶೋರನು, 'ಎಲಾ, ನೀನು 'ಶಿವ,' ಎಂದು ಹೇಳು; 'ಶಿವ, ಶಿವ' ಎಂದರೆ ಶುದ್ಧನಾಗುತ್ತೀಯೆ,' ಎಂದು ಹೇಳಿದನು. ಅವನು 'ಶಿವ, ಶಿವ, ಶಿವ,' ಎಂದು ಹೇಳುತ್ತ ನೀರ ಸೇದಿಕೊಟ್ಟನು. ಕೃಷ್ಣಕಿಶೋರನು ಆಚಾರಶೀಲನಾದ ಬ್ರಾಹ್ಮಣನಾದರೂ, ಆ ಮನುಷ್ಯನು ಸೇದಿಕೊಟ್ಟ ಆ ನೀರನ್ನು ಕುಡಿದು ಬಿಟ್ಟನು. ಎಂಥ ವಿಶ್ವಾಸ!

"ಎಂಡೇದಾರ ಘಟ್ಟಕ್ಕೆ ಒಬ್ಬ ಸಾಧುವು ಬಂದಿದ್ದನು. ಅವನನ್ನು ನೋಡಿಕೊಂಡು ಬರಬೇಕೆಂದು ಆಲೋಚನೆಮಾಡಿ, ಕಾಲೀದೇವಾಲಯದಲ್ಲಿ ಹಲಧಾರಿಯೊಡನೆ, 'ಕೃಷ್ಣಕಿಶೋರನೂ ನಾನೂ ಈ ದಿನ ಸಾಧುವನ್ನು ನೋಡಿಕೊಂಡು ಬರಬೇಕೆಂದಿದ್ದೇವೆ. ನೀನೂ ಬರುತ್ತೀಯಾ,' ಎಂದು ಕೇಳಿದೆನು. ಹಲಧಾರಿಯು ಗೀತೆಯನ್ನೂ ವೇದಾಂತವನ್ನೂ ಓದಿದವನು. ನಾನು ಕೇಳಿದುದಕ್ಕೆ, 'ಆ ಮಣ್ಣಿನ ಗೂಡನ್ನು ನೋಡುವುದರಿಂದ ಏನು ಪ್ರಯೋಜನ,' ಎಂದು ಅವನು ಹೇಳಿಬಿಟ್ಟನು. ಆ ಮಾತನ್ನು ನಾನು ಕೃಷ್ಣಕಿಶೋರನಿಗೆ ಹೇಳಿದೆನು. ಅದನ್ನು ಕೇಳಿ, ಅವನು ಕೋಪದಿಂದ, 'ಏನು! ಏನು! ಹಲಧಾರಿಯು ಹಾಗೆಂದನೇ? ಆರು ಈಶ್ವರಧ್ಯಾನವನ್ನೂ, ರಾಮಧ್ಯಾನವನ್ನೂ ಮಾಡುತ್ತ, ಅದಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿದ್ದಾರೆಯೋ, ಅವರ ದೇಹವನ್ನು, 'ಮಣ್ಣಿನ ಗೂಡು,' ಎಂದು ಹೇಳಬಹುದೇ? ಭಕ್ತರ ದೇಹವು ಚಿನ್ಮಯವಾದುದು. ಅದನ್ನು ಹಲಧಾರಿಯೇನ ಬಲ್ಲನು?' ಎಂದನು. ಕೃಷ್ಣಕಿಶೋರನಿಗೆ ಅದೆಷ್ಟು ಕೋಪವಪ್ಪ! ಅವನು ಹೂಗಳನ್ನು ಕುಯ್ಯುವುದಕ್ಕಾಗಿ ಕಾಳಿಯ ದೇವಾಲಯಕ್ಕೆ ಬರುತ್ತಿದ್ದನು. ಆಗ ಹಲಧಾರಿಯನ್ನು ನೋಡಿದರೆ, ತನ್ನ ಮುಖವನ್ನು ಅತ್ತ ಕಡೆಗೆ ತಿರುಗಿಸಿಕೊಳ್ಳುತ್ತಿದ್ದನು. ಅವನೊಂದಿಗೆ ಮಾತನ್ನೇ ಆಡುತ್ತಿರಲಿಲ್ಲ.

"ನನ್ನನ್ನು ನೋಡಿ ಕೃಷ್ಣಕಿಶೋರನು, 'ನಿಮ್ಮ ಜನಿವಾರವನ್ನು ಏಕೆ ಬಿಸಾಡಿಬಿಟ್ಟಿರಿ', ಎಂದು ಕೇಳಿದನು. ಅದಕ್ಕೆ ನಾನು 'ಅಪ್ಪ, ನನಗೆ ಈ ಅವಸ್ಥೆಯುಂಟಾದಾಗ, ಆಷಾಢದ ಬಿರುಗಾಳಿಯಂತೆ, ಅವುದೋ ಒಂದು ಬಂದು, ನನ್ನನ್ನು ಎಲ್ಲಿಗೋ ಎತ್ತಿಕೊಂಡು ಹೋಯಿತು. ನನ್ನ ಪೂರ್ವದ ಚಿಹ್ನೆಗಳಾವುವೂ ನಿಲ್ಲಲಿಲ್ಲ. ನನಗೆ ಪ್ರಜ್ಞೆಯೇ ಇರಲಿಲ್ಲ. ಉಟ್ಟ ಬಟ್ಟೆಯು ಕೂಡ ಬಿದ್ದು ಹೋಗುತ್ತಿದ್ದಿತು. ಹೀಗಿರುವಲ್ಲಿ, ಜನಿವಾರವು ಹೇಗೆ ತಾನೇ ನಿಂತೀತು? ನೀನು ಒಂದು ಸಲ ಉನ್ಮಾದಗ್ರಸ್ತನಾದರೆ, ಆಗ ನಿನಗೇ ಗೊತ್ತಾಗುತ್ತದೆ', ಎಂದು ಹೇಳಿದೆನು.



ಮಹಾಮಾತೆ ಶ್ರೀ ಶಾರಧಾದೇವಿಯವರು.

"ಅದೂ ಆಯಿತು. ಅವನಿಗೂ ದೇವರ ಉನ್ಮಾದವಾಯಿತು. ಆಗ ಅವನು 'ಓಂ, ಓಂ' ಎಂದುಕೊಂಡು, ಸುಮ್ಮನೆ ಒಂದು ಮನೆಯಲ್ಲಿ ಕುಳಿತುಕೊಂಡು ಇರುತ್ತಿದ್ದನು. ಅವನ ನೆತ್ತಿಗೆ ಪಿತ್ತವು ಹತ್ತಿದೆಯೆಂದು ವೈದ್ಯನನ್ನು ಕರೆದರು. ನಾಡೀಗಡಗ್ರಾಮದಿಂದ ರಾಮವೈದ್ಯನು ಬಂದನು. ಅವನನ್ನು ನೋಡಿ, ಕೃಷ್ಣ ಕಿಶೋರನು, 'ಅಯ್ಯಾ, ನೀನು ನನ್ನರೋಗವನ್ನು ವಾಸಿಮಾಡು, ಆದರೆ ನೋಡಿಕೋ, ನನ್ನ ಓಂಕಾರದ ಗೋಜಿಗೆ ಮಾತ್ರ ಬರಬೇಡ', ಎಂದು ಹೇಳಿದನು. (ಎಲ್ಲರೂ ನಗುತ್ತಾರೆ.)

"ನಾನು ಒಂದು ದಿನ ಹೋಗಿ ಅವನನ್ನು ಕಂಡೆನು. ಅವನು ಏನನ್ನೋ ಆಲೋಚಿಸುತ್ತ ಕುಳಿತಿದ್ದನು. 'ನಿನಗೆ ಹೇಗಿದೆ?' ಎಂದು ಕೇಳಿದೆನು. ಅದಕ್ಕೆ ಅವನು, 'ಸರಕಾರದವರು ಕಂದಾಯದ ವಸೂಲಿಗೆ ಬಂದಿದ್ದರು. ಹಣವನ್ನು ಕೊಡದೆ ಇದ್ದರೆ, ಮನೆಯ ಪಾತ್ರೆಪದಾರ್ಥಗಳನ್ನು ಮಾರಿ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದಕ್ಕಾಗಿ ನನಗೆ ತುಂಬ ಆಲೋಚನೆಯಾಗಿದೆ,' ಎಂದನು. ಆ ಮಾತ ಕೇಳಿ ನಾನು, 'ಅಪ್ಪ, ಯೋಚನೆಮಾಡಿದರೆ ಏನಾಗುತ್ತದೆ? ಕಂದಾಯವನ್ನು ಕೊಡದಿದ್ದರೆ, ಪಾತ್ರೆಪದಾರ್ಥಗಳನ್ನು ತಾನೇ ತೆಗೆದುಕೊಂಡು ಹೋಗುತ್ತಾರೆ. ಅವರು ಒಂದು ವೇಳೆ ನಿನ್ನ ಶರೀರವನ್ನು ಕಟ್ಟಿಕೊಂಡು ಹೋದರೂ, ನಿನ್ನನ್ನು ಬೇರೆ ಕೊಂಡು ಹೋಗಲಾರರು. ನೀನು ಆಕಾಶವಲ್ಲವೇ?' ಎಂದೆನು. (ನರೇಂದ್ರಾದಿಗಳು ನಗುತ್ತಾರೆ.) 'ನಾನು ಆಕಾಶ' ಎಂದು ಕೃಷ್ಣಕಿಶೋರನು ಹೇಳುತ್ತಿದ್ದನು. ಅವನು ಅಧ್ಯಾತ್ಮರಾಮಾಯಣವನ್ನು ಓದಿದವನಷ್ಟೆ. 'ನೀನು ಆಕಾಶ, ನಿನ್ನನ್ನು ಕಂದಾಯದವರು ಎತ್ತಿಕೊಂಡು ಹೋಗುವುದಕ್ಕಾಗುವುದಿಲ್ಲ' ಎಂದು ಹೇಳಿ, ನಾನು, ನಗುತ್ತ ಅವನನ್ನು ಆಡಿಗಡಿಗೆ ಹಾಸ್ಯಮಾಡುತ್ತಿದ್ದೆನು.

"ಉನ್ಮಾದಾವಸ್ಥೆಯಲ್ಲಿ ನಾನು ಜನರ ಅಂತರಂಗವನ್ನೆಲ್ಲ ಬಯಲು ಮಾಡುತ್ತಿದ್ದೆನು. ಆರನ್ನೂ ಲೆಕ್ಕಿಸುತ್ತಿರಲಿಲ್ಲ. ದೊಡ್ಡವರನ್ನು ಕಂಡರೂ, ನನಗೆ ಕೊಂಚವಾಗಲಿ ದಿಗಿಲಾಗುತ್ತಿರಲಿಲ್ಲ.

"ಯದುಮಲ್ಲಿಕನ ತೋಟಕ್ಕೆ ಯತೀಂದ್ರನು ಬಂದನು. ಆಗ ನಾನೂ ಅಲ್ಲಿ ಇದ್ದೆನು. ನಾನು ಯತೀಂದ್ರನನ್ನು ನೋಡಿ, 'ಅಯ್ಯಾ, ಕರ್ತವ್ಯವೇನು? ಈಶ್ವರ ಚಿಂತನೆಮಾಡುವುದು ಕರ್ತವ್ಯವಲ್ಲವೇ?' ಎಂದು ಕೇಳಿದನು. 'ನಾವು ಸಂಸಾರಿಗಳು; ನಮಗೆ ಮೋಕ್ಷವೆಲ್ಲಿಯದು? ರಾಜಾಯುಧಿಷ್ಠಿರನು ಕೂಡ ನರಕವನ್ನು ದರ್ಶನಮಾಡಿದನು,' ಎಂಬದಾಗಿ ಅವನು ಹೇಳಿದನು. ಅದನ್ನು ಕೇಳಿ, ನನಗೆ ಬಲು ಸಿಟ್ಟು ಬಂದಿತು. 'ನೀನು ಎಂಥವನಯ್ಯ! ಯುಧಿಷ್ಠಿರನ ನರಕದರ್ಶನವನ್ನು ಮಾತ್ರ ನೆನಪಿನಲ್ಲಿ ಇಟ್ಟುಕೊಂಡಿದ್ದೀಯೆ. ಅವನ ಸತ್ಯವಾಕ್ಯ, ವಿವೇಕ, ವೈರಾಗ್ಯ, ಕ್ಷಮೆ,

ಧೈರ್ಯ, ಈಶ್ವರಭಕ್ತಿ ಮುಂತಾದುವುಗಳು ಅವುವೂ ಜ್ಞಾಪಕವಾಗಲಿಲ್ಲವೇ ?" ಎಂದೆನು. ಸಾಲದುದಕ್ಕೆ ಇನ್ನೂ ಏನನ್ನೋ ಹೇಳ ಹೋದೆನು. ಹೃದಯನು ನನ್ನ ಬಾಯನ್ನು ಮುಚ್ಚಿಬಿಟ್ಟನು. ಕೊಂಚ ಹೊತ್ತಾದ ಬಳಿಕ, 'ನನಗೆ ಕೆಲಸವಿದೆ', ಎಂದು ಹೇಳಿ ಯತೀಂದ್ರನು ಹೊರಟು ಹೋದನು.

"ಬಹುದಿನಗಳಾದ ಮೇಲೆ, ಕ್ಯಾಪ್ಟನ್ನಿನ ಸಂಗಡ ಶೌರೀಂದ್ರಠಾಕೂರನ ಮನೆಗೆ ಹೋಗಿ, ಅವನನ್ನು ಕಂಡು, 'ಅಯ್ಯಾ, ನಾನು ನಿನ್ನನ್ನು 'ರಾಜಾ, ಗೀಜಾ,' ಎಂದು ಕರೆಯುವುದಿಲ್ಲ ; ಅವೆಲ್ಲ ಸುಳ್ಳು ಮಾತು', ಎಂದೆನು. ಅವನು ಸ್ವಲ್ಪಕಾಲ ನನ್ನ ಸಂಗಡ ಮಾತನಾಡುತ್ತಿದ್ದನು. ಅಷ್ಟರಲ್ಲಿ ಅಲ್ಲಿಗೆ ಸಾಹೇಬಗೀಹೇಬರು ಬರುತ್ತಿರುವುದನ್ನು ಕಂಡೆನು. ರಜೋಗುಣದವನು, ನಾನಾ ಕಾರ್ಯಗಳನ್ನು ಹಚ್ಚಿಕೊಂಡಿದ್ದಾನೆ. ಯತೀಂದ್ರನಿಗೆ ಹೇಳಿ ಕಳುಹಿದೆನು. 'ನನಗೆ ಗಂಟಲ ನೋವು ; ಬರುವುವಕ್ಕಾಗುವುದಿಲ್ಲ', ಎಂದು ಅವನು ಹೇಳಿ ಕಳುಹಿಸಿಬಿಟ್ಟನು.

"ನನ್ನ ಈ ಅವಸ್ಥೆಯಲ್ಲಿಯೇ, ಒಂದು ದಿನ ವರಾಹನಗರಕ್ಕೆ ಹೋಗಿದ್ದೆನು. ಅಲ್ಲಿಯ ಘಟ್ಟದಲ್ಲಿ, ಜಯಮುಖರ್ಜಿಯು ಜಪಮಾಡುತ್ತ ಕುಳಿತಿದ್ದನು. ಅವನು ಅನ್ಯಮನಸ್ಕನಾಗಿದ್ದಾನೆಂದು ನನಗೆ ತಿಳಿಯಿತು. ನಾನು ಅವನ ಬಳಿಗೆ ಹೋಗಿ, ಅವನಿಗೆ ಎರಡು ಪೆಟ್ಟುಗಳನ್ನು ಕೊಟ್ಟೆನು.

"ಒಂದು ದಿನ ರಾಣಿರಾಸಮಣಿಯು ಕಾಳಿಕಾದೇವಾಲಯಕ್ಕೆ ಬಂದು, ಪೂಜೆಯ ವೇಳೆಯಲ್ಲಿ ಒಂದೆರಡು ಹಾಡ ಹೇಳಬೇಕೆಂದು ಕೇಳಿದಳು. ನಾನು ಹಾಡಿದೆನು. ಆಗ ಅವಳು ಅನ್ಯಮನಸ್ಕಳಾಗಿ, ಹೂವನ್ನು ವಿಂಗಡಿಸುತ್ತ ಕುಳಿತಿದ್ದಳು. ಅದನ್ನು ನೋಡಿ, ನಾನು ಅವಳಿಗೆ ಎರಡು ಪೆಟ್ಟುಗಳನ್ನು ಕೊಟ್ಟೆನು. ಆಗ ಅವಳು ದಡಬಡನೆ ಕೈಗಳನ್ನು ಜೋಡಿಸಿಕೊಂಡು ಸುಮ್ಮನೆ ಕುಳಿತುಕೊಂಡಳು.

"ನಾನು ಹಲಧಾರಿಯನ್ನು ನೋಡಿ, 'ಅಪ್ಪ, ನನಗೇಕೆ ಈ ಸ್ವಭಾವವು ಹುಟ್ಟಿತು? ಏನ ಮಾಡಲಿ,' ಎಂದೆನು. ಮಾತೆಯನ್ನು ಬೇಡಿಕೊಂಡು, ಬೇಡಿಕೊಂಡು ನನಗೆ ಅದು ಬಿಟ್ಟುಹೋಯಿತು.

(ಮಥುರನ ಸಂಗಡ ೧೮೫೮ನೇ ಇಸವಿಯಲ್ಲಿ ತೀರ್ಥಯಾತ್ರೆ; ಕಾಶಿಯಲ್ಲಿ ವಿಷಯ ವಿಚಾರವನ್ನು ಕೇಳಿ ಭಗವಾನರು ಕ್ರಂದಿಸುವುದು)

"ಈ ಅವಸ್ಥೆಯಲ್ಲಿ ನನಗೆ ಈಶ್ವರವಾರ್ತೆಯಲ್ಲದೆ ಬೇರಾವುದೂ ಬೇಕಾಗಿರಲಿಲ್ಲ. ವಿಷಯದ ಮಾತು ಕಿವಿಗೆ ಬಿದ್ದಾಗ, ಸುಮ್ಮನೆ ಒಂದು ಕಡೆಯಲ್ಲಿ ಅಳುತ್ತ ಕುಳಿತಿರುತ್ತಿದ್ದೆನು. ಮಥುರಬಾಬುವು, ನನ್ನನ್ನು ತನ್ನ ಸಂಗಡ ತೀರ್ಥಯಾತ್ರೆಗೆ ಕರೆದುಕೊಂಡು ಹೋದನು. ನಾವು ಕಾಶಿಯೊಳಗೆ ಕೆಲವು ದಿನ ರಾಜಾಬಾಬುವಿನ ಮನೆಯಲ್ಲಿ ಇದ್ದೆವು. ಮಥುರಬಾಬುವೊಡನೆ ರಾಜಾಬಾಬುವಿನ ಕುಳಿತುಕೊಳ್ಳುವ

ಕೋಣೆಗೆ ಹೋದೆನು. ಅಲ್ಲಿ, ರಾಜಾಬಾಬುವಿನ ಮನೆಯವರೂ ಕುಳಿತಿದ್ದರು. ಅವರೆಲ್ಲರೂ 'ಈ ಕೆಲಸದಲ್ಲಿ ನಮಗೆ ಇಷ್ಟೊಂದು ಹಣವು ನಷ್ಟವಾಯಿತು,' ಎಂಬಿವೇ ಮುಂತಾದ ವಿಷಯಗಳನ್ನು ಮಾತನಾಡುತ್ತಿದ್ದರು. ಅದನ್ನು ಕಂಡು ನಾನು, 'ತಾಯೇ, ನನ್ನನ್ನು ಎಲ್ಲಿಗೆ ಕರೆದುತಂದು ಬಿಟ್ಟಿದ್ದೀಯೆ? ರಾಸಮಣಿಯ ಮಂದಿರದಲ್ಲಿ ನಾನು ನೆಮ್ಮದಿಯಾಗಿದ್ದೆನು. ತೀರ್ಥಯಾತ್ರೆಗಾಗಿ ಇಲ್ಲಿಗೆ ಬಂದರೆ, ಇಲ್ಲಿಯೂ ಹೆಣ್ಣುಹೊನ್ನುಗಳ ಮಾತೇ? ವಿಷಯದ ಮಾತು ದಕ್ಷಿಣೇಶ್ವರದಲ್ಲಿ ಕಿವಿಗೆ ಬೀಳುತ್ತಲೇ ಇರಲಿಲ್ಲ,' ಎಂದುಕೊಂಡು ಅತ್ತೆನು."

ಭಗವಾನರು ಭಕ್ತರಿಗೆ, ವಿಶ್ರಮಿಸಿಕೊಳ್ಳಿರೆಂದು ಹೇಳಿ, ಚಿಕ್ಕ ಮಂಚದ ಮೇಲೆ ತಾವೂ ವಿಶ್ರಮಿಸಿಕೊಳ್ಳುವುದಕ್ಕೆ ಹೋದರು.

ಎರಡನೆಯ ಪರಿಚ್ಛೇದ

(ನರೇಂದ್ರಮುಂತಾದವರ ಸಂಗಡ ಕೀರ್ತನಾನಂದ; ನರೇಂದ್ರನಿಗೆ ಪ್ರೇಮಾಲಿಂಗನದಾನ)

ಬೆಳಗಿನ ಜಾವವಾಯಿತು. ನರೇಂದ್ರನು ಹಾಡುತ್ತಿದ್ದಾನೆ. ರಾಖಾಲ, ಲಾಟೂ ಮಾಸ್ಟರು, ನರೇಂದ್ರನ ಬ್ರಹ್ಮಸಮಾಜದ ಗೆಳೆಯ ಪ್ರಿಯನು, ಹಾಜರಾ ಮುಂತಾದವರೆಲ್ಲರೂ ಇದ್ದಾರೆ.

ನರೇಂದ್ರನು ಕೀರ್ತನೆಯನ್ನು ಹಾಡುತ್ತಿದ್ದಾನೆ. ಡೋಳನ್ನು ಬಜಾಯಿಸುತ್ತಿದ್ದಾರೆ.

('ಎಚ್ಚರಿಕೇ ಭಾಗ್ಯವಾರಿಗೂ ಸ್ಥಿರವಿಲ್ಲ। ನಿಶ್ಚಯವೆಚ್ಚರಿಕೆ' ಎಂಬಂತೆ)

ನೆನೆ ನೆನೆ ಮನವೆ ಚಿದ್ಘನನ ನಿರಂಜನ। ನನು ನವರಾಗರಂಜಿತನ।
ಅನುಪಮತೇಜನ ನಿಂದಿತಕೋಟಿ ಚಂ। ದ್ರನನು ಮೋಹನಮೂರ್ತಿ ಹರಿಯ ॥೧॥

ಭಜಕಮನೋರಂಜಕನನು ನೋಳ್ಪುದೆ। ವಿಜಿತಸೌದಾಮಿನೀಪ್ರಭನ॥
ನಿಜದಿಂದೆ ಪುಳಕಕಂಪನಗಳನೊದವಿಸಿ। ಸುಜನರ ನಲಿದಾಡಿಸುವನ ॥೨॥

ಚೇತಃ ಕಮಲಾಸನದೊಳಗಾತನ। ಪಾಥೋಜಸಮಪದಯುಗವ॥
ಆತು ಶಾಂತಿಯನೊಂದೆ ನಯನದೊಳಾನಂದ। ಜಾತಾಂಬುಗಳನು ಸೂಸಿಸುವ ॥೩॥

ಬೇಗ ಚಿದಾನಂದಸಾಗರದೊಳು ಭಕ್ತಿ। ಯೋಗಾವೇಶದೆ ಬಂದು॥
ನಿಗಳಂ ಮಾಡಿ ಮುಳ್ಕಾಡುವ ಸೈಪನು। ರಾಗದೊಳನುಗೊಳಿಸುವನ ॥೪॥

ನರೇಂದ್ರನು ಮತ್ತೆ ಹಾಡಿದನು.

ಚೌಪದಿ

('ಆಶ್ವಯುಜ ಶುದ್ಧ ಮಾನವಮಿ ಬರಲೆಂದು' ಎಂಬಂತೆ)

ಹೃದಯಮಂದಿರದೊಳಗೆ ನಿಜದೆ ಕಂಗೊಳಿಪ।
ಮಧುರತರ ಶಿವರೂಪನೊಲಿದು ನಿರುಕಿಸುವ॥
ಸದಯ ಮಮನಾಥ ಪೇಳಾದಿನವದೆಂತು।
ಒದವುವುದೊ ಗಡ ದೀನಜನಭಾಗ್ಯದಿಂದ ॥೧॥
ಎನ್ನಹೃದಯುವನರಿವು ಹಲವು ರೂಪಿನೊಳು।
ಮುನ್ನವೇ ಹುಗುತಲಿಹುದದ ಪೇಳಲರಿಯೆ।
ಇನ್ನು ತಳಮಳಗೊಂಡು ನಿನ್ನ ಸಿರಿಯಡಿಗಳನು।
ಸನ್ನುತನೆಯೆನ್ನ ಮನ ಶರಣುಹುಗುತಿಹುದು ॥೨॥
ಹೃದಯದಾಕಾಶದೊಳಗಾನಂದವಿಧುವು।
ಉದಯಿಸಲು ಚಂದ್ರೋದಯದೆ ಚಕೋರಿಗಳು।
ಮುದದೊಳೋಲಾಡುವಂತಾನಂದಕಾಂತಿಯಿಂ।
ಮದವೇರಿ ಕುಣಿದಾಡುವಂದದಿಂದೆಸಗು ॥೩॥
ಮಂಗಳಾತ್ಮಕನದ್ವಿತೀಯನೆಂದೆನಿಪ ಶಿವ।
ಸಂಪ್ರೀತಮಲಂಗಳೊಳಗೆನ್ನ ಮಾರಿದೆನು।
ಸಂಗಳಿಸಿದೀ ಜೀವ ಸಾರ್ಥವಾಯಿತು ನಾಕ।
ಮಂಗಮಿಸೆ ತನುವೊಡನೆ ನಾಂ ಪಾತ್ರವಾದೆ ॥೪॥
ಪಾಪಲೇಪಂಗಳಿಲ್ಲದೆ ಶುದ್ಧವಹ ನಿನ್ನ।
ರೂಪಮಂ ಕಂಡೊಡನೆ ನಿಲ್ಲದಾನು।
ದೀಪದೆಡೆಗೊಮ್ಮೆಯೇ ಕತ್ತಲೆಯು ದೆಸೆಯಿಂದ।
ಲೇ ಪಲಾಯನಗೆಯ್ವವೊಲು ನಿನ್ನ ಪಡೆವೆ॥ ॥೫॥
ತವಕಾಂತಿಯಿಂ ನಾಥ ಪಾಪಮಯತಮವು
ತವೆ ನಿಲ್ಲದಂತೋಡಿಹೋಗುವುದು ಬೇಗ
ಧ್ರುವತಾರೆಯಾಗಿ ಮನದೆಲಿ ನಿಂದು ಸಂಪ್ರೀತಿ।
ಯವಿರತಂ ಜ್ವಲಿಪಂತೆಸಗು ದೀನಬಂಧು ॥೬॥
ಹಗಲಿರುಳುಂ ಪ್ರೇಮದಾನಂದದೊಳಗೆನ್ನ।
ಬಗೆಯೆ ಮುಳುಗಾಡುತಿರಲೆಂಬಾಸೆಯು।
ಜಗದೊಡೆಯ ಪೂರಿಸಾ ಪಡೆದು ನಾಂ ನಿನ್ನನಾ।
ವಗಮೆನ್ನನೇ ಮರೆತು ಪೋಪ ಪುಣ್ಯವನು॥

('ಕೇಳುಕೇಳೆಲೆ ಸಖನೇ ಹೇಳುವ ಮಾತ' ಎಂಬಂತೆ)

ಸುಮ್ಮನೇಕಿಪೆ ಹಾಡೆಲೋ।
ಬೊಮ್ಮನ ನಾಮ॥ ಪಲ್ಲವಿ
ಆನಂದವದನದೆ। ನೀನು ನಾಮಾಮೃತ।
ಪಾನವ ಮಾಡುತೆ। ಯಾನಂದವಡೆಯಲು। ॥೧॥

ದಾನವ ಮಾಡುನೀ। ಪಾನವ ಮಾಡೆಲೆ।
ಮಾನವ ಸಂತತ। ವಾನಂದವಡೆಯಲು ॥೨॥
ಎಡರಡಸಿರಲೆ। ನ್ನೊಡೆಯ ಕೃಪಾಳುವೆ।
ಪಡೆದನೆ ಎನಲವ। ಕಡಿವ ಪಾಪದ ಗಂಟ। ॥೩॥
ವಿಷಯಮರೀಚಿಕೆ। ಮಸಗಲೊಣಗಿದೆದೆ।
ರಸಪಾಂಪವೊಲು ಪ್ರೇಮ।ವಶದಿ ಮಂತ್ರವ ನೆನೆ॥ ॥೪॥
ಬೊಮ್ಮದಾನಂದದ ಹಮ್ಮೊಳಗಾಸೆಯ।
ನೊಮ್ಮೆ ತಾಳುತ ಪ್ರೇಮವ। ಬ್ಮಿಗೆ ಮಾಡಲು। ॥೫॥

ಮೃದಂಗಕರತಾಲಗಳೊಡನೆ ಕೀರ್ತನೆಯಾಗುತ್ತಿದೆ. ನರೇಂದ್ರ ಮುಂತಾದ ಭಕ್ತರು,ಭಗವಾನರನ್ನು ಸುತ್ತುಗಟ್ಟಿಕೊಂಡು, ಹಾಡುತ್ತಿದ್ದಾರೆ. ಅವರು ಒಂದುಸಲ,

ಬೇಗ ಚಿದಾನಂದಸಾಗರದೊಳು ಭಕ್ತಿ। ಯೋಗಾವೇಶದೆ ಬಂದು॥
ಏಗಳುಂ ಮೂಡಿ ಮುಳ್ಕಾಡುವ ಸ್ವೈಪನು। ರಾಗದೊಳನುಗೊಳಿಸುವನ॥

ಎಂದೂ, ಮತ್ತೊಂದು ಸಲ,

ಹೃದಯಮಂದಿರದೊಳಗೆ ನಿಜದೆ ಕಂಗೊಳಿಪ।
ಮಧುರತರಶಿವರೂಪನೊಲಿದು ನಿರುಕಿಸುವ॥

ಎಂದೂ,

ಹಾಡುತ್ತಾರೆ. ಕಡೆಯಲ್ಲಿ ನರೇಂದ್ರನು ಮೃದಂಗವನ್ನು ತೆಗೆದುಕೊಂಡು, ಮತ್ತನಾಗಿ, ಭಗವಾನರ ಜತೆಯಲ್ಲಿ,

ಸುಮ್ಮನೇಕಿಹೆ ಹಾಡೆಲೋ।
ಬೊಮ್ಮನ ನಾಮ॥

ಎಂದು ಹಾಡುತ್ತಿದ್ದಾನೆ.

ಕೀರ್ತನೆಯನ್ನು ಹಾಡಿ ಮುಗಿಸಿದ ಬಳಿಕ, ಭಗವಾನರು ನರೇಂದ್ರನನ್ನು ಬಹುವಾಗಿ ಬಾಚಿ ತಬ್ಬಿಕೊಂಡು, 'ಈ ದಿನ ನೀನು ನನಗೆ ತುಂಬ ಆನಂದವುಂಟುಮಾಡಿದೆ', ಎಂದು ಹೇಳಿದರು.

ಈ ದಿನ ಭಗವಾನರ ಮನಸ್ಸಿನಲ್ಲಿ ಸಂತೋಷವು ಉಕ್ಕುತ್ತಿದೆ. ರಾತ್ರಿ ಸುಮಾರು ಎಂಟು ಗಂಟೆಯಾಗಿರಬಹುದು. ಆಗಲೂ, ಪ್ರೇಮೋನ್ಮಾದದಿಂದ ಒಬ್ಬರೇ ವಾರಾಂಡದಲ್ಲಿ ತಿರುಗಾಡುತ್ತಿದ್ದಾರೆ. ಉತ್ತರದಿಕ್ಕಿನ ಉದ್ದವಾದ ವಾರಾಂಡಕ್ಕೆ ಬಂದು, ಒಂದು ಕಡೆಯಿಂದ ಇನ್ನೊಂದು ಕಡೆಗೆ ಬೇಗಬೇಗನೆ ಶತಪಥಮಾಡುತ್ತಿದ್ದಾರೆ. ಆಡಿಗಡಿಗೆ ತಾಯ ಹತ್ತಿರ ಆವುದೋ ಮಾತಾಡುತ್ತಿದ್ದಾರೆ. ಇದ್ದಕ್ಕಿದ್ದಂತೆ ಅವರು ಉನ್ಮತ್ತರಂತೆ, 'ನೀನು ನನಗೇನ ಮಾಡಬಲ್ಲೆ ?' ಎಂದು ಹೇಳುತ್ತ ಎದ್ದಿಂದರು. ಮಾತೆಯು ಸಾಹಾಯ್ಯಮಾಡಿದರೆ, ಅವಳ ಮಾಯೆಯು ನಮ್ಮನ್ನೇನ ಮಾಡಬಲ್ಲುದು ? ಈ ಮಾತನ್ನು ಅವರು ಆಡುತ್ತಿದ್ದಾರೆಯೋ ?

ನರೇಂದ್ರನೂ ಮಾಸ್ಟರೂ ಪ್ರಿಯನೂ ರಾತ್ರಿಯಲ್ಲಿ ಅಲ್ಲಿಯೇ ನಿಲ್ಲುತ್ತಾರೆ. ಆದುದರಿಂದ ಭಗವಾನರ ಆನಂದಕ್ಕೆ ಪಾರವೇ ಇಲ್ಲ. ರಾತ್ರಿಯೂಟವಾಗಬೇಕು. ಆಗ, ಶ್ರೀಮಾತೆಯವರು ವಾದ್ಯಮಂದಿರದಲ್ಲಿ ಇದ್ದರು. ಅವರು ರೊಟ್ಟಿ, ತೊವ್ವೆ ಮುಂತಾದುವನ್ನು ಸಿದ್ಧಪಡಿಸಿ, ಭಕ್ತರು ಭೋಜನಮಾಡಲಿ, ಎಂದು ಕೊಟ್ಟು ಕಳುಹಿಸಿದರು. ಭಕ್ತರು ಆಗಾಗ ಅಲ್ಲಿ ನಿಲ್ಲುತ್ತಿದ್ದರು. ಸುರೇಂದ್ರನು ತಿಂಗಳು ತಿಂಗಳಿಗೂ ಸ್ವಲ್ಪ ವೆಚ್ಚವನ್ನು ಕೊಡುತ್ತಿದ್ದನು.

ಭಕ್ತರಿಗೆ ಮನೆಯ ಆಗ್ನೇಯದ ವಾರಂಡದಲ್ಲಿ, ಕುಳಿತುಕೊಳ್ಳುವುದಕ್ಕೆ ಸ್ಥಳ ಮಾಡಿ ಈಗ ಬಡಿಸುತ್ತಿದ್ದಾರೆ.

(ನರೇಂದ್ರಾದಿಗಳು ಲೋಕವಾರ್ತೆಯನ್ನು ಆಡದಿರಬೇಕೆಂಬ ನಿಷೇಧ)

ಮನೆಯ ಮೂಡಗಡೆಯ ಬಾಗಿಲ ಬಳಿಯಲ್ಲಿ, ನರೇಂದ್ರ ಮುಂತಾದವರು ಮಾತನಾಡುತ್ತಿದ್ದಾರೆ.

ನರೇಂದ್ರ :—ಈಗಣ ಕಾಲದ ಹುಡುಗರು ಹೇಗಿದ್ದಾರೆ? ನೋಡಿದ್ದೀರಾ?

ಮಾಸ್ಟರ್ :—ಅವರೇನೂ ದಡ್ಡರಲ್ಲ, ಆದರೆ ಆರೂ ಅವರಿಗೆ ಧರ್ಮೋಪದೇಶಮಾಡುವವರಿಲ್ಲ.

ನರೇಂದ್ರ :—ನಾನು ಬಲ್ಲೆ, ಅವರೆಲ್ಲ ಅಧಃಪತನವಾಗುತ್ತಿದ್ದಾರೆ. ಬೀಡಿಯನ್ನು ಸೇದುತ್ತ, ಹಿರಿಯರೆಂದರೆ ಸಡ್ಡೆಮಾಡದೆ, ಸೊಕಾಗಿ ಬಟ್ಟೆಗಳನ್ನು ಉಟ್ಟುಕೊಂಡು, ಪಾಠಶಾಲೆಗೆ ಹೋಗದೆ, ಅಲ್ಲಿ ಇಲ್ಲಿ ಪೋಲಿಯಾಗಿ ತಿರುಗುತ್ತಾರೆ.

ಮಾಸ್ಟರ್ :—ನಾನು ಓದುತ್ತಿದ್ದಾಗ, ಈ ರೀತಿ ಹುಡುಗರಿದ್ದುದನ್ನು ಕಂಡುದೂ ಇಲ್ಲ, ಕೇಳಿದುದೂ ಇಲ್ಲ.

ನರೇಂದ್ರ :—ತಾವು ಅಂಥವರೊಡನೆ ಸೇರುತ್ತಿರಲಿಲ್ಲವೆಂದು ಕಾಣುತ್ತದೆ. ಪುಂಡರು, ಹುಡುಗರ ಹೆಸರನ್ನು ಹಿಡಿದು ಕೂಗುವುದನ್ನು ಕೂಡ, ಕಂಡಿದ್ದೇನೆ. ಅವರ ಸಂಗಡ ಹುಡುಗರು ಆವಾಗ ಮಾತನಾಡಿದ್ದರೋ, ಆರಿಗೆ ಗೊತ್ತು?

ಮಾಸ್ಟರ್ :—ಇದೇನಾಶ್ಚರ್ಯವಪ್ಪ!

ನರೇಂದ್ರ.—ನಾನು ನೋಡಿದ್ದೇನೆ. ಬಹುಮಂದಿ ಹುಡುಗರ ನಡತೆಯು ಕೆಟ್ಟು ಹೋಗಿದೆ. ಅವರನ್ನು ಮನೆಯವರೂ, ಪಾಠಶಾಲೆಯವರೂ, ಚೆನ್ನಾಗಿ ನೋಡಿಕೊಳ್ಳಬೇಕು.

(‘ಆತ್ಮಾನಂ ವಾ ವಿಜಾನೀಥ ಅನ್ಯಾಂ ವಾಚಂ ವಿಮುಂಚಥ’)

ಈ ರೀತಿಯಾಗಿ ಮಾತು ನಡೆಯುತ್ತಿದ್ದಿತು. ಶ್ರೀರಾಮಕೃಷ್ಣರವರು ಒಳಗಣಿಂದ ಅವರ ಬಳಿಗೆ ಬಂದು, ನಸುನಗುತ್ತ, ‘ನೀವೆಲ್ಲ ಆವ ಮಾತನಾಡುತ್ತಿದ್ದೀರಿ?’ ಎಂದು ಕೇಳಿದರು. ‘ಪಾಠಶಾಲೆಯ ಮಾತು ಬಂದು, ಈಗಣ ಹುಡುಗರ ನಡತೆಯು ಚೆನ್ನಾಗಿಲ್ಲ, ಎಂಬದಾಗಿ ಎಲ್ಲರೂ ಮಾತಾಡುತ್ತಿದ್ದೆವು,’ ಎಂದು ನರೇಂದ್ರನು ಉತ್ತರವನ್ನು ಹೇಳಿದನು. ಭಗವಾನರವರು ಕೊಂಚ ಹೊತ್ತಿನ ವರೆಗೂ ಆ ಮಾತುಗಳನ್ನು ಕೇಳಿ, ಗಂಭೀರಭಾವದಿಂದ ಮಾಸ್ಟರನ್ನು ನೋಡುತ್ತ, ‘ಅಯ್ಯೋ, ಈ ಮಾತುಗಳೊಂದೂ ಚೆನ್ನಾಗಿಲ್ಲ, ಈಶ್ವರನ ಮಾತನ್ನು ಬಿಟ್ಟರೆ ಮಿಕ್ಕ ಆವ ಮಾತೂ ಒಳ್ಳೆಯದಲ್ಲ. ಇವರೆಲ್ಲರಿಗಿಂತಲೂ ನೀನು ದೊಡ್ಡವನು, ನಿನಗೆ ಬುದ್ಧಿ ಬಂದಿದೆ. ಈ ಮಾತನ್ನು ಇವರಿಗೆ ನೀನು ಎತ್ತಿಕೊಡಬಾರದಾಗಿದ್ದಿತು,’ ಎಂದರು. (ನರೇಂದ್ರನಿಗೆ ಆಗ ೧೯-೨೦ ವಯಸ್ಸು, ಮಾಸ್ಟರಿಗೆ ೨೭-೨೮ ವಯಸ್ಸು.)

ಮಾಸ್ಟರಿಗೆ ಅವಮಾನವಾಯಿತು. ನರೇಂದ್ರಾದಿಭಕ್ತರೂ ಬಾಯ ಮುಚ್ಚಿಕೊಂಡರು.

ಭಗವಾನರು ನಿಂತುಕೊಂಡು, ಮಂದಹಾಸದೊಡನೆ, ನರೇಂದ್ರಾದಿಭಕ್ತರಿಗೆಲ್ಲ ಊಟಮಾಡಿಸುತ್ತಿದ್ದಾರೆ. ಈ ದಿವಸ ಅವರಿಗೆ ಅತ್ಯಾನಂದ.

ಊಟವಾದ ಮೇಲೆ, ನರೇಂದ್ರಾದಿಭಕ್ತರು ಭಗವಾನರ ಕೋಣೆಗೆ ಬಂದು, ನೆಲದ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತ, ಭಗವಾನರ ಸಂಗಡ ಮಾತನಾಡುತ್ತಿದ್ದಾರೆ. ಆನಂದದ ಸಂತೆಯು ನೆರೆದಿದೆ. ಮಾತನಾಡುತ್ತಿರುವಾಗ, ಭಗವಾನರು ನರೇಂದ್ರನನ್ನು ನೋಡಿ, “ಅಪ್ಪಾ, ನೀನು, ‘ಪ್ರೇಮಪೂರ್ಣಚಂದ್ರಮನುದಯವು ಚಿ। ದ್ವ್ಯೋಮದೆ ತಾನಾಗೆ’, ಎಂಬ ಹಾಡನ್ನು ಒಂದು ಸಲ ಹಾಡು,” ಎಂದು ಹೇಳಿದರು.

ನರೇಂದ್ರನು ಹಾಡತೊಡಗಿದನು. ಇತರರು ಮೃದಂಗವನ್ನು ಬಾಜಿಸುತ್ತಲೂ, ಕಯ್ಯಿಂದ ತಾಳ ಹಾಕುತ್ತಲೂ ಇದ್ದರು.

ಹಾಡು

(‘ಕರುಣಾಕರ ನೀನೆಂಬುವುದೇತಕೋ ಭರವಸೆಯಿಲ್ಲೆನಗೆ’ ಎಂಬಂತೆ)

ಪ್ರೇಮಪೂರ್ಣಚಂ। ದ್ರಮನುದಯವುಚಿ। ದ್ವ್ಯೋಮದಿ ತಾನಾಗೆ।
ಪ್ರೇಮಸಿಂಧು ಕರೆ। ಮೀರಿ ಹರಿಯುವುದು । ಪ್ರೇಮಮಯಿಯು ಮಾತೆ ॥೧॥

(ಜಯ ಕರುಣಾಮಯಿ ಜಯ ಕರುಣಾಮಯಿ ಜಯ ಕರುಣಾಮಯಿಯೇ)

ನಾಲುಕು ದೆಸೆಯೊಳು। ಭಕ್ತಗ್ರಹದಳ। ಕಾಲೋಕವನೀವೆ।
ಲೀಲಾರಸಮಯಿ। ಭಕ್ತಬಂಧು। ಭಕ್ತಾಳಿಯ ಸಂಗದಲಿ ॥೨॥

(ಜಯ ಕರುಣಾಮಯಿ ಜಯ ಕರುಣಾಮಯಿ ಜಯ ಕರುಣಾಮಯಿಯೇ।
ತೆರೆವುವು ಸಗ್ಗದ। ಬಾಗಿಲು ಸಂತಸ। ತೆರೆಗಳೇಳುತಿಹವು।
ವರಸುವಿಧಾನವ। ಸಂತವಮಾರುತನು। ಹರಿವುದು ಮೃದುವಾಗಿ ೩

ತಳೆದು। ಪ್ರೇಮದಾ ಗಂಧವನದನೇ। ಮುನಿಗಳು ವಾಸನಿಸಿ।
ನಲಿದು ನಲಿದು ಯೋ। ಗೋನ್ಮಾದವನೇ। ನೆಲದೆ ಪಡೆಯುತಿಹರು ೪

(ಜಯ ಕರುಣಾಮಯಿ ಜಯ ಕರುಣಾಮಯಿ ಜಯ ಕರುಣಾಮಯಿಯೇ।)
ಭವಸಾಗರ ವಾ। ರಿ ವಿಧಾನಕಮಲ। ನಿವಸಿತೆ ಪ್ರೇಮಮಯಿ।
ವಿವಿಧಭಜಕಭೃಂ ಗವೆಯಲ್ಲಿ ಪರಾ ಗವನುಣುತಿರುತಿಹುದು ೫

ಚೇತೋನ್ಮಾದಕ ಭೂತಲಮೋಹಕ ಮಾತೆಯ ಬೆಳುನಗೆಯು।
ಏತೆರದಿಂದುದ್ರೇಕದೆ ನಿರುಕಿಸಿ ಯಾತುರವನೆ ತಳೆದು ೬

ಪದಕಮಲದ ದಳ ದಳದೊಳು ಸಾಧುಗಳುದಿತಮೋದದಿಂದ।
ಆದರೊಳು ತನ್ಮಯ ಹೃದಯಪನಿರಿಸಿ ಕುಣಿದು ಪಾಡುತಲಿಹರು ೭

ಶ್ರೀಮಾತೆಯ ಪದ ತಾಮರಸದೊಳಭಿ। ಮಾನವನುರೆ ತೊರೆದು।
ಶ್ರೀಮಾತೆಗೆ ಜಯವೆಂದು ಕೂಗುವೆನು ಪ್ರೇಮದಾಸನೊಡನೆ ೮

ಕೀರ್ತನೆಯನ್ನು ತಾವೂ ಹಾಡುತ್ತ, ಶ್ರೀರಾಮಕೃಷ್ಣರು ನರ್ತನಮಾಡುತ್ತಿದ್ದರು. ಅವರನ್ನು ಸುತ್ತುಗಟ್ಟಿಕೊಂಡು ಭಕ್ತರೂ ಕುಣಿಯುತ್ತಿದ್ದರು.

ಹಾಡು ಮುಕ್ತಾಯವಾದ ಬಳಿಕ, ಭಗವಾನರು ಈಶಾನ್ಯದ ವರಾಂಡದಲ್ಲಿ ಶತಪಥಮಾಡುತ್ತಿದ್ದರು. ಅದರ ಉತ್ತರಪಾರ್ಶ್ವದಲ್ಲಿ ಹಾಜರನು ಕುಳಿತಿದ್ದನು. ಮಾಸ್ಟರೂ ಅಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದನು. ಪರಮಹಂಸರು ಅವರ ಹತ್ತಿರಕ್ಕೆ ಹೋಗಿ ಕುಳಿತುಕೊಂಡು ಮಾತನಾಡುತ್ತ, ಒಬ್ಬ ಭಕ್ತನನ್ನು ನೋಡಿ, 'ನೀನೇನಾದರೂ ಕನಸಗಿನಸನ್ನು ಕಾಣುತ್ತೀಯಾ?' ಎಂದು ಕೇಳಿದರು.

ಭಕ್ತ:—ಸ್ವಾಮೀ, ನಿಜ, ನನಗೊಂದು ಆಶ್ಚರ್ಯಕರವಾದ ಸ್ವಪ್ನವಾಯಿತು. ಈ ಲೋಕವೆಲ್ಲವೂ ಜಲಮಯ, ಎಲ್ಲಿ ನೋಡಿದರೂ ಅಪಾರವಾದ ಜಲರಾಶಿ. ಎಲ್ಲಿಯೋ ಒಂದು ಕಡೆಯಲ್ಲಿ ಒಂದು ಹಡಗು ತೇಲಿಕೊಂಡು ಬರುತ್ತಿದ್ದು, ಫಕ್ಕನೆ ಬಂದು ಸುಳಿಗೆ ಸಿಕ್ಕಿಕೊಂಡು ಮುಳುಗಿ ಹೋಯಿತು. ನಾನೂ,ಇನ್ನು ಕೆಲವರೂ ಬೇರೊಂದು ಹಡಗಿನಲ್ಲಿ ಇದ್ದೆವು.ಆ ಆಕುಲವಾದ ಸಮುದ್ರದ ಜಲದ ಮೇಲೆ, ಒಬ್ಬ ಬ್ರಾಹ್ಮಣನು ನಡೆದುಕೊಂಡು ಹೋಗುತ್ತಿದ್ದನು. 'ತಾವು ಹೇಗೆ ನೀರಿನ ಮೇಲೆ ನಡೆದುಕೊಂಡು ಹೋಗುತ್ತೀರಿ?' ಎಂದು ನಾನು ಆತನನ್ನು ಕೇಳಿದೆನು. ಆ ಮಾತನ್ನು ಕೇಳಿ, ಬ್ರಾಹ್ಮಣನು ಕೊಂಚ ನಕ್ಕು, 'ಇದೇನೂ ಕಷ್ಟವಿಲ್ಲ; ನೀರಿನ ಕೆಳಗೆ ಬಂದು ಸೇತುವಿದೆ,' ಎಂದು ಹೇಳಿದನು. 'ಸ್ವಾಮೀ, ತಾವು ಎಲ್ಲಿಗೆ ಪಯಣಮಾಡುತ್ತೀರಿ'

ಎಂಬದಾಗಿ ಮತ್ತೆ ನಾನು ಅವನನ್ನು ಕೇಳಿದೆನು. 'ಭವಾನೀಪುರಕ್ಕೆ', ಎಂದು ಅವನು ಉತ್ತರವನ್ನು ಕೊಟ್ಟನು. ಆ ಮಾತನ್ನು ಕೇಳಿ ನಾನು, 'ಸ್ವಾಮೀ, ತಾವು ದಯೆಯಿಟ್ಟು ಕೊಂಚ ನಿಂತುಕೊಳ್ಳಬೇಕು. ನಾನೂ ತಮ್ಮಸಂಗಡ ಬರುತ್ತೇನೆ', ಎಂದು ಹೇಳಿದೆನು.

ಶ್ರೀರಾಮಕೃಷ್ಣ :—ಇದನ್ನು ಕೇಳಿ ನನಗೆ ರೋಮಾಂಚವಾಗುತ್ತದೆ.

ಭಕ್ತ :—'ನನಗೆ ತುಂಬ ಆತುರದ ಕೆಲಸವಿದೆ. ನೀನು ಇಳಿಯುವುದು ತಡ ವಾಗುತ್ತದೆ. ಇಗೋ, ಈ ಹಾದಿಯನ್ನು ನೋಡಿಕೋ, ನೀನು ಆ ಮೇಲೆ ಬಾ,' ಎಂಬದಾಗಿ ಆ ಬ್ರಾಹ್ಮಣನು ಹೇಳಿದನು.

ಶ್ರೀರಾಮಕೃಷ್ಣ :—ನನಗೆ ರೋಮಾಂಚವಾಗುತ್ತದೆ. ನೀನು ಸಂಸಾರ ಸಾಗರವನ್ನು ದಾಟುವುದಕ್ಕಾಗಿ ಬೇಗ ಮಂತ್ರೋಪದೇಶವನ್ನು ಪಡೆದುಕೋ.

ರಾತ್ರಿ ಹನ್ನೊಂದು ಗಂಟೆಯಾಗಿದೆ. ನರೇಂದ್ರನೇ ಮೊದಲಾದ ಭಕ್ತರು, ಭಗವಾನರ ಮನೆಯಲ್ಲಿ ನೆಲದ ಮೇಲೆ, ಹಾಸಿಗೆಯನ್ನು ಹಾಕಿಕೊಂಡು ಮಲಗಿದರು.

ನಿದ್ದೆ ತಿಳಿದ ಮೇಲೆ, ಭಕ್ತರು ಕಣ್ಣು ಬಿಟ್ಟು ನೋಡಿದರು. ಬೆಳಗಾಗಿದ್ದಿತು. ಶ್ರೀರಾಮಕೃಷ್ಣರು, ಮಕ್ಕಳಂತೆ ದಿಗಂಬರರಾಗಿ, ಭಗವನ್ನಾಮವನ್ನು ಉಚ್ಚರಿಸುತ್ತ ಮನೆಯಲ್ಲಿ ಸುತ್ತುತ್ತಿದ್ದಾರೆ. ಅವರು ಒಂದು ತಡವೆ ಗಂಗೆಯನ್ನು ದರ್ಶನಮಾಡುತ್ತ, ಒಂದು ತಡವೆ ದೇವರ ಪಟಗಳ ಬಳಿಗೆ ಬಂದು ಪ್ರಣಾಮ ಮಾಡುತ್ತ, ಇನ್ನೊಂದು ತಡವೆ ಮಧುರಸ್ವರದಲ್ಲಿ ನಾಮಕೀರ್ತನೆಯನ್ನು ಮಾಡುತ್ತ, ವೇದ, ಪುರಾಣ, ತಂತ್ರ, ಮೂರೂ ಒಂದೇ; ಗೀತಾ, ಗಾಯತ್ರೀ, ಎರಡೂ ಒಂದೇ; ಭಾಗವತ, ಭಕ್ತ, ಭಗವಾನ್, ಮೂರೂ ಒಂದೇ, ಎಂದು ಹೇಳುತ್ತಿದ್ದರು. ಗೀತೆಯನ್ನು ಉದ್ದೇಶಮಾಡಿಕೊಂಡು ಅವರು, 'ತ್ಯಾಗೀ, ತ್ಯಾಗೀ, ತ್ಯಾಗೀ, ತ್ಯಾಗೀ,' ಎನ್ನುತ್ತ, ಇದೇ ಗೀತೆಯ ತಾತ್ಪರ್ಯವೆಂದು ಧ್ಯಾನಮಾಡುತ್ತಿದ್ದರು. ಕೆಲವು ವೇಳೆ, 'ನೀನೇ ಬ್ರಹ್ಮಾ, ನೀನೇ ಶಕ್ತಿ, ನೀನೇ ಪುರುಷ, ನೀನೇ ಪ್ರಕೃತಿ, ನೀನೇ ವಿರಾಟ್, ನೀನೇ ಸ್ವರಾಟ್, ನೀನೇ ನಿತ್ಯ, ನೀನೇ ಲೀಲಾಮಯಿ, ನೀನೇ ಚತುರ್ವಿಂಶತಿ ತತ್ತ್ವ,' ಎಂಬದಾಗಿಯೂ ಅವರು ಎನ್ನುತ್ತಿದ್ದರು.

ಇತ್ತ ಶ್ರೀಕಾಲಿಕಾದೇವಾಲಯದಲ್ಲಿಯೂ, ಶ್ರೀರಾಧಾಕಾಂತಮಂದಿರದಲ್ಲಿಯೂ, ಮಂಗಳಾರತಿಯಾಗುತ್ತಿದೆ. ಘಂಟಾಶಂಖಗಳ ದನಿಯಾಗುತ್ತಿದೆ. ಭಕ್ತರು ಎದ್ದು, ಭಗವತಿಯ ಪುಷ್ಪೋದ್ಯಾನದಲ್ಲಿ ದೇವತಾರ್ಚನೆಗೋಸ್ಕರ ಹೂಗಳನ್ನು ಕುಯ್ಯುತ್ತಿರುವುದನ್ನು ಕಂಡು, ವಾದ್ಯಶಾಲೆಯಲ್ಲಿ ಉದಯರಾಗವನ್ನೆತ್ತಿ ವಾದ್ಯವನ್ನು ಬಾಜಿಸುತ್ತಿರುವುದನ್ನೂ ಕೇಳಿದರು.

ನರೇಂದ್ರಾದಿ ಭಕ್ತರು, ಪ್ರಾತರ್ವಿಧಿಯನ್ನು ತೀರಿಸಿಕೊಂಡು, ಭಗವಾನರ ಬಳಿಗೆ ಬಂದು ಸೇರಿದರು. ಪರಮಹಂಸರು ಈಶಾನ್ಯದಿಕ್ಕಿನ ವರಾಂಡದ ಪಶ್ಚಿಮದಲ್ಲಿ ನಗೆಮೊಗದೊಡನೆ ನಿಂತುಕೊಂಡಿದ್ದಾರೆ.

ನರೇಂದ್ರ :—ಕೆಲವರು ನಾನಕಪಂಥಿಯ ಸಾಧುಗಳು ಪಂಚವಟಿಗೆ ಬಂದಿದ್ದಾರೆ, ನೋಡಿದೆನು.

ಶ್ರೀರಾಮಕೃಷ್ಣ :—ಅಹುದು. ಅವರು ನಿನ್ನೆ ಬಂದರು. (ನರೇಂದ್ರನನ್ನು ನೋಡಿ) ನೀವೆಲ್ಲರೂ ಒಟ್ಟಿಗೆ ಚಾಪೆಯ ಮೇಲೆ ಕುಳಿತುಕೊಳ್ಳಿರಿ, ನೋಡುತ್ತೇನೆ.

ಭಕ್ತರೆಲ್ಲರೂ ಚಾಪೆಯ ಮೇಲೆ ಕುಳಿತುಕೊಂಡರು. ಭಗವಾನರು ಅವರನ್ನು ಆನಂದದಿಂದ ನೋಡುತ್ತ, ಅವರೊಡನೆ ಮಾತಾಡುತ್ತ ಇದ್ದರು. ನರೇಂದ್ರನು ಸಾಧನೆಯ ಮಾತನ್ನೆತ್ತಿದನು.

(ಹೆಂಗುಸರೊಂದಿಗೆ ಸಾಧನೆಮಾಡಬಾರದೆಂದು ನಿಷೇಧಿಸುವುದು. ಸಂತಾನಭಾವವು ಬಹುಶುದ್ಧ.)

ಶ್ರೀರಾಮಕೃಷ್ಣ:—(ನರೇಂದ್ರಾದಿಗಳೊಡನೆ) ಭಕ್ತಿಯೀಗ ಸಾರವಾದುದು, ಭಗವಂತನನ್ನು ಪ್ರೀತಿಸಿದರೆ, ವಿವೇಕವೂ ವೈರಾಗ್ಯವೂ ತಾವೇ ಉಂಟಾಗುತ್ತವೆ.

ನರೇಂದ್ರ :—ಅಪ್ಪಣೆ, ಹೆಂಗುಸರೊಂದಿಗೆ ಸಾಧನೆಮಾಡುವ ವಿಧಾನವು ತಂತ್ರದಲ್ಲಿ ಇದೆಯೇ?

ಶ್ರೀರಾಮಕೃಷ್ಣ :—ಅವೆಲ್ಲವೂ ಸರಿಯಾದ ದಾರಿಯಲ್ಲ. ಬಹು ಕಠಿಣ. ಅವುಗಳಿಂದ ಪ್ರಾಯಃ ಪತನವಾಗುತ್ತದೆ. ವೀರಭಾವ, ದಾಸೀಭಾವ, ಮಾತೃಭಾವಗಳಿಂದ ಸಾಧನೆಯನ್ನು ಮಾಡಬಹುದು. ನನ್ನದು ಮಾತೃಭಾವ. ದಾಸೀಭಾವವೂ ಒಳ್ಳೆಯದು. ವೀರಭಾವದಿಂದ ಸಾಧನೆಮಾಡುವುದು ತುಂಬ ಕಷ್ಟ. ಸಂತಾನಭಾವವು ಅತಿಶುದ್ಧವಾದ ಭಾವ.

ನಾನಕಪಂಥೀ ಸಾಧುಗಳು ಭಗವಾನರಿಗೆ, 'ಓಂ ನಮೋ ನಾರಾಯಣಾಯ,' ಎಂದು ಅಭಿವಾದನವನ್ನು ಮಾಡಿದರು. ಅವರಿಗೆ 'ಕುಳಿತುಕೊಳ್ಳಿರಿ,' ಎಂದು ಭಗವಾನರು ಹೇಳಿದರು.

(ಈಶ್ವರನಿಗೆ ಎಲ್ಲವೂ ಸಾಧ್ಯ, ಪವಾಡಗಳು)

ಶ್ರೀರಾಮಕೃಷ್ಣ :—ಈಶ್ವರನಿಗೆ ಅಸಾಧ್ಯವಾದುದೊಂದೂ ಇಲ್ಲ. ಅವನ ಸ್ವರೂಪವನ್ನು ಆರೂ ವರ್ಣಿಸಲಾರರು. ಅವನಿಗೆ ಎಲ್ಲವೂ ಸಾಧ್ಯ. ಇಬ್ಬರು

ಯೋಗಿಗಳು ಈಶ್ವರಸಾಧನೆಯನ್ನು ಮಾಡುತ್ತ ಇದ್ದರು. ನಾರದಮುನಿಯು ಆ ಹಾದಿಯಲ್ಲಿ ಹೋದನು. ಒಬ್ಬನು ಅವನ ಪರಿಚಯವನ್ನು ಮಾಡಿಕೊಂಡು, 'ಸ್ವಾಮೀ, ತಾವು ನಾರಾಯಣನ ಸನ್ನಿಧಿಯಿಂದ ಬರುತ್ತಿದ್ದೀರಲ್ಲವೇ? ಅವನು ಏನ ಮಾಡುತ್ತಿದ್ದಾನೆ?' ಎಂದು ಕೇಳಿದನು. ಅದಕ್ಕೆ ನಾರದನು, 'ಅಯ್ಯಾ, ನಾನು ಅಲ್ಲಿಂದಲೇ ಬಂದೆನು. ನಾರಾಯಣನು ಸೂಜಿಯ ಕಣ್ಣಿನೊಳಗೆ, ಈ ಕಡೆಯಿಂದ ಒಂದು ಒಂಟೆಯನ್ನೂ ಒಂದು ಆನೆಯನ್ನೂ ಹುಗಿಸಿ, ಆ ಕಡೆಯಿಂದ ಅವನ್ನು ಈಚೆಗೆ ತೆಗೆಯುತ್ತಿದ್ದನು,' ಎಂದು ಹೇಳಿದನು. ಅದನ್ನು ಕೇಳಿ ಒಬ್ಬನು, 'ಇದೇನು ಆಶ್ಚರ್ಯ, ಅವನಿಗೆ ಎಲ್ಲವೂ ಸಾಧ್ಯ,' ಎಂದನು. ಮತ್ತೊಬ್ಬನು. 'ಆಹಾ! ಅದನ್ನು ಹೇಗೆ ಮಾಡುವುದಕ್ಕಾದೀತು? ನೀನು ಆವಾಗಲೂ ಅಲ್ಲಿಗೆ ಹೋದವನೇ ಅಲ್ಲ', ಎಂದು ಹೇಳಿಬಿಟ್ಟನು.

ಸುಮಾರು ಒಂಬತ್ತು ಗಂಟೆಯಾಗಿದೆ. ಭಗವಾನರು ತಮ್ಮ ಮನೆಯಲ್ಲಿ ಕುಳಿತುಕೊಂಡಿದ್ದಾರೆ. ಮನೋಮೋಹನನು ಹೆಂಡಿರು ಮಕ್ಕಳೊಡನೆ ಕೊನ್ನಗರ ದಿಂದ ಬಂದಿದ್ದಾನೆ. ಅವನು ಪರಮಹಂಸರಿಗೆ ಪ್ರಣಾಮವನ್ನು ಮಾಡಿ, 'ಇವ ರನ್ನು ಕಲಿಕತೆಗೆ ಕರೆದುಕೊಂಡು ಹೋಗುತ್ತೇನೆ', ಎಂದನು. ಭಗವಾನರು ಕುಶಲಪ್ರಶ್ನೆಮಾಡಿ, ಇದು ತಿಂಗಳ ಮೊದಲನೆಯ ದಿನ, ಪ್ರಶಸ್ತವಾದುದಲ್ಲ; ಕಲಿಕತೆಗೆ ಕರೆದುಕೊಂಡು ಹೋಗುತ್ತೀಯೆ. ಏನಾಗುತ್ತದೆಯೋ, ಆರು ಬಲ್ಲರು?', ಎಂದು ಹೇಳಿ, ಮಂದಹಾಸದೊಡನೆ ಬೇರೆ ಮಾತನಾಡತೊಡಗಿದರು.

ನರೇಂದ್ರನೂ ಅವನ ಸ್ನೇಹಿತರೂ ಸ್ನಾನಮಾಡಿಕೊಂಡು ಬಂದರು. ಭಗ ವಾನರು ಕಾತುರರಾಗಿ, ನರೇಂದ್ರನನ್ನು ನೋಡಿ, 'ಅಪ್ಪಾ, ಹೋಗಿ ವಟತಲದಲ್ಲಿ ಧ್ಯಾನಮಾಡು, ಆಸನವನ್ನು ಕೊಡಲೇ?' ಎಂದರು.

(ನರೇಂದ್ರನಿಗೆ ಧ್ಯಾನದಲ್ಲಿ ಮಗ್ನನಾಗಬೇಕೆಂದು ಉಪದೇಶ)

ನರೇಂದ್ರನೂ ಅವನ ಸ್ನೇಹಿತರೂ ಪಂಚವಟಿಯ ಬುಡದಲ್ಲಿ ಧ್ಯಾನಮಾಡು ತ್ತಿದ್ದಾರೆ. ಹತ್ತೂವರೆ ಗಂಟೆಯಾಗಿದೆ. ಕೊಂಚ ಹೊತ್ತಿನ ಮೇಲೆ ಭಗವಾನರು ಅಲ್ಲಿಗೆ ಬಂದು ಸೇರಿದರು. ಮಾಸ್ಟರೂ ಬಂದಿದ್ದಾನೆ. ಭಗವಾನರು ಮಾತನಾಡು ತ್ತಿದ್ದಾರೆ.

ಶ್ರೀರಾಮಕೃಷ್ಣ:—(ಬ್ರಾಹ್ಮಭಕ್ತರೊಡನೆ) ಧ್ಯಾನಮಾಡುವವನು ಭಗವಂತನಲ್ಲಿ ಮಗ್ನರಾಗಬೇಕು. ಮೇಲೆ ಮೇಲೆ ತೇಲುತ್ತಾ ಇದ್ದರೆ, ನೀರಿನ ಬುಡದಲ್ಲಿ ರುವ ರತ್ನಗಳನ್ನು ತೆಗೆಯಲಾದೀತೇ?

ಹಾಡು

(‘ಭಜಿಸಿ ಬದುಕೆಲೋ ಮಾನವ।
ಅಜಸುರೇಂದ್ರಾದಿಗಳು ಅರ್ಚಿಸುವ ಪಾದವನು॥’ ಎಂಬಂತೆ)

ಮುದದೆ ಕಾಳಿಯ ನೆನೆಯುತ।
ಹೃದಯರತ್ನಾಕರದ ಜಲದೊಳಗೆ ಮುಳುಗೋ॥ ॥ಪಲ್ಲವಿ॥
ಬರಿದಾಗದೆಂದಿಗುಂ ರತ್ನಾಕರವು ನೋಡ।
ಲೆರಡು ಸಲ ಮುಳುಗೆ ಧನ ಕೈಸಾರದು॥
ಹಿರಿದು ಯತ್ನವ ಮಾಡಿ ಕುಲಕುಂಡಲಿನಿಯ ವಿ।
ಸ್ತರಕೂಲದೊಳಗುಸಿರ ಹಿಡಿದು ಮುಳುಗು॥ ॥೧॥

ಜ್ಞಾನಸಾಗರದ ಮಧ್ಯದೆ ಶಾಂತಿಯೆಂದೆನಿಪ।
ನೂನ ಮುಕ್ತಾಫಲವು ತಾನಿರುವುದು॥
ನೀನು ನಿಜವೆನಿಸಿದಾ ಭಕ್ತಿಯುಳ್ಳೊಡೆಯಪ್ಪ।
ದೇನೆಂಬೆ ಸಂಚಿಸುವೊಡವನೆಲ್ಲವ॥ ॥೨॥

ಕಾಮಮುಖಕುಂಭೀರಷಟ್ಕಂಗಳಲ್ಲಿರುತೆ।
ತಾಮೆಯಾಹಾರಕ್ಕೆ ತೊಳಲುತಿಹುವು॥
ನೀ ಮೆಯ್ಗೆ ಪೂಸುತೆ ವಿವೇಕದರಿಸಿನವ ಬಿಳಿ।
ಲಾಮೊಸಳೆಗಳು ನಿನ್ನ ಹೊದ್ದದಿಹವು॥ ॥೩॥

ನೀರಿನೊಳಗೆನಿತು ರತ್ನಂಗಳೋ ಮಾಣಿಕವೋ।
ತೋರುತ್ತಲಿರುವುದಿಟ್ಟಾಡಿದಂತೆ॥
ಹಾರಿ ನೀರಲಿ ಬೀಳೆ ರತುನ ದೊರಕುವುದೆಂದು।
ಸಾರುವನು ರಾಮಪ್ರಸಾದನಡಿಗಡಿಗೆ॥ ॥೪॥

(ಮೊದಲು ಈಶ್ವರಲಾಭ, ಬಳಿಕ ಪ್ರಸಂಗ, ಸಮಾಜಸಂಸ್ಕಾರ
ಮತ್ತು ಲೋಕಶಿಕ್ಷಾಪ್ರದಾನ.)

ನರೇಂದ್ರನೂ ಅವನ ಗೆಳೆಯರೂ, ಪಂಚವಟಿಯ ಜಗತಿಯಿಂದಿಳಿದು, ಭಗವಾನರ ಬಳಿಗೆ ಬಂದು ನಿಂತರು. ಭಗವಾನರು ಅವರೊಡನೆ ಮಾತನಾಡುತ್ತ, ದಕ್ಷಿಣಾಮುಖವಾಗಿ ತಮ್ಮ ಮನೆಗೆ ಬರುತ್ತಿದ್ದಾರೆ.

ಶ್ರೀರಾಮಕೃಷ್ಣ :—

ಕಾಮಮುಖಕುಂಭೀರಷಟ್ಕಂಗಳಲ್ಲಿರುತೆ। ತಾಮೆಯಾಹಾರಕ್ಕೆ ತೊಳಲುತಿಹುವು॥
ನೀ ಮೆಯ್ಗೆ ಪೂಸುತೆ ವಿವೇಕದರಿಸಿನವ ಬಿಳಿ। ಲಾಮೊಸಳೆಗಳು ನಿನ್ನ ಹೊದ್ದದಿಹುವು॥

‘ಹೃದಯರತ್ನಾಕರದ ಜಲದೊಳಗೆ’, ಕಾಮಮುಂತಾದ ಮೊಸಳೆಗಳಾರಿವೆ. ಆದರೆ ನೀನು ವಿವೇಕವೈರಾಗ್ಯರೂಪವಾದ ಅರಿಸಿನವನ್ನು ಮೆಯ್ಗೆ ಹಚ್ಚಿಕೊಂಡರೆ, ಅವು ನಿನ್ನನ್ನು ಮುಟ್ಟುವುದಿಲ್ಲ.

ವಿವೇಕವೂ ವೈರಾಗ್ಯವೂ ಬಾರದೆ ಇದ್ದರೆ, ಪಾಂಡಿತ್ಯವೂ ಪ್ರಸಂಗವೂ ಆವ ಕೆಲಸಕ್ಕೆ ಬರುತ್ತವೆ? 'ಈಶ್ವರನು ಸತ್ಯ, ಮಿಕ್ಕುವೆಲ್ಲವೂ ಅನಿತ್ಯ, ಅವನೇ ವಸ್ತು, ಉಳಿದುವೆಲ್ಲವೂ ಅವಸ್ತು,' ಎಂಬುದೀಗ ವಿವೇಕ.

ಭಗವಂತನನ್ನು ಹೃದಯಮಂದಿರದಲ್ಲಿ ಮೊದಲು ಪ್ರತಿಷ್ಠೆಮಾಡು, ಆ ಮೇಲೆ ಪ್ರಸಂಗಮಾಡುವುದೂ, ಲೆಕ್ಚರನ್ನು ಕೊಡುವುದೂ ಇಷ್ಟವಾದರೆ ಮಾಡು; ವಿವೇಕ ವೈರಾಗ್ಯಗಳು ನಿಲ್ಲದಿದ್ದರೆ, ಸುಮ್ಮನೆ 'ಬ್ರಹ್ಮ, ಬ್ರಹ್ಮ' ಎಂದರೆ ಪ್ರಯೋಜನವೇನು ? ಅದು ಬರಿಯ ಶಂಖಧ್ವನಿ.

ಒಂದು ಹಳ್ಳಿಯಲ್ಲಿ ಪದ್ಮಲೋಚನನೆಂಬ ಹುಡುಗನಿದ್ದನು. ಅವನನ್ನು ಆವೂರ ವರೆಲ್ಲರೂ, 'ಪದ್ದು, ಪದ್ದು' ಎಂದು ಕೂಗುತ್ತಿದ್ದರು. ಆ ಹಳ್ಳಿಯಲ್ಲಿ ಹಾಳು ಗುಡಿಯೊಂದಿದ್ದಿತು. ಗರ್ಭಗೃಹದಲ್ಲಿ ವಿಗ್ರಹವಿರಲಿಲ್ಲ. ದೇವಸ್ಥಾನ ದಲ್ಲಿ ಅಶ್ವತ್ಥವೃಕ್ಷವೂ, ಇತರ ವೃಕ್ಷಗಳೂ ಬೆಳೆದು ಹೋಗಿದ್ದುವು. ದೇವಾ ಲಯದ ಒಳಗೆ, ಕಪಟದ ಹಕ್ಕಿಗಳು ಸೇರಿಕೊಂಡಿದ್ದುವು. ನೆಲವೆಲ್ಲ ದೂಳಿ ನಿಂದಲೂ, ಹಕ್ಕಿಗಳ ಹಿಕ್ಕೆಗಳಿಂದಲೂ ತುಂಬಿಹೋಗಿದ್ದಿತು. ಅಲ್ಲಿಗೆ ಜನ ರಾರೂ ಹೋಗಿ ಬರುತ್ತಿರಲಿಲ್ಲ.

ಒಂದು ದಿನ, ಸಂಜೆಯಾದ ಕೊಂಚ ಹೊತ್ತಿನ ಮೇಲೆ, ಹಳ್ಳಿಯವರಿಗೆ ಶಂಖ ವೂದುವ ಸದ್ದು ಕೇಳಿಸಿತು. ಗುಡಿಯ ಕಡೆಯಿಂದ, 'ಭೋಂ, ಭೋಂ' ಎಂದು ಶಂಖದ ಸದ್ದು ಕೇಳಿಸುತ್ತಿದ್ದಿತು. ಅದನ್ನು ಕೇಳಿ ಹಳ್ಳಿಯವರು, 'ಈ ಗುಡಿಯಲ್ಲಿ ಆರೋ ದೇವರನ್ನು ಪ್ರತಿಷ್ಠೆಮಾಡಿರಬಹುದು. ಸಂಜೆ ಯಾದ ಮೇಲೆ ಆರತಿಯಾಗುತ್ತದೆ. ದೇವರ ದರ್ಶನವನ್ನು ಮಾಡಿಕೊಂಡು ಆರತಿಯಾಗುವುದನ್ನು ನೋಡಿಕೊಂಡು ಬರೋಣ', ಎಂದು ಮಕ್ಕಳು, ಮುದುಕರು, ಹೆಂಗುಸರು, ಗಂಡಸರು ಮುಂತಾಗಿ ಎಲ್ಲರೂ ದೇವಾಲ ಯದ ಬಳಿಗೆ ಓಡುತ್ತ ಬಂದು ನಿಂತುಕೊಂಡರು. ಅವರೊಳಗೊಬ್ಬನು ದ್ವಾರದ ಬಳಿಗೆ ಮೆಲ್ಲಗೆ ಹೋಗಿ, ಕದವನ್ನು ತೆರೆದನು. ಒಂದು ಕಡೆಯಲ್ಲಿ ಪದ್ಮಲೋಚನನು ನಿಂತುಕೊಂಡು, 'ಭೋಂ, ಭೋಂ', ಎಂದು ಶಂಖ ವನ್ನು ಊದುತ್ತಿದ್ದನು. ದೇವರನ್ನು ಪ್ರತಿಷ್ಠೆಮಾಡಿಲ್ಲ, ದೇವಾಲಯ ವನ್ನು ಗುಡಿಸಿಲ್ಲ, ಕಪಟದ ಹಕ್ಕಿಯ ಹಿಕ್ಕೆಗಳು ಬಿದ್ದಿವೆ. ಆಗ ಅವನು ಗಟ್ಟಿಯಾಗಿ.

ತ್ರಿಪದಿ

ದೇವಾಲಯದೆ ನಿಮ್ಮ ದೇವರೇ ಮುನ್ನಿಲ್ಲ।
ನೇವುದಕೊ ಪದ್ದು ಶಂಖವನೂದಿ ಬರಿದೆ।
ಯೀವಿಧದೆ ಗಲಬೆಮಾಡಿದನು ॥೧॥

ಹನ್ನೊಂದು ಕಪಟದಾ ಹಕ್ಕಿಗಳು ಗುಡಿಯೊಳಗೆ।
ಮುನ್ನವೇ ಮನೆಮಾಡಿ ವಿಶ್ರಾಂತಿಯಿಲದೆ
ಚೆನ್ನಾಗಿ ಕಾದುಕೊಂಡಿಹವು ॥೨॥

ಹೃದಯಮಂದಿರದಲ್ಲಿ ಮಾಧವನನ್ನು ಪ್ರತಿಷ್ಠಿಸಬೇಕೆಂದು ಆಸೆಪಟ್ಟರೆ, ಭಗವಲ್ಲಾಭವಾಗಬೇಕೆಂದು ಬಯಸಿದರೆ, ಸುಮ್ಮನೆ 'ಭೋಂ, ಭೋಂ' ಎಂದು ಶಂಖವನ್ನೂದುವುದರಿಂದ ಏನಾಗುತ್ತದೆ?. ಮೊತ್ತಮೊದಲು ಚಿತ್ತಶುದ್ಧಿಯಾಗಬೇಕು. ಮನಸ್ಸು ಶುದ್ಧವಾಗಿದ್ದರೆ, ಪವಿತ್ರವಾದ ಆ ಸ್ಥಳಕ್ಕೆ ಭಗವಂತನು ತಾನೇ ಬಂದು ನಿಲ್ಲುತ್ತಾನೆ. ಕಪಟದ ಹಕ್ಕಿಯು ಹಿಕ್ಕೆಯಿದ್ದರೆ ಮಾಧವನನ್ನು ತಂದಿಡುವುದಕ್ಕಾಗುವುದಿಲ್ಲ. ಹನ್ನೊಂದು ಕಪಟದ ಹಕ್ಕಿಗಳೂ ಹನ್ನೊಂದು ಇಂದ್ರಿಯಗಳು; ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು, ಮನಸ್ಸು ಒಂದು, ಮೊದಲು ಮಾಧವಪ್ರತಿಷ್ಠೆ ಮಾಡಬೇಕು. ಆ ಮೇಲೆ ಇಷ್ಟಬಂದರೆ ಪ್ರಸಂಗಮಾಡಬಹುದು, ಲೆಕ್ಚರನ್ನೂ ಕೊಡಬಹುದು.

ಮೊದಲು ಭಗವಂತನ ಧ್ಯಾನದಲ್ಲಿ ಮುಳುಗು, ಮುಳುಗಿ ರತ್ನವನ್ನೆತ್ತು. ಆ ಮೇಲೆ ಮಿಕ್ಕ ಕೆಲಸಗಳನ್ನು ಮಾಡು.

ಮುಳುಗುವುದಕ್ಕೆ ಕೆಲವರಿಗೆ ಇಷ್ಟವಿಲ್ಲ. ಅವರಿಗೆ ಸಾಧನೆಯಿಲ್ಲ, ಭಜನೆಯಿಲ್ಲ, ವಿವೇಕವೈರಾಗ್ಯಗಳೂ ಇಲ್ಲ, ಒಂದೆರಡು ಮಾತನ್ನು ಕಲಿತುಕೊಂಡು ಅವರು ಲೆಕ್ಚರನ್ನು ಕೊಡುತ್ತಾರೆ.

ಜನರಿಗೆ ಉಪದೇಶಮಾಡುವುದು ಕಷ್ಟ. ಭಗವದ್ದರ್ಶನವನ್ನು ಮಾಡಿ ಅವನ ಅಪ್ಪಣೆಯನ್ನು ಪಡೆದರೆ, ಲೋಕಶಿಕ್ಷೆಯನ್ನು ಮಾಡುವುದಕ್ಕೆ ಆಗುತ್ತದೆ.

(ಅವಿದ್ಯೆಯು ಹೆಂಡತಿ, ಆಂತರಿಕವಾದ ಭಕ್ತಿಯಿದ್ದರೆ ಸಮಸ್ತವೂ ವಶವಾಗುತ್ತದೆ.)

ಮಾತನಾಡುತ್ತ, ಆಡುತ್ತ, ಭಗವಾನರು ಉತ್ತರವಾರಾಂಡದ ಪಶ್ಚಿಮದ ಕಡೆಗೆ ಬಂದು ನಿಂತುಕೊಂಡಿದ್ದಾರೆ. ಮಣಿಯು ಹತ್ತಿರದಲ್ಲಿಯೇ ನಿಂತಿದ್ದಾನೆ. 'ವಿವೇಕ ವೈರಾಗ್ಯಗಳಿಲ್ಲದಿದ್ದರೆ ಭಗವಂತನನ್ನು ಪಡೆಯುವುದಕ್ಕಾಗುವುದಿಲ್ಲ,' ಎಂಬುದಾಗಿ ಭಗವಾನರು ಅಡಿಗಡಿಗೆ ಹೇಳುತ್ತಿದ್ದಾರೆ. ಮಣಿಯು ಮದುವೆಮಾಡಿಕೊಂಡಿದ್ದಾನೆ. ಆದಕಾರಣ ಅವನು ವ್ಯಾಕುಲನಾಗಿ, 'ನನಗೇನು ಗತಿ', ಎಂದು ಭಾವಿಸುತ್ತಿದ್ದಾನೆ. ಅವನಿಗೆ ೨೮ ವಯಸ್ಸು. ಅವನು ಕಾಲೇಜಿನಲ್ಲಿ ಓದಿ, ಇಂಗ್ಲೀಷನ್ನು ಓದುವುದಕ್ಕೂ ಬರೆಯುವುದಕ್ಕೂ ಕಲಿತುಕೊಂಡಿದ್ದಾನೆ. 'ವಿವೇಕವೈರಾಗ್ಯಗಳೆಂದರೆ, ಕಾಮಿನೀಕಾಂಚನತ್ಯಾಗವೇ?', ಎಂದು ಅವನು ಆಲೋಚಿಸುತ್ತಿದ್ದಾನೆ.

ಮಣಿ :—(ಶ್ರೀರಾಮಕೃಷ್ಣರೊಡನೆ) ಹೆಂಡತಿಯು ಒಂದು ವೇಳೆ, 'ನೀನು ನನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ನಾನು ಆತ್ಮಹತ್ಯೆಮಾಡಿಕೊಳ್ಳುತ್ತೇನೆ', ಎಂದು ಹೇಳಿದರೆ ಏನು ಗತಿ?

ಶ್ರೀರಾಮಕೃಷ್ಣ :—(ಗಂಭೀರಸ್ವರದೊಡನೆ) ಈಶ್ವರನ ಹಾದಿಯಲ್ಲಿ ಹೋಗುವುದಕ್ಕೆ ಹೆಂಡತಿಯು ಅಡ್ಡಿಮಾಡುತ್ತ ಬಂದರೆ, ಅವಳನ್ನು ಬಿಟ್ಟುಬಿಡಬೇಕು. ಅವಳು ಆತ್ಮಹತ್ಯವನ್ನಾದರೂ ಮಾಡಿಕೊಳ್ಳಲಿ; ಏನನ್ನಾದರೂ ಮಾಡಿಕೊಳ್ಳಲಿ. ಈಶ್ವರನ ಹಾದಿಯಲ್ಲಿ ಹೋಗುವುದಕ್ಕೆ ಅಡ್ಡಿಮಾಡುವ ಹೆಂಡತಿಯು, ಅವಿದ್ಯೆಯ ಹೆಂಡತಿ.

ಮಣಿಯು ಅತ್ಯಂತ ಚಿಂತೆಯಲ್ಲಿ ಮುಳುಗಿದವನಾಗಿ, ಒಂದುಕಡೆ ಗೋಡೆಯನ್ನು ಒರಗಿಕೊಂಡು ನಿಂತಿದ್ದನು. ನರೇಂದ್ರ ಮುಂತಾದ ಭಕ್ತರೂ, ಮುಹೂರ್ತಕಾಲದ ವರೆಗೆ, ಆಶ್ಚರ್ಯಪಡುತ್ತ ಸುಮ್ಮನೆ ಇದ್ದರು.

ಭಗವಾನರು ಅವರೊಡನೆ ಕೊಂಚ ಮಾತನಾಡಿ, ಹಾಗೆಯೇ ಹಠಾತ್ತಾಗಿ ಮಣಿಯ ಬಳಿಗೆ ಬಂದು, ಏಕಾಂತವಾಗಿ, 'ಅಪ್ಪ, ಆರಿಗೆ ಈಶ್ವರನಲ್ಲಿ ಆಂತರಿಕವಾದ ಭಕ್ತಿಯುಡೆಯೋ ಅವರಿಗೆ ಅರಸರು, ಕೆಟ್ಟವರು, ಹೆಂಡಿರು ಮುಂತಾಗಿ ಸಕಲರೂ ವಶರಾಗುತ್ತಾರೆ. ಆಂತರಿಕವಾದ ಭಕ್ತಿಯು ನಮ್ಮಲ್ಲಿ ಇದ್ದರೆ, ಬರುತ್ತ ಬರುತ್ತ, ಹೆಂಡತಿಯೂ ಈಶ್ವರನ ಹಾದಿಯಲ್ಲಿ ಬರಬಲ್ಲವಳಾಗುತ್ತಾಳೆ. ನಿಜವಾಗಿಯೂ ಒಳ್ಳೆಯವನಾಗಿದ್ದರೆ, ಭಗವಂತನ ಅನುಗ್ರಹದಿಂದ ಅವಳೂ ಒಳ್ಳೆಯವಳಾಗುತ್ತಾಳೆ', ಎಂದು ಹೇಳಿದರು.

ಅವರ ವಾಗಮೃತದಿಂದ ಮಣಿಯ ಚಿಂತಾಗ್ನಿಯು ಶಾಂತವಾಯಿತು. 'ಆತ್ಮಹತ್ಯವನ್ನು ಮಾಡಿಕೊಂಡರೆ ಮಾಡಿಕೊಳ್ಳಲಿ; ನಾನು ಏನ ಮಾಡಲಿ?', ಎಂಬ ಮಾತನ್ನು ಅವನು ಇದುವರೆಗೂ ಚಿಂತಿಸುತ್ತಿದ್ದನು.

ಮಣಿ :—(ಶ್ರೀರಾಮಕೃಷ್ಣರನ್ನು ಕುರಿತು) ಸಂಸಾರದಲ್ಲ ಭಯವು ಹೆಚ್ಚು.

ಶ್ರೀರಾಮಕೃಷ್ಣ:—(ಮಣಿಯನ್ನೂ ನರೇಂದ್ರಾದಿಗಳನ್ನೂ ಕುರಿತು) ಆದುದರಿಂದಲೇ ಚೈತನ್ಯದೇವರು, '**ನಿತ್ಯಾನಂದನೆ ಕೇಳೋ ಸೊಲ್ಲ। ಸತ್ಯವು ಸಂಸಾರಿಗೆ ಗತಿಯಿಲ್ಲ**' ಎಂದು ಹೇಳಿದ್ದಾರೆ. (ಮಣಿಯ ಸಂಗಡ, ಏಕಾಂತದಲ್ಲಿ) ಈಶ್ವರನಲ್ಲಿ ಶುದ್ಧವಾದ ಭಕ್ತಿಯು ಇಲ್ಲದೆ ಹೋದರೆ, ಆಗ 'ಗತಿಯಿಲ್ಲ'ವಾಗುತ್ತದೆ. ಕೆಲವರು ಈಶ್ವರಲಾಭವಾದ ಬಳಿಕ ಸಂಸಾರದಲ್ಲಿ ನಿಲ್ಲುತ್ತಾರೆ. ಅವರಿಗೆ ಆವ ಭಯವೂ ಇಲ್ಲ. ಅಡಿಗಡಿಗೆ ವಿವಿಕ್ತವಾದ ಸ್ಥಲದಲ್ಲಿದ್ದುಕೊಂಡು ಶುದ್ಧವಾದ ಭಕ್ತಿಯನ್ನು ಸಂಪಾದಿಸಿಕೊಳ್ಳಬಲ್ಲರಾದರೆ, ಸಂಸಾರಿಗಳಾಗಿದ್ದರೂ ಅಂಥವರಿಗೆ ಭಯವೇನೂ

ಇರದು. ಚೈತನ್ಯದೇವರಿಗೆ ಸಂಸಾರಿಗಳಾದ ಭಕ್ತರೂ ಇದ್ದರು. ಅವರು ಸಂಸಾರದಲ್ಲಿ ಆಸಕ್ತರಾಗದೆ, ಹೆಸರಿಗೆ. ಮಾತ್ರ ಸಂಸಾರಿಗಳೆನ್ನಿಸಿಕೊಂಡು ಇದ್ದರು.

ದೇವರುಗಳಿಗೆ ಭೋಗಾರತಿಯಾಯಿತು. ಆಗ ಮಂಗಳವಾದ್ಯಗಳಾದುವು. ಇನ್ನು ಶಯನೋತ್ಸವವಾಗುತ್ತದೆ. ಶ್ರೀಭಗವಾನ್ ರಾಮಕೃಷ್ಣರು ಭೋಜನ ಮಾಡುವುದಕ್ಕೆ ಕುಳಿತುಕೊಂಡರು. ನರೇಂದ್ರ ಮುಂತಾದ ಭಕ್ತರು ಈ ದಿನವೂ ಭಗವಾನರ ಬಳಿಯಲ್ಲಿಯೇ ಪ್ರಸಾದವನ್ನು ಸ್ವೀಕಾರಮಾಡುತ್ತಾರೆ.

ಏಳನೆಯ ಖಂಡ

ಮೊದಲನೆಯ ಪರಿಚ್ಛೇದ

ಶ್ರೀರಾಮಕೃಷ್ಣರು ವಿಜಯದಶಮಿಯ ದಿವಸ ದಕ್ಷಿಣೇಶ್ವರದಲ್ಲಿ ಭಕ್ತರೊಡನಿರುವುದು.

ಭಗವಾನ್ ಶ್ರೀರಾಮಕೃಷ್ಣರು ದಕ್ಷಿಣೇಶ್ವರಧಲ್ಲಿ ವಿರಾಜಿಸುತ್ತಿದ್ದಾರೆ. ಬೆಳಿಗ್ಗೆ ಒಂಬತ್ತು ಗಂಟೆಯ ಸಮಯ. ಅವರು ಚಿಕ್ಕ ಮಂಚದ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದಾರೆ. ಮಣಿಯು ನೆಲದ ಮೇಲೆ ಕುಳಿತುಕೊಂಡು, ಅವರ ಸಂಗಡ ಮಾತನಾಡುತ್ತಾ ಇದ್ದಾನೆ.

ಈ ದಿನ ವಿಜಯದಶಮಿ, ಭಾನುವಾರ, ೧೮೮೩ನೆಯ ಕ್ರಿಸ್ತಾಬ್ದ ಅಕ್ಟೋಬರು ೨೨ನೆಯ ತೇದಿ ಈಗ ರಾಖಾಲನು ಭಗವಾನರ ಹತ್ತಿರದಲ್ಲಿಯೇ ಇದ್ದಾನೆ. ನರೇಂದ್ರನೂ ಭವನಾಥನೂ ಆಗಾಗ ಇಲ್ಲಿಗೆ ಬರುತ್ತ ಹೋಗುತ್ತ ಇದ್ದಾರೆ. ಭಗವಾನರೊಡನೆ ಅವರ ಅಣ್ಣನ ಮಗನಾದ ರಾಮಲಾಲನೂ, ಹಾಜರಾಮಹಾಶಯನೂ ವಾಸಮಾಡುತ್ತಿದ್ದಾರೆ. ರಾಮ, ಮನಮೋಹನ, ಸುರೇಶ, ಮಾಸ್ಟರು, ಬಲರಾಮ ಮುಂತಾದವರು ಪ್ರಾಯಃ ವಾರಕ್ಕೊಮ್ಮೆ ತಪ್ಪದೆ ಭಗವಾನರ ದರ್ಶನಕ್ಕಾಗಿ ಬರುತ್ತಿದ್ದಾರೆ. ಬಾಬೂರಾಮನು ಒಂದೆರಡು ಸಲ ಬಂದು ಭಗವಾನರನ್ನು ದರ್ಶನ ಮಾಡಿದ್ದಾನೆ.

ಶ್ರೀರಾಮಕೃಷ್ಣ :—ನಿನಗೆ ದುರ್ಗಾಪೂಜೆಯ ವಿರಾಮದಿನಗಳು ಬಂದುವೋ?

ಮಣಿ :—ಸ್ವಾಮೀ, ಬಂದಿವೆ. ನಾನು ಸಪ್ತಮೀ, ಅಷ್ಟಮೀ, ನವಮಿಯ

ದಿನಗಳಲ್ಲಿ, ದುರ್ಗಾಪೂಜೆಗೋಸ್ಕರ ನಿತ್ಯವೂ ಕೇಶವಸೇನನ ಮನೆಗೆ ಹೋಗುತ್ತಿದ್ದೆನು.

ಶ್ರೀರಾಮಕೃಷ್ಣ :—ಅದೇನು, ಹೇಳಪ್ಪ.

ಮಣಿ :—ದುರ್ಗಾಪೂಜೆಯ ವಿಷಯವನ್ನು ಚೆನ್ನಾಗಿ ಕೇಳಿದೆನು.

ಶ್ರೀರಾಮಕೃಷ್ಣ :—ಅದೇನು ಹೇಳು, ಕೇಳೋಣ.

ಮಣಿ :—ಕೇಶವಸೇನನ ಮನೆಯಲ್ಲಿ, ಬೆಳಗಿನ ಜಾವದಿಂದ ಹಿಡಿದು ಹತ್ತು ಹನ್ನೊಂದು ಗಂಟೆಯ ವರೆಗೂ, ದೇವಿಯ ಉಪಾಸನೆಯು ನಡೆಯುತ್ತಿದ್ದಿತು. ಆಗ ಕೇಶವಸೇನನು ದುರ್ಗಾಪೂಜೆಯ ವಿಷಯವನ್ನು ವಿವರಣೆ ಮಾಡುತ್ತ, 'ಮಾತೆಯನ್ನು ಮನದಲ್ಲಿ ನಿಲ್ಲಿಸಿಕೊಳ್ಳುವುದಕ್ಕಾದರೆ, ಆಗ ಲಕ್ಷ್ಮೀ, ಸರಸ್ವತೀ, ಕಾರ್ತೀಕ, ಗಣೇಶ, ಮುಂತಾದವರು ತಾವಾಗಿಯೇ ನಮ್ಮ ಬಳಿಗೆ ಬರುತ್ತಾರೆ; ಎಂದರೆ ಕ್ರಮವಾಗಿ ಐಶ್ವರ್ಯವೂ, ಜ್ಞಾನವೂ, ಪರಾಕ್ರಮವೂ, ಸಿದ್ಧಿಯೂ ಉಂಟಾಗುತ್ತದೆ,' ಎಂಬದಾಗಿ ಹೇಳಿದನು.

(ನರೇಂದ್ರಾದಿಗಳು ಭಗವಾನ್ ಶ್ರೀರಾಮಕೃಷ್ಣರ ಅಂತರಂಗಕ್ಕೆ ಸೇರಿದವರು.)

ಭಗವಾನರವರು ಈ ವಿವರಣೆಯೆಲ್ಲವನ್ನೂ ಕೇಳುತ್ತ, ನಡನಡುವೆ ಕೇಶವನ ಉಪಾಸನೆಯ ವಿಷಯವಾಗಿ ಆವಾವ ಪ್ರಶ್ನೆಯನ್ನೋ ಹಾಕುತ್ತಲಿದ್ದರು. ಕೊನೆಗೆ, **'ನೀನು ಅಲ್ಲಿಗೂ ಇಲ್ಲಿಗೂ ಹೋಗಬೇಡ. ಇಲ್ಲಿಗೇ ಬರುತ್ತಿರು'**, ಎಂದು ಹೇಳಿದರು.

ಶ್ರೀರಾಮಕೃಷ್ಣ :—ಆರು ನನಗೆ ಅಂತರಂಗದ ಭಕ್ತರೋ ಅವರು ಇಲ್ಲಿಗೇ ಬರುತ್ತಾರೆ. ನರೇಂದ್ರ, ಭವನಾಥ, ರಾಖಾಲರು ನನ್ನ ಅಂತರಂಗ ಭಕ್ತರು. ಅವರನ್ನು ಸಾಮಾನ್ಯರೆಂದು ತಿಳಿಯಬೇಡ. ನೀನು ಅವರೆಲ್ಲರಿಗೂ ಒಂದು ದಿವಸ ಭೋಜನವನ್ನು ಮಾಡಿಸು. ನರೇಂದ್ರನನ್ನು ನೀನು ಏನೆಂದು ತಿಳಿದುಕೊಂಡಿದ್ದೀಯೆ ?

ಮಣಿ :—ಸ್ವಾಮೀ, ಅವನು ಬಲು ಒಳ್ಳೆಯವನು.

ಶ್ರೀರಾಮಕೃಷ್ಣ :—ನರೇಂದ್ರನಿಗೆ ಬಹುಗುಣಗಳಿವೆ, ಅವನು ಓದಿದ್ದಾನೆ. ಹಾಡುತ್ತಾನೆ. ವಾದ್ಯವನ್ನು ಬಾಜಿಸುತ್ತಾನೆ. ಸಾಲದುದಕ್ಕೆ, ಅವನು ಜಿತೇಂದ್ರಿಯನು, ಮದುವೆಯಾಗುವುದಿಲ್ಲವೆನ್ನುತ್ತಾನೆ. ಬಾಲ್ಯದಿಂದಲೂ ಅವನಿಗೆ ಈಶ್ವರನಲ್ಲಿಯೇ ಮನಸ್ಸು.

(ಸಾಕಾರ ಅಥವಾ ನಿರಾಕಾರ. ಚಿನ್ಮಯೀಮೂರ್ತಿಧ್ಯಾನ, ಮಾತೃಧ್ಯಾನ.)

ಶ್ರೀರಾಮಕೃಷ್ಣ :—(ಪುನಃ ಮಣಿಯನ್ನು ನೋಡಿ) ಈಗ ನೀನು ಈಶ್ವರನನ್ನು ಹೇಗೆ ಭಾವಿಸುತ್ತೀಯೆ ? ಸಾಕಾರನೆಂದೋ ? ನಿರಾಕಾರನೆಂದೋ ?

ಮಣಿ:—ಸ್ವಾಮೀ, ಈಗ ಸಾಕಾರದಲ್ಲಿ ಮನಸ್ಸು ಹೋಗುವುದಿಲ್ಲ. ನಿರಾಕಾರದಲ್ಲಿಯೂ ಮನಸ್ಸನ್ನು ಸ್ಥಿರವಾಗಿರಿಸಲಾರೆನು.

ಶ್ರೀರಾಮಕೃಷ್ಣ:—ನೋಡಿದೆಯೋ? ನಿರಾಕಾರದಲ್ಲಿ ಒಂದೇ ಸಲಕ್ಕೆ ಮನಸ್ಸನ್ನು ಸ್ಥಿರವಾಗಿರಿಸುವುದಕ್ಕೆ ಆಗುವುದಿಲ್ಲ. ಮೊತ್ತಮೊದಲು, ಸಾಕಾರವೇ ಒಳ್ಳೆಯದು.

ಮಣಿ:—ಮಣ್ಣಿನ ಗೊಂಬೆಯನ್ನು ಧ್ಯಾನಿಸುವುದೇ?

ಶ್ರೀರಾಮಕೃಷ್ಣ:—ಏಕೆ? ಚಿನ್ಮಯಮೂರ್ತಿಯನ್ನು ಧ್ಯಾನಮಾಡು.

ಮಣಿ:—ಅಪ್ಪಣೆ. ಆದರೂ ಕೈಕಾಲುಗಳಿರುವಂತೆ ಭಾವಿಸಬೇಕಲ್ಲವೇ? 'ಮೊತ್ತಮೊದಲು, ರೂಪವನ್ನು ಚಿಂತಿಸದಿದ್ದರೆ ಮನಸ್ಸು ಸ್ಥಿರವಾಗುವುದಿಲ್ಲ,' ಎಂದು ತಾವು ಅಪ್ಪಣೆಕೊಡಿಸಿದ್ದೀರಿ. ಭಗವಂತನು ನಾನಾರೂಪಗಳನ್ನು ಧರಿಸಬಲ್ಲನು. ನಮ್ಮ ಹೆತ್ತ ತಾಯ ರೂಪವನ್ನು ಭಗವಂತನದೆಂದು ಚಿಂತಿಸಬಹುದೇ?

ಶ್ರೀರಾಮಕೃಷ್ಣ:—ಆಗಬಹುದು. ಅವಳು (ತಾಯಿಯು) ಗುರು, ಬ್ರಹ್ಮಮಯೀಸ್ವರೂಪಿಣಿ. (ಮಣಿಯು ಮಾತನಾಡದಿದ್ದಾನೆ.)

ಕೊಂಚ ಹೊತ್ತಾದ ಮೇಲೆ ಅವನು ಮರಳಿ ಮಾತನಾಡತೊಡಗಿ, 'ಸ್ವಾಮೀ, ನಿರಾಕಾರವನ್ನು ಹೇಗೆ ಕಾಣಲಾದೀತು? ಹೇಗೆ ವರ್ಣಿಸಲಾದೀತು?' ಎಂದು ಕೇಳಿದನು.

ಶ್ರೀರಾಮಕೃಷ್ಣರು, ಸ್ವಲ್ಪ ಆಲೋಚನೆಮಾಡಿ, 'ಅದು ಆವ ರೂಪ ಗೊತ್ತೋ,' ಎನ್ನುತ್ತ, ಕ್ಷಣಕಾಲ ಸುಮ್ಮನಿದ್ದು, ತರುವಾಯ ಸಾಕಾರನಿರಾಕಾರಗಳನ್ನು ಹೇಗೆ ದರ್ಶನಮಾಡಬಹುದೆಂಬ ಅನುಭವವನ್ನು ತಿಳಿಸುವುದಕ್ಕಾಗಿ, ಒಂದು ಮಾತನ್ನು ಹೇಳಿಕೊಟ್ಟು, ಮತ್ತೆ ಸುಮ್ಮನಾದರು.

ಅವರು ಮತ್ತೆ ಮಣಿಯನ್ನು ನೋಡಿ, 'ಅಪ್ಪ, ಇದನ್ನು ಚೆನ್ನಾಗಿ ತಿಳಿಯಬೇಕಾದರೆ, ಸಾಧನೆಯನ್ನು ಮಾಡಬೇಕು. ಕಿರುಮನೆಯ ಒಳಗಿಟ್ಟಿರುವ ರತ್ನವನ್ನು ನೋಡಬೇಕೆಂದೂ, ಹೊರಗೆ ತೆಗೆಯಬೇಕೆಂದೂ ಆಸೆಯಾದರೆ, ಕಷ್ಟಪಟ್ಟು ಬೀಗದೆಸಳನ್ನು ತಂದು, ಬಾಗಿಲನ್ನು ತೆರೆದು, ರತ್ನವನ್ನು, ಹೊರಗೆ ತರಬೇಕು. ಹಾಗೆ ಮಾಡದೆ, ಬೀಗವಿಕ್ಕಿದ ಬಾಗಿಲ ಮುಂದೆ ಸುಮ್ಮನೆ ನಿಂತುಕೊಂಡು, 'ನಾನು ಈ ಬಾಗಿಲನ್ನು ತೆರೆದೆನು. ಪೆಟ್ಟಿಗೆಯ ಕೊಂಡಿಯನ್ನು ಕಳಚಿದೆನು, ರತ್ನವನ್ನು ಹೊರಗೆ ತಂದೆನು', ಎಂದು ಆಲೋಚಿಸಿಕೊಂಡ ಮಾತ್ರಕ್ಕೆ ಏನಾದೀತು? ಸಾಧನೆಮಾಡುವುದು ಆವಶ್ಯಕ,' ಎಂದರು.

ದ್ವಿತೀಯ ಪರಿಚ್ಛೇದ

ಈಶ್ವರನು ಅನಂತ, ಎಲ್ಲವೂ ಮಾರ್ಗ; ಶ್ರೀ ವೃಂದಾವನದರ್ಶನ.

(ಜ್ಞಾನಿಗಳ ಮತದಲ್ಲಿ ಅಸಂಖ್ಯಾವತಾರಗಳು. ಕುಟೀಚಕ. ತೀರ್ಥಯಾತ್ರೆಯೇಕೆ?)

ಶ್ರೀರಾಮಕೃಷ್ಣ:—ಜ್ಞಾನಿಗಳು ನಿರಾಕಾರವನ್ನು ಧ್ಯಾನಿಸುತ್ತಾರೆ. ಅವರು ಅವತಾರಗಳನ್ನು ನಂಬುವುದಿಲ್ಲ. 'ನೀನು ಪೂರ್ಣಬ್ರಹ್ಮನು', ಎಂದು ಅರ್ಜುನನು ಶ್ರೀಕೃಷ್ಣನನ್ನು ಸ್ತೋತ್ರಮಾಡಿದನು. ಅದಕ್ಕೆ ಶ್ರೀಕೃಷ್ಣನು ಅರ್ಜುನನ್ನು ಕುರಿತು, ನಾನು ಪೂರ್ಣಬ್ರಹ್ಮನಹುದೋ ಅಲ್ಲವೋ ನೋಡು ವೆಯಂತೆ ಬಾ,' ಎಂದು ಹೇಳಿ, ಒಂದು ಸ್ಥಲಕ್ಕೆ ಅವನನ್ನು ಕರೆದುಕೊಂಡು ಹೋಗಿ, 'ನೀನೇನ ನೋಡುತ್ತೀಯೆ?' ಎಂಬದಾಗಿ ಕೇಳಿದನು. ಆ ಮಾತಿಗೆ ಅರ್ಜುನನು, 'ಸ್ವಾಮೀ ನನಗೊಂದು ದೊಡ್ಡ ಮರವು ಕಾಣುತ್ತಿದೆ. ಅದರಲ್ಲಿ ನೇರಿಳೆಯ ಹಣ್ಣಿನಂತೆ ಕಪ್ಪಾದ ಹಣ್ಣುಗಳು ಜೊಂಪೆ ಜೊಂಪೆಯಾಗಿ ನೇತಾಡುತ್ತಿವೆ,' ಎಂದು ಉತ್ತರಕೊಟ್ಟನು. ಕೃಷ್ಣನು ಮರಳಿ ಅವನನ್ನು ನೋಡಿ,' 'ಇನ್ನೂ ಹತ್ತಿರಕ್ಕೆ ಬಂದು ನೋಡು, ಆ ಜೊಂಪೆಗಳು ಕರಿಯ ಹಣ್ಣುಗಳಲ್ಲ. ಅವು ನನ್ನಂತೆ ಅಸಂಖ್ಯಾತವಾದ ಕೃಷ್ಣರೂಪಿನ ಜೊಂಪೆಗಳು, ಎಂದರೆ ಆ ಪೂರ್ಣಬ್ರಹ್ಮವೃಕ್ಷದಿಂದ ಅಸಂಖ್ಯಾತವಾದ ಅವತಾರಗಳು ಆಗುತ್ತಲೂ ಹೋಗುತ್ತಲೂ ಇವೆ,' ಎಂದನು.

ಕಬೀರದಾಸನಿಗೆ ನಿರಾಕಾರದಲ್ಲಿ ತುಂಬ ವಿಶ್ವಾಸ; ಅವನು, 'ಕೃಷ್ಣನನ್ನೇಕೆ ನಾವು ಭಜಿಸಬೇಕು? ಗೋಪಿಯರು ಕಯ್ಯನ್ನು ತಟ್ಟುತ್ತಿರುವಾಗ, ಆತನು ಕಪಿಯಂತೆ ಕುಣಿಯುತ್ತಿದ್ದನು', ಎಂದು ಹೇಳುತ್ತಿದ್ದನು. (ನಗುತ್ತ) **ನಾನು ಸಾಕಾರವಾದಿಗಳ ಸಂಗದಲ್ಲಿ ಸಾಕಾರವಾದಿ, ನಿರಾಕಾರ ವಾದಿಗಳ ಬಳಿಯಲ್ಲಿ ನಿರಾಕಾರವಾದಿ.**

ಮಣಿ:—(ನಗುತ್ತ) ತಾವು ಮಾತನಾಡುತ್ತಿರುವ **ಈಶ್ವರನು ಹೇಗೆ ಅನಂತನೋ, ತಾವೂ ಹಾಗೆಯೇ ಅನಂತರಾಗಿದ್ದೀರಿ. ತಮ್ಮ ಅಂತವನ್ನು ತಿಳಿಯಲಾಗುವುದಿಲ್ಲ.**

ಶ್ರೀರಾಮಕೃಷ್ಣ:—(ನಗುತ್ತ) ನಿನಗೆ ಎಲ್ಲ ತಿಳಿದು ಹೋಯಿತು! ಏನು ಗೊತ್ತೇ? ಎಲ್ಲ ಧರ್ಮವನ್ನೂ ಒಂದು ಸಲ ಆಚರಿಸಬೇಕು: ಎಲ್ಲ ಹಾದಿ

ಗಳಲ್ಲಿಯೂ ಒಂದು ತಡವೆ ನಡೆಯಬೇಕು. ಪಗಡೆಯಾಟದಲ್ಲಿ, ಪಗಡೆಯ ಕಾಯಿಯು, ಎಲ್ಲ ಮನೆಯಲ್ಲಿಯೂ ಹೋಗದೆ ಇದ್ದರೆ ಹೇಗೆ ಹಣ್ಣಾದೀತು? ಅದು ಹಣ್ಣಾದ ಮೇಲೆ, ಅದನ್ನು ಆರೂ ಹಿಡಿದುಕೊಳ್ಳುವುದಕ್ಕೆ ಆಗುವುದಿಲ್ಲ.

ಮಣಿ :—ಅಪ್ಪಣೆ.

ಶ್ರೀರಾಮಕೃಷ್ಣ :—ಯೋಗಿಗಳು ಬಹೂದಕರೆಂದೂ ಕುಟೀಚಕರೆಂದೂ ಎರಡು ಪಂಗಡಗಳಾಗಿದ್ದಾರೆ. ಆವ ಸಾಧುವು ಬಹುವಾಗಿ ತೀರ್ಥಯಾತ್ರೆಮಾಡುತ್ತ ಸುತ್ತುತ್ತಿರುವನೋ, ಅವನ ಮನಸ್ಸಿನಲ್ಲಿ ಸ್ವಲ್ಪವೂ ಶಾಂತಿಯಿರುವುದಿಲ್ಲವೋ, ಅವನನ್ನು ಬಹೂದಕನೆಂದು ಕರೆಯುತ್ತಾರೆ. ಆವ ಯೋಗಿಯು, ಎಲ್ಲೆಲ್ಲಿಯೂ ತಿರುಗಿ ಮನವನ್ನು ಸ್ಥಿರಪಡಿಸಿಕೊಂಡಿರುತ್ತಾನೆಯೋ, ಆವನಿಗೆ ಶಾಂತಿಯುಂಟಾಗಿದೆಯೋ, ಆವನು ಒಂದೆಡೆಯಲ್ಲಿಯೇ ವಾಸಮಾಡಿಕೊಂಡು ಪುನಃ ಎಲ್ಲಿಯೂ ತಿರುಗಾಡದೆ ಇದ್ದಾನೆಯೋ, ಇದ್ದೆಡೆಯಲ್ಲಿಯೇ ಆವನು ಆನಂದಪಡುತ್ತಾನೆಯೋ, ಅವನು ತೀರ್ಥಯಾತ್ರೆ ಮಾಡುವುದರಿಂದ ಆವುದೊಂದು ಪ್ರಯೋಜನವೂ ಇರುವುದಿಲ್ಲ. ಒಂದು ವೇಳೆ ಅವನು ತೀರ್ಥಯಾತ್ರೆಗೆ ಹೋದರೆ, ಕೇವಲ ಉದ್ದೀಪನೆಯಾಗುವುದಕ್ಕೋಸ್ಕರವೇ ಹೋಗುತ್ತಾನೆ.

ನಾನು ಎಲ್ಲ ಧರ್ಮವನ್ನೂ ಒಂದೊಂದು ಸಲ ಆಚರಿಸಿ ನೋಡಿದೆನು ಹಿಂದೂ, ಮುಸಲಮಾನ, ಕ್ರಿಸ್ತ, ಶಾಕ್ತ, ವೈಷ್ಣವ, ವೇದಾಂತ, ಎಂಬೀಯೆಲ್ಲ ಹಾದಿಗಳಲ್ಲಿಯೂ ನಡೆದು ನೋಡಿದೆನು. ಎಲ್ಲದರಲ್ಲಿಯೂ ಈಶ್ವರನೊಬ್ಬನೇ. ಅವನ ಸನ್ನಿಧಾನಕ್ಕೆ ಎಲ್ಲರೂ ಬೇರೆಬೇರೆ ಹಾದಿಗಳಿಂದ ಬರುತ್ತಾರೆ.

ತೀರ್ಥಯಾತ್ರೆಗೆ ಹೋದಾಗ, ನನಗೆ ಒಂದೊಂದು ವೇಳೆ ತುಂಬ ಕಷ್ಟವಾಗುತ್ತಿದ್ದಿತು. ಕಾಶಿಯಲ್ಲಿ ಮಥುರಬಾಬುವಿನ ಸಂಗಡ ರಾಜಾಬಾಬುವಿನ ಕೂರುವ ಕೋಣೆಗೆ ಹೋದೆನು. ಅಲ್ಲಿ ಅವರು ಹೊನ್ನು, ಮಣ್ಣು, ಮುಂತಾದ ಲೋಕವಿಷಯಗಳ ಮಾತನ್ನಾಡುತ್ತಿದ್ದರು. ಅದನ್ನು ಕೇಳಿ ನಾನು ಅಳುತ್ತ, 'ತಾಯೀ, ನನ್ನನ್ನು ಎಲ್ಲಿಗೆ ಕರೆದು ತಂದಿದ್ದೀಯೆ? ನಾನು ದಕ್ಷಿಣೇಶ್ವರದಲ್ಲಿ ನೆಮ್ಮದಿಯಾಗಿದ್ದೆನು,' ಎಂದುಕೊಂಡೆನು.

ಪ್ರಯಾಗಕ್ಕೆ ಹೋದೆನು. ಅಲ್ಲಿಯೂ ಇದೇ ಕೊಳ, ಇದೇ ಹುಲ್ಲು, ಇದೇ ಮರ, ಇದೇ ಹುಣಿಸೆಯ ಎಲೆ.

ಆದರೆ ತೀರ್ಥಯಾತ್ರೆಯಿಂದ, ಉದ್ದೀಪನೆಯಾಗುವುದೇನೋ ನಿಜ. ಮಥುರ ಬಾಬುವಿನೊಡನೆ ವೃಂದಾವನಕ್ಕೆ ಹೋದೆನು. ಅವನ ಮನೆಯ ಹೆಂಗು

ಸರೂ ಬಂದಿದ್ದರು. ಹೃದಯನೂ ಇದ್ದನು. ಕಾಲೀಯದಮನಘಟ್ಟವನ್ನು ನೋಡಿದೊಡನೆಯೇ ನನಗೆ ಉದ್ದೀಪನವುಂಟಾಯಿತು. ನಾನು ಬಾಹ್ಯ ಶೂನ್ಯನಾಗಿ, ಸ್ನಾನಮಾಡಲಾರದೆ ಹೋದೆನು. ಹೃದಯನು ಯಮುನೆಯ ಆ ಘಟ್ಟದಲ್ಲಿ, ಮಕ್ಕಳಿಗೆ ಸ್ನಾನಮಾಡಿಸುವಂತೆ ನನಗೆ ಸ್ನಾನಮಾಡಿಸಿದನು.

ಸಂಜೆಯಲ್ಲಿ ಯಮುನೆಯ ದಡದಲ್ಲಿ ತಿರುಗಾಡುತ್ತಿದ್ದೆನು. ದಿಣ್ಣೆಯನ್ನು ಇಳಿಯುತ್ತ, ಹಸುಗಳು ಕಾವಲಿನಿಂದ ಹಿಂತಿರುಗಿ ಬರುತ್ತಿದ್ದುವು. ಅವುಗಳನ್ನು ಕಂಡ ಕೂಡಲೇ ನನಗೆ ಉದ್ದೀಪನವಾಯಿತು. ನಾನು ಹುಚ್ಚನಂತೆ, 'ಕೃಷ್ಣನೆಲ್ಲಿ,? ಕೃಷ್ಣನೆಲ್ಲಿ?', ಎಂದು ಕೂಗುತ್ತ, ಓಡಿಹೋದೆನು.

ಪಾಲಕಿಯಲ್ಲಿ ಕುಳಿತು ಶ್ಯಾಮಾಕುಂಡ, ರಾಧಾಕುಂಡಗಳಿಗೆ ಹೋಗುತ್ತ, ಗೋವರ್ಧನವನ್ನು ನೋಡಬೇಕೆಂದು ಕೆಳಗೆ ಇಳಿದೆನು. ಅದನ್ನು ನೋಡಿದ ಮಾತ್ರದಲ್ಲಿಯೇ ನಾನು ಒಮ್ಮೆಯೇ ವಿಹ್ವಲನಾಗಿ ಓಡಿಹೋಗಿ, ಬೆಟ್ಟದ ಮೇಲೆ ನಿಂತುಕೊಂಡು, ಬಾಹ್ಯಶೂನ್ಯನಾದೆನು. ಆಗ ವ್ರಜದವರು ಬಂದು ನನ್ನನ್ನು ಕೆಳಗಿಳಿಸಿ ತಂದರು. ಶ್ಯಾಮಾಕುಂಡರಾಧಾ, ಕುಂಡಗಳಲ್ಲಿಯೂ, ಅದೇ ಮಣ್ಣು, ಅದೇ ಮರ, ಅದೇ ಎಲೆ, ಅದೇ ಹಕ್ಕಿ, ಅದೇ ಜಿಂಕೆ; ಅವೆಲ್ಲವನ್ನೂ ಕಂಡು ವಿಹ್ವಲನಾದೆನು. 'ಕೃಷ್ಣ, ಇಲ್ಲಿ ನಿನ್ನೊಂದಿಗಿದ್ದ ಎಲ್ಲವೂ ಇವೆ. ಆದರೆ ನೀನು ಮಾತ್ರ ಕಾಣುವುದಿಲ್ಲ,' ಎಂಬದಾಗಿ ಆಲೋಚಿಸಿಕೊಂಡು, ಕಣ್ಣೀರಿನಿಂದ ನನ್ನ ಬಟ್ಟೆಯೆಲ್ಲವೂ ತೋಯ್ದು ಹೋಯಿತು. ಪಾಲಕಿಯಲ್ಲಿ ಕುಳಿತುಕೊಂಡೆನು. ನನಗೆ ಒಂದು ಮಾತನಾಡುವುದಕ್ಕೂ ಶಕ್ತಿಯಿರಲಿಲ್ಲ. ಸುಮ್ಮನೆ ಕುಳಿತುಕೊಂಡಿದ್ದೆನು. ಹೃದಯನು ಪಾಲಕಿಯ ಹಿಂದೆಯೇ ಬರುತ್ತ, ಬೋಯಿಗಳನ್ನು ನೋಡಿ, 'ತುಂಬ ಎಚ್ಚರಿಕೆಯಾಗಿರಿ', ಎಂದು ಹೇಳಿದನು.

ಗಂಗಾಮಾತೆಯು ನನ್ನನ್ನು ತುಂಬ ಆದರಿಸಿದಳು. ಅವಳು ವೃದ್ಧೆ. ನಿಧುವನದ ಹತ್ತಿರ ಒಂದು ಗುಡಿಸಲೊಳಗೆ ಆಕೆಯು ಒಬ್ಬಳೇ ಇದ್ದುಕೊಂಡಿದ್ದಳು. ಆಕೆಯು ನನ್ನ ಭಾವಾವಸ್ಥೆಯನ್ನು ಕಂಡು, 'ಇವರು ಸಾಕ್ಷಾತ್ತಾಗಿ ರಾಧೆಯ ದೇಹವನ್ನು ಧಾರಣೆಮಾಡಿಕೊಂಡು ಪುನಃ ಇಲ್ಲಿಗೆ ಬಂದಿದ್ದಾರೆ', ಎಂದು ಹೇಳುತ್ತ, ನನ್ನನ್ನು*'ದುಲಾಲೀ' ಎಂದು ಕರೆಯುತ್ತಿದ್ದಳು. ನಾನು ಅವಳ ಹತ್ತಿರವಿದ್ದಾಗ ಊಟಮಾಡುವುದು, ಮನೆಗೆ ಹೋಗುವುದು, ಮುಂತಾದುವೆಲ್ಲವೂ ಮರೆತುಹೋಗುತ್ತಿದ್ದಿತು. ಒಂದೊಂದು ದಿನ ಹೃದಯನು ನನ್ನ ಬಳಿಗೇ ಭೋಜನವನ್ನು ತಂದು ಕೊಡುತ್ತಿದ್ದನು. ಮತ್ತೆ ಕೆಲವು ವೇಳೆ ಗಂಗಾಮಾತೆಯೇ ಅಡುಗೆಮಾಡಿ, ನನಗೆ ಊಟಮಾಡಿಸುತ್ತಿದ್ದಳು.

---

*'ದುಲಾಲೀ' ಎಂದು ರಾಧೆಗೆ ಹೆಸರು.

ಅವಳಿಗೆ ಭಾವವುಂಟಾಗುತ್ತಿದ್ದಿತು. ಅದನ್ನು ನೋಡುವುದಕ್ಕೆ ಜನರು ಜಾತ್ರೆಯಂತೆ ಸೇರುತ್ತಿದ್ದರು. ಒಂದು ದಿನ ಆಕೆಯು ಭಾವಾವಿಷ್ಟಳಾಗಿ ಹೃದಯನ ಹೆಗಲ ಮೇಲೆ ಏರಿಬಿಟ್ಟಳು.

ಗಂಗಾಮಾತೆಯ ಬಳಿಯಿಂದ ಊರಿಗೆ ಹೋಗಬೇಕೆಂದರೆ, ನನಗೆ ಮನಸ್ಸೇ ಬಾರಲಿಲ್ಲ. ಅಲ್ಲಿಯೇ ನಿಲ್ಲುವುದಕ್ಕೆ ಬೇಕಾದ ಅಚ್ಚುಕಟ್ಟಲ್ಲಾ ಮಾಡಿಕೊಂಡೆನು. ನನಗೆ ಬೇಕಾದ ಕುದುಪಲ ಅಕ್ಕಿಯ ಅನ್ನವೂ ಏರ್ಪಾಡಾಯಿತು. ಮನೆಯಲ್ಲಿ, ಗಂಗಾಮಾತೆಯ ಹಾಸುಗೆಯು ಆ ಕಡೆಯಿರಬೇಕು. ನನ್ನ ಹಾಸುಗೆಯು ಈ ಕಡೆಯಿರಬೇಕು, ಎಂದೂ ಏರ್ಪಾಡಾಯಿತು. ಹೃದಯನು ನನ್ನನ್ನು ನೋಡಿ, 'ನಿಮಗೆ ಅಜೀರ್ಣರೋಗ; ಇಲ್ಲಿ ನಿಮ್ಮನ್ನು ನೋಡಿಕೊಳ್ಳುವರಾರು?' ಎಂದನು. ಅದಕ್ಕೆ ಗಂಗಾಮಾತೆಯು, 'ಏಕೆ? ನಾನು ನೋಡಿಕೊಳ್ಳುತ್ತೇನೆ; ನಾನು ಇವರಿಗೆ ಉಪಚಾರಮಾಡುತ್ತೇನೆ,' ಎಂದು ಹೇಳಿದಳು. ಹೃದಯನು ನನ್ನ ಕಯ್ಯನ್ನು ಹಿಡಿದು ಹೊರಗೆ ಎಳೆದನು; ಗಂಗಾಮಾತೆಯು ನನ್ನ ಇನ್ನೊಂದು ಕಯ್ಯನ್ನು ಹಿಡಿದುಕೊಂಡು, ಒಳಗೆ ಎಳೆದಳು. ಈ ಸಮಯದಲ್ಲಿ ನನಗೆ ನನ್ನ ವೃದ್ಧಮಾತೆಯ ನೆನಪು ಬಂದಿತು. 'ನನ್ನ ತಾಯಿಯು ದಕ್ಷಿಣೇಶ್ವರದ ಕಾಲೀಮಂದಿರದ ವಾದ್ಯಶಾಲೆಯಲ್ಲಿ ಏಕಾಕಿನಿಯಾಗಿದ್ದಾಳೆ. ನಾನು ಇಲ್ಲಿ ನಿಲ್ಲುವುದಕ್ಕಾಗುವುದಿಲ್ಲ, ಹೊರಟು ಹೋಗುತ್ತೇನೆ,' ಎಂದು ಹೇಳಿದೆನು.

ವೃಂದಾವನದಲ್ಲಿ ಒಳ್ಳೆಯ ಭಾವವುಂಟಾಗುತ್ತದೆ. ಯಾತ್ರಿಕರಾರಾದರೂ ಹೊಸತಾಗಿ ಅಲ್ಲಿಗೆ ಬಂದರೆ, ವ್ರಜದ ಹುಡುಗರು, 'ಹರಿ ಹರಿ ಹರಿ ಯೆನ್ನಿರೋ ಸಂಸಾರದ | ಹಿಱಿಯ ಮೂಟೆಯನು ಬಿಚ್ಚಿರೋ', ಎಂದು ಹೇಳುತ್ತಾರೆ.

ಹನ್ನೊಂದು ಗಂಟೆಯಾದ ಮೇಲೆ ಶ್ರೀರಾಮಕೃಷ್ಣರು ಮಹಾಮಾತೆಯಾದ ಕಾಳಿಯ ಪ್ರಸಾದವನ್ನು ಸ್ವೀಕರಿಸಿದರು. ಮಧ್ಯಾಹ್ನದಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು, ಮೂರನೆಯ ಜಾವದಲ್ಲಿ ಅವರು ಭಕ್ತಜನರೊಡನೆ ಮಾತುಕತೆಗಳನ್ನಾಡುತ್ತಿದ್ದರು. ನಡುನಡುವೆ ಅವರು ಒಮ್ಮೊಮ್ಮೆ ಪ್ರಣವವನ್ನೂ, ಒಮ್ಮೊಮ್ಮೆ 'ಹಾ ಚೈತನ್ಯ' ಎಂಬ ನಾಮವನ್ನೂ ಉಚ್ಚಾರಣೆಮಾಡುತ್ತಿದ್ದರು.

ದೇವಾಲಯದಲ್ಲಿ ಸಂಜೆಯ ಆರತಿಯು ಆಯಿತು. ಈ ದಿನ ವಿಜಯದಶಮೀ. ಶ್ರೀರಾಮಕೃಷ್ಣರವರು ಕಾಳೀಮಂದಿರಕ್ಕೆ ಬಂದು ಇದ್ದಾರೆ. ಭಗವತಿಗೆ ಪ್ರಣಾಮವನ್ನು ಮಾಡಿದ ಬಳಿಕ, ಭಕ್ತರೆಲ್ಲರೂ ಅವರ ಶ್ರೀಪಾದರೇಣುವನ್ನು ಸ್ವೀಕರಿಸಿದರು.

ರಾಮುಲಾಲನು ಕಾಳಿಗೆ ಆರತಿಯನ್ನು ಮಾಡಿದನು. ಭಗವಾನರು, 'ಎಲಾ ರಾಮುಲಾಲ, ಎಲ್ಲಿದ್ದಿಯೋ ?' ಎಂದು ಕೂಗಿದರು.

ಮಹಾಮಾತೆಯ ಹತ್ತಿರ ಸಿದ್ಧಿಯ* ನಿವೇದನವು ಆಗಿದೆ. ಭಗವಾನರು ಆ ಪ್ರಸಾದವನ್ನು ಸ್ಪರ್ಶಮಾಡುವುದಕ್ಕೋಸ್ಕರವೇ ಅವನನ್ನು ಕೂಗಿ, 'ಭಕ್ತರಿಗೆಲ್ಲ ಅದನ್ನು ಕೊಂಚ ಕೊಂಚ ಕೊಡು,' ಎಂದು ಹೇಳಿದರು.

ಮೂರನೆಯ ಪರಿಚ್ಛೇದ

ಬಲರಾಮುನಿಗೆ ಉಪದೇಶ

(ಶಕುನ, ಸತ್ಯವಾಕ್ಯ, ದೇವರೆಲ್ಲ ಒಂದೇ, ಕಾಮಿನೀಕಾಂಚನಗಳೇ ಮಾಯೆ.)

ಮಂಗಳವಾರದ ಅಪರಾಹ್ಣ. ಅಕಟೋಬರು ೨೮ ನೆಯ ತೇದಿ. ೩-೪ ಗಂಟೆಯ ಹೊತ್ತಾಗಿರಬಹುದು. ಭಗವಾನರು ತಿಂಡಿಯಿಟ್ಟಿರುವ ಪೆಟ್ಟಿಗೆಯ ಬಳಿಯಲ್ಲಿ ನಿಂತಿದ್ದಾರೆ. ಬಲರಾಮುನೂ ಮಾಸ್ಟರೂ ಕಲಿಕತಾದಿಂದ ಬಂಡಿಯಲ್ಲಿ ಬಂದಿದ್ದಾರೆ. ಅವರಿಬ್ಬರೂ ಭಗವಾನರಿಗೆ ನಮಸ್ಕಾರಮಾಡಿ ಕುಳಿತುಕೊಂಡ ಮೇಲೆ, ಭಗವಾನರು ನಸುನಗುತ್ತ, "ತಿಂಡಿಯ ಸಾಮಗ್ರಿಯನ್ನು ತೆಗೆದುಕೊಳ್ಳಬೇಕೆಂದು ನಾನು ಪೆಟ್ಟಿಗೆಯ ಮೇಲೆ ಕಯ್ಯಿಕ್ಕಿದೆನು. ಆಗ ಹಲ್ಲಿಯು 'ಲೊಚ್, ಲೊಚ್' ಎಂದು ಸದ್ದುಮಾಡಿತು. ಕೂಡಲೇ ನಾನು ಹಾಗೆಯೇ ಬಿಟ್ಟುಬಿಟ್ಟೆನು," ಎಂದರು. (ಎಲ್ಲರೂ ನಗುತ್ತಾರೆ.)

ಶ್ರೀರಾಮಕೃಷ್ಣ :—ಏನಪ್ಪ, ಅದನ್ನೆಲ್ಲ ನಾವು ನಂಬಬೇಕು. ಇದನ್ನು ಕೇಳಿರಿ. ರಾಖಾಲನು ಅಸ್ವಸ್ಥನಾಗಿದ್ದಾನೆ. ನನ್ನ ಕೈಕಾಲುಗಳು ನೋಯುತ್ತವೆ. ಏನಾಯಿತು, ಬಲ್ಲಿರಾ ? ನಾನು ಬೆಳಗಿನ ಜಾವದಲ್ಲಿ ಹಾಸಿಗೆಯಿಂದ ಏಳುವಾಗ, ರಾಖಾಲನು ಬರುತ್ತಾನೆಂದು ತಿಳಿದುಕೊಂಡು ಆರೋ ಒಬ್ಬನ ಮುಖವನ್ನು ನೋಡಿದೆನು (ಎಲ್ಲರೂ ನಗುತ್ತಾರೆ.) ಅದುದಪ್ಪ, ಶಕುನವನ್ನು ನೋಡಬೇಕು. ಆ ದಿನ ನರೇಂದ್ರನು ತನ್ನ ಗೆಳೆಯನಾದ, ಒಕ್ಕಣ್ಣಿನ ಹುಡುಗನೊಬ್ಬನನ್ನು ಕರೆದುಕೊಂಡು ಬಂದಿದ್ದನು. ಅವನಿಗೆ ಕಣ್ಣೆಲ್ಲ ಚೆನ್ನಾಗಿ ಕುರುಡಾಗಿರಲಿಲ್ಲ. ಏನಾದರೂ

---

*'ಸಿದ್ಧಿ' ಎಂದರೆ ಬಂಗಿಸೊಪ್ಪಿನ ರಸ.

ಆಗಲಿ; ಇದರಿಂದ ಇನ್ನೇನು ಅನಿಷ್ಟವಾಗುತ್ತದೆಯೋ,' ಎಂದು ನನ್ನ ಮನಸ್ಸಿಗೆ ತೋರಿತು.

ಒಬ್ಬನು ಆಹಾರಪದಾರ್ಥವನ್ನು ತಂದುಕೊಟ್ಟನು. ಅದನ್ನು ತಿನ್ನುವುದಕ್ಕೆ ಆಗಲಿಲ್ಲ. ಅವನು ಆಫೀಸಿನಲ್ಲಿ ಕೆಲಸಮಾಡುತ್ತಾನೆ. ಅವನಿಗೆ ತಿಂಗಳೊಂದಕ್ಕೆ ಇಪ್ಪತ್ತು ರೂಪಾಯಿ ಸಂಬಳವು ಸಿಕ್ಕುತ್ತಿದೆ. ಅವನು ಸುಳ್ಳು ಹೇಳುತ್ತಾನೆಂದು, ಅವನ ಕೂಡ ನಾನು ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಸುಳ್ಳು ಲೆಕ್ಕಗಳನ್ನು ಬರೆದು ಇನ್ನು ಇಪ್ಪತ್ತು ರೂಪಾಯಿಗಳನ್ನು ಸಂಪಾದಿಸಿಕೊಳ್ಳುತ್ತಿದ್ದನು. ಮೂರು ನಾಲ್ಕು ದಿನಗಳ ವರೆಗೆ ಅವನು ಆಫೀಸಿಗೆ ಹೋಗಲೇ ಇಲ್ಲ. ಇಲ್ಲಿಯೇ ಇದ್ದುಕೊಂಡಿದ್ದನು. ಏಕೆ ಬಲ್ಲಿರಾ? ನಾನು ಆರಿಗಾದರೂ ಹೇಳಿ, ಅವನಿಗೆ ಎಲ್ಲಿಯಾದರೂ ಒಂದು ಕೆಲಸವನ್ನು ಮಾಡಿಸಿಕೊಡಬೇಕೆಂಬುದೀಗ, ಅವನ ಸಂಧಾನ.

ಬಲರಾಮನ ವಂಶವು ಪರಮವೈಷ್ಣವ ವಂಶ; ಅವನ ತಂದೆಯು ವೃದ್ಧನಾಗಿದ್ದಾನೆ, ಆತನು ಪರಮವೈಷ್ಣವನು. ಅವನ ತಲೆಯಲ್ಲಿ ಶಿಖೆಯುದೆ. ಕೊರಳೊಳಗೆ ತುಲಸಿಯ ಸರ; ಕಯ್ಯಲ್ಲಿ ಹರಿನಾಮದ ಮಾಲೆಯನ್ನು ಇಟ್ಟುಕೊಂಡು ಆತನು ಸದಾ ಜಪವನ್ನು ಮಾಡುತ್ತಾನೆ. ಅವರಿಗೆ ಒರಿಸ್ಸಾದಲ್ಲಿ ತುಂಬಾ ಜಮೀನುಗಳಿವೆ. ಕೊಟಾರದಲ್ಲಿಯೂ, ವೃಂದಾವನದಲ್ಲಿಯೂ, ಇತರ ಅನೇಕಸ್ಥಲಗಳಲ್ಲಿಯೂ, ಶ್ರೀರಾಧಾಕಾಂತನ ವಿಗ್ರಹವನ್ನು ಇಟ್ಟು ದೇವಾಲಯಗಳನ್ನು ಕಟ್ಟಿ ಪೂಜೆ ಮಾಡಿಸುತ್ತಾರೆ. ಆ ಸ್ಥಲಗಳಲ್ಲಿ ಅವರು ಅತಿಥಿಶಾಲೆಗಳನ್ನೂ ಇಟ್ಟಿದ್ದಾರೆ. ಬಲರಾಮನು ಹೊಸದಾಗಿ ಬಂದಿದ್ದಾನೆ. ಭಗವಾನರು ಅವನೊಡನೆ ಮಾತನಾಡುವ ನೆಪದಿಂದ ಅವನಿಗೆ ನಾನಾ ಉಪದೇಶಗಳನ್ನು ಅನುಗ್ರಹಿಸುತ್ತಿದ್ದಾರೆ.

ಶ್ರೀರಾಮಕೃಷ್ಣ :—(ಬಲರಾಮನನ್ನು ನೋಡಿ) ಈಶ್ವರದರ್ಶನವು ಏಕೆ ಆಗುವುದಿಲ್ಲ? ಕಾಮಿನೀಕಾಂಚನಗಳು ಅಡ್ಡಲಾಗಿರುವುದರಿಂದಲ್ಲವೇ? ಆ ದಿವಸ ಆತನು ಬಂದಿದ್ದ, ಆ ಕರಿಮಾರಿ ಹೆಂಗುಸಿನ ಜೀತಗಾರ. ಅವನು ನಿನ್ನ ಇದಿರಿಗೆ, 'ನಮ್ಮ ತಂದೆಯ ಬಳಿಗೆ ಪರಮಹಂಸರೊಬ್ಬರು ಬಂದಿದ್ದರು. ನಮ್ಮ ತಂದೆಯು ಕೋಳಿಯನ್ನು ಬೇಯಿಸಿ ಅವರಿಗೆ ಊಟ ಮಾಡಿಸಿದರು', ಎಂದು ಹೇಳಿದನು. (ಬಲರಾಮನು ನಗುತ್ತಾನೆ.) ಈಗ ನನ್ನ ಅವಸ್ಥೆಯಲ್ಲಿ, ಭಗವತಿಯ ಪ್ರಸಾದವಾಗಿದ್ದರೆ, ಮೀನಿನ ಸಾರನ್ನು ಕೊಂಚ ತೆಗೆದುಕೊಳ್ಳುವುದಕ್ಕಾಗುತ್ತದೆ. ಮಾಂಸದ ಪ್ರಸಾದವನ್ನು ತೆಗೆದುಕೊಳ್ಳುವುದಕ್ಕೇ ಆಗುವುದಿಲ್ಲ. ಅದರಿಂದ ಮಾತೆಗೆ ಎಲ್ಲಿ ಕೋಪ ಬಂದೀತೋ ಎಂದು ಭಯಪಟ್ಟುಕೊಂಡು, ಅದನ್ನು ಸುಮ್ಮನೆ ಮುಟ್ಟಿ ಬೆರಲನ್ನು ನೆಕ್ಕುತ್ತೇನೆ. (ಎಲ್ಲರೂ ನಗುತ್ತಾರೆ.)

(ಹಿಂದಣ ಮಾತು. ವರ್ಧಮಾನದ ಹಾದಿಯಲ್ಲಿ ದೇಶಯಾತ್ರೆ.)
ನಕುಳಾಚಾರ್ಯರ ಗಾನಶ್ರವಣ.)

ಒಳ್ಳೆಯದು: ನನ್ನ ಈ ಅವಸ್ಥೆಯಾವುದು ? ಹೇಳು, ನೋಡೋಣ, ಆ *ದೇಶಕ್ಕೆ ಹೋಗುತ್ತ, ವರ್ಧಮಾನದ ಹತ್ತಿರ ಇಳಿದೆನು. ನಾನು ಎತ್ತಿನ ಬಂಡಿಯಲ್ಲಿ ಕುಳಿತಿದ್ದೆನು. ಆಗ ಬಿರುಗಾಳಿಯು ಬೀಸುತ್ತ, ಮಳೆಯು ಸುರಿಯುತ್ತಿದ್ದಿತು. ಬಂಡಿಯ ಜತೆಯಲ್ಲಿ ಆರೋ ಕೆಲವರು ಬರುತ್ತಿದ್ದರು. ಅವರು ಕಳ್ಳರೆಂದು ನನ್ನ ಸಂಗಡವಿದ್ದವರು ಹೇಳಿದರು. ಆಗ ನಾನು ಈಶ್ವರನ ನಾಮೋಚ್ಚಾರಣೆಯನ್ನು ಮಾಡ ತೊಡಗಿ, ಒಂದೊಂದು ಸಲ 'ರಾಮ, ರಾಮ' ಎನ್ನುತ್ತ, ಒಂದೊಂದು ಸಲ 'ಕಾಳೀ, ಕಾಳೀ' ಎನ್ನುತ್ತ, ಒಂದೊಂದು ವೇಳೆ, 'ಹನುಮಾನ್, ಹನುಮಾನ್' ಎನ್ನುತ್ತ, ಆ ನಾಮಗಳೆಲ್ಲವನ್ನೂ ಹೇಳಿದೆನು. ಅದೇಕೆ ಹೇಳು, ನೋಡೋಣ.

'ಈಶ್ವರನು ಒಬ್ಬನೇ, ಅವನಿಗೆ ಅಸಂಖ್ಯನಾಮಗಳಿವೆ. ಭಿನ್ನ ಧರ್ಮಾವಲಂಬಿಗಳೂ, ಸಂಪ್ರದಾಯಾವಲಂಬಿಗಳೂ, ಆದ ಜನರು ಸುಮ್ಮ ಸುಮ್ಮನೆ ಜಗಳವಾಡಿ ಸಾಯುತ್ತಾರೆ', ಎಂಬ ಅಭಿಪ್ರಾಯದಿಂದ ಭಗವಾನರು ಈ ಮಾತನ್ನು ಹೇಳಿದರೋ, ಎಂಬಂತಿದೆ.

ಶ್ರೀರಾಮಕೃಷ್ಣ :—(ಬಲರಾಮನನ್ನು ನೋಡಿ,) ಕಾಮಿನೀಕಾಂಚನಗಳೇ ಮಾಯೆ. ಪಾಯಖಾನೆಯನ್ನು ಗುಡಿಸುವವನು ಮಲದ ಗೂಡೆಯನ್ನು ಹೊರುತ್ತಾನೆ. ಹೊರುತ್ತ ಹೊರುತ್ತ, ಅವನಿಗೆ ಅದರಲ್ಲಿ ಅಸಹ್ಯವೇ ತೋರುವುದಿಲ್ಲ. ಹಾಗೆಯೇ ಕಾಮಿನೀಕಾಂಚನಗಳಲ್ಲಿ ಮನಸ್ಸು ಬಹು ದಿನಗಳಿದ್ದರೆ, ನಮಗೆ ಎಚ್ಚರಿಕೆಯು ತಪ್ಪಿ, ಅವೇ ಚೆನ್ನಾಗಿ ತೋರುತ್ತವೆ. ಭಗವಂತನ ನಾಮಗುಣಕೀರ್ತನೆಗಳನ್ನು ಮಾಡುವುದು ಪಾಟವಾದರೆ ಕ್ರಮಕ್ರಮವಾಗಿ ಭಕ್ತಿಯುಂಟಾಗುತ್ತದೆ. (ಮಾಸ್ಟರೊಡನೆ) ಈ ನಾಮ ಸಂಕೀರ್ತನಮಾಡುವುದಕ್ಕೆ ಸಂಕೋಚಪಟ್ಟುಕೊಳ್ಳಬಾರದು. ಲಜ್ಜೆ, ಅಸಹ್ಯ, ಭಯವೆಂಬ ಈ ಮೂರರಲ್ಲಿ ಆವುದು ಇದ್ದರೂ, ದೇವರು ನಮಗೆ ದೊರೆಯುವುದಿಲ್ಲ.

ಆ ದೇಶದಲ್ಲಿ ದಿವ್ಯವಾದ ಕೀರ್ತನೆಗಳಾಗುತ್ತವೆ. ಮದ್ದಳೆಯನ್ನು ಬಾಜಿಸುತ್ತ ಕೀರ್ತನೆಗಳನ್ನು ಹಾಡುತ್ತಾರೆ. ನಕುಳಾಚಾರ್ಯನ ಗಾನವು ಅತ್ಯಂತ ಚಮತ್ಕಾರಕಾರಿಯಾಗಿದೆ. ನಿಮಗೆ ವೃಂದಾವನದಲ್ಲಿ ಸೇವೆಯಿದೆಯೋ ?

ಬಲರಾಮ :—ಸ್ವಾಮೀ, ಇದೆ. ವೃಂದಾವನದಲ್ಲಿ ಒಂದು ಕುಂಜವಿದೆ. ಅಲ್ಲಿ ಶ್ಯಾಮ ಸುಂದರನ ಸೇವೆಯು ಆಗುತ್ತದೆ.

ಶ್ರೀರಾಮಕೃಷ್ಣ :—ನಾನು ವೃಂದಾವನಕ್ಕೆ ಹೋಗಿದ್ದೆನು. ನಿಧುವನವು ಒಳ್ಳೆಯ ಸ್ಥಾನ.

*ಭಗವಾನರು ತಮ್ಮೂರನ್ನು 'ಆದೇಶ'ವೆನ್ನುತ್ತಿದ್ದರು.

ಎಂಟನೆಯ ಖಂಡ

ಶ್ರೀಯುತ ಕೇಶವಸೇನನೊಡನೆ ನೌಕಾವಿಹಾರ

ಪ್ರಥಮಪರಿಚ್ಛೇದ

(ಭಗವಾನ್ ಶ್ರೀರಾಮಕೃಷ್ಣರ ಸಮಾಧಿ)

ಈ ದಿನ ಕೋಜಾಗರಲಕ್ಷ್ಮೀಪೂಜೆ, ೧೮೮೨ ನೆಯ ಕ್ರಿಸ್ತಾಬ್ದದ ಅಕಟೋಬರು ತಿಂಗಳ ೨೭ ನೆಯ ತೇದಿ ಶುಕ್ರವಾರ. ಭಗವಾನರು ದಕ್ಷಿಣೇಶ್ವರದ ಕಾಲೀಮಂದಿರದ ಪೂರ್ವಪರಿಚಿತವಾದ ಕೊಟ್ಟಡಿಯಲ್ಲಿ ಕುಳಿತು ವಿಜಯಗೋಸ್ವಾಮಿ, ಹರಲಾಲ ಮುಂತಾದವರ ಸಂಗಡ ಮಾತನಾಡುತ್ತಿದ್ದಾರೆ. ಆಗ ಅಲ್ಲಿಗೆ ಒಬ್ಬನು ಬಂದು ಭಗವಾನರೊಡನೆ, 'ಸ್ವಾಮೀ, ಕೇಶವಚಂದ್ರಸೇನನು ಜಹಜನ್ನು ತೆಗೆದುಕೊಂಡು ಬಂದು ಘಟ್ಟದಲ್ಲಿ ನಿಂತಿದ್ದಾನೆ,' ಎಂದು ಹೇಳಿದನು. ಕೇಶವಸೇನನ ಶಿಷ್ಯರು ಬಂದು ಭಗವಾನರಿಗೆ ಪ್ರಣಾಮವನ್ನು ಮಾಡಿ, 'ಸ್ವಾಮೀ, ಕೇಶವಸೇನರವರು ಜಹಜಿನಲ್ಲಿ ಬಂದಿದ್ದಾರೆ. ತಮ್ಮನ್ನು ಸಂಗಡ ಕರೆದುಕೊಂಡು ಬರುವಂತೆ ನಮಗೆ ಹೇಳಿದ್ದಾರೆ; ತಾವು ಹೊರಡೋಣವಾಗಲಿ, ಜಹಜಿನಲ್ಲಿ ಕೊಂಚ ತಿರುಗಾಡಿಕೊಂಡು ಬರಬಹುದು', ಎಂದು ವಿಜ್ಞಾಪಿಸಿದರು.

ಆಗ ಸಾಯಂಕಾಲ ನಾಲ್ಕು ಗಂಟೆ, ಭಗವಾನರು ಸಣ್ಣ ದೋಣಿಯಲ್ಲಿ ಕುಳಿತು, ಸ್ವಲ್ಪದೂರ ಹೋಗಿ, ಜಹಜನ್ನು ಏರಿದರು. ಸಂಗಡ ವಿಜಯನೂ ಇದ್ದನು. ಭಗವಾನರು ದೋಣಿಯನ್ನು ಏರಿದಾಗಲೇ ಬಾಹ್ಯಶೂನ್ಯರಾಗಿ ಸಮಾಧಿಸ್ಥರಾದರು.

ಮಾಸ್ಟರು, ಮೂರು ಗಂಟೆಯ ಸಮಯದಲ್ಲಿ ಜಹಜನ್ನು ಏರಿ, ಕೇಶವಸೇನನೊಡನೆ ಕಲಿಕತೆಯಿಂದ ಬಂದಿದ್ದನು. ಹಡಗಿನಿಂದಲೇ ಅವನು ಭಗವಾನರ ಸಮಾಧಿಸ್ಥಿತಿಯನ್ನು ನೋಡುತ್ತಿದ್ದಾನೆ. 'ಭಗವಾನರ ಮತ್ತು ಕೇಶವಸೇನನ ಸಮಾಗಮವನ್ನೂ, ಆನಂದಾತಿಶಯವನ್ನೂ ನೋಡಬೇಕು, ಅವರಿಬ್ಬರೂ ಮಾತನಾಡುವುದನ್ನು ಕೇಳಬೇಕು', ಎಂಬದಾಗಿ ಮಾಸ್ಟರಿಗೆ ತುಂಬ ಆಸೆ; ಕೇಶವನು ತನ್ನ ಸಾಧುಚರ್ಯೆಯಿಂದಲೂ, ವಕ್ತೃತಾಬಲದಿಂದಲೂ, ಮಾಸ್ಟರೇ ಮುಂತಾದ ಅನೇಕ ಬಂಗಾಳೀ ಯುವಕರ ಮನಸ್ಸನ್ನು ಅಪಹರಿಸಿದ್ದಾನೆ. ಅವನನ್ನು ಬಹುಜನರು ತಮ್ಮ ನಂಟನೆಂದೇ ಭಾವಿಸಿ ಪ್ರೀತಿಸುತ್ತಾರೆ. ಕೇಶವನು ಇಂಗ್ಲೀಷನ್ನು ಓದಿದವನು. ಇಂಗ್ಲೀಷಿನವರ ಸಾಹಿತ್ಯವನ್ನೂ, ತತ್ತ್ವಶಾಸ್ತ್ರವನ್ನೂ, ಚೆನ್ನಾಗಿ ಬಲ್ಲವನು. ಅವನು ದೇವದೇವಿಯರ

ಪ್ರತಿಮಾಪೂಜೆಯನ್ನು, ಬರಿಯ ಗೊಂಬೆಯ ಪೂಜೆಯೆಂಬದಾಗಿ ಎಷ್ಟೋಸಲ ಹೇಳಿದ್ದಾನೆ. ಅಂಥವನೂ ಶ್ರೀರಾಮಕೃಷ್ಣರಲ್ಲಿ ಶ್ರದ್ಧಾಭಕ್ತಿಗಳನ್ನು ಇಟ್ಟುಕೊಂಡು, ಅಡಿಗಡಿಗೆ ಅವರನ್ನು ನೋಡಲಿಕ್ಕೆ ಬರುತ್ತಾನೆ. ಅದು ಆಶ್ಚರ್ಯವಲ್ಲವೇ? 'ಅವರಿಬ್ಬರಿಗೂ ಹೇಗೆ ಸ್ನೇಹವಾಯಿತು!' ಎಂಬುದನ್ನು ತಿಳಿಯಬೇಕೆಂದು, ಮಾಸ್ಟರು, ಮುಂತಾದ ಹಲವರಿಗೆ ತುಂಬ ಕುತೂಹಲವಿದ್ದಿತು. ಭಗವಾನರು ನಿರಾಕಾರವಾದಿಗಳು, ಅವರು ಸಾಕಾರವಾದಿಗಳೂ ಅಹುದು. ಪರಬ್ರಹ್ಮನನ್ನೂ ಧ್ಯಾನಮಾಡುತ್ತಾರೆ. ದೇವದೇವಿಯರ ವಿಗ್ರಹಗಳ ಮುಂದೆ ಕುಳಿತು, ಪುಷ್ಪಚಂದನಾದಿಗಳನ್ನು ಅರ್ಪಿಸಿ ಪೂಜೆಮಾಡುತ್ತಾ, ಪ್ರೇಮೋನ್ಮತ್ತರಾಗಿ ನರ್ತಿಸುತ್ತ, ಗಾನವನ್ನೂ ಮಾಡುತ್ತಾರೆ. ಅವರು ಮಂಚದ ಮೇಲೆಯೂ, ಹಾಸಿಗೆಯ ಮೇಲೆಯೂ ಕುಳಿತಿರುತ್ತಾರೆ. ಕೆಂಪು ಅಂಚಿನ ಬಟ್ಟೆಯನ್ನು ಉಡುತ್ತಾರೆ. ಅಂಗಿಯನ್ನು ತೊಡುತ್ತಾರೆ. ಕಾಲಚೀಲ ಜೋಡುಗಳನ್ನು ಹಾಕಿಕೊಳ್ಳುತ್ತಾರೆ. ಆದರೂ ಸಂಸಾರಮಾಡುವುದಿಲ್ಲ. ಅವರ ಸಮಸ್ತಭಾವವೂ ಸನ್ಯಾಸಿಯಂತೆ ಇದೆ. ಅದರಿಂದಲೇ ಅವರನ್ನು ಎಲ್ಲರೂ ಪರಮಹಂಸರೆಂದು ಕರೆಯುತ್ತಾರೆ.

ಕೇಶವಸೇನನಾದರೋ ನಿರಾಕಾರವಾದಿ. ಅವನು ಹೆಂಡಿರೊಂದಿಗೂ ಮಕ್ಕಳೊಂದಿಗೂ ಸಂಸಾರಮಾಡುತ್ತಾನೆ. ಇಂಗ್ಲೀಷಿನಲ್ಲಿ ಲೆಕ್ಚರನ್ನು ಕೊಡುತ್ತಾನೆ. ಪತ್ರಿಕೆಗಳನ್ನು ಪ್ರಕಟಿಸುತ್ತಾನೆ. ವಿಷಯಸಂಬಂಧವಾದ ಕರ್ಮಗಳನ್ನು ಮಾಡುತ್ತಾನೆ.

ಕೇಶವಸೇನ ಮುಂತಾದ ಬ್ರಾಹ್ಮಭಕ್ತರೆಲ್ಲರೂ ಜಹಜಿನಿಂದಲೇ ಕಾಳಿಕಾದೇವಾಲಯದ ಸೌಂದರ್ಯವನ್ನು ನೋಡುತ್ತಿದ್ದಾರೆ. ಜಹಜಿನ ಪೂರ್ವಕ್ಕೆ, ಸಮೀಪದಲ್ಲಿಯೇ, ಇಳಿಯುವ ಘಟ್ಟವಿದೆ. ಘಟ್ಟದಿಂದ ಮೇಲಕ್ಕೆ ಏರಿಹೋಗುವುದಕ್ಕೆ ಪಾವಟಿಗೆಗಳಿವೆ. ಪಾವಟಿಗೆಗಳ ಮೇಲುಗಡೆ ಒಂದು ಮಂಟಪವಿದೆ. ಅದರ ಇಕ್ಕೆಲಗಳಲ್ಲಿಯೂ ಆರಾರು ಶಿವದೇವಾಲಯಗಳಿವೆ. ಶರತ್ಕಾಲದ ನೀಲವಾದ ಆಕಾಶವೆಂಬ ಪಟದಲ್ಲಿ ಭವತಾರಿಣೀಮಂದಿರದ ಗೋಪುರವೂ, ಪಂಚವಟಿಯ ಮತ್ತು ಸರ್ವೇ ಗಿಡಗಳ ತಲೆಗಳೂ ಕಾಣಬರುತ್ತಿವೆ. ವಕುಲವೃಕ್ಷದ ಬಳಿಯಲ್ಲಿಯೂ, ಕಾಲೀದೇವಾಲಯಕ್ಕೆ ದಕ್ಷಿಣದಲ್ಲಿಯೂ, ಒಂದೊಂದು ವಾದ್ಯಶಾಲೆಗಳಿವೆ. ಇವೆರಡರ ನಡುವೆ ಉದ್ಯಾನಪಥ. ಆ ಪಥದ ಎರಡು ಕಡೆಯಲ್ಲಿಯೂ ಹೂಗಿಡುಗಳು ಶೋಭಿಸುತ್ತಲಿವೆ.

ಶರತ್ಕಾಲದ ನೀಲವಾದ ಆಕಾಶವು ಗಂಗೆಯ ಜಲದಲ್ಲಿ ಪ್ರತಿಫಲಿಸಿದೆ. ಹೊರಗಣ ಪ್ರಪಂಚದಲ್ಲಿ ಕೋಮಲಭಾವವು ತೋರುತ್ತಲಿದೆ. ಬ್ರಾಹ್ಮಭಕ್ತರ ಹೃದಯಮಧ್ಯದಲ್ಲಿಯೂ ಕೋಮಲಭಾವವುಂಟಾಗಿದೆ. ತಲೆಯ ಮೇಲೆ ನೀಲವರ್ಣವಾದ ಪರಿಮಿತಿಯಿಲ್ಲದ ಆಕಾಶವು ಕಂಗೊಳಿಸುತ್ತದೆ. ಇದಿರಿಗೆ ಸುಂದರವಾದ ದೇವಾಲಯವು ಶೋಭಿಸುತ್ತಿದೆ. ಆವ ನದಿಯ ದಡದಲ್ಲಿ ಬಹುಮಂದಿ ಆರ್ಯಋಷಿಗಳು ಭಗವಂತ

ನನ್ನು ಕುರಿತು ತಪಸ್ಸನ್ನು ಮಾಡುತ್ತಿದ್ದರೋ, ಆ ಪವಿತ್ರಸಲಿಲೆಯಾದ ಗಂಗೆಯು ಕೆಳಗಡೆಯಲ್ಲಿ ಹರಿಯುತ್ತಿದೆ. ಮತ್ತು ಸನಾತನಧರ್ಮವೇ ಮೂರ್ತಿ ಮತ್ತಾಗಿ ಅವತರಿಸಿದೆಯೋ ಎಂಬಂತಿರುವ ಮಹಾಪುರುಷರೊಬ್ಬರು ಅಲ್ಲಿಗೆ ಬರುತ್ತಿದ್ದಾರೆ. ಅವರನ್ನು ದರ್ಶನಮಾಡುವ ಭಾಗ್ಯವು ಎಲ್ಲರ ಹಣೆಯಲ್ಲಿಯೂ ಬರೆದಿಲ್ಲ. ಇಂಥ ಸ್ಥಳದಲ್ಲಿರುವ ಸಮಾಧಿಸ್ಥನಾದ ಆ ಮಹಾಪುರುಷನಲ್ಲಿ, ಆರಿಗೆ ತಾನೇ ಭಕ್ತಿಯು ಉದ್ರೇಕವಾಗದಿದ್ದೀತು ? ಆವ ಕಲ್ಲೆದೆಯು ತಾನೇ ಕರಗದೆ ಇದ್ದೀತು ?

ದ್ವಿತೀಯ ಪರಿಚ್ಛೇದ

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ।

ಗೀತಾ, ೨–೨೨

[ಮನುಷ್ಯನು ಹರುಕು ಬಟ್ಟೆಗಳನ್ನು ಬಿಸುಟು, ಹೊಸ ಬಟ್ಟೆಗಳನ್ನು ಹೊದೆಯುವಂತೆ, ಆತ್ಮನು ಜೀರ್ಣವಾದ ದೇಹವನ್ನು ಬಿಟ್ಟು, ಹೊಸದಾದ ದೇಹಗಳನ್ನು ಪಡೆಯುತ್ತಾನೆ.]

(ಸಮಾಧಿ. ಆತ್ಮನು ಅವಿನಶ್ವರ. ಪವಾರಿಬಾಬ)

ದೋಣಿಯು ಬಂದಿತು. ಎಲ್ಲರೂ ಭಗವಾನ್ ಶ್ರೀರಾಮಕೃಷ್ಣರನ್ನು ನೋಡುವುದಕ್ಕಾಗಿ ಕಾತರರಾಗಿದ್ದರು. ನುಗ್ಗು ಹೆಚ್ಚು. ಭಗವಾನರಿಗೆ ಸ್ವಲ್ಪವೂ ತೊಂದರೆಯಾಗದಂತೆ ಅವರನ್ನು ದೋಣಿಯಿಂದ ಇಳಿಸುವುದಕ್ಕಾಗಿ, ಕೇಶವನು ಬಲು ಎಚ್ಚರಿಕೆಯಿಂದ ಇದ್ದನು. ಬಹಳ ಕಷ್ಟಪಟ್ಟು, ಅವರಿಗೆ ಜ್ಞಾನ ಬರುವಂತೆ ಮಾಡಿ, ಹಡಗಿನ ಕೊಟ್ಟಡಿಯೊಳಕ್ಕೆ ಕರೆದುಕೊಂಡು ಹೋದರು. ಅವರು ಇನ್ನೂ ಭಾವಸ್ಥರಾಗಿಯೇ ಇದ್ದರು. ಆದುದರಿಂದಲೇ, ಒಬ್ಬ ಭಕ್ತನ ಮೇಲೆ ಅವರು ತಮ್ಮ ಭಾರವನ್ನೆಲ್ಲಾ ಬಿಟ್ಟು, ಬರುತ್ತಾ ಇದ್ದಾರೆ. ಅವರ ಕಾಲು ಮಾತ್ರ ಸುಮ್ಮನೆ ನಡೆಯುತ್ತಿದೆ. ಅವರು ಕೊಟ್ಟಡಿಯೊಳಕ್ಕೆ ಪ್ರವೇಶಮಾಡಿದರು. ಕೇಶವಾದಿಭಕ್ತರು ಅವರಿಗೆ ನಮಸ್ಕಾರಮಾಡಿದರು. ಆದರೆ ಭಗವಾನರಿಗೆ ಬಾಹ್ಯಜ್ಞಾನವೇ ಇಲ್ಲ. ಕೊಟ್ಟಡಿಯೊಳಗೆ ಒಂದು ಮೇಜೂ, ಸುತ್ತಲೂ ಕುರ್ಚಿಗಳೂ, ಇದ್ದುವು. ಒಂದು ಕುರ್ಚಿಯಲ್ಲಿ ಭಗವಾನರನ್ನು ಕುಳ್ಳಿರಿಸಿದರು. ಇನ್ನೊಂದರಲ್ಲಿ ಕೇಶವನು ಕುಳಿತುಕೊಂಡನು. ವಿಜಯನೂ ಕುಳಿತನು. ಇತರಭಕ್ತರೂ, ತಮಗೆ ಅನುಕೂಲ

ವಾದಂತೆ ನೆಲದ ಮೇಲೆ ಕುಳಿತುಕೊಂಡರು. ಬಹಳ ಮಂದಿಗೆ ಸ್ಥಳವೇ ಸಿಕ್ಕ ಲಿಲ್ಲ. ಅವರು ಹೊರಗಿನಿಂದಲೇ ಇಣಿಕಿ ನೋಡುತ್ತಿದ್ದರು. ಕುಳಿತ ಮೇಲೆಯೂ, ಭಗವಾನರು ಸಮಾಧಿಸ್ಥರಾಗಿಯೇ ಇದ್ದರು. ಅವರಿಗೆ ಹೊರಗಿನ ಜ್ಞಾನವು ಸ್ವಲ್ಪವೂ ಇಲ್ಲ. ಎಲ್ಲರೂ ಒಂದೇ ದೃಷ್ಟಿಯಿಂದ ಅವರನ್ನೇ ನೋಡುತ್ತಿದ್ದಾರೆ. ಕೊಟ್ಟಡಿಯೊಳಗೆ ಬಹಳ ಮಂದಿ ಇರುವುದನ್ನು ಕಂಡು, ಕೇಶವನು ಭಗವಾನರಿಗೆ ಕಷ್ಟವಾಗುತ್ತದೆಂದು ತಿಳಿದು, ಕುರ್ಚಿಯಿಂದ ಎದ್ದು, ಕಿಟಕಿಗಳನ್ನೆಲ್ಲಾ ತೆರೆದನು. ವಿಜಯನು ಕೇಶವನ ಸಂಗಡವನ್ನು ಬಿಟ್ಟು, ಸಾಧಾರಣಬ್ರಹ್ಮಸಮಾಜದ ಭಕ್ತನಾಗಿ, ಕನ್ಯಾವಿವಾಹವೇ ಮೊದಲಾದ ಕಾರ್ಯಗಳಿಗೆ ವಿರುದ್ಧಗಳಾದ ಬಹಳ ಉಪನ್ಯಾಸ ಗಳನ್ನು ಕೊಟ್ಟಿದ್ದನು. ಆದುದರಿಂದ ವಿಜಯನನ್ನು ನೋಡಿ, ಕೇಶವನು ಸ್ವಲ್ಪ ಮನಸ್ಸಿಗೆ ಹೇಗೋ ಮಾಡಿಕೊಂಡನು.

ಬ್ರಾಹ್ಮಭಕ್ತರು ಒಂದೇ ದೃಷ್ಟಿಯಿಂದ ಭಗವಾನರನ್ನು ನೋಡುತ್ತಾ ಇದ್ದಾರೆ. ಭಗವಾನರಿಗೆ ಸಮಾಧಿಯು ಭಂಗವಾಯಿತು. ಇನ್ನೂ ಭಾವಾವಸ್ಥೆಯು ಪೂರ್ಣವಾಗಿಯೇ ಇದೆ. ಆಗ ಅವರು ತಮಗೆ ತಾವೇ ಅಸ್ಪಷ್ಟಸ್ವರದಿಂದ,‘ ತಾಯೇ ನನ್ನನ್ನು ಇಲ್ಲಿಗೆ ಏತಕ್ಕೆ ತಂದೆ? ಈ ಜೇಲಿಯೊಳಗೆ ಸಿಕ್ಕಿಕೊಂಡಿರುವ ಇವರನ್ನು ಬಿಡಿಸಿ ಕಾಪಿಡುವುದಕ್ಕೆ ನನ್ನಿಂದ ಆಗುತ್ತದೆಯೇ?’ ಎಂದು ಹೇಳಿದರು. ‘ಸಂಸಾರಿ ಗಳು ಜೇಲಿಯಲ್ಲಿ ಸಿಕ್ಕಿ ಬಿದ್ದಿದ್ದಾರೆ, ಅವರು ಹೊರಗೂ ಬರಲರಿಯರು, ಹೊರಗಿನ ಬೆಳಕನ್ನೂ ನೋಡಲರಿಯರು, ಅವರೆಲ್ಲರ ಕೈಕಾಲುಗಳೂ ವಿಷಯಕರ್ಮಗಳಿಂದ ಕಟ್ಟಲ್ಪಟ್ಟಿವೆ, ಅವರು, ಮನೆಯೊಳಗೆ ಇರುವ ವಸ್ತುಗಳನ್ನು ಮಾತ್ರ, ನೋಡ ಬಲ್ಲರು. ಕೇವಲ ದೇಹಸುಖವೂ, ವಿಷಯಕರ್ಮವೂ ಎಂದರೆ ಕಾಮಿನೀಕಾಂಚನ ಗಳು, ಜೀವನದ ಉದ್ದೇಶವೆಂದು ತಿಳಿದುಕೊಂಡಿದ್ದಾರೆ’, ಎಂದು ಭಗವಾನರು ಯೋಚಿಸುತ್ತಾರೆಯೋ ಎಂಬಂತೆ ಇದೆ. ಆದುದರಿಂದಲೇ ಅವರು, ‘ತಾಯೇ, ನನ್ನನ್ನು ಏತಕ್ಕೆ ಇಲ್ಲಿಗೆ ಕರೆದುಕೊಂಡು ಬಂದೆ, ಜೇಲಿಯೊಳಗೆ ಸಿಕ್ಕಿಬಿದ್ದಿರುವ ಇವರನ್ನು ಬಿಡಿಸಿ ಕಾಪಿಡುವುದಕ್ಕೆ ನನ್ನಿಂದ ಸಾಧ್ಯವೇ?’ ಎಂದು ಹೇಳಿದರೋ ಎಂಬಂತೆ ಇದೆ. ಭಗವಾನರಿಗೆ ಕ್ರಮವಾಗಿ ಬಾಹ್ಯಜ್ಞಾನವು ಬಂದಿತು. ಗಾಜೀಪುರದ ನೀಲಮಾಧವಬಾಬುವೂ, ಒಬ್ಬ ಬ್ರಾಹ್ಮಭಕ್ತನೂ, ಪವಾರಿಬಾಬಾವಿನ ಮಾತನ್ನು ಎತ್ತಿದರು.

ಬ್ರಾಹ್ಮಭಕ್ತ :—ಮಹಾಶಯರೇ, ಇವರೆಲ್ಲರೂ ಪವಾರಿಬಾಬಾವನ್ನು ನೋಡಿದ್ದಾರೆ. ಅವನು ಗಾಜೀಪುರದಲ್ಲಿದ್ದಾನೆ. ಅವನೂ ನಿಮ್ಮಂತೆ ಒಬ್ಬ ಮಹಾಪುರುಷನು.

ಭಗವಾನರಿಗೆ ಇನ್ನೂ ಮಾತನಾಡುವುದಕ್ಕೆ ಆಗುತ್ತಿರಲಿಲ್ಲ. ಅವರು ಸ್ವಲ್ಪ ನಕ್ಕರು.

ಬ್ರಾಹ್ಮಭಕ್ತ :—(ಭಗವಾನರೊಡನೆ) ಮಹಾಶಯರೇ, ಪವಾರಿಬಾಬನ ತನ್ನ ಕೊಟ್ಟಡಿಯಲ್ಲಿ ನಿಮ್ಮ ಫೋಟೋವನ್ನು ಇಟ್ಟುಕೊಂಡಿದ್ದಾನೆ.

ಪರಮಹಂಸರು ಸ್ವಲ್ಪ ನಗುತ್ತಾ, ಬೆರಲುಗಳಿಂದ ತಮ್ಮನ್ನು ತೋರಿಸಿ ಕೊಂಡು 'ಈ ತಲೆದಿಂಬಿನ ಚೀಲದ ಫೋಟೋವನ್ನೋ?', ಎಂದು ಕೇಳಿದರು.

ತೃತೀಯಪರಿಚ್ಛೇದ

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿಗಮ್ಯತೇ।
ಏಕಂ ಸಾಖ್ಯಂ ಚ ಯೋಗಂ ಚ ಯಃ ಪಶ್ಯತಿ ಸಪಶ್ಯತಿ॥ ಗೀತಾ ೫–೫೫

[ಜ್ಞಾನಯೋಗನಿಷ್ಠರು ಆವ ಮೋಕ್ಷರೂಪವಾದ ಸ್ಥಾನವನ್ನು ಪಡೆಯುತ್ತಾರೆಯೋ, ಅದನ್ನೇ ಕರ್ಮಯೋಗನಿಷ್ಠರೂ ಪಡೆಯುತ್ತಾರೆ. ಜ್ಞಾನಯೋಗವೂ ಕರ್ಮಯೋಗವೂ ಒಂದೇ ಫಲವನ್ನು ಕೊಡುತ್ತವೆ, ಎಂದು ತಿಳಿಯುವುದೇ ಸರಿಯಾದ ತಿಳುವಳಿಕೆ.

(ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗಗಳ ಸಮನ್ವಯ.)

'ತಲೆದಿಂಬು ಅದರ ಚೀಲ ಎಂದರೆ, ದೇಹಿ ಮತ್ತು ದೇಹ; ಇವುಗಳಲ್ಲಿ ದೇಹವು ನಶ್ವರವಾದುದು, ನಿಲ್ಲತಕ್ಕುದಲ್ಲ. ದೇಹದ ಒಳಗೆ ಇರುವ ದೇಹಿಯು ಅವಿನಾಶಿಯು, ಬರಿಯ ದೇಹದ ಫೋಟೋವನ್ನು ತೆಗೆದು ಇಟ್ಟುಕೊಂಡುದರಿಂದ ಏನಾಗುತ್ತದೆ? ದೇಹವು ಅನಿತ್ಯವಾದ ವಸ್ತು, ಇದನ್ನು ಏತಕ್ಕಾಗಿ ಆದರಿಸಬೇಕು. ಈ ದೇಹಕ್ಕಿಂತ ಅತ್ಯಂತಶ್ರೇಷ್ಠನಾದ ಭಗವಂತನೇ ಅಂತರ್ಯಾಮಿಯಾಗಿ, ಮನುಷ್ಯರ ಹೃದಯಮಧ್ಯದಲ್ಲಿ ಪ್ರಕಾಶಿಸುತ್ತಿದ್ದಾನೆ. ಆತನನ್ನು ಪೂಜಿಸುವುದು ಉಚಿತ,' ಎಂದು ಭಗವಾನರು ಹೇಳುತ್ತಾರೆಯೋ ಎಂಬಂತೆ ಇದೆ. ಪರಮಹಂಸರು ಸ್ವಲ್ಪ ಪ್ರಕೃತಿಸ್ಥರಾದರು.

ಶ್ರೀರಾಮಕೃಷ್ಣ :—ಆದರೆ ಒಂದು ಮಾತಿದೆ. ಭಕ್ತರ ಹೃದಯವೇ ಭಗವಂತನ ಆವಾಸಸ್ಥಾನ, ಒಬ್ಬ ಜಮೀನದಾರನು ತನ್ನ ಜಮೀನಿನ ಎಲ್ಲಾ ಕಡೆಯಲ್ಲಿಯೂ ಇರಬಲ್ಲನು. ಆದರೆ ಅವನು ತನ್ನ ಕೂರುವ ಮನೆಯಲ್ಲಿ ಪ್ರಾಯಶಃ ಇರುತ್ತಾನೆ. ಹಾಗೆಯೇ ಭಗವಂತನು ಸರ್ವಭೂತಗಳಲ್ಲಿಯೂ ಇದ್ದಾನೆ. ಆದರೆ ಭಕ್ತರ ಹೃದಯದಲ್ಲ ವಿಶೇಷರೂಪವಾಗಿ ಇದ್ದಾನೆ. ಭಕ್ತರ ಹೃದಯವೇ ಭಗವಂತನ ಕೂರುವ ಮನೆ.(ಎಲ್ಲರೂ ಆನಂದಪಡುತ್ತಾರೆ.) ಈಶ್ವರನು ಒಬ್ಬನೇ. ಅವನಿಗೆ ಹೆಸರುಗಳು ಬೇರೆ ಬೇರೆ.

(ಜ್ಞಾನಿ, ಯೋಗಿ, ಭಕ್ತ.)

ಜ್ಞಾನಿಗಳು ಆವನನ್ನು ಬ್ರಹ್ಮನೆಂದು ಹೇಳುತ್ತಾರೆಯೋ. ಅವನನ್ನೇ ಯೋಗಿಗಳು ಆತ್ಮನೆಂದು ಹೇಳುತ್ತಾರೆ; ಭಕ್ತರು ಭಗವಂತನೆಂದು ಹೇಳುತ್ತಾರೆ.

ಬ್ರಾಹ್ಮಣನು ಒಬ್ಬನೇ, ಪೂಜೆಮಾಡುವಾಗ ಅವನನ್ನು ಪೂಜಾರಿಯೆನ್ನುತ್ತಾರೆ. ಅಡುಗೆಮಾಡುವಾಗ ಅಡುಗೆಯ ಬ್ರಾಹ್ಮಣನೆನ್ನುತ್ತಾರೆ. ಆವನು ಜ್ಞಾನಿಯೋ, ಎಂದರೆ ಜ್ಞಾನಯೋಗವನ್ನು ಆಶ್ರಯಿಸುತ್ತಾನೆಯೋ, ಅವನು, 'ಇದು ಬ್ರಹ್ಮನಲ್ಲ; ಅದು ಬ್ರಹ್ಮನಲ್ಲ,' ಎಂಬೀ ವಿಚಾರವನ್ನು ಮಾಡುತ್ತಾನೆ. ಜೀವಗಳೂ ಬ್ರಹ್ಮನಲ್ಲ, ಜಗತ್ತೂ ಬ್ರಹ್ಮನಲ್ಲ, ಎಂದು ವಿಚಾರ ಮಾಡುತ್ತ ಹೋದರೆ, ಆವಾಗ ಮನಸ್ಸು ಸ್ಥಿರವಾಗಿ ನಿಲ್ಲುತ್ತದೆಯೋ, ಮನಸ್ಸಿಗೆ ಲಯವುಂಟಾಗುತ್ತದೆಯೋ, ಸಮಾಧಿಯಾಗುತ್ತದೆಯೋ, ಆಗ ಬ್ರಹ್ಮಜ್ಞಾನವು ಉಂಟಾಗುತ್ತದೆ. 'ಬ್ರಹ್ಮನೇ ಸತ್ಯ; ಜಗತ್ತು ಮಿಥ್ಯೆ; ನಾಮರೂಪಗಳೆಲ್ಲವೂ ಸ್ವಪ್ನದಂತೆ; ಬ್ರಹ್ಮನು ಏನು, ಎಂಬುದನ್ನು ಬಾಯಿಂದ ಹೇಳಲು ಆಗುವುದಿಲ್ಲ. ಅವನು ಒಂದು ವ್ಯಕ್ತಿಯೆಂದೂ ಹೇಳುವುದಕ್ಕೆ ಆಗುವುದಿಲ್ಲ', ಎಂದು ಬ್ರಹ್ಮಜ್ಞಾನಿಯು, ನಿಶ್ಚಯವಾಗಿಯೂ ತಿಳಿದುಕೊಂಡಿದ್ದಾನೆ.

ಜ್ಞಾನಿಗಳು ಹೇಳುವಂತೆಯೇ, ವೇದಾಂತವಾದಿಗಳೂ ಹೇಳುತ್ತಾರೆ ಭಕ್ತರಾದರೋ, 'ಎಲ್ಲಾ ಅವಸ್ಥೆಯೂ ನಿಜ, ಜಾಗ್ರದವಸ್ಥೆಯೂ ಸತ್ಯ,' ಎಂದು ಹೇಳುತ್ತಾರೆ. 'ಜಗತ್ತು ಸ್ವಪ್ನದಂತೆ,' ಎಂದು ಹೇಳುವುದಿಲ್ಲ. 'ಈ ಜಗತ್ತು ಭಗವಂತನ ಐಶ್ವರ್ಯ. ಆಕಾಶ, ನಕ್ಷತ್ರ, ಚಂದ್ರ, ಸೂರ್ಯ, ಪರ್ವತ, ಸಮುದ್ರ, ಜೀವಜಂತುಗಳು ಇವೇ ಮೊದಲಾದುವೆಲ್ಲವನ್ನೂ ಈಶ್ವರನೇ ಮಾಡಿದ್ದಾನೆ, ಇವೆಲ್ಲ ಅವನ ಐಶ್ವರ್ಯ, ಅವನೇ ಹೃದಯ ಮಧ್ಯದೊಳಗೆ ಒಳಗಡೆಯಲ್ಲಿ ಇದ್ದಾನೆ, ಹಾಗೆಯೇ ಹೊರಗೂ ಇದ್ದಾನೆ', ಎಂದು ಭಕ್ತರು ಹೇಳುತ್ತಾರೆ. ಉತ್ತಮಭಕ್ತನು, 'ಭಗವಂತನೇ ಸ್ವತಃ ಜೀವ, ಜಗತ್ತು ಮತ್ತು ಇಪ್ಪತ್ತು ನಾಲ್ಕು ತತ್ವಗಳೂ ಆಗಿದ್ದಾನೆ', ಎಂದು ಹೇಳುತ್ತಾನೆ. ಭಕ್ತರು ಸಕ್ಕರೆಯನ್ನು ತಿನ್ನುವುದಕ್ಕೆ ಅಪೇಕ್ಷಿಸುತ್ತಾರೆ, ಸಕ್ಕರೆಯಾಗುವುದಕ್ಕೆ ಅಪೇಕ್ಷಿಸುವುದಿಲ್ಲ. (ಎಲ್ಲರೂ ನಗುತ್ತಾರೆ.)

ಭಕ್ತರ ಭಾವವು ಆವ ರೀತಿಯಿದೆ, ಗೊತ್ತೋ? 'ಹೇ ಭಗವಂತ, ನೀನು ಪ್ರಭುವು, ನಾನು ನಿನ್ನ ದಾಸನು, ನೀನು ತಾಯಿ, ನಾನು ನಿನ್ನ ಮಗು, ನೀನೇ ನನ್ನ ತಾಯಿ ತಂದೆ. ನೀನು ಪೂರ್ಣನು. ನಾನು ನಿನ್ನ ಅಂಶವು,' ಎಂಬುದೇ ಅವರ ಭಾವ. 'ನಾನೇ ಬ್ರಹ್ಮ', ಎಂದು ಹೇಳುವುದಕ್ಕೆ ಭಕ್ತರು ಇಷ್ಟಪಡುವುದಿಲ್ಲ.

ಯೋಗಿಯು ಪರಮಾತ್ಮನನ್ನು ಸಾಕ್ಷಾತ್ಕರಿಸಬೇಕೆಂದು ಪ್ರಯತ್ನಪಡುತ್ತಾನೆ. ಜೀವಾತ್ಮಪರಮಾತ್ಮರ ಯೋಗವೇ ಅವನ ಉದ್ದೇಶ್ಯ. ಯೋಗಿಯು ವಿಷಯಗಳ ಕಡೆಯಿಂದ ಮನಸ್ಸನ್ನು ತಿರುಗಿಸಿ, ಪರಮಾತ್ಮನಲ್ಲಿಯೇ ಏಕಾಗ್ರತೆಯಿಂದ ಸ್ಥಿರವಾಗಿರಿಸುವುದಕ್ಕೆ ಪ್ರಯತ್ನಪಡುತ್ತಾನೆ. ಆದುದರಿಂದಲೇ ಮೊದಲು ಮೊದಲು ನಿರ್ಜನದಲ್ಲಿ, ಸ್ಥಿರವಾದ ಆಸನದಲ್ಲಿ ಕುಳಿತು, ಅನನ್ಯಮನಸ್ಕನಾಗಿ ಧ್ಯಾನವನ್ನು ಮಾಡುತ್ತಾನೆ.

ಆದರೆ ವಸ್ತುವೇನೋ ಒಂದೇ. ಹೆಸರು ಮಾತ್ರ ಬೇರೆ ಬೇರೆ. ಆವನು ಬ್ರಹ್ಮನೋ, ಅವನೇ ಆತ್ಮನು, ಅವನೇ ಭಗವಂತನು; ಅವನೇ ಬ್ರಹ್ಮಜ್ಞಾನಿಗಳ ಬ್ರಹ್ಮನು, ಯೋಗಿಗಳ ಪರಮಾತ್ಮನು, ಭಕ್ತರ ಭಗವಂತನು.

ಚತುರ್ಥ ಪರಿಚ್ಛೇದ

ತ್ವಮೇವ ಸೂಕ್ಷ್ಮಾ ತ್ವಂ ಸ್ಥೂಲಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ನಿರಾಕಾರಾಪಿ ಸಾಕಾರಾ ಕಸ್ತ್ವಾಂ ವೇದಿತುಮರ್ಹತಿ ॥

ಮಹಾನಿರ್ವಾಣತಂತ್ರ, ಚತುರ್ಥೋಲ್ಲಾಸ. ಶ್ಲೋಕ ೧೫

[ನೀನು ಸೂಕ್ಷ್ಮಳು ಮತ್ತು ಸ್ಥೂಲಳು. ನಿನ್ನ ಸ್ವರೂಪವು ಒಂದು ವೇಳೆ ವ್ಯಕ್ತವಾಗಿದೆ, ಇನ್ನೊಂದು ವೇಳೆ ಅವ್ಯಕ್ತವಾಗಿದೆ. ನಿನಗೆ ಆಕಾರವಿಲ್ಲದಿದ್ದರೂ, ಒಂದೊಂದು ವೇಳೆ ನೀನು ಸಾಕಾರಳಾಗಿರುತ್ತೀಯೆ. ಆವನು ತಾನೇ ನಿನ್ನನ್ನು ತಿಳಿಯಲು ಅರ್ಹನಾಗುತ್ತಾನೆ?]

(ವೇದ ಮತ್ತು ತಂತ್ರಸಮನ್ವಯ. ಆದ್ಯಾಶಕ್ತಿಯ ಐಶ್ವರ್ಯ.)

ಇತ್ತ ಕಡೆ ಸ್ಟೀಮರು ದಕ್ಷಿಣೇಶ್ವರವನ್ನು ಬಿಟ್ಟಿತು. ಸುಂದರವಾದ ದೇವಾಲಯವು ಕೊಂಚ ಕೊಂಚವಾಗಿ ಕಣ್ಣಿಗೆ ಮರೆಯಾಗುತ್ತ ಬಂದಿತು. ಸ್ಟೀಮರಿನ ಚಕ್ರದ ಹೊಡೆತದಿಂದ ಕಲಕಲ್ಪಟ್ಟ ಗಂಗೆಯ ನೀಲಜಲವು, ಅಲೆಗಳಿಂದಲೂ ನೊರೆಗಳಿಂದಲೂ ತುಂಬಿ, ಭೋರ್ಗರೆಯುತ್ತಿದ್ದಿತು. ಭಕ್ತರ ಕಿವಿಗೆ ಆ ಕಲ್ಲೋಲನಾದವು ಕೇಳಲೇ ಇಲ್ಲ. ಅವರು ಮುಗ್ಧರಾಗಿ, ಹಾಸ್ಯವದನರಾದ, ಆನಂದಮಯರಾದ, ಪ್ರೇಮಾನುರಂಜಿತನಯನರಾದ, ಪ್ರಿಯದರ್ಶನರಾದ, ಅದ್ಭುತರಾದ, ಸರ್ವತ್ಯಾಗಿಗಳಾದ, ಪ್ರೇಮಪೂರ್ಣರಾದ, ವಿರಕ್ತರಾದ, ಯೋಗಿಗಳೊಬ್ಬರನ್ನು ನೋಡುತ್ತಿದ್ದಾರೆ. ಆ ಯೋಗಿಗಳಿಗೆ ಈಶ್ವರನು ಹೊರತು ಬೇರೆ ಆವುದೂ ತಿಳಿಯದು.

ಸ್ಟೀಮರು ಕಲಿಕತೆಗೆ ಅಭಿಮುಖವಾಗಿ ಹೋಗುತ್ತಿದೆ. ಕೊಟಡಿಯೊಳಗೆ ಶ್ರೀರಾಮಕೃಷ್ಣರ ದರ್ಶನವನ್ನು ಮಾಡಿ, ಅವರ ಅಮೃತಮಯವಾದ ಮಾತನ್ನು ಕೇಳುತ್ತಿದ್ದವರಿಗೆ, ಸ್ಟೀಮರು ನಡೆಯುತ್ತಿದೆಯೋ ಇಲ್ಲವೋ ಎಂಬುದೇ ಗೊತ್ತಾಗ ಲಿಲ್ಲ. ಭಗವಾನರ ವಚನಾಮೃತದಲ್ಲಿ ಭಕ್ತರ ಚಿತ್ತವು ಮಗ್ನವಾಗಿದ್ದಿತು. ದುಂಬಿಯು ಪುಷ್ಪದಲ್ಲಿ ಕುಳಿತುಕೊಂಡ ಮೇಲೆ [illegible] ಶಬ್ದವನ್ನು ಮಾಡುತ್ತದೆಯೇ ?

ಈ ಕಡೆ [illegible]ನರ ಮಾತು ನಡೆಯುತ್ತಿದೆ.

ಶ್ರೀ[illegible]:—'ಸೃಷ್ಟಿ, ಸ್ಥಿತಿ, ಪ್ರಳಯ, ಜೀವ ಜಗತ್ತು, ಇವೆಲ್ಲವೂ [illegible]ದೆಟವು. ವಿಚಾರಮಾಡಿದರೆ, ಇವೆಲ್ಲವೂ ಸ್ವಪ್ನದಂತೆ. ಬ್ರಹ್ಮನೇ ವಸ್ತು, ಮಿಕ್ಕವೆಲ್ಲವೂ ಅವಸ್ತು, ಶಕ್ತಿಯೂ ಸ್ವಪ್ನದಂತೆ ಅವಸ್ತು,' ಎಂದು ವೇದಾಂತವಾದಿಗಳಾದ ಬ್ರಹ್ಮಜ್ಞಾನಿಗಳು ಹೇಳುತ್ತಾರೆ.

ಆದರೆ ಸಾವಿರ ವಿಚಾರಮಾಡಿರಿ. ಸಮಾಧಿಸ್ಥನಾಗದಿದ್ದರೆ ಶಕ್ತಿಯ ಅಧಿಕಾರಕ್ಕೆ ಒಳಪಡದೆ ಇರುವುದಕ್ಕೇ ಆಗುವುದಿಲ್ಲ. 'ನಾನು ಧ್ಯಾನಮಾಡುತ್ತೇನೆ, ನಾನು ಚಿಂತೆಮಾಡುತ್ತೇನೆ,' ಎಂಬುದೆಲ್ಲವೂ ಶಕ್ತಿಯ ಅಧೀನದಲ್ಲಿಯೂ, ಶಕ್ತಿಯ ಐಶ್ವರ್ಯದ ಮಧ್ಯದಲ್ಲಿಯೂ ಇವೆ.

ಆದುದರಿಂದಲೇ ಬ್ರಹ್ಮನಿಗೂ ಶಕ್ತಿಗೂ ಭೇದವಿಲ್ಲ, ಒಂದನ್ನು ನಂಬಿದರೆ ಮತ್ತೊಂದನ್ನು ನಂಬಲೇಬೇಕು. ಬೆಂಕಿಯನ್ನು ಒಪ್ಪಿಕೊಂಡರೆ, ಅದರ ಸುಡುವ ಶಕ್ತಿಯನ್ನೂ ಒಪ್ಪಿಕೊಳ್ಳಬೇಕು. ಸುಡುವ ಶಕ್ತಿಯನ್ನು ಬಿಟ್ಟರೆ, ಬೆಂಕಿಯೇನೆಂದು ತಿಳಿಯುವುದಕ್ಕೆ ಆಗುವುದಿಲ್ಲ. ಬೆಂಕಿಯಿಲ್ಲದಿದ್ದರೆ ಸುಡುವ ಶಕ್ತಿಯನ್ನು ಯೋಚಿಸುವುದಕ್ಕೆ ಆಗುವುದಿಲ್ಲ. ಸೂರ್ಯನನ್ನು ಬಿಟ್ಟರೆ ಅವನ ರಶ್ಮಿಯನ್ನು ಯೋಚಿಸುವುದಕ್ಕೆ ಆದೀತೇ? ಸೂರ್ಯರಶ್ಮಿಯನ್ನು ಬಿಟ್ಟು, ಸೂರ್ಯನನ್ನು ಯೋಚಿಸುವುದಕ್ಕೆ ಆಗುವುದಿಲ್ಲ.

ಹಾಲು ಹೇಗೆ ಇದೆ? ಬಿಳುಪಾಗಿಲ್ಲವೇ? ಹಾಲನ್ನು ಬಿಟ್ಟು ಅದರ ಬಿಳುಪನ್ನು ಮಾತ್ರ ಭಾವಿಸುವುದಕ್ಕೆ ಆಗುತ್ತದೆಯೇ? ಬಿಳುಪನ್ನು ಬಿಟ್ಟು ಹಾಲನ್ನು ಭಾವಿಸುವುದಕ್ಕೆ ಆದೀತೇ? ಹಾಗೆಯೇ ಬ್ರಹ್ಮನನ್ನು ಬಿಟ್ಟು ಶಕ್ತಿಯನ್ನೂ, ಶಕ್ತಿಯನ್ನು ಬಿಟ್ಟು ಬ್ರಹ್ಮನನ್ನೂ ಭಾವಿಸುವುದಕ್ಕೆ ಆಗುವುದಿಲ್ಲ. ನಿತ್ಯ ವನ್ನು ಬಿಟ್ಟು ಲೀಲೆಯನ್ನೂ, ಲೀಲೆಯನ್ನು ಬಿಟ್ಟು ನಿತ್ಯವನ್ನೂ, ತಿಳಿಯುವುದಕ್ಕೆ ಆಗುವುದಿಲ್ಲ. ಆದ್ಯಾಶಕ್ತಿಯು ಲೀಲಾಮಯಿ. ಅವಳು ಸೃಷ್ಟಿಸ್ಥಿತಿಪ್ರಳಯಗಳನ್ನು ಮಾಡುತ್ತಾಳೆ. ಅವಳ ಹೆಸರೇ ಕಾಳಿ. ಕಾಳಿಯೇ ಬ್ರಹ್ಮನು, ಬ್ರಹ್ಮನೇ ಕಾಳಿಯು, ವಸ್ತುವು ಒಂದೇ, ಅದು ನಿಷ್ಕ್ರಿಯವಾಗಿದ್ದಾಗ, ಎಂದರೆ ಸೃಷ್ಟಿ ಸ್ಥಿತಿ ಪ್ರಳಯಗಳನ್ನು ಮಾಡುವುದಿಲ್ಲ

ವೆಂದು ಭಾವಿಸುವಾಗ, ಅದನ್ನು ಬ್ರಹ್ಮವೆಂದು ಹೇಳುತ್ತಾರೆ. ಅದು ಈ ಎಲ್ಲ ಕಾರ್ಯಗಳನ್ನೂ ಮಾಡುವಾಗ, ಅದಕ್ಕೆ ಕಾಳೀ ಎಂದೂ, ಶಕ್ತಿ ಎಂದೂ ಹೇಳುತ್ತಾರೆ. ವ್ಯಕ್ತಿಯೇನೋ ಒಂದೇ, ಆದರೆ ನಾಮ ರೂಪ ಗಳು ಬೇರೆ ಬೇರೆ.

ಒಂದು ಕೊಳಕ್ಕೆ ಮೂರು ನಾಲ್ಕು ಘಟ್ಟಗಳಿವೆ. ಒಂದು ಘಟ್ಟದಲ್ಲಿ ಹಿಂದು ಗಳು ನೀರನ್ನು ಕುಡಿಯುತ್ತಾರೆ. ಅವರು ಅದಕ್ಕೆ ‘[illegible]’ ಎಂದು ಹೇಳು ತ್ತಾರೆ. ಮತ್ತೊಂದು ಘಟ್ಟದಲ್ಲಿ ಮುಸಲ್ಮಾನರು ಕುಡಿಯುತ್ತಾರೆ. ಅವರು ಅದನ್ನು ‘ಪಾನಿ’ ಎಂದು ಕರೆಯುತ್ತಾರೆ. ಇನ್ನೊಂದು ಘಟ್ಟದಲ್ಲಿ ಇಂಗ್ಲೀಷಿನವರು ಕುಡಿಯುತ್ತಾರೆ. ಅವರು ‘ವಾಟರ್’ ಎಂದು ಹೇಳು ತ್ತಾರೆ. ಈ ಮೂವರು ಕುಡಿಯುವುದೂ ನೀರೇ, ಆದರೆ ಹೆಸರು ಮಾತ್ರ ಬೇರೆ ಬೇರೆ. ಹಾಗೆಯೇ ಭಗವಂತನನ್ನು ಕೆಲವರು ‘ಅಲ್ಲಾ,’ ಎಂದೂ, ಕೆಲವರು ‘ಗಾಡ್,’ ಎಂದೂ, ಕೆಲವರು ‘ಬ್ರಹ್ಮ’ ಎಂದೂ, ಕೆಲವರು ‘ಕಾಳೀ,’ ಎಂದೂ, ಕೆಲವರು, ‘ರಾಮ, ಹರಿ,’ ಎಂದೂ, ಕೆಲವರು ‘ಯೇಸುಕ್ರಿಸ್ತ’ ಎಂದೂ, ಕೆಲವರು ‘ದುರ್ಗಾ,’ ಎಂದೂ ಹೇಳುತ್ತಾರೆ.

ಕೇಶವನು ನಗುತ್ತಾ, ‘ಕಾಳಿಯು ಎಷ್ಟು ಭಾವದಲ್ಲಿ ಲೀಲೆಯನ್ನು ಮಾಡು ತ್ತಾಳೆ? ಅದನ್ನು ಒಂದಾವೃತ್ತಿ ಹೇಳಿರಿ’, ಎಂದು ಕೇಳಿದನು.

(ಮಹಾಕಾಳಿ ಮತ್ತು ಸೃಷ್ಟಿಪ್ರಕರಣ.)

ಶ್ರೀರಾಮಕೃಷ್ಣ :—(ನಗುತ್ತಾ), ಅವಳು ನಾನಾಭಾವದಲ್ಲಿ ತನ್ನ ಲೀಲೆ ಯನ್ನು ತೋರುತ್ತಾಳೆ. ಅವಳೇ ಮಹಾಕಾಳಿ, ನಿತ್ಯಕಾಳಿ, ಶ್ಮಶಾನ ಕಾಳಿ, ರಕ್ಷಾಕಾಳಿ, ಶ್ಯಾಮಾಕಾಳಿ; ಮಹಾಕಾಳಿ ನಿತ್ಯಕಾಳಿಗಳ ವಿಚಾ ರವು ತಂತ್ರದಲ್ಲಿ ಹೇಳಿದೆ. ಆವಾಗ ಸೃಷ್ಟಿಯಿಲ್ಲವೋ, ಚಂದ್ರಸೂರ್ಯ ಗ್ರಹ ಪೃಥ್ವಿಗಳು ಇರಲೇ ಇಲ್ಲವೋ, ನಿಬಿಡವಾದ ಅಂಧಕಾರವು ಮಾತ್ರ ಇದ್ದಿತೋ, ಆಗ, ನಿರಾಕಾರಳಾದ ಮಹಾಕಾಳಿಯು ಒಬ್ಬಳೇ ಮಹಾ ಕಾಲನೊಂದಿಗೆ ಪ್ರಕಾಶಿಸುತ್ತಾಳೆ.

ಶ್ಯಾಮಾಕಾಳಿಯು ಬಹಳ ಕೋಮಲಭಾವವುಳ್ಳವಳು. ಅವಳು ವರವನ್ನೂ ಅಭಯವನ್ನೂ ಕೊಡುತ್ತಾಳೆ. ಗೃಹಸ್ಥರು ಮನೆಗಳಲ್ಲಿ ಅವಳನ್ನು ಪೂಜಿ ಸುತ್ತಾರೆ.

ಮಾರಿಕೋಪದ್ರವವೂ, ದುರ್ಭಿಕ್ಷವೂ, ಭೂಕಂಪವೂ, ಅತಿವೃಷ್ಟಿ ಅನಾ ವೃಷ್ಟಿಗಳೂ ಉಂಟಾದಾಗ, ರಕ್ಷಾಕಾಳಿಯನ್ನು ಪೂಜಿಸಬೇಕು. ಶ್ಮಶಾನ ಕಾಳಿಯು ಸಂಹಾರಮೂರ್ತಿ. ಶವ, ನರಿ, ಡಾಕಿನೀ, ಯೋಗಿನೀ, ಇವು

... ಶ್ಮಶಾನದಲ್ಲಿರುತ್ತಾಳೆ. ಅವಳ ಮೈಯ್ಯೆಲ್ಲ ರಕ್ತಧಾರೆ. ಅವಳ ... ರುಂಡಮಾಲೆ, ಸೊಂಟದಲ್ಲಿ ಮನುಷ್ಯರ ಕೈಗಳ ... ಅವಾಗ ... ಗುತ್ತದೆಯೋ, ಆವಾಗ ಮಹಾ ... ರಲ್ಲಿಯೆ ... ಹಣಿಯು ಉಪಯೋಗಕರವಾದ ವಸ್ತು ... ರ ... ಯಲ್ಲಿ ಹೇ... ಇಡುತ್ತಾಳೆಯೋ ಹಾಗೆ, ತಾಯಿಯು ... ಳನ್ನೆಲ್ಲಾ ಕೂಡಿ ... ಇಡುತ್ತಾಳೆ. (ಕೇಶವನೇ ಮೊದಲಾದ ವ... ನಗುತ್ತಾರೆ...)

ಶ್ರೀ... :—(ನಗು...) ಅಹುದಯ್ಯಾ, ಗೃಹಿಣಿಯರು ಇಂಥ ಭಾಂಡವನ್ನು ಇಟ್ಟುಕೊಂಡಿರುತ್ತಾರೆ. ಅದರೊಳಗೆ ಸಮುದ್ರದ ನೊರೆ, ನೀಲೀ ಗುಳಿಗೆ, ಸೌತೆಯ ಬೀಜದ ಸಣ್ಣ ಪೊಟ್ಟಣ, ಕುಂಬಳ ಬೀಜದ ಪೊಟ್ಟಣ, ಬೂದುಗುಂಬಳ ಬೀಜದ ಪೊಟ್ಟಣ, ಸೋರೆಯ ಬೀಜದ ಪೊಟ್ಟಣ, ಇವೆಲ್ಲವನ್ನೂ ಇಡುತ್ತಾರೆ. ಆವಶ್ಯಕವಾದಾಗ ತಮಗೆ ಬೇಕಾದ ಬೀಜವನ್ನು ಹೊರಗೆ ತೆಗೆಯುತ್ತಾರೆ, ಬ್ರಹ್ಮಮಯಿಯಾದ ತಾಯಿಯು, ಸೃಷ್ಟಿಪ್ರಳಯಗಳಾದ ಮೇಲೆ ಈ ರೀತಿಯಾಗಿ ಸೃಷ್ಟಿಬೀಜಗಳೆಲ್ಲವನ್ನೂ ಕೂಡಿಸಿಡುತ್ತಾಳೆ. ಸೃಷ್ಟಿಯಾದ ಮೇಲೆ, ಆದ್ಯಾಶಕ್ತಿಯು ಜಗತ್ತಿನ ಒಳಗೇ ಇರುತ್ತಾಳೆ. ಜಗತ್ತನ್ನು ಹೆರುತ್ತಾಳೆ. ಜಗತ್ತಿನ ಮಧ್ಯದಲ್ಲಿಯೂ ಇರುತ್ತಾಳೆ. ಜೇಡರ ಹುಳು ಮತ್ತು ಅದರ ಬಲೆಯ ಮಾತು ವೇದದಲ್ಲಿದೆ. ಜೇಡರ ಹುಳುವು ಬಲೆಯನ್ನು ಹೆಣೆದು, ಅನಂತರ ತಾನೂ ಅದರ ಮಧ್ಯ ದಲ್ಲಿ ನಿಲ್ಲುತ್ತದೆ. ಹಾಗೆಯೇ, ಈಶ್ವರನು ಜಗತ್ತಿಗೆ ಆಧಾರನೂ ಅಹುದು; ಆಧೇಯನೂ ಅಹುದು.

(ಕಾಳಿಯೇ ಬ್ರಹ್ಮ. ಕಾಳಿಯು ನಿರ್ಗುಣೆ ಮತ್ತು ಸಗುಣೆ)

ಕಾಳಿ ಕಪ್ಪೋ? ದೂರದಲ್ಲಿ ನೋಡಿದರೆ ಅವಳು ಕಪ್ಪು, ಅವಳನ್ನು ತಿಳಿದ ಬಳಿಕ ಕಪ್ಪಲ್ಲ. ಆಕಾಶವು ದೂರದಿಂದ ನೋಡಿದರೆ, ನೀಲವಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡಿದರೆ ಅದಕ್ಕೆ ಆವ ವರ್ಣವೂ ಇಲ್ಲ. ಸಮುದ್ರದ ಜಲವು ದೂರದಿಂದ ನೀಲವಾಗಿ ಕಾಣುತ್ತದೆ. ಹತ್ತಿರಕ್ಕೆ ಕೊಂಡು ಹೋಗಿ, ಕಯ್ಯಲ್ಲಿ ತೆಗೆದು ನೋಡಿದರೆ, ಅದರಲ್ಲಿ ಆವ ವರ್ಣವೂ ಕಾಣುವುದಿಲ್ಲ.

ಹೀಗೆಂದು ಹೇಳುತ್ತ ಪ್ರೇಮೋನ್ಮತ್ತರಾಗಿ, ಶ್ರೀರಾಮಕೃಷ್ಣರವರು,

ಕಾಳಿ ಕರಿಯಳೇನೋ! ಮನುಜಾ। ಕಾಳಿ ಕರಿಯಳೇನೋ।
ಕಾಲರೂಪಿಯಾ। ಶಾಳಿವಸನೆ ಹೃತ್ಪದ್ಮ ನೀಲನೀರಜದೆ। ಥಾಳಿಪ ಮಾಳ್ಪಳು॥

ಎಂದು ಗಾನವನ್ನು ಮಾಡಿದರು.

ಪಂಚಮ ಪರಿಚ್ಛೇದ

ತ್ರಿಭಿರ್ಗುಣಮಯೈರ್ಭಾವೈ...
ಮೋಹಿತಂ ನಾಭಿಜಾನಾತಿ ಮ... ೭-೧೩

[ಸತ್ವರಜಸ್ತಮೋಗುಣಗಳ ಸ್ವಭಾವ...ಂದ ... ಜಗ... ...ಗೊಂಡಿದೆ. ಆದುದರಿಂದ ಈ ಗುಣಗಳಿಂದ ಬೇರೆಯಾಗಿ, ಸಾ...ನಾದ ... ಆರೂ ಅರಿಯಲಾರರು.]

(ಈ ಸಂಸಾರವೇಕೆ?)

ಶ್ರೀರಾಮಕೃಷ್ಣ —(ಕೇಶವಾದಿಗಳನ್ನು ಕುರಿತು) ಬಂಧನ ಮತ್ತು ಮುಕ್ತಿ, ಈ ಎರಡಕ್ಕೂ ಭಗವಂತನೇ ಕರ್ತನು. ಅವನ ಮಾಯೆಯಿಂದಲೇ ಸಂಸಾರಿಯಾದ ಜೀವನು ಕಾಮಿನೀಕಾಂಚನಗಳಿಂದ ಬದ್ಧನಾಗಿದ್ದಾನೆ, ಅವನ ಕೃಪೆಯಿಂದಲೇ ಮುಕ್ತನಾಗುತ್ತಾನೆ. ಭಗವಂತನೇ ಭವಬಂಧನವನ್ನು ಬಿಡಿಸುವವನು, ಭವಸಾಗರವನ್ನು ಹಾಯಿಸುವವನು, ಎಂದು ಹೇಳುತ್ತಾ, ಗಂಧರ್ವನಿಂದಿತಕಂಠದಿಂದ, ರಾಮಪ್ರಸಾದನ ಗಾನವನ್ನು ಹಾಡುತ್ತಿದ್ದಾರೆ.

(ಕಲ್ಲು ಸಕ್ಕರೆ ಕೊಳ್ಳಿರೋ' ಎಂಬಂತೆ)

ಮನುಜರೆಂಬುವ ಪಟವ। ಲೋಕವೆಂ। ದೆನಿಸುವ ಪೇಟೆಯಲಿ।
ಜನನಿ ಶ್ಯಾಮಲೆ ನೀ। ನನುದಿನವಾಡಿಸಿ। ಮನಬಂದವೊಲು ವಿಹ। ರಣವ ಮಾಡುತಲಿಹೆ॥ ಪ॥

ಆಸೆಯೆಂಬುವ ಗಾಳಿಯಿಂ। ಪಟಂಗಳ। ಲೇಸೆನೆ ಹಾರಿಸುತೆ
ಭಾಸುರಮಾಯಾ। ಪಾಶದಿಂ ಬಿಗಿವಿಡಿ। ದಾಸುಂದಮೆನಲಾ। ಕಾಶವೀಥಿಯಲೆಂಬ ॥೧॥

ಒಡಲ ಪಂಜರವೆಂಬುವೇ। ಪಟಂಗಳಿ। ಗೊಡಲು ಪಂಜರವಾಮದು
ಪಡೆದು ನೀಂ ಪ್ರಗುಣದಿ। ನೊಡಗೊಂಡ ಕಾರ್ಯಗ। ಳೊಡಲಿಗಲಂಕಾರ।
ವಡೆದುವಿನ್ನೇನೆಂಬೆ ॥೨॥

ವಿಷಯವೆಂಬುವ ಗಾಜಿನ। ಪುಡಿಯುಜ್ಜಿ। ಯೆಸಗೆ ದಾರ್ಢ್ಯವ ದಾರಕೆ।
ಹಸನಾದಿತರ ಪಟ। ವಿಸರಸೂತ್ರನ ಕಿತ್ತು। ದೆಸೆಗಿಡಿಸಲು ನೋಡಿ।
ನಸುನಗುತಿಹೆಯೆಂಬ॥ ॥೩॥

ತೆಂಕಣಗಾಳಿ ಬಂದು। ಪಟಂಗಳ। ಕಾಂಕೊಂಡು ಭವಸಿಂಧುವಿಂ।
ಶಂಕೆಯಿಲ್ಲದೆ ಮೂ। ಮಂಕಾಜಿಸುವುದೆಂದು। ಬಿಂಕವಿಲ್ಲದ ಪ್ರಸಾ। ದಾಂಕನೊರೆವನೀಗ॥೪॥

ಅವಳು ಲೀಲಾಮಯಿ. ಈ ಸಂಸಾರವು ಅವಳ ಲೀಲೆ. ಅವಳು ಇಚ್ಛಾಮಯಿ. ಆನಂದಮಯಿ. ಲಕ್ಷಜನಗಳಲ್ಲಿ ಆವನೋ ಒಬ್ಬನಿಗೆ ಮುಕ್ತಿಯನ್ನು ಕೊಡುತ್ತಾಳೆ.

[illegible] [illegible]ಯರೇ, ಅವಳು ಮನಸ್ಸುಮಾಡಿದರೆ ಎಲ್ಲರನ್ನೂ ಮು[illegible] [illegible]ಡಬಲ್ಲಳಲ್ಲವೇ? ಹಾಗಿದ್ದರೆ ಅವಳು ಸಂಸಾರದಲ್ಲಿ ನನ್ನ[illegible] [illegible]ದ್ಧರನ್ನಾಗಿ ಮಾಡಿಟ್ಟಿರುತ್ತಾಳೆ.

ಶ್ರೀರ[illegible]ರಲ್ಲಿಯೆ [illegible]ರನ್ನೂ ಇಟ್ಟುಕೊಂಡು ಆಟವಾಡುವ[illegible] [illegible]ಇಷ್ಟ. [illegible]ಣ್ಣ[illegible]ವ ಆಟದಲ್ಲಿ, ಮೊದಲು ಅಜ್ಜಿಯನ್ನು ವ[illegible]ವರು ಒ[illegible]ಕಾ[illegible]ವುದಿಲ್ಲ. ಎಲ್ಲರೂ ಮೊದಲೇ ಅಜ್ಜಿಯನ್ನು ಮ[illegible]ರೆ ಆಟವು [illegible]ಗೆ ಆಗುತ್ತದೆ? ಆಗ ಅಜ್ಜಿಗೆ ಸಂತೋಷವಾಗುವ[illegible]ಟವು ನಡೆಯ[illegible]ದರೇ, ಅವಳಿಗೆ ಸಂತೋಷ. ಆದುದರಿಂದಲೇ, 'ಹಸನಾದಿತರಪಟ| ಬಸರಸೂತ್ರವ ಕಿತ್ತು| ದೆಸೆಗಿಡಿಸಲು ನೋಡಿ| ನಸುನಗುತಿಹೆಯಂಬ', ಎಂದು ಗಾನದಲ್ಲಿ ಹೇಳಿದೆ. (ಎಲ್ಲರೂ ಸಂತೋಷಪಡುವರು) ಅವಳು, 'ಈಗ ನೀನು ಸಂಸಾರಮಾಡು,' ಎಂದು ಕಣ್ಣಿನಿಂದ ಸನ್ನೆಮಾಡಿ, ಮನಸ್ಸಿಗೆ ಹೇಳಿಕೊಟ್ಟಿದ್ದಾಳೆ. ಈ ಸಂಸಾರಮಾಡುವುದು ಮನಸ್ಸಿನ ತಪ್ಪೇ? ಪುನಃ ಅವಳು ಕೃಪೆಮಾಡಿ ಮನಸ್ಸನ್ನು ತಿರುಗಿಸಿ ಕೊಟ್ಟರೆ, ವಿಷಯಬುದ್ಧಿಯು ಹೋಗಿ ಮುಕ್ತಿಯಾಗುತ್ತದೆ. ಆಗ ಅವಳ ಪಾದಪದ್ಮದಲ್ಲಿ ಮನಸ್ಸು ನಿಲ್ಲುತ್ತದೆ.

ಭಗವಾನರು ಸಂಸಾರಿಗಳಂತೆ ತಾಯೊಡನೆ ಕೋಪಿಸಿಕೊಂಡು ಹಾಡುತ್ತಾರೆ.

ಗಾನ

('ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ' ಎಂಬಂತೆ)

ಮನೆಗೆ ಕಳ್ಳರು ನುಗ್ಗಿ ಸೂರೆಯನು ಮಾಡುವರು।
ಮನಕೆ ಸಂಕಟವಾಗುತಿಹುದು ತಾಯೆ ಪಲ್ಲವಿ

ಜನನಿ ನಾನೆಚ್ಚರಿಕೆಯಿಂದಿದ್ದು ನೀನೆನ್ನ।
ಮನದೊಳಗೆ ನೆಲಸಿರುವೆಯಾದೊಡಂ ಹೀಗೆ
ತನುವಿನಾ ಮನೆಗೀಗಳಾರು ಕಳ್ಳರು ಬಿದ್ದು।
ದಿನದಿನುಗುತಿಹ ಸುಗುಣವಸುವ ಕದಿಯುವರು ॥೧॥

ನಿನ್ನ ನಾಮವ ಹೊಗಳಬೇಕೆಂದು ಮನದೊಳಗೆ।
ಮುನ್ನವೇ ನಿಶ್ಚಯವ ಮಾಡಿರುವೆನು
ಎನ್ನ ಸಮಯದೊಳು ನೆನಪಿಗೆ ಬಾರದದು ನಿನ್ನ।
ಗನ್ನಗತಕವೆನುತ್ತಲೀಗಳಾನರಿದೆ ॥೨॥

ನೀನೆನಗೆ ಕೊಡಲಿಲ್ಲ ನಾನು ಕೊಳ್ಳಲುಮಿಲ್ಲ।
ವೇನನಾನುಣುವೆನಿನ್ನೇನನೀಯುವೆನು
ನೀನೆನಗೆ ಕೊಟ್ಟಿರಲು ನಿನ್ನ ಕೊಟ್ಟುದನೆಲ್ಲ।
ನಾನಿತ್ತು ನಿನ್ನ ಪೂಜಿಸುತಿದ್ದೆನು ॥೩॥

ಸುರಸವುಂ ಕುರಸವುಂ ಕೀರ್ತಿ[illegible]
ಧರಣಿಯೊಳವೆಲ್ಲ ದೇವಿಯೆ ನಿನ್ನವು
ಹಿರಿದೆನ್ನ ಮನದೊಳಗೆ ರಸಮುಕ್ಕುತಿರೆ ರಸೇ।
ಶ್ವರಿಯೇತಕದನು ಭಂಗಿಸುತಿ[illegible]ನೆ ಹೇಳು

ಚಿತ್ತವನು ನೀನಿತ್ತು ದೇವಿ ಕ[illegible]
ಮತ್ತಾಪ್ರಸಾದನನು ಭವದೆ ಬೀ[illegible]ಗೆ
ಇತ್ತ ಜಗದೊಳು ಸುಳ್ಳ ನಿಜವೆಂದು ಕುರಸವನೆ ?
ಮತ್ತೆ ಸುರಸವೆನುತ್ತ ನಲಿದಾಡುತಿಹನು

'ಅವಳ ಮಾಯೆಯಿಂದಲೇ ಅವಳನ್ನಾ ಮರೆತು ಜನ[illegible] ಸಂಸಾರಿಯಾಗುತ್ತಾನೆ. ಮನಸ್ಸನ್ನು ಕೆ[illegible]ಟ್ಟಿದ್ದೀಯೆ; ಅದರ ಜತೆಗೆ ಲೋಕಕ್ಕೆ ಅಂಟಿಕೊಂಡು ಬಾಳೆಂದು ಒಂದು ಗುಟ್ಟನ್ನೂ ಹೇಳಿ ಕೊಟ್ಟಿದ್ದೀಯೆ' ಎಂದು ಪ್ರಸಾದನು ಹೇಳಿದ್ದಾನೆ.

(ಕರ್ಮಯೋಗದ ಉಪದೇಶ, ಸಂಸಾರ ಮತ್ತು ನಿಷ್ಕಾಮಕರ್ಮ.)

ಬ್ರಾಹ್ಮಭಕ್ತ :—ಮಹಾಶಯರೇ, ಎಲ್ಲವನ್ನೂ ತ್ಯಾಗಮಾಡದಿದ್ದರೆ ಈಶ್ವರನನ್ನು ಪಡೆಯಲಾಗುವುದಿಲ್ಲವೋ ?

ಶ್ರೀರಾಮಕೃಷ್ಣ :—(ನಗುತ್ತಾ) ಹಾಗಲ್ಲವಪ್ಪ. ನೀವು ಎಲ್ಲವನ್ನೂ ಏತಕ್ಕೆ ತಾನೇ ತ್ಯಾಗಮಾಡಬೇಕು? ನೀವು ರಸದಲ್ಲಿದ್ದುಕೊಂಡು ಸುಖವಾಗಿದ್ದೀರಿ. ಕಲ್ಲು ಸಕ್ಕರೆಯೂ ಇದೆ, ಕಲ್ಮಷದಿಂದ ಕೂಡಿದ ಜೋನಿಯ ಬೆಲ್ಲವೂ ಇದೆ. ಎರಡೂ ರುಚಿಯಲ್ಲವೇ ? (ಎಲ್ಲರೂ ನಗುವರು.)

ನೀವು ಬಹಳ ಸುಖವಾಗಿಯೇ ಇದ್ದೀರಿ. ನಕ್ಷವೆಂಬ ಇಸ್ಪೀಟಾಟವು ನಿಮಗೆ ಗೊತ್ತೋ ? ಹೆಚ್ಚಾದ ಇಸ್ಪೀಟುಗಳನ್ನು ತೆಗೆದುಕೊಂಡು ಬೇಕಾದ ಲೆಕ್ಕಕ್ಕಿಂತ ಹೆಚ್ಚಾಗಿ ಗೆದ್ದು ನನ್ನ ಆಟವೇ ಮುಗಿದು ಹೋಗಿದೆ. ನೀವು ಇನ್ನೂ ಬುದ್ಧಿವಂತರು. ಕೆಲವರು, ಹತ್ತು ಲೆಕ್ಕ ಗೆದ್ದು ತೃಪ್ತರಾಗಿದ್ದೀರಿ. ಇನ್ನು ಕೆಲವರು ಆರು, ಇನ್ನು ಕೆಲವರು ಐದು; ಆಟಗಾರನಿಂದ ಇನ್ನೂ ಹೆಚ್ಚಾಗಿ ತೆಗೆದುಕೊಳ್ಳದೆ ನೀವು ಬುದ್ಧಿಶಾಲಿಗಳಾಗಿದ್ದೀರಿ. ಆದುದರಿಂದಲೇ ನಿಮ್ಮ ಆಟವು ನನ್ನದರ ಹಾಗೆ ಮುಗಿದು ಹೋಗಿಲ್ಲ. ನೀವು ಇನ್ನೂ ಆಡುತ್ತಲೇ ಇರಬಹುದು. ಇದು ಒಳ್ಳೆಯದು. (ಎಲ್ಲರೂ ನಗುವರು)

ನಿಶ್ಚಯವಾಗಿಯೂ ಹೇಳುತ್ತೇನೆ, ಕೇಳಿರಿ. ನೀವು ಸಂಸಾರಮಾಡಿಕೊಂಡಿರಿ, ಇದರಲ್ಲಿ ದೋಷವಿಲ್ಲ.. ಆದರೆ ಈಶ್ವರನಲ್ಲಿ ಮನಸ್ಸನ್ನು ಇಡಬೇಕು. ಹಾಗಿಲ್ಲದಿದ್ದರೆ ಏನೂ ಆಗುವುದಿಲ್ಲ. ಒಂದು ಕಯ್ಯಿಂದ ಕೆಲಸಮಾಡಿ, ಮತ್ತೊಂ

[illegible]ನ್ನು ಹಿಡಿದುಕೊಂಡು ನಿಲ್ಲಿರಿ. ಈ ಲೋಕದಲ್ಲಿ ನಿಮ್ಮ [illegible]ಮುಗಿದ ಮೇಲೆ, ಎರಡು ಕೈಗಳಿಂದಲೂ ಭಗವಂತನನ್ನು [illegible]ಕೊಳ್ಳಿರಿ.

ಮನಸ್ಸಿ[illegible]ರಲ್ಲಿಯೆ [illegible]ಂದಲೇ ಬದ್ಧ, ಮನಸ್ಸಿನಿಂದಲೇ ಮು[illegible]ಸ್ಸು [illegible]ವನ ಮಸೆಯ ಬಟ್ಟೆಯಂತೆ. ಕೆಂಪು ಬಣ್ಣ[illegible]ಯನ್ನು [illegible]ದರೆ ಕೆಂಪಾಗುತ್ತದೆ, ನೀಲಿಯಲ್ಲಿ ಅದ್ದಿದರೆ ನೀಲ[illegible]ದೆ, ಹ[illegible]ಲ್ಲಿ ಅದ್ದಿದರೆ ಹಸುರಾಗುತ್ತದೆ. ಆವ ರಂಗಿನಲ್ಲಿ [illegible] ರಂಗಾಗ[illegible]. ನೋಡಿರಿ, ಸ್ವಲ್ಪ ಇಂಗ್ಲೀಷ್ ಓದಿದರೆ ಬಾಯಲ್ಲಿ,'ಕೊಸ್‌ಪಿಸ್', ಎಂ[illegible] ಇಂಗ್ಲೀಷ್ ಮಾತುಗಳು ಹೊರಡುತ್ತವೆ. (ಎಲ್ಲರೂ ನಗುತ್ತಾರೆ.) ಕಾಲಿನಲ್ಲಿ ಬೂಟ್ಸು, ಶೀಟೀ ಹಾಕುವುದು, ಇದೆಲ್ಲವೂ ಇಂಗ್ಲೀಷ್ ದೇಶದವರಂತೆ ಬರುತ್ತದೆ. ಸಂಸ್ಕೃತವನ್ನು ಓದಿ ಪಂಡಿತನಾದರೆ ಶ್ಲೋಕಗಳನ್ನು ಬಾಯಲ್ಲಿ ಹೇಳುತ್ತಿರುವನು. ಕೆಟ್ಟವರ ಸಂಗಡ ಓಡಾಡುತ್ತಿದ್ದರೆ ಅವರಂತೆಯೇ ಮಾತು ಕಥೆಗಳನ್ನು ಆಡುತ್ತಾನೆ. ಚರ್ಯವೂ ಅವರಂತೆಯೇ ಆಗುತ್ತದೆ. ಅದೇ ಮನಸ್ಸನ್ನು ಭಕ್ತರ ಜತೆಗೆ ಇಟ್ಟರೆ, ಈಶ್ವರಚಿಂತೆ ಬರುತ್ತದೆ, ದೇವರ ಮಾತು ಮುಂತಾದುವು ನಡೆಯುತ್ತವೆ.

ಎಲ್ಲವೂ ಮನಸ್ಸಿನಿಂದಲೇ, ಒಂದು ಪಕ್ಕದಲ್ಲಿ ಹೆಂಡತಿಯೂ, ಮತ್ತೊಂದು ಪಕ್ಕದಲ್ಲಿ ಮಗುವೂ ಇದ್ದರೆ, ಹೆಂಡತಿಯನ್ನು ಒಂದು ಭಾವದಲ್ಲಿ ಆದರಿಸುತ್ತಾನೆ. ಮಗುವನ್ನು ಮತ್ತೊಂದು ಭಾವದಲ್ಲಿ ಆದರಿಸುತ್ತಾನೆ. ಆದರೆ ಮನಸ್ಸೇನೋ ಒಂದೇ.

ಆರನೆಯ ಪರಿಚ್ಛೇದ

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥

ಗೀತಾ ೧೮-೬೬

[ಎಲ್ಲ ಧರ್ಮಗಳನ್ನೂ ಬಿಟ್ಟು, ನನ್ನೊಬ್ಬನನ್ನೇ ರಕ್ಷಕನನ್ನಾಗಿ ಆಶ್ರಯಿಸು, ನಾನು ನಿನ್ನನ್ನು ಸಮಸ್ತ ಪಾಪಗಳಿಂದಲೂ ಬಿಡಿಸುತ್ತೇನೆ. ನೀನು ದುಃಖಪಡಬೇಡ]

(ಬ್ರಾಹ್ಮಸಮಾಜದವರಿಗೆ ಉಪದೇಶ. ...

ಬ್ರಾಹ್ಮಸಮಾಜ ಮತ್ತು ಪಾಪ ...

ಶ್ರೀರಾಮಕೃಷ್ಣ :—(ಬ್ರಾಹ್ಮ ಭಕ್ತರನು ... ಆದ ... ಂದಲೇ ಬದ್ಧ ಮನಸ್ಸಿನಿಂದಲೇ ಮುಕ್ತ ... ರದಲ್ಲಿದ್ದರೂ ಅರಣ್ಯದಲ್ಲಿದ್ದರೂ ನನ ... ಭಗವಂತ ಸಂತಾನ, ರಾಜಾಧಿರಾಜನ ಕುಮಾರ ... ನನಗೆ ... ನವೆಲ್ಲಿಯದು ಹಾವು ಕಚ್ಚಿದರೂ, ವಿಷವು ಇಲ್ಲ ... ದೃಢವ ... ಕೊಂಡಿದ್ದ ವಿಷವು ಹೋಗಿಯೇ ಬಿಡುವ ... ಅದರಂತೆ ... ಬದ್ಧನ ಮುಕ್ತ, ಎಂದು ದೃಢಭಾವದಿಂದ ಹೇಳುತ್ತಿದ್ದರೆ ಮುಕ್ತನೇ ಆಗುತ್ತಾನೆ

(ಪೂರ್ವ ವಿಷಯ, ಬೈಬಲ್ ಶ್ರವಣ, ಕೃಷ್ಣಕಿಶೋರನ ವಿಶ್ವಾಸ.)

ಶ್ರೀರಾಮಕೃಷ್ಣ :—ಕಿರಸ್ತಾನರ ಒಂದು ಪುಸ್ತಕವನ್ನು ಒಬ್ಬರು ತಂದರು ಓದಿ ಹೇಳೆಂದು ನಾನು ಹೇಳಿದೆನು. ಅದರಲ್ಲಿ ಬರಿಯ ಪಾಪ, ಪಾಪ, ಎಂ ಈ ಮಾತುಗಳೇ ಇದ್ದುವು. (ಕೇಶವನನ್ನು ಕುರಿತು,) 'ನಿಮ್ಮ ಬ್ರಹ್ಮಸಮಾ ಜದಲ್ಲಿಯೂ ಬರಿಯ ಪಾಪನೇ' ಆವ ಮನುಷ್ಯನು 'ನಾನು ಬದ್ಧ ನಾನು ಬದ್ಧ,' ಎಂದು ಬಾರಿಬಾರಿಗೂ ಹೇಳುವನೋ, ಆ ಮುಂಡೆಯ ಗಂಡನು ಬದ್ಧನೇ ಆಗುವನು. ಆವನು ಹಗಲೂ ಇರುಳೂ 'ನಾನು ಪಾಪಿ' ಎಂದು ಹೇಳಿಕೊಳ್ಳುತ್ತಾನೆಯೋ ಅವನು ಪಾಪಿಯೇ ಆಗುತ್ತಾನೆ.

ಏನು? ನಾನು ಅವನ ಹೆಸರನ್ನು ಕೂಗಿದ್ದೇನೆ. ನನ್ನಲ್ಲಿ ಇನ್ನು ಮೇಲೆ ಹೇ ತಾನೇ ಪಾಪವು ನಿಲ್ಲುವುದು ? ನನಗೆ ಪುನಃ ಪಾಪವು ಎಲ್ಲಿಯದು ? ನನ ಪುನಃ ಬಂಧನವೆಲ್ಲಿಯದು?' ಎಂಬೀ ವಿಶ್ವಾಸವನ್ನು ಭಗವಂತನ ನಾಮ ದಲ್ಲಿ ಇಡಬೇಕು. ಕೃಷ್ಣಕಿಶೋರನು ಹಿಂದು; ಸದಾಚಾರನಿಷ್ಠನಾ ಬ್ರಾಹ್ಮಣ, ಅವನು ಬೃಂದಾವನಕ್ಕೆ ಹೋದನು. ಒಂದು ದಿವಸ ತಿರು ಗಾಡುತ್ತಿರುವಾಗ ಆತನಿಗೆ ಬಾಯಾರಿಕೆಯಾಯಿತು. ಒಂದು ಬಾವಿಯ ಹತ್ತಿರಕ್ಕೆ ಹೋಗಿ ನೋಡಿದನು. ಅಲ್ಲಿ ಒಬ್ಬನು ನಿಂತಿದ್ದನು. ಆತನನ್ನು ನೋಡಿ, 'ನೀನು ಆವ ಜಾತಿ, ಒಂದು ಚೆಂಬು ನೀರನ್ನು ಕೊಡುವೆಯಾ?' ಎಂದು ಕೇಳಿದನು. ಅದಕ್ಕೆ ಅವನು, ' ಮಹಾಶಯರೇ, ನಾನು ಕೀಳುಜಾತಿ, ಮೋಚಿ', ಎಂದು ಹೇಳಿದನು. ' ನೀನು, 'ಶಿವ ಶಿವ' ಎಂದು ಹೇಳು, ಆ ಮೇಲೆ ನೀರನ್ನು ಎತ್ತಿಕೊಡು', ಎಂದು ಕೃಷ್ಣಕಿಶೋರನು ಅವನಿಗೆ ಹೇಳಿದನು.

ಭಗವಂತನ ಹೆಸರನ್ನು ಹೇಳಿದರೆ ಮನುಷ್ಯನ ದೇಹ, ಮನಸ್ಸು ಎಲ್ಲವೂ ಶುದ್ಧವಾಗುತ್ತದೆ. ಬರಿಯ ಪಾಪ, ನರಕ, ಎಂಬ ಮಾತುಗಳ

ಏತಕ್ಕೆ ?, ನಾನು ... ಪಾಪಕರ್ಮವನ್ನು ಮಾಡಿದ್ದರೂ, ಮುಂದೆ ಮಾಡುವುದಿಲ್ಲ,' ಎಂದು ... ಹೇಳು; ಭಗವಂತನ ನಾಮದಲ್ಲಿ ವಿಶ್ವಾಸಮಾಡು, ಎಂದು ಹೇಳಿ ... ನಿಂದ್ರ ...

ದುರ್ಗ ... ರಲ್ಲಿಯೆ ... ಜಾಯೆ ನಾನು ಸಾಯೆ।
ದುರ್ಗ ... ರ ದ್ವಾರೆಯ ... ಲಘ್ವಿಸುವೆ ಹೇಳು ತಾಯೆ॥

ಎಂದು ಗಾನ ... .

ನಾನು ... ಹತ್ತಿರ ... ಒಂದನ್ನೇ ಪ್ರಾರ್ಥಿಸುತ್ತಿದ್ದೆನು. ಪುಷ್ಪವನ್ನು ಕೈಯಲ್ಲಿ ... ಕೊಂಡು ತಾ ... ಪಾದಪದ್ಮದಲ್ಲಿ ಅರ್ಪಿಸುತ್ತ, 'ತಾಯೇ, ನಿನ್ನ ಪಾಪವನ್ನೂ ನೀನೇ ತೆಗೆದುಕೋ, ನಿನ್ನ ಪುಣ್ಯವನ್ನೂ ನೀನೇ ತೆಗೆದುಕೋ, ನನಗೆ ಶುದ್ಧವಾದ ಭಕ್ತಿಯನ್ನು ಕೊಡು. ನಿನ್ನ ಜ್ಞಾನವನ್ನೂ ತೆಗೆದುಕೋ, ಅಜ್ಞಾನವನ್ನೂ ತೆಗೆದುಕೋ, ನನಗೆ ಶುದ್ಧವಾದ ಭಕ್ತಿಯನ್ನು ಕೊಡು. ನಿನ್ನ ಶುಚಿಯನ್ನೂ ತೆಗೆದುಕೋ, ನಿನ್ನ ಅಶುಚಿಯನ್ನೂ ತೆಗೆದುಕೋ, ನನಗೆ ಶುದ್ಧವಾದ ಭಕ್ತಿಯನ್ನು ಕೊಡು. ನಿನ್ನ ಧರ್ಮವನ್ನೂ ತೆಗೆದುಕೋ, ನಿನ್ನ ಅಧರ್ಮವನ್ನೂ ತೆಗೆದುಕೋ, ನನಗೆ ಶುದ್ಧವಾದ ಭಕ್ತಿಯನ್ನು ಕೊಡು,' ಎಂದು ಹೇಳುತ್ತಿದ್ದೆನು. (ಬ್ರಾಹ್ಮಭಕ್ತರನ್ನು ಕುರಿತು) ರಾಮಪ್ರಸಾದನ ಒಂದು ಗಾನವನ್ನು ಕೇಳಿರಿ.

ಸಾಂಗತ್ಯ (' ಎಚ್ಚರಿಕೆ ಭಾಗ್ಯ ' ಎಂಬಂತೆ)

ತಿರುಗಾಡಿಕೊಂಡು ಬರುವ ಬಾರೆಲೆ ಚಿತ್ತ। ಭರದಿಂದ ನೀನೆನ್ನ ಕೂಡೆ॥
ಮೆರೆವ ಶ್ರೀಕಾಳೀಕಲ್ಪವೃಕ್ಷದ ಮೂಲ। ಪರಿಯಂತ ತಡಮಾಡಬೇಡ ॥೧॥

ನಿನ್ನ ಪ್ರವೃತ್ತಿ ನಿವೃತ್ತಿಗಳೆಂಬುವ। ಚೆನ್ನೆಯರಿಬ್ಬರ ಕೂಡಿ॥
ಮುನ್ನವಲ್ಲಿಗೆ ಹೋಗೆ ನಾಲುಕು ಫಲಗಳು। ಚೆನ್ನಿಗ ನಿನಗೆ ದೊರೆವುವು ॥೨॥

ನೀನು ನಿವೃತ್ತಿಸತಿಯುನೊಡಗೂಡೆಲೊ। ಸೂನು ವಿವೇಕನುದಿಪನು॥
ಏನೆಂಬೆನವನಿಂದಲೀಶ್ವರತತ್ವವ। ನೀನರಿಯುವೆ ಹಸನಾಗಿ ॥೩॥

ಶುಚಿಯುಶುಚಿಯರೆಂಬ ಸತಿಯರೊಡನೆ ನೀನು। ಕುಚಿತಬುದ್ಧಿಯು ಮಾಡದಂತೆ।
ರುಚಿಯಿಂದೆ ವರ್ತಿಸೆ ಶ್ಯಾಮಾಪದನಖ। ರುಚಿಯೊಳೋಲಾಡಲು ಬಹುದು ॥೪॥

ಭೂರಿಯವಿದ್ಯಾಹಂಕಾರಾಖ್ಯೆಯು। ಮೀರುವ ತಾಯಿತಂದೆಗಳ॥
ಜಾರಿಸು ಮೋಹದ ಸೆಳೆತಕ್ಕೆ ಶಾಂತಿಯಿಂ। ಬೂರುಗಂಬವ ಪಿಡಿ ಬೇಗ ॥೫॥

ಧರ್ಮಾಧರ್ಮಗಳೆಂಬ ಹೋತುಗಳೆರ। ಡಮ್ಮಿಗೆ ಬಿಗಿ ತೃಣಗಳಿಗೆ॥
ಹಮ್ಮಿಪರಿರುತಿರಲರಿವೆಂಬ ಕತ್ತಿಯಿಂ। ದೊಮ್ಮೆಯೆ ಖಂಡಿಸಿ ಬಿಸುಡು ॥೬॥

ದೂರದಿಂದಲೆ ನಿನ್ನ ಹಿರಿಯರಸಿಯ ಸುತ। ಮಾರರ್ಗೆ ಬುದ್ಧಿಯ ಕಲಿಸು॥
ಮೀರಿದೊಡವರನು ಮುಳುಗಿಸು ನೀಂ ಜ್ಞಾನ। ವಾರಿರಾಶಿಯ ಜಲದೊಳಗೆ ॥೭॥

ಈ ಪರಿಯಿಂದೆ ಕಾಲಪುರುಷನೆಡರು [illegible] ರ. [illegible]
ಹೇ ಪುತ್ರಿಯಿಲೆ ಮುಂದೆಯೆನ್ನ ಪಿತನ ರೂಪಿ। ನೀ [illegible] ಳೀ [illegible] ಲೊರೆಪ ॥[illegible]
ಆಗಳೆ ನೀನೆನ್ನ ಮನಕೆವರುವ ಮನ। ವಾ[illegible], ಆದ[illegible] ನೆನುತ॥
ರಾಗದಿಂ ರಾಮಪ್ರಸಾದನೊರೆ [illegible] ॥[illegible]

ಸಂಸಾರದಲ್ಲಿ ಈಶ್ವರಲಾಭ [illegible] ಆಗಿದ್ದಿತು. ಸಂಸಾರವು 'ಕನಸಿನ ತೆರೆ' ಎಂದು ಪ್ರಸ[illegible] ಕೆವ್ದಾ [illegible] ಂತನ ಪಾದ ಪದ್ಮದಲ್ಲಿ ಭಕ್ತಿಲಾಭವನ್ನು ಪಡೆ.

ಕಂದ॥ ಸಂತಸದಾಗರವೀ [illegible]
ಕಂ ತಿನ್ನುತೆ ಕುಡಿಯು [illegible] ! ಸಂತಸವ[illegible]ಪಂ॥
ಪಿಂತಣ ಜನಕಮುಸಾರಾ।
ಯುಂ ತಪವಂಗೆಯ್ದು ಯತಿಗೆ ಕೊರೆಯೆನಿಸಿದನೇ ॥೧॥
ಇಹಪರಕಾರ್ಯಂಗಳೊಳಾ।
ಮಹಿಯೊರೆಯುಂ ಲೋಕನಾಥನಂ ಸಾಧಿಸಿ ತಾ॥
ನಿಹದೊಳ್ ಸಂತಸದಿಂ ಪಾ
ತ್ರಹಸ್ತನೀಂಟುತ್ತೆ ದುಗ್ಧಮುಂ ಸೊಗವಡೆದಂ॥

(ಎಲ್ಲರೂ ನಗುವರು.)

(ಬ್ರಾಹ್ಮಸಮಾಜ ಮತ್ತು ಜನಕರಾಜ, ಗೃಹಸ್ಥರ ಉಪಾಯ, ನಿರ್ಜನಪ್ರದೇಶಕ್ಕೆ ಹೋಗುವುದು ಮತ್ತು ವಿವೇಕ)

ಆದರೆ ಜನಕರಾಜನ ಸ್ಥಿತಿಗೆ ಸುಮ್ಮನೆ ಒಂದು ನಿಮಿಷದಲ್ಲಿಯೇ ಏರುವುದಕ್ಕೆ ಆಗುವುದಿಲ್ಲ. ಜನಕರಾಜನು ನಿರ್ಜನಪ್ರದೇಶದಲ್ಲಿ ಬಹಳ ತಪಸ್ಸನ್ನು ಮಾಡುತ್ತಿದ್ದನು. ಸಂಸಾರದಲ್ಲಿ ಇದ್ದರೂ, ಒಂದೊಂದು ಸಲ ನಿರ್ಜನಪ್ರದೇಶದಲ್ಲಿ ವಾಸ ಮಾಡಬೇಕು. ಸಂಸಾರವನ್ನು ಬಿಟ್ಟು, ಒಬ್ಬನೇ ಹೋಗಿ, ಭಗವಂತನಿಗೋಸ್ಕರ ಮೂರು ದಿವಸ ಅಳುವುದು ಒಳ್ಳೆಯದು. ಕಡೆಯ ಪಕ್ಷ, ಒಂದು ದಿವಸವಾದರೂ ವಿರಾಮವನ್ನು ಮಾಡಿಕೊಂಡು, ನಿರ್ಜನಪ್ರದೇಶದಲ್ಲಿ ಭಗವಂತನ ಚಿಂತೆಮಾಡುವುದು ಒಳ್ಳೆಯದು. ಜನರು, ಹೆಂಡಿರು ಮಕ್ಕಳಿಗಾಗಿ, ಒಂದು ಗಡಿಗೆಯ ತುಂಬ ಕಣ್ಣೀರ ಸುರಿಸುತ್ತಾನೆ. ಭಗವಂತನಿಗಾಗಿ ಆರು ತಾನೇ ಅಳುತ್ತಾರೆ? ಹೇಳು. ಆರೂ ಇಲ್ಲದ ಪ್ರದೇಶದಲ್ಲಿ ಇದ್ದುಕೊಂಡು, ಭಗವಂತನನ್ನು ಪಡೆಯುವುದಕ್ಕೆ ಅಡಿಗಡಿಗೆ ಸಾಧನೆಯನ್ನು ಮಾಡಬೇಕು. ಸಂಸಾರಕರ್ಮಗಳ ನಡುವೆ ಇದ್ದುಕೊಂಡು, ಮೊದಲು ಮೊದಲು ಮನಸ್ಸನ್ನು ಸ್ಥಿರಪಡಿಸುವುದಕ್ಕೆ ಅನೇಕವಿಘ್ನಗಳು ಸಂಭವಿಸುತ್ತವೆ. ಹಾದಿಯ ಪಕ್ಕದ ಗಿಡವು ಎಳಸಾಗಿದ್ದಾಗ, ಸುತ್ತಲೂ ಬೇಲಿ ಹಾಕದಿದ್ದರೆ, ಆಡೂ ಹಸುಗಳೂ ಅದನ್ನು ತಿಂದು ಹಾಳುಮಾಡಿಬಿಡುತ್ತವೆ ಚಿಕ್ಕದಾಗಿದ್ದಾಗ

ನಂ ... ತ್ತ
ಬೇಲಿಹ, ... ದಪ್ಪನಾದಾಗ ಬೇಲಿಯ ಅವಶ್ಯಕವಿಲ್ಲ. ಆ ಬುಡಕ್ಕೆ ಆನೆಯ...ನ್ನು ಕಟ್ಟಿ ... ಅಪಾಯವಾಗುವುದಿಲ್ಲ.

...ಂಪು...
ಸಂನಿ... ...ರಲ್ಲಿಯೆ ... ರೋಗಿಯು ಇರುವ ಕೊಟ್ಟಡಿಯಲ್ಲಿ ನೀರಿನ ಬಿಂ... ...ರ ದ... ...ಲದ...ಪ್ಪಿನ ಕಾಯಿಯೂ ಇದೆ. ರೋಗಿಗೆ ಗುಣವಾಗಬೇ... ...ಪೇಕ್ಷೆ...ದ್ದರೆ, ಅವನನ್ನು ಆ ಕೊಟ್ಟಡಿಯಿಂದ ಬಿಡಿಸಿ ಬೇರೆ ಕಡೆಗೆ ... ...ಂಡು ...ೋಗಬೇಕು. ಸಂಸಾರಿಯೇ ಸನ್ನಿಪಾತರೋಗಿ. ವಿಷಯವೇ ... ...ಡಿ...ಡಿಗೆ. ವಿಷ...ವನ್ನು ಅನುಭವಿಸಬೇಕೆಂಬ ಅಪೇಕ್ಷೆಯೇ ನೀರಡಿಕೆ. ಹು...ಸೆ... ಕಾಯಿನ ಉ... ...ಕಾಯಿಯನ್ನು ಮನಸ್ಸಿನಲ್ಲಿ ನೆನಸಿಕೊಂಡ ರೇನೇ, ಬಾಯಲ್ಲಿ ನೀರು ಊರುತ್ತದೆ. ಹತ್ತಿರಕ್ಕೆ ತೆಗೆದುಕೊಂಡು ಬಂದರೆ, ಕೇಳ ಬೇಕಾದುದೇ ಇಲ್ಲ. ಇಂಥ ವಸ್ತುವೂ ಕೊಟ್ಟಡಿಯಲ್ಲಿ ಇದೆ. ಸ್ತ್ರೀ ಸಂಗವು ಹತ್ತಿರದ ಲ್ಲಿರುವ ಹುಣಿಸೆಯ ಉಪ್ಪಿನಕಾಯಿ. ಆದುದರಿಂದ ನಿರ್ಜನದಲ್ಲ ಚಿಕಿತ್ಸೆಮಾಡುವುದು ಅವಶ್ಯಕ.

ವಿವೇಕವೈರಾಗ್ಯಗಳನ್ನು ಪಡೆದ ಮೇಲೆ, ಸಂಸಾರಮಾಡಿದರೂ ಮಾಡಬಹುದು. ಸಂಸಾರವೆಂಬ ಸಮುದ್ರದಲ್ಲಿ, ಅರಿಷಡ್ವರ್ಗಗಳೆಂಬ ಮೊಸಳೆಗಳಿವೆ. ಅರಿಸಿನವನ್ನು ಮೈಗೆ ಬಳಿದುಕೊಂಡು ನೀರಿಗೆ ಇಳಿದರೆ ಮೊಸಳೆಗಳ ಭಯವಿಲ್ಲ. ವಿವೇಕ ವೈರಾಗ್ಯಗಳೇ ಅರಿಸಿನ. ಸದಸದ್ವಿಚಾರವೇ ವಿವೇಕ, ಈಶ್ವರನೇ ಸತ್, ನಿತ್ಯವಸ್ತು, ಉಳಿದುವೆಲ್ಲವೂ ಅಸತ್, ಅನಿತ್ಯವಸ್ತು, ಎರಡು ದಿವಸ ಇರತಕ್ಕುದು, ಎಂಬ ಈ ಜ್ಞಾನವೇ ವಿವೇಕ. ಮತ್ತು ಭಗವಂತನಲ್ಲಿ ಅನುರಾಗ, ಅವನ ಮೇಲೆ ಆಕರ್ಷಣ ಎಂದರೆ ಪ್ರೀತಿಯು ಇರಬೇಕು. ಗೋಪಿಯರಿಗೆ ಕೃಷ್ಣನ ಮೇಲೆ ಆವ ರೀತಿ ಆಕ ರ್ಷಣವಿದ್ದಿತು, ಎಂಬುದಕ್ಕೆ ಒಂದು ಹಾಡನ್ನು ಹೇಳುತ್ತೇನೆ, ಕೇಳಿರಿ.

(ಉಪಾಯ, ಈಶ್ವರನಲ್ಲಿ ಅನುರಾಗ, ಗೋಪಿಯರಂತೆ ಆಕರ್ಷಣ ಅಥವಾ ಸ್ನೇಹ)

॥ರಗಳೆ॥

ಬರುವೆಯೊ ಬಾರೆಯೊ ಹೇಳೆಲೆ ಸಖಿಯೇ।
ಇರಲರಿಯೆನು ನಾನೆಲೆ ವಿಧುಮುಖಿಯೇ ॥೧॥

ಪಳುವಿಂ ಕೇಳಿಪುದೂದುವ ಕೊಳಲು।
ಚೆಲುವಂ ಕಾದಿಹನೆನ್ನಂ ಕೊಳಲು ॥೨॥

ನಿಮಗಾತನ ನುಡಿಗಳೆ ಬರಿಗತೆಯು।
ನಮಗೆ ನೋಡಲವೆ ಹೃದಯವ್ಯಥೆಯು ॥೩॥

ಬರಿದೆ ಕೇಳುವಿರಿ ಕಿವಿಯೊಳು ನೀವು।
ಸ್ಫುರಿಪ ಹೃದಯದಿಂ ಕೇಳುವೆವಾವು ॥೪॥

ಕುಂಜವು ನೀನಿಲ್ಲದೆಯೆಲೆ [illegible]
ರಂಜಿಸುವುದೆ ಬಾರಂತೇಕಾದೆ [illegible]
ಎಂದು ಹೇಳುವುದು ಕೊಳಲಿನ ದನಿಯು। [illegible] ಆದ[illegible]
ಇಂದುವದನೆ ಬಾರೆಲೆ ರ[illegible]ನಿಯೆ [illegible]

ಭಗವಾನರು ಅಶ್ರುಪೂರ್ಣನಯ[illegible] ರಾಧಾಕೃಷ್ಣನನ್ನು ನಂಬಿದರ ಸಂಬಿರಿ, ಇಲ್ಲದಿದ್ದ[illegible] ಈ[illegible]ಕವು [illegible] ಮಾತ್ರ ಇಟ್ಟುಕೊಳ್ಳಿರಿ. ಭಗವಂತನಿಗಾಗಿ ಆವ ರೀತಿಯ[illegible]ದಾದ[illegible] ಇಂಥ [illegible]ತೆಯುಂಟಾಗುವ ಹಾಗೆ ಪ್ರಯತ್ನಪಡಿರಿ. ವ್ಯಾಕುಲತೆಯ[illegible] ನಂತರೇನೆ [illegible]ನ್ನು ಪಡೆಯಬಹುದು', ಎಂದು ಕೇಶವಾದಿಭಕ್ತರಿಗೆ ಹೇಳಿ[illegible].

ಸಪ್ತಮ ಪರಿಚ್ಛೇದ

ಸನ್ನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇರತಾಃ॥ ಗೀತಾ ೧೨—೪

[ಇಂದ್ರಿಯಸಮುದಾಯವನ್ನು ನಿಗ್ರಹಿಸಿ, ಎಲ್ಲವುಗಳಲ್ಲಿಯೂ ಏಕರೂಪವಾದ ಬುದ್ಧಿಯುಳ್ಳವರು, ಎಲ್ಲ ಪ್ರಾಣಿಗಳ ಹಿತದಲ್ಲಿಯೂ ಆಸಕ್ತರಾಗಿ, ನನ್ನನ್ನೇ ಪಡೆಯುತ್ತಾರೆ.]

ನದಿಯು ಇಳಿಯುತ್ತಾ ಬಂದಿದೆ. ಜಹಜು ಕಲಿಕತೆಯ ಕಡೆಗೆ ವೇಗವಾಗಿ ಹೋಗುತ್ತಲಿದೆ. ಸೇತುವನ್ನು ದಾಟಿ, ಕಂಪೆನಿಯ ತೋಟದ ಕಡೆ ಸ್ವಲ್ಪ ತಿರುಗಾಡಿಕೊಂಡು ಬರಬೇಕೆಂದು, ನಾವಿಕರ ಯಜಮಾನನಿಗೆ ಅಪ್ಪಣೆಯಾಗಿದೆ. ಜಹಜು ಮುಂದಕ್ಕೆ ಎಷ್ಟು ಸರಿಯಿತೆಂಬುದೇ ಅನೇಕರಿಗೆ ತಿಳಿಯಲಿಲ್ಲ. ಅವರು ಮಗ್ನರಾಗಿ ಶ್ರೀರಾಮಕೃಷ್ಣರ ಮಾತನ್ನು ಕೇಳುತ್ತಿದ್ದಾರೆ. ಹೇಗೆ ಹೊತ್ತು ಕಳೆದು ಹೋಯಿತೆಂಬುದೂ ಗೊತ್ತಾಗಲಿಲ್ಲ.

ಈಗ ಎಲ್ಲರೂ ಅವರವರ ಬಟ್ಟೆಯ ಸೆರಗಿನಲ್ಲಿ ತೆಂಗಿನ ಕಾಯನ್ನೂ ಬುರಗಲನ್ನೂ ಇಟ್ಟುಕೊಂಡು ತಿನ್ನುತ್ತಿದ್ದಾರೆ. ಆನಂದದ ಸಂತೆ. ಕೇಶವನು ಬುರಗಲನ್ನು ತರಿಸಿ ಎಲ್ಲರಿಗೂ ಕೊಟ್ಟಿದ್ದಾನೆ. ಈ ಸಮಯದಲ್ಲಿ ವಿಜಯನೂ ಕೇಶವನೂ ಸಂಕುಚಿತಭಾವನಿಂದ ಕುಳಿತಿರುವುದನ್ನು ಭಗವಾನರು ನೋಡಿದರು. ಆಗ ಏನೂ ತಿಳಿಯದ ಈ ಎರಡು ಮಕ್ಕಳನ್ನು ಸ್ನೇಹಮಾಡಿಸುವುದಕ್ಕೆ ಯತ್ನಿಸುತ್ತಾರೆ. ಅವರು ಸರ್ವಭೂತಗಳ ಹಿತದಲ್ಲಿಯೂ ನಿರತರಲ್ಲವೇ?

[illegible] ವನನ್ನು ಕುರಿತು) ಅಯ್ಯಾ ಸ್ನೇಹಿತನೇ, ಇಗೋ ನೋ[illegible] ನೋ[illegible] ನು ಬಂದಿದ್ದಾನೆ. ನಿಮ್ಮ ಜಗಳವು ಶಿವ ಮತ್ತು ರಾ[illegible] ಸಂಪ್ರ[illegible] ತೆ. (ನಗುವರು). ರಾಮನ ಗುರು ಶಿವ. ಇ[illegible] ರಲ್ಲಿಯೆ [illegible], ಪುನಃ ಸ್ನೇಹವೂ ಆಯಿತು. ಆ[illegible] ರ ದ[illegible] ಭೂ[illegible] ಲದ ರಾಮನ ವಾನರಗಳಿಗೂ ಪರಸ್ಪರ ಕ[illegible] ಮುಗಿ[illegible] ಲೇ ಇ[illegible] (ಗಟ್ಟಿಯಾಗಿ ನಗುತ್ತಾರೆ)

ಇದೇ [illegible] ನಕುಶರು [illegible]ಡೆಯಾದ ರಾಮನೊಡನೆ ಯುದ್ಧವನ್ನುಮಾಡಿ ದ[illegible] ತ್ತಿ ನೋಡ[illegible] ತಾಯಿಯೂ ಮಗಳೂ ಬೇರೆ ಬೇರೆಯಾಗಿ ಮಂಗಳಪರದ ವ್ರತವನ್ನು ಮಾಡುತ್ತಾರೆ. ತಾಯಿಯ ಮಂಗಳವೂ, ಮಗಳ ಮಂಗಳವೂ ಹೇಗೆ ತಾನೇ ಬೇರೆಯಾದೀತು. ಅವಳ ಮಂಗಳವೇ ಇವಳ ಮಂಗಳ. ಇವಳ ಮಂಗಳವೇ ಅವಳ ಮಂಗಳ. ಹೀಗೆಯೇ ನಿನಗೆ ಒಂದು ಸಮಾಜವಿದೆ. ಅವನಿಗೂ ಒಂದು ಸಮಾಜವು ಆವಶ್ಯಕ. (ಎಲ್ಲರೂ ನಗುವರು.) ಆದರೂ ಇದೆಲ್ಲವೂ ಬೇಕು. ಭಗವಂತನು ತಾನಾಗಿಯೇ ಲೀಲೆಮಾಡುವಾಗ ಜಟಿಲೆಕುಟಿಲೆಯರು ಆವಶ್ಯಕವೇ? ಹೇಳು. ಜಟಿಲೆಕುಟಿಲೆಯರು ಇಲ್ಲದಿದ್ದರೆ ಲೀಲೆಯು ಪೂರ್ತಿಯಾಗುವುದಿಲ್ಲ. (ಎಲ್ಲರೂ ನಗುವರು.) ಜಟಿಲೆ ಕುಟಿಲೆಯರಿಲ್ಲದಿದ್ದರೆ ಜಗಳ ನಡೆಯುವುದಿಲ್ಲ. (ಗಟ್ಟಿಯಾಗಿ ನಗುತ್ತಾರೆ.)

ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವಾದಿಗಳು. ಅವರ ಗುರುಗಳು ಅದ್ವೈತ ವಾದಿಗಳು. ಕಡೆಗೆ ಇಬ್ಬರಿಗೂ ಜಗಳಬಂದಿತು ಗುರುಶಿಷ್ಯರು ಪರಸ್ಪರವಾಗಿ ಮತಖಂಡನಮಾಡತೊಡಗಿದರು. ಹೀಗೂ ಆಗುವುದುಂಟು. ಹೇಗಾದರೂ ಆಗಲಿ. ಆದರೂ ವಿಜಯನು ನಿನ್ನ ಕಡೆಯವನು.

ಅಷ್ಟಮ ಪರಿಚ್ಛೇದ

ಪಿತಾಸಿಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್।
ನತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮಪ್ರಭಾವ॥

ಗೀತಾ. ೧೧-೪೩

[ಅಸದೃಶವಾದ ಪ್ರಭಾವವುಳ್ಳವನೇ, ಚರಾಚರಾತ್ಮಕವಾದ ಈ ಲೋಕಕ್ಕೆ ನೀನೇ ತಂದೆ, ನೀನೇ ಪೂಜ್ಯ, ನೀನೇ ಗುರುಗಳಿಗೂ ಗುರು, ಈ ಮೂರು ಲೋಕಗಳಲ್ಲಿ ನಿನಗೆ ಸಮನಾದವನೇ ಇಲ್ಲ, ಹೀಗಿರುವಲ್ಲಿ ನಿನಗಿಂತ ದೊಡ್ಡವನಾದವನು ಆವನು ತಾನೇ ಇದ್ದಾನು?]

(ಕೇಶವನಿಗೆ ಉಪದೇಶ, ಗುರುವಾಗುವಿಕೆ, ಮತ್ತು ಬ್ರ[illegible] ಹೇಳುತ್ತಾರೆ. ಅ[illegible]ನೇ,
ಅವನು ಸಚ್ಚಿದಾನಂದ, [illegible] ಆದ[illegible]

ಎಲ್ಲರೂ ಆನಂದದಲ್ಲಿದ್ದಾರೆ. [illegible] "ನೀನು ಜನರ ಸ್ವಭಾವವನ್ನು ಅರಿತು ಶಿಷ್ಯರನ್ನು [illegible]ಂದಲೇ ಈ ರೀತಿ ಭಂಗವುಂಟಾಗುತ್ತದೆ.

"ಮನುಷ್ಯರೆಲ್ಲರೂ ನೋಡುವುದಕ್ಕೆ ಒಂ[illegible] ಆದರೆ ಸ್[illegible]ಮಾತ್ರ ಬೇರೆ ಬೇರೆ. ಕೆಲವರಲ್ಲಿ ಸತ್ವಗುಣವು ಹೆಚ್ಚಾಗಿ[illegible], ಕೆಲ[illegible]ಜೋಗುಣವು ಹೆಚ್ಚು, ಕೆಲವರಲ್ಲಿ ತಮೋಗುಣವು ಅಧಿಕ, ಕ[illegible]ಬು ನೋಡುವುದಕ್ಕೇನೋ ಒಂದೇ, ಆದರೆ ಕೆಲವು ಕಡುಬುಗಳಲ್ಲಿ ಒಳಗೆ ಹಾಲ ಕೋವವನ್ನು ಇಟ್ಟಿದ್ದಾರೆ. ಕೆಲವುಗಳಲ್ಲಿ ಒಳಗೆ ತೆಂಗಿನಕಾಯಿ ಬೆಲ್ಲವನ್ನು ಇಟ್ಟಿದ್ದಾರೆ. ಇನ್ನು ಕೆಲವುಗಳಲ್ಲಿ ಖಾರವು ಮಿಶ್ರವಾದ ಉದ್ದಿನ ಪುಡಿಯನ್ನು ಇಟ್ಟಿದ್ದಾರೆ. (ಎಲ್ಲರೂ ನಗುತ್ತಾರೆ.)

"ನನ್ನ ಅಭಿಪ್ರಾಯವೇನು, ಗೊತ್ತೋ? ನಾನು ಉಂಡು ತಿರುಗಾಡಿಕೊಂಡು ಇರುತ್ತೇನೆ. ಮಿಕ್ಕುದೆಲ್ಲಾ ತಾಯಿಗೇ ಗೊತ್ತು. ನನಗೆ ಗುರು, ಕರ್ತಾ, ತಂದೆ, ಎಂಬ ಈ ಮೂರು ಮಾತುಗಳನ್ನು ಕೇಳಿದರೆ, ಶರೀರದಲ್ಲಿ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ.

"ಗುರುವು ಒಬ್ಬನೇ, ಸಚ್ಚಿದಾನಂದಸ್ವರೂಪನು. ಅವನೇ ಎಲ್ಲರಿಗೂ ಹೇಳಿಕೊಡುವವನು. ನನ್ನದು ಸಂತಾನಭಾವ. ಏನೂ ತಿಳಿಯದ ಮಗುವೆಂದು ಭಾವಿಸಿಕೊಂಡಿದ್ದೇನೆ. ಎಲ್ಲರೂ ಗುರುಗಳಾಗುವುದಕ್ಕೆ ಅಪೇಕ್ಷಿಸುತ್ತಾರೆ. ಗುರುಗಳು ಲಕ್ಷಲಕ್ಷವಾಗಿ ಸಿಕ್ಕುತ್ತಾರೆ. ಶಿಷ್ಯನಾಗುವುದಕ್ಕೆ ಆರಿಗೆ ತಾನೇ ಇಷ್ಟ?

"ಜನರಿಗೆ ಹೇಳಿಕೊಡುವುದು ಬಹಳ ಕಷ್ಟ. ಭಗವಂತನ ಸಾಕ್ಷಾತ್ಕಾರವಾದರೆ, ಮತ್ತು ಅವನಿಂದ ಅಪ್ಪಣೆಪಡೆದರೆ, ಆಗ ಜನಗಳಿಗೆ ಬ್ರಹ್ಮವಿದ್ಯೆಯನ್ನು ಹೇಳಿಕೊಡಬಹುದು. ನಾರದ, ಶುಕದೇವ, ಮುಂತಾದವರು ಭಗವಂತನ ಅಪ್ಪಣೆಯನ್ನು ಪಡೆದಿದ್ದರು. ಶಂಕರಾಚಾರ್ಯರೂ ಪಡೆದಿದ್ದರು. ಈ ಅಪ್ಪಣೆಯಿಲ್ಲದಿದ್ದರೆ ನಿನ್ನ ಮಾತನ್ನು ಆರು ತಾನೇ ಕೇಳುತ್ತಾರೆ? ಕಲಿಕತೆಯ ಜನರ ರೀತಿಯು ಗೊತ್ತೋ? ಅವರು ಬಂದೊಂದು ಹೊಸ ವಿಷಯದ ಹಿಂದೆಯೂ ಓಡುತ್ತಿರುವರು. ಕಟ್ಟಿಗೆ ಯುರಿಯುವ ವರೆಗೂ ಹಾಲು ಉಕ್ಕುವುದು. ಕಟ್ಟಿಗೆಯನ್ನು ತೆಗೆದು ಹಾಕಿ ಬಿಟ್ಟರೆ ಏನೂ ಇಲ್ಲ.

"ಕಲಿಕತೆಯ ಜನರು ಹೀಗೆಯೇ; ತಮಗೆ ನೀರು ಬೇಕೆಂದು ಒಂದುಕಡೆ ಬಾವಿ ತೆಗೆಯುವರು. ಅಲ್ಲಿ ಕಲ್ಲು ಸಿಕ್ಕಿದ ಕೂಡಲೇ, ಆ ಸ್ಥಳವನ್ನು ಬಿಟ್ಟು

ಮತ್ತೊ[illegible] ಮರಳು ಸಿಕ್ಕಿದರೆ, ಆ ಸ್ಥಳವನು ಬಿಟ್ಟು,' ಇನ್ನೊ[illegible] ತೋಡುವುದಕ್ಕೆ ತೊಡಗುವರು.

"ನಮ್ಮ[illegible] 'ಭಗವಂತನ ಅಪ್ಪಣೆಯಾಯಿತು', ಎಂದು ತಿಳಿದುಕೊಂಡರೆ ಸ[illegible]ರಲ್ಲಿಯೆ[illegible] ನಮಗೆ ಕಾಣಿಸಿಕೊಳ್ಳುತ್ತಾನೆ, ನಮ್ಮ ಜತೆಯ[illegible]ವನ ಅಪ್ಪಣೆಯನ್ನು ಪಡೆಯಬಹುದು. ಆ ಅಪ್ಪಣೆಗೆ[illegible]ಗಳ ಶಕ್ತಿ ಎಷ್ಟು ಇರಬೇಕು! ಅದರಿಂದ ಪರ್ವತಗಳನ್[illegible]ಬಹುದು. [illegible]ವರ ಅಪ್ಪಣೆಯಿಲ್ಲದ ಸಾಧಾರಣವಕ್ತೃತೆಯಿಂದ [illegible] ಆಗೀತು [illegible]ನರು ದಿನವೆಲ್ಲಾ ಆ ಮಾತನ್ನು ಕೇಳುತ್ತಾರೆ. ಕೂಡಲೇ [illegible]ತ್ತಾರೆ. [illegible] ಅನುಸಾರವಾಗಿ ಕೆಲಸಮಾಡುವುದಿಲ್ಲ.

(ಪೂರ್ವಕಥಾ, ಹಲಧರಕೊಳ)

"ಆ ದೇಶದಲ್ಲಿ ಹಲಧರವೆಂಬ ಕೊಳವಿದೆ. ಅದರ ಮಗ್ಗುಲಿನ ರಸ್ತೆಗಳಲ್ಲಿ ಪ್ರತಿನಿತ್ಯವೂ ಬೆಳಗಿನ ಜಾವದಲ್ಲಿ ಜನರು ಹೇಸಿಗೆಮಾಡುತ್ತಿದ್ದರು. ಬೆಳಗಾದ ಮೇಲೆ ಬಂದವರೆಲ್ಲರೂ, ಹೇಸಿಗೆಮಾಡಿದವರನ್ನು ತುಂಬ ಬಯ್ಯುತ್ತಿದ್ದರು. ಎಷ್ಟು ಬೈದರೂ ಮಾರನೇ ದಿವಸ ಅದೇ ಗತಿ. ಹೇಸಿಗೆ ಮಾಡುವುದೇನೋ ಕಮ್ಮಿಯಾಗಲೇ ಇಲ್ಲ. (ಎಲ್ಲರೂ ನಗುವರು) ಜನರು ಸರ್ಕಾರಕ್ಕೆ ತಿಳಿಸಿದರು. ಸರ್ಕಾರದವರು ಒಬ್ಬ ಜವಾನನನ್ನು ಕಳುಹಿಸಿದರು. ಅವನು, 'ಇಲ್ಲಿ ಆರೂ ಹೇಸಿಗೆಮಾಡಕೂಡದು,' ಎಂದು ಒಂದು ಕಾಗದವನ್ನು ಅಂಟಿಸಿದನು. ಆಮೇಲೆ ಹೇಸಿಗೆಮಾಡುವುದು ನಿಂತು ಹೋಯಿತು. (ಎಲ್ಲರೂ ನಗುವರು.)

"ಜನರಿಗೆ ಉಪದೇಶಮಾಡಬೇಕಾದರೆ ಭಗವಂತನಿಂದ ಅಪ್ಪಣೆಯನ್ನು ಪಡೆದಿರಬೇಕು. ಹಾಗಿಲ್ಲದಿದ್ದರೆ ಆ ಮಾತುಗಳು ಹಾಸ್ಯಾಸ್ಪದವಾಗುವುವು. ತನ್ನನ್ನು ತಿದ್ದಿಕೊಳ್ಳುವುದಕ್ಕೇ ತಿಳಿಯದು, ಇನ್ನೊಬ್ಬನನ್ನು ತಿದ್ದುವುದಕ್ಕೆ ಹೋಗುತ್ತಾನೆ. ಕುರುಡನು ಕುರುಡನಿಗೆ ಹಾದಿ ತೋರಿಸುತ್ತಾನಂತೆ. (ಎಲ್ಲರೂ ನಗುವರು) ಹಿತಮಾಡುವುದಕ್ಕೆ ಹೋದರೆ ಅದು ವಿಪರೀತವಾಗುವುದು. ಭಗವಂತನನ್ನು ತಿಳಿದುಕೊಂಡರೆ ಅಂತರ್ದೃಷ್ಟಿಯುಂಟಾಗುವುದು. ಆರಿಗೆ ಆವ ರೋಗವಿದೆಯೋ ಅದನ್ನು ತಿಳಿಯಬಹುದು. ಅದಕ್ಕೆ ತಕ್ಕ ಉಪದೇಶವನ್ನೂ ಮಾಡಬಹುದು.

(ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ—ಗೀತಾ ೩-೨೭)

"ಭಗವಂತನ ಅಪ್ಪಣೆಯಿಲ್ಲದೆ, 'ನಾನು ಜನರಿಗೆ ಉಪದೇಶಮಾಡುತ್ತೇನೆ,' ಎಂಬುದು ಅಹಂಕಾರದಿಂದ ಉಂಟಾಗುತ್ತದೆ. ಅಹಂಕಾರವೂ, 'ನಾನು ಕರ್ತೃ' ಎಂಬುದೂ, ಅಜ್ಞಾನದಿಂದ ಹುಟ್ಟುತ್ತದೆ. 'ಈಶ್ವರನೇ ಕರ್ತೃ, ಈಶ್ವರನೇ ಎಲ್ಲ

ವನ್ನೂ ಮಾಡುತ್ತಾನೆ. ನಾನೇನೂ ಮಾಡುವು[illegible] ಹೇಳುತ್ತೇ[illegible] ಆರಿಗೆ ಇದೆಯೋ ಅವನು ಜೀವನ್ಮುಕ್ತ. 'ನಾನು ಕರ್ತಾ[illegible] ಹೇಳೀ[illegible] ತರ್ಕ', [illegible]ನ್ನುವ ವರೆಗೂ ದುಃಖವಿರುವುದು. ಶಾಂತಿಯಿರುವುದಿಲ್ಲ[illegible], ಆದ[illegible]

ನವಮ [illegible]ಚ್ಛೇ[illegible]

ತಸ್ಮಾದಸಕ್ತಸ್ಸತತಂ ಕಾರ್ಯಂ ಕ[illegible] ಸಮಾಚರ। [illegible]
ಅಸಕ್ತೋಽಹ್ಯಾಚರನ್ ಕರ್ಮ ಪರಮ[illegible]ಪ್ನೋತಿ ಪೂರುಷಃ॥ ಗೀತಾ ೩-೧೯

[ಆದುದರಿಂದ, ಆವಾಗಲೂ ಮಾಡತಕ್ಕ ಕರ್ಮಗಳನ್ನು ಆಸಕ್ತಿಯಿಲ್ಲದಂತೆ ಮಾಡು; ಹೀಗೆ ಆಸಕ್ತನಾಗದೆ ಕರ್ಮಗಳನ್ನು ಮಾಡುವವನು, ಪರಬ್ರಹ್ಮನನ್ನು ಪಡೆಯುತ್ತಾನೆ.]

(ಕರ್ಮಯೋಗದ ಉಪದೇಶ)

ಶ್ರೀರಾಮಕೃಷ್ಣ :—(ಕೇಶವಾದಿ ಭಕ್ತರನ್ನು ಕುರಿತು) ಜಗತ್ತಿಗೆ ಉಪಕಾರ ಮಾಡಬೇಕೆಂದು ನೀವು ಹೇಳುತ್ತೀರಿ. ಜಗತ್ತೇನು ಅಷ್ಟು ಅಲ್ಪವಾದುದೇ? ಜಗತ್ತಿಗೆ ಉಪಕಾರಮಾಡುವುದಕ್ಕೆ ನೀನು ಆರು? ಸಾಧನವನ್ನು ಮಾಡಿ ಭಗವಂತನನ್ನು ಸಾಕ್ಷಾತ್ಕಾರಮಾಡು. ಅವನನ್ನು ಹೊಂದಲು ಪಡೆ. ಅವನು ಶಕ್ತಿಯನ್ನು ಕೊಟ್ಟರೆ, ಆಗ ಎಲ್ಲರಿಗೂ ನೀನು ಹಿತವನ್ನು ಮಾಡಬಲ್ಲೆ. ಇಲ್ಲವಿದ್ದರೆ ಆಗುವುದಿಲ್ಲ.

ಒಬ್ಬ ಭಕ್ತ :—ಭಗವಂತನ ಲಾಭವಾಗದೇ ಇರುವ ತನಕ ಎಲ್ಲಾ ಕರ್ಮವನ್ನೂ ತ್ಯಾಗಮಾಡಬೇಕೋ?

ಶ್ರೀರಾಮಕೃಷ್ಣ :—ಇಲ್ಲ, ಕರ್ಮವನ್ನೆಲ್ಲಾ ಏತಕ್ಕೆ ಬಿಡಬೇಕು? ಈಶ್ವರನ ಚಿಂತೆಯನ್ನೂ, ಅವನ ನಾಮಗುಣಗಾನವನ್ನೂ, ನಿತ್ಯಕರ್ಮವನ್ನೂ ಮಾಡಬೇಕು.

ಬ್ರಾಹ್ಮಭಕ್ತ :—ಸಂಸಾರದ ಕರ್ಮವನ್ನು ಮಾಡಬೇಕೇ? ವಿಷಯಕರ್ಮಗಳನ್ನು ಮಾಡಬೇಕೇ?

ಶ್ರೀರಾಮಕೃಷ್ಣ :—ಅಹುದು. ಸಂಸಾರವು ನಡೆಯುವುದಕ್ಕೆ ಬೇಕಾದ ಎಲ್ಲ ಕರ್ಮಗಳನ್ನೂ ಮಾಡಲೇ ಬೇಕು. ಆದರೆ, 'ನನ್ನ ಈ ಕರ್ಮಗಳನ್ನೇ

[illegible] ಮಾಡಿಕೊಡು', ಎಂದು ನಿರ್ಜನಪ್ರದೇಶ ದಲ್ಲಿ [illegible] ಹತ್ತಿರ ಅಳುತ್ತಾ ಪ್ರಾರ್ಥನೆಮಾಡಬೇಕು. 'ಹೇ ಈಶ್ವರ [illegible] ಕರ್ಮಗಳನ್ನು ಕಮ್ಮಿಮಾಡಿಕೊಡು. ನಿನ್ನನ್ನು ನೆ [illegible] ಮಾಡಿಕೊಂಡರೆ ನಿನ್ನನ್ನು ಮರೆತು [illegible] ರಲ್ಲಿಯೆ [illegible] ಮಾಡಿಕೋ. ಏತಕ್ಕೆಂದರೆ ನೀನು [illegible] ಕರ್ಮಗಳನ್ನು [illegible] ಮವಾಗಿಯೇ ಮಾಡುತ್ತೇನೆಂದು ಮನ [illegible] ದುಕೊಂಡರೂ, ಅದು ಸಕಾಮವೇ ಆಗಿ ಹೋಗುವುದು. [illegible] ಗಳನ್ನು ಹೆಚ್ಚಾಗಿ ಮಾಡುತ್ತಾ ಹೋದರೆ, ಪ್ರಾಯಶಃ ಲೋಕ ಮಾನ್ಯ [illegible] ಕೀರ್ತಿಸಂ[illegible] ಸಬೇಕೆಂಬ ಇಚ್ಛೆಯಲ್ಲಿ ಬೀಳುತ್ತೀಯೆ.

(ಪೂರ್ವಕಥೆ, ಶಂಭುಮಲ್ಲಿಕನೊಡನೆ ದಾನಾದಿಕರ್ಮಕಾಂಡದ ಮಾತು.)

ಶಂಭುಮಲ್ಲಿಕನು ಆಸ್ಪತ್ರೆ, ಔಷಧಾಲಯ, ಸ್ಕೂಲು, ರಸ್ತೆ, ಪುಷ್ಕರಿಣಿ, ಮುಂತಾದ ಧರ್ಮಕಾರ್ಯಗಳ ಮಾತನ್ನೆತ್ತಿದನು. ಅದಕ್ಕೆ ನಾನು, ಮಾಡದಿದ್ದರೆ ತೀರದ ಕೆಲಸವು ಸಂಭವಿಸಿದರೆ, ಅದನ್ನು ನಿಷ್ಕಾಮವಾಗಿ ಮಾಡಬೇಕು; ಇಷ್ಟಪಟ್ಟು ಹೆಚ್ಚಾಗಿ ಕೆಲಸಗಳನ್ನು ಜೋಡಿಸಿಕೊಳ್ಳುವುದು ಒಳ್ಳೆಯದಲ್ಲ, ಹಾಗೆ ಮಾಡಿದರೆ ಈಶ್ವರನನ್ನೇ ಮರೆತು ಬಿಡಬೇಕಾಗುತ್ತದೆ. ಒಬ್ಬನು ಕಾಳೀಘಟ್ಟದಲ್ಲಿ ದಾನಮಾಡುತ್ತಾ ಕುಳಿತುಕೊಂಡನು. ಅವ ನಿಗೆ ಕಾಳೀದರ್ಶನವು ಆಗಲೇ ಇಲ್ಲ. (ನಗುವರು) ಮೊದಲು ಹೇಗಾ ದರೂ ಮಾಡಿ, ನುಗ್ಗಿ, ಏಟನ್ನಾದರೂ ತಿಂದುಕೊಂಡು, ಕಾಳಿಯ ದರ್ಶನ ವನ್ನು ಮಾಡಬೇಕು; ಬಳಿಕ ದಾನವನ್ನು ಮಾಡಿದರೆ ಮಾಡು, ಇಲ್ಲದಿದ್ದರೆ ಬಿಡು, ಇಚ್ಛೆಯಿದ್ದರೆ ಇನ್ನೂ ಹೆಚ್ಚಾಗಿಯೇ ಮಾಡು. ಈಶ್ವರಲಾಭಕ್ಕಾ ಗಿಯೇ ಕರ್ಮಗಳೆಲ್ಲವೂ. ನಿನಗೆ ಒಂದು ವೇಳೆ ಈಶ್ವರಸಾಕ್ಷಾತ್ಕಾರ ವಾದರೆ, 'ಆಸ್ಪತ್ರೆಗಳನ್ನೂ ಔಷಧಶಾಲೆಗಳನ್ನೂ ನನ್ನಿಂದ ಮಾಡಿಸು', ಎಂದು ನೀನು ಭಗವಂತನನ್ನು ಕೇಳಿಕೊಳ್ಳುತ್ತೀಯಾ?' ಎಂದು ನಾನು ಶಂಭುವಿಗೆ ಹೇಳಿದೆನು. (ನಗುವರು) ಭಕ್ತನು ಎಂದಿಗೂ ಹಾಗೆ ಹೇಳು ವುದಿಲ್ಲ. ಅವನು, 'ಭಗವಂತ, ನನಗೆ ನಿನ್ನ ಪಾದಪದ್ಮದಲ್ಲಿ ಸ್ಥಾನವನು ಕೊಡು. ನನ್ನನ್ನು ನಿನ್ನೊಡನೆ ಆವಾಗಲೂ ಇರಿಸಿಕೋ. ನಿನ್ನ ಪಾದ ಪದ್ಮದಲ್ಲಿ ಶುದ್ಧವಾದ ಭಕ್ತಿಯನ್ನು ಕೊಡು', ಎಂದು ಹೇಳುತ್ತಾನೆ.

ಕರ್ಮಯೋಗವು ಬಹಳ ಕಷ್ಟ. ಶಾಸ್ತ್ರದಲ್ಲಿ ಆವ ಕರ್ಮಗಳನ್ನು ಮಾಡ ಬೇಕೆಂದು ಹೇಳಿದೆಯೋ, ಅವುಗಳನ್ನು ಕಲಿಕಾಲದಲ್ಲಿ ಮಾಡುವುದು ಬಹಳ ಕಷ್ಟ. ಈಗ ಅನ್ನಗತಪ್ರಾಣ. ಬಹಳವಾಗಿ ಕರ್ಮವನ್ನು ಮಾಡುವುದಕ್ಕೆ

ಆಗುವುದಿಲ್ಲ. ಜ್ವರಬಂದಾಗ ಸಾಧಾರಣರು … ಕರಿಂದ ಔಷಧವನ್ನು ಕೊಡಿಸಿದರೆ ಕಾಲವಿಳಂಬವಾಳೀ … ಅಷ್ಟರಲ್ಲಿಯೇ ರೋಗಿಯು ಹೋಗಿಯೇ ಬಿಡಬಹುದು. … ಆದರೆ … ಈಗಣ ಡೀ. ಗುಪ್ತನ (ಕೊಯಿನ) ಔಷಧ … ದಲ್ಲಿ ಭಕ್ತಿ ಯೋಗ, ಭಗವಂತನ ನಾಮ … ಪ್ರಾರ್ಥನೆ ಯನ್ನು ಮಾಡಬೇಕು. ಭಕ್ತಿಯೇ … ಯು … (ಬ್ರಾಹ್ಮ ಭಕ್ತರನ್ನು ಕುರಿತು,) ನೀವು ಹೇಳುವ … ಭಕ್ತಿ … ; ನೀವು ಹರಿನಾಮವನ್ನು ಉಚ್ಚಾರಣೆಮಾಡಿ … ತಾಯಿಯ … ಗುಣಗಾನ ವನ್ನೂ, ಕೀರ್ತನೆಯನ್ನೂ ಮಾಡಿ … ನೀವು ಧನ್ಯರಾಗುತ್ತೀರಿ. ನಿಮ್ಮ ಭಾವವು ಒಳ್ಳೆಯದು, 'ಜಗತ್ತು ಸ್ವಪ್ನದಂತೆ' ಎಂಬ ವೇದಾಂತವಾದಿಗಳ ಹಾಗೆ ನೀವು ಹೇಳುವುದಿಲ್ಲ. ನೀವು ವೇದಾಂತಮತದಂಥ ಬ್ರಹ್ಮಜ್ಞಾನಿ ಗಳಲ್ಲ. ನೀವು ಭಕ್ತರು. ನೀವು ಈಶ್ವರನನ್ನು ಒಂದು ವ್ಯಕ್ತಿಯೆಂದು ಹೇಳಿರಿ ಅದೂ ಒಳ್ಳೆಯದು. ನೀವು ಭಕ್ತರು, ವ್ಯಾಕುಲರಾಗಿ ಭಗವಂತನಿಗೆ ಮೊರೆಯಿಟ್ಟರೆ ಅವನನ್ನು ನಿಜವಾಗಿಯೂ ಪಡೆಯಬಹುದು.

ದಶಮ ಪರಿಚ್ಛೇದ

(ಸುರೇಂದ್ರನ ಮನೆ, ನರೇಂದ್ರಮುಂತಾದವರೊಡನೆ)

ಸ್ಟೀಮರು ಈಗ ಹಿಂತಿರುಗಿ ಕಯಲಾ ಘಟ್ಟಕ್ಕೆ ಬಂದಿತು. ಎಲ್ಲರೂ ಇಳಿ ಯುವ ಪ್ರಯತ್ನವನ್ನು ಮಾಡಿದರು. ಅಶ್ವಯುಜಶುದ್ಧಪೂರ್ಣಿಮೆಯ ಪೂರ್ಣ ಚಂದ್ರನು ನಗುತ್ತಿದ್ದಾನೆ. ಭಾಗೀರಥಿಯ ವಕ್ಷಸ್ಥಳವು ಆ ಚಂದ್ರಿಕೆಗೆ ಲೀಲಾ ಭೂಮಿಯಾಗಿದೆ. ಅದನ್ನು ಜಹಜಿನಿಂದ ಹೊರಗೆ ಬಂದವರು ನೋಡಿದರು. ಭಗವಾನ್ ಶ್ರೀರಾಮಕೃಷ್ಣರಿಗೋಸ್ಕರ ಬಂಡಿಯನ್ನು ತರುವುದಕ್ಕಾಗಿ ಹೋದರು. ಕೊಂಚ ಹೊತ್ತಿನ ಮೇಲೆ, ಮಾಸ್ಟರು ಒಬ್ಬಿಬ್ಬ ಭಕ್ತರ ಸಂಗಡ ಭಗವಾನರ ಬಂಡಿ ಯನ್ನು ಹತ್ತಿದನು. ಕೇಶವನ ಅಣ್ಣನ ಮಗ ನಂದಲಾಲನು ಬಂಡಿಯನ್ನು ಹತ್ತಿ, ಅವರ ಜತೆಯಲ್ಲಿ ಸ್ವಲ್ಪದೂರ ಹೋಗುತ್ತಾನೆ. ಎಲ್ಲರೂ ಬಂಡಿಯಲ್ಲಿ ಕುಳಿತ ಬಳಿಕ, ಭಗವಾನರು 'ಕೇಶವನೆಲ್ಲಿ?' ಎಂದು ಕೇಳಿದರು. ನೋಡುತ್ತಿರುವಾಗಲೇ ಕೇಶವನು ಒಬ್ಬಂಟಿಗನಾಗಿ ಬಂದು ನಿಂತು, ನಗುತ್ತ, 'ಇವರೊಡನೆ ಆರು ಆರು ಹೋಗುತ್ತೀರಿ?' ಎಂದು ಕೇಳಿದನು. ಬಂಡಿಯಲ್ಲಿ ಎಲ್ಲರೂ ಕುಳಿತ ಬಳಿಕ ಕೇಶವನು ಸಾಷ್ಟಾಂಗನಮಸ್ಕಾರಮಾಡಿ ಭಗವಾನರ ಪಾದಧೂಳಿಯನ್ನು

ಸ್ತ್ರೀಕರ್ ... ಸ್ನೇಹದಿಂದ ಮಾತನಾಡಿ ಅವನಿಗೆ ಜೋಡುವುದಕ್ಕೆ ಅಪ್ಪಣೆ ಕೊಟ್ಟರು ... ಯು ಹೊರಟಿತು. ಸುಂದರವಾದ ರಾಜಮಾರ್ಗ, ಅದು ಇಂಗ್ಲಿ ... ಸಂಪ್ರ ... ಸ್ಥಳ, ಆ ಮಾರ್ಗದ ಎರಡು ಪಕ್ಕಗಳಲ್ಲಿಯೂ ಸುಂದರವಾ ... ರಲ್ಲಿಯೆ ... . ಪೂರ್ಣಚಂದ್ರನು ಉದಯಿಸಿದ್ದಾನೆ. ಆ ಮಹಡಿ ... ನಿರ್ಮಲವಾಗಿಯೂ ಇರುವ ಚಂದ್ರ ಕಿರಣದಲ್ಲಿ ... ಳ್ಳುತ್ತಿವೆಯೊ ಎಂಬಂತೆ, ಕಾಣುತ್ತಿವೆ. ಆ ಮನೆಗಳ ಬಾಗಿಲು ಗಳಲ್ಲಿ ಗ ... ಯೂ, ಕೆ ... ಡಿಗಳಲ್ಲಿ ಸಾಲುಸಾಲಾಗಿ ದೀಪಗಳೂ ಇವೆ. ಅಲ್ಲಲ್ಲಿ ಹಾ ... ಡಿಯಂ, ಪಿಯಾನೋ ಎಂಬ ವಾದ್ಯಗಳನ್ನು ಬಾಜಿಸುತ್ತಾ, ಇಂಗ್ಲೀಷ್ ಯುವ ... ಹಾಡುತ್ತಿದ್ದಾರೆ. ಭಗವಾನರು ನಗುತ್ತಾ, ಆನಂದದಿಂದ ಅದೇ ದಾರಿಯಲ್ಲಿ ಹೋಗುತ್ತಿದ್ದಾರೆ. ಅವರು ಹಠಾತ್ತಾಗಿ, 'ನನಗೆ ಬಾಯಾರಿಕೆಯಾಗುತ್ತಿದೆ; ಏನ ಮಾಡಲಿ', ಎಂದು ಹೇಳಿದರು. ಇವಕ್ಕೆ ಏನ ಮಾಡಬಹುದು? ಅದನ್ನು ಕೇಳಿ ನಂದಲಾಲನು, ಇಂಡಿಯಾ ಕ್ಲಬ್ಬಿನ ಹತ್ತಿರ ಬಂಡಿಯನ್ನು ನಿಲ್ಲಿಸಿ, ಮಹಡಿಯ ಮೇಲಕ್ಕೆ ನೀರನ್ನು ತರುವುದಕ್ಕಾಗಿ ಹೋಗಿ, ಗಾಜಿನ ಲೋಟಾ ದಲ್ಲಿ ನೀರನ್ನು ತಂದನು. ಶ್ರೀರಾಮಕೃಷ್ಣರು ನಗುತ್ತಾ, 'ಈ ಗಾಜಿನ ಪಾತ್ರೆಯನ್ನು ಚೆನ್ನಾಗಿ ತೊಳೆದಿದ್ದೀಯಾ?' ಎಂದು ಕೇಳಿದರು. ತೊಳೆದಿದ್ದೇನೆಂದು ಅವನು ಹೇಳಿದನು. ಬಳಿಕ ಅವರು ನೀರನ್ನು ಕುಡಿದರು.

ಭಗವಾನರು ಹುಡುಗರಂತೆ ಬಂಡಿಗಳನ್ನೂ, ಕುದುರೆಗಳನ್ನೂ, ಬೆಳುದಿಂಗಳನ್ನೂ ನೋಡುತ್ತಾ ಆನಂದಪಡುತ್ತಿದ್ದಾರೆ. ನಂದಲಾಲನು ಕುಲುಟೋಲಾ ಎಂಬ ಸ್ಥಳದಲ್ಲಿಯೇ ಇಳಿದನು. ಭಗವಾನರ ಬಂಡಿಯು ಸಿಮ್ಮುಲಿಯಾ ಬೀದಿಯಲ್ಲಿರುವ ಶ್ರೀಯುಕ್ತ ಸುರೇಂದ್ರಮಿತ್ರನ ಮನೆಯ ಬಳಿಗೆ ಹೋಯಿತು. ಭಗವಾನರು ಅವನನ್ನು ಸುರೇಂದ್ರನೆಂದು ಕರೆಯುತ್ತಾರೆ. ಸುರೇಂದ್ರನು ಭಗವಾನರ ಪರಮಭಕ್ತನು.

ಆದರೆ ಸುರೇಂದ್ರನು ಮನೆಯಲ್ಲಿರಲಿಲ್ಲ, ಅವನು ತನ್ನ ಹೊಸ ತೋಟಕ್ಕೆ ಹೋಗಿದ್ದನು. ಮನೆಯವರು ಇವರಿಗೆ ಕುಳಿತುಕೊಳ್ಳುವುದಕ್ಕೆ ಕೆಳಗಿನ ಕೊಟ್ಟಡಿಯ ಬಾಗಿಲನ್ನು ತೆರೆದು ಕೊಟ್ಟರು.

ಬಂಡಿಯ ಬಾಡಿಗೆಯನ್ನು ಕೊಡಬೇಕು, ಆರು ಕೊಡುವರು? ಸುರೇಂದ್ರನಿದ್ದರೆ ಅವನೇ ಕೊಡುತ್ತಿದ್ದನು. ಆಗ, 'ಬಾಡಿಗೆಯನ್ನು ಸುರೇಂದ್ರನ ಮನೆಯ ಹೆಂಗುಸರಿಂದ ತೆಗೆದುಕೊಂಡು; ತಮ್ಮ ಗಂಡಂದಿರು ನನ್ನ ಬಳಿಗೆ ಬರುತ್ತ ಹೋಗುತ್ತ ಇರುವುದು ಅವರಿಗೆ ಗೊತ್ತಿಲ್ಲವೇ?' ಎಂದು ಭಗವಾನರು ಹೇಳಿದರು. (ಎಲ್ಲರೂ ನಗುತ್ತಾರೆ.)

ನರೇಂದ್ರನ ಮನೆಯು ಸುರೇಂದ್ರನ ಮನೆಯ ಹತ್ತಿರದಲ್ಲಿಯೇ ಇದೆ. ಪರಮಹಂಸರು ನರೇಂದ್ರನನ್ನು ಕರೆಯುವುದಕ್ಕೆ ಒಬ್ಬನನ್ನು ಕಳುಹಿಸಿದರು. ಇತ್ತ

ಸುರೇಂದ್ರನ ಮನೆಯವರು ಎರಡನೆಯ ಅಂತಸ್ತಿನ [illegible], [illegible]ನರನ್ನು ಕುಳ್ಳಿರಿಸಿದರು. ಕೊಟ್ಟಡಿಯ ನೆಲದ ಮೇಲೆ ಮೆತ್ತೆ [illegible] ಅದರ ಮೇಲೆ ಮೂರು ನಾಲ್ಕು ದಿಂಬುಗಳು ಇ[illegible], ಕೊಟ್ಟ[illegible], ಆದ[illegible], ಸುರೇಂದ್ರನ ವಿಶೇಷ ಪ್ರಯತ್ನದಿಂದ ಬರೆಯಿಸಿದ [illegible] [illegible]ಸರು ಕೇಶವ ನಿಗೆ ಹಿಂದು, ಮುಸಲ್ಮಾನ್, ಕ್ರಿಸ್ತ[illegible] [illegible] ಧರ್ಮಸಮನ್ವಯವನ್ನೂ, ವೈಷ್ಣವ, ಶಾಕ್ತ, ಶೈವ ಪಂಥ[illegible]ದರ ಸ[illegible] ಸಮನ್ವಯವನ್ನೂ ತೋರಿಸುತ್ತಿದ್ದಾರೆ.

ಭಗವಾನರು ಕುಳಿತುಕೊಂಡು, ನಗ[illegible], ಮಾತನಾಡ[illegible]ಗ ಅದೇ ಸಮಯದಲ್ಲಿ ನರೇಂದ್ರನೂ ಬಂದು ಸೇರಿದನು. ಆಗ ಅವರಿಗೆ ಆನಂದವು ಇಮ್ಮಡಿಯಾಯಿತು. ಈ ದಿವಸ ಕೇಶವಸೇನನೊಡನೆ ಜಹಜಿನಲ್ಲಿ ಹೋಗಿದ್ದೆನು, ಅಲ್ಲಿ ವಿಜಯನೂ ಇತರರೂ ಇದ್ದರು. ವಿಜಯನಿಗೂ ಕೇಶವನಿಗೂ ತಾವು ಹೇಳಿದುದನ್ನೂ ತಾಯಿಯೂ ಮಗಳೂ, ಬೇರೆ ಬೇರೆ ಮಂಗಳವಾರದ ಪೂಜೆಮಾಡುವುದನ್ನೂ ಜಟಿಲೆಕುಟಿಲೆಯರು ಇಲ್ಲದಿದ್ದರೆ ಲೀಲೆಯು ಪುಷ್ಟಿಯಾಗುವುದಿಲ್ಲವೆಂಬುದನ್ನೂ ನರೇಂದ್ರನಿಗೆ ಹೇಳೆಂದು ಭಗವಾನರು ಮಾಸ್ಟರಿಗೆ ಹೇಳಿದರು.

ಮಾಸ್ಟರ್ :—ಸ್ವಾಮೀ, ಹಾಗೆಯೇ ಆಗಲಿ.

ರಾತ್ರೆ ಬಲು ಹೊತ್ತಾದರೂ ಸುರೇಂದ್ರನು ಬರಲಿಲ್ಲ. ಭಗವಾನರು ದಕ್ಷಿಣೇಶ್ವರಕ್ಕೆ ಹೊರಡಬೇಕು ; ಹತ್ತೂವರೆ ಗಂಟೆಯ ಸಮಯ, ಇನ್ನು ಹೊತ್ತಮಾಡುವುದಕ್ಕೆ ಇಲ್ಲ; ಹಾದಿಯಲ್ಲಿ ಬೆಳುದಿಂಗಳು, ಬಂಡಿಯು ಬಂದಿತು. ಭಗವಾನರು ಹತ್ತಿದರು. ನರೇಂದ್ರನೂ ಮಾಸ್ಟರೂ ಪ್ರಣಾಮಮಾಡಿ, ತಮ್ಮ ಮನೆಗಳಿಗೆ ಹೊರಟು ಹೋದರು.

ಒಂಬತ್ತನೆಯ ಖಂಡ

ಸಿಂತಿಯ ಬ್ರಾಹ್ಮಸಮಾಜದ ದರ್ಶನ; ಶ್ರೀಯುಕ್ತ ಶಿವನಾಥ
ಪ್ರಭೃತಿ ಭಕ್ತರೊಂದಿಗೆ ಮಾತು

ಪ್ರಥಮ ಪರಿಚ್ಛೇದ

(ಉತ್ಸವಮಂದಿರ)

ಕ್ರಿಸ್ತಾಬ್ದ ೧೮೮೨ ನೆಯ ಅಕ್ಟೋಬರ್ ೨೮ ನೆಯ ಶನಿವಾರದ ದಿವಸ ಶ್ರೀ ಪರಮಹಂಸರವರು ಸಿಂತಿಯ ಬ್ರಾಹ್ಮಸಮಾಜದರ್ಶನಕ್ಕಾಗಿ ಹೋದರು.

ಈ [illegible] ಮ್ಮಾಸಿಕಮಹೋತ್ಸವವು ನಡೆಯುತ್ತದೆ. ಭಗವಾನ್ ಶ್ರೀರ[illegible]ನ್ನು ಕರೆದು ಇದ್ದಾರೆ. ಅವರು ಮೂರು ನಾಲ್ಕು ಗಂಟೆಯ ವೇಳೆ[illegible] ಭಕ್ತರೊಂದಿಗೆ ಬಂಡಿಯಲ್ಲಿ ಕುಳಿತು, ದಕ್ಷಿಣೇಶ್ವರದ ಕಾಳೀದೇವಾ[illegible] ವೇಣೀಮಾಧವಪಾಲನ ಮನೋಹರವಾದ ಉದ್ಯಾ[illegible] ಬ್ರಾಹ್ಮಸಮಾಜದ ಅಧಿವೇಶನವಾಗುತ್ತದೆ. ಭಗ[illegible]ಬ್ರಹ್ಮಸಮಾಜ[illegible] ಬಹಳ ಪ್ರೀತಿ. ಬ್ರಾಹ್ಮಭಕ್ತರೂ ಅವರಲ್ಲಿ ಅತಿಶಯವಾ[illegible]ನನ್ನೂ ಪ್ರೇಮವನ್ನೂ ಇಟ್ಟಿದ್ದಾರೆ.

ಸಿಂತಿ [illegible] ಪಾಯಕ[illegible]ದ ಹತ್ತಿರ, ಕಲಿಕತೆಗೆ ಐದು ಮೈಲಿಯ ದೂರ ಉತ್ತರದಲ್ಲಿ ಇದೆ. ಅಲ್ಲಿಯ ಉದ್ಯಾನ[illegible]ವು ತುಂಬಾ ಮನೋಹರವಾಗಿದೆ. ಅದು ನಿರ್ಜನದಲ್ಲಿ ಭಗವಂತನನ್ನು ಉಪಾಸನೆಮಾಡುವುದಕ್ಕೆ ಪ್ರಶಸ್ತವಾದ ಸ್ಥಲ. ಉದ್ಯಾನ ಸ್ವಾಮಿಯು ಶರತ್ಕಾಲದಲ್ಲಿ ಒಂದಾವೃತ್ತಿಯೂ, ವಸಂತಕಾಲದಲ್ಲಿ ಒಂದಾವೃತ್ತಿಯೂ ಅಲ್ಲಿ ಬ್ರಹ್ಮಸಮಾಜದ ಮಹೋತ್ಸವವನ್ನು ನಡೆಸುತ್ತಾನೆ. ಆ ಮಹೋತ್ಸವದ ಉದ್ದೇಶದಿಂದ, ಅವನು ಕಲಿಕತಾ ಮತ್ತು ಸಿಂತಿಯ ಸುತ್ತಮುತ್ತಣ ಗ್ರಾಮಗಳಲ್ಲಿರುವ ಅನೇಕಭಕ್ತರನ್ನು ಕರೆಯಿಸುತ್ತಾನೆ. ಆದುದರಿಂದಲೇ ಈ ದಿನ ಶಿವನಾಥ ಮೊದಲಾದ ಭಕ್ತರು ಬಂದಿದ್ದಾರೆ. ಅವರಲ್ಲಿ ಅನೇಕರು ಪ್ರಾತಃಕಾಲದ ಉಪಾಸನೆಯ ವೇಳೆಗೇ ಬಂದು ಸೇರಿದರು. ಸಂಧ್ಯಾಕಾಲದ ಉಪಾಸನೆಯನ್ನು ನಿರೀಕ್ಷಿಸುತ್ತಿದ್ದಾರೆ. ಮಹಾಪುರುಷರು ಅಪರಾಹ್ಣದಲ್ಲಿ ಬರುತ್ತಾರೆಂದು ಕೇಳಿ, ಅವರು, 'ಆ ಆನಂದಮೂರ್ತಿಯನ್ನು ಈ ದಿನ ನಾವು ನೋಡುತ್ತೇವೆ, ಹೃದಯವನ್ನು ಮುಗ್ಧವಾಗಿ ಮಾಡುವ ಅವರ ಅಮೃತಮಯವಾದ ವಾಕ್ಯಗಳನ್ನೂ, ಮಧುರವಾದ ಸಂಕೀರ್ತನವನ್ನೂ, ಕೇಳುತ್ತೇವೆ. ದೇವತೆಗಳಿಗೂ ದುರ್ಲಭವಾದ ಹರಿಪ್ರೇಮಮಯವಾದ ಅವರ ನೃತ್ಯವನ್ನೂ ನೋಡುತ್ತೇವೆ', ಎಂದು ಪರಮಹಂಸರವರ ಆಗಮನವನ್ನು ನಿರೀಕ್ಷಿಸುತ್ತಲಿದ್ದಾರೆ.

ಅಪರಾಹ್ಣದ ವೇಳೆಗೆ ಆ ತೋಟದ ತುಂಬ ಜನಗಳು ತುಂಬಿದರು. ಕೆಲವರು ಲತಾಮಂಟಪದೊಳಗೆ ಕಾಷ್ಠಾಸನದಲ್ಲಿ ಕುಳಿತಿದ್ದಾರೆ. ಕೆಲವರು ಸುಂದರವಾದ ಪುಷ್ಕರಿಣೀತೀರದಲ್ಲಿ ಸ್ನೇಹಿತರೊಂದಿಗೆ ತಿರುಗಾಡುತ್ತಿದ್ದಾರೆ. ಇನ್ನೂ ಅನೇಕರು ಸಮಾಜಮಂದಿರದಲ್ಲಿ ಶ್ರೀರಾಮಕೃಷ್ಣರ ಆಗಮನವನ್ನು ನಿರೀಕ್ಷಿಸುತ್ತ ಮೊದಲೇ ಒಳ್ಳೆಯ ಸ್ಥಲಗಳನ್ನು ಹಿಡಿದುಕೊಂಡು ಕುಳಿತಿದ್ದಾರೆ. ತೋಟದ ಬಾಗಿಲಲ್ಲಿಯೇ ಎಲೆಯಡಕೆಯ ಅಂಗಡಿಗಳು ಇವೆ. ಒಳಗೆ ಪ್ರವೇಶಮಾಡಿದ ಕೂಡಲೇ, ಇದು ಪೂಜಾಗೃಹವೆಂದೂ, ಇಲ್ಲಿ ರಾತ್ರಿ ಉತ್ಸವವಾಗುತ್ತದೆಯೆಂದೂ ಜನರಿಗೆ ಗೊತ್ತಾಗುತ್ತದೆ. ತೋಟದ ನಾಲ್ಕು ಕಡೆಯಲ್ಲಿಯೂ ಆನಂದರಸವು ತುಂಬಿ ತುಳುಕುತ್ತ, ಶರತ್ಕಾಲದ ನೀಲಾಕಾಶದಲ್ಲಿ ಪ್ರತಿಫಲಿಸಿರುವಂತೆ ಕಾಣುತ್ತದೆ.

ಉದ್ಯಾನದ ಮರ, ಬಳ್ಳಿ, ಪೊದರುಗಳ [illegible] ಸಾರುತ
ಬೀಸುತ್ತಲಿದೆ. ಆಕಾಶ, ಜೀವ, ಜಂತು ವೃಕ್ಷಲ [illegible] ಏಕಕಂ
ದಿಂದ ಗಾನಮಾಡುತ್ತಿವೆಯೋ ಎಂಬಂತೆ ತೋರ [illegible], ಆದ [illegible]

ಕಂದ। ಭಗವನ್ಮಂಗ [illegible]
ಳಿಗಳಿಂದಾ [illegible] ನವ [illegible]
ಪ್ರಗತವೆಂನಿಸಿ ತೀ [illegible] ವುದಿ [illegible]
ವಗೆಯಿಂದಾನಂದ ಗಂಧ [illegible] ಸನೀ ದಿನ [illegible]

ಎಲ್ಲರೂ ಭಗವಾನರ ದರ್ಶನವನ್ನು [illegible] ಡುವ ಇ [illegible] ವರಾಗಿದ್ದರು
ಆ ಸಮಯದಲ್ಲಿ ಪರಮಹಂಸದೇವರ ಬ [illegible] ಯು ಸಮಾಜಗೃಹದ ಇದಿರಿಗೆ ಬಂದು
ನಿಂತಿತು.

ನಾಲ್ಕು ಕಡೆಯಲ್ಲಿ ಎಲ್ಲರೂ ಎದ್ದು ನಿಂತು, ಆ ಮಹಾಪುರುಷರಿಗೆ ಸುಖಾಗಮ
ನವನ್ನು ಬಯಸುತ್ತ ಅವರನ್ನು ಸುತ್ತಿಕೊಂಡಿದ್ದಾರೆ.

ಸಮಾಜಗೃಹದ ಮುಖ್ಯವಾದ ಕೊಟ್ಟಡಿಯೊಳಗೆ ಒಂದು ಜಗಲಿಯನ್ನು ಮಾಡಿ
ದ್ದಾರೆ. ಅಲ್ಲಿ ಜನರು ತುಂಬಿದ್ದಾರೆ. ಅದರ ಇದಿರಿಗೆ ಒಂದು ಹಜಾರವಿದೆ. ಅಲ್ಲಿಗೆ
ಪರಮಹಂಸರು ಬಂದರು. ಅಲ್ಲಿಯೂ ಜನಗಳು ತುಂಬಿದ್ದಾರೆ. ಹಜಾರದ
ಎರಡು ಪಕ್ಕಗಳಲ್ಲಿಯೂ ಎರಡು ಕೊಟ್ಟಡಿಗಳಿವೆ. ಅಲ್ಲಿಯೂ ಜನರಿದ್ದಾರೆ. ಕೊಟ್ಟ
ಡಿಯ ಬಾಗಿಲಲ್ಲಿ, ಕತ್ತೆತ್ತಿಕೊಂಡು ನೋಡುತ್ತ, ಜನರು ನಿಂತಿದ್ದಾರೆ. ಹಜಾರಕ್ಕೆ
ಹತ್ತಿ ಬರುವ ಮೆಟ್ಟಿಲುಗಳು ಬಹಳ ವಿಸ್ತಾರವಾಗಿವೆ. ಅವುಗಳ ಮೇಲೆಯೂ ಜನರು
ತುಂಬಿದ್ದಾರೆ. ಮೆಟ್ಟಿಲಿನ ಹತ್ತಿರದಲ್ಲಿ ಎರಡು ಮೂರು ವೃಕ್ಷಗಳೂ, ಪಕ್ಕದಲ್ಲಿ
ಲತಾಮಂಟಪವೂ ಇವೆ. ಜನರು ಕುಳಿತುಕೊಳ್ಳುವುದಕ್ಕಾಗಿ ಅಲ್ಲಿ ಬೆಂಚುಗಳನ್ನು
ಹಾಕಿದ್ದಾರೆ. ಜನಗಳು ಹಾಗೆಯೇ, ಅಲ್ಲಲ್ಲಿಯೇ ಇದ್ದು, ಕುತ್ತಿಗೆಯನ್ನು ನೀಡಿ
ಕೊಂಡು, ಮಹಾಪುರುಷರ ಕಡೆಯನ್ನೇ ನೋಡುತ್ತಿದ್ದಾರೆ. ಮಾರ್ಗದ ಎರಡು
ಕಡೆಗಳಲ್ಲಿಯೂ ಸಾಲಾಗಿ ಫಲವೃಕ್ಷಗಳೂ, ಪುಷ್ಪವೃಕ್ಷಗಳೂ, ವಾಯುವಿನಿಂದ
ಕೊಂಚ ಅಲ್ಲಾಡುತ್ತ, ಆನಂದಭಾರದಿಂದ ತಲೆಯನ್ನು ಬಗ್ಗಿಸಿ, ಭಗವಾನರಿಗೆ ಸುಖಾ
ಗಮನವನ್ನು ಬಯಸುತ್ತವೆಯೋ ಎಂಬಂತೆ ಕಾಣುತ್ತಿವೆ.

ಪರಮಹಂಸರು ನಗುತ್ತಾ ಆಸನವನ್ನು ಸ್ವೀಕರಿಸಿದರು. ನಾಟಕಶಾಲೆಯಲ್ಲಿ
ಅಭಿನಯವು ಪ್ರಾರಂಭವಾಗುವ ವರೆಗೆ ನಾಟಕವನ್ನು ನೋಡುವುದಕ್ಕೆ ಬಂದವರಲ್ಲಿ
ಕೆಲವರು ನಗುತ್ತಲೂ, ಕೆಲವರು ವಿಷಯಕರ್ಮಗಳ ಮಾತನ್ನಾಡುತ್ತಲೂ,
ಇನ್ನು ಕೆಲವರು ಏಕಾಕಿಗಳಾಗಿ ತಿರುಗುತ್ತಲೂ, ಮತ್ತೆ ಕೆಲವರು ಸ್ನೇಹಿತರೊಡನೆ
ತಿರುಗಾಡುತ್ತಲೂ, ಇನ್ನು ಕೆಲವರು ಎಲೆಯಡಕೆಯನ್ನು ಅಗಿಯುತ್ತಲೂ, ಮತ್ತೆ
ಕೆಲವರು ಗುಡುಗುಡಿಯನ್ನು ಸೇದುತ್ತಲೂ ಇರುತ್ತಾ, ಅಂಕದ ತೆರೆಯನ್ನು ಎತ್ತಿದ

ಕೂಡಲೇ, [illegible]ಗ[illegible]ಲ[illegible]ನ್ನು ನಿಲ್ಲಿಸಿ, ಅನನ್ಯಮನಸ್ಕರಾಗಿ, ಏಕದೃಷ್ಟಿಯಿಂದ ನಾಟ್ಯರಂಗವನ್ನೇ ನೋಡ[illegible]ರೆಯೋ, ಹೇಗೆ ಹಲವು ಬಗೆಯ ಪುಷ್ಪಗಳಲ್ಲಿ ಜೇನು ಹೀರುವ ದುಂಬಿಗಳು ಸಂಪು[illegible]ಗಂಧವನ್ನು ಕಂಡ ಕೂಡಲೇ ಇತರ ಪುಷ್ಪಗಳನ್ನು ಬಿಟ್ಟು [illegible]ರಲ್ಲಿಯೇ [illegible]ಡುತ್ತಾ ಕುಳಿತುಕೊಳ್ಳುತ್ತವೆಯೋ, ಹಾಗೆಯೇ ಈಗ[illegible]ರ ದೃಷ್ಟಿಗಳೂ ಏ[illegible]ಲದಲ್ಲಿ ಭಗವಾನರ ಆನಂದಮೂರ್ತಿಯ ಕಡೆಗೆ ತಿರುಗಿದು[illegible]

ದ್ವಿತೀಯ ಪರಿಚ್ಛೇದ

ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।
ಸಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ॥ ಗೀತಾ ೧೪–೨೬

[ಭಗವಂತನಾದ ನನ್ನನ್ನು ಬೇರೊಂದು ಕಡೆಗೂ ಹೋಗದ ಭಕ್ತಿಯಿಂದ ಸೇವಿಸುವವನು, ಸತ್ವರಜಸ್ತಮೋಗುಣಗಳನ್ನು ಅತಿಕ್ರಮಿಸಿ ಮೋಕ್ಷಕ್ಕೆ ಸಮರ್ಥನಾಗುತ್ತಾನೆ.]

(ಭಕ್ತರೊಂದಿಗೆ ಸಂಭಾಷಣ.)

ಪರಮಹಂಸರು :—(ನಸುನಗುತ್ತಾ, ಶ್ರೀಯುಕ್ತ ಶಿವನಾಥನೇ ಮೊದಲಾದ ಭಕ್ತರ ಸಮುದಾಯವನ್ನು ದೃಷ್ಟಿಸಿ) ಶಿವನಾಥ, ನೋಡಿರಿ, ನೀವು ಭಕ್ತರು, ನಿಮ್ಮನ್ನು ನೋಡಿದರೆ ನನಗೆ ಬಹಳ ಆನಂದವಾಗುತ್ತದೆ. ಲೋಕದಲ್ಲಿ ಗಾಂಜಾಕುಡಿಯುವನು ಗಾಂಜಾ ಕುಡಿಯುವ ಮತ್ತೊಬ್ಬನನ್ನು ಕಂಡರೆ ಸಂತೋಷದಿಂದ ಅಪ್ಪಿಕೊಳ್ಳುತ್ತಾನೆ. ಇದು ಸ್ವಭಾವ. (ಶಿವನಾಥನೂ ಎಲ್ಲರೂ ನಗುವರು.)

(ಸಂಸಾರಿಗಳ ಸ್ವಭಾವ ಮತ್ತು ನಾಮಮಾಹಾತ್ಮ್ಯ)

ಶ್ರೀರಾಮಕೃಷ್ಣ :—ಈಶ್ವರನಲ್ಲಿ ಮನಸ್ಸಿಲ್ಲದವರೂ ನನ್ನಲ್ಲಿಗೆ ಬರುತ್ತಾರೆ. ಅವರಿಗೆ, 'ನೀವು ಅಲ್ಲಿಗೆ ಹೋಗಿ ಕುಳಿತುಕೊಳ್ಳಿರಿ. ರಾಸಮಣಿಯ ಕಾಳಿಯ ದೇವಾಲಯವು ಬಲು ಚೆನ್ನಾಗಿದೆ, ಹೋಗಿ ನೋಡಿರಿ,' ಎಂದು ಹೇಳುತ್ತೇನೆ. (ಎಲ್ಲರೂ ನಗುವರು)

ಭಕ್ತರ ಜತೆಯಲ್ಲಿ ಪ್ರಯೋಜನವಿಲ್ಲದವರೂ ಬ... ಆ...ಗೆ ವಿಷ
ಬುದ್ಧಿಯು ತುಂಬ ಹೆಚ್ಚು, ಈಶ್ವರನ ಮಾ...ಳೇ ...ಚಿಸು...ವುದಿಲ್ಲ. ಭಕ್ತರ
ಪ್ರಾಯಿಕವಾಗಿ ಬಲು ಹೊತ್ತು ನ... ಈಶ್ವರನ ಮಾತನ್ನೇ ಆಡ
ತ್ತಾರೆ. ಅಲ್ಲಿ ಅವರೊಡನೆ ಬ... ...ಕಂಗೆ, ಅಷ್ಟು ಹೊತ್ತ
ಕುಳಿತುಕೊಳ್ಳುವುದಕ್ಕೇ ಆಗುವುದಿಲ್ಲ. ಅವರು ಆಡಿಗಡಿಗೆ ಭಕ್ತರ ಕಿ
ಯಲ್ಲಿ, 'ಆವಾಗ ಹೋಗೋಣ, ಆವಾಗ ಹೋಗೆ...ಣ,' ಎಂದು ಪಿ
ಗುಟ್ಟುತ್ತಾರೆ. ಭಕ್ತರು, 'ಕೊಂಚ ...ರಿ, ಇನ್ನ...ಷ್ಟು ಹೊತ್ತಿನ ಮೇ
ಹೊರಟು ಹೋಗೋಣ,' ಎಂ...ತಿವರಿಗೆ ಹೇಳು...ರೆ. ಆಗ ಅವರ
ಕೋಪಗೊಂಡು, 'ಹಾಗಿದ್ದರೆ ನೀವು ಮಾತಾಡುತ್ತಾ ಇರಿ, ನಾವ
ದೋಣಿಯಲ್ಲಿ ಕುಳಿತಿರುತ್ತೇವೆ,' ಎಂದು ಹೇಳುತ್ತಾರೆ. (ಎಲ್ಲರೂ ನಗ
ತ್ತಾರೆ.)

'ಈ ಸಂಸಾರವನ್ನೆಲ್ಲಾ ಪರಿತ್ಯಾಗಮಾಡಿ, ಈಶ್ವರನ ಪಾದಪದ್ಮದಲ್ಲಿ ಮಗ
ರಾಗಿರಿ,' ಎಂದು ಸಂಸಾರಿಗಳಿಗೆ ಹೇಳಿದರೆ, ಅವರು ಆ ಮಾತನ್ನು ಕೇಳ
ವುದೇ ಇಲ್ಲ; ವಿಷಯಾಸಕ್ತರನ್ನು ಸೆಳೆಯುವುದಕ್ಕಾಗಿ ಗೌರಾಂಗನಿತಾ
ನಂದರಿಬ್ಬರೂ ಅಣ್ಣತಮ್ಮಂದಿರಂತೆ ಸೇರಿಕೊಂಡು, 'ಮಾಗೂರ ಮತ್ಸ್ಯದ
ಸಾರು, ಯುವತೀಜನರ ಊರು, ಹರಿನಾಮದ ಸಾರು,' ಎಂದ
ಹಾಡುತ್ತ ಬಂದರು. ಮತ್ಸ್ಯದ ಸಾರು, ಯುವತಿಯರೂರು, ಎಂಬ
ವುಗಳ ಆಸೆಯಿಂದ ಅನೇಕರು ಹರಿನಾಮವನ್ನು ಹೇಳುವುದಕ
ಹೋಗುತ್ತಿದ್ದರು. ಹರಿನಾಮಾಮೃತದ ರುಚಿಯನ್ನು ಸವಿದ ಬಳಿಕ
ಮಾಗೂರ ಮತ್ಸ್ಯ, ಎಂದರೆ ಸುಂದರವಾದ ಕಣ್ಣು, ಮತ್ಸ್ಯದ ಸಾರ
ಎಂದರೆ ಹರಿಪ್ರೇಮದಿಂದ ಸುರಿಯುವ ಆನಂದಾಶ್ರು, ಯುವತೀ ಎಂದ
ಪೃಥಿವೀ, ಯುವತಿಯ ತೊಡೆ ಎಂದರೆ ಹರಿಪ್ರೇಮದಿಂದ ನೆಲದ ಧೂ
ಯಲ್ಲಿ ಹೊರಳಾಡುವುದು ಎಂದು ತಿಳಿದುಕೊಳ್ಳುತ್ತಿದ್ದರು.

ನಿತ್ಯಾನಂದನು ಆವ ರೀತಿಯಲ್ಲಾದರೂ ಜನರು ಹರಿನಾಮವನ್ನು ಹೇಳುವಂ
ಮಾಡುತ್ತಿದ್ದನು. ಚೈತನ್ಯದೇವನು, 'ಈಶ್ವರನಾಮದಲ್ಲಿ ಬಹಳ ಮಾಹ
ತ್ಮ್ಯವಿದೆ, ಒಂದು ವೇಳೆ ಶೀಘ್ರವಾಗಿ ಫಲವಾಗದಿದ್ದರೂ, ಎಂದಾದರೂ
ಫಲವಾಗಿಯೇ ಆಗುತ್ತದೆ, ಕೆಲವರು ಮನೆಯ ಕಾರ್ನಿಸ್ಸಿನ ಮೇಲೆ ಬೀ
ವನ್ನು ಇಟ್ಟಿದ್ದರು. ಬಹಳ ದಿವಸಗಳಾದ ಮೇಲೆ ಮನೆಯು ನೆಲಸ
ವಾಗಿ ಹೋಯಿತು. ಆಗ ಆ ಬೀಜವು ಮಣ್ಣಿನಲ್ಲಿ ಬಿದ್ದು, ಗಿಡವಾಗಿ ಫ
ವನ್ನು ಕೊಟ್ಟಿತು. ಹಾಗೆಯೇ ದೇವರ ನಾಮವೂ,' ಎಂದು ಹೇಳುತ್ತಿ
ದ್ದನು.

(ಮನುಷ್ಯ… ಗುಣತ್ರ… ತ್ತಯ ಸತ್ವರಜಸ್ತಮೋಗುಣಗಳು)

ಶ್ರೀರಾಮಕೃಷ್ಣ — ಸಂಸಾರಿಗಳಲ್ಲಿ ಸತ್ವರಜಸ್ತಮಸ್ಸೆಂಬ ಮೂರು ಗುಣಗಳಿರುವಂತೆಯೇ, ಭಕ್ತಿಯಲ್ಲಿಯೂ ಸತ್ವರಜಸ್ತಮಸ್ಸೆಂಬ ಮೂರು ಗುಣಗಳಿವೆ. ಸಂಸಾರಿಯ ಸತ್ವಗುಣಲಕ್ಷಣವು ಆವ ರೀತಿಯಿದೆ, ಬಲ್ಲೆಯಾ? ಮನೆಯು ಇತ್ತ ಕಡೆಯೂ ಅತ್ತ ಕಡೆಯೂ ಬಿದ್ದು ಹೋಗಿದೆ. ಅದಕ್ಕೆ ಕಾಮಗಾರಿಯೇನನ್ನೂ ಮಾಡುವುದೇ ಇಲ್ಲ. ದೇವರ ಮನೆಯಲ್ಲಿ ಪಾರಿವಾಳಗಳು ಹಿಕ್ಕೆಹಾಕಿ ಕೆಡಿಸಿ ಇವೆ. ಅಂಗಳವೆಲ್ಲವೂ ಪಾಚಿಹಿಡಿದು ಹೋಗಿದೆ. ಅದನ್ನು ನೋಡುವುದೇ ಇಲ್ಲ. ಮನೆಯ ಮಣೆ, ಮೇಜು, ಮುಂತಾದುವುಗಳೆಲ್ಲವೂ ತುಂಬಾ ಹಳದಾಗಿ ಹೋಗಿವೆ. ಅವುಗಳನ್ನು ಪರಿಷ್ಕಾರಮಾಡಿಸುವ ಪ್ರಯತ್ನವೇ ಇಲ್ಲ. ಹೊದೆಯುವುದಕ್ಕೆ ಅವುದೋ ಒಂದು ಬಟ್ಟೆಯು ಸಿಕ್ಕಿದರೆ ಸಾಕು. ಆ ಮನುಷ್ಯನು ಬಹಳ ಶಾಂತನು, ಶಿಷ್ಟ, ದಯಾಳು, ನಿಷ್ಕಪಟಿ, ಆರಿಗೂ ಅವುದೊಂದು ಕೆಡುಕನ್ನೂ ಮಾಡುವನಲ್ಲ.

ಗಡಿಯಾರ, ಸರಪಣಿ, ಬೆರಲುಗಳಲ್ಲಿ ಎರಡು ಮೂರು ಉಂಗುರಗಳು, ಮನೆಯಲ್ಲಿ ಎಲ್ಲವೂ ಒಳ್ಳೆಯ ಹೊಸಸಾಮಗ್ರಿಗಳು, ಗೋಡೆಯಲ್ಲಿ ರಾಣಿಯ ಪಟ, ರಾಜಪುತ್ರರ ಪಟ, ದೊಡ್ಡ ದೊಡ್ಡ ಮನುಷ್ಯರ ಪಟ; ಗೋಡೆಗೆಲ್ಲಾ ಅಂದವಾಗಿ ಸುಣ್ಣಬಳಿಯಿಸಿ, ಒಂದು ಕಡೆಯಲ್ಲಿಯೂ ಕೊಂಚವೂ ಕಲೆಯಿಲ್ಲದಂತೆ ಇರಿಸಿರುವುದು, ಬಗೆ ಬಗೆಯಾದ ಒಳ್ಳೆಯ ಉಡುಪುಗಳು, ಮನೆಯ ಸೇವಕರಿಗೆಲ್ಲ ಒಳ್ಳೆಯ ಉಡುಪುಗಳು; ಹೀಗಿರುವುದು ಸಂಸಾರಿಯ ರಜೋಗುಣದ ಲಕ್ಷಣ.

ನಿದ್ರೆ, ಕಾಮ, ಕ್ರೋಧ, ಅಹಂಕಾರ ಇವೆಲ್ಲವೂ ಸಂಸಾರಿಯ ತಮೋಗುಣದ ಲಕ್ಷಣ.

ಭಕ್ತಿಯಲ್ಲಿಯೂ ಸತ್ವಗುಣವಿದೆ. ಸತ್ವಗುಣವುಳ್ಳ ಭಕ್ತನು, ರಹಸ್ಯವಾಗಿ ಸೊಳ್ಳೆಯ ತೆರೆಯೊಳಗೆ ಕುಳಿತುಕೊಂಡು, ಭಗವಂತನನ್ನು ಧ್ಯಾನಮಾಡುತ್ತಾನೆ. 'ಇವನು ಇನ್ನೂ ಮಲಗಿದ್ದಾನೆ. ರಾತ್ರಿ ಬೇಗ ನಿದ್ದೆ ಬಂದಿರಲಾರದು. ಆದುದರಿಂದ ಏಳುವುದಕ್ಕೆ ಇಷ್ಟೊಂದು ಸಾವಕಾಶವಾಗಿದೆ,' ಎಂದು ಎಲ್ಲರೂ ತಿಳಿದುಕೊಳ್ಳುತ್ತಾರೆ. ಹೊಟ್ಟೆ ತುಂಬುವ ಮಾತ್ರವೇ ಶರೀರದ ಮೇಲೆ ಅವನಿಗೆ ಆದರ. ಆಹಾರದಲ್ಲಿಯೂ, ಒಂದು ಪಲ್ಯ, ಅನ್ನ, ಇಷ್ಟಾದರೆ ಸಾಕು; ಉಡುಪಿನಲ್ಲಿಯೂ ಆಡಂಬರವಿಲ್ಲ. ಮನೆಯ ಪದಾರ್ಥಗಳಲ್ಲಿ ತಳುಕು ಇಲ್ಲ, ಸತ್ವಗುಣಿಯಾದ ಭಕ್ತನು, ಅವಾಗಲೂ ಇಲ್ಲದ ಗುಣಗಳನ್ನು ಆರೋಪಿಸಿ, ಇತರರನ್ನು ಹೊಗಳಿ, ದುಡ್ಡನ್ನು ಕಿತ್ತುಕೊಳ್ಳುವುದಿಲ್ಲ.

ರಜೋಗುಣಿಯಾದ ಭಕ್ತನು ಹ[illegible]ವಿಡುತ್ತಾನೆ; [illegible]ಲಿಗೆ ರುದ್ರಾಕ್ಷಿ ಮಾಲೆಯನ್ನು ಹಾಕಿಕೊಳ್ಳುತ್ತಾನೆ. ಅದರ ಮಧ್ಯೆ ಮಧ್ಯೇ ಚಿನ್ನದ ಮಣಿಗಳು ಬೇರೆ. (ಎಲ್ಲರೂ ನಗುವರು) ಅವನು ಪೂಜೆಮಾಡುವಾಗ ಕೂಡ, ಸೊಗಸಾದ ಪೀತಾಂಬರವನ್ನು ಉಟ್ಟಿರುತ್ತಾನೆ.

ತೃತೀಯ ಪರಿಚ್ಛೇದ

ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ॥ ಗೀತಾ ೨-೩

[ಶತ್ರುಸಂಹಾರಕನಾದ ಎಲೈ ಅರ್ಜುನನೇ, ನೀನು ಹೇಡಿಯಾಗಬೇಡ. ಇದು ನಿನಗೆ ಸರಿಯಲ್ಲ, ಹೃದಯದೌರ್ಬಲ್ಯದಿಂದುಂಟಾದ ಈ ಕ್ಷುದ್ರವಾದ ಶೋಕವನ್ನು ಬಿಟ್ಟು, ಎದ್ದು ನಿಲ್ಲು.]

ಶ್ರೀರಾಮಕೃಷ್ಣ:—ತಮೋಗುಣಿಯಾದ ಭಕ್ತನಿಗೆ ವಿಶ್ವಾಸವು ಉಜ್ವಲವಾಗಿರುತ್ತದೆ. ಅವನು, 'ಹೊಡೆ, ಕಡಿ, ಕಟ್ಟು,' ಎಂದು ಹೆದರಿಸಿ, ತಲೆ ಹೊಡೆದು, ಹಣವನ್ನು ಸುಲಿದುಕೊಂಡು ಹೋಗುವ ಕಳ್ಳರಂತೆ, ಈಶ್ವರನೊಂದಿಗೆ ತುಂಬ ಹಟಮಾಡುತ್ತಾನೆ.

ಹೀಗೆಂದು ಹೇಳುತ್ತ ಭಗವಾನರು ಊರ್ಧ್ವದೃಷ್ಟಿಯುಳ್ಳವರಾಗಿ, ಪ್ರೇಮರಸವನ್ನು ಸುರಿಸುವ ಕಂಠದಿಂದ ಹಾಡುತ್ತಿದ್ದಾರೆ.

॥ಭಾಮಿನೀಷಟ್ಪದಿ॥

ಲೇಸಿನಿಂ ಕಾಳಿಯನು ನೆನೆಯಲು।
ತ್ರೀಶರೀರತ್ಯಾಗಮಾಡಲು।
ಕಾಶಿಕಾಂಚಿಗಯಾಪ್ರಭಾಸಕ್ಷೇತ್ರಯಾತ್ರೆಗಳ॥
ಆಸೆಯೇತಕೆ ಸಂಜೆ ಮುಂಜೆ ಮಾಡದಿರೂ॥
ಳಾಸರಿಲ್ಲದೆಯವಳ ನೆನೆವಂ।
ಗಾಸೆಯಾಗದು ಪೂಜೆ ಸಂಧ್ಯಾವಂದನಂಗಳಲಿ॥ ॥೧॥
ಕಾಳಿಯನು ಬೆನ್ನಟ್ಟೆ ಸಂಧ್ಯಾ।
ಕಾಲವಂದನೆಯೆಯ್ದದಾಡುವು।
ಮೇಲೆನಿಪ ದಾನವ್ರತಂಗಳು ಮನಕೆ ಸೊಗಯಿಸವು॥
ಕಾಳಿಲೆಂಕನೆನಿಪ್ಪ ಮದನನ।
ಬೇಳುವೆಗಳಾಕೆಯನು ಹೊದ್ದವು।
ಕೇಳವಳ ಗುಣಗಣವ ನುತಿಸುವನೈಮೊಗದ ಶಿವನು ॥೨॥

ಭಗವಾನರು ಭಕ್ತಿಪರವಶರಾಗಿ, ಅಗ್ನಿಮಂತ್ರದಲ್ಲಿ ದೀಕ್ಷಿತರಾಗಿದ್ದಾರೆಯೋ ಎಂಬಂತೆ, ಗಾನಮಾಡುತ್ತಿದ್ದಾರೆ.

(ನಾಮಮಾಹಾತ್ಮ್ಯ ಮತ್ತು ಪಾಪ, ಆಚಾರ್ಯರು ಮೂರು ವಿಧ.)

॥ಗಾನ॥

ದುರ್ಗೆ ದುರ್ಗೆ ದುರ್ಗೆಯೆನುತ। ಭಗ-ಜಾಯೆ ನಾನು ಸಾಯೆ।
ದುರ್ಗತನನು ಪೊರೆಯದೆಂತು। ನಿರ್ಗಮಿಸುವೆ ಪೇಳು ತಾಯೆ॥

ನಾನು ತಾಯ ಹೆಸರನ್ನು ಹೇಳಿದ್ದೇನೆ. ನನಗೆ ಇನ್ನು ಪಾಪವುಂಟೇ? ನಾನು ಅವಳ ಮಗು, ಅವಳ ಐಶ್ವರ್ಯಕ್ಕೆ ಅಧಿಕಾರಿ, ಎಂಬುದಾಗಿ ಹಟ ಹಿಡಿಯಬೇಕು. ವಿಷಯಗಳಿಂದ ತಮೋಗುಣವನ್ನು ತಿರುಗಿಸಿ, ಭಗವಂತ ನಲ್ಲಿಟ್ಟರೆ, ಅವನನ್ನು ಪಡೆಯಬಹುದು. ಅವನಲ್ಲಿ ಹಟಮಾಡಬೇಕು, ಅವನು ಅನ್ಯನಲ್ಲ, ನಮ್ಮವನೇ.

ಈ ತಮೋಗುಣವನ್ನು ಇತರರ ನಲ್ಮೆಗಾಗಿ ಉಪಯೋಗಿಸಬಹುದು. ವೈದ್ಯರು ಉತ್ತಮ, ಮಧ್ಯಮ, ಅಧಮ, ಎಂದು ಮೂರು ವಿಧ. ಆವ ವೈದ್ಯನು, ರೋಗಿಯ ನಾಡಿಯನ್ನು ಹಿಡಿದು ನೋಡಿ, 'ಈ ಔಷಧವನ್ನು ಕುಡಿ,' ಎಂದು ಹೇಳಿ, ಅವನು ಮದ್ದು ತಿಂದನೇ ಇಲ್ಲವೇ, ಎಂದು ವಿಚಾರಿಸದೆಯೇ ಹೊರಟು ಹೋಗುತ್ತಾನೆಯೋ, ಅವನು ಅಧಮವೈದ್ಯನು. ಆವನು, ರೋಗಿಯನ್ನು ನೋಡಿ, 'ನೀನು ಔಷಧವನ್ನು ಕುಡಿಯದಿದ್ದರೆ ಹೇಗೆ ಗುಣವಾದೀತು? ಅಪ್ಪ, ನಿನಗಾಗಿ ನಾನೇ ಔಷಧವನ್ನು ಸಿದ್ಧಮಾಡಿ ಕೊಡುತ್ತೇನೆ. ಅದನ್ನು ಸೇವನೆಮಾಡು,' ಎಂದು ಒಳ್ಳೆಯ ಮಾತ ನ್ನಾಡುತ್ತಾನೆಯೋ, ಆತನು ಮಧ್ಯಮವೈದ್ಯನು. ಆವ ವೈದ್ಯನು, ರೋಗಿಯು ಆವ ರೀತಿಯಲ್ಲಿಯೂ ಔಷಧವನ್ನು ಸೇವನೆಮಾಡುವುದಿಲ್ಲ ವೆಂದು ತಿಳಿದು, ಅವನ ಎದೆಯ ಮೇಲೆ ಮೊಳಕಾಲನ್ನೂರಿ, ಮೆಟ್ಟಿ ಕೊಂಡು, ಬಲಾತ್ಕಾರದಿಂದ ಔಷಧವನ್ನು ಕುಡಿಸುತ್ತಾನೆಯೋ, ಅವ ನೀಗ ಉತ್ತಮವೈದ್ಯನು. ಈ ವೈದ್ಯನು ತಮೋಗುಣದವನು. ಆ ಗುಣ ದಿಂದ, ರೋಗಿಗೆ ಒಳ್ಳೆಯದಾಗುತ್ತದೆಯೇ ಹೊರತು, ಕೆಟ್ಟದೇನೂ ಆಗು ವುದಿಲ್ಲ.

ಹೀಗೆಯೇ ಆಚಾರ್ಯರೂ ಮೂರು ವಿಧ. ಆವ ಆಚಾರ್ಯನು, ಧರ್ಮೋಪ ದೇಶವನ್ನು ಮಾಡಿದ ಬಳಿಕ, ಶಿಷ್ಯನ ಸಂಗತಿಯೊಂದನ್ನೂ ವಿಚಾರಿಸುವು ದಿಲ್ಲವೋ, ಆತನು ಅಧಮನು. ಆವನು, ಶಿಷ್ಯರ ನಲ್ಮೆಗಾಗಿ ಉಪದೇಶವನ್ನು

ಧಾರಣೆಮಾಡುವಂತೆ ಚೆನ್ನಾಗಿ ತಿಳಿಸುತ್ತಾ, ಅವರಿಗೆ ಬಹಳ ಪ್ರೀತಿಯನ ತೋರಿಸಿ, 'ಹೀಗೆ ನಡೆಯಿರಿ,' ಎಂದು ಹೇಳಿಕೊಡುತ್ತಾನೆಯೋ, ಆ ಆಚಾ ರ್ಯನು ಮಧ್ಯಮನು. ಶಿಷ್ಯರು ಆವಾಗಲೂ ಆವ ರೀತಿಯಿಂದಲೂ ಉ ದೇಶವನ್ನು ಕೇಳುವುದಿಲ್ಲವೆಂದು ತಿಳಿದು, ಬಲಾತ್ಕಾರದಿಂದ ಆವ ಆಚಾ ರ್ಯನು ಅವರಿಂದ ಧರ್ಮಾಚರಣೆಯನ್ನು ಮಾಡಿಸುತ್ತಾನೆಯೋ, ಅವನೀಗ ಉತ್ತಮನೆನಿಸಿದ ಆಚಾರ್ಯನು.

ಚತುರ್ಥ ಪರಿಚ್ಛೇದ

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ- ತೈತ್ತಿರೀಯೋಪನಿಷತ್

[ವೇದವೂ ಮನಸ್ಸೂ ಪರಬ್ರಹ್ಮವನ್ನು ಪಡೆಯದೆ, ಅವನ ಬಳಿಯಿಂದ ಹಿಂತಿ ರುಗುತ್ತಿರುವುವು.]

(ಬ್ರಹ್ಮಸ್ವರೂಪವನ್ನು ಮುಖದಿಂದ ಹೇಳಲು ಆಗುವುದಿಲ್ಲ.)

ಬ್ರಾಹ್ಮಭಕ್ತ :—ಸ್ವಾಮೀ, ಈಶ್ವರನು ಸಾಕಾರನೇ? ಅಥವಾ, ನಿರಾಕಾರನೇ?

ಶ್ರೀರಾಮಕೃಷ್ಣ :—ಅವನು ಇಂಥವನೆಂದು ಬಾಯಿಂದ ಹೇಳಲು ಆಗುವು ದಿಲ್ಲ. ಅವನು ನಿರಾಕಾರನೂ ಅಹುದು, ಸಾಕಾರನೂ ಅಹುದು. ಆತನು ಭಕ್ತರಿಗೆ ಸಾಕಾರನು. ಆರು ಜ್ಞಾನಿಗಳೋ, ಎಂದರೆ ಜಗತ್ತೆಲ್ಲವೂ ಸ್ವಪ್ನ ದಂತೆ, ಎಂದು ತಿಳಿದುಕೊಂಡಿದ್ದಾರೆಯೋ, ಅವರಿಗೆ ಅವನು ನಿರಾಕಾರನು. ಭಕ್ತನು, 'ನಾನೊಂದು ವಸ್ತು, ಜಗತ್ತೊಂದು ವಸ್ತು,' ಎಂದು ತಿಳಿದು ಕೊಂಡಿದ್ದಾನೆ. ಆದುದರಿಂದ ಅವನಿಗೆ ಈಶ್ವರನು ಒಂದು ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಜ್ಞಾನಿಗಳು ವೇದಾಂತವಾದಿಗಳಂತೆ, 'ಇದೂ ಅಲ್ಲ, ಅದೂ ಅಲ್ಲ,' ಎಂದು ವಿಚಾರಮಾಡಿ, 'ನಾನೂ ಮಿಥ್ಯಾ, ಜಗ ತ್ತೂ ಮಿಥ್ಯಾ, ಎಂದರೆ ಸ್ವಪ್ನದಂತೆ,' ಎಂದು ತಿಳಿದುಕೊಳ್ಳುತ್ತಾರೆ. ಆದರೂ, ಭಗವಂತನು ಆರೆಂಬುದನ್ನು ಬಾಯಿಂದ ಹೇಳುವುದಕ್ಕೆ ಆಗು ವುದಿಲ್ಲ.

ಭಗವಂತನು ಹೇಗಿದ್ದಾನೆ ಬಲ್ಲಿರಾ? ಅವನು ಸಚ್ಚಿದಾನಂದಸಮುದ್ರನು. ಅವ ನಿಗೆ ಪಾರವೇ ಇಲ್ಲ. ಆ ಮಹಾಸಾಗರವು ಭಕ್ತಿಯೆಂಬ ಹಿಮದಿಂದ

ಅಲ್ಲಲ್ಲಿಯೇ ಗಡ್ಡೆಗಟ್ಟಿಕೊಂಡು, ಒಂದು ಆಕಾರವಾಗಿ ಕಾಣಿಸಿಕೊಳ್ಳುತ್ತದೆ, ಎಂದರೆ, ಭಗವಂತನು ಭಕ್ತರ ಮುಂದೆ ಒಂದೊಂದು ವೇಳೆ ಸಾಕಾರನಾಗಿ ನಿಲ್ಲುತ್ತಾನೆ. ಜ್ಞಾನವೆಂಬ ಸೂರ್ಯನು ಹುಟ್ಟಿದರೆ, ಆ ಹಿಮದ ಗಡ್ಡೆಯು ಕರಗಿ ಹೋಗುತ್ತದೆ. ಆಗ ಭಕ್ತನಿಗೆ ಈಶ್ವರನನ್ನು ವ್ಯಕ್ತಿಯೆಂದು ತಿಳಿಯು ವುದಕ್ಕೆ ಆಗುವುದಿಲ್ಲ. ಅವನ ರೂಪದರ್ಶನವೂ ಆಗುವುದಿಲ್ಲ. ಅವನು ಇಂಥವನೆಂದು ಹೇಳುವುದಕ್ಕೂ ಆಗುವುದಿಲ್ಲ. ಹೇಳುವರು ತಾನೇ ಆರು? ಆರು ಹೇಳಬೇಕೋ ಅವರೇ ಇಲ್ಲ. ಭಕ್ತನ ಅಹಂಕಾರವು ಹುಡುಕಿದರೂ ಸಿಕ್ಕುವುದಿಲ್ಲ. ವಿಚಾರಮಾಡಿದರೆ, 'ನಾನು, ನೀನು,' ಎಂಬುದು ಆವುದೂ ನಿಲ್ಲುವುದಿಲ್ಲ. ನೀರುಳ್ಳಿಯ ಮೇಲಣ ಕೆಂಪು ಸಿಪ್ಪೆಯನ್ನು ಮೊದಲು ಸುಲಿದು ಹಾಕಿದರೆ, ಬಳಿಕ ಬಿಳುಪಾಗಿಯೂ, ಮಂದವಾಗಿಯೂ ಇರುವ ಸಿಪ್ಪೆಯು ಇರುತ್ತದೆ. ಹೀಗೆ ಒಂದೊಂದು ಪರೆಯಾಗಿ, ಸಿಪ್ಪೆಗಳನ್ನೆಲ್ಲ ತೆಗೆದುಹಾಕುತ್ತಾ ಬಂದರೆ, ಒಳಗೆ ಏನೂ ಇರುವುದೇ ಇಲ್ಲ.

ಎಲ್ಲಿ ಹುಡುಕಿದರೂ ಅಹಂಕಾರವು ಸಿಕ್ಕುವುದಿಲ್ಲ. ಹುಡುಕುವರು ತಾನೇ ಆರು? ಅಲ್ಲಿ ಬ್ರಹ್ಮಸ್ವರೂಪವು ಹೇಗಿದೆಯೆಂಬುದನ್ನು ಆರು ತಾನೇ ಹೇಳಬಲ್ಲರು? ಒಂದು ಉಪ್ಪಿನ ಗೊಂಬೆಯು ಸಮುದ್ರವನ್ನು ಅಳೆಯುವುದಕ್ಕೆ ಹೋಗಿ, ನೀರಿಗೆ ಇಳಿಯಿತು. ಒಡನೆಯೇ ಅದು ಕರಗಿ ನೀರೊಂದಿಗೆ ಸೇರಿಹೋಯಿತು. ಆಮೇಲೆ ಸಮುದ್ರದ ಆಳವನ್ನು ಇಷ್ಟೆಂದು ಹೇಳುವರು ಆರು?

ಪೂರ್ಣಜ್ಞಾನವುಂಟಾದರೆ ಮನುಷ್ಯನಿಗೆ ಮಾತಾಡುವುದಕ್ಕೆ ಆಗುವುದಿಲ್ಲ; ಆಗ ಅಹಂಕಾರವೆಂಬ ಉಪ್ಪಿನ ಗೊಂಬೆಯು ಸಚ್ಚಿದಾನಂದಸಮುದ್ರದಲ್ಲಿ ಮುಳುಗಿ, ಆ ನೀರಿನೊಡನೆ ಕರಗಿ, ಒಂದೇ ಆಗಿ ಹೋಗುತ್ತದೆ. ಸ್ವಲ್ಪವೂ ಭೇದಬುದ್ಧಿಯು ನಿಲ್ಲುವುದಿಲ್ಲ.

ವಿಚಾರವು ಎಲ್ಲಿಯ ವರೆಗೂ ಮುಗಿಯುವುದಿಲ್ಲವೋ, ಅಲ್ಲಿಯ ವರೆಗೂ ಜನರು ಹೆಚ್ಚಾಗಿ ಮಾತಾಡುತ್ತ ತರ್ಕಮಾಡುತ್ತಾರೆ. ಅದು ಮುಗಿದರೆ, ಬಾಯಿ ಮುಚ್ಚಿಹೋಗುತ್ತದೆ. ಬಿಂದಿಗೆಯನ್ನು ನೀರಿನಲ್ಲಿ ಮುಳುಗಿಸಿದರೆ, ಅದು ತುಂಬುವ ವರೆಗೂ ಸದ್ದಾಗುತ್ತದೆ. ಅದು ತುಂಬಿ, ಕೊಳದ ನೀರಿನೊಂದಿಗೆ ಸೇರಿಹೋದರೆ, ಸದ್ದಾಗುವುದಿಲ್ಲ.

ಸಮುದ್ರದಲ್ಲಿ ಹಡಗು ಹೋದರೆ, ಹಿಂತಿರುಗಿ ಬರುವುದಿಲ್ಲವೆಂದು ಪೂರ್ವಿಕರು ಹೇಳುತ್ತಿದ್ದರು.

ಅಹಂಕಾರವಾದರೋ ಹೋಗುವುದೇ ಇಲ್ಲ.

'ನಾನು,' ಸತ್ತು ಹೋದರೆ, ಎಲ್ಲ ಕಷ್ಟಗಳೂ ಮುಗಿದು ಹೋಗುವುವು (ನಗುವರು) ಸಾವಿರ ವಿಚಾರಮಾಡು, 'ನಾನು,' ಹೋಗುವುದಿಲ್ಲ ನಿಮ್ಮ ನಮ್ಮ ಪಕ್ಷದಲ್ಲಿ, 'ನಾನು,' ಎಂಬುದು ಭಕ್ತನೆಂಬ 'ನಾನು ಆಗಿರುವುದು ಒಳ್ಳೆಯದು.

ಭಕ್ತರ ಪಕ್ಷದಲ್ಲಿ ಬ್ರಹ್ಮನು ಸಗುಣನು, ಎಂದರೆ ಅವನು ಒಂದು ವ್ಯಕ್ತಿಯಾಗಿ ರೂಪದೊಂದಿಗೆ ಕಾಣಿಸುತ್ತಾನೆ, ಅವನೇ ಪ್ರಾರ್ಥನೆಯನ್ನು ಕೇಳುತ್ತಾನೆ. ನೀವು ಆವ ಪ್ರಾರ್ಥನೆಯನ್ನು ಮಾಡಬೇಕಾದರೂ, ಅವನಿಗೇ ಮಾಡಿರಿ, ನೀವು ವೇದಾಂತವಾದಿಗಳೂ ಅಲ್ಲ, ಜ್ಞಾನಿಗಳೂ ಅಲ್ಲ; ನೀವು ಭಕ್ತರು; ಸಾಕಾರವನ್ನು ಬೇಕಾದರೆ ನಂಬಿರಿ, ಇಲ್ಲದಿದ್ದರೆ ಬಿಡಿರಿ; ಅದರಿಂದೇನೂ ಬಾಧಕವಿಲ್ಲ. ಆವ ವ್ಯಕ್ತಿಯು ಪ್ರಾರ್ಥನೆಯನ್ನು ಕೇಳುತ್ತಾನೆಯೋ, ಸೃಷ್ಟಿಸ್ಥಿತಿಪ್ರಲಯಗಳನ್ನು ಮಾಡುತ್ತಾನೆಯೋ, ಅನಂತ ಶಕ್ತಿಯುಳ್ಳವನಾಗಿದ್ದಾನೆಯೋ, ಅಂಥ ಈಶ್ವರನು ಒಂದು ವ್ಯಕ್ತಿಯೆಂಬ ಜ್ಞಾನವಿದ್ದರೆ ಸಾಕು. ಭಕ್ತಿಮಾರ್ಗದಿಂದಲೇ ಭಗವಂತನನ್ನು ಸುಲಭವಾಗಿ ಪಡೆಯಬಹುದು.

ಪಂಚಮ ಪರಿಚ್ಛೇದ

ಭಕ್ತ್ಯಾತ್ವನನ್ಯಯಾ ಶಕ್ಯಃ ಅಹಮೇವಂ ವಿಧೋಽರ್ಜುನ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥ ಗೀತಾ ೧೧-೫೪

[ಎಲೈ ಅರ್ಜುನನೇ, ಬೇರೊಂದು ಕಡೆಗೆ ತಿರುಗದ ಭಕ್ತಿಯಿಂದ, ಈ ವಿಶ್ವರೂಪವುಳ್ಳ ನನ್ನನ್ನು ತಿಳಿಯಬಹುದು, ನೋಡಬಹುದು, ನಿಶ್ಚಯವಾಗಿಯೂ ಪ್ರವೇಶಿಸಬಹುದು.]

(ಈಶ್ವರದರ್ಶನ, ಸಾಕಾರ ಅಥವಾ ನಿರಾಕಾರ.)

ಒಬ್ಬ ಬ್ರಾಹ್ಮಭಕ್ತ :—ಮಹಾಶಯರೇ, ಈಶ್ವರನನ್ನು ನೋಡಬಹುದೇ? ನೋಡಬಹುದಾದರೆ, ನನಗೇಕೆ ಅವನು ಕಾಣುವುದಿಲ್ಲ?

ಶ್ರೀರಾಮಕೃಷ್ಣ :—ಅಹುದು, ಅವಶ್ಯವಾಗಿ ನೋಡಬಹುದು, ಇದನ್ನು ನಿನಗೆ ನಾನು ಹೇಗೆ ತಿಳಿಸಲಿ?

ಬ್ರಾಹ್ಮಭಕ್ತ :—ಅವನನ್ನು ನೋಡಬೇಕಾದರೆ, ಯಾವ ಉಪಾಯವನ್ನು ಮಾಡಬೇಕು?

ಶ್ರೀರಾಮಕೃಷ್ಣ :—ನೀನು ವ್ಯಾಕುಲನಾಗಿ ಅವನಿಗೋಸ್ಕರ ಅಳಬಲ್ಲೆಯಾ? ಜನರು ಹೆಂಡಿರು ಮಕ್ಕಳಿಗಾಗಿಯೂ, ಹಣಕ್ಕಾಗಿಯೂ ಒಂದು ಗಡಿಗೆಯಷ್ಟು ಕಣ್ಣೀರನ್ನು ಸುರಿಸುತ್ತಾರೆ. ಈಶ್ವರನಿಗಾಗಿ ಅವರು ತಾನೇ ಅಳುತ್ತಾರೆ? ಮಗುವು ಗೊಂಬೆಯನ್ನು ಇಟ್ಟುಕೊಂಡು ತಾಯನ್ನು ಮರೆತಿರುವ ವರೆಗೂ, ಅವಳು ಅಡುಗೆ ಮುಂತಾದ ಮನೆಯ ಕೆಲಸಗಳನ್ನೆಲ್ಲ ಮಾಡಿಕೊಳ್ಳುತ್ತಾಳೆ. ಮಗುವಿಗೆ ಗೊಂಬೆಯು ಬೇಡವಾಗಿ, ಅದು ಗೊಂಬೆಯನ್ನು ಬಿಸಾಡಿ ಅಳುವುದಕ್ಕೆ ತೊಡಗಿದರೆ, ಆಗ ತಾಯಿಯು ಕುದಿಯುವ ಅನ್ನದ ತಪ್ಪಲೆಯನ್ನು ಕೆಳಗೆ ಇಳಿಸಿ, ದಡ ದಡ, ಎಂದು ಓಡಿ ಬಂದು, ಮಗುವನ್ನು ಎತ್ತಿಕೊಳ್ಳುತ್ತಾಳೆ.

ಬ್ರಾಹ್ಮಭಕ್ತ :—ಮಹಾಶಯರೇ, ಈಶ್ವರಸ್ವರೂಪವಿಚಾರದಲ್ಲಿ ಇಷ್ಟೊಂದು ಮತಗಳು ಏಕೆ? ಕೆಲವರು ಅವನನ್ನು ಸಾಕಾರನೆಂದು ಹೇಳುತ್ತಾರೆ, ಕೆಲವರು ನಿರಾಕಾರನೆಂದು ಹೇಳುತ್ತಾರೆ, ಸಾಕಾರವಾದಿಗಳಲ್ಲಿಯೂ ಎಷ್ಟೋ ಮತಭೇದಗಳಿವೆ. ಇಷ್ಟೊಂದು ಗಡಿಬಿಡಿಯು ಏತಕ್ಕೆ?

ಶ್ರೀರಾಮಕೃಷ್ಣ :—ಯಾವ ಭಕ್ತನು, ಯಾವ ರೂಪವನ್ನು ನೋಡುತ್ತಾನೆಯೋ, ಅವನಿಗೆ ಆ ರೂಪದಲ್ಲಿಯೇ ವಿಶ್ವಾಸವುಂಟಾಗುತ್ತದೆ. ನಿಜವಾಗಿಯೂ ಗಡಿಬಿಡಿಯೇನೂ ಇಲ್ಲ; ಭಗವಂತನನ್ನು ಯಾವ ರೀತಿಯಲ್ಲಿಯಾದರೂ ಒಮ್ಮೆ ನೋಡುವುದಕ್ಕೆ ಆದರೆ, ಬಳಿಕ ಅವನೇ ಎಲ್ಲವನ್ನೂ ತಿಳಿಸುತ್ತಾನೆ. ಮನುಷ್ಯನು ಆ ಊರಿಗೇ ಹೋಗಲಿಲ್ಲ, ಅಲ್ಲಿಯ ವಿಷಯಗಳನ್ನೆಲ್ಲ ತಿಳಿದುಕೊಳ್ಳುವುದು ಹೇಗೆ?

ಇದಕ್ಕೆ ಒಂದು ಕತೆಯನ್ನು ಹೇಳುತ್ತೇನೆ ಕೇಳು. ಒಬ್ಬನು ಹೊರಗೆ ಹೋಗಿದ್ದನು. ಆಗ ಅವನು ಒಂದು ಗಿಡದ ಮೇಲೆ ಒಂದು ಪ್ರಾಣಿಯನ್ನು ಕಂಡನು. ಮತ್ತೊಬ್ಬನೊಡನೆ ಅವನು, 'ಅಯ್ಯಾ, ಆ ಮರದ ಮೇಲೆ, ಸುಂದರವಾದ ಕೆಂಪು ಬಣ್ಣದ ಒಂದು ಪ್ರಾಣಿಯನ್ನು ನೋಡಿ ಬಂದೆನು,' ಎಂದು ಹೇಳಿದನು. ಅದಕ್ಕೆ ಇನ್ನೊಬ್ಬನು, 'ಓಹೋ, ನಾನೂ ಹೊರಗೆ ಹೋಗಿದ್ದಾಗ ಅದನ್ನು ನೋಡಿದೆನು. ಅದು ಕೆಂಪು ಬಣ್ಣವಾಗಿರಲಿಲ್ಲ, ಹಸುರಾಗಿದ್ದಿತು,' ಎಂದು ಉತ್ತರಕೊಟ್ಟನು. ಆ ಮಾತನ್ನು ಕೇಳಿದ ಮತ್ತೊಬ್ಬನು, 'ಇಲ್ಲ, ಇಲ್ಲ, ನಾನೂ ಅದನ್ನು ನೋಡಿದ್ದೆನು. ಅದು ಹಳದಿಯಾಗಿದ್ದಿತು,' ಎಂದನು. ಹೀಗೆಯೇ ಕೆಲವರು, ಕಿತ್ತಿಳೆಯ

ಬಣ್ಣವೆಂದೂ, ಕೆಲವರು ಬದನೆಯ ಬಣ್ಣವೆಂದೂ, ಇನ್ನು ಕೆ ವರು ನೀಲವೆಂದೂ ಹೇಳತೊಡಗಿದರು. ಕೊನೆಗೆ ಒಬ್ಬೊಬ್ಬ ರಿಗೂ ಜಗಳವಾಯಿತು. ಆಗ ಅವರೆಲ್ಲರೂ ಆ ಗಿಡದ ಬಳಿಗೆ ಬಂದರು ಅದರ ಬುಡದಲ್ಲಿ ಒಬ್ಬನು ಕುಳಿತಿದ್ದನು. ಎಲ್ಲರೂ ಅವನನ್ನು ನೋಡಿ 'ಅಯ್ಯಾ, ಈಗಿಡದ ಮೇಲಿರುವ ಪ್ರಾಣಿಯು ಆವ ಬಣ್ಣವಾಗಿದೆ? ಹೇಳು,' ಎಂದು ಕೇಳಿದರು. ಅದಕ್ಕೆ ಅವನು, 'ಈ ಗಿಡದ ಕೆಳಗೆ ನಾನು ವಾ ಮಾಡುತ್ತೇನೆ, ಆ ಪ್ರಾಣಿಯನ್ನು ನಾನು ಚೆನ್ನಾಗಿ ಬಲ್ಲೆನು. ಆವಾ ಬಣ್ಣವೆಂದು ಅದನ್ನು ನೀವು ಹೇಳುತ್ತೀರೋ, ಅದೆಲ್ಲವೂ ನಿಜ, ಅದು ಒಂದೊಂದು ವೇಳೆ ಕೆಂಪು, ಹಸುರು, ಹಳದಿ, ನೀಲ, ಮುಂತಾದ ಹಲವ ಬಗೆಯ ಬಣ್ಣವಾಗಿ ಕಾಣಿಸಿಕೊಳ್ಳುತ್ತದೆ. ಅದು ಗೋಸುಂಬೆ; ಒಂ ದೊಂದು ವೇಳೆಯಲ್ಲಿ ಅದಕ್ಕೆ ಆವ ಬಣ್ಣವೂ ಇರುವುದಿಲ್ಲ. ಒಂದು ವೇಳೆ ಅದು ಸಗುಣವಾಗಿಯೂ, ಮತ್ತೊಂದು ವೇಳೆ ನಿರ್ಗುಣವಾಗಿಯೂ ಕಾಣುತ್ತದೆ,' ಎಂದು ಹೇಳಿದನು.

ಎಂದರೆ, ಆವ ಮನುಷ್ಯನು ಸದಾ ಈಶ್ವರಚಿಂತೆಯನ್ನು ಮಾಡುತ್ತಾನೆಯೋ ಅವನು ಈಶ್ವರಸ್ವರೂಪವೆಂತಹುದೆಂಬುದನ್ನು ತಿಳಿಯಬಲ್ಲನು, ಭಗ ವಂತನು ನಾನಾರೂಪವನ್ನೂ ನಾನಾಭಾವವನ್ನೂ ತೋರಿಸುತ್ತಾನೆ ಅವನು ಸಗುಣನು ; ಅವನು ನಿರ್ಗುಣನು ಎಂಬುದನ್ನೂ ಆ ಮನುಷ್ಯನೆ ಬಲ್ಲನು. ಆವನು ಗಿಡದ ಕೆಳಗಿದ್ದಾನೆಯೋ, ಅವನೇ ಆ ಮರದ ಮೇಲಿದ್ದ ಜಂತುವು ಗೋಸುಂಬೆ; ನಾನಾಬಣ್ಣವಾಗತಕ್ಕುದು, ಎಂಬುದನ್ನು ತಿಳಿದುಕೊಂಡಿದ್ದಾನೆ. ಮಿಕ್ಕವರು ಬರಿದೆ ವಾದಮಾಡುತ್ತ ಜಗಳ ವಾಡುತ್ತ, ಪಾಡ ಪಡುತ್ತಾರೆ.

ಆಕಾರರಹಿತನೆನ್ನ ತಾತ |
ನಾಕಾರಸಹಿತೆಯೆನ್ನ ಮಾತೆ ||

ಎಂದು ಕಬೀರನು ಹೇಳಿದ್ದಾನೆ. ಭಕ್ತನು ಆವ ರೂಪವನ್ನು ಪ್ರೀತಿಸುತ್ತಾ ನೆಯೋ, ಅದೇ ರೂಪದಲ್ಲ ಭಗವಂತನು ಅವನಿಗೆ ಕಾಣಿಸಿಕೊಳ್ಳುತ್ತಾನೆ ಅವನು ಭಕ್ತವತ್ಸಲನು. ವೀರಭಕ್ತನಾದ ಹನುಮಂತನಿಗಾಗಿ ಭಗವಂ ತನು ರಾಮರೂಪವನ್ನು ಎತ್ತಿದನೆಂದು ಪುರಾಣದಲ್ಲದೆ.

(ಕಾಲಿಯರೂಪ, ಶ್ಯಾಮಾರೂಪದ ವ್ಯಾಖ್ಯಾನ, ಅನಂತನನ್ನು ತಿಳಿಯುವುದಕ್ಕೆ ಆಗುವುದಿಲ್ಲ)

ವೇದಾಂತವಿಚಾರರೀತ್ಯಾ ರೂಪಗೀಪವೆಲ್ಲಾ ಹಾರಿಹೋಗುತ್ತದೆ. 'ಬ್ರಹ್ಮ ಸತ್ಯ; ನಾಮರೂಪಯುಕ್ತವಾದ ಜಗತ್ತು ಮಿಥ್ಯೆ', ಎಂಬುದೇ ವಿಚಾರದ

ಕೊನೆಯ ಸಿದ್ಧಾಂತ; ನಾನು ಭಕ್ತನೆಂಬ ಅಭಿಮಾನವಿರುವ ಪರ್ಯಂತ ನಮಗೆ ಈಶ್ವರರೂಪದರ್ಶನವೂ, ಈಶ್ವರನನ್ನು ವ್ಯಕ್ತಿಯೆಂದು ತಿಳಿಯುವುದೂ ಸಾಧ್ಯ; ವಿಚಾರದೃಷ್ಟಿಯಿಂದ ನೋಡಲಾಗಿ, 'ನಾನು', ಎಂಬ ಭಕ್ತನ ಅಭಿಮಾನವು, ಅವನನ್ನು ಭಗವಂತನಿಗೆ ಸ್ವಲ್ಪದೂರದಲ್ಲಿಯೇ ನಿಲ್ಲಿಸುತ್ತದೆ. ಕಾಲಿಯ ಶ್ಯಾಮಾರೂಪವು ಮೂರೂವರೆ ಮೊಳದುದ್ದವೇತಕ್ಕೆ? ದೂರದಲ್ಲಿ ಇರುವುದರಿಂದ ತಾನೆ? ಸೂರ್ಯನು ದೂರದಲ್ಲಿರುವುದರಿಂದ ಸಣ್ಣದಾಗಿ ಕಾಣಿಸಿಕೊಳ್ಳುತ್ತಾನೆ; ಹತ್ತಿರಕ್ಕೆ ಹೋದರೆ ನೋಡುವುದಕ್ಕೆ ಆಗದಷ್ಟು ದೊಡ್ಡದಾಗಿ ಕಾಣಿಸಿಕೊಳ್ಳುತ್ತಾನೆ. ಕಾಳಿಗೆ ಶ್ಯಾಮವರ್ಣವೇತಕ್ಕೆ? ದೂರದಲ್ಲಿರುವುದರಿಂದ; ದೂರದಲ್ಲಿ ನಿಂತು ನೋಡಿದರೆ, ಕೊಳದ ನೀರು ಹಸುರು, ನೀಲ, ಕಪ್ಪು ಎಂಬ ಹಲವು ಬಣ್ಣವಾಗಿ ಕಾಣುತ್ತದೆ. ಹತ್ತಿರಕ್ಕೆ ಹೋಗಿ, ಅದನ್ನು ಕಯ್ಯಲ್ಲಿ ಎತ್ತಿ ನೋಡಿದರೆ, ಆವ ಬಣ್ಣವೂ ಕಾಣುವುದಿಲ್ಲ; ಆಕಾಶವನ್ನು ದೂರದಿಂದ ನೋಡಿದರೆ, ನೀಲವಾಗಿ ಕಾಣುತ್ತದೆ. ಹತ್ತಿರಕ್ಕೆ ಹೋಗಿ ನೋಡಿದರೆ, ಆವ ಬಣ್ಣವೂ ಕಾಣುವುದಿಲ್ಲ.

ವೇದಾಂತದರ್ಶನದ ಪ್ರಕಾರ, ಬ್ರಹ್ಮನು ನಿರ್ಗುಣ; ಅವನ ರೂಪವು ಎಂತಹುದೆಂದು ಬಾಯಿಂದ ಹೇಳುವುದಕ್ಕೆ ಆಗುವುದಿಲ್ಲ. ಆದರೆ, 'ನಾನು,' ಎಂಬುದು ಎಷ್ಟುಕಾಲ ಸತ್ಯವೋ, ಅಷ್ಟುಕಾಲ ಜಗತ್ತೂ ಸತ್ಯ, ಈಶ್ವರನ ನಾನಾರೂಪವೂ ಸತ್ಯ; ಈಶ್ವರನನ್ನು ಒಂದು ವ್ಯಕ್ತಿಯೆಂದು ತಿಳಿದುಕೊಳ್ಳುವುದೂ ಸತ್ಯವೇ.

ಶ್ರೀರಾಮಕೃಷ್ಣ :—ಭಕ್ತಿಮಾರ್ಗವೇ ನಿಮ್ಮ ಮಾರ್ಗ, ಇದು ತುಂಬ ಒಳ್ಳೆಯದು, ಮತ್ತು ಸುಲಭವಾದ ಮಾರ್ಗ; ಈಶ್ವರನ ಅನಂತತ್ವವನ್ನು ತಿಳಿಯುವನಾರು? ಅದನ್ನು ತಿಳಿಯುವ ಆವಶ್ಯಕತೆಯು ತಾನೇ ಏನು? ದುರ್ಲಭವಾದ ಈ ಮಾನುಷಜನ್ಮವನ್ನು ಪಡೆದ ನಮಗೆ ಅವನ ಪಾದಪದ್ಮದಲ್ಲಿ ಭಕ್ತಿಯುಂಟಾಗುವುದು ಆವಶ್ಯಕ.

ಒಂದು ಬಿಂದಿಗೆಯ ನೀರಿಂದಲೇ ನಮ್ಮ ಬಾಯಾರಿಕೆಯು ಅಡಗಿಹೋಗುವುದಾದರೆ, 'ಕೊಳದಲ್ಲಿ ಎಷ್ಟು ನೀರು ಇದೆ,' ಎಂದು ನಾವೇಕೆ ಅಳೆಯುವುದಕ್ಕೆ ಹೋಗಬೇಕು? ಅರ್ಧ ಸೀಸೆಯ ಮದ್ಯದಿಂದಲೇ ಮತ್ತಾಗುವುದಾದರೆ, 'ಸಾರಾಯಿ ಅಂಗಡಿಯಲ್ಲಿ ಎಷ್ಟು ಮಣ ಮದ್ಯವಿದೆ,' ಎಂದು ಲೆಕ್ಕ ನೋಡಬೇಕೇ?

ಷಷ್ಠ ಪರಿಚ್ಛೇದ

ಯಸ್ತ್ವಾತ್ಮರತಿರೇವಸ್ಯಾದಾತ್ಮತೃಪ್ತಶ್ಚ ಮಾನವಃ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನವಿದ್ಯತೇ॥
ಗೀತಾ। ೩–೧೭

[ಆತ್ಮನಲ್ಲಿ ಆಸಕ್ತನಾಗಿ, ಆತ್ಮನಿಂದಲೇ ತೃಪ್ತನಾಗಿ, ಆತ್ಮನಲ್ಲಿಯೇ ಸಂತುಷ್ಟನಾಗಿರುವವನು ಆವ ಕರ್ಮವನ್ನೂ ಮಾಡಬೇಕಾದುದಿಲ್ಲ.]

(ಈಶ್ವರಲಾಭದ ಲಕ್ಷಣ, ಸಪ್ತಭೂಮಿ ಮತ್ತು ಬ್ರಹ್ಮಜ್ಞಾನ.)

ಶ್ರೀರಾಮಕೃಷ್ಣ :—ವೇದದಲ್ಲಿ ಬ್ರಹ್ಮಜ್ಞಾನಿಗಳ ನಾನಾವಿಧವಾದ ಅವಸ್ಥೆಗಳ ವರ್ಣನೆಯೂ ಇದೆ. ಜ್ಞಾನಮಾರ್ಗವು ಬಹುಕಠಿಣ; ವಿಷಯಬುದ್ಧಿ, ಎಂದರೆ ಕಾಮಿನೀಕಾಂಚನದಲ್ಲಿ ಆಸಕ್ತಿಯು, ಲೇಶಮಾತ್ರವಿದ್ದರೂ, ಜ್ಞಾನವು ಉಂಟಾಗಲಾರದು, ಈ ಮಾರ್ಗವು ಕಲಿಯುಗಕ್ಕೆ ತಕ್ಕುದಲ್ಲ.

ಇದೇ ಸಂಬಂಧದಲ್ಲಿ ಸಪ್ತಭೂಮಿಯ ವಿಚಾರವು ವೇದದಲ್ಲಿದೆ. ಈ ಏಳು ಮೆಟ್ಟಿಲೂ ಮನಸ್ಸಿನ ಸ್ಥಾನವು. ಸಂಸಾರದಲ್ಲಿ ಮನಸ್ಸಿರುವ ವರೆಗೂ ಲಿಂಗ, ಗುಹ್ಯ, ನಾಭಿ ಇವುಗಳೇಗ ಮನಸ್ಸಿಗೆ ವಾಸಸ್ಥಾನಗಳು. ಆಗ ಮನಸ್ಸಿಗೆ ಊರ್ಧ್ವದೃಷ್ಟಿಯಿರುವುದಿಲ್ಲ. ಕೇವಲ ಕಾಮಿನೀಕಾಂಚನಗಳಲ್ಲಿಯೇ ಅದು ನಿಂತಿರುತ್ತದೆ. ಮನಸ್ಸಿಗೆ ನಾಲ್ಕನೆಯ ಮೆಟ್ಟಿಲು ಹೃದಯ, ಆಗ ಮೊದಲು ಜ್ಞಾನವುಂಟಾಗುವುದು, ನಾಲ್ಕು ಕಡೆಗಳಲ್ಲಿಯೂ ಒಂದು ಬೆಳಕು ಕಾಣುತ್ತದೆ. ಆಗ ಆ ಮನುಷ್ಯನು ಆ ಈಶ್ವರಜ್ಯೋತಿಯನ್ನು ನೋಡಿ ಆಶ್ಚರ್ಯದಿಂದ, 'ಇದೇನು? ಇದೇನು?' ಎನ್ನುತ್ತಾನೆ. ಅವನಿಗೆ ಕೆಳಗಿನ ತರಗತಿಯ ಸಂಸಾರದ ಕಡೆಗೆ ಮನಸ್ಸು ಹೋಗುವುದಿಲ್ಲ.

ಮನಸ್ಸಿಗೆ ಐದನೆಯ ಸ್ಥಾನವು ಕಂಠ; ಆವನ ಮನಸ್ಸು ಕಂಠದ ವರೆಗೆ ಏರಿರುವುದೋ, ಅವನ ಅವಿದ್ಯೆ ಅಜ್ಞಾನಗಳೆಲ್ಲವೂ ಹೋಗಿ ಬಿಡುತ್ತದೆ. ಭಗವಂತನ ಮಾತು ಹೊರತು, ಬೇರೆ ಆವ ಮಾತನ್ನು ಕೇಳುವುದಕ್ಕೂ ಅವನಿಗೆ ಬೇಕಾಗಿರುವುದಿಲ್ಲ; ಆರಾದರೂ ಬೇರೆ ಮಾತನ್ನು ಎತ್ತಿದರೆ, ಅವನು ಅಲ್ಲಿ ನಿಲ್ಲದೆ ಎದ್ದು ಹೋಗುತ್ತಾನೆ.

ಮನಸ್ಸಿನ ಆರನೆಯ ಮೆಟ್ಟಿಲು ಕಪಾಲ; (ಹಣೆ,) ಮನಸ್ಸು ಆರನೆಯ ಸ್ಥಾನಕ್ಕೆ ಹೋದರೆ, ಹಗಲೂ ಇರುಳೂ ಭಗವಂತನ ರೂಪದರ್ಶನ

ವಾಗುತ್ತದೆ. ಆಗಲೂ ಸ್ವಲ್ಪ ಅಹಂಭಾವವು ಇರುತ್ತದೆ. ಆ ಮನುಷ್ಯನು ಅಸದೃಶವಾದ ಆ ರೂಪದರ್ಶನವನ್ನು ಮಾಡಿ, ಉನ್ಮತ್ತನಾಗಿ, ಅದನ್ನು ಮುಟ್ಟುವುದಕ್ಕೂ, ಆಲಿಂಗನಮಾಡುವುದಕ್ಕೂ ಹೋಗುತ್ತಾನೆ; ಆಗುವು ದಿಲ್ಲ. ಲಾಂದ್ರದ ನಡುವೆ ದೀಪವಿರುವಂತೆ, ಮನಸ್ಸಿನ ನಡುವೆ ಆ ದಿವ್ಯ ಜ್ಯೋತಿಯು ಇದೆ. 'ಅದನ್ನು ಮುಟ್ಟುತ್ತೇನೆ, ಮುಟ್ಟುತ್ತೇನೆ', ಎಂದು ಹೋಗುತ್ತಾನೆ. ಅಹಂಕಾರವೆಂಬ ಗಾಜು ತಡೆಯಾಗಿರುವುದರಿಂದ, ಆ ಜ್ಯೋತಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ.

ಶಿರಸ್ಸೇ ಏಳನೆಯ ಮೆಟ್ಟಿಲು. ಅಲ್ಲಿಗೆ ಮನಸ್ಸು ಹೋದರೆ, ಸಮಾಧಿಯುಂಟಾ ಗುತ್ತದೆ. ಬ್ರಹ್ಮಜ್ಞಾನಿಗೆ ಪರಬ್ರಹ್ಮನ ದರ್ಶನವಾಗುತ್ತದೆ. ಆ ಅವಸ್ಥೆ ಯಲ್ಲಿ ಶರೀರವು ಬಹಳ ದಿವಸ ನಿಲ್ಲುವುದಿಲ್ಲ. ಅವನಿಗೆ ಆವಾಗಲೂ ಬಾಹ್ಯ ಜ್ಞಾನವೇ ಇರುವುದಿಲ್ಲ; ಆವುದನ್ನೂ ತಿನ್ನುವುದಕ್ಕೆ ಆಗುವುದಿಲ್ಲ. ಬಾಯಿಗೆ ಹಾಲನ್ನು ಹಾಕಿದರೆ, ಅದು ಕಟವಾಯಿಂದ ಈಚೆಗೇ ಹರಿದು ಬಂದು ಬಿಡುತ್ತದೆ. ಈ ಮೆಟ್ಟಿಲಲ್ಲಿ, ಇಪ್ಪತ್ತೊಂದನೆಯ ದಿವಸ ದೇಹತ್ಯಾಗವುಂಟಾ ಗುತ್ತದೆ. ಇದೇ ಬ್ರಹ್ಮಜ್ಞಾನಿಯ ಅವಸ್ಥೆಯು. ನಿಮ್ಮದು ಭಕ್ತಿಮಾರ್ಗ, ಅದು ಒಳ್ಳೆಯದು, ಮತ್ತೂ ಸುಲಭವಾದುದು.

(ಸಮಾಧಿಯಾದರೆ ಕರ್ಮತ್ಯಾಗ, ಪೂರ್ವಕಥಾ, ಭಗವಾನರ ತರ್ಪಣಾದಿ ಕರ್ಮತ್ಯಾಗ)

'ಮಹಾಶಯರೇ, ನನಗೆ ಸಮಾಧಿಯನ್ನು ಕಲಿಸಿಕೊಡುವುದಕ್ಕೆ ಆಗುತ್ತ ದೆಯೇ?' ಎಂದು ನನ್ನನ್ನು ಒಬ್ಬನು ಕೇಳಿದನು. (ಎಲ್ಲರೂ ನಗುತ್ತಾರೆ)

ಸಮಾಧಿಯಾದರೆ ಪೂಜೆ, ಜಪ, ವಿಷಯಕರ್ಮಗಳೆಂಬ ಎಲ್ಲಾ ಕರ್ಮಗಳೂ ಬಿಟ್ಟುಹೋಗುತ್ತವೆ. ಕರ್ಮದ ಗಲಾಟೆಯು ಮೊತ್ತ ಮೊದಲು ಬಲು ಹೆಚ್ಚು. ಈಶ್ವರನ ಬಳಿಗೆ ನಾವು ಸರಿದ ಹಾಗೆಲ್ಲಾ, ಅದರ ಆಡಂಬರಗಳು ಕಮ್ಮಿಯಾಗಿ ಹೋಗುತ್ತವೆ. ಭಗವಂತನ ನಾಮ, ಗುಣಗಾನವೂ ನಿಂತು ಹೋಗುವುದು.

ಶಿವನಾಥನನ್ನು ಕುರಿತು, 'ಅಯ್ಯಾ, ನೀನು ಸಭೆಗೆ ಬಾರದೆ ಇರುವ ವರೆಗೂ ನಿನ್ನ ನಾಮ, ಗುಣ, ಮಾತು, ಇವುಗಳನ್ನು ಜನಗಳು ಪ್ರಶಂಸಿಸುತ್ತ ಇರು ತ್ತಾರೆ. ನೀನು ಬಂದ ಕೂಡಲೇ, ಎಲ್ಲ ಮಾತುಗಳೂ ನಿಂತು ಹೋಗು ತ್ತವೆ. ನಿನ್ನ ದರ್ಶನದಿಂದಲೇ ಎಲ್ಲರಿಗೂ ಆನಂದವುಂಟಾಗುತ್ತದೆ. ಆಗ ಜನರು, 'ಇಗೋ, ಶಿವನಾಥಬಾಬುವು ಬಂದಿದ್ದಾನೆ,' ಎಂದು ಹೇಳು ತ್ತಾರೆ. ನಿನ್ನ ವಿಷಯವಾದ ಬೇರೆ ಆವ ಮಾತನ್ನೂ ಆಡುವುದಿಲ್ಲ. ನನಗೆ ಈ ಅವಸ್ಥೆಯು ಉಂಟಾದ ಬಳಿಕ, ಗಂಗಾಜಲದಲ್ಲಿ ತರ್ಪಣವನ್ನು ಮಾಡುವುದಕ್ಕೆ ಹೋದೆನು. ಕಯ್ಯ ಬೆರಳುಗಳ ಸಂದಿನಲ್ಲಿ, ನೀರೆಲ್ಲಾ

ಸೋರಿ ಹೋಗುತ್ತಿದ್ದಿತು. ಆಗ ನಾನು ಅಳುತ್ತಾ ಹಲಧರನನ್ನು ನೋಡಿ, 'ಅಯ್ಯ, ಇದೇನು ಹೀಗಾಯಿತಪ್ಪಾ,' ಎಂದು ಕೇಳಿದೆನು. 'ಇದು ಗಳಿತಹಸ್ತ,' ಎಂದು ಅವನು ಹೇಳಿದನು. ಈಶ್ವರದರ್ಶನವಾದ ಮೇಲೆ ತರ್ಪಣ ಮುಂತಾದ ಕರ್ಮಗಳಾವುವೂ ಬೇಕಾಗಿರುವುದಿಲ್ಲ. 'ನಿತ್ಯಾನಂದರು ನಮ್ಮ ಮದಿಸಿದ ಆನೆ, ನಿತ್ಯಾನಂದರು ನಮ್ಮ ಮದಿಸಿದ 'ಆನೆ,' ಎಂದು ಸಂಕೀರ್ತನದಲ್ಲಿ ಮೊತ್ತ ಮೊದಲು ಹೇಳುತ್ತಾರೆ. ಭಾವವು ಹೆಚ್ಚಾದರೆ ಸುಮ್ಮನೆ, 'ಆನೆ, ಆನೆ,' ಎನ್ನುತ್ತಾರೆ. ಉತ್ಕಟವಾದಾಗ, 'ಆನೆ' ಯೆಂದೂ, ಕೊನೆಗೆ 'ಆ' ಎಂದೂ ಹೇಳುತ್ತಾ, ಭಾವಸಮಾಧಿಯನ್ನು ಪಡೆಯುತ್ತಾರೆ. ಆಗ ಇಷ್ಟು ಪರ್ಯಂತ ಕೀರ್ತನೆಮಾಡುತ್ತಿದ್ದವನು ಏನನ್ನೂ ಹೇಳದೆ ಸುಮ್ಮನಾಗುತ್ತಾನೆ.

ಹೇಗೆಂದರೆ, ಬ್ರಾಹ್ಮಣಭೋಜನದಲ್ಲಿ ಮೊದಲು ವಿಪರೀತವಾದ ಗಲಾಟೆ. ಎಲ್ಲರೂ ಎಲೆಯ ಮುಂದೆ ಊಟಕ್ಕೆ ಕುಳಿತುಕೊಂಡಾಗ, ಬಲುಮಟ್ಟಿಗೆ ಗಲಾಟೆಯು ಕಮ್ಮಿಯಾಗಿ, 'ಪೂರೀ ತೆಗೆದುಕೊಂಡು ಬಾ, ಪೂರೀ ತೆಗೆದುಕೊಂಡು ಬಾ', ಎಂಬ ಸದ್ದು ಮಾತ್ರ ಕೇಳಿಸುತ್ತದೆ. ಪೂರಿ ಪಲ್ಲೆಯಗಳನ್ನು ತಿನ್ನುವುದಕ್ಕೆ ಪ್ರಾರಂಭಿಸಿದರೆ, ಆಗ ಮುಕ್ಕಾಲುಪಾಲು ಸದ್ದು ಕಮ್ಮಿಯಾಗುತ್ತದೆ. ಮೊಸರನ್ನು ಬಡ್ಡಿಸಿದಾಗ, ಬರಿಯ 'ಸುಪ್ ಸುಪ್' ಎಂದು ಸುರಿಯುವ ಶಬ್ದ ಮಾತ್ರ. (ಎಲ್ಲರೂ ನಗುತ್ತಾರೆ.) ಕೊನೆಗೆ ಶಬ್ದವೇ ಇರುವುದಿಲ್ಲ. ಊಟವಾದ ಮೇಲೆ ನಿದ್ರೆ. ಆಗ ಎಲ್ಲರೂ ಸುಮ್ಮನೆ ಇರುತ್ತಾರೆ.

ಆದುದರಿಂದ ಮೊದಮೊದಲು ಕರ್ಮದ ಗಲಾಟೆಯು ಹೆಚ್ಚು. ಭಗವಂತನ ಕಡೆಗೆ ಹೋದಹಾಗೆಲ್ಲಾ, ಅದು ಕಮ್ಮಿಯಾಗಿ ಹೋಗುವುದು. ಕೊನೆಗೆ ಕರ್ಮತ್ಯಾಗ ಮತ್ತು ಸಮಾಧಿ.

ಮನೆಯ ಸೊಸೆಯು ಬಸಿರಾದರೆ, ಅತ್ತೆಯು ಅವಳಿಗೆ ಕೆಲಸವನ್ನು ಕಮ್ಮಿಮಾಡಿ ಕೊಡುತ್ತಾಳೆ. ಹತ್ತು ತಿಂಗಳು ತುಂಬಿದರೆ, ಪ್ರಾಯಕವಾಗಿ ಕೆಲಸವನ್ನೇ ಕೊಡುವುದಿಲ್ಲ. ಮಗುವು ಹುಟ್ಟಿದರೆ, ಅವಳಿಗೆ ಒಂದು ಕೆಲಸವೂ ಇರುವುದಿಲ್ಲ. ಅವಳು ಮಗುವನ್ನು ಎತ್ತಿಕೊಂಡು ಮುದ್ದಾಡುತ್ತಾ ಇರುತ್ತಾಳೆ. ಮನೆಯ ಕೆಲಸಗಳನ್ನೆಲ್ಲಾ ಅತ್ತೆ, ನಾದಿನಿ, ಓರಗಿತ್ತಿಯರೇ ಮಾಡಿಕೊಳ್ಳುತ್ತಾರೆ.

(ಅವತಾರಾದಿಗಳ ಶರೀರವು ಸಮಾಧಿಯಾದ ಮೇಲೆ ಲೋಕಶಿಕ್ಷೆಗೋಸ್ಕರ)

ಸಮಾಧಿಯಾದ ಬಳಿಕ ಪ್ರಾಯಕವಾಗಿ ಶರೀರವು ನಿಲ್ಲುವುದೇ ಇಲ್ಲ. ಕೆಲವರು ನಾರದಾದಿಗಳಂತೆ ಜನರಿಗೆ ಉಪದೇಶಮಾಡುವುದಕ್ಕಾಗಿ ಶರೀರವನ್ನು

ಧಾರಣೆಮಾಡುತ್ತಾರೆ. ಚೈತನ್ಯದೇವನಂತಹ ಅವತಾರಪುರುಷರು ಶರೀರ ವನ್ನು ಇಟ್ಟುಕೊಂಡಿರುತ್ತಾರೆ. ಬಾವಿಯನ್ನು ತೋಡಿದ ಬಳಿಕ, ಕೆಲವರು ಗೂಡೆ, ಗುದ್ದಲಿಗಳನ್ನು ಬಿಸಾಡಿಬಿಡುತ್ತಾರೆ. ಕೆಲವರು, ಮುಂದೆ ಗ್ರಾಮ ಸ್ಥರಿಗೆ ಬೇಕಾಗಬಹುದೆಂದು, ಅವುಗಳನ್ನು ಇಟ್ಟುಕೊಂಡಿರುತ್ತಾರೆ. ಹೀಗೆಯೇ ಮಹಾಪುರುಷರು ಜೀವಿಗಳ ದುಃಖದಲ್ಲಿ ದಯೆಯುಳ್ಳವರು. ಇವರು, 'ನಮಗೆ ಜ್ಞಾನವುಂಟಾದರೆ ಸಾಕು', ಎಂಬುವ ಸ್ವಾರ್ಥಪರರಲ್ಲ; ಸ್ವಾರ್ಥಪರರ ರೀತಿಯಾವುದು? ಬಲ್ಲೆಯಾ, ಒಂದು ಕಡೆ ಮೂತ್ರಕ್ಕೆ ಹೋಗೆಂದು ಆರಾದರೂ ಹೇಳಿದರೆ, ಹೇಳಿದವನಿಗೆ ಇದರಿಂದ ಏನಾದರೂ ಲಾಭವಾಗಬಹುದೆಂದುಕೊಂಡು, ಅವರು ಅಲ್ಲಿ ಮೂತ್ರಕ್ಕೆ ಹೋಗುವುದೇ ಇಲ್ಲ. (ಎಲ್ಲರೂ ನಗುತ್ತಾರೆ.) ಮೂರು ಕಾಸನ್ನು ಕೊಟ್ಟು, 'ಸಂದೇಶ ತೆಗೆದುಕೊಂಡು ಬಾ', ಎಂದು ಅವನನ್ನು ಅಂಗಡಿಗೆ ಕಳುಹಿಸಿದರೆ, ಅವನು ಅದರ ರಸವನ್ನೆಲ್ಲಾ ಹೀರಿ ಹೀದೆಯನ್ನು ತಂದು ಕೊಡುತ್ತಾನೆ. (ಎಲ್ಲರೂ ನಗುವರು.)

ಅವತಾರಪುರುಷರಲ್ಲಿ ಶಕ್ತಿವಿಶೇಷವುಂಟು. ಸಾಮಾನ್ಯರು ಲೋಕಕ್ಕೆ ಉಪದೇಶಮಾಡುವುದೆಂದರೆ ಅಂಜುತ್ತಾರೆ. ಸಣ್ಣ ಕಡ್ಡಿಯು ನೀರಿನ ಮೇಲೆ ಹೇಗೋ ತೇಲುತ್ತದೆ; ಅದರ ಮೇಲೆ ಒಂದು ಸಣ್ಣಪಕ್ಷಿಯು ಕುಳಿತು ಕೊಂಡರೂ ಅದು ಮುಳುಗಿ ಹೋಗುತ್ತದೆ; ನಾರದಾದಿಗಳು ದೊಡ್ಡ ತೊಲೆಗಳಂತೆ. ತೊಲೆಯು ತಾನೂ ತೇಲುತ್ತದೆ. ತನ್ನ ಮೇಲೆ ಕುಳಿತು ಕೊಳ್ಳುವ ಮನುಷ್ಯರನ್ನೂ, ಹಸುಗಳನ್ನೂ, ಒಂದು ವೇಳೆ ಆನೆಗಳನ್ನೂ ತೇಲಿಸಿಕೊಂಡು ಹೋಗುತ್ತದೆ.

ಸಪ್ತಮ ಪರಿಚ್ಛೇದ

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ ಪ್ರವ್ಯಥಿತಂ ಮನೋ ಮೇ।
ತದೇವ ಮೇ ದರ್ಶಯ ದೇವ ರೂಪಂ ಪ್ರಸೀದ ದೇವೇಶ ಜಗನ್ನಿವಾಸ॥

ಗೀತಾ॥ ೧೧_೪೫

[ಆರೂ ಎಂದು ನೋಡದ, ನಿನ್ನ ಈ ವಿಶ್ವರೂಪವನ್ನು ನೋಡಿ, ನಾನು ಸಂತೋಷಪಟ್ಟೆನು. ಆದರೆ ನನ್ನ ಮನಸ್ಸು ಭಯದಿಂದ ನಡುಗುತ್ತಿದೆ, ಆದುದರಿಂದ ದೇವ ದೇವನೇ, ಜಗನ್ನಿವಾಸನಾದ ಸ್ವಾಮಿಯೇ, ನಿನ್ನ ಮೊದಲಿನ ಕೃಷ್ಣರೂಪವನ್ನೇ ತೋರಿಸಿ ಪ್ರಸನ್ನನಾಗು.]

ಬ್ರಾಹ್ಮಸಮಾಜದ ಪ್ರಾರ್ಥನಾಪದ್ಧತಿ, ಭಗವಂತನ ಐಶ್ವರ್ಯವರ್ಣನೆ
(ಪೂರ್ವಕಥಾ, ರಾಧಾಕಾಂತದೇವಾಲಯದಲ್ಲಿ ೧೮೬೫ ರಲ್ಲಿ ನಡೆದ ಆಭರಣಗಳ ಕಳ

ಶ್ರೀರಾಮಕೃಷ್ಣ :—(ಶಿವನಾಥಾದಿಗಳನ್ನು ನೋಡಿ,) 'ಅಯ್ಯಾ, ನೀವು ಭ ವಂತನ ಐಶ್ವರ್ಯವನ್ನು ಏಕೆ ಇಷ್ಟೊಂದು ವರ್ಣನೆಮಾಡುತ್ತೀರಿ,' ಎಂದ ನಾನು ಕೇಶವಸೇನನನ್ನು ಕೇಳಿದೆನು. ಒಂದು ದಿನ ಅವರೆಲ್ಲರೂ ಕಾಳಿಯ ಮಂದಿರಕ್ಕೆ ಬಂದಿದ್ದರು. 'ನೀವು ಹೇಗೆ ಉಪನ್ಯಾಸಮಾಡುತ್ತೀರಿ ಅದನ್ನು ನಾನು ಕೇಳಬೇಕು', ಎಂದು ಹೇಳಿದೆನು. ಗಂಗೆಯ ಘಟ್ಟದ ಮೇಲುಗಡೆಯ ಮಂಟಪದಲ್ಲಿ ಸಭೆಯಾಯಿತು. ಅಲ್ಲಿ ಕೇಶವನು ಉಪ ನ್ಯಾಸಮಾಡತೊಡಗಿ, ಬಲು ಚೆನ್ನಾಗಿ ಹೇಳಿದನು. ನನಗೆ ಭಾವ ವುಂಟಾಯಿತು. 'ಹೇ ಈಶ್ವರ, ನೀನು ಸುಂದರವಾದ ಪುಷ್ಪಗಳನ್ನೂ, ಆಕಾಶವನ್ನೂ, ನಕ್ಷತ್ರಗಳನ್ನೂ, ಸಮುದ್ರವನ್ನೂ ಮಾಡಿದ್ದೀಯೆ', ಎಂದು ಏತಕ್ಕೆ ನೀನು ಹೇಳಿದೆ, ಎಂಬದಾಗಿ ಆಗ ನಾನು ಕೇಶವ ನನ್ನು ಕೇಳಿದೆನು. ಆರಿಗೆ ತಮ್ಮ ಐಶ್ವರ್ಯದಲ್ಲ ಪ್ರೀತಿಯಿದೆಯೋ ಅವರು ಭಗವಂತನ ಐಶ್ವರ್ಯವನ್ನು ವರ್ಣನೆಮಾಡುವುದಕ್ಕೆ ಆಸೆ ಪಡುತ್ತಾರೆ. ರಾಧಾಕಾಂತದೇವರ ಆಭರಣಗಳು ಕಳವಾದಾಗ ರಾಣಿರಾಸಮಣಿಯ ಅಳಿಯನಾದ ಮಧುರಬಾಬುವು, ರಾಧಾಕಾಂತದೇವಸ್ಥಾನಕ್ಕೆ ಬಂದು, 'ದೇವರೇ, ಥೀ! ನೀನು ನಿನ್ನ ಒಡವೆಗಳನ್ನೇ ಕಾಪಿಟ್ಟುಕೊಳ್ಳಲಾರೆ,' ಎಂದು ಹೇಳಿದನು. ನಾನು ಅದನ್ನು ಕೇಳಿ, 'ಅಯ್ಯಾ, ನಿನ್ನ ಬುದಿ ಯೆಂಥದು; ಆರಿಗೆ ಲಕ್ಷ್ಮಿಯು ಸ್ವಯಂ ಪಾದಸೇವೆಯನ್ನು ಮಾಡುತ್ತಾ ಳೆಯೋ ಅವನಿಗೆ ಐಶ್ವರ್ಯಕ್ಕೆ ಕಮ್ಮಿಯೇ? ನಿನಗೇನೋ ಒಡವೆಯು ದೊಡ್ಡ ವಸ್ತು; ಈಶ್ವರನಿಗೆ ಅದೆಲ್ಲ ಮಣ್ಣಿನ ಹೆಂಟೆ. ಥೀ! ಇಂಥ ಹೀನ ಬುದ್ಧಿಯ ಮಾತನ್ನು ಹೇಳಬಹುದೆ? ನೀನು ಅವನಿಗೆ ಎಷ್ಟು ಐಶ್ವರ್ಯವನ್ನು ಕೊಡಬಲ್ಲೆ?' ಎಂದು ಹೇಳಿದೆನು. ಜನರಿಗೆ ಆವುದು ಸಿಕ್ಕಿದರೆ ಸಂತೋ ಷವೋ, ಅದನ್ನೇ ಅವರು ಅಪೇಕ್ಷಿಸುತ್ತಾರೆ. 'ಅವನ ಮನೆಯೆಲ್ಲಿ? ಅವನಿಗೆ ಮನೆಗಳೆಷ್ಟು? ತೋಟಗಳೆಷ್ಟು? ಧನ, ಜನ, ದಾಸದಾಸಿಯರು ಎಷ್ಟು?' ಎಂಬೀ ವಿಚಾರದಿಂದ ಪ್ರಯೋಜನವೇನು? ನರೇಂದ್ರನನ್ನು ನೋಡಿದಾಗ, 'ನಿನ್ನ ಮನೆಯೆಲ್ಲಿ? ತಂದೆ ಏನ ಮಾಡುತ್ತಾನೆ? ಅಣ್ಣತಮ್ಮಂದಿರು ಎಷ್ಟುಮಂದಿ?' ಎಂಬೀ ಮಾತುಗಳನ್ನು ಒಂದು ದಿವಸವಾಗಲಿ ಮರೆತೂ ಕೂಡ ನಾನು ವಿಚಾರಿಸಿಲ್ಲ. ಭಗವಂತನ ಮಾಧುರ್ಯರಸದಲ್ಲಿ ಮುಳುಗಿ ಹೋಗಿರಿ. 'ಅವನ ಸೃಷ್ಟಿಯು ಅನಂತವಾದುದು; ಅವನ ಐಶ್ವರ್ಯವು ಅನಂತವಾದುದು' ಎಂಬೀ ಮಾತುಗಳನ್ನು ಕಟ್ಟಿಕೊಂಡು ನನಗೇನು? ಹೀಗೆ ಹೇಳಿ ಗಂಧರ್ವನಿಂದಿತಕಂಠದಿಂದ ಮಧುರವಾಗಿ ಹಾಡಿದರು.

(' ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೋ ಎಂಬಂತೆ ')

ಮುಳುಗು ಮುಳುಗು ಮನವೆ ರೂಪ। ಜಲಧಿಜಲದೊಳು॥
ತಳದೆ ಹುಡುಕು ಪ್ರೇಮಮುಕ್ತಾ। ಫಲವು ದೊರೆವುದು॥ ॥೧॥

ಮನದಿ ಪ್ರೀತಿಯೆಂಬ ವೃಂದಾ। ವನವದಿರುವುದು॥
ಅನವರತವು ಹುಡುಕು ಹುಡುಕು। ನಿನಗೆ ದೊರೆವುದು॥ ॥೨॥

ನೀನು ಹೃದಯ ಮಂದಿರದಲಿ। ಜ್ಞಾನದೀಪವ॥
ಸಾನುರಾಗದಿಂದ ಬೆಳಗೊ। ಮಾನವಾನಿಶಂ॥ ॥೩॥

ತಿರೆಯ ಮೇಲೆ ತರಿಯ ಹರಿಪ। ನರನಪಾವನು।
ಗುರುಚರಣವ ನೆನೆಯೆನುತೆ ಕ। ಬಿರನು ಹೇಳುವ॥ ॥೪॥

ಭಗವದ್ದರ್ಶನವಾದ ಬಳಿಕ, 'ಅವನ ಲೀಲೆಯು ಎಂತಹುದು ನೋಡೋಣ,' ಎಂಬ ಆಶೆಯು ಭಕ್ತರಿಗೆ ಉಂಟಾಗಬಹುದು. ರಾಮಚಂದ್ರನು ರಾವಣವಧೆಯಾದ ಬಳಿಕ ಲಂಕೆಗೆ ಪ್ರವೇಶಿಸಿದನು. ರಾವಣನ ತಾಯಿಯಾದ ನಿಕಷೆಯೆಂಬ ಮುದುಕಿಯು, ಅವನನ್ನು ಕಂಡು ಓಡತೊಡಗಿದಳು. ಆಗ ಲಕ್ಷ್ಮಣನು, 'ರಾಮ, ಇದೇನು ? ಈ ನಿಕಷೆಯು ಇಷ್ಟು ಮುದುಕಿ. ಎಷ್ಟೋ ಪುತ್ರಶೋಕವನ್ನು ಅನುಭವಿಸುತ್ತಿದಾಳೆ ; ಇವಳಿಗೆ ಪ್ರಾಣದ ಮೇಲೆ ಇಷ್ಟೊಂದು ಆಶೆಯೇ ? ಓಡುತ್ತಾ ಇದಾಳೆಯಲ್ಲ,' ಎಂದು ಕೇಳಿದನು. ರಾಮಚಂದ್ರನು ನಿಕಷೆಗೆ ಅಭಯದಾನವನ್ನು ಮಾಡಿ, ಅವಳನ್ನು ಇದಿರಿಗೆ ಕರೆಸಿ, 'ನನ್ನನ್ನು ಕಂಡು ಏಕೆ ಓಡಿಹೋದೆ?' ಎಂದು ಕೇಳಿದನು. ಅದಕ್ಕೆ ಅವಳು, 'ರಾಮ, ನಾನು ಇಷ್ಟು ದಿನ ಬದುಕಿದೆನು. ನಿನ್ನ ಎಷ್ಟೋ ಲೀಲೆಗಳನ್ನು ನೋಡಿದೆನು ; ಇನ್ನೂ ನಿನ್ನ ಲೀಲೆಗಳನ್ನು ನೋಡಬೇಕೆಂದು ಆಸೆಯಿದೆ,' ಎಂದು ಹೇಳಿದಳು. (ಎಲ್ಲರೂ ನಗುತ್ತಾರೆ.)

(ಶಿವನಾಥನೊಡನೆ), ನಿಮ್ಮನ್ನು ನೋಡುವುದಕ್ಕೆ ನನಗೆ ತುಂಬ ಇಷ್ಟ. ಶುದ್ಧಾತ್ಮರನ್ನು ನೋಡದೆ ಆವ ರೀತಿಯಲ್ಲಿ ಜೀವಿಸಲಿ ? ಶುದ್ಧಾತ್ಮರು ಪೂರ್ವ ಜನ್ಮದ ಸ್ನೇಹಿತರೆಂದು ತಿಳಿದುಕೊಂಡಿದೇನೆ.

ಒಬ್ಬ ಬ್ರಾಹ್ಮಭಕ್ತ :—ಮಹಾಶಯರೇ, ನಿಮಗೆ ಜನ್ಮಾಂತರದಲ್ಲಿ ನಂಬುಗೆಯುಂಟೇ ?

(ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ। ಗೀತಾ ೪-೫)

ಶ್ರೀರಾಮಕೃಷ್ಣ :—ಉಂಟು ; ಜನ್ಮಾಂತರವುಂಟೆಂದು ನಾನು ಕೇಳಿದ್ದೇನೆ. ಭಗವಂತನ ಕಾರ್ಯವು ನಮ್ಮ ಅಲ್ಪಬುದ್ಧಿಗೆ ತಿಳಿಯುವುದಕ್ಕೆ ಆಗುವುದಿಲ್ಲ.

ಅನೇಕರು ಜನ್ಮಾಂತರವುಂಟೆಂದು ಹೇಳಿದಾರೆ. ಆದುದರಿಂದ ನಾನು ಅವರ ಮಾತನ್ನು ನಂಬದೆ ಇರುವುದಕ್ಕೆ ಆಗುವುದಿಲ್ಲ. ಭೀಷ್ಮನು ಬಾಣದ ಹಾಸಿಗೆಯಲ್ಲಿ ಮಲಗಿ ದೇಹತ್ಯಾಗಮಾಡುತ್ತಾ ಇದ್ದನು. ಪಾಂಡವರೆಲ್ಲರೂ ಶ್ರೀಕೃಷ್ಣನೊಡನೆ ನಿಂತು, ಭೀಷ್ಮನನ್ನು ನೋಡಿದರು. ಅವನ ಕಣ್ಣಿನಿಂದ ನೀರು ಸುರಿಯುತ್ತಿದ್ದಿತು. ಅರ್ಜುನನು ಕೃಷ್ಣನನ್ನು ನೋಡಿ, 'ಅಣ್ಣಾ, ಇದೇನು ಆಶ್ಚರ್ಯ! ಪಿತಾಮಹನಾದ ಭೀಷ್ಮನು ಸತ್ಯವಾದಿ, ಜಿತೇಂದ್ರಿಯ, ಜ್ಞಾನಿ, ಅಷ್ಟವಸುಗಳಲ್ಲಿ ಒಬ್ಬನು, ಇವನೂ ದೇಹತ್ಯಾಗ ಸಮಯದಲ್ಲಿ ಮಾಯೆಯಿಂದ ಅಳುತ್ತಿದಾನೆಯೇ?' ಎಂದು ಕೇಳಿದನು. ಶ್ರೀಕೃಷ್ಣನು ಈ ಮಾತನ್ನು ಭೀಷ್ಮನಿಗೆ ಹೇಳಿದನು. ಅದಕ್ಕೆ ಅವನು, 'ಕೃಷ್ಣ, ನೀನು ಚೆನ್ನಾಗಿ ಬಲ್ಲೆ, ನಾನು ಅದಕ್ಕಾಗಿ ಅಳುವುದಿಲ್ಲ; ಪಾಂಡವರಿಗೆ ಸಾಕ್ಷಾದ್ಭಗವಂತನೇ ಸಾರಥಿಯಾಗಿದ್ದರೂ, ಅವರ ದುಃಖಕ್ಕೂ ವಿಪತ್ತಿಗೂ ಕೊನೆಯೇ ಇಲ್ಲವಲ್ಲಾ; ಭಗವಂತನ ಕಾರ್ಯವನ್ನು ಎಳ್ಳಷ್ಟೂ ನಾನು ತಿಳಿಯಲಾರೆನಲ್ಲಾ, ಎಂದು ಅಳುತ್ತೇನೆ,' ಎಂಬದಾಗಿ ಹೇಳಿದನು.

(ಕೀರ್ತನಾನಂದ)

ಸಮಾಜಮಂದಿರದಲ್ಲಿ ಸಂಧ್ಯಾಕಾಲದ ಉಪಾಸನೆಯು ಮುಗಿಯಿತು. ರಾತ್ರಿ ಎಂಟೂವರೆ ಗಂಟೆ. ಸಂಜೆಯಾದ ಒಂದೆರಡು ಗಂಟೆಗಳ ಮೇಲೆ ಬೆಳುದಿಂಗಳು ಬಂದಿತು. ಉದ್ಯಾನದ ವೃಕ್ಷಲತಾಪಲ್ಲವಗಳ ಮೇಲೆ ಶರಚ್ಚಂದ್ರನ ನಿರ್ಮಲವಾದ ಕಿರಣಗಳು ಬಿದ್ದಿದ್ದುವು. ಅತ್ತಕಡೆ ಸಮಾಜಗೃಹದಲ್ಲಿ ಸಂಕೀರ್ತನವು ಪ್ರಾರಂಭವಾಯಿತು. ಭಗವಾನ್ ಶ್ರೀರಾಮಕೃಷ್ಣರು ಹರಿಪ್ರೇಮದಿಂದ ಮತ್ತರಾಗಿ ನರ್ತನಮಾಡತೊಡಗಿದರು. ಬ್ರಾಹ್ಮಭಕ್ತರು ಅವರ ಸುತ್ತಲೂ ತಾಳಹಾಕುತ್ತಾ, ಮೃದಂಗಗಳನ್ನು ಬಾಜಿಸುತ್ತಾ, ನರ್ತನ ಮಾಡುತ್ತಿದ್ದಾರೆ. ಶ್ರೀ ಭಗವಂತನ ಸಾಕ್ಷಾತ್ಕಾರವನ್ನು ಪಡೆದಂತೆ ಎಲ್ಲರೂ ಭಾವೋನ್ಮತ್ತರಾಗಿದಾರೆ. ಹರಿನಾಮದ ಧ್ವನಿಯು ಮೇಲೆ ಮೇಲೆ ಹೊರಟಿತು. ನಾಲ್ಕು ದಿಕ್ಕಿನಲ್ಲಿಯೂ ಗ್ರಾಮವಾಸಿಗಳು ಹರಿನಾಮವನ್ನು ಕೇಳಿ, ಉದ್ಯಾನಸ್ವಾಮಿಯಾದ, ಭಕ್ತನಾದ, ವೇಣೀ ಮಾಧವನಿಗೆ ಎಷ್ಟೋ ಧನ್ಯವಾದಗಳನ್ನು ಮನಸ್ಸಿನಲ್ಲಿಯೇ ಅರ್ಪಿಸಿದರು. ಕೀರ್ತನವಾದ ಬಳಿಕ ಶ್ರೀರಾಮಕೃಷ್ಣರು ಜಗನ್ಮಾತೆಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, 'ಭಾಗವತ, ಭಕ್ತ, ಭಗವಾನ್ ಎಲ್ಲವೂ ಒಂದೇ, ಜ್ಞಾನಿಗಳ ಚರಣಗಳಿಗೆ ನಮಸ್ಕಾರ; ಭಕ್ತರ ಚರಣಗಳಿಗೆ ನಮಸ್ಕಾರ; ಸಾಕಾರವಾದಿ ಭಕ್ತರ ಚರಣಗಳಿಗೆ ನಮಸ್ಕಾರ; ನಿರಾಕಾರವಾದಿಭಕ್ತರ ಚರಣಗಳಿಗೆ ನಮಸ್ಕಾರ. ಪೂರ್ವಿಕರಾದ ಬ್ರಹ್ಮಜ್ಞಾನಿಗಳ ಚರಣಗಳಿಗೂ, ಸಮಾಜದ ಈಗಣ ಬ್ರಹ್ಮಜ್ಞಾನಿಗಳ ಚರಣಗಳಿಗೂ ನಮಸ್ಕಾರ', ಎಂದು ಹೇಳಿದರು.



ಶ್ರೀ ವಿವೇಕಾನಂದ ಸ್ವಾಮಿಗಳವರು.

ವೇಣೀನಾಥನನು ನಾನಾವಿಧಗಳಾದ, ರುಚಿಯಾದ, ಆಹಾರಪದಾರ್ಥಗಳನ್ನು ಮಾಡಿಸಿ, ಅಲ್ಲಿ ಸೇರಿರುವ ಎಲ್ಲ ಭಕ್ತರಿಗೂ ಸಂತೋಷವಾಗುವಂತೆ ಊಟ ಮಾಡಿಸಿದನು. ಶ್ರೀರಾಮಕೃಷ್ಣರು, ಭಕ್ತರ ಜತೆಯಲ್ಲಿ ಕುಳಿತು, ಆನಂದದಿಂದ ಪ್ರಸಾದಸ್ವೀಕಾರಮಾಡಿದರು.

ಹತ್ತನೆಯ ಖಂಡ

(ಶ್ರೀಯುಕ್ತ ವಿಜಯಕೃಷ್ಣಗೋಸ್ವಾಮಿಗೂ ಇತರ ಬ್ರಾಹ್ಮಭಕ್ತರಿಗೂ ಉಪದೇಶ.)

ಪ್ರಥಮ ಪರಿಚ್ಛೇದ

ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ।
ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ॥

ಗೀತಾ॥ ೨-೨೦

[ಈ ಆತ್ಮನು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಇದು ಮೊದಲು ಇಲ್ಲದಿದ್ದು ಈಗ ಹುಟ್ಟಲಿಲ್ಲ; ಇದು ಸ್ವಲ್ಪ ಕಾಲವಿದ್ದು ನಶಿಸಿಹೋಗುವುದಿಲ್ಲ; ಈ ಆತ್ಮನು ಜನ್ಮರಹಿತನು, ನಿತ್ಯನು, ಶಾಶ್ವತನು, ಪುರಾಣನು; ಶರೀರವು ಸಾಯುವಾಗ ಇದು ಸಾಯುವುದಿಲ್ಲ.]

(ಮುಕ್ತಪುರುಷನ ಶರೀರತ್ಯಾಗವು ಆತ್ಮಹತ್ಯವಲ್ಲ)

ಭಗವಾನರನ್ನು ದರ್ಶನಮಾಡುವುದಕ್ಕಾಗಿ ಭಾನುವಾರದ ದಿವಸ ಬಹುಜನರು ಬರುತ್ತಾರೆ. ಅವರೊಡನೆ ಏಕಾಂತದಲ್ಲಿ ಮಾತನಾಡಬೇಕೆಂದು ಅಪೇಕ್ಷಿಸುವ ಭಕ್ತರು, ಬೇರೆ ದಿವಸವೇ ಬರುತ್ತಾರೆ. ಈ ದಿನ ಬೃಹಸ್ಪತಿವಾರ, ೧೮೮೨ ನೆಯ ಡಿಸೆಂಬರು ೧೪ ನೆಯ ತೇದಿ. ಮಧ್ಯಾಹ್ನ ಮೂರು ಗಂಟೆಯ ಸಮಯ; ಶ್ರೀಯುಕ್ತ ವಿಜಯಕೃಷ್ಣಗೋಸ್ವಾಮಿಯು, ಭಗವಾನ್ ಶ್ರೀರಾಮಕೃಷ್ಣರ ದರ್ಶನಕ್ಕಾಗಿ, ದಕ್ಷಿಣೇಶ್ವರದ ಕಾಳೀದೇವಾಲಯಕ್ಕೆ ಬಂದಿದ್ದಾನೆ. ಅವನ ಸಂಗಡ, ಮೂರು ನಾಲ್ಕು ಮಂದಿ ಬ್ರಾಹ್ಮಭಕ್ತರಿದ್ದಾರೆ. ಅವರು, ಪರಮಹಂಸರ ಪರಮ ಭಕ್ತನಾದ ಶ್ರೀಯುಕ್ತ ಬಲರಾಮನೊಡನೆ, ಕಲಿಕತೆಯಿಂದ ದೋಣಿಯಲ್ಲಿ ಬಂದಿದ್ದಾರೆ.

ಪರಮಹಂಸರು ಮಂಚದ ಮೇಲೆ ಕುಳಿತಿದ್ದಾರೆ. ವಿಜಯ, ಬಲರಾಮ, ಮಾಸ್ಟರ್, ಮತ್ತು ಇತರಭಕ್ತರು ಪಶ್ಚಿಮಮುಖರಾಗಿ, ಪರಮಹಂಸರನ್ನು ನೋಡುತ್ತಾ, ಕೆಲವರು ಚಾಪೆಯ ಮೇಲೆಯೂ, ಕೆಲವರು ನೆಲದ ಮೇಲೆಯೂ ಕುಳಿತಿದ್ದಾರೆ. ಕೊಟ್ಟಡಿಯ ಪಶ್ಚಿಮದ ಬಾಗಿಲಿಂದ ಭಾಗೀರಥಿಯು ಕಾಣುತ್ತದೆ. ಅದರ ನೀರು, ಶೀತಕಾಲದಲ್ಲಿ ನಿಶ್ಚಂಚಲವಾಗಿಯೂ, ನಿರ್ಮಲವಾಗಿಯೂ ಇದೆ. ಬಾಗಿಲ ಮುಂದೆ, ಪಶ್ಚಿಮಕ್ಕೆ ಅರ್ಧಮಂಡಲಾಕಾರವಾದ ವರಾಂಡವಿದೆ. ಅದರ ಆಚೆಗೆ ಪುಷ್ಪೋದ್ಯಾನ, ಅದರ ಆಚೆಗೆ ಗಂಗೆಯ ಕಟ್ಟೆ, ಕಟ್ಟೆಯ ಪಶ್ಚಿಮಕ್ಕೆ ಪಾಪಹಾರಿಣಿಯಾದ, ಪುಣ್ಯೋದಕಪೂರ್ಣೆಯಾದ ಗಂಗೆಯು, ಈಶ್ವರಮಂದಿರದ ಪಾದಮೂಲವನ್ನು ಆನಂದದಿಂದ ತೊಳೆಯುತ್ತ, ಮುಂದಕ್ಕೆ ಹೋಗುತ್ತಿದ್ದಾಳೆ. ಶೀತಕಾಲವಾದುದರಿಂದ, ಎಲ್ಲರೂ ಬೆಚ್ಚಗಿರುವ ಬಟ್ಟೆಗಳನ್ನು ಹಾಕಿಕೊಂಡಿದ್ದಾರೆ. ವಿಜಯನು ಹೊಟ್ಟೆಯ ನೋವಿನಿಂದ ನರಳುತ್ತಾ. ಸಮಯದಲ್ಲಿ ಔಷಧಸೇವನೆ ಮಾಡಬೇಕೆಂದು, ಔಷಧದ ಸೀಸೆಯನ್ನು ತೆಗೆದುಕೊಂಡು ಬಂದಿದ್ದಾನೆ. ಈಗ ಅವನು, ಸಾಧಾರಣಬ್ರಹ್ಮಸಮಾಜದಲ್ಲಿ ಸಂಬಳ ತೆಗೆದುಕೊಂಡು ಕೆಲಸಮಾಡುವ ಒಬ್ಬ ಧರ್ಮೋಪದೇಶಿ. ಅವನು, ಸಮಾಜದ ಜಗಲಿಯ ಮೇಲೆ ಕುಳಿತುಕೊಂಡು, ಜನರಿಗೆ ಉಪದೇಶವನ್ನು ಮಾಡಬೇಕು. ಆದರೆ, ಈಗ ಸಮಾಜದವರಿಗೂ, ಅವನಿಗೂ, ಬಹಳ ವಿಷಯಗಳಲ್ಲಿ ಮತಭೇದವಿದೆ. ಸಮಾಜದ ಕೆಲಸಕ್ಕೆ ಒಪ್ಪಿಕೊಂಡಿದ್ದಾನೆ. ಏನ ಮಾಡಿಯಾನು? ತನ್ನ ಇಷ್ಟದಂತೆ ಮಾತನ್ನು ಆಡುವುದಕ್ಕೂ, ಕೆಲಸಮಾಡುವುದಕ್ಕೂ, ಆಗುವುದಿಲ್ಲ. ವಿಜಯನು ಬಹಳ ಪರಿಶುದ್ಧನಾದ ಅದ್ವೈತಗೋಸ್ವಾಮಿಯ ವಂಶದಲ್ಲಿ ಹುಟ್ಟಿದವನು. ಅದ್ವೈತಗೋಸ್ವಾಮಿಯು ಜ್ಞಾನಿಯೂ ಅಹುದು, ಭಕ್ತನೂ ಅಹುದು. ಅವನು ನಿರಾಕಾರಬ್ರಹ್ಮಚಿಂತೆಯನ್ನು ಮಾಡುತ್ತ, ಭಕ್ತಿಯ ಪರಾಕಾಷ್ಠೆಯನ್ನೂ ತೋರಿಸುತ್ತಿದ್ದನು. ಭಗವಾನ್ ಚೈತನ್ಯದೇವನಿಗೆ ಅವನು ಒಬ್ಬ ಮುಖ್ಯಶಿಷ್ಯನು. ಅವನು ಹರಿಪ್ರೇಮದಿಂದ ಮತ್ತನಾಗಿ ನೃತ್ಯವನ್ನು ಮಾಡುತ್ತಾ, ಶರೀರವನ್ನು ಮರೆತು, ಬಟ್ಟೆಯು ಜಾರಿಹೋದುದನ್ನೂ ಅರಿಯುತ್ತಿರಲಿಲ್ಲ. ವಿಜಯನು ಬ್ರಾಹ್ಮಸಮಾಜಕ್ಕೆ ಬಂದಿದ್ದಾನೆ. ಅವನು ನಿರಾಕಾರಪರಬ್ರಹ್ಮಚಿಂತೆಯನ್ನು ಮಾಡುತ್ತಾನೆ. ಮಹಾಭಕ್ತನಾದ, ಪೂರ್ವಪುರುಷನಾದ, ಅದ್ವೈತದೇವನ ರಕ್ತಸಂಬಂಧದಿಂದ ಅವನಲ್ಲಿ ಜನಿಸಿದ ಹರಿಪ್ರೇಮದ ಬೀಜವು, ಅಂಕುರಿಸುವುದಕ್ಕೆ ಕಾಲವನ್ನು ನಿರೀಕ್ಷಿಸುತ್ತಾ ಇದ್ದು, ಈಗ ಪ್ರಕಾಶೋನ್ಮುಖವಾಗಿದೆ. ಆದುದರಿಂದಲೇ ಅವನು, ದೇವತೆಗಳಿಗೂ ದುರ್ಲಭವಾದ ಹರಿಪ್ರೇಮದ ಮತ್ತತೆಯಲ್ಲಿ ಮುಳುಗಿ ಹೋಗಿರುವ ಭಗವಾನ್ ಶ್ರೀರಾಮಕೃಷ್ಣರನ್ನು ನೋಡಿ, ಮುಗ್ಧನಾಗಿದ್ದಾನೆ. ಮಂತ್ರದಿಂದ ಮುಗ್ಧವಾದ ಸರ್ಪವು, ಹೆಡೆಯನ್ನು ಎತ್ತಿಕೊಂಡು ಹಾವಡಿಗನ ಹತ್ತಿರ ನಲಿಯುವಂತೆ, ವಿಜಯನೂ ಪರಮಹಂಸರ ಮುಖ

ಯಿಂದ ಹೊರಡುವ ಭಾಗವತವನ್ನು ಕೇಳುತ್ತಾ, ಮುಗ್ಧನಾಗಿ, ಅವರ ಹತ್ತಿರ ಕುಳಿತು, ಅವರು ಹರಿಪ್ರೇಮದಿಂದ ಬಾಲಕರಂತೆ ನರ್ತನಮಾಡುವಾಗ, ಜತೆಯಲ್ಲಿ ತಾನೂ ನರ್ತನಮಾಡುತ್ತಾನೆ.

ಎಂಡೇದೇರ್ ಗ್ರಾಮದಲ್ಲಿ ವಿಷ್ಣು ಎಂಬುವನೊಬ್ಬನಿದ್ದನು. ಅವನು ಕತ್ತಿಯಿಂದ ತನ್ನ ಕೊರಲನ್ನು ಕತ್ತರಿಸಿಕೊಂಡು ಶರೀರತ್ಯಾಗವಮಾಡಿದನು. ಈ ದಿವಸ ಅವನ ಮಾತೇ ಆರಂಭವಾಗಿದೆ.

ಶ್ರೀರಾಮಕೃಷ್ಣ :—(ವಿಜಯ, ಮಾಸ್ಟರ್, ಮತ್ತು ಭಕ್ತರನ್ನು ಕುರಿತು,) ನೋಡಿರಿ, ಆ ಹುಡುಗನು ಶರೀರತ್ಯಾಗವಮಾಡಿದನಂತೆ. ನನ್ನ ಮನಸ್ಸು ತುಂಬ ಕೆಟ್ಟುಹೋಗಿದೆ. ಅವನು ಇಲ್ಲಿಗೆ ಬರುತ್ತಿದ್ದನು. ಪಾಠಶಾಲೆಯಲ್ಲಿ ಓದುತ್ತಿದ್ದನು. ಆದರೆ ಅವನು, 'ನನಗೆ ಸಂಸಾರವು ರುಚಿಸುವುದಿಲ್ಲ,' ಎಂದು ಹೇಳುತ್ತಿದ್ದನು. ಪಶ್ಚಿಮದೇಶಕ್ಕೆ ತನ್ನ ಬಂಧುಗಳ ಬಳಿಗೆ ಹೋಗಿ ನಿರ್ಜನವಾದ ಹೊಲದಲ್ಲಿಯೂ, ಕಾಡಿನಲ್ಲಿಯೂ, ಬೆಟ್ಟದಲ್ಲಿಯೂ, ಸದಾ ಇದ್ದುಕೊಂಡು, ಭಗವಂತನ ಧ್ಯಾನವನ್ನು ಮಾಡುತ್ತ, ಅನೇಕ ವಿಧವಾಗಿ ಈಶ್ವರರೂಪದರ್ಶನಮಾಡಿದ್ದೇನೆಂದು ಹೇಳುತ್ತಿದ್ದನು. ಅವನಿಗೆ ಇದೇ ಕೊನೆಯ ಜನ್ಮವೆಂದು ತೋರುತ್ತದೆ. ಪೂರ್ವಜನ್ಮದಲ್ಲಿ ಅವನು ಬಹಳವಾಗಿ ಸಾಧನೆಗಳನ್ನು ಮಾಡಿರಬೇಕು; ಆದರೆ ಅವನಿಗೆ ಸ್ವಲ್ಪ ಮಾತ್ರ ಕರ್ಮವು ಉಳಿದಿದ್ದಂತಿದೆ. ಅದೂ ಈಗ ಮುಗಿದುಹೋಯಿತೆಂದು ತೋರುತ್ತದೆ.

ಪೂರ್ವಜನ್ಮದ ಸಂಸ್ಕಾರವನ್ನು ನಂಬಬೇಕು. ಈ ವಿಷಯದಲ್ಲಿ ಒಂದು ಕಥೆಯನ್ನು ಕೇಳಿದ್ದೇನೆ. ಒಬ್ಬನು ಶವಸಾಧನವನ್ನು ಮಾಡಬೇಕೆಂದು, ಗಹನವಾದ ವನಕ್ಕೆ ಹೋಗಿ, ಭಗವತಿಯ ಪೂಜೆಯನ್ನು ಮಾಡುತ್ತಾ ಇದ್ದನು. ಅವನು ಅನೇಕಭಯಂಕರವಾದ ರೂಪಗಳನ್ನೆಲ್ಲಾ ನೋಡಿದ್ದನು. ಒಂದು ಹುಲಿಯು ಅವನನ್ನು ಎತ್ತಿಕೊಂಡು ಹೋಯಿತು. ಅದೇ ಕಾಲದಲ್ಲಿ, ಇನ್ನೊಬ್ಬನು ಅಲ್ಲಿಗೆ ಬಂದು, ಹುಲಿಯನ್ನು ನೋಡಿ ಭಯಪಟ್ಟು, ಹತ್ತಿರದಲ್ಲಿದ್ದ ಒಂದು ಮರವನ್ನು ಏರಿ ಎಲ್ಲವನ್ನೂ ನೋಡುತ್ತಿದ್ದನು. ಹುಲಿಯು ಹೊರಟುಹೋದ ಮೇಲೆ, ಅವನು ಮರದಿಂದಿಳಿದು, ಸಿದ್ಧವಾಗಿದ್ದ ಶವವನ್ನೂ, ಇತರಪೂಜೋಪಕರಣಗಳನ್ನೂ ನೋಡಿ, ಆಚಮನವನ್ನು ಮಾಡಿ, ಆ ಶವದ ಮೇಲೆ ಕುಳಿತುಕೊಂಡು, ಜಪವನ್ನು ಮಾಡಿದನು. ಆಗ ಕಾಳಿಯು ಅವನಿಗೆ ಪ್ರತ್ಯಕ್ಷಳಾಗಿ, 'ನಾನು ನಿನಗೆ ಪ್ರಸನ್ನಳಾಗಿದೇನೆ. ಬೇಕಾದ ವರವನ್ನು ಕೇಳು,' ಎಂದಳು. ಆಗ ಅವನು

ಕಾಳಿಯ ಪಾದಪದ್ಮಕ್ಕೆ ನಮಸ್ಕಾರವನ್ನು ಮಾಡಿ, 'ತಾಯೇ, ನಿನ್ನ ಕೆಲಸವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಆತನು ಅಷ್ಟೊಂದು ಕಷ್ಟಪಟ್ಟು, ಇಷ್ಟು ಸಾಮಗ್ರಿಗಳನ್ನು ಸಿದ್ಧಪಡಿಸಿ, ಎಷ್ಟೋ ದಿವಸ ಸಾಧನೆಯನ್ನು ಮಾಡಿದನು. ಆದರೂ ಅವನಲ್ಲಿ ನಿನಗೆ ದಯೆಬಾರಲಿಲ್ಲ. ನನಗಾದರೋ ಏನೂ ಗೊತ್ತಿಲ್ಲ; ನಾನು ಭಜನಹೀನನು, ಸಾಧನಹೀನನು, ಜ್ಞಾನಹೀನನು, ಭಕ್ತಿಹೀನನು, ನನ್ನ ಮೇಲೆ ಇಷ್ಟೊಂದು ಕೃಪೆಮಾಡಿದೆಯಲ್ಲ, ಕಾರಣವೇನು ?' ಎಂದು ಕೇಳಿದನು. ಅದಕ್ಕೆ ಭಗವತಿಯು ನಗುತ್ತಾ, 'ಮಗು, ನಿನ್ನ ಜನ್ಮಾಂತರದ ಕಥೆಯನ್ನು ನೀನರಿಯೆ. ನೀನು ಪ್ರತಿಜನ್ಮದಲ್ಲಿಯೂ ನನ್ನನ್ನು ಕುರಿತು ತಪಸ್ಸನ್ನು ಮಾಡುತ್ತಿದ್ದೆ. ಆ ಸಾಧನೆಯ ಬಲದಿಂದ ಈ ಸಂಘಟನೆಗಳೆಲ್ಲಾ ಆಗಿವೆ. ನನ್ನ ದರ್ಶನವೂ ನಿನಗೆ ಸಿಕ್ಕಿದೆ. ಈಗ ನಿನಗೆ ಆವ ವರ ಬೇಕು ? ಕೇಳು,' ಎಂದು ಹೇಳಿದಳು.

ಒಬ್ಬ ಭಕ್ತ :—ಅವನು ಆತ್ಮಹತ್ಯವನ್ನು ಮಾಡಿಕೊಂಡನೆಂದು ಕೇಳಿ, ನನಗೆ ಭಯವಾಗುತ್ತದೆ.

ಶ್ರೀರಾಮಕೃಷ್ಣ :—ಆತ್ಮಹತ್ಯೆಮಾಡಿಕೊಳ್ಳುವುದು ಮಹಾಪಾಪ; ಪುನಃ ಪುನಃ ಸಂಸಾರಕ್ಕೆ ಬಂದು, ಕ್ಲೇಶಗಳನ್ನು ಅನುಭವಿಸಬೇಕಾಗುತ್ತದೆ. ಆದರೂ ಕೆಲವರು ಈಶ್ವರದರ್ಶನವನ್ನು ಮಾಡಿ, ಶರೀರತ್ಯಾಗವನ್ನು ಮಾಡುತ್ತಾರೆ. ಅದನ್ನು ಆತ್ಮಹತ್ಯವೆಂದು ಹೇಳಕೂಡದು. ಆ ರೀತಿ ಶರೀರತ್ಯಾಗಮಾಡಿದರೆ, ದೋಷವಿಲ್ಲ. ಜ್ಞಾನಲಾಭವಾದ ಬಳಿಕ ಕೆಲವರು ಶರೀರತ್ಯಾಗಮಾಡುತ್ತಾರೆ; ಸ್ವರ್ಣದ ಗೊಂಬೆಯನ್ನು ಮಾಡುವುದಕ್ಕೆ ಇಟ್ಟುಕೊಂಡಿರುವ ಮಣ್ಣಿನ ಅಚ್ಚನ್ನು, ಗೊಂಬೆ ಮಾಡಿದ ಮೇಲೆ, ಇಟ್ಟುಕೊಂಡರೂ ಇಟ್ಟುಕೊಳ್ಳಬಹುದು ; ಒಡೆದು ಹಾಕಿದರೂ ಹಾಕಬಹುದು.

ಬಹಳ ವರ್ಷಗಳ ಹಿಂದೆ, ವರಾಹನಗರದಿಂದ ಒಬ್ಬ ಹುಡುಗನು ಇಲ್ಲಿಗೆ ಬರುತ್ತಿದ್ದನು. ಅವನಿಗೆ ಇಪ್ಪತ್ತು ವಯಸ್ಸು. ಅವನ ಹೆಸರು ಗೋಪಾಲಸೇನ. ಇಲ್ಲಿಗೆ ಬರುತ್ತಿದ್ದಾಗ, ಅವನಿಗೆ ಭಾವಾವಸ್ಥೆಯು ಆಗುತ್ತಿದ್ದಿತು. ಹೃದಯನು ಹಿಡಿದುಕೊಳ್ಳದೆ ಇದ್ದರೆ, ಅವನು ಕೆಳಗೆ ಬಿದ್ದು ಕೈಕಾಲುಗಳನ್ನು ಮುರಿದುಕೊಳ್ಳುತ್ತಿದ್ದನು. ಆ ಹುಡುಗನು, ಒಂದು ದಿವಸ ಹಠಾತ್ತಾಗಿ ನನ್ನ ಕಾಲುಗಳನ್ನು ಹಿಡಿದುಕೊಂಡು, 'ಇನ್ನು ಮೇಲೆ ನಾನು ಇರಲಾರೆನು ; ಹೊರಟುಹೋಗುತ್ತೇನೆ,' ಎಂದು ಹೇಳಿದನು. ಅದಾದ ಸ್ವಲ್ಪ ದಿವಸಗಳಲ್ಲಿಯೇ ಅವನು ಶರೀರತ್ಯಾಗಮಾಡಿದನೆಂದು ಕೇಳಿದೆನು.

ದ್ವಿತೀಯ ಪರಿಚ್ಛೇದ

ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ॥

ಗೀತಾ ೯-೩೩

[ಈ ಲೋಕವು ಶಾಶ್ವತವೂ ಅಲ್ಲ; ಸುಖಪ್ರದವೂ ಅಲ್ಲ, ಆದುದರಿಂದ ಅದನ್ನು ಬಿಟ್ಟು, ಸುಖಪ್ರದನಾದ, ಶಾಶ್ವತನಾದ ನನ್ನನ್ನು ಭಜಿಸು.]

(ಜೀವರು ನಾಲ್ಕುವಿಧ. ಬದ್ಧಜೀವನ ಲಕ್ಷಣ. ಕಾಮಿನೀಕಾಂಚನ,)

ಶ್ರೀರಾಮಕೃಷ್ಣ:—ಬದ್ಧ, ಮುಮುಕ್ಷು, ಮುಕ್ತ, ನಿತ್ಯರೆಂಬದಾಗಿ ಜೀವರು ನಾಲ್ಕು ವಿಧವೆಂದು ಶಾಸ್ತ್ರದಲ್ಲಿ ಹೇಳಿದೆ. ಸಂಸಾರವು ಬಲೆಯಂತೆ. ಜೀವರು ಮತ್ಸ್ಯಗಳ ಹಾಗೆ. ಈ ಸಂಸಾರವು ಆರ ಮಾಯೆಯೋ, ಆ ಭಗವಂತನೇ ಮೀನ ಹಿಡಿಯುವನು. ಕೆಲವು ಮತ್ಸ್ಯಗಳು ಬಲೆಯಲ್ಲಿ ಬಿದ್ದಾಗ, ಅದನ್ನು ಹರೆದುಕೊಂಡು, ಓಡಿ ಹೋಗುವುದಕ್ಕೆ, ಎಂದರೆ ಬಿಡುಗಡೆ ಹೊದ್ದುವುದಕ್ಕೆ, ಪ್ರಯತ್ನಪಡುತ್ತವೆ. ಹೀಗೆಯೇ ಸಂಸಾರದಲ್ಲಿ ಬಿದ್ದರೂ, ಅಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡುವ ಜೀವನನ್ನು ಮುಮುಕ್ಷುವೆಂದು ಹೇಳಬಹುದು.

ಓಡುವುದಕ್ಕೆ ಪ್ರಯತ್ನಪಟ್ಟ ಎಲ್ಲಾ ಮತ್ಸ್ಯಗಳೂ ತಪ್ಪಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಎಲ್ಲಿಯೋ ಮೂರು ನಾಲ್ಕು ಮಾತ್ರ, 'ಧಪ್', ಎಂದು ಶಬ್ದ ಮಾಡಿ ಓಡಿಹೋಗುತ್ತವೆ. ಆಗ ಜನರು, 'ಆ ಮೀನು ಚೆನ್ನಾಗಿ ಓಡಿ ಹೋಯಿತು,' ಎಂದು ಹೇಳುತ್ತಾರೆ. ಈ ರೀತಿ ಸಂಸಾರದ ಬಲೆಯಿಂದ ಓಡಿಹೋಗುವ ಮೂರು ನಾಲ್ಕು ಮಂದಿಗಳೇ ಮುಕ್ತಜೀವರು.

ಕೆಲವು ಮತ್ಸ್ಯಗಳು, ಸ್ವಭಾವವಾಗಿ ಜಾಗರೂಕತೆಯಿಂದ ಇದ್ದುಕೊಂಡು, ಬಲೆಯಲ್ಲಿ ಬೀಳುವುದೇ ಇಲ್ಲ. ಹೀಗೆ ಸಂಸಾರದಲ್ಲಿ ಸಿಕ್ಕಿ ಬೀಳದಿರುವರೇ ನಾರದಾದಿಗಳಂತೆ ನಿತ್ಯಜೀವರು.

ಬಲೆಯಲ್ಲಿ ಬಹಳ ಮೀನುಗಳು ಬೀಳುತ್ತವೆ. ಆದರೂ ಅವುಗಳಿಗೆ, 'ನಾವು ಬಲೆಯಲ್ಲಿ ಬಿದ್ದಿದ್ದೇವೆ, ಸತ್ತುಹೋಗಬೇಕಾಗುತ್ತದೆ,' ಎಂದು ತಿಳಿಯದು. ಅವು ಬಲೆಯಲ್ಲಿ ಬಿದ್ದು, ಅದರೊಂದಿಗೆ ನೆಟ್ಟಗೆ ಓಡಿಪೋಗಿ, ಒಂದೇ ಆವೃತ್ತಿ ಕೆಸರಿನಲ್ಲಿ ತಮ್ಮ ಶರೀರವನ್ನು ಮರೆಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತವೆ. ಅವು ಬಲೆಯಿಂದ ಹೊರಗೆ ಓಡುವ ಪ್ರಯತ್ನವನ್ನೇ ಮಾಡು

ವುದಿಲ್ಲ. ಇನ್ನೂ ಚೆನ್ನಾಗಿ ಕೆಸರಿನಲ್ಲಿ ಹುದುಗಿಕೊಳ್ಳುತ್ತವೆ. ಅವುಗಳನು ಬದ್ಧಜೀವರಿಗೆ ಹೋಲಿಸಬಹುದು. ಬಲೆಯಲ್ಲಿ ಬಿದ್ದಿದ್ದರೂ ಆ ಮೀನುಗಳು, 'ಇಲ್ಲಿಯೇ ನಾವು ನೆಮ್ಮದಿಯಾಗಿದ್ದೇವೆ', ಎಂದು ತಿಳಿದುಕೊಳ್ಳುತ್ತವೆ. ಇದೇ ರೀತಿಯಲ್ಲಿ ಬದ್ಧಜೀವರು, ಸಂಸಾರದಲ್ಲಿ, ಎಂದರೆ ಕಾಮಿನೀಕಾಂಚನಗಳಲ್ಲಿ, ಆಸಕ್ತರಾಗಿ, ಕಳಂಕಸಾಗರದಲ್ಲಿ ಮುಳುಗಿದ್ದರೂ, 'ಇದೇ ಬಲು ಚೆನ್ನಾಗಿದೆ,' ಎಂದು ತಿಳಿದುಕೊಳ್ಳುತ್ತಾರೆ.

ಆರು ಮುಮುಕ್ಷುಗಳೋ, ಆರು ಮುಕ್ತರೋ, ಅವರು ಸಂಸಾರವನ್ನು ಕೂಪವೆಂದು ತಿಳಿದುಕೊಳ್ಳುತ್ತಾರೆ. ಅವರಿಗೆ ಅದು ಚೆನ್ನಾಗಿ ಕಾಣುವುದಿಲ್ಲ. ಆದುದರಿಂದಲೇ ಕೆಲವರು ಜ್ಞಾನಲಾಭವಾದ ಮೇಲೆ, ಶರೀರತ್ಯಾಗವನು ಮಾಡುತ್ತಾರೆ. ಆದರೆ ಈ ರೀತಿಯಾಗಿ ಶರೀರತ್ಯಾಗಮಾಡುವುದು ಬಹಳ ದೂರದ ಮಾತು.

ಬದ್ಧಜೀವರಿಗೆ, ಎಂದರೆ ಸಂಸಾರಿಗಳಿಗೆ, ಆವ ತೆರದಿಂದಲೂ ಒಳ್ಳೆಯ ಬುದ್ಧಿ ಬರುವುದಿಲ್ಲ. ಅವರು ಎಷ್ಟು ದುಃಖಪಟ್ಟರೂ, ಎಷ್ಟು ಪೆಟ್ಟನ್ನು ತಿಂದರೂ, ಎಷ್ಟು ವಿಪತ್ತಿನಲ್ಲಿ ಬಿದ್ದರೂ, ಅವರಿಗೆ ಬುದ್ಧಿ ಬರುವುದಿಲ್ಲ.

ಒಂಟೆಗೆ ಮುಳ್ಳು ಗಿಡಗಳನ್ನು ತಿನ್ನುವುದು ಇಷ್ಟ. ಮುಳ್ಳನ್ನು ತಿನ್ನುವಾಗ ಅದರಮುಖದಿಂದ ಧಾರೆಧಾರೆಯಾಗಿ ರಕ್ತವು ಸುರಿಯುತ್ತದೆ. ಆದರೂ ಅದು ತಿನ್ನುವುದನ್ನು ಬಿಡುವುದೇ ಇಲ್ಲ. ಹಾಗೆಯೇ ಸಂಸಾರಿಗಳು ಎಷ್ಟು ಶೋಕತಾಪಗಳನ್ನು ಅನುಭವಿಸಿದರೂ, ಸ್ವಲ್ಪ ದಿವಸಗಳಾದ ಮೇಲೆ, ಅವುಗಳನ್ನು ಮರೆತುಬಿಟ್ಟು ಎಂದಿನಂತೆಯೇ ಇರುತ್ತಾರೆ. ಹೆಂಡತಿಯು ಸತ್ತುಹೋದರೂ, ಅಷ್ಟೇ ಏಕೆ! ವ್ಯಭಿಚಾರಿಣಿಯಾದರೂ, ಸಂಸಾರಿಯು ಇನ್ನೊಬ್ಬಳನ್ನು ಪುನಃ ಮದುವೆಮಾಡಿಕೊಳ್ಳುತ್ತಾನೆ ಮಗುವು ಸತ್ತುಹೋದರೆ ಎಷ್ಟೋ ದುಃಖಪಡುತ್ತಾನೆ. ಸ್ವಲ್ಪ ದಿವಸಗಳಾದ ಬಳಿಕ, ಎಲ್ಲವನ್ನೂ ಮರೆತು ಬಿಡುತ್ತಾನೆ. ಮಗುವಿನ ತಾಯಿಯು, ಮೊತ್ತಮೊದಲು ದುಃಖದಿಂದ ಮುಂದುಗಾಣದವಳಾಗಿರುತ್ತಾಳೆ. ಸ್ವಲ್ಪ ದಿವಸಗಳಾದ ಬಳಿಕ, ಆಕೆಯು ಅದನ್ನು ಮರೆತು, ಎಂದಿನಂತೆ ತಲೆ ಬಾಚಿಕೊಂಡು, ಜಡೆ ಹೆಣೆದುಕೊಂಡು, ಒಡವೆಯಿಟ್ಟುಕೊಂಡು, ಸೊಗಸು ಮಾಡಿಕೊಳ್ಳುತ್ತಾಳೆ. ಈ ಬಗೆಯ ಜನರು ಮಗಳ ಮದುವೆಗಾಗಿ ತಮ್ಮ ಸರ್ವಸ್ವವನ್ನೂ ಹಾಳುಮಾಡಿಕೊಳ್ಳುತ್ತಾರೆ. ಇವರಿಗೆ ವರ್ಷ ವರ್ಷವೂ ಹೆಣ್ಣು ಗಂಡು ಮಕ್ಕಳಾಗುತ್ತಲೇ ಇರುತ್ತವೆ. ವ್ಯಾಜ್ಯವನ್ನು ಮಾಡಿ, ಸರ್ವಸ್ವವನ್ನೂ ಕಳೆದುಕೊಂಡರೂ, ಇವರು ಮತ್ತೆ ಮತ್ತೆ ವ್ಯಾಜ್ಯವನ್ನು

ಮಾಡುತ್ತಲೇ ಇರುತ್ತಾರೆ. ತಮ್ಮ ಮಕ್ಕಳ ಹೊಟ್ಟೆಗೆ ಹಾಕುವುದಕ್ಕೂ, ಅವುಗಳಿಗೆ ಬಟ್ಟೆಯುಡಿಸುವುದಕ್ಕೂ ಇವರಿಗೆ ಗತಿಯಿಲ್ಲ. ಒಳ್ಳೆಯ ಮನೆಯಲ್ಲಿರಿಸುವುದಕ್ಕೂ ಆಗುವುದಿಲ್ಲ. ಒಂದೊಂದು ವೇಳೆಯಲ್ಲಿ, ಇವರು ಇಲಿಯನ್ನು ನುಂಗುವ ಸರ್ಪದಂತೆ, ನುಂಗುವುದಕ್ಕೂ ಆಗದ, ಉಗುಳುವುದಕ್ಕೂ ಆಗದ ಸ್ಥಿತಿಯಲ್ಲಿ ಇರುತ್ತಾರೆ. ಬದ್ಧಜೀವರು ತಿರುಳಿಲ್ಲದೆ ಬರಿಯ ಸಿಪ್ಪೆ ಬೀಜಗಳಿಂದ ಕೂಡಿದ ಹುಣಿಸೆಯ ಹಣ್ಣಿನಂತೆ ಇದ್ದಾರೆ. ಸಂಸಾರವು ಸ್ವಲ್ಪವೂ ಸಾರವಿಲ್ಲವೆಂದು ಒಂದು ವೇಳೆ ತಮಗೆ ತಿಳಿದರೂ, ಅವರು ಅದನ್ನು ಬಿಡಲೂ ಆರರು; ಈಶ್ವರನ ಕಡೆಗೆ ಮನಸ್ಸನ್ನು ಕೊಡಲೂ ಆರರು.

ಕೇಶವಸೇನನ ಸ್ನೇಹಿತನೊಬ್ಬನಿಗೆ ಐವತ್ತು ವಯಸ್ಸು. ಅವನಿಗೆ ಈಶ್ವರ ಧ್ಯಾನಮಾಡುವುದಕ್ಕೆ ಹೊತ್ತಿಲ್ಲವಂತೆ. ಅವನು ಇಸಪೇಟಾಡುತ್ತಿದ್ದುದನ್ನು ಕಂಡೆನು. ಬದ್ಧಜೀವನಿಗೆ ಇನ್ನೂ ಒಂದು ಲಕ್ಷಣವಿದೆ. ಅವನನ್ನು ಸಂಸಾರದಿಂದ ಬಿಡಿಸಿ, ಸರಿಯಾದ ಒಳ್ಳೆಯ ಸ್ಥಲದಲ್ಲಿ ಇರಿಸಿದರೆ, ಅವನು ಉಬ್ಬಸಪಟ್ಟು ಸತ್ತೇ ಹೋಗುತ್ತಾನೆ. ಮಲದ ಹುಳುವಿಗೆ ಅಲ್ಲಿರುವುದೇ ಆನಂದ. ಅದು ಅಲ್ಲಿಯೇ ಮೆಯ್ಯು ತುಂಬಿಕೊಂಡಿರುತ್ತದೆ. ಅದನ್ನು ಅಲ್ಲಿಂದ ತೆಗೆದು, ಅನ್ನದ ಪಾತ್ರೆಯಲ್ಲಿ ಇಕ್ಕಿದರೆ ಕೂಡಲೇ ಸತ್ತು ಹೋಗುತ್ತದೆ. (ಎಲ್ಲರೂ ಗಂಭೀರವಾಗಿರುತ್ತಾರೆ)

ತೃತೀಯ ಪರಿಚ್ಛೇದ

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ॥ ಗೀತಾ ೬-೩೫

[ಎಲೈ ಮಹಾಭುಜನಾದ ಅರ್ಜುನನೇ, ಮನಸ್ಸು ಚಂಚಲವಾದುದು, ಅದನ್ನು ನಿಗ್ರಹಿಸುವುದು ಬಹಳ ಕಷ್ಟ, ಇದರಲ್ಲಿ ಸಂಶಯವಿಲ್ಲ. ಆದರೂ ಅದನ್ನು ಅಭ್ಯಾಸದಿಂದಲೂ ವೈರಾಗ್ಯದಿಂದಲೂ ನಿಗ್ರಹಿಸಬಹುದು.]

(ತೀವ್ರವೈರಾಗ್ಯ ಮತ್ತು ಬದ್ಧಜೀವ)

ವಿಜಯ :—ಬದ್ಧಜೀವನು ಹೇಗಿದ್ದರೆ ಮುಕ್ತನಾದಾನು?

ಶ್ರೀರಾಮಕೃಷ್ಣ :—ಈಶ್ವರನ ಕೃಪೆಯಿಂದ ಬದ್ಧಜೀವನಿಗೆ ತೀವ್ರವೈರಾಗ್ಯವುಂಟಾದರೆ, ಅವನು ಕಾಮಿನೀಕಾಂಚನಗಳ ಆಸಕ್ತಿಯಿಂದ ಮುಕ್ತನಾಗ

ಬಲ್ಲನು. ತೀವ್ರವೈರಾಗ್ಯವೆಂದರೇನು ? 'ವೈರಾಗ್ಯವು ಬಂದಾಗ ಬರಲಿ, ನಾನೇನೋ ಈಶ್ವರನ ನಾಮೋಚ್ಚಾರಣಮಾಡುತ್ತೇನೆ', ಎಂದು ಕೆಲವರು ಹೇಳುತ್ತಾರೆ. ಅದು ಮಂದವೈರಾಗ್ಯ. ಹೊಟ್ಟೆಯಲ್ಲಿ ಹುಟ್ಟಿದ ಮಗುವಿನ ವಿಷಯದಲ್ಲಿ ತಾಯಿಯು ಆವ ರೀತಿ ತುಡಿದು ಕೊಳ್ಳುತ್ತಾಳೆಯೋ, ಅದೇ ರೀತಿ, ಆರು ಭಗವಂತನಲ್ಲಿ ವ್ಯಾಕುಲತೆಯುಳ್ಳವರಾಗಿದ್ದಾರೆಯೋ, ಅವರಿಗೆ ತೀವ್ರವೈರಾಗ್ಯವುಳ್ಳವರೆಂದು ಹೆಸರು. ತೀವ್ರವೈರಾಗ್ಯವುಳ್ಳವನು ಭಗವಂತನನ್ನು ಬಿಟ್ಟು ಬೇರಾವುದನ್ನೂ ಅಪೇಕ್ಷಿಸುವುದಿಲ್ಲ. ಅವನು ಸಂಸಾರವನ್ನು ಅಗಾಧವಾದ ಬಾವಿಯೆಂದೂ, ತಾನು ಅದರಲ್ಲಿ ಬಿದ್ದು ಮುಳುಗಿ ಹೋಗಿದ್ದನೆಂದೂ, ತಿಳಿದುಕೊಂಡು ತನ್ನ ಬಂಧುಗಳನ್ನೆಲ್ಲ ಕಾಲಸರ್ಪವೆಂದು ತಿಳಿದು, ಅವರ ಹತ್ತಿರದಿಂದ ಓಡಿಹೋಗಬೇಕೆಂದು ಬಯಸುತ್ತಾನೆ, ಓಡಿಯೂ ಹೋಗುತ್ತಾನೆ. ಗೃಹಕೃತ್ಯವನ್ನು ಮೊದಲು ಸರಿಮಾಡಿಕೊಂಡು, ಆಮೇಲೆ ಈಶ್ವರನನ್ನು ಚಿಂತಿಸೋಣವೆಂದು ಅವನು ಎಂದಿಗೂ ಯೋಚಿಸುವುದಿಲ್ಲ. ಅವನ ಮನಸ್ಸಿನಲ್ಲಿ ಬಹಳ ಶಕ್ತಿಯಿದೆ.

ತೀವ್ರವೈರಾಗ್ಯಕ್ಕೆ ಒಂದು ಕಥೆಯನ್ನು ಹೇಳುತ್ತೇನೆ, ಕೇಳು. ಒಂದು ದೇಶದಲ್ಲಿ ಅನಾವೃಷ್ಟಿಯಾಗಿದ್ದಿತು. ಆಗ ರೈತರೆಲ್ಲರೂ ತಮ್ಮ ಭೂಮಿಗೆ ಸಣ್ಣ ಕಾಲಿವೆಗಳನ್ನು ತೋಡಿ ದೂರದಿಂದ ನದಿಯ ನೀರನ್ನು ತರುತ್ತಿದ್ದರು. ಅವರಲ್ಲಿ ಒಬ್ಬನು ದೃಢಸಂಕಲ್ಪವುಳ್ಳವನು. ಅವನು ಒಂದು ದಿವಸ ನದಿಯ ವರೆಗೂ ಕಾಲಿವೆಯನ್ನು ತೋಡಿ ನದಿಯ ನೀರು ಜಮೀನಿಗೆ ಬರುವ ಪರ್ಯಂತ ಬಿಡುವುದಿಲ್ಲವೆಂದು ಪ್ರತಿಜ್ಞೆಮಾಡಿ, ಕಾಲಿವೆಯನ್ನು ತೋಡುವುದಕ್ಕೆ ತೊಡಗಿದನು. ಸ್ನಾನದ ಹೊತ್ತಾಯಿತು. ಹೆಂಡತಿಯು ಮಗಳ ಕಯ್ಯಲ್ಲಿ ಎಣ್ಣೆಯನ್ನು ಕಳುಹಿಸಿಕೊಟ್ಟಳು. ಮಗಳು ಬಂದು, 'ಅಪ್ಪಾ, ಸ್ನಾನಮಾಡುವುದಕ್ಕೆ ಹೊತ್ತಾಯಿತು, ಎಣ್ಣೆಯನ್ನು ತಂದಿದ್ದೇನೆ. ತಲೆಗೆ ಒತ್ತಿಕೊಂಡು ಸ್ನಾನಮಾಡು', ಎಂದು ಹೇಳಿದಳು. ಆಗ ಅವನು, 'ಅಮ್ಮ, ನೀನು ಹೋಗು, ನನಗೆ ಈಗ ಕೆಲಸವಿದೆ', ಎಂದು ಹೇಳಿದನು. ಮಧ್ಯಾಹ್ನ ಒಂದು ಗಂಟೆಯಾಯಿತು. ಆಗಲೂ ರೈತನು ಕೆಲಸಮಾಡುತ್ತಲೇ ಇದ್ದನು. ಸ್ನಾನದ ಯೋಚನೆಯೇ ಇಲ್ಲ, 'ಆಗ ಹೆಂಡತಿಯು ಅಲ್ಲಿಗೆ ಬಂದು, ಇದೇನು? ಸ್ನಾನಮಾಡದೆ ಇದ್ದೀರಿ. ಅಡುಗೆಯೆಲ್ಲಾ ಆರಿಹೋಯಿತು ; ನೀವು ಆವಾಗಲೂ ಹಠಗಾರರು ; ಈ ಕೆಲಸವನ್ನು ನಾಳೆ ಮಾಡಿಕೊಂಡರೆ ಆಗದೇ ? ಇಲ್ಲವೆ, ಊಟವಾದ ಮೇಲೆ ಮಾಡಿದರೂ ಆಯಿತು', ಎಂದು ಹೇಳಿದಳು. ಆಗ ರೈತನು ಅವಳನ್ನು ಬಯ್ದು, 'ನಿನಗೆ ಬುದ್ಧಿಯಿಲ್ಲ, ಮಳೆಬರಲಿಲ್ಲ. ನೆಲವನ್ನು ಉಳಲಿಲ್ಲ. ಈ ವರ್ಷ ಮಕ್ಕಳು ಮರಿಗಳು ಏನನ್ನು ತಿನ್ನಬೇಕು ? ಅನ್ನವಿಲ್ಲದೆ ನೀವೆಲ್ಲರೂ ಸತ್ತುಹೋಗುತ್ತೀರಿ, ಜಮೀನಿಗೆ ಈದಿನ ನೀರನ್ನು

ತಂದೇ ತರುತ್ತೇನೆ. ಆ ಮೇಲೆ ಸ್ನಾನ, ಊಟ, ಎಲ್ಲ', ಎಂದು ಹೇಳುತ್ತ, ಗುದ್ದಲಿಯನ್ನು ತೆಗೆದುಕೊಂಡು ಹೊಡೆಯುವುದಕ್ಕೆ ಅವಳನ್ನು ಅಟ್ಟಿ ಕೊಂಡು ಹೋದನು. ಅದನ್ನು ನೋಡಿ, ಅವಳು ಹೆದರಿ ಓಡಿಹೋದಳು. ರೈತನು ಹಗಲೆಲ್ಲಾ ಮೆಯ್ಯು ಮುರಿಯುವಂತೆ ದುಡಿದು, ಸಂಧ್ಯಾಕಾಲದ ವೇಳೆಗೆ ನದಿಯ ವರೆಗೂ ಕಾಲಿವೆಯನ್ನು ತೋಡಿಬಿಟ್ಟು, ಒಂದು ಕಡೆ ಕುಳಿತುಕೊಂಡನು ನದಿಯ ನೀರು ಕಲಕಲಧ್ವನಿಯೊಡನೆ ಕಾಲಿವೆ ಯಲ್ಲಿ ಹರಿದು ತನ್ನ ಜಮೀನಿಗೆ ಬರುವುದನ್ನು ನೋಡಿ, ಅವನು ಶಾಂತನಾಗಿ ಆನಂದದಿಂದ ಪರಿಪೂರ್ಣನಾದನು. ಆ ಮೇಲೆ ಅವನು ಮನೆಗೆ ಹೋಗಿ, ಹೆಂಡತಿಯನ್ನು ಕೂಗಿ, 'ಎಲೇ, ಈಗ ಎಣ್ಣೆಯನ್ನು ತೆಗೆದುಕೊಂಡು ಬಾ; ತಂಬಾಕನ್ನು ಸಿದ್ಧಪಡಿಸು,' ಎಂದು ಹೇಳಿ, ನಿಶ್ಚಿಂತನಾಗಿ ಸ್ನಾನಭೋಜ ನಾದಿಗಳನ್ನು ತೀರಿಸಿಕೊಂಡು ಸುಖವಾಗಿ ನಿದ್ದೆ ಮಾಡಿದನು. ಈ ರೀತಿ ಯಾದ ಹಠವೇ ತೀವ್ರವೈರಾಗ್ಯಕ್ಕೆ ಉಪಮೆಯು.

ಇನ್ನೊಬ್ಬನೂ ಹೀಗೆಯೇ ಜಮೀನಿಗೆ ನೀರನ್ನು ತರುವುದಕ್ಕೆ ಪ್ರಯತ್ನಪಡು ತ್ತಿದ್ದನು. ಆಗ ಅವನ ಹೆಂಡತಿಯು ಬಂದು, 'ತುಂಬ ಹೊತ್ತಾಯಿತು. ಇದೇನು, ಇನ್ನೂ ಇಲ್ಲೇ ಇದ್ದೀರಿ? ಇಷ್ಟೊಂದು ಹಠದಿಂದ ಪ್ರಯೋಜನ ವೇನು? ಬನ್ನಿ, ಬನ್ನಿ', ಎಂದು ಕರೆದಳು. ಆಗ ಅವನು ಅಷ ಮಾತನ್ನೂ ಆಡದೆ, ತನ್ನ ಗುದ್ದಲಿಯನ್ನು ಬಿಸುಟು, 'ನೀನು ಹೇಳಿದ ಹಾಗೆಯೇ ಆಗಲಿ, ನಡೆ,' ಎಂದು ಹೇಳಿ, ಮನೆಗೆ ಹೊರಟುಹೋದನು. (ಎಲ್ಲರೂ ನಗುವರು). ಅವನು ತನ್ನ ಜಮೀನಿಗೆ ಇನ್ನೂ ನೀರ ತರುವುದರಲ್ಲಿಯೇ ಇದ್ದಾನೆ. ಇದೀಗ ಮಂದವೈರಾಗ್ಯಕ್ಕೆ ಉಪಮೆಯು.

ಹಠವಿಲ್ಲದ ರೈತನು ಹೇಗೆ ಜಮೀನಿಗೆ ನೀರನ್ನು ತರಲಿಲ್ಲವೋ, ಹಾಗೆಯೇ ದೃಢಸಂಕಲ್ಪವಿಲ್ಲದವನೂ ಈಶ್ವರನ ಲಾಭವನ್ನು ಪಡೆಯಲಾರನು.

ಚತುರ್ಥ ಪರಿಚ್ಛೇದ

ಆಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶಂತಿ ಯದ್ವತ್।
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ಸಶಾಂತಿಮಾಪ್ನೋತಿ ನ ಕಾಮಕಾಮೀ॥
ಗೀತಾ ॥ ೨-೭೦

[ಜಲಪರಿಪೂರ್ಣವಾದ ಸಮುದ್ರವನ್ನು ಹೊಸ ನೀರು ಬಂದು ಸೇರಿದರೂ, ಹೇಗೆ ಸಮುದ್ರವು ಎಂದಿನಂತೆಯೇ ಅಚಲವಾಗಿರುತ್ತದೆಯೋ, ಹಾಗೆಯೇ, ಆನಂದ ಪರಿಪೂರ್ಣನಾದವನನ್ನು ಎಲ್ಲ ಬಯಕೆಗಳೂ ಬಂದು ಸೇರುತ್ತಿದ್ದರೂ ಅವನು ಶಾಂತ ನಾಗಿಯೇ ಇರುತ್ತಾನೆ. ವಿಷಯೇಚ್ಛೆಯುಳ್ಳವನು ಶಾಂತಿಯನ್ನು ಪಡೆಯುವುದಿಲ್ಲ.]

(ಕಾಮಿನೀಕಾಂಚನವೇ ದಾಸತ್ವಕ್ಕೆ ಕಾರಣ)

ಶ್ರೀರಾಮಕೃಷ್ಣ:—(ವಿಜಯನನ್ನು ಕುರಿತು) ನೀನು ಮೊದಲು ಇಲ್ಲಿಗೆ ಹೆಚ್ಚಾಗಿ ಬರುತ್ತಿದ್ದೆ. ಈಗ ಏಕೆ ಬರುವುದಿಲ್ಲ?

ವಿಜಯ:—ಇಲ್ಲಿಗೆ ಬರಬೇಕೆಂದು ನನಗೆ ಆಶೆ. ಆದರೆ ಈಗ ನಾನು ಪರಾಧೀನನು. ಬ್ರಾಹ್ಮಸಮಾಜದಲ್ಲಿ ಕೆಲಸಕ್ಕೆ ಒಪ್ಪಿಕೊಂಡಿದ್ದೇನೆ.

ಶ್ರೀರಾಮಕೃಷ್ಣ:—ಕಾಮಿನೀಕಾಂಚನಗಳು ಜೀವರಿಗೆ ಬಂಧನವನ್ನುಂಟು ಮಾಡಿ, ಅವರ ಸ್ವಾಧೀನತೆಯನ್ನು ತಪ್ಪಿಸುತ್ತವೆ. ಕಾಮಿನಿಗೋಸ್ಕರ ಕಾಂಚನವು ಬೇಕು, ಕಾಂಚನಕ್ಕಾಗಿ ಇತರರಲ್ಲಿ ಊಳಿಗಮಾಡಬೇಕು. ಇದರಿಂದ ಸ್ವಾಧೀನತೆಯು ತಪ್ಪಿಹೋಗುತ್ತದೆ. ಅಲ್ಲದೆ, ನಮಗೆ ಇಷ್ಟ ಬಂದಂತೆ ಕೆಲಸಮಾಡುವುದಕ್ಕೂ ಆಗುವುದಿಲ್ಲ.

ಜಯಪುರದ ಗೋವಿಂದದೇವರ ಪೂಜಾರಿಗಳು, ಮೊದಲು ಮೊದಲು ವಿವಾಹಮಾಡಿಕೊಳ್ಳುತ್ತಿರಲಿಲ್ಲ. ಆಗ ಅವರೆಲ್ಲರೂ ಬಹಳ ತೇಜಸ್ವಿಗಳಾಗಿದ್ದರು. ಒಂದಾವರ್ತಿ ರಾಜನು ಅವರನ್ನು ತನ್ನ ಬಳಿಗೆ ಕರೆಯಕಳುಹಿದನು. ಅವರು ಹೋಗದೆ, 'ರಾಜನೇ ಬೇಕಾದರೆ ಇಲ್ಲಿಗೆ ಬರಲಿ', ಎಂದು ಹೇಳಿದರು. ಆ ಮಾತ ಕೇಳಿ, ರಾಜನೂ ಮಂತ್ರಿಗಳೂ ಆಲೋಚನೆಮಾಡಿ, ಪೂಜಾರಿಗಳಿಗೆಲ್ಲ ವಿವಾಹವನ್ನು ಮಾಡಿಸಿದರು. ಆ ಮೇಲೆ ರಾಜನು ಅವರನ್ನು ಕರೆಯಕಳುಹಬೇಕಾಗಲೇ ಇಲ್ಲ. ಅವರವರೇ ತಾವಾಗಿ, 'ಮಹಾಸ್ವಾಮಿ, ತಮಗೆ ಆಶೀರ್ವಾದಮಾಡಲು ಬಂದಿದ್ದೇವೆ. ದೇವರ ಪ್ರಸಾದವನ್ನು ಸ್ವೀಕರಿಸಬೇಕು. ಈ ದಿವಸ ಗೃಹಾರಂಭ ಮಾಡಬೇಕಾಗಿದೆ. ಇಂದು ಮಗುವಿಗೆ ಅನ್ನಪ್ರಾಶನವಾಗಬೇಕು. ಈ ದಿನ ಅಕ್ಷರಾಭ್ಯಾಸ ನಡೆಯಬೇಕು,' ಎಂದು ಆವುದಾದರೂ ಒಂದು ವ್ಯಾಜದಿಂದ ಅಡಿಗಡಿಗೆ ರಾಜನ ದರ್ಶನಮಾಡುವುದಕ್ಕೆ ಬರತೊಡಗಿದರು.

ಸಾವಿರದ ಇನ್ನೂರು ಮಂದಿ ನ್ಯಾಡಾಜಾತಿಯ ವೈಷ್ಣವರು ಮತ್ತು ಸಾವಿರದ ಮುನ್ನೂರು ಮಂದಿ ನ್ಯಾಡಾಜಾತಿಯ ವೈಷ್ಣವಿಯರ ಕಥೆಯನ್ನು ಕೇಳಿದ್ದೀಯಾ? ನಿತ್ಯಾನಂದಗೋಸ್ವಾಮಿಯ ಮಗನಾದ ವೀರಭದ್ರನಿಗೆ ಸಾವಿರದ ಮುನ್ನೂರು ಮಂದಿ ನ್ಯಾಡಾಜಾತಿಯ ಬ್ರಹ್ಮಚಾರೀ ಶಿಷ್ಯರಿದ್ದರು. ಅವರೆಲ್ಲರೂ ಸಿದ್ಧಪುರುಷರಾದರು 'ಇವರು ಸಿದ್ಧರಾಗಿದ್ದಾರೆ, ಹೇಳಿದುದೆಲ್ಲಾ ಫಲಿಸುತ್ತದೆ. ಇವರು ಹೋದ ಕಡೆ ಭಯಕ್ಕೆ ಆಸ್ಪದ; ಏತಕ್ಕೆಂದರೆ ಜನರು ಒಂದು ವೇಳೆ ಅರಾದರೂ ತಿಳಿಯದೆ ಅಪರಾಧವನ್ನು ಮಾಡಿ

ದರೆ, ಅವರಿಗೆ ಅನಿಷ್ಟವುಂಟಾಗುವುದು,' ಎಂದು ವೀರಭದ್ರನು ಭಯಪಟ್ಟು ಅವರನ್ನು ಕರೆಸಿ, 'ನೀವು ಗಂಗೆಗೆ ಹೋಗಿ ಸಂಧ್ಯಾಕರ್ಮವನ್ನು ಮಾಡಿ ಕೊಂಡು ಬನ್ನಿರಿ', ಎಂದು ಹೇಳಿದನು. ಅವರೆಲ್ಲರೂ ಸಿದ್ಧರು; ಗಂಗೆ ಯಲ್ಲಿ ಸ್ನಾನಮಾಡಿ ಧ್ಯಾನಮಾಡುತ್ತಾ ಸಮಾಧಿಸ್ಥರಾದರು. ಗಂಗೆಯು ಉಕ್ಕಿ ಬಂದು, ಅವರ ತಲೆಯ ಮೇಲೆ ಹರಿದು ಇಳಿದು ಹೋದರೂ, ಅವ ರಿಗೆ ಗೊತ್ತಾಗಲಿಲ್ಲ; ಅವರ ಸಮಾಧಿಯು ಭಂಗವಾಗಲಿಲ್ಲ. ಆ ಸಾವಿರದ ಮುನ್ನೂರು ಮಂದಿಯಲ್ಲಿ, ನೂರು ಮಂದಿಗೆ, ತಮ್ಮ ಗುರುವು ಹೀಗೆಯೇ ಹೇಳುವನೆಂದು ಗೊತ್ತಾಗಿ ಹೋಗಿ, 'ಗುರುವಿನ ಮಾತನ್ನು ಮೀರುವು ದಕ್ಕೆ ಆಗುವುದಿಲ್ಲ. ಅವನನ್ನು ನೋಡದೆ ಎಲ್ಲಿಗಾದರೂ ಹೊರಟು ಹೊಗೋಣ', ಎಂದು ಯೋಚಿಸಿ ಹೊರಟುಹೋದರು. ಉಳಿದವರು ಗುರುವಿನ ಬಳಿಗೆ ಬಂದರು. ಆಗ ವೀರಭದ್ರನು ಅವರನ್ನು ನೋಡಿ, 'ಈ ಸಾವಿರದ ಮುನ್ನೂರು ಮಂದಿ ಹೆಂಗುಸರು ನಿಮ್ಮ ಸೇವೆಯನ್ನು ಮಾಡು ತ್ತಾರೆ. ಇವರನ್ನು ನೀವು ವಿವಾಹಮಾಡಿಕೊಳ್ಳಿರಿ', ಎಂದು ಹೇಳಿದನು. ಅವರು, 'ಸ್ವಾಮೀ, ಅಪ್ಪಣೆ, ನಮ್ಮಲ್ಲಿ ನೂರು ಮಂದಿ ಎಲ್ಲಿಗೋ ಹೊರಟು ಹೋದರು,' ಎಂದು ಹೇಳಿ, ಆ ಸಾವಿರದ ಇನ್ನೂರು ಮಂದಿಯೂ ಪ್ರತ್ಯೇಕ ವಾಗಿ ಮದುವೆಯಾಗಿ ಬದುಕಮಾಡಿಕೊಂಡು ಇರುತ್ತಿದ್ದರು. ಆಮೇಲೆ ಅವರ ಮೊದಲಿನ ತೇಜಸ್ಸೂ ಹೋಯಿತು. ತಪಸ್ಸಿನ ಬಲವೂ ಹೋಯಿತು, ದೇಹಶಕ್ತಿಯೂ ಹೋಯಿತು. ಹೀಗಿರುವಲ್ಲಿ, ಹೆಂಗುಸರ ಸಂಗದಿಂದ ಸ್ವಾಧೀನತೆಯು ಹೋಗಿ ಬಿಡುವುದೇನು ಹೆಚ್ಚೇ!

(ವಿಜಯನನ್ನು ಕುರಿತು) ಇತರರಲ್ಲಿ ಊಳಿಗಮಾಡುವುದಕ್ಕೆ ಒಪ್ಪಿಕೊಂಡರೆ ಏನಾಗುತ್ತದೆ, ಎಂಬುದನ್ನು ನೀವೇ ನೋಡುತ್ತೀರಿ. ಇಷ್ಟೊಂದು ಪ್ಯಾಸ ಮಾಡಿ, ಎಷ್ಟೋ ಇಂಗ್ಲಿಷನ್ನು ಓದಿ ಪಂಡಿತನಾಗಿದ್ದರೂ, ಯಜಮಾನನ ಬಳಿ ಕೆಲಸಕ್ಕೆ ಒಪ್ಪಿಕೊಂಡರೆ, ಸದಾ ಅವನಿಂದ ಜೋಡಿನ ಪೆಟ್ಟನ್ನು ತಿನ್ನ ಬೇಕಾಗುತ್ತದೆ. ಹೀಗಾಗುವುದಕ್ಕೆ ಕಾಮಿನಿಯೇ ಕಾರಣ. ಮದುವೆಮಾಡಿ ಕೊಂಡ ಮೇಲೆ, ಹರಡಿದ ಸಂತೆಯನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಎಷ್ಟೋ ಅವಮಾನಗಳನ್ನು ಅನುಭವಿಸಬೇಕಾಗುತ್ತದೆ. ದಾಸತ್ವದಲ್ಲಿ ಇಷ್ಟೊಂದು ಕಷ್ಟ.

ಭಗವಂತನ ಲಾಭವಾದ ಮೇಲೆ, ಕಾಮಿನಿಯನ್ನು ಮಾತೃಭಾವದಿಂದ ಪೂಜಿಸ ಬೇಕು. ತೀವ್ರವೈರಾಗ್ಯವುಂಟಾದರೆ ಭಗವಂತನ ಲಾಭವಾಗುತ್ತದೆ. ಆ ಮೇಲೆ ಹೆಂಗುಸರಲ್ಲಿ ಆಸಕ್ತಿಯು ಇರುವುದಿಲ್ಲ. ಒಂದೇ ಕೊಟ್ಟಡಿಯಲ್ಲಿ ಹೆಂಗುಸರೊಡನೆ ಇದ್ದರೂ, ಅವರ ಮೇಲೆ ಆಸಕ್ತಿಯಾಗಲಿ, ಅವರಿಂದ

ಭಯವಾಗಲಿ, ಇರುವುದಿಲ್ಲ. ಒಂದು ದೊಡ್ಡ ಸೂಜಿಗಲ್ಲೂ ಇದೆ, ಸಣ್ಣ ಸೂಜಿಗಲ್ಲೂ ಇದೆ. ಲೋಹವನ್ನು ಎಳೆಯುವುದು ಆವುದು? ದೊಡ್ಡದು. ಭಗವಂತನು ದೊಡ್ಡಸೂಜಿಗಲ್ಲು; ಅವನ ಪಕ್ಕದಲ್ಲಿ, ಚಿಕ್ಕ ಸೂಜಿಗಲ್ಲಿನಂತಿರುವ ಕಾಮಿನಿಯು, ಏನ ಮಾಡಲಾಪಳು?

ಒಬ್ಬಭಕ್ತ:—ಮಹಾಶಯರೇ, ಹೆಂಗುಸರನ್ನು ದ್ವೇಷಿಸಬೇಕೇ?

ಶ್ರೀರಾಮಕೃಷ್ಣ:—ಆವನು ಭಗವಂತನ ಲಾಭವನ್ನು ಪಡೆದಿದ್ದಾನೆಯೋ, ಅವನು ತನಗೆ ಭಯವುಂಟಾಗುವ ಹಾಗೆ ಕೆಟ್ಟ ಅಭಿಪ್ರಾಯದಿಂದ ಕಾಮಿನಿಯನ್ನು ನೋಡುವುದಿಲ್ಲ. ಹೆಂಗುಸರು ಬ್ರಹ್ಮಮಯಿಯಾದ ಲಕ್ಷ್ಮಿಯ ಅಂಶವೆಂದು ಅವನು ಸತ್ಯವಾಗಿಯೂ ತಿಳಿಯುತ್ತಾನೆ. ಅವನು ಎಲ್ಲ ಹೆಂಗುಸರನ್ನೂ ತಾಯಿಯೆಂದು ತಿಳಿದು ಪೂಜಿಸುತ್ತಾನೆ.

ಪಂಚಮ ಪರಿಚ್ಛೇದ

(ಈಶ್ವರನ ಅಪ್ಪಣೆಯನ್ನು ಪಡೆದರೆ ಸರಿಯಾದ ಆಚಾರ್ಯನಾಗಬಹುದು.)

ವಿಜಯ:—ಬ್ರಾಹ್ಮಸಮಾಜದ ಕೆಲಸವನ್ನು ಕೈಕೊಂಡಿದ್ದೇನೆ. ಆದುದರಿಂದ ಹೆಚ್ಚಾಗಿ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಸಮಯವಾದಾಗಲೆಲ್ಲ ಬರುತ್ತೇನೆ.

ಶ್ರೀರಾಮಕೃಷ್ಣ:—(ವಿಜಯನನ್ನು ಕುರಿತು) ನೋಡು, ಆಚಾರ್ಯನ ಕಾರ್ಯವು ಬಹಳ ಕಷ್ಟ. ಭಗವಂತನಿಂದ ಸಾಕ್ಷಾತ್ತಾಗಿ ಅಪ್ಪಣೆಯನ್ನು ಪಡೆದ ಹೊರತು, ಲೋಕಕ್ಕೆ ಉಪದೇಶಮಾಡುವುದಕ್ಕೆ ಆಗುವುದಿಲ್ಲ.

ಒಂದು ವೇಳೆ ಭಗವಂತನ ಅಪ್ಪಣೆಯಿಲ್ಲದೆ ಉಪದೇಶಮಾಡಿದರೆ, ಜನರು ಕೇಳುವುದೇ ಇಲ್ಲ, ಆ ಉಪದೇಶದಲ್ಲಿ ಶಕ್ತಿಯೂ ಇರುವುದಿಲ್ಲ. ಸಾಧನೆ ಮಾಡಿಯಾಗಲಿ, ಅಥವಾ ಇನ್ನಾವ ರೀತಿಯಿಂದಾಗಲಿ, ಮೊದಲು ಭಗವಂತನ ಲಾಭವನ್ನು ಪಡೆಯಬೇಕು. ಅವನ ಅಪ್ಪಣೆಯನ್ನು ಪಡೆದು ಉಪದೇಶಮಾಡಬಹುದು. ಆ ದೇಶದಲ್ಲಿ ಒಂದು ಕೆರೆ ಇದೆ. ಅದನ್ನು ಹಲಧರಪುಷ್ಕರಣಿಯೆಂದು ಕರೆಯುತ್ತಾರೆ. ಅದರ ಕಟ್ಟೆಯ ಮೇಲೆ, ಪ್ರತಿನಿತ್ಯವೂ ಜನರು ಹೇಸಿಗೆಮಾಡುತ್ತಿದ್ದರು. ಬೆಳಿಗ್ಗೆ ಅಲ್ಲಿಗೆ ಹೋಗುವವರು, ಹೇಸಿಗೆಮಾಡಿದವರನ್ನು ಬಯ್ದು ಗಲಾಟೆಮಾಡುತ್ತಿದ್ದರು.

ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಮರುದಿನವೂ ಕಟ್ಟೆಯ ಮೇಲೆ ಹೇಸಿಗೆಮಾಡುತ್ತಲೇ ಇದ್ದರು. ಕೊನೆಗೆ ಸರ್ಕಾರದ ಸೇವಕನು ಬಂದು, 'ಇಲ್ಲಿ ಆರೂ ಹೇಸಿಗೆಮಾಡಕೂಡದು, ಮಾಡಿದವರಿಗೆ ಶಿಕ್ಷೆಯಾಗುತ್ತದೆ,' ಎಂದು ಒಂದು ಚೀಟಿಯನ್ನು ಅಂಟಿಸಿದನು. ಬಳಿಕ ಆರೂ ಹೇಸಿಗೆ ಮಾಡುತ್ತಿರಲಿಲ್ಲ.

ಭಗವಂತನ ಅಪ್ಪಣೆಯಾದ ಬಳಿಕ, ಎಲ್ಲಿ ಬೇಕಾದರೂ ಆಚಾರ್ಯನಾಗಬಹುದು. ಉಪನ್ಯಾಸವನ್ನು ಮಾಡಲೂ ಬಹುದು. ಅವನ ಅಪ್ಪಣೆಯನ್ನು ಪಡೆಯು ವರು, ಅವನಿಂದಲೇ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತಾರೆ. ಆಗ ಅವರು ಅತಿಕಠಿಣವಾದ ಆಚಾರ್ಯಕರ್ಮವನ್ನು ಮಾಡಬಲ್ಲವರಾಗುತ್ತಾರೆ. ಒಬ್ಬ ದೊಡ್ಡ ಜಮೀನ್ದಾರನ ಸಂಗಡ, ಬಡವನೊಬ್ಬನು ಹೈಕೋರ್ಟಿನಲ್ಲಿ ವ್ಯಾಜ್ಯಮಾಡತೊಡಗಿದನು. ಆಗ ಜನರು, 'ಈ ಮನುಷ್ಯನಿಗೆ ಒಬ್ಬ ಬಲಿಷ್ಠನು ಬೆಂಬಲವಾಗಿದ್ದಾನೆ; ಒಬ್ಬ ದೊಡ್ಡ ಜಮೀನ್ದಾರನು ಹಿಂದೆ ನಿಂತು, ಬಹುಶಃ ಈ ವ್ಯಾಜ್ಯವನ್ನು ನಡೆಸುತ್ತಾನೆ,' ಎಂದು ಹೇಳ ತೊಡಗಿದರು. ಮನುಷ್ಯನು ಸಾಮಾನ್ಯನಾದ ಜೀವನು; ಈಶ್ವರನಿಂದ ಸಾಕ್ಷಾತ್ತಾಗಿ ಶಕ್ತಿಯನ್ನು ಪಡೆಯದೆ ಇದ್ದರೆ, ಅವನಿಗೆ ಆಚಾರ್ಯನ ಕಠಿಣ ವಾದ ಕಾರ್ಯವನ್ನು ಮಾಡುವುದಕ್ಕೆ ಆಗುವುದಿಲ್ಲ.

ವಿಜಯ :—ಮಹಾಶಯರೇ, ಬ್ರಾಹ್ಮಸಮಾಜದ ಉಪದೇಶಗಳಿಂದ ಲೋಕಕ್ಕೆ ಉತ್ತಾರಣೆಯಾಗುವುದಿಲ್ಲವೆ?

(ಸಚ್ಚಿದಾನಂದನೇ ಗುರು, ಅವನೇ ಮುಕ್ತಿಯನ್ನು ಕೊಡುವನು)

ಶ್ರೀರಾಮಕೃಷ್ಣ :—ಮನುಷ್ಯನು ಇತರರನ್ನು ಸಂಸಾರಬಂಧನದಿಂದ ಬಿಡಿಸಿ ಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವೇ? ಈ ಭುವನಮೋಹಿನಿಯಾದ ಮಾಯೆಯು ಆವನದೋ, ಅವನೇ ನಮ್ಮನ್ನು ಮಾಯಾಪಾಶದಿಂದ ಬಿಡಿಸಿ ಮುಕ್ತರನ್ನಾಗಿ ಮಾಡಬಲ್ಲನು. ಸಚ್ಚಿದಾನಂದಗುರುವಲ್ಲದೆ ಬೇರೆ ಆರೂ ಗತಿಯಿಲ್ಲ. ಆರು ಈಶ್ವರಲಾಭವನ್ನು ಪಡೆದಿಲ್ಲವೋ, ಭಗವಂತನ ಅಪ್ಪಣೆ ಯನ್ನು ಸಂಪಾದಿಸಿಲ್ಲವೋ, ಈಶ್ವರನ ಶಕ್ತಿಯಿಂದ ಶಕ್ತಿವಂತರಾಗಿಲ್ಲವೋ, ಅವರು ಜೀವರನ್ನು ಭವಬಂಧನದಿಂದ ಬಿಡಿಸಬಲ್ಲರೇ? ನಾನು ಒಂದು ದಿನ ಪಂಚವಟಿಯ ಸಮೀಪಕ್ಕೆ ಹೋಗಿ, ಸರ್ಪ ಗಿಡದ ಕೆಳಗೆ ಬಹಿರ್ದೇಶಕ್ಕೆ ಕುಳಿತೆನು. ಅಲ್ಲಿ ಒಂದು ದಪ್ಪ ಕಪ್ಪೆಯು ಬಹಳವಾಗಿ ಕೂಗುತ್ತಿದ್ದಿತು. ಅದನ್ನು ಸರ್ಪವೇನಾದರೂ ಹಿಡಿದುಕೊಂಡಿರಬಹುದೆಂದು ತೋರಿತು. ಬಲು ಹೊತ್ತಿನ ಮೇಲೆ, ನಾನು ಹಿಂತಿರುಗಿ ಬರುವಾಗ, 'ಇದೇನು,'

ಎಂದು ನೋಡಿದೆನು. ಆಗಲೂ ಅದು ಗಟ್ಟಿಯಾಗಿಯೇ ಕೂಗುತ್ತಿದ್ದಿತು. ಅದನ್ನು ಒಂದು ಸಾಮಾನ್ಯವಾದ ಹಾವು ಹಿಡಿದುಕೊಂಡಿದ್ದಿತು. ಅದಕ್ಕೆ ಕಪ್ಪೆಯನ್ನು ಉಗುಳುವುದಕ್ಕೂ ಆಗುತ್ತಿರಲಿಲ್ಲ, ನುಂಗುವುದಕ್ಕೂ ಆಗುತ್ತಿರಲಿಲ್ಲ. ಕಪ್ಪೆಯ ಕಷ್ಟವೂ ನೀಗಲಿಲ್ಲ. 'ಜಾತಿಸರ್ಪವು ಏನಾದರೂ ಅದನ್ನು ಹಿಡಿದುಕೊಂಡಿದ್ದರೆ, ಮೂರು ಸಲ ಕೂಗುವುದರೊಳಗಾಗಿ ಅದರ ಬಾಯಿ ಮುಚ್ಚಿಹೋಗುತ್ತಿದ್ದಿತು. ಈಗ ಅವುದೋ ಸಾಮಾನ್ಯವಾದ ಹಾವು ಅದನ್ನು ಹಿಡಿದುಕೊಂಡಿದೆ. ಆದುದರಿಂದ ಹಾವಿಗೂ ಕಷ್ಟ, ಕಪ್ಪೆಗೂ ಕಷ್ಟ,' ಎಂದು ಯೋಚಿಸಿದೆನು.

ಒಂದು ವೇಳೆ ಸದ್ಗುರುವು ಸಿಕ್ಕಿದರೆ, ಜೀವರ ಅಹಂಕಾರಗಳು ಮೂರಾವರ್ತಿ ಕೂಗುವುದರೊಳಗಾಗಿ ನಿಂತು ಹೋಗುತ್ತವೆ. ಗುರುವು ಭಗವತ್ಸಾಕ್ಷಾತ್ಕಾರವಾಪದಿದ್ದರೆ, ಅವನಿಗೂ ಕಷ್ಟ, ಶಿಷ್ಯನಿಗೂ ಕಷ್ಟ; ಶಿಷ್ಯನ ಅಹಂಕಾರವೂ ಹೋಗುವುದಿಲ್ಲ, ಸಂಸಾರ ಬಂಧನವೂ ತಪ್ಪುವುದಿಲ್ಲ. ಅಸದ್ಗುರುವನ್ನು ಆಶ್ರಯಿಸುವುದರಿಂದ ಶಿಷ್ಯನು ಮುಕ್ತನಾಗುವುದೂ ಇಲ್ಲ.

ಷಷ್ಠ ಪರಿಚ್ಛೇದ

ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ ಗೀತಾ। ೩-೨೭

[ಅಹಂಕಾರದಿಂದ ಮೂಢನಾದವನು, 'ನಾನೇ ಕರ್ತಾ', ಎಂದು ತಿಳಿದುಕೊಳ್ಳುತ್ತಾನೆ.]

(ಮಾಯಾ ಅಥವಾ ಅಹಂಕಾರವೆಂಬ ಆವರಣವು ಹೋದರೆ ಮುಕ್ತಿ ಅಥವಾ ಈಶ್ವರಲಾಭ.)

ವಿಜಯ :—ಮಹಾಶಯರೇ, ನಾವು ಹೀಗೆ ಏತಕ್ಕೆ ಬದ್ಧರಾಗಿದ್ದೇವೆ? ಏತಕ್ಕೆ ಈಶ್ವರನನ್ನು ನೋಡುವುದಕ್ಕೆ ನಮ್ಮಿಂದ ಆಗುವುದಿಲ್ಲ?

ಶ್ರೀರಾಮಕೃಷ್ಣ :—ಜೀವರ ಅಹಂಕಾರವೇ ಮಾಯೆಯು, ಈ ಅಹಂಕಾರವು ಎಲ್ಲವನ್ನೂ ಮರೆಮಾಡಿಬಿಟ್ಟಿದೆ. 'ನಾನು', ಸತ್ತ ಮೇಲೆ ಗಡಿಬಿಡಿ ನಿಲ್ಲುತ್ತದೆ. ಈಶ್ವರನ ಕೃಪೆಯಿಂದ, 'ನಾನು ಕರ್ತನಲ್ಲ', ಎಂಬ

ತಿಳುವಳಿಕೆಯು ಆವಾಗ ಉಂಟಾಗುತ್ತದೆಯೋ, ಆಗಲೀಗ ಮನುಷ್ಯನು ಜೀವನ್ಮುಕ್ತನಾಗುತ್ತಾನೆ. ಆ ಮೇಲೆ ಅವನಿಗೆ ಆವ ಭಯವೂ ಇಲ್ಲ.

ಈ ಮಾಯೆಯು ಅಥವಾ ಅಹಂಕಾರವು ಮೋಘದಂತೆ ಇದೆ. ಸಾಮಾನ್ಯವಾಗಿ, ಮೋಡವು ಮುಚ್ಚಿಕೊಂಡರೆ, ಸೂರ್ಯನು ಕಾಣಬರುವುದಿಲ್ಲ. ಅದು ಸರಿದುಹೋದರೆ, ಸೂರ್ಯನನ್ನು ನೋಡಬಹುದು. ಗುರುವಿನ ಕೃಪೆಯಿಂದ ಒಂದಾವರ್ತಿ ಅಹಂಕಾರವು ಅಳಿದುಹೋದರೆ, ಈಶ್ವರನ ದರ್ಶನವಾಗುತ್ತದೆ.

ಎರಡೂವರೆ ಮೊಳದಲ್ಲಿ ಶ್ರೀರಾಮಚಂದ್ರನಿದ್ದಾನೆ. ಅವನು ಸಾಕ್ಷಾದ್ಭಗವಂತನು. ಮಧ್ಯದಲ್ಲಿ ಸೀತಾರೂಪಿಣಿಯಾದ ಮಾಯೆಯು ಅಡ್ಡಲಾಗಿದ್ದಾಳೆ. ಆದುದರಿಂದ, ಲಕ್ಷ್ಮಣರೂಪನಾದ ಜೀವನು, ಈಶ್ವರನನ್ನು ನೋಡುವುದಕ್ಕೇ ಆಗುವುದಿಲ್ಲ. ಇಗೋ ನೋಡು, ನಾನು ಈ ಬಟ್ಟೆಯನ್ನು ನನ್ನ ಮುಖದ ಮುಂದೆ ಹಿಡಿದುಕೊಳ್ಳುತ್ತೇನೆ. ಆಗ ನನ್ನನ್ನು ನೀನು ನೋಡುವುದಕ್ಕೆ ಆಗುತ್ತದೆಯೇ? ಆದರೂ ನಾನು ಹತ್ತಿರದಲ್ಲಿಯೇ ಇದೇನೆ. ಹಾಗೆಯೇ, ಭಗವಂತನು ಎಲ್ಲಕ್ಕಿಂತಲೂ ಹತ್ತಿರದಲ್ಲಿಯೇ ಇದ್ದಾನೆ. ಆದರೂ ಮಾಯೆಯ ಮರೆಯಿಂದ ನಾವು ಅವನನ್ನು ನೋಡುವುದಕ್ಕೆ ಆಗುವುದಿಲ್ಲ.

ಜೀವರು ಸಚ್ಚಿದಾನಂದಸ್ವರೂಪರು. ಆದರೆ ಮಾಯೆ ಅಥವಾ ಅಹಂಕಾರದಲ್ಲಿ ಅವರೆಲ್ಲರೂ ನಾನಾ ಉಪಾಧಿಗಳನ್ನು ಪಡೆದು ತಮ್ಮ ಸ್ವರೂಪವನ್ನೇ ಮರೆತುಬಿಟ್ಟಿರುತ್ತಾರೆ.

ಒಂದೊಂದು ಉಪಾಧಿಯಿಂದಲೂ ಜೀವನ ಸ್ವಭಾವವು ಬದಲಾಯಿಸಿ ಹೋಗುತ್ತದೆ. ಅವನನ್ನು ನೋಡು, ಅವನು ಕರಿಯ ಅಂಚಿನ ಬಟ್ಟೆಯನ್ನು ಉಟ್ಟುಕೊಂಡಿದ್ದಾನೆ; ಈ ಉಪಾಧಿಯಿಂದಲೇ ಅವನು ನಿಧುವಿನ ಟಪ್ಪಾರ್ ಗಾನವನ್ನು ಹಾಡುತ್ತಾನೆ, ಇಸ್ಪೀಟಾಡುತ್ತಾನೆ, ಹೊರಗೆ ಹೋಗುವಾಗ ಕಯ್ಯಲ್ಲಿ ಬೆತ್ತವನ್ನು ಹಿಡಿದುಕೊಳ್ಳುತ್ತಾನೆ. ರೋಗಿಯಾಗಿದ್ದರೂ ಕಾಲಿಗೆ ಬೂಟ್ಸನ್ನು ಹಾಕಿಕೊಂಡರೆ, ಶಿಳ್ಳೆಯನ್ನು ಹಾಕ ತೊಡಗುತ್ತಾನೆ. ಮೆಟ್ಟಿಲನ್ನು ಹತ್ತುವಾಗ, ಸಾಹೇಬ ಜನರಂತೆ ಹಾರುತ್ತಾನೆ. ಕೈಗೆ ಲೇಖಿನಿಯು ಸಿಕ್ಕಿದರೆ, ಕಾಗದವನ್ನು ಎಳೆದುಕೊಂಡು, ಅದರ ಮೇಲೆ ಕರಕರ, ಎಂದು ಗೀಚುತ್ತಾನೆ, ಇದು ಲೇಖಿನಿಯ ಗುಣ.

ರೂಪಾಯಿಯು ಒಂದು ವಿಲಕ್ಷಣವಾದ ಉಪಾಧಿ. ಅದು ದೊರೆತರೆ, ಮನುಷ್ಯನು ಮೊದಲಿನಂತೆ ಇರುವುದಿಲ್ಲ. ಬೇರೆ ರೀತಿಯಾಗುತ್ತಾನೆ. ಒಬ್ಬ ಬ್ರಾಹ್ಮಣನು ಇಲ್ಲಿಗೆ ಬರುತ್ತಾ ಹೋಗುತ್ತಾ ಇದ್ದನು. ಅವನನ್ನು ನೋಡಿ

ದರೆ ಹೊರಗಡೆಗೆ ಬಹಳ ವಿನೀತನಂತೆ ಕಾಣುತ್ತ ಇದ್ದನು. ಕೆಲವು ದಿವಸಗಳ ತರುವಾಯ, ನಾನು ಕೊನ್ನಗರಕ್ಕೆ ಹೋದೆನು. ಸಂಗಡ ಹೃದಯನೂ ಬಂದಿದ್ದನು. ನಾವು ದೋಣಿಯಿಂದ ಇಳಿದೆವು. ಆ ಬ್ರಾಹ್ಮಣನು ಗಂಗಾನದಿಯ ದಡದಲ್ಲಿ ಕುಳಿತಿದ್ದನು. ವಾಯುಸೇವನೆ ಮಾಡುತ್ತಾ ಕುಳಿತಿದ್ದಾನೆಂದು ನಾನು ತಿಳಿದುಕೊಂಡೆನು. ಅವನು ನನ್ನನ್ನು ನೋಡಿ, 'ಏನು ಠಾಕೂರರೇ, ಹೇಗಿದ್ದೀರಿ? ಕ್ಷೇಮವಾಗಿದ್ದೀರಾ?' ಎಂದು ಕೇಳಿದನು. ಅವನ ಮಾತಿನ ರೀತಿಯನ್ನು ಕಂಡು, 'ಹೇ ಹೃದಯ, ಈ ಮನುಷ್ಯನು ಹಣವನ್ನು ಸಂಪಾದಿಸಿಕೊಂಡಿದ್ದಾನೆ. ಆದುದರಿಂದಲೇ ಹೀಗೆ ಮಾತನಾಡುತ್ತಾನೆ', ಎಂದು ಹೇಳಿದೆನು. ಅದನ್ನು ಕೇಳಿ ಹೃದಯನು ನಕ್ಕನು.

ಒಂದು ಕಪ್ಪೆಗೆ ಒಂದು ರೂಪಾಯಿ ಸಿಕ್ಕಿತು. ಅದು ತನ್ನ ಬಿಲದಲ್ಲಿ ಆ ರೂಪಾಯಿಯನ್ನು ಜೋಪಾನವಾಗಿ ಇಟ್ಟುಕೊಂಡಿದ್ದಿತು. ಒಂದು ಆನೆಯು ಅದರ ಬಿಲವನ್ನು ದಾಟಿಕೊಂಡು ಹೋಯಿತು. ಆಗ ಆ ಕಪ್ಪೆಯು ಬಿಲದಿಂದ ಹೊರಗೆ ಬಂದು, ಬಹಳ ಕೋಪಗೊಂಡು, ಆನೆಯನ್ನು ಒದೆಯುವುದಕ್ಕೆ ಹೋಗಿ, 'ಎಲಾ, ನಿನಗೆ ಇಷ್ಟೊಂದು ಗರ್ವವೇ? ನನ್ನ ಬಿಲವನ್ನು ದಾಟಿಕೊಂಡು ಹೋಗುತ್ತೀಯಾ?' ಎಂದು ಗರ್ಜಿಸಿತು. ಇದೀಗ ಧನದ ಮದ.

(ಸಪ್ತಭೂಮಿ, ಅಹಂಕಾರವು ಹೋದ ಬಳಿಕ ಬ್ರಹ್ಮಜ್ಞಾನದ ಅವಸ್ಥೆ.)

ಜ್ಞಾನಲಾಭವಾದರೆ ಅಹಂಕಾರವು ಹೋಗುತ್ತದೆ, ಸಮಾಧಿಯುಂಟಾಗುತ್ತದೆ. ಸಮಾಧಿಸ್ಥನಾದರೆ ಅಹಂಕಾರವು ಹೋಗುತ್ತದೆ. ಆದರೆ ಜ್ಞಾನಲಾಭವು ಬಹಳ ಕಷ್ಟ.

'ಏಳನೆಯ ಭೂಮಿಗೆ ಮನಸ್ಸು ಹೋದರೆ, ಸಮಾಧಿಯುಂಟಾಗುತ್ತದೆ,' ಎಂದು ವೇದದಲ್ಲಿ ಹೇಳಿದೆ. ಸಮಾಧಿಯಾದರೆ ಅಹಂಕಾರವು ಹೊರಟು ಹೋಗುವುದು.

ಮನಸ್ಸು ಸಾಧಾರಣವಾಗಿ ಎಲ್ಲಿ ಇರುತ್ತದೆ? ಅದು ಪೊತ್ತ ಮೊದಲು ಲಿಂಗ, ಗುಹ್ಯ, ನಾಭಿ ಎಂಬೀ ಮೂರು ಭೂಮಿಗಳಲ್ಲಿ ಇರುತ್ತದೆ. ಆಗ, ಅದಕ್ಕೆ ಕೇವಲಸಂಸಾರದಲ್ಲಿ, ಎಂದರೆ ಕಾಮಿನೀಕಾಂಚನದಲ್ಲಿ, ಆಸಕ್ತಿ. ಹೃದಯದಲ್ಲಿ ಮನಸ್ಸನ್ನು ನಿಲ್ಲಿಸಿದರೆ, ಈಶ್ವರನ ಜ್ಯೋತಿಯು ದರ್ಶನವಾಗುವುದು. ಆ ವ್ಯಕ್ತಿಯು ಜ್ಯೋತಿಯನ್ನು ಕಂಡು, 'ಇದೇನು, ಇದೇನು,'

ಎಂದು ಆಶ್ಚರ್ಯಪಡುವನು. ಅದರ ಮೇಲೆ ಕಂಠ, ಅಲ್ಲಿಗೆ ಮನಸ್ಸು ಹೋದಾಗ, ಕೇವಲ ಈಶ್ವರನ ಮಾತನ್ನು ಕೇಳುವುದಕ್ಕೂ, ಹೇಳುವುದಕ್ಕೂ ಇಚ್ಛೆಯುಂಟಾಗುತ್ತದೆ. ಭ್ರೂಮಧ್ಯದಲ್ಲಿ ಮನವು ನಿಂತರೆ, ಆಗ ಸಚ್ಚಿದಾನಂದರೂಪದರ್ಶನವಾಗುವುದು. ಆ ರೂಪವನ್ನು ಸ್ಪರ್ಶಮಾಡುವುದಕ್ಕೂ, ಆಲಿಂಗನಮಾಡುವುದಕ್ಕೂ, ಇಚ್ಛೆಯುಂಟಾಗುತ್ತದೆ. ಆದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಲಾಂದ್ರದ ಒಳಗೆ ಬೆಳಕು ಕಾಣುತ್ತದೆ. ಅದನ್ನು ಮುಟ್ಟುವುದಕ್ಕೆ ಆಗುವುದಿಲ್ಲ. ಹಿಡಿದುಕೊಳ್ಳಬೇಕೆಂಬ ಇಚ್ಛೆಯುಂಟಾದರೂ ಹಿಡಿದುಕೊಳ್ಳುವುದಕ್ಕೆ ಆಗುವುದಿಲ್ಲ. ಏಳನೆಯ ಭೂಮಿಯಲ್ಲಿ ಮನಸ್ಸು ನಿಂತರೆ, ಅಹಂಕಾರವು ಇರುವುದೇ ಇಲ್ಲ. ಸಮಾಧಿಯುಂಟಾಗುತ್ತದೆ.

ವಿಜಯ :—'ಏಳನೆಯ ಭೂಮಿಗೆ ಹೋದ ಮೇಲೆ ಬ್ರಹ್ಮಜ್ಞಾನವುಂಟಾಗುತ್ತದೆ,' ಎಂದು ಹೇಳಿದಿರಲ್ಲ; ಆಗ ಮನುಷ್ಯನು ಏನನ್ನು ನೋಡುತ್ತಾನೆ.

ಶ್ರೀರಾಮಕೃಷ್ಣ:—'ಏಳನೆಯ ಭೂಮಿಯಲ್ಲಿ ಮನಸ್ಸು ನಿಂತರೆ ಏನಾಗುತ್ತದೆ', ಎಂಬುದನ್ನು, ಬಾಯಿಂದ ಹೇಳುವುದಕ್ಕೆ ಆಗುವುದಿಲ್ಲ. ಹಡಗು ಒಂದಾವರ್ತಿ ಸಮುದ್ರದಲ್ಲಿ ಹೋಗಿ ಹಿಂತಿರುಗಲೇ ಇಲ್ಲ. ಅದರ ವರ್ತಮಾನವೇ ಬರಲಿಲ್ಲ. ಉಪ್ಪಿನ ಗೊಂಬೆಯೊಂದು ಸಮುದ್ರವನ್ನು ಅಳೆಯುವುದಕ್ಕೆ ಹೋಗಿ ನೀರಿನಲ್ಲಿ ಮುಳುಗಲಾಗಿ, ಕೂಡಲೇ ಕರಗಿಹೋಯಿತು. 'ಸಮುದ್ರದ ಆಳವು ಎಷ್ಟು,' ಎಂದು ವರ್ತಮಾನವನ್ನು ಹೇಳುವರು ಆರು? ಆವುದು ಸುದ್ದಿಯನ್ನು ಕೊಡಬೇಕೋ, ಅದೇ ಕರಗಿಹೋಯಿತು. ಏಳನೆಯ ಭೂಮಿಯಲ್ಲಿ ಮನಸ್ಸು ಲಯವಾಗಿ ಸಮಾಧಿಯುಂಟಾಗುತ್ತದೆ. ಆಗ ಹೇಗೆ ಆಗುತ್ತದೆಯೋ ಹೇಳುವುದಕ್ಕೇ ಆಗುವುದಿಲ್ಲ.

(ಅಹಂಕಾರವಾದರೋ ಹೋಗುವುದೇ ಇಲ್ಲ. ಕೆಟ್ಟ ಅಹಂಕಾರ, ದಾಸನೆಂಬ ಅಹಂಕಾರ.)

ಆವ ಅಹಂಕಾರವು ಸಂಸಾರವನ್ನು ಮಾಡಿಸುತ್ತ, ಕಾಮಿನೀಕಾಂಚನಗಳಲ್ಲಿ ಆಸಕ್ತತೆಯನ್ನು ಉಂಟುಮಾಡುತ್ತದೆಯೋ, ಆ ಅಹಂಕಾರವು ಕೆಟ್ಟುದು. ಅಹಂಕಾರವು ಜೀವ ಮತ್ತು ಆತ್ಮರ ಮಧ್ಯದಲ್ಲಿ ಅಡ್ಡಲಾಗಿ ಇರುವುದರಿಂದ, ಜೀವನಿಗೂ ಆತ್ಮನಿಗೂ ಭೇದವು ತೋರುತ್ತದೆ. ನೀರಿನ ಮೇಲೆ ಒಂದು ಕಡ್ಡಿಯನ್ನು ಎಸೆದರೆ, ಜಲವು ಎರಡಾಗಿ ಕಾಣುತ್ತದೆ. ವಸ್ತುತಃ ನೀರೇನೋ ಒಂದೇ; ನಡುವೆ ಕಡ್ಡಿಯಿರುವುದರಿಂದ ಎರಡಾಗಿ ಕಾಣುತ್ತದೆ. ಅಹಂಕಾರವೆಂಬುದೇ ಕಡ್ಡಿ. ಅದನ್ನು ತೆಗೆದುಹಾಕಿ ಬಿಟ್ಟರೆ, ಜೀವನೂ ಆತ್ಮನೂ ನೀರಿನಂತೆ ಒಂದೇ ಆಗಿ ಕಾಣುತ್ತವೆ. ಕೆಟ್ಟ ಅಹಂಕಾರವು ಆವುದು? 'ನನ್ನನ್ನು ಅಂಥವನೆಂದು ಜನರು

ಅರಿಯರು. ನನಗೆ ಅಪಾರವಾದ ಹಣವಿದೆ. ನನಗಿಂತಲೂ ದೊಡ್ಡ ವರು ಆರು?' ಎಂಬುದೀಗ ಕೆಟ್ಟ ಅಹಂಕಾರ. ಅವನ ಮನೆಯಲ್ಲಿ ಕಳ್ಳನು ಹತ್ತು ರೂಪಾಯನ್ನು ಕದ್ದರೆ, ಅವನು ಮೊದಲು ಕಳ್ಳನಿಂದ ರೂಪಾ ಯಿಗಳನ್ನು ಕಿತ್ತುಕೊಂಡು, ಅವನನ್ನು ಚೆನ್ನಾಗಿ ಹೊಡೆಯುತ್ತಾನೆ, ಅಷ್ಟಕ್ಕೇ ಬಿಡುವುದಿಲ್ಲ. ಪಹರೆಯವನನ್ನು ಕೂಗಿ, ಅವನನ್ನು ಪೋಲೀ ಸಿಗೆ ಕೊಡಿಸಿ ಕಾರಾಗಾರದಲ್ಲಿ ಹಾಕಿಸುತ್ತಾನೆ. 'ನೋಡಿದೆಯಾ! ನನ್ನ ಹತ್ತು ರೂಪಾಯಿಗಳನ್ನು ತೆಗೆದುಕೊಂಡಿದಾನೆ. ಇವನಿಗೆ ಎಷ್ಟು ಧೈರ್ಯ,' ಎನ್ನುವುದು ಕೆಟ್ಟ ಅಹಂಕಾರವು.

ವಿಜಯ :—ಅಹಂಕಾರವು ಹೋಗದೆ ಇದ್ದರೆ, ಸಂಸಾರದಲ್ಲಿ ಆಸಕ್ತಿಯೂ ಹೋಗುವುದಿಲ್ಲ, ಸಮಾಧಿಯೂ ಉಂಟಾಗುವುದಿಲ್ಲ. ಹಾಗಾದರೆ ಯಾರಿಂದ ಸಮಾಧಿಯುಂಟಾಗುವುದೋ ಆ ಬ್ರಹ್ಮಜ್ಞಾನದ ಮಾರ್ಗವನ್ನು ಅವಲಂಬಿ ಸುವುದು ಉತ್ತಮ. ಭಕ್ತಿಯೋಗದಲ್ಲಿ ಅಹಂಕಾರವು ನಿಲ್ಲುವುದಾದರೆ ಜ್ಞಾನಯೋಗವೇ ಒಳ್ಳೆಯದಲ್ಲವೆ?

ಶ್ರೀರಾಮಕೃಷ್ಣ :—ಎಲ್ಲಿಯೋ ಒಬ್ಬಿಬ್ಬರಿಗೆ ಸಮಾಧಿಯುಂಟಾಗಿ, 'ಅಹಂ' ಹೋಗುತ್ತದೆ, ನಿಜ. ಎಲ್ಲರಿಗೂ ಪ್ರಾಯಕವಾಗಿ ಅದು ಹೋಗುವುದಿಲ್ಲ. ಸಾವಿರ ವಿಚಾರಮಾಡು, ಅಹಂಕಾರವು ಸುತ್ತಿ ಸುತ್ತಿ ಬರುತ್ತದೆ. ಈ ದಿವಸ ಅಶ್ವತ್ಥವೃಕ್ಷವನ್ನು ಕಡಿದು ಬಿಟ್ಟು, ನಾಳೆ ಬೆಳಿಗ್ಗೆ ಹೋಗಿ ನೋಡಿದರೆ, ಮೊಳಕೆಯೊಂದು ಹುಟ್ಟಿಕೊಂಡಿರುತ್ತದೆ. ಒಂದು ವೇಳೆ ಅಹಂಕಾರವು ಹೋಗದೆ ಇದ್ದರೆ, ಆ ಹಾಳು ಮುಂಡೆಯದು, 'ನಾನು ದಾಸ', ಎಂಬ ಅಹಂಕಾರವಾಗಿರಲಿ. 'ಹೇ ಈಶ್ವರ, ನೀನು ಪ್ರಭು, ನಾನು ದಾಸ', ಎಂಬೀ ಭಾವವಿರಲಿ; 'ನಾನು ದಾಸ, ನಾನು ಭಕ್ತ,' ಎಂಬ ಈ ರೀತಿಯಾದ ಅಹಂಕಾರವಿದ್ದರೆ ದೋಷವಿಲ್ಲ. ಸಿಹಿಯಾದ ಪದಾರ್ಥ ವನ್ನು ತಿಂದರೆ ಅಜೀರ್ಣವಾಗುತ್ತದೆ; ಕಲ್ಲು ಸಕ್ಕರೆಯು ಸಿಹಿಯಾಗಿದ್ದರೂ ಅಜೀರ್ಣಮಾಡುವುದಿಲ್ಲ. ಜ್ಞಾನಯೋಗವು ಬಹಳ ಕಷ್ಟ. ದೇಹಾತ್ಮ ಬುದ್ಧಿಯು ಹೋಗದೆ ಇದ್ದರೆ, ಜ್ಞಾನವು ಉಂಟಾಗುವುದಿಲ್ಲ. ಕಲಿಯುಗ ದಲ್ಲಿ ಅನ್ನಗತಪ್ರಾಣ; ಅದುದರಿಂದಲೇ ದೇಹಾತ್ಮಬುದ್ಧಿಯೂ, ಅಹಂಕಾ ರವೂ ಹೋಗುವುದಿಲ್ಲ. ಆದಕಾರಣ, ಈ ಯುಗದಲ್ಲಿ ಭಕ್ತಿಯೋಗವೇ ಒಳ್ಳೆಯದು. ಭಕ್ತಿಮಾರ್ಗವೇ ಸುಲಭಮಾರ್ಗ. ಮನಃಪೂರ್ವಕವಾಗಿ ವ್ಯಾಕುಲತೆಯಿಂದ ಭಗವಂತನ ನಾಮಗುಣಗಾನವನ್ನು ಮಾಡು; ಪ್ರಾರ್ಥನೆಯನ್ನು ಮಾಡು, ಅನಂತರ ಭಗವಂತನ ಲಾಭವಾಗುತ್ತದೆ, ಅದಕ್ಕೇನೂ ಸಂದೇಹವಿಲ್ಲ.

ನೀರಿನ ಮೇಲೆ ಒಂದು ಕಡ್ಡಿಯನ್ನು ಹಾಕಿದರೆ, ಜಲವು ಎರಡು ಭಾಗವಾದಂತೆ ರೇಖೆಯು ಕಾಣುತ್ತದೆ. ಅದು ತುಂಬ ಹೊತ್ತು ನಿಲ್ಲುವುದಿಲ್ಲ. ದಾಸನೆಂಬ ಅಹಂಕಾರವೂ, ಭಕ್ತನ ಅಹಂಕಾರವೂ, ಬಾಲಕನ ಅಹಂಕಾರವೂ, ಬರಿಯ ಅಹಂಕಾರದ ಲಾಂಛನ.

ಸಪ್ತಮ ಪರಿಚ್ಛೇದ

ಕ್ಲೇಶೋಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಂ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥ ಗೀತಾ ೧೨-೫

[ದೇಹಾಭಿಮಾನವುಳ್ಳವರು ಅವ್ಯಕ್ತನಾದ ಪರಬ್ರಹ್ಮನನ್ನು ಭಜಿಸುವುದು ಬಹು ಕಷ್ಟ ; ಅಂಥ ಪರಬ್ರಹ್ಮನಲ್ಲಿ ಮನಸ್ಸಿಡುವುದಕ್ಕಿಂತಲೂ, ನನ್ನನ್ನು ಪೂಜಿಸುವುದು ಒಳ್ಳೆಯದು.]

(ಭಕ್ತಿಯೋಗವೇ ಯುಗಧರ್ಮ, ಜ್ಞಾನಯೋಗ ಬಹಳ ಕಷ್ಟ, ದಾಸನೆಂಬ ಅಹಂಕಾರ, ಭಕ್ತನೆಂಬ ಅಹಂಕಾರ, ಬಾಲಕರ ಅಹಂಕಾರ.)

ವಿಜಯ :—(ಶ್ರೀರಾಮಕೃಷ್ಣರನ್ನು ಕುರಿತು) ಮಹಾಶಯರೇ, ತಾವು ಕೆಟ್ಟ ಅಹಂಕಾರವನ್ನು ತ್ಯಾಗಮಾಡಬೇಕೆಂದು ಹೇಳಿದಿರಿ. ಆದರೆ ದಾಸತ್ವದ ಅಹಂಕಾರದಿಂದ ದೋಷವಿಲ್ಲವೋ ?

ಶ್ರೀರಾಮಕೃಷ್ಣ :—ಇಲ್ಲ, ನಾನು ಈಶ್ವರನ ದಾಸನೆಂಬ ಅಭಿಮಾನದಿಂದಲೂ, ಭಕ್ತನೆಂಬ ಅಭಿಮಾನದಿಂದಲೂ, ದೋಷವಿಲ್ಲ ; ಗುಣವೇ. ಅದರಿಂದ ಈಶ್ವರಲಾಭವೂ ಆಗುತ್ತದೆ.

ವಿಜಯ :—ಸ್ವಾಮೀ, ದಾಸನೆಂಬ ಅಹಂಕಾರವಿರುವನಿಗೆ ಕಾಮಕ್ರೋಧಾದಿಗಳು ಇರುತ್ತವೆಯೋ ?

ಶ್ರೀರಾಮಕೃಷ್ಣ :—ಸರಿಯಾದ ಭಾವವುಂಟಾದರೆ, ಕಾಮಕ್ರೋಧಾದಿಗಳ ಆಕಾರ ಮಾತ್ರ ನಿಲ್ಲುತ್ತದೆ. ಈಶ್ವರಲಾಭವಾದವನಿಗೆ ದಾಸನೆಂಬ ಅಹಂಕಾರವಾಗಲಿ, ಭಕ್ತನೆಂಬ ಅಹಂಕಾರವಾಗಲಿ ಇದ್ದರೆ, ಅವನು ಆರಿಗೂ ಏನ ಕೆಡಕನ್ನೂ ಮಾಡಲಾರನು. ಸ್ಪರ್ಶಮಣಿಯನ್ನು ಖಡ್ಗಕ್ಕೆ ತಾಕಿಸಿದರೆ ಖಡ್ಗವು ಚಿನ್ನವಾಗಿ ಅದರ ಆಕಾರವು ಮೊದಲಿನಂತೆಯೇ ಇದೆ, ಆದರೆ ಅದರಿಂದ ಆವುದನ್ನೂ ಕಡಿಯುವುದಕ್ಕೆ ಆಗುವುದಿಲ್ಲ.

ತೆಂಗಿನ ಮರದಲ್ಲಿ ಮಟ್ಟೆಯು ಒಣಗಿ ಬಿದ್ದು ಹೋಗುತ್ತದೆ. ಆಗ ಮರದಲ್ಲಿ ಮಟ್ಟೆಯಿದ್ದ ಗೆರೆ ಮಾತ್ರ ನಿಂತಿರುತ್ತದೆ. ಕಾಲಾಂತರದಲ್ಲಿ ಆ ಗುರುತನ್ನು ನೋಡಿದವರಿಗೆ, ಇಲ್ಲಿ ಮಟ್ಟೆಯಿದ್ದಿತೆಂದು ಗೊತ್ತಾಗುತ್ತದೆ. ಅದರಂತೆಯೇ, ಈಶ್ವರಲಾಭವಾದವನಿಗೆ ಅಹಂಕಾರದ ಕುರುಹು ಮಾತ್ರ ನಿಂತಿರುತ್ತದೆ. ಕಾಮಕ್ರೋಧಗಳ ಆಕಾರ ಮಾತ್ರ ನಿಂತಿರುತ್ತದೆ. ಅವನ ಅವಸ್ಥೆಯು ಬಾಲಕರ ಅವಸ್ಥೆಯಂತೆ. ಮಕ್ಕಳಿಗೆ ಸತ್ವರಜಸ್ತಮೋಗುಣಗಳ ಅಂಟು ಇಲ್ಲ. ಮಕ್ಕಳಿಗೆ ಪದಾರ್ಥಗಳ ಮೇಲೆ ಒಂದು ಕ್ಷಣದಲ್ಲಿ ಆಶೆಯುಂಟಾಗುತ್ತದೆ, ಉತ್ತರಕ್ಷಣದಲ್ಲಿ ಹೋಗಿ ಬಿಡುತ್ತದೆ. ಬಾಲಕನಿಗೆ ಅರೆಕಾಸಿನ ಗೊಂಬೆಯನ್ನು ತೋರಿಸಿ, ಐದು ರೂಪಾಯಿನ ಪಂಚೆಯನ್ನು ಕೊಡೆಂದು ಕೇಳಿದರೆ, ಮೊದಲು, 'ನಾನು ಕೊಡುವುದಿಲ್ಲ, ನನ್ನ ತಂದೆಯು ತಂದುಕೊಟ್ಟಿದ್ದಾನೆ,' ಎಂದು ಅವನು ಹೇಳುತ್ತಾನೆ. ಉತ್ತರಕ್ಷಣದಲ್ಲಿಯೇ ಅವನಿಗೆ ಆ ಗೊಂಬೆಯನ್ನೇ ಕೊಟ್ಟು, ಅದೇ ಐದು ರೂಪಾಯಿನ ಪಂಚೆಯನ್ನು ಅವನಿಂದ ಕಿತ್ತುಕೊಳ್ಳಬಹುದು. ಹುಡುಗನಿಗೆ, 'ಇವನು ದೊಡ್ಡವನು, ಇವನು ಚಿಕ್ಕವನು,' ಎಂದು ತಿಳಿಯದು. ಅವನಿಗೆ ಎಲ್ಲರೂ ಒಂದೇ. ಜಾತಿವಿಚಾರವಿಲ್ಲ. ಅವನಿಗೆ ತಾಯಿಯು ಆರನ್ನಾದರೂ ತೋರಿಸಿ, 'ಇವನು ನಿನ್ನ ಅಣ್ಣ,' ಎಂದು ಹೇಳಿದರೆ, ಅವನು ಕೀಳುಜಾತಿಯಾಗಿದ್ದರೂ, ಅವನ ಎಲೆಯಲ್ಲಿಯೇ ಊಟಮಾಡಿಬಿಡುತ್ತಾನೆ. ಹುಡುಗರಿಗೆ ಜುಗುಪ್ಸೆಯೆಂಬುದು ಇಲ್ಲ, ಶುಚಿ ಅಶುಚಿಗಳೂ ತಿಳಿಯವು.

ಸಮಾಧಿಯಾದ ಮೇಲೆ ಕೆಲವರು, ಭಕ್ತನೆಂಬ ಅಹಂಕಾರವನ್ನೂ, ದಾಸನೆಂಬ ಅಹಂಕಾರವನ್ನೂ ಇಟ್ಟುಕೊಂಡಿರುತ್ತಾರೆ. 'ನಾನು ದಾಸ, ನೀನು ಪ್ರಭು, ನಾನು ಭಕ್ತ, ನೀನು ಭಗವಂತ,' ಎಂಬೀ ಅಭಿಮಾನವು ಅವರಲ್ಲಿರುತ್ತದೆ. ಈಶ್ವರಲಾಭವಾದ ಮೇಲೆಯೂ, ಈ ಅಹಂಕಾರವು ಸ್ವಲ್ಪ ಇದ್ದೇ ಇರುತ್ತದೆ. ಎಲ್ಲವೂ ಹೋಗುವುದಿಲ್ಲ. ಈ ತೆರದ ಅಭಿಮಾನವನ್ನು ಅಭ್ಯಾಸ ಮಾಡುತ್ತ ಮಾಡುತ್ತ, ಈಶ್ವರಲಾಭವಾಗುತ್ತದೆ. ಇದರ ಹೆಸರೇ ಭಕ್ತಿಯೋಗ.

ಭಕ್ತಿ ಮಾರ್ಗವನ್ನು ಅವಲಂಬಿಸಿದರೆ, ಬ್ರಹ್ಮಜ್ಞಾನವುಂಟಾಗುತ್ತದೆ. 'ಭಗವಂತನು ಸರ್ವಶಕ್ತನು,' ಎಂದು ಎಣಿಸಿಕೊಂಡು, ಅವನಿಗೆ ಪ್ರಾರ್ಥಿಸಿದರೆ ಅವನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ. ಭಕ್ತರು ಪ್ರಾಯಿಕವಾಗಿ ಬ್ರಹ್ಮಜ್ಞಾನವನ್ನು ಅಪೇಕ್ಷಿಸುವುದಿಲ್ಲ. 'ನಾನು ದಾಸ, ನೀನು ಪ್ರಭು,

ನಾನು ಮಗು, ನೀನು ತಾಯಿ,' ಎಂಬೀ ಅಭಿಮಾನವಿರಬೇಕೆಂದು ಅಪೇಕ್ಷಿಸುತ್ತಾರೆ.

ವಿಜಯ :—ವೇದಾಂತವಿಚಾರಮಾಡುವವರು, ಭಗವಂತನನ್ನು ಹೊಂದಬಹುದೇ?

ಶ್ರೀರಾಮಕೃಷ್ಣ :—ಹೂಂ, ವಿಚಾರಮಾರ್ಗದಿಂದಲೂ ಅವನನ್ನು ಹೊಂದಬಹುದು. ಜ್ಞಾನಯೋಗವೂ ಭಕ್ತಿಯೋಗವೂ ಒಂದೇ ಆದರೆ ವಿಚಾರಮಾರ್ಗವು ಬಹಳ ಕಷ್ಟ. ಸಪ್ತಮಭೂಮಿಗೆ ಮನಸ್ಸುಹೋದರೆ ಸಮಾಧಿಯುಂಟಾಗುತ್ತದೆ. 'ಬ್ರಹ್ಮನು ಸತ್ಯ; ಜಗತ್ತು ಮಿಥ್ಯೆ,' ಎಂಬೀ ಜ್ಞಾನವು ಸರಿಯಾಗಿ ಉಂಟಾದರೆ, ಮನಸ್ಸು ಲಯವಾಗಿ ಸಮಾಧಿಯುಂಟಾಗುತ್ತದೆ. ಆದರೆ, ಕಲಿಯುಗದಲ್ಲಿ ಜೀವನು ಅನ್ನಗತಪ್ರಾಣನಾದುದರಿಂದ, ಬ್ರಹ್ಮನು ಸತ್ಯ, ಜಗತ್ತು ಮಿಥ್ಯೆ,' ಎಂಬೀ ಜ್ಞಾನವು ಹೇಗೆ ತಾನೇ ಉಂಟಾದೀತು? ದೇಹಬುದ್ಧಿಯು ಹೋಗದಿದ್ದರೆ, ಆ ಜ್ಞಾನವು ಉಂಟಾಗುವುದಿಲ್ಲ. 'ನಾನು ದೇಹವಲ್ಲ, ನಾನು ಮನಸ್ಸಲ್ಲ; ಚತುರ್ವಿಂಶತಿ ತತ್ವವಲ್ಲ; ನಾನು ಸುಖದುಃಖಗಳಿಂದ ಅತೀತನು; ನನಗೆ ರೋಗ, ಶೋಕ, ಜರಾ, ಮೃತ್ಯುಗಳು ಎಲ್ಲಿಯವು?' ಎಂಬ ಈ ಜ್ಞಾನವು ಕಲಿಯುಗದಲ್ಲಿ ಉಂಟಾಗುವುದು ಕಷ್ಟ. ನೀನು ಎಷ್ಟೇ ವಿಚಾರಮಾಡಿದರೂ, ದೇಹಾತ್ಮಬುದ್ಧಿಯು ಹೇಗಾದರೂ ಬಂದು ತೋರಿಸಿಕೊಳ್ಳುತ್ತದೆ. ಅಶ್ವತ್ಥವೃಕ್ಷವನ್ನು ಕಡಿದು, ಬುಡಸಹಿತವಾಗಿ ಕಿತ್ತುಹಾಕಿದ್ದೇನೆಂದು ತಿಳಿದುಕೊಂಡಿದ್ದರೂ, ಮಾರನೆಯ ದಿವಸ ಬೆಳಿಗ್ಗೆ ನೋಡಿದರೆ, ಒಂದು ಮೊಳಕೆಯು ಕಂಡೇ ಕಾಣುತ್ತದೆ. ದೇಹಾಭಿಮಾನವು ಹೋಗುವುದಿಲ್ಲ. ಆದುದರಿಂದ ಕಲಿಯುಗದಲ್ಲಿ ಭಕ್ತಿಯೋಗವು ಬಲು ಒಳ್ಳೆಯದು, ಮತ್ತೂ ಸುಲಭವಾದುದು. ನಾನೇ ಸಕ್ಕರೆಯಾಗಬೇಕೆಂದು ಆರೂ ಅಪೇಕ್ಷಿಸುವುದಿಲ್ಲ. ಪರಂತು ಸಕ್ಕರೆಯನ್ನು ತಿನ್ನಬೇಕೆಂದು ಎಲ್ಲರೂ ಅಪೇಕ್ಷಿಸುತ್ತಾರೆ. ನಾನೇ ಬ್ರಹ್ಮನೆಂದು ಹೇಳುವುದಕ್ಕೆ ನನಗೆ ಇಚ್ಛೆಯಾಗುವುದಿಲ್ಲ. 'ನೀನು ಭಗವಂತ, ನಾನು ನಿನ್ನ ದಾಸ', ಎಂದು ಹೇಳುತ್ತೇನೆ. ಪಂಚಮಭೂಮಿ ಷಷ್ಠಭೂಮಿಗಳ ಮಧ್ಯದಲ್ಲಿ ದೋಣಿಯು ಜೂಜು ಒಳ್ಳೆಯದು. ಆರನೆಯ ಭೂಮಿಗಿಂತ, ಏಳನೆಯ ಭೂಮಿಯಲ್ಲಿ ಬಹಳ ಕಾಲ ಇರುವುದಕ್ಕೆ ಇಷ್ಟವಿಲ್ಲ. ಭಗವಂತನ ನಾಮಗುಣಗಾನವನ್ನು ಮಾಡಬೇಕೆಂದು ನನಗೆ ಇಷ್ಟ. ಸೇವ್ಯಸೇವಕಭಾವವು ಬಲು ಒಳ್ಳೆಯದು. ನೋಡು, ಅಲೆಯು ಗಂಗೆಯದು ಎಂದು ಹೇಳುತ್ತಾರೆಯೇ ಹೊರತು, ಗಂಗೆಯು ಅಲೆಯದು, ಎಂದು ಆರೂ ಹೇಳುವುದಿಲ್ಲ. 'ನಾನೇ ಅವನು,' ಎಂಬೀ ಅಭಿಮಾನವು ಒಳ್ಳೆಯ

ದಲ್ಲಿ. ದೇಹಾತ್ಮಬುದ್ಧಿಯನ್ನು ಇಟ್ಟುಕೊಂಡಿರುವ ವರೆಗೆ, ಈ ಅಹಂಕಾರದಿಂದ ವಿಶೇಷವಾಗಿ ಹಾನಿಯುಂಟಾಗುವುದು. ಸಾಧನದಲ್ಲಿ ಮುಂದೆ ಹೋಗುವುದಕ್ಕೆ ಆಗುವುದಿಲ್ಲ ಸ್ವಲ್ಪಸ್ವಲ್ಪವಾಗಿ ಅಧಃಪತನವೂ ಆಗುತ್ತದೆ ಅವನು ತನ್ನ ಅವಸ್ಥೆಯನ್ನೇ ಅರಿಯದೆ, ಇತರರನ್ನು ವಂಚಿಸುತ್ತಾನೆ, ತಾನೂ ಮೋಸಹೋಗುತ್ತಾನೆ.

(ಎರಡು ವಿಧವಾದ ಭಕ್ತಿ, ಉತ್ತಮಾಧಿಕಾರಿ, ಈಶ್ವರದರ್ಶನದ ಉಪಾಯ)

ಹೆಸರಿಗೆ ಮಾತ್ರ ಭಕ್ತಿಯನ್ನು ಮಾಡಿದರೆ, ಈಶ್ವರನನ್ನು ಪಡೆಯುವುದಕ್ಕೆ ಆಗುವುದಿಲ್ಲ. ಪ್ರೇಮಭಕ್ತಿಗೆ ರಾಗಾಭಕ್ತಿಯೆಂದೂ ಹೆಸರು, ಪ್ರೇಮಾನುರಾಗವು ಉಂಟಾಗದಿದ್ದರೆ, ಭಗವಂತನ ಲಾಭವಾಗುವುದಿಲ್ಲ. ಈಶ್ವರನ ಮೇಲೆ ಪ್ರೀತಿ ಬಾರದಿದ್ದರೆ, ಅವನನ್ನು ಪಡೆಯುವುದಕ್ಕೆ ಆಗುವುದಿಲ್ಲ. ಇನ್ನೊಂದು ರೀತಿಯಾದ ಭಕ್ತಿಯೂ ಉಂಟು. ಅದಕ್ಕೆ ವೈಧೀಭಕ್ತಿಯೆಂದು ಹೆಸರು. ಇಷ್ಟೊಂದು ಉಪವಾಸ, ತೀರ್ಥಯಾತ್ರೆ ಮಾಡಬೇಕು; ಇಷ್ಟೊಂದು ಉಪಚಾರಗಳಿಂದ ಪೂಜೆಮಾಡಬೇಕು, ಇಷ್ಟೊಂದು ಬಲಿದಾನ ಮಾಡಬೇಕು, ಎಂಬಿವೆಲ್ಲವೂ ವೈಧೀಭಕ್ತಿ. ಇವುಗಳೆಲ್ಲವನ್ನೂ ಬಹಳವಾಗಿ ಮಾಡುತ್ತಾ ಬಂದರೆ, ಕ್ರಮವಾಗಿ ರಾಗಾಭಕ್ತಿಯು ಉಂಟಾಗುತ್ತದೆ. ರಾಗಾ ಭಕ್ತಿಯು ಉಂಟಾಗುವ ವರೆಗೂ, ಈಶ್ವರಲಾಭವಾಗುವುದಿಲ್ಲ. ಭಗವಂತನ ಮೇಲೆ ಪ್ರೀತಿಯು ಆವಶ್ಯಕ. ಸಂಸಾರಬುದ್ಧಿಯು ಬಂದೇ ಸಲಕ್ಕೆ ಹೊರಟುಹೋಗುತ್ತದೆ. ಭಗವಂತನಲ್ಲಿ ಪೂರ್ಣವಾಗಿ ಮನಸ್ಸನ್ನು ಇಟ್ಟರೆ, ಅವನನ್ನು ಹೊಂದಬಹುದು. ಆದರೆ ಕೆಲವರಲ್ಲಿ ರಾಗಾಭಕ್ತಿಯು ಬಾಲ್ಯದಿಂದಲೂ ಸ್ವತಸ್ಸಿದ್ಧವಾಗಿ ಇರುತ್ತದೆ. ಅವರು ಪ್ರಹ್ಲಾದನಂತೆ ಬಾಲ್ಯದಿಂದಲೂ ಈಶ್ವರನಿಗಾಗಿ ಮೊರೆಯಿಡುತ್ತಾರೆ. ವೈಧೀಭಕ್ತಿಯು ಗಾಳಿಗಾಗಿ ಬೀಸಣಿಗೆಯನ್ನು ಬೀಸಿಕೊಳ್ಳುವಂತೆ. ಗಾಳಿಗಾಗಿ ಬೀಸಣಿಗೆಯು ಬೇಕು. ಈಶ್ವರನ ಮೇಲೆ ಪ್ರೀತಿಬರುವುದಕ್ಕಾಗಿ, ಜಪ, ತಪ, ಉಪವಾಸ ಮುಂತಾದುವುಗಳನ್ನು ಮಾಡಬೇಕು. ದಕ್ಷಿಣದಿಂದ ಗಾಳಿಯು ತಾನಾಗಿಯೇ ಬೀಸಿದರೆ, ಆಗ ಬೀಸಣಿಗೆಯನ್ನು ಬಿಸಾಡಿಬಿಡುತ್ತಾರೆ. ಹಾಗೆಯೇ ಈಶ್ವರನ ಮೇಲೆ ಅನುರಾಗ ಪ್ರೇಮಗಳು ತಾವಾಗಿಯೇ ಉಂಟಾದರೆ, ಜಪತಪಾದಿಕರ್ಮಗಳೆಲ್ಲವೂ ಬಿಟ್ಟುಹೋಗುತ್ತವೆ. ಹರಿಪ್ರೇಮದಲ್ಲಿ ಮತ್ತರಾದ ಆರು ತಾನೇ ವಿಧಿಕರ್ಮಗಳನ್ನು ಮಾಡುತ್ತಾರೆ? ಭಗವಂತನ ಮೇಲೆ ಹೆಚ್ಚಾದ ಪ್ರೀತಿಯು ಬರುವ ವರೆಗೂ ಅದು ಅಪಕ್ವಭಕ್ತಿಯೆನ್ನಿಸಿಕೊಳ್ಳುತ್ತದೆ. ಅವನ ಮೇಲೆ ಪ್ರೀತಿಯು ಹೆಚ್ಚಾಗಿ ಬಂದರೆ ಅದೇ ಪಕ್ವಭಕ್ತಿ. ಆರಿಗೆ ಅಪಕ್ವಭಕ್ತಿಯಿದೆಯೋ ಅವರಿಗೆ ಈಶ್ವರನ

ಮಾತು, ಉಪದೇಶ ಇವುಗಳನ್ನು ಧರಿಸುವುದಕ್ಕೆ ಆಗುವುದಿಲ್ಲ. ಪಕ್ವ ಭಕ್ತಿಯುಂಟಾದರೆ ಅವುಗಳನ್ನು ಧರಿಸಬಹುದು. ಹೇಗೆಂದರೆ, ಫೋಟೋವಿನ ಗಾಜಿನ ಮೇಲೆ, ಬೆಳ್ಳಿಯ ಧೂಳಿಯನ್ನು ಉಜ್ಜಿದರೆ, ಅದರ ಮೇಲೆ ಬಿದ್ದ ರೂಪವು ಹಾಗೆಯೇ ನಿಲ್ಲುತ್ತದೆ. ಆದರೆ ಶುದ್ಧವಾದ ಗಾಜಿನ ಮೇಲೆ ಸಾವಿರ ರೂಪಬಿದ್ದರೂ, ಒಂದೂ ನಿಲ್ಲುವುದಿಲ್ಲ; ತತ್ಕ್ಷಣದಲ್ಲಿಯೇ ಹೋಗಿ ಬಿಡುತ್ತದೆ. ಗಾಜು ಇದ್ದ ಹಾಗೆಯೇ ಇರುತ್ತದೆ. ಈಶ್ವರನ ಮೇಲೆ ಹೆಚ್ಚಾಗಿ ಪ್ರೀತಿಯಿಲ್ಲದಿದ್ದರೆ, ಉಪದೇಶವನ್ನು ಧರಿಸುವುದಕ್ಕೆ ಆಗುವುದಿಲ್ಲ.

ವಿಜಯ:—ಮಹಾಶಯರೇ, ಈಶ್ವರನನ್ನು ಪಡೆಯುವುದಕ್ಕೂ, ಅವನನ್ನು ದರ್ಶನಮಾಡುವುದಕ್ಕೂ, ಭಕ್ತಿಯೊಂದೇ ಸಾಕೇ?

ಶ್ರೀರಾಮಕೃಷ್ಣ:—ಸಾಕು. ಭಕ್ತಿಯ ಮೂಲಕವಾಗಿಯೇ ಅವನ ದರ್ಶನವಾಗುತ್ತದೆ. ಆದರೆ ಪ್ರೇಮಾಭಕ್ತಿ, ರಾಗಾಭಕ್ತಿ, ಪಕ್ವಭಕ್ತಿ ಇವು ಇರಬೇಕು. ಅವು ಉಂಟಾದರೇನೇ ಮಗುವಿಗೆ ತಾಯಿಯ ಮೇಲಣ ಪ್ರೀತಿಯಂತೆಯೂ, ತಾಯಿಗೆ ಮಗುವಿನ ಮೇಲಣ ಪ್ರೀತಿಯಂತೆಯೂ, ಸ್ತ್ರೀಗೆ ಪತಿಯ ಮೇಲಣ ಪ್ರೀತಿಯಂತೆಯೂ ಅವನಿಗೆ ಭಗವಂತನ ಮೇಲೆ ಪ್ರೀತಿಯುಂಟಾಗುತ್ತದೆ.

ಪ್ರೀತಿಯು, ಎಂದರೆ ಈ ರಾಗಾಭಕ್ತಿಯು ಬಂದರೆ, ಹೆಂಡಿರು, ಮಕ್ಕಳು ಮತ್ತು ಬಂಧುಗಳ ಮೇಲಿನ ಮಾಯೆಯ ಆಕರ್ಷಣೆಯು ನಿಲ್ಲುವುದಿಲ್ಲ. ದಯೆಯು ಮಾತ್ರ ನಿಲ್ಲುತ್ತದೆ. ಸಂಸಾರವು ವಿದೇಶದಂತೆ ತೋರುತ್ತದೆ. ಈ ಜಗತ್ತು ಬರಿಯ ಕರ್ಮಭೂಮಿಯಾಗಿ ಕಾಣುತ್ತದೆ. ಹೇಗೆಂದರೆ, ಗ್ರಾಮದಲ್ಲಿ ಸ್ವಂತಮನೆಯು ಬೇರೆಯಿದೆ; ಕಲಿಕತೆಯು ಕರ್ಮಭೂಮಿ; ಕೆಲಸಮಾಡುವುದಕ್ಕಾಗಿ ಕಲಿಕತೆಯಲ್ಲಿ ಬಾಡಿಗೆಗೆ ಮನೆಮಾಡಿಕೊಂಡು ಆಗಿಂದಾಗ ಇರುತ್ತಾರೆ. ಈಶ್ವರನಲ್ಲಿ ಪ್ರೀತಿಯುಂಟಾದರೆ, ಸಂಸಾರಾಸಕ್ತಿಯೂ, ವಿಷಯಬುದ್ಧಿಯೂ, ಒಂದೇ ಸಲಕ್ಕೆ ಹೊರಟುಹೋಗುತ್ತದೆ.

ವಿಷಯಬುದ್ಧಿಯು ಲೇಶಮಾತ್ರವಿದ್ದರೂ ಭಗವಂತನ ದರ್ಶನವಾಗುವುದಿಲ್ಲ. ಬೆಂಕಿಯ ಕಡ್ಡಿಯು ಒದ್ದೆಯಾಗಿದ್ದರೆ, ಸಾವಿರ ಸಲ ಗೀಚಿದರೂ ಹತ್ತುವುದಿಲ್ಲ, ಒಂದು ರಾಶಿಯ ಕಡ್ಡಿಯು ಹಾಳಾಗುತ್ತದೆ. ವಿಷಯಾಸಕ್ತವಾದ ಮನಸ್ಸು, ಒದ್ದೆಯಾದ ಬೆಂಕಿಯ ಕಡ್ಡಿಯಂತೆ.

ಶ್ರೀಮತೀರಾಧೆಯು ಎಲ್ಲವನ್ನೂ ಕೃಷ್ಣಮಯವಾಗಿ ನೋಡುತ್ತೇನೆಂದು ಹೇಳಿದಳು. ಅದಕ್ಕೆ ಗೆಳತಿಯರು, 'ನಮಗೆ ಏತಕ್ಕೆ ಅವನು ಕಾಣುವುದಿಲ್ಲ?

ನೀವು ಅವುದೋ ಹುಚ್ಚು ಮಾತಾಡುತ್ತೀಯೆ', ಎಂದು ಹೇಳಿದರು. ಶ್ರೀಮತಿಯು, 'ಸಖಿಯರೇ, ಅನುರಾಗವೆಂಬ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡರೆ, ಆಗ ಅವನನ್ನು ನೀವೂ ನೋಡಬಲ್ಲಿರಿ', ಎಂದು ಹೇಳಿದಳು. (ವಿಜಯನನ್ನು ಕುರಿತು) ನಿಮ್ಮ ಬ್ರಹ್ಮಸಮಾಜದ ಗಾನದಲ್ಲಿಯೇ.

ಗಾನ

ವಿಶ್ವಾಸವಿಲ್ಲದಾ ಬಹುಯಜ್ಞಯಾಗದಿಂ।
ದೀಶ್ವರಂ ನಿಮ್ಮೆಡೆಗೆ ಬರುವನಲ್ಲ॥

ಎಂದು ಹೇಳಿದೆ

ಈ ಅನುರಾಗ, ಈ ಪ್ರೇಮ, ಈ ಪಕ್ವವಾದ ಭಕ್ತಿ, ಈ ಪ್ರೀತಿ, ಇವೆಲ್ಲವೂ ಒಂದೇ ತರವೆಗೆ ಉಂಟಾದರೆ, ಸಾಕಾರನಿರಾಕಾರಗಳೆರಡನ್ನೂ ಸಾಕ್ಷಾತ್ಕರಿಸಬಹುದು.

ಈಶ್ವರದರ್ಶನವು ಭಗವಂತನ ಕೃಪೆಯಿಲ್ಲದಿದ್ದರೆ ಆಗುವುದಿಲ್ಲ.

ವಿಜಯ :—ಏನ ಮಾಡಿದರೆ ಈಶ್ವರದರ್ಶನವು ಆಗುತ್ತದೆ?

ಶ್ರೀರಾಮಕೃಷ್ಣ :—ಚಿತ್ತಶುದ್ಧಿಯಿಲ್ಲದಿದ್ದರೆ ಆಗುವುದಿಲ್ಲ. ಕಾಮಿನೀಕಾಂಚನದಿಂದ ಮನಸ್ಸು ಮಲಿನವಾಗಿದೆ, ಮನಸ್ಸಿನಲ್ಲಿ ಕೊಳೆ ಕುಳಿತಿದೆ. ಸೂಜಿಗಲ್ಲು ಮಣ್ಣಿನಿಂದ ಮುಚ್ಚಿರುವ ಸೂಜಿಯನ್ನು ಎಳೆಯಲಾರದು. ಸೂಜಿಯನ್ನು ನೀರಿನಿಂದ ತೊಳೆದರೆ, ಸೂಜಿಗಲ್ಲು ಅದನ್ನು ಎಳೆಯುತ್ತದೆ. ಮನಸ್ಸಿನ ಕೊಳೆಯನ್ನು ಹಾಗೆಯೇ ಕಣ್ಣೀರಿನಿಂದ ತೊಳೆಯಬೇಕು. 'ಹೇ ಈಶ್ವರ, ಇನ್ನು ಇಂಥ ಕೆಲಸಮಾಡುವುದಿಲ್ಲ', ಎಂದು ಅನುತಾಪದಿಂದ ಅತ್ತರೆ, ಆ ಕೊಳೆಯೆಲ್ಲಾ ಹೋಗುತ್ತದೆ. ಆಗ ಈಶ್ವರರೂಪವಾದ ಸೂಜಿಗಲ್ಲು, ಸ್ವಚ್ಛವಾದ ಮನೋರೂಪವಾದ ಸೂಜಿಯನ್ನು ಎಳೆಯುತ್ತದೆ, ಆಗ ಸಮಾಧಿಯುಂಟಾಗುತ್ತದೆ, ಈಶ್ವರ ದರ್ಶನವೂ ಆಗುತ್ತದೆ.

ಆದರೆ ಸಾವಿರ ಪ್ರಯತ್ನಮಾಡಿದರೂ, ಅವನ ಕೃಪೆಯಿಲ್ಲದಿದ್ದರೆ ಏನೂ ಆಗುವುದಿಲ್ಲ. ಅವನ ಕೃಪೆಯಿಲ್ಲದಿದ್ದರೆ ಅವನ ದರ್ಶನವಾಗುವುದಿಲ್ಲ. ಕೃಪೆಯೇನು ಸುಲಭವಾಗಿ ಸಿಕ್ಕುತ್ತದೆಯೇ? ಅಹಂಕಾರವನ್ನು ಒಂದೇ ಸಲಕ್ಕೆ ತ್ಯಾಗಮಾಡಬೇಕು. 'ನಾನು ಕರ್ತ,' ಎಂಬ ಜ್ಞಾನವಿದ್ದರೆ, ಈಶ್ವರ ದರ್ಶನವಾಗುವುದಿಲ್ಲ. ಭಂಡಾರದಲ್ಲಿ ಒಬ್ಬ ಮನುಷ್ಯನಿದ್ದಾನೆ. ಆಗ

ಯಜಮಾನನನ್ನು ಕುರಿತು, 'ಮಹಾಶಯರೇ, ನೀವು ಒಂದು ವಸ್ತುವನ್ನು ಹೊರಗೆ ತೆಗೆದುಕೊಡಿರಿ,' ಎಂದು ಹೇಳಿದರೆ, ಆಗ ಯಜಮಾನನು, 'ಭಂಡಾರದಲ್ಲಿ ಬೇರೊಬ್ಬನಿದ್ದಾನೆ, ನಾನು ಹೋಗಿ ಏನ ಮಾಡಲಿ,' ಎಂದು ಹೇಳುತ್ತಾನೆ. ನಾನೇ ಕರ್ತನೆಂದು ಅವನು ದೇಹದಲ್ಲಿ ಹುಳಿತಿದ್ದಾನೆಯೋ ಅವನ ಹೃದಯಕ್ಕೆ ಈಶ್ವರನು ಸುಲಭವಾಗಿ ಬರುವುದಿಲ್ಲ.

ಭಗವಂತನ ಕೃಪೆಯಾದರೇ ಅವನ ದರ್ಶನವಾಗುತ್ತದೆ. ಭಗವಂತನೇ ಜ್ಞಾನ ಸೂರ್ಯನು. ಅವನ ಒಂದು ಕಿರಣದಿಂದ ಈ ಜಗತ್ತಿನಲ್ಲೆಲ್ಲಾ ಜ್ಞಾನದ ಬೆಳಕು ಬಿದ್ದಿದೆ. ಆದುದರಿಂದಲೇ ನಾವು ಒಬ್ಬರನ್ನೊಬ್ಬರು ತಿಳಿದುಕೊಳ್ಳುತ್ತೇವೆ. ಜಗತ್ತಿನ ಅನೇಕವಿಧವಾದ ವಿದ್ಯೆಯನ್ನು ಅರ್ಜಿಸುತ್ತೇವೆ. ಆ ಬೆಳಕನ್ನು ಒಂದು ವೇಳೆ ಭಗವಂತನೇ ತನ್ನ ಮುಖದ ಮೇಲೆ ತಿರುಗಿಸಿಕೊಂಡರೆ, ಅವನ ದರ್ಶನವಾಗುತ್ತದೆ. ಪೋಲೀಸ್ ಸಾಹೇಬನು ರಾತ್ರಿ ಕತ್ತಲೆಯಲ್ಲಿ, ಒಂದು ಲಾಂದ್ರವನ್ನು ಕಯ್ಯಲ್ಲಿ ಹಿಡಿದುಕೊಂಡು, ತಿರುಗಾಡುತ್ತಾನೆ. ಅವನ ಮುಖವು ಆರಿಗೂ ಕಾಣುವುದಿಲ್ಲ. ಆದರೆ ಆ ಬೆಳಕಿನಿಂದ ಅವನು ಎಲ್ಲರ ಮುಖವನ್ನೂ ನೋಡುತ್ತಾನೆ. ಎಲ್ಲರೂ ಒಬ್ಬರೊಬ್ಬರ ಮುಖವನ್ನು ನೋಡಬಹುದು. ಪೋಲೀಸ್ ಸಾಹೇಬನನ್ನು ನೋಡಬೇಕೆಂದು ಆಸೆ ಪಡುವವರು, ಅವನನ್ನು, 'ಸಾಹೇಬರೇ, ಕೃಪೆಮಾಡಿ ಒಂದು ಸಲ ನಿಮ್ಮ ಮುಖದ ಮೇಲೆ ಬೆಳಕನ್ನು ತಿರುಗಿಸಿಕೊಳ್ಳಿರಿ, ನಿಮ್ಮನ್ನು ಒಂದಾವರ್ತಿ ನೋಡುತ್ತೇನೆ,' ಎಂದು ಪ್ರಾರ್ಥಿಸಬೇಕು. 'ದೇವರೇ, ಕೃಪೆಮಾಡಿ ಜ್ಞಾನದ ಬೆಳಕನ್ನು ನಿನ್ನ ಮೇಲೆ ನೀನೇ ಒಂದಾವರ್ತಿ ಬಿಟ್ಟುಕೋ, ನಿನ್ನನ್ನು ದರ್ಶನಮಾಡುತ್ತೇನೆ,' ಎಂದು ನಾವು ಈಶ್ವರನನ್ನು ಪ್ರಾರ್ಥಿಸಬೇಕು. ಕೊಟ್ಟಡಿಯಲ್ಲಿ ಬೆಳಕು ಇಲ್ಲದಿರುವುದು ದಾರಿದ್ರ್ಯದ ಗುರುತು. ಹೃದಯಮಧ್ಯದಲ್ಲಿ ಜ್ಞಾನದ ಬೆಳಕು ಜ್ವಲಿಸಬೇಕು; ಆಗ ಬ್ರಹ್ಮಮಯಿಯ ಮುಖವನ್ನು ದರ್ಶನಮಾಡಬಹುದು.

ವಿಜಯನು ಔಷಧವನ್ನು ತೆಗೆದುಕೊಂಡು ಬಂದಿದ್ದಾನೆ. ಪರಮಹಂಸರ ಇದಿರಿಗೆ ಔಷಧವನ್ನು ಕುಡಿಯುತ್ತಾನೆ. ಔಷಧಕ್ಕೆ ನೀರನ್ನು ಸೇರಿಸಿ ಕುಡಿಯಬೇಕು, ಭಗವಾನರು ನೀರನ್ನು ತರಿಸಿಕೊಟ್ಟರು. ಅವರು ನಿರ್ಹೇತುಕಕೃಪಾಸಮುದ್ರರು. ವಿಜಯನು ಬಂಡಿಯ ಬಾಡಿಗೆಯನ್ನೂ, ದೋಣಿಯ ಬಾಡಿಗೆಯನ್ನೂ ಕೊಟ್ಟುಕೊಂಡು ಬರುವುದಕ್ಕೆ ಶಕ್ತನಲ್ಲ. ಆದಕಾರಣ ಭಗವಾನರು, ಅವನನ್ನು ಆಗಾಗ ಜನಗಳನ್ನು ಕಳುಹಿಸಿ ಕರೆಸುತ್ತಾರೆ. ಈ ಸಲ ಬಲರಾಮನ ಸಂಗಡ ಹೇಳಿ ಕಳುಹಿಸಿದ್ದರು. ಬಲರಾಮನು ಬಾಡಿಗೆಯನ್ನು ಕೊಡುತ್ತಾನೆ. ಅವನ ಜತೆಯಲ್ಲಿ ವಿಜಯನು

ಬಂದಿದ್ದಾನೆ. ಸಂಧ್ಯಾಕಾಲದಲ್ಲಿ ವಿಜಯನೂ, ನವಕುಮಾರನೂ, ವಿಜಯನ ಜತೆಗಾರರೂ, ಬಲರಾಮನ ದೋಣಿಯನ್ನು ಹತ್ತಿದರು. ಬಲರಾಮನು ಅವರನ್ನು ಬಾಗಬಾಜಾರಿನ ಘಟ್ಟದಲ್ಲಿ ಬಿಡುತ್ತಾನೆ. ಮಾಸ್ಟರೂ ಅದೇ ದೋಣಿಯನ್ನು ಹಿಡಿದನು.

ದೋಣಿಯು ಬಾಗಬಾಜಾರಿನ ಅನ್ನಪೂರ್ಣ ಘಟ್ಟಕ್ಕೆ ಬಂದು ಸೇರಿತು. ಅಲ್ಲಿಂದ ಬಲರಾಮನ ಮನೆಯು ಬಳಿಗೆ ಹೋದ ಮೇಲೆ, ಬೆಳುದಿಂಗಳು ಬಂದಿತು. ಈ ದಿವಸ ಶುಕ್ಲ ಚತುರ್ಥಿ. ಶೀತಕಾಲವಾದುದರಿಂದ ಕೊಂಚ ಚಳಿ. ಶ್ರೀರಾಮಕೃಷ್ಣರವರ ಅಮೃತಸದೃಶವಾದ ಉಪದೇಶವನ್ನು ಸ್ಮರಿಸುತ್ತಾ, ಅವರ ಆನಂದಮೂರ್ತಿಯನ್ನು ಹೃದಯದಲ್ಲಿ ಧಾರಣ ಮಾಡುತ್ತಾ, ವಿಜಯ, ಬಲರಾಮ, ಮಾಸ್ಟರ್ ಮೊದಲಾದವರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿ ಹೋದರು.

ಹನ್ನೊಂದನೆಯ ಖಂಡ

ಪ್ರಥಮ ಪರಿಚ್ಛೇದ

(ದಕ್ಷಿಣೇಶ್ವರದಲ್ಲಿ ಪ್ರಾಣಕೃಷ್ಣ, ಮಾಸ್ಟರು ಮುಂತಾದವರೊಡನೆ)

ಭಗವಾನ್ ಶ್ರೀರಾಮಕೃಷ್ಣರವರು ಕಾಳಿಕಾದೇವಾಲಯದ ಪೂರ್ವಪರಿಚಿತವಾದ ಕೊಟ್ಟಡಿಯಲ್ಲಿ ಭಕ್ತರೊಡನೆ ಕುಳಿತಿದ್ದಾರೆ. ಅವರು ಹಗಲೂ ಇರುಳೂ ಹರಿಪ್ರೇಮದಲ್ಲಿ, ಎಂದರೆ ಮಾತೆಯ ಪ್ರೇಮದಲ್ಲಿ ಮತ್ತರಾಗಿದ್ದಾರೆ.

ನೆಲದ ಮೇಲೆ ಚಾಪೆಯು ಹಾಸಿದೆ. ಅದರ ಮೇಲೆ ಭಗವಾನರು ಕುಳಿತಿದ್ದಾರೆ. ಅವರ ಇದಿರಿಗೆ ಪ್ರಾಣಕೃಷ್ಣನೂ ಮಾಸ್ಟರೂ ಇದ್ದಾರೆ. ಶ್ರೀಯುಕ್ತ ರಾಖಾಲನೂ ಇದ್ದಾನೆ. ಕೊಟ್ಟಡಿಯ ಹೊರಗೆ ಆಗ್ನೇಯದ ವರಾಂಡದಲ್ಲಿ ಹಾಜರನು ಕುಳಿತಿದ್ದಾನೆ.

ಈ ದಿನ ಸೋಮವಾರ, ಕ್ರಿಸ್ತಾಬ್ದ ೧೮೮೩ನೆಯ ಜನವರಿ ಮೊದಲನೆಯ ತೇದಿ. ಬೆಳಿಗ್ಗೆ ಎಂಟು ಗಂಟೆಯ ಸಮಯ. ಚಳಿಗಾಲವಾದುದುದರಿಂದ ಪರಮಹಂಸರು ಶಾಲ್ ಎಂಬ ಪ್ರಾಣಿಯ ಚರ್ಮವನ್ನು ಹೊದೆದುಕೊಂಡಿದ್ದಾರೆ.

ಅಂತರಂಗಭಕ್ತರು ಅನೇಕರು ಬಂದು ಸೇರಿದ್ದಾರೆ. ಶ್ರೀಯುಕ್ತ ಪ್ರಾಣಕೃಷ್ಣನ ಮನೆಯವರು, ಮೊದಲು ಜನಾಯಿಗ್ರಾಮದಲ್ಲಿ ವಾಸಮಾಡಿಕೊಂಡು ಇದ್ದರು. ಈಗ ಪ್ರಾಣಕೃಷ್ಣನು ಕಲಿಕತೆಯ ಶ್ಯಾಮಾಪುಕೂರೆಂಬ ಸ್ಥಲದಲ್ಲಿ ವಾಸವಾಗಿದ್ದಾನೆ. ಅವನು ಮೆರ್ಕೆಸಿ ಲೈಯಾಲ್‌ಯವರ ಎಕ್ಸ್‌ಛೇಂಜ್ ಆಫೀಸಿನಲ್ಲಿ ಮುಖ್ಯಾಧಿಕಾರಿ; ಹರಾಜು ಮಾಡಿಸುವ ಕೆಲಸದ ಯಜಮಾನ. ಅವನ ಮೊದಲನೆಯ ಹೆಂಡತಿಗೆ ಮಕ್ಕಳಾಗಲಿಲ್ಲ. ಆದುದರಿಂದ ಅವನು ಅವಳ ಅನುಮತಿಯನ್ನು ಪಡೆದು ಇನ್ನೊಂದು ಮದುವೆಯನ್ನು ಮಾಡಿಕೊಂಡನು. ಈ ಎರಡನೆಯ ಹೆಂಡತಿಯ ಹೊಟ್ಟೆಯಲ್ಲಿ ಒಂದು ಗಂಡುಮಗುವಾಗಿದೆ.

ಪ್ರಾಣಕೃಷ್ಣನಿಗೆ ಭಗವಾನರಲ್ಲಿ ಅತ್ಯಂತಭಕ್ತಿ, ಅವನು ಸ್ಥೂಲಕಾಯನು, ಆದುದರಿಂದ ಅವನನ್ನು ಭಗವಾನರು, 'ದಾಂಡಿಗ ಬ್ರಾಹ್ಮಣ,' ಎಂದು ಕರೆಯುತ್ತಿದ್ದರು. ಅವನು ಬಲು ಒಳ್ಳೆಯವನು, ಈಗ ಸುಮಾರು ಒಂಬತ್ತು ತಿಂಗಳ ಕೆಳಗೆ, ಅವನು ಭಗವಾನರನ್ನೂ ಭಕ್ತರನ್ನೂ ತನ್ನ ಮನೆಗೆ ಕರೆದುಕೊಂಡು ಹೋಗಿ, ಔತಣವನ್ನು ಮಾಡಿಸಿದ್ದನು.

ಈಗ ಭಗವಾನರು ನೆಲದ ಮೇಲೆ ಕುಳಿತಿದ್ದಾರೆ, ಅವರ ಮಗ್ಗುಲಲ್ಲಿ ಜಿಲೇಬಿಯ ಗೂಡೆಯಿದೆ. ಅವರು ಒಂದು ಚೂರು ಜಿಲೇಬಿಯನ್ನು ಮುರಿದು ಬಾಯಲ್ಲಿ ಹಾಕಿಕೊಂಡರು.

ಶ್ರೀರಾಮಕೃಷ್ಣ :—(ಪ್ರಾಣಕೃಷ್ಣಾದಿ ಭಕ್ತರನ್ನು ಕುರಿತು, ನಗುತ್ತ) ನೋಡಿರಪ್ಪ, ನಾನು ತಾಯಿಯ ನಾಮವನ್ನು ಜಪಿಸುತ್ತೇನೆ, ಆದುದರಿಂದಲೇ ನನಗೆ ಇಂಥ ಒಳ್ಳೆಯ ಪದಾರ್ಥಗಳು ತಿನ್ನುವುದಕ್ಕೆ ಸಿಕ್ಕುತ್ತವೆ. (ಎಲ್ಲರೂ ನಗುತ್ತಾರೆ.)

ಅವಳು ನನಗೆ ಸೋರೆಯ ಕಾಯಿ, ಕುಂಬಳದ ಕಾಯಿ ಮುಂತಾದ ಅಸಾರವಾದ ಫಲಗಳನ್ನು ಕೊಡುವುದಿಲ್ಲ; ಜ್ಞಾನ, ಪ್ರೇಮ, ವಿವೇಕ, ವೈರಾಗ್ಯಗಳೆಂಬ ಅಮೃತಫಲಗಳನ್ನೇ ಕೊಡುತ್ತಾಳೆ.

ಈ ರೀತಿ ಮಾತಾಡುತ್ತಿರುವಾಗ, ಆರೇಳು ವಯಸ್ಸಿನ ಹುಡುಗನೊಬ್ಬನು ಕೊಟ್ಟಡಿಯೊಳಗೆ ಬಂದನು. ಆಗ ಶ್ರೀರಾಮಕೃಷ್ಣರಿಗೆ ಬಾಲಕಾವಸ್ಥೆ. ಒಬ್ಬ ಹುಡುಗನು ಇನ್ನೊಬ್ಬಹುಡುಗನನ್ನು ಕಂಡರೆ, ಎಲ್ಲಿ ತನ್ನ ಕಯ್ಯಿಂದ ತಿಂಡಿಯನ್ನು ಕಿತ್ತುಕೊಳ್ಳುತ್ತಾನೆಯೋ ಎಂದು ಹೆದರಿ, ಅದನ್ನು ಮುಚ್ಚಿಕೊಳ್ಳುವ ಹಾಗೆ, ಭಗವಾನರು ಜಿಲೇಬಿಯ ಗೂಡೆಯನ್ನು ಕಯ್ಯಿಂದ ಮುಚ್ಚಿಕೊಂಡು, ಮೆಲ್ಲ ಮೆಲ್ಲಗೆ ಪಕ್ಕಕ್ಕೆ ಜರುಗಿಸಿದರು.

ಪ್ರಾಣಕೃಷ್ಣನು ಗೃಹಸ್ಥನು. ಆದರೂ ಅವನಿಗೆ, 'ಬ್ರಹ್ಮನು ಸತ್ಯ, ಜಗತ್ತು ಮಿಥ್ಯೆ, ಸೋಽಹಂ, ಅವನೇ ನಾನು,' ಎಂಬೀ ವೇದಾಂತ ವಾದಗಳಲ್ಲಿ ಬಹಳ ಆಶೆ.

'ಕಲಿಯುಗದಲ್ಲಿ ಅನ್ನಗತಪ್ರಾಣ; ಆದುದರಿಂದ ನಾರದೀಯಭಕ್ತಿಯನ್ನು ಮಾಡಬೇಕು,' ಎಂದು ಭಗವಾನರು ಹೇಳಿದರು.

ಭಾವವಿಷಯಃನೆನಿಪ್ಪ ಭಗವಂತನಂ ನೋಡೆ
ಭಾವದಿಂ ವ್ಯತಿರಿಕ್ತವೆನಿಪಿಂದ್ರಿಯ॥
ಪ್ರಾವಣ್ಯದಿಂದರಿಯಲೆಳಸುವಾ ಮಾನವನು।
ದೇವಿ ಭೂತಲದೊಳವನೆಗ್ಗನಲ್ತೆ॥

ಎಂದು ಹೇಳುತ್ತ, ಭಗವಾನರು ಬಾಲಕನಂತೆ ಜಿಲೇಬಿಯ ಗೂಡೆಯನ್ನು ಕಯ್ಯಿಂದ ಮುಚ್ಚಿಕೊಳ್ಳುತ್ತ ಸಮಾಧಿಸ್ಥರಾದರು.

ದ್ವಿತೀಯ ಪರಿಚ್ಛೇದ

(ಭಾವರಾಜ್ಯ ಮತ್ತು ರೂಪದರ್ಶನ)

ಭಗವಾನರು ಬಲು ಹೊತ್ತು ಸಮಾಧಿ ಸ್ಥಿತಿಯಲ್ಲಿ ಭಾವಾವಿಷ್ಟರಾಗಿ ಕುಳಿತಿದ್ದಾರೆ. ಅವರ ದೇಹವು ಅಲ್ಲಾಡುವುದಿಲ್ಲ, ಕಣ್ಣು ರೆಪ್ಪೆಯು ಹೊಡೆಯುವುದಿಲ್ಲ. ಉಸಿರು ಆಡುತ್ತಿದೆಯೋ ಇಲ್ಲವೋ, ಎಂಬಂತೆ ಇದೆ.

ಆಮೇಲೆ, ಅವರು ಇಂದ್ರಿಯರಾಜ್ಯಕ್ಕೆ ಬಂದು ದೀರ್ಘನಿಶ್ವಾಸವನ್ನು ಬಿಟ್ಟರು.

ಶ್ರೀರಾಮಕೃಷ್ಣ :—(ಪ್ರಾಣಕೃಷ್ಣನನ್ನು ಕುರಿತು) ಭಗವಂತನು ಶುದ್ಧವಾಗಿ ನಿರಾಕಾರನೇ ಅಲ್ಲ, ಅವನು ಸಾಕಾರನೂ ಅಹುದು. ಅವನ ರೂಪವನ್ನು ನೋಡಬಹುದು. ಭಾವಭಕ್ತಿಗಳ ಮೂಲಕ ಅವನ ಅಸದೃಶವಾದ ರೂಪವನ್ನು ದರ್ಶನಮಾಡಬಹುದು, ಮಾತೆಯು ನಾನಾರೂಪಗಳಿಂದ ತನ್ನ ದರ್ಶನವನ್ನು ಕೊಡುತ್ತಾಳೆ.

(ಗೌರಾಂಗನ ದರ್ಶನ, ರತಿಯ ತಾಯ ವೇಷದಲ್ಲಿ ಕಾಳಿ)

ನಿನ್ನೆ ನಾನು ಮಾತೆಯನ್ನು ನೋಡಿದೆನು. ಅವಳು ಅಂಚು ಹೊಲಿಯದ ಒಂದು ಕಾವಿಯ ಷರಟನ್ನು ಹಾಕಿಕೊಂಡಿದ್ದಳು. ನನ್ನ ಸಂಗಡ ಮಾತನಾಡಿದಳು.

ಮಹಾಮಾತೆಯು ಇನ್ನೊಂದು ದಿವಸ ನನಗೆ ಆರೇಳು ವರ್ಷದ ಮುಸಲಮಾನರ ಹುಡುಗಿಯಂತೆ ಕಾಣಿಸಿಕೊಂಡಳು. ಹಣೆಯಲ್ಲಿ ತಿಲಕವಿದ್ದಿತು. ಅವಳು ದಿಗಂಬರಿಯಾಗಿ ನನ್ನ ಕೂಡ ಓಡಾಡುತ್ತ, ನನ್ನನ್ನು ಗೇಲಿಮಾಡುತ್ತಿದ್ದಳು.

ನಾನು ಹೃದಯನ ಮನೆಗೆ ಹೋಗಿದ್ದೆನು. ಆಗ ನನಗೆ ಗೌರಾಂಗನ ದರ್ಶನವಾಯಿತು. ಅವನು ಕರಿಯಂಚಿನ ಪಂಚೆಯುಟ್ಟಿದ್ದನು.

'ಭಗವಂತನು ಭಾವಾಭಾವಗಳಿಗೆ ಅತೀತನು,' ಎಂದು ಹಲಧರನು ಹೇಳುತ್ತಿದ್ದನು. ನಾನು ದೇವಾಲಯಕ್ಕೆ ಹೋಗಿ, 'ತಾಯೇ, ಹಲಧರನು ಈ ರೀತಿ ಹೇಳುತ್ತಿದ್ದಾನೆಯಲ್ಲ, ಹಾಗಾದರೆ ರೂಪಗೀಪಗಳೆಲ್ಲ ಸುಳ್ಳೇ?' ಎಂದು ಕೇಳಿದೆನು. ಆಗ ಮಾತೆಯು ರತಿಯ ತಾಯಿಯ ವೇಷದಲ್ಲಿ ನನ್ನ ಬಳಿಗೆ ಬಂದು, 'ನೀನು ಭಾವದಲ್ಲಿಯೇ ಇರು,' ಎಂದು ಹೇಳಿದಳು. ಅದನ್ನು ನಾನು ಹಲಧರನಿಗೆ ಹೇಳಿದೆನು.

ಒಂದೊಂದು ಸಮಯದಲ್ಲಿ ಈ ಮಾತು ಮರೆತು ಹೋಗಿ, ನನಗೆ ತುಂಬ ಕಷ್ಟವಾಗುತ್ತದೆ. ನಾನು ಭಾವದಲ್ಲಿ ಇಲ್ಲದೆ ಹೋದುದರಿಂದ ನನ್ನ ಹಲ್ಲು ಮುರಿದುಹೋಯಿತು. ಆದುದರಿಂದ ದೇವವಾಣಿಯಾಗಲಿ, ಪ್ರತ್ಯಕ್ಷವಾಗಲಿ ಆಗದಿದ್ದರೆ, ಭಕ್ತಿಯನ್ನಿರಿಸಿಕೊಂಡು ಭಾವದಲ್ಲಿ ನಿಲ್ಲುತ್ತೇನೆ. ನೀನು ಏನ ಹೇಳುತ್ತೀಯೆ?

ಪ್ರಾಣಕೃಷ್ಣ:—ಅಪ್ಪಣೆ.

(ಭಕ್ತಿಯು ಅವತಾರವಾವುದರಿಂದ? ರಾಮನ ಇಚ್ಛೆ.)

ಶ್ರೀರಾಮಕೃಷ್ಣ:—ನಾನು ನಿನಗೆ ಇನ್ನೇನ ತಾನೇ ಹೇಳಲಿ? (ತಮ್ಮ ಶರೀರವನ್ನು ತೋರಿಸಿಕೊಂಡು) ಒಳಗೆ ಆವುದೋ ಇದೆ. ಅದು ನನ್ನನ್ನು ಈ ರೀತಿ ಮಾಡಿಸುತ್ತದೆ. ನನಗೆ ಆಗಾಗ ದೇವಭಾವವುಂಟಾಗುತ್ತಿದ್ದಿತು. ನಾನು ಅದನ್ನು ಪೂಜೆಮಾಡದಿದ್ದರೆ ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ. ನಾನು ಯಂತ್ರ, ಅವನು ಯಂತ್ರಿ, ಅವನು ಮಾಡಿಸಿದಂತೆ ಮಾಡುತ್ತೇನೆ. ಹೇಳಿಸಿದಂತೆ ಹೇಳುತ್ತೇನೆ.

॥ ಅನುಷ್ಟುಪ್॥
ಭವಾಬ್ಧಿವಾರಿಯೊಳ್ಲೀಗಳ್ ।
ಪ್ಲವದೊಳ್ ತೇಲುತಿರ್ದಪೆಂ॥
ತವೆ ವೀಚಿಗಳೇರಲ್ಕೇ।
ರುವೆಂ ಬೀಳಲ್ಕೆ ಬೀಳುವೆಂ॥

ಗಾಳಿಯು ಎಂಜಲೆಲೆಯನ್ನು ಒಮ್ಮೆ ಒಳ್ಳೆಯ ಸ್ಥಳಕ್ಕೂ, ಮತ್ತೊಮ್ಮೆ ಬಚ್ಚಲಿಗೂ ತಳ್ಳುತ್ತದೆ. ಗಾಳಿಯು ಬೀಸಿದ ಹಾಗೆ ಎಲೆಯು ಓಡಾಡುತ್ತದೆ.

'ರಾಮನ ಇಚ್ಛೆಯಿಂದ ಕಳ್ಳತನವಾಯಿತು. ರಾಮನ ಇಚ್ಛೆಯಿಂದ ಪೋಲೀಸಿನವರು ನನ್ನನ್ನು ಹಿಡಿದುಕೊಂಡರು. ರಾಮನ ಇಚ್ಛೆಯಿಂದಲೇ ನನಗೆ ಬಿಡುಗಡೆಯಾಯಿತು,' ಎಂದು ಒಬ್ಬ ಮಗ್ಗದವನು ಹೇಳುತ್ತಿದ್ದನು.

'ಎಲೈ ರಾಮ, ನಾನು ಶರಣಾಗತನು, ನಾನು ಶರಣಾಗತನು, ನನಗೆ ನಿನ್ನ ಪಾದ ಪದ್ಮದಲ್ಲಿ ಶುದ್ಧವಾದ ಭಕ್ತಿಯುಂಟಾಗುವಂತೆಯೂ, ನಿನ್ನ ಭುವನ ಮೋಹಿನಿಯಾದ ಮಾಯೆಯಿಂದ ನಾನು ಮುಗ್ಧನಾಗದೆ ಇರುವಂತೆಯೂ ಆಶೀರ್ವದಿಸು,' ಎಂದು ಹನುಮಂತನು ಹೇಳುತ್ತಿದ್ದನು.

"ರಾಮ, ನನ್ನನ್ನು ಸರ್ಪವು ಹಿಡಿದುಕೊಂಡಾಗ, 'ಹೇ ರಾಮ, ನನ್ನನ್ನು ರಕ್ಷಿಸು,' ಎಂದು ಮೊರೆಯಿಡುತ್ತೇನೆ. ಈಗ ನೀನೇ ಬಿಲ್ಲನ್ನು ಊರಿ ನನ್ನನ್ನು ಕೊಲ್ಲುತ್ತಿರುವುದರಿಂದ, ನಾನು ಸುಮ್ಮನೆ ಇದ್ದೇನೆ," ಎಂದು ಸಾಯುವಾಗ ಒಂದು ದಪ್ಪ ಕಪ್ಪೆಯು ಹೇಳಿತು.

ಈಗ ನಾನು ನಿನ್ನನ್ನು ನೋಡುವಂತೆ, ಇದೇ ಕಣ್ಣುಗಳಿಂದ ಹಿಂದೆ ಭಗವಂತನನ್ನು ನೋಡುತ್ತಿದ್ದೆನು. ನನಗೆ ಈಗ ಭಾವಾವಸ್ಥೆಯೊಳಗೆ ಈಶ್ವರ ದರ್ಶನವಾಗುತ್ತದೆ.

ಈಶ್ವರಲಾಭವಾದರೆ ಬಾಲಕನ ಸ್ವಭಾವವುಂಟಾಗುತ್ತದೆ. ಆವನು ಆವನನ್ನು ಕುರಿತು ಚಿಂತಿಸುತ್ತಾನೆಯೋ, ಅವನು ಅವನ ಸತ್ವವನ್ನೇ ಪಡೆಯುತ್ತಾನೆ. ಈಶ್ವರನ ಸ್ವಭಾವವು ಬಾಲಕನ ಸ್ವಭಾವದಂತಿರುತ್ತದೆ. ಹುಡುಗನು ಆಟಕ್ಕಾಗಿ ಮನೆಯನ್ನು ಕಟ್ಟುತ್ತಾನೆ, ಒಡೆಯುತ್ತಾನೆ, ಮತ್ತೆ ಕಟ್ಟುತ್ತಾನೆ. ಹಾಗೆಯೇ ಭಗವಂತನೂ ಸೃಷ್ಟಿ ಸ್ಥಿತಿ ಪ್ರಲಯಗಳನ್ನು ಮಾಡುತ್ತಾನೆ. ಬಾಲಕನು ಆವ ಗುಣಕ್ಕೂ ಅಧೀನನಲ್ಲ, ಹಾಗೆಯೇ ಭಗವಂತನೂ ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿಗೂ ಅಧೀನನಲ್ಲ.

ಈ ಕಾರಣದಿಂದಲೇ, ಬಾಲಕರ ಸ್ವಭಾವವನ್ನು ಆರೋಪಿಸಿಕೊಳ್ಳುವುದಕ್ಕಾಗಿ, ಪರಮಹಂಸರ ಸ್ಥಿತಿಯಲ್ಲಿರುವವರು ಮೂರು ನಾಲ್ಕು ಮಕ್ಕಳ ಜತೆಯಲ್ಲಿ ಇರುತ್ತಾರೆ.

ಆಗಪಾಪಾಡಾದಿಂದ ಇಪ್ಪತ್ತು ಇಪ್ಪತ್ತೆರಡು ವಯಸ್ಸಿನ ಹುಡುಗನು ಹೊಸದಾಗಿ ಇಲ್ಲಿಗೆ ಬರುತ್ತಾ ಹೋಗುತ್ತಾ ಇದ್ದಾನೆ. ಈಗ ಅವನು ಬಂದು,

ಸನ್ನೆಮಾಡಿ, ಭಗವಾನರನ್ನು ನಿರ್ಜನಪ್ರದೇಶಕ್ಕೆ ಕರೆದುಕೊಂಡು ಹೋಗಿ ಅವರ ಕಿವಿಯಲ್ಲಿ ಏನನ್ನೋ ಹೇಳಿ, ಮತ್ತೆ ಬಂದು, ಅವರ ಹತ್ತಿರ ನೆಲದ ಮೇಲೆ ಕುಳಿತಿದ್ದಾನೆ.

(ಪ್ರಕೃತಿಭಾವ ಮತ್ತು ಕಾಮಜಯ, ಸರಲತಾ ಮತ್ತು ಈಶ್ವರಭಾವ.)

ಶ್ರೀರಾಮಕೃಷ್ಣ:—(ಆ ಹುಡುಗನನ್ನು ಕುರಿತು) ಜನರ ಭಾವವು ಅವರು ಆರೋಪಮಾಡಿಕೊಂಡ ಹಾಗೆಲ್ಲ ಬದಲಾಯಿಸುತ್ತದೆ. ಹೆಂಗುಸರ ಭಾವವನ್ನು ಆರೋಪಿಸಿಕೊಂಡರೆ, ಕಾಮಾದಿರಿಪುವರ್ಗವು ಕೊಂಚ ಕೊಂಚವಾಗಿ ನಷ್ಟವಾಗುತ್ತ ಬರುತ್ತದೆ. ಅವರ ನಡೆವಳಿಗಳು ನಿಜವಾಗಿಯೂ ಹೆಂಗುಸರ ನಡೆವಳಿಯಂತೆಯೇ ಆಗಿಹೋಗುತ್ತವೆ. ನಾಟಕದಲ್ಲಿ ಹೆಣ್ಣುವೇಷ ಹಾಕುವರನ್ನು, ಅವರು ಸ್ನಾನಮಾಡುವಾಗ, ನಾನು ನೋಡಿದ್ದೇನೆ. ಅವರು ಹೆಂಗುಸರ ಹಾಗೆಯೇ ಹಲ್ಲನ್ನು ಉಜ್ಜುತ್ತಾರೆ, ಮಾತನ್ನೂ ಆಡುತ್ತಾರೆ.

ನೀನು ಒಂದು ಶನಿವಾರವೋ, ಮಂಗಳವಾರವೋ ಬಾ. (ಪ್ರಾಣಕೃಷ್ಣನನ್ನು ಕುರಿತು) ಬ್ರಹ್ಮನಿಗೂ ಶಕ್ತಿಗೂ ಭೇದವಿಲ್ಲ. ಶಕ್ತಿಯನ್ನು ನಂಬದಿದ್ದರೆ ಜಗತ್ತು ಸುಳ್ಳಾಗಬೇಕಾಗುತ್ತದೆ. ನೀನು, ನಾನು, ಮನೆ, ಹೆಂಡತಿ, ಇವೆಲ್ಲವೂ ಸುಳ್ಳಾಗುತ್ತವೆ. ಆದ್ಯಾಶಕ್ತಿಯಿರುವುದರಿಂದಲೇ ಪ್ರಪಂಚವು ನಿಂತಿದೆ. ನಡುವೆ ಊರುಗೋಲನ್ನು ಕೊಡದೆ ಹೋದರೆ, ಮಣ್ಣಿನ ಗೊಂಬೆಯನ್ನು ಮಾಡುವುದಕ್ಕೆ ಆದೀತೇ? ಸುಂದರವಾದ ದುರ್ಗಾದೇವಿಯ ಪ್ರತಿಮೆಯೂ ಆಗುವುದಿಲ್ಲ.

ವಿಷಯಬುದ್ಧಿಯನ್ನು ಬಿಡದಿದ್ದರೆ ಜ್ಞಾನವುಂಟಾಗುವುದಿಲ್ಲ, ಭಗವಂತನ ಲಾಭವೂ ಆಗುವುದಿಲ್ಲ, ವಿಷಯ ಬುದ್ಧಿಯಿದ್ದರೆ ಕಾಪಟ್ಯವು ಉಂಟಾಗುತ್ತದೆ. ಸರಲತೆಯು ಬಾರದಿದ್ದರೆ ಈಶ್ವರನನ್ನು ಪಡೆಯುವುದಕ್ಕಾಗುವುದಿಲ್ಲ.

ಕಂದ॥ ಚತುರತೆ ಕಾಪಟ್ಯಂಗಳ।
ನತಿಮಾತ್ರಂ ಬಿಸುಟು ಭಕ್ತಿ ದಾಸ್ಯಂ ಶರಣಾ॥
ಗತಿಯೆಂಬಿನಿತಂ ತಳೆ ರಘು।
ಪತಿಯಂ ನೀಂ ಸುಲಭಮಾಗಿ ಪಡೆಯಲ್ಕಕ್ಕುಂ॥

ವಿಷಯಕರ್ಮವನ್ನು ಮಾಡುವವರೂ, ಕಚೇರಿಯ ಕೆಲಸವನ್ನು ಮಾಡುವವರೂ, ಸತ್ಯವಾಗಿ ನಡೆಯಬೇಕು; ಕಲಿಯುಗದಲ್ಲಿ ಸತ್ಯವೇ ತಪಸ್ಸು.

ಪ್ರಾಣಕೃಷ್ಣ :—

ಅಸ್ಮಿನ್ ಧರ್ಮೇ ಮಹೇಶಿಸ್ಯಾತ್ ಸತ್ಯವಾದೀ ಜಿತೇಂದ್ರಿಯಃ ॥
ಪರೋಪಕಾರನಿರತೋ ನಿರ್ವಿಕಾರಸ್ಸದಾಶಯಃ ॥

ಎಂದರೆ, 'ಮಹಾಕಾಳಿಯೇ, ಈ ಯುಗದಲ್ಲಿ ಸತ್ಯವಾದಿಯಾಗಿಯೂ, ಜಿತೇಂದ್ರಿಯನಾಗಿಯೂ, ಪರೋಪಕಾರನಿರತನಾಗಿಯೂ, ನಿರ್ವಿಕಾರನಾಗಿಯೂ, ಸದಾಶಯನಾಗಿಯೂ ಇರುವಂತೆ ನನಗೆ ಅನುಗ್ರಹಿಸು,' ಎಂದು ಮಹಾನಿರ್ವಾಣತಂತ್ರದಲ್ಲಿ ಇದೆ.

ಶ್ರೀರಾಮಕೃಷ್ಣ :—ಅಹುದು, ಇವುಗಳನ್ನೆಲ್ಲಾ ಚೆನ್ನಾಗಿ ಮನಸ್ಸಿನಲ್ಲಿ ಇಟ್ಟುಕೊಂಡು, ಅವುಗಳಂತೆ ನಡಯಬೇಕು.

ತೃತೀಯ ಪರಿಚ್ಛೇದ

(ಶ್ರೀರಾಮಕೃಷ್ಣರ ಯಶೋದಾಭಾವ ಮತ್ತು ಸಮಾಧಿ)

ಭಗವಾನರು ಸಣ್ಣ ಮಂಚದ ಮೇಲೆ ಕುಳಿತಿದ್ದಾರೆ. ಅವರು ಸರ್ವದಾ ಭಾವದಲ್ಲಿ ಮಗ್ನರು. ರಾಖಾಲನನ್ನು ಭಾವಚಕ್ಷುಸ್ಸಿನಿಂದ ನೋಡುತ್ತ ವಾತ್ಸಲ್ಯ ರಸದಲ್ಲಿ ತೇಲುತ್ತಿದ್ದಾರೆ. ಅವರ ಶರೀರವು ಆನಂದದಿಂದ ಪುಳಕಿತವಾಗುತ್ತಿದೆ. ಯಶೋದೆಯು ಈ ತೆರದ ಭಾವದೃಷ್ಟಿಯಿಂದಲೇ ಗೋಪಾಲಮೂರ್ತಿಯನ್ನು ನೋಡುತ್ತಿದ್ದಳೋ, ಎಂಬಂತೆ ಕಾಣುತ್ತಿದೆ. ಪರಮಹಂಸರು ರಾಖಾಲನನ್ನು ನೋಡುತ್ತ ಸಮಾಧಿಸ್ಥರಾದರು. ಕೊಟ್ಟಡಿಯೊಳಗಿದ್ದ ಭಕ್ತರೆಲ್ಲರೂ ನಿಸ್ತಬ್ಧರಾಗಿ, ಆಶ್ಚರ್ಯದಿಂದ ಶ್ರೀರಾಮಕೃಷ್ಣರವರ ಅದ್ಭುತವಾದ ಅವಸ್ಥೆಯನ್ನು ದರ್ಶನ ಮಾಡುತ್ತಿದ್ದಾರೆ.

ಶ್ರೀರಾಮಕೃಷ್ಣ :—(ಪ್ರಕೃತಿಸ್ಥರಾಗಿ) ರಾಖಾಲನನ್ನು ನೋಡಿದರೆ ನನಗೇಕೆ ಉದ್ದೀಪನವಾಗುತ್ತದೆ? ಭಗವಂತನ ಬಳಿಗೆ ಹೋದ ಹಾಗೆಲ್ಲ, ಅವನ ಐಶ್ವರ್ಯದ ಜ್ಞಾನವು ಕಮ್ಮಿಯಾಗುತ್ತದೆ. ಸಾಧಕನಿಗೆ ಮೊತ್ತ ಮೊದಲು ದಶಭುಜೆಯಾದ ಈಶ್ವರಿಯ ದರ್ಶನವಾಗುತ್ತದೆ. ಆ ಮೂರ್ತಿಯ ಐಶ್ವರ್ಯವು ಬಹುಪ್ರಕಾಶವಾಗಿ ಕಾಣುತ್ತದೆ. ಆ ಮೇಲೆ ಅವನಿಗ ದ್ವಿಭುಜ ಮೂರ್ತಿಯು ಕಾಣಿಸುತ್ತದೆ. ಆಗ ಆ ಮೂರ್ತಿಯ ಕಯ್ಗಳೊಳಗೆ, ದಶಭುಜಮೂರ್ತಿಯ ಕಯ್ಗಳಲ್ಲಿದ್ದಷ್ಟು ಅಸ್ತ್ರಶಸ್ತ್ರಗಳಿರುವುದಿಲ್ಲ. ತರುವಾಯ ಗೋಪಾಲಮೂರ್ತಿಯ ದರ್ಶನ ಆಗ ಆವ ಐಶ್ವರ್ಯವೂ ಇಲ್ಲ; ಬರಿಯ ಹಾಲುಗಲ್ಲದ ಹಸುಳೆ, ತರುವಾಯ ಬರಿಯ ಜ್ಯೋತಿರ್ದರ್ಶನ.

(ಸಮಾಧಿಯಾದ ಬಳಿಕ ನಿಜವಾದ ಬ್ರಹ್ಮಜ್ಞಾನಾವಸ್ಥೆ, ಆಸಕ್ತಿತ್ಯಾಗ ಮತ್ತು ವಿಚಾರ)

ಈಶ್ವರಲಾಭವಾದರೆ, ಅವನಲ್ಲಿ ಸಮಾಧಿಸ್ಥನಾದರೆ, ವಿಚಾರವೇನೂ ನಿಲ್ಲುವುದಿಲ್ಲ. 'ವಿಚಾರವು ಎಲ್ಲಿಯ ವರೆಗೆ? 'ಜೀವ, ಜಗತ್ತು', 'ನಾನು, ನೀನು', ಎಂಬ ಜ್ಞಾನವಿರುವ ವರೆಗೆ, ಎಂದರೆ ಲೋಕವೆಲ್ಲ ವಿವಿಧವಾಗಿ ಕಾಣುವ ವರೆಗೆ. ತ್ರೈಲಿಂಗಸ್ವಾಮಿಯಂತೆ ನಿಶ್ಚಯವಾಗಿಯೂ ಏಕಾಕಾರವಾದ ಜ್ಞಾನವುಂಟಾದರೆ ಮನುಷ್ಯನು ಸುಮ್ಮನಾಗಿ ಹೋಗುತ್ತಾನೆ.

ಬ್ರಾಹ್ಮಣಭೋಜನದ ವೇಳೆಯಲ್ಲಿ ನೋಡಿಲ್ಲವೇ? ಮೊದಲು ಮೊದಲು ತುಂಬ ಗಲಾಟೆ; ಹೊಟ್ಟೆಯು ತುಂಬುತ್ತ ಬಂದ ಹಾಗೆಲ್ಲ ಗಲಾಟೆಯು ಕಮ್ಮಿಯಾಗುತ್ತ ಬರುತ್ತದೆ. ಮೊಸರು, ಲಡ್ಡುಗಳನ್ನು ಬಡಿಸುವಾಗ, ಬರಿಯ 'ಸುಪ್, ಸುಪ್,' ಎಂದು ಹೀರುವ ಸದ್ದು. ಆ ಮೇಲೆ ಸದ್ದೇ ಇಲ್ಲ. ಬಳಿಕ ನಿದ್ದೆ, ಸಮಾಧಿ, ಆಗ ಆವ ಗಲಾಟೆಯೂ ಇಲ್ಲ.

(ಮಾಸ್ಟರನ್ನೂ ಪ್ರಾಣಕೃಷ್ಣನನ್ನೂ ಕುರಿತು)ಅನೇಕರು ಬ್ರಹ್ಮಜ್ಞಾನದ ಮಾತನ್ನಾಡುತ್ತಾರೆ. ಆದರೆ ಅವರ ಮನಸ್ಸಿನಲ್ಲಿ ಮನೆ, ಮಠ, ಹಣ, ಗೌರವ, ಇಂದ್ರಿಯಸುಖ ಎಂಬ ಹೇಯವಾದ ವಿಷಯಗಳಲ್ಲಿ ಆಸಕ್ತಿಯು ತುಂಬಿರುತ್ತದೆ. ಗೋಪುರದ ಅಡಿಯಲ್ಲಿ ನಿಂತಿರುವಾಗ, ಬಂಡಿ, ಕುದುರೆ, ಗಂಡಸರು, ಹೆಂಗುಸರು, ಎಂದು ಎಲ್ಲವೂ ಬೇರೆಬೇರೆಯಾಗಿ ಕಾಣುತ್ತವೆ; ಪರಂತು ಗೋಪುರದ ತುದಿಯಲ್ಲಿ ನಿಂತು ಕೆಳಗೆ ನೋಡಿದರೆ. ಅನಂತವಾದ ಆಕಾಶವು ಸಾಗರದಂತೆ ತಳತಳಿಸುತ್ತದೆ. ಇನ್ನೂ ಕೆಳಗಿರುವ ಮನೆ, ಕುದುರೆ ಬಂಡಿ, ಜನರು ಮುಂತಾದುವೆಲ್ಲ ಚೆನ್ನಾಗಿ ಕಾಣಿಸುವುದಿಲ್ಲ; ಇರುವೆಗಳಂತೆ ಆಗಿಹೋಗುತ್ತವೆ.

ಬ್ರಹ್ಮಜ್ಞಾನವು ಬಂದರೆ, ಸಂಸಾರದಲ್ಲಿ ಆಸಕ್ತಿಯೂ, ಕಾಮಿನೀಕಾಂಚನಗಳಲ್ಲಿ ಉತ್ಸಾಹವೂ ಹೊರಟುಹೋಗುತ್ತವೆ. ಶಾಂತಿಯುಂಟಾಗುತ್ತದೆ. ಸವಿದೆಯು ಉರಿಯುವಾಗ, 'ಫಡ್, ಫಡ್', ಎಂಬ ಸದ್ದೂ, ಹೆಚ್ಚು ತಾಪವೂ ಇರುತ್ತವೆ. ಎಲ್ಲವೂ ಉರಿದು ಬೂದಿಯಾಗಿ ಹೋದರೆ, ಸದ್ದೂ ಇಲ್ಲ, ಸೆಕೆಯೂ ಇಲ್ಲ. ಆಸಕ್ತಿಯು ಕಮ್ಮಿಯಾಗಿ ಹೋದರೆ, ಉತ್ಸಾಹವು ಕಮ್ಮಿಯಾಗುತ್ತದೆ. ಆ ಮೇಲೆ ಶಾಂತಿ. ಈಶ್ವರನನ್ನು ಸಮೀಪಿಸಿದ ಹಾಗೆಲ್ಲ ಶಾಂತಿಯು ಉಂಟಾಗುತ್ತದೆ. ಶಾಂತಿಃ, ಶಾಂತಿಃ, ಶಾಂತಿಃ, ಪ್ರಶಾಂತಿಃ. ಗಂಗೆಯ ಬಳಿಗೆ ಹೋದ ಹಾಗೆಲ್ಲ ತಂಪು ಉಂಟಾಗುತ್ತದೆ. ಸ್ನಾನ ಮಾಡಿದರೆ ಹೇಳಬೇಕಾದುದೇ ಇಲ್ಲ.

ಭಗವಂತನು ಇರುವುದರಿಂದಲೇ ಜೀವ, ಜಗತ್ತು, ಚತುರ್ವಿಂಶತಿತತ್ವಗಳು ಇರುತ್ತವೆ, ಅವನು ಇಲ್ಲದಿದ್ದರೆ ಆವುದೂ ಇಲ್ಲ. ಮೊದಲು ಅಂಕೆಯನ್ನು ಬರೆದು ಅದರ ಮುಂದೆ ಸೊನ್ನೆಗಳನ್ನು ಹಾಕುತ್ತ ಹೋದರೆ ಬೆಲೆಯು ಹೆಚ್ಚುತ್ತ ಬರುತ್ತದೆ. ಆ ಅಂಕೆಯನ್ನು ತೆಗೆದುಹಾಕಿಬಿಟ್ಟರೆ, ಬರಿಯ ಸೊನ್ನೆಯೇ; ಆವ ಬೆಲೆಯೂ ನಿಲ್ಲುವುದಿಲ್ಲ.

ಪ್ರಾಣಕೃಷ್ಣನಲ್ಲಿ ಕೃಪೆಮಾಡುವುದಕ್ಕಾಗಿ ಭಗವಾನರು ತಮ್ಮ ಅವಸ್ಥೆಯನ್ನೇನಾದರೂ ಸೂಚಿಸುತ್ತಿದ್ದಾರೆಯೋ ?

(ಭಗವಾನರ ಅವಸ್ಥೆ, ಬ್ರಹ್ಮಜ್ಞಾನವಾದ ಬಳಿಕ ಭಕ್ತಿಯ ಅಹಂಕಾರ)

ಶ್ರೀರಾಮಕೃಷ್ಣ :—ಬ್ರಹ್ಮಜ್ಞಾನವಾದ ಮೇಲೆ, ಎಂದರೆ ಸಮಾಧಿಯಾದ ತರುವಾಯ, ಕೆಳಗೆ ಇಳಿದುಬಂದು ಕೆಲವರು ವಿದ್ಯೆಯ ಅಹಂಕಾರವನ್ನೂ, ಭಕ್ತಿಯ ಅಹಂಕಾರವನ್ನೂ ಇಟ್ಟುಕೊಂಡು ಜೀವಿಸುತ್ತಾರೆ. ಸಂತೆಯು ಮುಗಿದು ಹೋದರೂ, ಕೆಲವರು ತಮಗೆ ಇಷ್ಟಬಂದಂತೆ ಇನ್ನೂ ಅಂಗಡಿಯಲ್ಲಿ ಕುಳಿತುಕೊಂಡಿರುವುದಿಲ್ಲವೇ? ನಾರದಾದಿಗಳಂತೆ ಬ್ರಹ್ಮಜ್ಞಾನಿಗಳು, ಲೋಕಶಿಕ್ಷೆಗೋಸ್ಕರ ಭಕ್ತಿಯ ಅಹಂಕಾರವನ್ನು ಇಟ್ಟುಕೊಂಡಿರುತ್ತಾರೆ. ಶಂಕರಾಚಾರ್ಯರು ಲೋಕಶಿಕ್ಷೆಗೋಸ್ಕರವೇ ವಿದ್ಯೆಯ ಅಹಂಕಾರವನ್ನು ಇಟ್ಟುಕೊಂಡಿದ್ದರು.

ಸಂಸಾರದಲ್ಲಿ ಈಷದಪಿ ಆಸಕ್ತಿಯಿದ್ದರೂ ಭಗವಂತನನ್ನು ಪಡೆಯುವುದಕ್ಕೆ ಆಗುವುದಿಲ್ಲ. ದಾರದ ತುದಿಯನ್ನು ಸರಿಯಾಗಿ ಹೊಸೆದು ಮೊನೆಮಾಡದಿದ್ದರೆ, ಅದು ಸೂಜಿಯ ಕಣ್ಣಿನಲ್ಲಿ ಹುಗುವುದಕ್ಕಾದೀತೇ ?

ಆರಿಗೆ ಈಶ್ವರಲಾಭವಾಗಿರುತ್ತದೆಯೋ ಅವರಿಗೆ ಕಾಮಕ್ರೋಧಾದಿಗಳು ನಾಮಮಾತ್ರಕ್ಕೆ ಇರುತ್ತವೆ. ಹೇಗೆಂದರೆ ಸುಟ್ಟು ಹೋದ ಹಗ್ಗವು ಹಗ್ಗದಂತೆಯೇ ಕಾಣುತ್ತದೆ. ಊದಿದರೆ ಹಾರಿಹೋಗುತ್ತದೆ. ಮನಸ್ಸು ಆಸಕ್ತಿರಹಿತವಾದರೇನೇ ಭಗವಲ್ಲಾಭವಾಗುತ್ತದೆ. ಶುದ್ಧವಾದ ಮನಸ್ಸಿನಲ್ಲಿ ಹುಟ್ಟುವುದೆಲ್ಲವೂ ಭಗವಂತನ ವಾಣಿಯೇ. ಶುದ್ಧವಾದ ಮನಸ್ಸು ಅಥವಾ ಶುದ್ಧವಾದ ಬುದ್ಧಿಯೇ ಪರಿಶುದ್ಧವಾದ ಆತ್ಮ. ಅದು ಏಕೆ ಆಗಬಾರದು? **ಭಗವಂತನು ವಿನಾ ಮಿಕ್ಕುದೊಂದೂ ಶುದ್ಧವಲ್ಲ.** ಭಗವಲ್ಲಾಭವಾದರೇನೇ ಧರ್ಮಾಧರ್ಮಾದಿಗಳಿಂದ ಅತೀತನಾಗಬಹುದು.

ಹೀಗೆಂದು ಹೇಳುತ್ತ, ಭಗವಾನರು ದೇವದುರ್ಲಭವಾದ ಕಂಠದಿಂದ ರಾಮಪ್ರಸಾದನ

ತಿರುಗಾಡಿಕೊಂಡು ಬರುವ ಬಾರೆಲೆ ಚಿತ್ತ। ಭರದಿಂದೆ ನೀನೆನ್ನ ಕೂಡೆ।
ಮೆರೆವ ಶ್ರೀಕಾಳೀಕಲ್ಪವೃಕ್ಷದ ಮೂಲ। ಪರಿಯಂತ ತಡಮಾಡಬೇಡ॥ ೧

ನಿನ್ನ ಪ್ರವೃತ್ತಿನಿವೃತ್ತಿಗಳೆಂಬುವ। ಚೆನ್ನೆಯರಿಬ್ಬರ ಕೂಡಿ॥
ಮುನ್ನವಲ್ಲಿಗೆ ಹೋಗೆ ನಾಲುಕು ಫಲಗಳು। ಚೆನ್ನಿಗ ನಿನಗೆ ದೊರೆವುವು॥ ೨

ನೀನು ನಿವೃತ್ತಿಸತಿಯು ನೊಡಡೂಡೆಲೊ। ಸೂನು ವಿವೇಕನುದಿಪನು॥
ಏನೆಂಬೆನವನಿಂದಲೀಶ್ವರತತ್ವವ। ನೀನರಿಯುವೆ ಹಸನಾಗಿ॥ ೩

ಎಂಬ ಗಾನವನ್ನು ಹಾಡಿದರು.

ಚತುರ್ಥ ಪರಿಚ್ಛೇದ

(ಶ್ರೀರಾಮಕೃಷ್ಣರಿಗೆ ರಾಧೆಯ ಭಾವ)

ಭಗವಾನರು ಆಗ್ನೇಯದ ವಾರಾಂಡಕ್ಕೆ ಬಂದು ಕುಳಿತಿದ್ದಾರೆ. ಸಂಗಡ ಪ್ರಾಣಕೃಷ್ಣಾದಿಭಕ್ತರೂ ಬಂದಿದ್ದಾರೆ. ಹಾಜರಾಮುಹಾಶಯನೂ ಕುಳಿತಿದ್ದಾನೆ.

ಶ್ರೀರಾಮಕೃಷ್ಣ :—(ನಗುತ್ತ, ಪ್ರಾಣಕೃಷ್ಣನೊಡನೆ) ಹಾಜರಾವೇನೂ ಕಮ್ಮಿಯಲ್ಲ. ಇದು ದೊಡ್ಡ ದೇವಸ್ಥಾನವಾದರೆ, ಅದು ಚಿಕ್ಕ ದೇವಸ್ಥಾನ. (ಎಲ್ಲರೂ ನಗುತ್ತಾರೆ.)

ನವಕುಮಾರನು ವಾರಾಂಡದ ಬಾಗಿಲಲ್ಲಿ ನಿಂತು, ಪರಮಹಂಸರೊಡನೆ ಇದ್ದ ಭಕ್ತರನ್ನು ನೋಡಿ ಹೊರಟುಹೋದನು. 'ನವಕುಮಾರನು ಅಹಂಕಾರದ ಮೂರ್ತಿ,' ಎಂದು ಭಗವಾನರು ಹೇಳಿದರು. ಬೆಳಿಗ್ಗೆ ಒಂಬತ್ತುವರೆ ಗಂಟೆಯ ಸಮಯ. ಪ್ರಾಣಕೃಷ್ಣನು ಭಗವಾನರಿಗೆ ನಮಸ್ಕಾರಮಾಡಿ ಕಲಿಕತೆಯಲ್ಲಿ ತನ್ನ ಮನೆಗೆ ಹೋಗುವುದಕ್ಕೆ ಅಪ್ಪಣೆಯನ್ನು ತೆಗೆದುಕೊಂಡನು.

ಒಬ್ಬ ವೈರಾಗಿಯು ಗೋಪೀಯಂತ್ರವೆಂಬ ತಂತಿಯ ವಾದ್ಯವನ್ನು ಬಾಜಿಸುತ್ತ, ಭಗವಾನರ ಕೊಟ್ಟಡಿಯಲ್ಲಿ ಹಾಡುತ್ತಿದ್ದನು.

ಹಾಡು

("ಯಾದವ ನೀ ಬಾ ಯದುಕುಲನಂದನ' ಎಂಬಂತೆ)

ಬಂದಿದೆ ನಿತ್ಯಾನಂದನ ಹಡಗದ।
ಚೆಂದದಿನೇರುತೆ ನೀ ಹೋಗೆ॥
ಇಂದು ಪಾರಾವಾರದಾಚೆಯ ತೀರವ।
ನೊಂದುವೆ ಸಂಶಯವದಕಿಲ್ಲ॥ ೧

ಆರು ಮುಂದಿ ಕೆಂಬಣ್ಣದ ಸುಭಟರು।
ಪಾರೆಯುನನುದಿನ ಕುಡುತಿಹರು॥
ಘೋರೆನೆ ಮುಂಗಡೆ ಕತ್ತಿಯ ತಿರುಹುತೆ।
ವಾರಿಸುವರು ಖೇಡ್ಯದೆ ಬೆನ್ನ॥ ॥೨॥

ಅವರು ಹೆಬ್ಬಾಗಿಲ ಮುಂದೆ ಕಾವಲ ಕೊಡು।
ತವಿರತವಿರುವರು ತಮ್ಮೆಡೆಗೆ॥
ಜವದೆ ಬರುವರಿಗೆ ರತ್ನವ ಮಾಣಿ।
ಕ್ಯವನತಿಶಯುದಲಿ ಸೂಸುವರು॥ ॥೩॥

ಗಾನ

(“ದೂರು ಮಾಡುವರೇನೊ। ರಂಗಯ್ಯನ ದೂರು ಮಾಡುವರೇನೋ” ಎಂಬಂತೆ)

ಇದುವೆ ಸುಸಮಯವಯ್ಯಾ। ಮನೆಯ ಮೇಲು। ಹೊದಿಕೆಯ ಸರಿಪಡಿಸೆ॥
ಅದುಬುತವೆನೆ ಸುರಿ।ವುದು ಮಳೆಯೀಸಾರಿ। ಸದರವಲ್ಲವುಯೆಚ್ಚ। ರದೊಳಿರುವುದು ನೀನು॥೧॥

ಕುಡಿಯೊ ಶುಂಠಿಯ ನೀರ। ಶ್ರಾವಣ ಬರೆ। ಹಿಡಿವುದು ಮಳೆಯು ಪೂರ॥
ಒಡನೆ ಕೊಳೆತು ತೀರು। ಕೆಡೆವುದು ನೀ ಸರಿ। ಪಡಿಸಲು ಸೂರೆಂ। ತೆಡೆಗುಡುವುದು ಹೇಳು॥೨॥

ಗಾಳಿಯು ಬೀಸಿದೊಡೆ। ಸೂರಿನ ಬೆನ್ನು। ಮೇಲಕೆ ಹಾರುವುದು॥
ಮೇಲೆ ಹಾರಲು ಸೂರು। ಕೇಳು ಮನೆಯು ಸೋರಿ। ಹಾಳು ಬೀಳುವುದು ನೀ। ಹಾಳಾಗಿ ಹೋಗುವೆ॥೩॥

(‘ಇಂದೀವರಾಕ್ಷಗೇ’ ಎಂಬ ಮಂಗಳದ ಮಟ್ಟಿನಂತೆ)

ಆವ ಭಾವದೆ ಬಂದೆ ನದಿಯುಕೀಗೆಲೆ ತಂದೆ।
ಯೀವಿಧದ ತಿರುಕಲಾ ವೇಷದಲ್ಲಿ।
ಭಾವಿಸಲು ಹರಿರೂಪನಾದ ನೀ ಹರಿಯೆಂದು।
ಜೀವಿಗಳ ಬಗೆಯೊಳಗೆ ಭಕ್ತಿದೋರಿಸುತ ॥೧॥

ರಾಧೆಯಾ ಭಾವವೋ ಕೃಷ್ಣನಾ ಭಾವವೋ।
ಮೇದಿನಿಗೆ ನೀನಾವ ಭಾವದಿಂದ॥
ಆದರದಿನೈತಂದೆಯೆಲೆ ತಂದೆ ಪೇಳಲೇ।
ನಾದೊಡಂ ನಾನರಿಯೆನಿಂತೆಂಬುದ॥೨॥

ಭಗವಾನರು ಈ ಗಾನವನ್ನು ಕೇಳುತ್ತಿರುವಾಗ, ಶ್ರೀಯುತ ಕೇದಾರಚಾಟರ್ಜಿಯು ಬಂದು ಸಾಷ್ಟಾಂಗನಮಸ್ಕಾರಮಾಡಿದನು. ಅವನು ಕಚೇರಿಯ ವೇಷದಲ್ಲಿಯೇ ಬಂದಿದ್ದನು. ನಿಲುವಂಗಿಯನ್ನು ತೊಟ್ಟಿದ್ದನು. ಗಡಿಯಾರವೂ ಸರಪಣಿಯೂ ಇದ್ದುವು. ಭಗವಂತನ ಮಾತು ಕಿವಿಗೆ ಬಿದ್ದ ಕೂಡಲೇ, ಅವನು

ಕಣ್ಣೀರಿನಲ್ಲಿ ತೇಲಿಹೋಗುತ್ತಿದ್ದನು. ಅವನು ಬಹು ಪ್ರೇಮವುಳ್ಳ ಮನುಷ್ಯ. ಅವನಿಗೆ ಅಂತರಂಗದಲ್ಲಿ ಗೋಪಿಯ ಭಾವ.

ಅವನನ್ನು ನೋಡಿದ ಕೂಡಲೇ, ಭಗವಾನರಿಗೆ ಬೃಂದಾವನದ ಲೀಲೆಯು ಉದ್ದೀಪನವಾಯಿತು. ಅವರು ಎದ್ದು ನಿಂತುಕೊಂಡು, 'ಕೇದಾರ,' ಎಂದು ಕೂಗಿ, ಒಂದು ಗಾನವನ್ನು ಹಾಡಿದರು.

ಎನಿತು ದೂರವೋ ವನವ। ದೆನಿತು ದೂರವೋ।
ಎನತಂ ಶ್ಯಾಮಸುಂದರನಿಹ। ವನಕೆ ನಡೆಯಲಾರೆನಕ್ಕ॥

ಈ ರೀತಿ ಶ್ರೀರಾಧೆಯ ಭಾವದಲ್ಲಿ ಹಾಡುತ್ತ, ಭಗವಾನರು ಸಮಾಧಿಸ್ಥರಾಗಿ ಚಿತ್ರಾರ್ಪಿತಪ್ರತಿಮೆಯಂತೆ ನಿಂತರು. ಅವರ ಕಡೆಗಣ್ಣುಗಳಿಂದ ಆನಂದಬಾಷ್ಪವು ಸುರಿಯುತ್ತಿದ್ದಿತು.

ಕೇದಾರನು ಅವರ ಚರಣಗಳನ್ನು ಹಿಡಿದುಕೊಂಡು ನಮಸ್ಕಾರಮಾಡಿ,

ಶ್ಲೋಕ॥ ಹೃದಯಕಮಲಮಧ್ಯೇ ನಿರ್ವಿಶೇಷಂ ನಿರೀಹಂ।
ಹರಿಹರವಿಧಿವೇದ್ಯಂ ಯೋಗಿಭಿರ್ಧ್ಯಾನಗಮ್ಯಂ॥
ಜನನಮರಣಭೀತಿಭ್ರಂಶಿ ಸಚ್ಚಿತ್ಸ್ವರೂಪಂ।
ಸಕಲಭುವನಬೀಜಂ ಬ್ರಹ್ಮ ಚೈತನ್ಯಮೀಡೇ॥

ಹೃದಯಕಮಲಮಧ್ಯದಲ್ಲಿ ನಿರ್ವಿಶೇಷನಾದ, ಆಕಾರರಹಿತನಾದ, ಹರಿಹರ ಬ್ರಹ್ಮರಿಗೆ ವೇದ್ಯನಾದ, ಯೋಗಿಧ್ಯಾನಗಮ್ಯನಾದ, ಜನನಮರಣಭಯವಿನಾಶಕನಾದ, ಸಚ್ಚಿದಾನಂದಸ್ವರೂಪನಾದ, ಸಕಲಭುವನಕ್ಕೂ ಕಾರಣಭೂತನಾದ, ಜ್ಞಾನಸ್ವರೂಪನಾದ ಬ್ರಹ್ಮನನ್ನು ಸ್ತುತಿಸುತ್ತೇನೆ, ಎಂಬ ಶ್ಲೋಕವನ್ನು ಹೇಳಿದನು.

ಬಳಿಕ ಭಗವಾನರು ಸ್ವಲ್ಪ ಪ್ರಕೃತಿಸ್ಥರಾದರು. ಕೇದಾರನು ಹಲಿಸಹರಿನ ತನ್ನ ಮನೆಯಿಂದ ಕಲಿಕತೆಗೆ ಉದ್ಯೋಗಕ್ಕೆ ಹೋಗುತ್ತಾನೆ. ಹಾಗೆಯೇ ಹಾದಿಯಲ್ಲಿರುವ ದಕ್ಷಿಣೇಶ್ವರಕ್ಕೆ ಬಂದು, ಶ್ರೀರಾಮಕೃಷ್ಣರನ್ನು ದರ್ಶನಮಾಡಿಕೊಂಡು ಹೋಗುತ್ತಾನೆ. ಸ್ವಲ್ಪವಿಶ್ರಾಂತನಾಗಿ, ಕೇದಾರನು ಹೋಗಿ ಬರುವುದಕ್ಕೆ ಭಗವಾನರ ಅಪ್ಪಣೆಯನ್ನು ಪಡೆದನು.

ಶ್ರೀರಾಮಕೃಷ್ಣರು ಭಕ್ತರೊಂದಿಗೆ ಮಾತನಾಡುತ್ತಿರುವಾಗ, ಹನ್ನೆರಡು ಗಂಟೆಯು ಹೊಡೆಯಿತು. ಶ್ರೀಯುತ ರಾಮಲಾಲನು ಭಗವಾನರಿಗೆ ತಟ್ಟೆಯಲ್ಲಿ ಕಾಳಿಯ ಪ್ರಸಾದವನ್ನು ತಂದುಕೊಟ್ಟನು ಅದನ್ನು ಭಗವಾನರು ತಮ್ಮ ಕೊಟ್ಟಡಿಯಲ್ಲಿ ದಕ್ಷಿಣಾಸ್ಯರಾಗಿ ಆಸನದಲ್ಲಿ ಕುಳಿತುಕೊಂಡೇ ಸ್ವೀಕಾರಮಾಡಿ, ಮಕ್ಕಳಂತೆ ಕೊಂಚಕೊಂಚವಾಗಿ ಬಾಯಿಗೆ ಹಾಕಿಕೊಂಡರು. ಆಹಾರಾಂತದಲ್ಲಿ ಭಗವಾನರು

ಚಿಕ್ಕ ಮಂಚದ ಮೇಲೆ ವಿಶ್ರಮಿಸಿಕೊಂಡರು. ಕೊಂಚ ಹೊತ್ತಿನ ಮೇಲೆ ಕೆಲವರು ಮಾಡೋಯಾರೀ ಭಕ್ತರು ಬಂದರು.

ಪಂಚಮ ಪರಿಚ್ಛೇದ

(ಅಭ್ಯಾಸಯೋಗ, ವಿಚಾರ ಮತ್ತು ಭಕ್ತಿಮಾರ್ಗಗಳು.)

ಮೂರು ಗಂಟೆಯ ಹೊತ್ತು. ಮಾಡೋಯಾರೀ ಭಕ್ತರು ನೆಲದ ಮೇಲೆ ಕುಳಿತುಕೊಂಡು, ಭಗವಾನರಿಗೆ ಪ್ರಶ್ನೆಯನ್ನು ಹಾಕುತ್ತಿದ್ದಾರೆ. ಮಾಸ್ಟರ್, ರಾಖಾಲ ಮುಂತಾದ ಇತರಭಕ್ತರೂ ಕೊಟ್ಟಡಿಯಲ್ಲಿ ಇದ್ದಾರೆ.

ಮಾಡೋಯಾರೀ ಭಕ್ತ :—ಸ್ವಾಮೀ, ಭಗವಂತನನ್ನು ಪಡೆಯುವುದಕ್ಕೆ ಉಪಾಯವೇನು ?

ಶ್ರೀರಾಮಕೃಷ್ಣ :—ವಿಚಾರ ಮಾರ್ಗ, ಅನುರಾಗ ಅಥವಾ ಭಕ್ತಿಮಾರ್ಗವೆಂಬ ಎರಡು ಮಾರ್ಗಗಳುಂಟು. ಸದಸದ್ವಿಚಾರವೆಂದರೇನು ? ಭಗವಂತನೊಬ್ಬನೇ ಸತ್, ಎಂದರೆ ನಿತ್ಯವಸ್ತು, ಮಿಕ್ಕುವೆಲ್ಲವೂ ಅಸತ್, ಎಂದರೆ ಅನಿತ್ಯವಸ್ತು, ಐಂದ್ರಜಾಲಿಕನು ಸತ್ಯ, ಇಂದ್ರಜಾಲವು ಮಿಥ್ಯೆ, ಇದೇ ವಿಚಾರ. ವಿವೇಕವೈರಾಗ್ಯಗಳಾವುವು ? ಈ ಸದಸದ್ವಿಚಾರದ ಹೆಸರೇ ವಿವೇಕ. ಸಂಸಾರವಿಷಯಗಳ ಮೇಲಣ ವಿರಕ್ತಿಯೇ ವೈರಾಗ್ಯ. ಇದು ಒಂದೇ ಸಲಕ್ಕೆ ಬರುವುದಿಲ್ಲ. ನಿತ್ಯವೂ ಅಭ್ಯಾಸಮಾಡಬೇಕು. ಕಾಮಿನೀಕಾಂಚನಗಳನ್ನು ಮೊತ್ತ ಮೊದಲು ಮನಸ್ಸಿಂದ ತ್ಯಾಗಮಾಡಬೇಕು. ಆಮೇಲೆ ಭಗವಂತನ ಕೃಪೆಯಿಂದ ಮಾನಸಿಕವಾಗಿಯೂ ಅವುಗಳನ್ನು ತ್ಯಜಿಸಬಹುದು, ಬಾಹ್ಯವಾಗಿಯೂ ತ್ಯಜಿಸಬಹುದು. 'ಈಶ್ವರನಿಗಾಗಿ ಎಲ್ಲವನ್ನೂ ತ್ಯಾಗಮಾಡಿರಿ,' ಎಂದು ಕಲಿಕತೆಯ ಜನರಿಗೆ ಹೇಳಬಾರದು. ಆದರೆ, 'ಮನಸ್ಸಿನಲ್ಲಿ ತ್ಯಾಗಮಾಡಿರಿ,' ಎಂದು ಹೇಳಬೇಕು.

ಅಭ್ಯಾಸಯೋಗದ ಮೂಲಕವಾಗಿ ಕಾಮಿನೀಕಾಂಚನದ ಆಸಕ್ತಿಯನ್ನು ತ್ಯಾಗ ಮಾಡಬಹುದು. ಈ ಮಾತು ಗೀತೆಯಲ್ಲಿದೆ.

ಅಭ್ಯಾಸದಿಂದ ಮನಸ್ಸಿಗೆ ಅಸಾಧಾರಣವಾದ ಶಕ್ತಿಯುಂಟಾಗುತ್ತದೆ. ಆಗ ಇಂದ್ರಿಯಸಂಯಮನವು ಕಷ್ಟವಿಲ್ಲ, ಎಂದರೆ ಕಾಮಕ್ರೋಧಗಳನ್ನು ವಶಪಡಿಸಿಕೊಳ್ಳುವುದು ಕಷ್ಟವಲ್ಲ. ಆಮೆಯು ಕೈಕಾಲುಗಳನ್ನು ಮುದುರಿಕೊಂಡು ಬಿಟ್ಟರೆ, ಅದನ್ನು ಕೊಡಲಿಯಿಂದ ನಾಲ್ಕು ತುಂಡುಗಳಾಗಿ ಕಡಿದರೂ ಕೈಕಾಲುಗಳನ್ನು ಹೊರಗೆ ಬಿಡುವುದಿಲ್ಲ.

ಮಾಡೋಯಾರೀ ಭಕ್ತ:—ಸ್ವಾಮೀ, ಎರಡು ದಾರಿಗಳಿವೆಯೆಂದು ತಾವು ಅಪ್ಪಣೆಕೊಡಿಸೋಣವಾಯಿತು. ಮತ್ತೊಂದು ದಾರಿಯಾವುದು?

ಶ್ರೀರಾಮಕೃಷ್ಣ:—ಅನುರಾಗ ಅಥವಾ ಭಕ್ತಿಮಾರ್ಗ. 'ಹೇ ಭಗವಂತ! ನಿನ್ನ ದರ್ಶನವನ್ನು ಕರುಣಿಸು,' ಎಂದು ರಹಸ್ಯವಾಗಿ ವ್ಯಾಕುಲತೆಯಿಂದ ಒಂದು ಬಾರಿ ಕ್ರಂದಿಸುವುದು.

ಕೂಗು ಕೂಗು ಮನುಜಾ। ನಿಜದಿಂ। ಕೂಗುವ ರೀತಿಯಲಿ।
ಕೂಗು ಶ್ಯಾಮ ತಾಂ। ಬೇಗನೆ ನಿನ್ನೆಡೆ।ಗಾಗಿ ಬಾರದೆಯೆ। ಹೋಗುವಳಲ್ಲವು॥

ಮಾಡೋಯಾರೀಭಕ್ತ:—ಮಹಾಶಯರೇ, ಸಾಕಾರಪೂಜೆಯೆಂದರೇನು? ನಿರಾಕಾರ ಅಥವಾ ನಿರ್ಗುಣ ಪೂಜೆಯೆಂದರೇನು?

ಶ್ರೀರಾಮಕೃಷ್ಣ:—ತಂದೆಯ ಫೋಟೋವನ್ನು ನೋಡಿದರೆ, ತಂದೆಯೇ ಮನಸ್ಸಿಗೆ ಬರುವುದಿಲ್ಲವೇ? ಪ್ರತಿಮೆಯ ಪೂಜೆಯನ್ನು ಮಾಡುತ್ತ ಮಾಡುತ್ತ, ಸತ್ಯವಾದ ದೇವರ ರೂಪವು ಉದ್ದೀಪನವಾಗುತ್ತದೆ.

ಸಾಕಾರರೂಪವು ಹೇಗೆ ಗೊತ್ತೇ? ಸಮುದ್ರಮಧ್ಯದಲ್ಲಿ ಗುಳ್ಳೆಗಳು ಏಳುವಂತೆ ಮಹಾಕಾಶಚಿದಾಕಾಶಗಳಿಂದ ಒಂದೊಂದು ರೂಪವೂ ಏಳುವುದನ್ನು ನೋಡಬಹುದು. ಅವತಾರವೂ ಒಂದು ರೂಪು. ಅವತಾರ ಲೀಲೆಯು ಆದ್ಯಾಶಕ್ತಿಯ ಆಟ.

(ಪಾಂಡಿತ್ಯ. ನಾನು ಆರು? ನಾನೇ ನೀನು.)

ಪಾಂಡಿತ್ಯದಲ್ಲಿ ಏನಿದೆ? ವ್ಯಾಕುಲತೆಯಿಂದ ಕೂಗಿದರೆ, ಭಗವಂತನನ್ನು ಪಡೆಯಬಹುದು. ನಾನಾ ವಿಷಯಗಳನ್ನು ತಿಳಿಯಬೇಕಾದುದಿಲ್ಲ.

ಆಚಾರ್ಯನಾಗಬೇಕೆನ್ನುವನು ನಾನಾವಿಷಯಗಳನ್ನು ತಿಳಿಯುವುದು ಅವಶ್ಯಕ. ತನ್ನನ್ನು ಕೊಂದುಕೊಳ್ಳುವುದಕ್ಕೆ ಒಂದು ಸಣ್ಣ ಸೂಜಿಯೇ ಸಾಕು. ಇನ್ನೊಬ್ಬರನ್ನು ವಧಿಸಬೇಕಾದರೆ ಕತ್ತಿಗುರಾಣಿಗಳಾಗಬೇಕು.

'ನಾನು ಆರು?,' ಎಂದು ಹುಡುಕುತ್ತ ಹೋದರೆ, ಭಗವಂತನನ್ನು ಪಡೆಯಬಹುದು. 'ನಾನು,' ಎಂಬುದು ಮನಸ್ಸೇ? ಬುದ್ಧಿಯೇ? ಮಾಂಸವೇ? ಎಲುಬೇ? ಮಜ್ಜೆಯೇ? ರಕ್ತವೇ? ಈ ರೀತಿ ವಿಚಾರಮಾಡುತ್ತ ಹೋದರೆ, ಕೊನೆಗೆ 'ನಾನು,' ಎಂಬುದಾವುದೂ ಅಲ್ಲ. ಇದೀಗ ವೇದಾಂತಿಗಳ 'ನೇತಿ, ನೇತಿ' ವಿಚಾರ. ಭಗವಂತನನ್ನು ಹಿಡಿಯುವುದಕ್ಕಾಗಲಿ, ಮುಟ್ಟುವುದಕ್ಕಾಗಲಿ ಆಗುವುದಿಲ್ಲ. ಅವನು ನಿರ್ಗುಣನು, ಉಪಾಧಿರಹಿತನು. ಭಕ್ತರ

ಮತದಲ್ಲಿ ಅವನು ಸಗುಣನು. ದೇವರು ಚಿನ್ಮಯ, ದೇವಾಲಯವೂ ಚಿನ್ಮಯ, ಎಲ್ಲವೂ ಚಿನ್ಮಯ.

ಮಾಡೋಯಾರೀಭಕ್ತರು ಭಗವಾನರಿಗೆ ನಮಸ್ಕಾರಮಾಡಿ, ಹೊರಡುವುದಕ್ಕೆ ಅಪ್ಪಣೆಯನ್ನು ತೆಗೆದುಕೊಂಡರು.

(ದಕ್ಷಿಣೇಶ್ವರದಲ್ಲಿ ಸಂಧ್ಯಾಕಾಲದ ಆರತಿ)

ಸಂಜೆಯಾಯಿತು. ಭಗವಾನರು ಗಂಗಾದರ್ಶನವನ್ನು ಮಾಡುತ್ತಾರೆ. ಕೊಟ್ಟಡಿಯಲ್ಲಿ ದೀಪವನ್ನು ಹೊತ್ತಿಸಿದರು. ಪರಮಹಂಸರು ಜಗನ್ಮಾತೆಯ ನಾಮೋಚ್ಚಾರಣೆ ಮಾಡಿ, ಮಂಚದ ಮೇಲೆ ಕುಳಿತು, ಭಗವಂತನನ್ನು ಧ್ಯಾನಮಾಡುತ್ತಿದ್ದಾರೆ.

ಈಗ ದೇವಾಲಯದಲ್ಲಿ ಆರತಿಯಾಗುತ್ತದೆ. ಗಂಗೆಯ ಕಟ್ಟೆಯ ಮೇಲೆಯೂ, ಪಂಚವಟಿಯಲ್ಲಿಯೂ, ಇತರ ಸ್ಥಲಗಳಲ್ಲಿಯೂ ತಿರುಗಾಡುತ್ತಿದ್ದವರು, ಆರತಿಯ ಮಧುರಸ್ವರವನ್ನು ದೂರದಿಂದಲೇ ಕೇಳಿದರು. ನದಿಯು ಉಕ್ಕುತ್ತ ಬಂದಿದೆ. ಭಾಗೀರಥಿಯು ಕಲಕಲನಾದದೊಡನೆ ಉತ್ತರದಿಕ್ಕಿಗೆ ಹರಿಯುತ್ತಿದೆ. ಆರತಿಯ ಮಧುರಸ್ವರವು ಈ ಕಲಕಲನಾದದೊಡನೆ ಸೇರಿ, ಇನ್ನೂ ಮಧುರವಾಯಿತು. ಶ್ರೀರಾಮಕೃಷ್ಣರು ಎಲ್ಲರ ಮಧ್ಯದಲ್ಲಿಯೂ ಪ್ರೇಮೋನ್ಮತ್ತರಾಗಿ ಕುಳಿತಿದ್ದಾರೆ. ಎಲ್ಲವೂ ಮಧುರ, ಹೃದಯವು ಮಧುಮಯ; ಮಧು, ಮಧು, ಮಧು.

ಹನ್ನೆರಡನೆಯ ಖಂಡ

ಭಗವಾನ್ ಶ್ರೀರಾಮಕೃಷ್ಣರು ದಕ್ಷಿಣೇಶ್ವರಮಂದಿರದಲ್ಲಿ ರಾಖಾಲ, ರಾಮ, ನೃತ್ಯಗೋಪಾಲ, ಚೌಧುರೀ ಮುಂತಾದ ಭಕ್ತರೊಡನೆ.

ಪ್ರಥಮ ಪರಿಚ್ಛೇದ

(ನಿರ್ಜನದಲ್ಲಿ ಸಾಧನೆ, ತತ್ವಶಾಸ್ತ್ರ, ಈಶ್ವರದರ್ಶನ)

ಭಗವಾನ್ ಶ್ರೀರಾಮಕೃಷ್ಣರವರು ಆ ಪೂರ್ವಪರಿಚಿತವಾದ ಕೊಟ್ಟಡಿಯಲ್ಲಿ ಮಧ್ಯಾಹ್ನದ ಭೋಜನವಾದ ಮೇಲೆ ಭಕ್ತರೊಡನೆ ಕುಳಿತಿದ್ದಾರೆ. ಇಂದು ೧೮೮೩ ನೆಯ ಕ್ರಿಸ್ತಾಬ್ದ, ಫೆಬ್ರವರಿ ೨೫ ನೆಯ ತೇದಿ.

ಈಗ ರಾಖಾಲ, ಹರೀಶ, ಲಾಟೂ, ಹಾಜರಾ ಮುಂತಾದವರು ಭಗವಾನರ ಪದಚ್ಛಾಯೆಯಲ್ಲಿಯೇ ಸದಾ ವಾಸಮಾಡಿಕೊಂಡಿದ್ದಾರೆ. ಕಲಿಕತೆಯಿಂದ ರಾಮ, ಕೇದಾರ, ನೃತ್ಯಗೋಪಾಲ, ಮಾಸ್ಟರ್ ಮುಂತಾದ ಭಕ್ತರು ಬಂದಿದ್ದಾರೆ. ಚೌಧುರಿಯೂ ಬಂದಿದ್ದಾನೆ.

ಈಗ ಚೌಧುರಿಗೆ ಪತ್ನೀವಿಯೋಗವಾಗಿದೆ. ಮನಸ್ಸಿಗೆ ಶಾಂತಿಯುಂಟಾಗುವುದಕ್ಕಾಗಿ ಆತನು ಅಡಿಗಡಿಗೆ ಭಗವಾನರನ್ನು ದರ್ಶನಮಾಡುವುದಕ್ಕೆ ಬರುತ್ತಾನೆ. ಅವನು ಎಂ. ಎ. ಪ್ಯಾಸುಮಾಡಿದ್ದಾನೆ. ಅವನಿಗೆ ರಾಜಸರ್ಕಾರದಲ್ಲಿ ಉದ್ಯೋಗವಿದೆ.

ಶ್ರೀರಾಮಕೃಷ್ಣ :—(ರಾಮಪ್ರಭೃತಿ ಭಕ್ತರನ್ನು ಕುರಿತು) ರಾಖಾಲ, ನರೇಂದ್ರ, ಭವನಾಥ ಇವರು ನಿತ್ಯಸಿದ್ಧರು. ಹುಟ್ಟಿದಂದಿನಿಂದಲೂ ಜ್ಞಾನಿಗಳು; ಲೋಕಶಿಕ್ಷೆಗಾಗಿಯೇ ಇವರು ಶರೀರವನ್ನು ಧಾರಣೆಮಾಡಿದ್ದಾರೆ.

ಕೃಪಾಸಿದ್ಧರೆಂಬ ಮತ್ತೊಂದು ತರಗತಿಯೂ ಉಂಟು. ಹಠಾತ್ತಾಗಿ ಭಗವಂತನ ಕೃಪೆಯುಂಟಾದರೆ, ಆಗಲೇ ಅವನ ದರ್ಶನವಾಗುತ್ತದೆ. ಜ್ಞಾನಲಾಭವೂ ಉಂಟಾಗುತ್ತದೆ. ಸಾವಿರ ವರ್ಷಗಳಿಂದ ಕತ್ತಲೆ ತುಂಬಿದ ಕೋಣೆಗೆ ಬೆಳಕನ್ನು ತೆಗೆದುಕೊಂಡುಹೋದರೆ, ಒಡನೆಯೇ ಎಲ್ಲವೂ ಬೆಳಕಾಗಿ ಹೋಗುತ್ತದೆ. ಕೊಂಚ ಕೊಂಚವಾಗಿ ಆಗುವುದಿಲ್ಲ.

ಸಂಸಾರದಲ್ಲಿ ಇರುವವರು ಸಾಧನೆಯನ್ನು ಮಾಡಬೇಕು, ನಿರ್ಜನಪ್ರದೇಶಕ್ಕೆ ಹೋಗಿ ವ್ಯಾಕುಲತೆಯಿಂದ ಭಗವಂತನಿಗೆ ಮೊರೆಯಿಡಬೇಕು.

(ಚೌಧುರಿಯನ್ನು ಕುರಿತು) ಪಾಂಡಿತ್ಯದ ಮೂಲಕ ಭಗವಂತನನ್ನು ಹೊಂದುವುದಕ್ಕೆ ಆಗುವುದಿಲ್ಲ. ವಿಚಾರಮಾಡಿ ಅವನ ವಿಷಯವನ್ನು ಆರು ತಾನೇ ತಿಳಿದುಕೊಂಡಾರು? ಹೇಗರಿಂದ ಅವನ ಪಾದಪದ್ಮದಲ್ಲಿ ಭಕ್ತಿಯುಂಟಾಗುತ್ತದೆಯೋ, ಅದನ್ನು ಎಲ್ಲರೂ ಮಾಡುವುದು ಉಚಿತ.

(ಭೀಷ್ಮದೇವನ ಅಳುವಿಕೆ, ಸೋಲೂ ಗೆಲವೂ, ದಿವ್ಯಚಕ್ಷುಸ್ಸೂ ಗೀತೆಯೂ)

ಭಗವಂತನ ಅನಂತವಾದ ಐಶ್ವರ್ಯವನ್ನು ಆರು ತಿಳಿಯಬಲ್ಲರು? ಅವನ ಕಾರ್ಯವನ್ನು ಆರು ತಾನೇ ಅರಿಯಲಿಕ್ಕಾದೀತು?

ಭೀಷ್ಮದೇವನು ಸಾಕ್ಷಾದಷ್ಟವಸುಗಳೊಳಗೆ ಒಬ್ಬ ವಸು. ಆತನು ಕೂಡ ಶರಶಯ್ಯೆಯಲ್ಲಿ ಮಲಗಿ, 'ಇದೇನು ಆಶ್ಚರ್ಯ! ಪಾಂಡವರೊಡನೆ ಭಗವಂತನು ತಾನೇ ಸದಾ ಇದ್ದಾನೆ. ಆದರೂ, ಅವರ ದುಃಖಕ್ಕೂ ವಿಪತ್ತಿಗೂ ಕೊನೆಯೇ ಇಲ್ಲವಲ್ಲ! ಭಗವಂತನ ಕಾರ್ಯವನ್ನು ಆರು ಬಲ್ಲರು?' ಎಂದು ಅತ್ತನು.

'ನಾನು ಕೊಂಚ ಸಾಧನೆ ಭಜನೆಗಳನ್ನು ಮಾಡಿದ್ದೇನೆ, ನಾನು ಜಯಿಸಿದ್ದೇನೆ,' ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ ಸೋಲೂ ಗೆಲವೂ ಈಶ್ವರಾಧೀನ. ಒಬ್ಬ ಸೂಳೆಯು ಒಳ್ಳೆಯ ಜ್ಞಾನದಿಂದ ದೇಹತ್ಯಾಗಮಾಡಿದಳು.

ಚೌಧುರೀ :—ಭಗವಂತನನ್ನು ಹೇಗೆ ದರ್ಶನಮಾಡಲಾಗುತ್ತದೆ?

ಶ್ರೀರಾಮಕೃಷ್ಣ :—ಈ ಕಣ್ಣುಗಳಿಂದ ದರ್ಶನಮಾಡುವುದಕ್ಕಾಗುವುದಿಲ್ಲ. ಅವನು ದಿವ್ಯದೃಷ್ಟಿಯನ್ನು ಕೊಡುತ್ತಾನೆ. ಆಗ ನೋಡಬಹುದು. ವಿಶ್ವರೂಪವನ್ನು ದರ್ಶನಮಾಡುವ ವೇಳೆಯಲ್ಲಿ ಭಗವಂತನು ಅರ್ಜುನನಿಗೆ ದಿವ್ಯದೃಷ್ಟಿಯನ್ನು ಅನುಗ್ರಹಿಸಿದನು.

ನಿಮ್ಮ ತತ್ವಶಾಸ್ತ್ರದಲ್ಲಿ ಬರಿಯ ಲೆಕ್ಕಾಚಾರದ ಮಾತೇ, ಬರಿಯ ವಿಚಾರವೇ ಇದೆ, ಆದರಿಂದ ಭಗವಂತನನ್ನು ಪಡೆಯುವುದಕ್ಕಾಗುವುದಿಲ್ಲ.

(ಅಹೇತುಕೀಭಕ್ತಿ, ರಾಗಾನುಗಾಭಕ್ತಿಯೇ ಮೂಲತತ್ವ)

ರಾಗಭಕ್ತಿ, ಎಂದರೆ ಅನುರಾಗದಿಂದ ಕೂಡಿದ ಭಕ್ತಿಯನ್ನು ಮಾಡಿದರೆ, ಆಗ ಭಗವಂತನು ತನ್ನ ಪಾಡಿಗೆ ಸುಮ್ಮನೆ ದೂರದಲ್ಲಿ ನಿಂತಿರುವುದಕ್ಕೆ ಆಗುವುದಿಲ್ಲ. ಭಕ್ತಿಯು ಅವನಿಗೆ ಎಷ್ಟು ಪ್ರಿಯ, ಬಲ್ಲೆಯಾ? ನೆನೆಸಿದ ಜೋಳದ ಕಡ್ಡಿಯನ್ನೂ, ಹಿಂಡಿಯನ್ನೂ ಕಂಡರೆ, ಹಸುವು ಎಷ್ಟು ಪ್ರಿಯದಿಂದ 'ಗಬ, ಗಬ', ಎಂದು ತಿನ್ನುತ್ತದೆ, ನೋಡು, ಅಷ್ಟು ಪ್ರೀತಿ.

ಪ್ರಹ್ಲಾದನಂತೆ ರಾಗಾಭಕ್ತಿ, ಶುದ್ಧಭಕ್ತಿ, ಅಹೇತುಕೀಭಕ್ತಿಗಳು ಇರಬೇಕು. ನೀನು ದೊಡ್ಡಮನುಷ್ಯರಿಂದ ಆವುದನ್ನೂ ಬಯಸಬೇಡ. ಆದರೂ ನಿತ್ಯವೂ ಅವರ ಬಳಿಗೆ ಹೋಗುತ್ತಿರು. ಅವರನ್ನು ನೋಡಿ ಪ್ರೀತಿಸು. ಅವರು ನಿನ್ನನ್ನು, 'ಏನ ಬೇಕು?' ಎಂದು ಕೇಳಿದರೆ, 'ಮಹಾಸ್ವಾಮೀ, ನನಗೆ ಏನೂ ಬೇಡ, ತಮ್ಮನ್ನು ನೋಡಿಕೊಂಡು ಹೋಗುವುದಕ್ಕೆ ಬಂದೆ,' ಎಂದು ಹೇಳು. ಇದೇ ಅಹೇತುಕೀಭಕ್ತಿ. ನೀನು ಈಶ್ವರನಿಂದ ಆವುದನ್ನೂ ಬಯಸಬೇಡ. ಸುಮ್ಮನೆ ಅವನನ್ನು ಪ್ರೀತಿಸು.

ಹೀಗೆಂದು ಹೇಳಿ ಭಗವಾನರು

ಮುಕ್ತಿಯನ್ನು ಕೊಡುವೊಡೆನಗೆ ಭೀತಿಯಿಲ್ಲವು ಶುದ್ಧ ।
ಭಕ್ತಿಯನ್ನು ಕೊಡುವೊಡಾನು ಭೀತನಪ್ಪೆನು ॥

ಎಂದು ಹಾಡಿದರು.

ಶ್ರೀರಾಮಕೃಷ್ಣ :—ಮೂಲತತ್ವ, ಈಶ್ವರನಲ್ಲಿ ರಾಗದಿಂದ ಕೂಡಿದ ಭಕ್ತಿ ಮತ್ತು ವಿವೇಕ ವೈರಾಗ್ಯಗಳು.

ಚೌಧುರೀ :—ಮಹಾಶಯರೇ, ಗುರುವಿಲ್ಲದಿದ್ದರೆ ಏನೂ ಆಗುವುದಿಲ್ಲವೋ?

ಶ್ರೀರಾಮಕೃಷ್ಣ :—ಸಚ್ಚಿದಾನಂದನೇ ಗುರು.

ಶವಸಾಧನೆಯನ್ನು ಮಾಡುವಾಗ ಇಷ್ಟದೇವತಾದರ್ಶನದ ಸಮಯದಲ್ಲಿ ಗುರುವು ಇದಿರಿಗೆ ಬಂದು ನಿಂತು, 'ಇದೇ ನಿನ್ನ ಇಷ್ಟದೇವತೆ, ನೋಡು,' ಎಂದು ತೋರಿಸಿ ಆ ಇಷ್ಟದೇವತೆಯಲ್ಲಿಯೇ ಅಡಗಿಹೋಗುತ್ತಾನೆ. ಆವನು ಗುರುವೋ, ಅವನೇ ಇಷ್ಟದೇವತೆ. ಗುರುವು ಭಗವಂತನ ಬಳಿಗೆ ಹೋಗುವ ದಾರಿದೋರಿಸತಕ್ಕ ದಾರವನ್ನು ನಮ್ಮ ಕಯ್ಯಲ್ಲಿ ಕೊಡುತ್ತಾನೆ.

ಅನಂತವ್ರತವನ್ನು ಮಾಡುತ್ತಾರೆ. ಆದರೆ ವಿಷ್ಣುವನ್ನು ಪೂಜಿಸುತ್ತಾರೆ. ಅವನ ಮಧ್ಯದಲ್ಲಿಯೇ ಈಶ್ವರನ ಅನಂತರೂಪ.

(ಶ್ರೀರಾಮಕೃಷ್ಣರ ಸರ್ವಧರ್ಮಸಮನ್ವಯ)

ಶ್ರೀರಾಮಕೃಷ್ಣ :—(ರಾಮಾದಿಭಕ್ತರನ್ನು ಕುರಿತು) ಆರಾರಿಗೆ ಆವಾವ ಮೂರ್ತಿಯು ಇಷ್ಟವೋ, ಅವರವರು ಆಯಾ ಮೂರ್ತಿಯನ್ನು ಧ್ಯಾನಿಸಬೇಕು. ಆದರೆ ಈ ಎಲ್ಲವೂ ಒಂದೇ ಎಂದು ತಿಳಿದಿರಬೇಕು.

ಆರ ಮೇಲೆಯೂ ದ್ವೇಷವನ್ನು ಮಾಡಬಾರದು. 'ಶಿವ, ಕಾಲೀ, ಹರಿ,' ಇವೆಲ್ಲವೂ ಒಂದರ ಭಿನ್ನಭಿನ್ನರೂಪಗಳು. 'ಇವೆಲ್ಲವೂ ಒಂದೇ,' ಎಂದು ಆವನು ತಿಳಿದುಕೊಂಡಿದ್ದಾನೆಯೋ ಅವನೇ ಧನ್ಯನು.

'ಹೊರಗೆ ಶೈವನೊಳಗೆ ಕಾಳಿ ಹರಿಯು ಮುಖದಲಿ'

ಕಾಮಕ್ರೋಧ ಮುಂತಾದುವು ಕೊಂಚವಿರದಿದ್ದರೆ ಶರೀರವು ನಿಲ್ಲುವುದಿಲ್ಲ. ಆದಕಾರಣ ಅವು ಕಮ್ಮಿಯಾಗುವುದಕ್ಕೋಸ್ಕರ ನೀವು ಯತ್ನಿಸಿರಿ.

(ಕೇದಾರನನ್ನು ನೋಡಿ) ಇವನು ಸರಿ; ನಿತ್ಯವನ್ನೂ ನಂಬುತ್ತಾನೆ, ಲೀಲೆಯನ್ನೂ ನಂಬುತ್ತಾನೆ. ಇತ್ತ ಕಡೆ ಬ್ರಹ್ಮನಿಂದ, ದೇವಲೀಲೆ ಮನುಷ್ಯಲೀಲೆಗಳ ಪರ್ಯಂತ ನಂಬುತ್ತಾನೆ.

'ಭಗವಾನರು ಮನುಷ್ಯದೇಹವನ್ನು ಧಾರಣೆಮಾಡಿಕೊಂಡಿದ್ದಾರೆ,' ಎಂದು ಕೇದಾರನು ಹೇಳಿದನು.

(ಸನ್ಯಾಸಿಯೂ ಸ್ತ್ರೀಭಕ್ತೆಯೂ)

ಶ್ರೀರಾಮಕೃಷ್ಣ :—(ನಿತ್ಯಗೋಪಾಲನನ್ನು ನೋಡುತ್ತ, ಭಕ್ತರಿಗೆ) ಇವನ ಅವಸ್ಥೆಯು ತುಂಬ ಚೆನ್ನಾಗಿದೆ. (ಅವನನ್ನು ನೋಡಿ) ನೀನು ಅಲ್ಲಿಗೆ

ಪೆಚ್ಚಾಗಿ ಹೋಗುತ್ತಿರಬೇಡ. ಅವಾಗಲಾದರೂ ಒಂದು ಸಲ ಹೋಗು. ಭಕ್ತೆಯಾದರೆ ತಾನೇ ಏನು? ಹೆಂಗುಸಲ್ಲವೇ? ಆದುದರಿಂದ ಎಚ್ಚರಿಕೆ!

ಸನ್ಯಾಸಿಗಳ ನಿಯಮವು ಬಹುಕಷ್ಟ. ಚಿತ್ರದಲ್ಲಿ ಬರೆದಿರುವ ಹೆಂಗುಸನ್ನು ಕೂಡ ಅವರು ನೋಡಬಾರದು. ಈ ನಿಯಮವು ಸಂಸಾರಿಗಳಿಗೆ ಇಲ್ಲ.

ಹೆಂಗುಸರು ನಿಜವಾಗಿಯೂ ಭಕ್ತೆಯರೇ ಆಗಿದ್ದರೂ, ಅವರ ಸಂಗಡ ಸೇರುವುದು ಸರಿಯಲ್ಲ.

ಜಿತೇಂದ್ರಿಯರಾದರೂ, ಲೋಕಶಿಕ್ಷೆಗಾಗಿ ತ್ಯಾಗಿಗಳೆಲ್ಲರೂ ಹೀಗಿರಬೇಕು. ಸಾಧುಗಳ ಸಂಪೂರ್ಣತ್ಯಾಗವನ್ನು ಕಂಡರೆ, ಮಿಕ್ಕವರು ತ್ಯಾಗಮಾಡುವುದನ್ನು ಕಲಿಯುತ್ತಾರೆ. ಅದಿಲ್ಲದಿದ್ದರೆ ಅವರೂ ಬಿದ್ದು ಹೋಗುತ್ತಾರೆ. ಸನ್ಯಾಸಿಯು ಜಗದ್ಗುರು.

ಈಗ ಭಗವಾನರೂ ಭಕ್ತರೂ ಎದ್ದು ತಿರುಗಾಡುತ್ತಿದ್ದಾರೆ. ಮಾಸ್ಟರು ಪ್ರಹ್ಲಾದನ ಪಟದ ಮುಂದೆ ನಿಂತುಕೊಂಡು ನೋಡುತ್ತಿದ್ದಾನೆ. ಪ್ರಹ್ಲಾದನ ಅಹೈತುಕೀಭಕ್ತಿಯನ್ನು ಭಗವಾನರು ಹೇಳಿದ್ದರು.

ಹದಿಮೂರನೆಯ ಖಂಡ

ದಕ್ಷಿಣೇಶ್ವರದಲ್ಲಿ ಭಗವಾನ್ ಶ್ರೀರಾಮಕೃಷ್ಣರ ಜನ್ಮೋತ್ಸವ.

ಪ್ರಥಮ ಪರಿಚ್ಛೇದ

ಬೆಳಿಗ್ಗೆ ಭಕ್ತರೊಡನೆ.

ಈ ದಿವಸ ಕಾಳಿಕಾದೇವಾಲಯದಲ್ಲಿ ಶ್ರೀರಾಮಕೃಷ್ಣರ ಜನ್ಮೋತ್ಸವ. ಫಾಲ್ಗುಣ ಶುದ್ಧ ದ್ವಿತೀಯೆ, ರವಿವಾರ, ೧೮೮೩ ನೆಯ ಕ್ರಿಸ್ತಾಬ್ದ ಮಾರ್ಚಿ ತಿಂಗಳ ೧೧ ನೆಯ ತೇದಿ. ಈ ದಿನ ಭಗವಾನರ ಅಂತರಂಗಭಕ್ತರು ಭಗವಾನರನ್ನೇ ಮುಂದಿಟ್ಟುಕೊಂಡು ಅವರ ಜನ್ಮೋತ್ಸವವನ್ನು ನೆರವೇರಿಸುತ್ತಾರೆ.

ಬೆಳಗಿನಿಂದಲೂ ಭಕ್ತರು ಒಬ್ಬೊಬ್ಬರಾಗಿ ಬಂದು ಸೇರುತ್ತ ಇದ್ದಾರೆ. ಇದಿರಿಗೆ ಮಾತೆಯಾದ ಭವತಾರಿಣಿಯ ದೇವಸ್ಥಾನ. ಭಗವತಿಗೆ ಸುಪ್ರಭಾತದ ಮಂಗ

ಆರತಿಯಾದ ಮೇಲೆ, ವಾದ್ಯಶಾಲೆಯಲ್ಲಿ ಸುಸ್ವರವಾಗಿ ಉದಯರಾಗವನ್ನು ಬಾಜಿಸುತ್ತಿದ್ದಾರೆ. ಈಗ ವಸಂತಕಾಲ. ವೃಕ್ಷಲತೆಗಳೆಲ್ಲವೂ ನೂತನವಸ್ತ್ರಧಾರಣವನ್ನು ಮಾಡಿದಂತೆ, ಚಿಗುರಿಡಿದು ಸೊಗಸಾಗಿ ಕಾಣುತ್ತಿವೆ. ಭಕ್ತಜನರ ಹೃದಯಗಳು ಭಗವಾನರವರ ಜನ್ಮಮಹೋತ್ಸವವನ್ನು ನೆನೆಸಿಕೊಂಡು ನರ್ತನಮಾಡುತ್ತಿವೆ. ಭವನಾಥ, ರಾಖಾಲ, ಭವನಾಥನ ಸ್ನೇಹಿತ ಕಾಳೀಕೃಷ್ಣ ಮುಂತಾದವರು ಬಂದಿರುವುದನ್ನು ಮಾಸ್ಟರು ಬಂದು ನೋಡಿದನು. ಆಗ ತಾನೇ ಬೆಳಕು ಹರೆಯುತ್ತಿದ್ದಿತು. ಭಗವಾನರು ಇವರ ಸಂಗಡ ಪೂರ್ವದಿಕ್ಕಿನ ವಾರಾಂಡದಲ್ಲಿ ಕುಳಿತು ನಗುತ್ತ ಮಾತನಾಡುತ್ತಿದ್ದಾರೆ. ಮಾಸ್ಟರು ಭಗವಾನರ ಬಳಿಗೆ ಹೋಗಿ ಸಾಷ್ಟಾಂಗನಮಸ್ಕಾರಮಾಡಿದನು.

ಶ್ರೀರಾಮಕೃಷ್ಣ :—(ಮಾಸ್ಟರೊಡನೆ) ನೀನು ಬಂದೆಯಾ? (ಭಕ್ತರಿಗೆ) ಲಜ್ಜೆ, ದ್ವೇಷ, ಭಯ ಈ ಮೂರೂ ಇರಕೂಡದು. ಈ ದಿನ ಎಷ್ಟು ಆನಂದವಾಗುತ್ತದೆ? ಆವ ಪಾಪಿಗಳು ಹರಿನಾಮದಿಂದ ಮತ್ತರಾಗಿ ನೃತ್ಯಗೀತಗಳನ್ನು ಮಾಡಲಾರರೋ, ಅವರಿಗೆ ಭಗವಂತನು ಎಂದೂ ದೊರೆಯುವುದಿಲ್ಲ. ಈಶ್ವರನ ವಿಷಯವಾದ ಮಾತನ್ನಾಡುವುದಕ್ಕೆ ನಾಚಿಕೆಯೇಕೆ? ಭಯವೇಕೆ? ಈಗ ನೀವು ಹಾಡಿರಿ.

ಭವನಾಥನೂ ಕಾಳೀಕೃಷ್ಣನೂ ಹಾಡುತ್ತಾರೆ

ಹಾಡು

('ಅಹಾ ಇದೇನಿದು ಸಫಲವಾದುದು' ಎಂಬ ಮಟ್ಟಿನಂತೆ)

ಇಂದು ಧನ್ಯರು। ನಾ। ವಿಂದೆ ಸುದಿನವು॥
ಮುಂದೆ ಗುರುವ ನುಡಿಯ ಪರಡ। ಲೆಂದು ನೆರೆದೆವು॥ ॥೧॥

ಎಲ್ಲ ಮನಗಳು। ನೀಂ। ನಿಲ್ಲುವೆಡೆಗಳು॥
ಎಲ್ಲ ಕಡೆಗಳೊಳಗೆ ನಿಮ್ಮ। ಸೊಲ್ಲೆ ಜೀವಿತು॥ ॥೨॥

ಧನಜನಂಗಳ। ನಾ। ವಿನಿತು ಬಯಸೆವು॥
ಘನಮಹಿಮರೆ ನೀವೆ ನಮ್ಮ। ಮನದ ಬಯಕೆಯು॥ ॥೩॥

ಗುರುವೆ ನಿಮ್ಮನು। ನಾಂ। ಶರಣು ಹೊಕ್ಕೆವು॥
ಮರಣ ಕಷ್ಟಭೀತಿಯೆಮ್ಮ। ದಿರದೆ ತೊಲಗಿತು॥ ॥೪॥

ಮುಂದಣ ಗಣಿಯನು। ನಾ। ವಿದಕೊ ಕಂಡೆವು॥
ಸದಯ ಗುರುಗೆ ಜಯವೆನುತ್ತೆ। ಮುದದೆ ಪೇಳ್ವೆವು॥ ॥೫॥

ಭಗವಾನರು ಬದ್ಧಾಂಜಲಿಯಾಗಿ ಕುಳಿತುಕೊಂಡು, ಒಂದೇ ಮನಸ್ಸಿನಿಂದ ಹಾಡನ್ನು ಕೇಳುತ್ತ ಕೇಳುತ್ತ, ಅವರ ಮನಸ್ಸು ಒಮ್ಮೆಯೇ ಭಾವರಾಜ್ಯಕ್ಕೆ ಹೊರಟು ಹೋಯಿತು. ಭಗವಾನರ ಮನಸ್ಸು ಆರಿಗಿದ ಜ್ಯೋತಿಯು ಕದ್ದಿಯಂತೆ, ಒಮ್ಮೆ

ಗೀಚಿದರೇ ಉದ್ದೀಪನವಾಗುತ್ತದೆ. ಪ್ರಾಕೃತರ ಮನಸ್ಸು ನೆನೆದ ಬೆಂಕಿಯ ಕಡ್ಡಿಯಂತೆ, ಎಷ್ಟು ಗೀಚಿದರೂ ಉದ್ದೀಪನವಾಗುವುದಿಲ್ಲ. ಏಕೆ ಆಗುವುದಿಲ್ಲ? ಮನಸ್ಸು ವಿಷಯದಲ್ಲಿ ಆಸಕ್ತವಾಗಿರುವುದರಿಂದ. ಭಗವಾನರು ಬಲು ಹೊತ್ತಿನ ವರೆಗೆ ಧ್ಯಾನದಲ್ಲಿ ಮಗ್ನರಾಗಿದ್ದರು. ಕೊಂಚ ಹೊತ್ತಿನ ಮೇಲೆ ಭವನಾಥನ ಕಿವಿಯಲ್ಲಿ ಕಾಲೀಕೃಷ್ಣನು ಏನನ್ನೋ ಹೇಳಿದನು.

(ಹರಿನಾಮವು ಮೊದಲೋ? ಶ್ರಮಜೀವಿಗಳ ಶಿಕ್ಷೆಯು ಮೊದಲೋ?)

ಕಾಳೀಕೃಷ್ಣನು ಭಗವಾನರಿಗೆ ಪ್ರಣಾಮಮಾಡಿ ಎದ್ದನು. ಭಗವಾನರು ಅದನ್ನು ಕಂಡು ವಿಸ್ಮಿತರಾಗಿ, 'ಎಲ್ಲಿಗೆ ಹೋಗುತ್ತಾನೆ?' ಎಂದು ಕೇಳಿದರು.

ಭವನಾಥ:—ಸ್ವಾಮೀ, ಅವನಿಗೆ ಕೊಂಚ ಅಗತ್ಯವಾದ ಕೆಲಸವಿದೆ. ಅದಕ್ಕಾಗಿ ಹೋಗುತ್ತಾನೆ.

ಶ್ರೀರಾಮಕೃಷ್ಣ:—ಅದೇನಪ್ಪ, ಅಂತಹ ಅಗತ್ಯವಾದ ಕೆಲಸ?

ಭವನಾಥ:—ಸ್ವಾಮೀ, ಅವನು ಶ್ರಮಜೀವಿಗಳ ಶಿಕ್ಷಾಲಯಕ್ಕೆ ಹೋಗಬೇಕು. (ಕಾಲೀಕೃಷ್ಣನು ಹೊರಟು ಹೋದನು.)

ಶ್ರೀರಾಮಕೃಷ್ಣ:—ಅವನ ಹಣೆಯಲ್ಲಿ ಇಲ್ಲ. ಈ ದಿನ ಹರಿನಾಮದಲ್ಲಿ ಎಷ್ಟು ಆನಂದವಾಗುತ್ತದೆಯೋ ನೋಡುವುದಕ್ಕೆ ಅವನ ಹಣೆಯಲ್ಲಿ ಬರೆದಿಲ್ಲ.

ದ್ವಿತೀಯ ಪರಿಚ್ಛೇದ

(ಜನ್ಮೋತ್ಸವದಲ್ಲಿ ಭಕ್ತರೊಡನೆ, ಸನ್ಯಾಸಿಗಳ ಕಠಿಣನಿಯಮ)

ಈಗ ಪ್ರಾಯಃ ಎಂಟೂವರೆ ಗಂಟೆ, ಒಂಬತ್ತು ಗಂಟೆಯ ಸಮಯ. ಭಗವಾನರು ಈ ದಿನ ಗಂಗೆಯಲ್ಲಿ ಅವಗಾಹನಸ್ನಾನವನ್ನು ಮಾಡಲಿಲ್ಲ. ಅವರಿಗೆ ದೇಹಸ್ಥಿತಿಯು ಅಷ್ಟೊಂದು ಚೆನ್ನಾಗಿಲ್ಲ. ಅವರ ಸ್ನಾನದ ನೀರನ್ನು ಪೂರ್ವೋಕ್ತ ವಾರಾಂಡದೊಳಗೆ ಗಡಿಗೆಗಳಲ್ಲಿ ತುಂಬಿಟ್ಟಿದ್ದಾರೆ. ಭಗವಾನರು ಸ್ನಾನ ಮಾಡುತ್ತಿದ್ದಾರೆ. ಭಕ್ತರು ಸ್ನಾನಮಾಡಿಸುತ್ತಿದ್ದಾರೆ. ಸ್ನಾನವನ್ನು ಮಾಡುತ್ತಿರುವಾಗ ಭಗವಾನರು, 'ಅಪ್ಪ, ಒಂದು ಗಡಿಗೆಯ ನೀರನ್ನು ಬೇರೆ ಇಟ್ಟಿರಿ. ಸ್ನಾನವಾದ ಬಳಿಕ ಆ ನೀರನ್ನು ತಲೆಯ ಮೇಲೆ ಸುರಿದುಕೊಳ್ಳುತ್ತೇನೆ,' ಎಂದು ಹೇಳಿದರು. ಭಗವಾನ್ ಶ್ರೀರಾಮಕೃಷ್ಣರು ಈ ದಿನ ತುಂಬ ಎಚ್ಚರಿಕೆಯಿಂದಿದ್ದಾರೆ. ಅವರು ಒಂದು ಗಡಿಗೆಯ ನೀರಿಗಿಂತ ಹೆಚ್ಚಾಗಿ ತಲೆಗೆ ಹಾಕಿಕೊಳ್ಳಲಿಲ್ಲ.

ಸ್ನಾನವಾದ ಬಳಿಕ ಅವರು ಸುಸ್ವರದಿಂದ ಭಗವನ್ನಾಮವನ್ನು ಹೇಳುತ್ತಿದ್ದಾರೆ. ಶುದ್ಧವಾದ ವಸ್ತ್ರವನ್ನು ಧರಿಸಿಕೊಂಡು, ಒಬ್ಬಿಬ್ಬರು ಭಕ್ತರೊಡನೆ ಭಗವಾನರು ದಕ್ಷಿಣಮುಖರಾಗಿ ಕಾಳೀದೇವಾಲಯದ ಅಂಗಳದ ಮಧ್ಯದಿಂದ ಕಾಳೀಮಂದಿರಕ್ಕೆ ಅಭಿಮುಖವಾಗಿ ಬರುತ್ತಿದ್ದಾರೆ. ಬಾಯಲ್ಲಿ ಎಡೆಬಿಡದೆ ದೇವರ ನಾಮೋಚ್ಚಾರಣೆಯನ್ನು ಮಾಡುತ್ತಿದ್ದಾರೆ. ಮೊಟ್ಟೆಯ ಮೇಲೆ ಮನಸ್ಸಿಟ್ಟಿರುವ ಹಕ್ಕಿಯ ದೃಷ್ಟಿಯಂತೆ, ಭಗವಾನರು ಶೂನ್ಯದೃಷ್ಟಿಯುಳ್ಳವರಾಗಿದ್ದಾರೆ.

ಮಹಾಕಾಳಿಯ ದೇವಸ್ಥಾನಕ್ಕೆ ಹೋಗಿ, ಪ್ರಣಾಮವನ್ನು ಮಾಡಿ, ಪೂಜೆಯನ್ನು ಮಾಡಿದರು. ಪೂಜಿಸುವಾಗ ಅವರಿಗೆ ನಿಯಮವೇನೂ ಇಲ್ಲ. ಅವರು ಒಮ್ಮೆ ಗಂಧಪುಷ್ಪಗಳನ್ನು ಮಾತೆಯ ಪಾದದಲ್ಲಿ ಅರ್ಪಿಸುತ್ತಲೂ, ಇನ್ನೊಮ್ಮೆ ತಮ್ಮ ತಲೆಯಲ್ಲಿಯೇ ಧಾರಣೆಮಾಡಿಕೊಳ್ಳುತ್ತಲೂ ಇದ್ದರು. ಪೂಜಾಂತದಲ್ಲಿ ಮಾತೆಯ ನಿರ್ಮಾಲ್ಯವನ್ನು ಶಿರಸ್ಸಿನಲ್ಲಿ ಧರಿಸಿಕೊಂಡು, ಭವನಾಥನೊಡನೆ, 'ಎಲಾ, ಮಾತೆಯ ಎಳನೀರಿನ ಪ್ರಸಾದವನ್ನು ತೆಗೆದುಕೊಂಡು ಬಾ,' ಎಂದು ಹೇಳಿ, ಅಂಗಳದ ಕಡೆಯಿಂದ ತಮ್ಮ ಕೊಟ್ಟಡಿಗೆ ಬಂದರು. ಸಂಗಡ ಮಾಸ್ಟರೂ ಭವನಾಥನೂ ಇದ್ದರು. ಭವನಾಥನ ಕಯ್ಯಲ್ಲಿ ಎಳನೀರು ಇದ್ದಿತು. ಹಾದಿಯ ಬಲದಲ್ಲಿ ಶ್ರೀರಾಧಾಕಾಂತನ ದೇವಸ್ಥಾನ. ಅದನ್ನು ಭಗವಾನರು ವಿಷ್ಣುದೇವಾಲಯವೆಂದು ಕರೆಯುತ್ತಾರೆ. ಅವರು ಶ್ರೀರಾಧಾಕಾಂತದೇವರನ್ನು ದರ್ಶನಮಾಡಿಕೊಂಡು, ದೇವರಿಗೆ ಸಾಷ್ಟಾಂಗ ನಮಸ್ಕಾರಮಾಡಿ, ಎಡಗಡೆಯ ದ್ವಾದಶಶಿವಮಂದಿರಗಳಲ್ಲಿರುವ ಸದಾಶಿವನನ್ನು ಉದ್ದೇಶಿಸಿ ಆ ಕಡೆಗೆ ಕೈ ಮುಗಿದು ನಮಸ್ಕರಿಸಿದರು.

ತರುವಾಯ ಭಗವಾನರು ಕೊಟ್ಟಡಿಗೆ ಬಂದು ಅನೇಕ ಮಂದಿ ಭಕ್ತರು ಬಂದಿರುವುದನ್ನು ಕಂಡರು. ರಾಮ, ನಿತ್ಯಗೋಪಾಲ, ಕೇದಾರಚಾಟರ್ಜಿ ಮುಂತಾದವರು ಬಂದಿದ್ದರು. ಎಲ್ಲರೂ ಭಗವಾನರಿಗೆ ಪ್ರಣಾಮಮಾಡಿದರು. ಭಗವಾನರೂ ಅವರನ್ನು ಕುಶಲಪ್ರಶ್ನೆಮಾಡಿದರು.

ಭಗವಾನರು ನಿತ್ಯಗೋಪಾಲನನ್ನು ನೋಡಿ, 'ನೀನು ಏನನ್ನಾದರೂ ತಿನ್ನುತ್ತೀಯಾ?' ಎಂದು ಕೇಳಿದರು. ಅವನು 'ಹೂಂ,' ಎಂದನು. ಅವನ ಮಾತು ಚಿಕ್ಕ ಹುಡುಗರ ಮಾತಿನಂತಿದ್ದಿತು. ಅವನಿಗೆ ಆಗ ಬಾಲಕಾವಸ್ಥೆ; ಅವನಿಗೆ ೨೩-೨೪ ವಯಸ್ಸು, ಇನ್ನೂ ಮದುವೆಯಿಲ್ಲ. ಅವನು ಸದಾ ಭಾವರಾಜ್ಯದಲ್ಲಿಯೇ ಇರುತ್ತಾನೆ. ಕೆಲವು ವೇಳೆ ಏಕಾಕಿಯಾಗಿಯೂ, ಕೆಲವು ವೇಳೆ ರಾಮನ ಸಂಗಡಲೂ ಅವನು ಭಗವಾನರ ಬಳಿಗೆ ಬರುತ್ತಾನೆ. ಅವನ ಭಾವಾವಸ್ಥೆಯನ್ನು ಕಂಡು ಭಗವಾನರಿಗೆ ಅವನ ಮೇಲೆ ಬಹು ಪ್ರೀತಿ. ಅವನ ಪರಮಹಂಸಾವಸ್ಥೆಯನ್ನು ಅವರು ಅಡಿಗಡಿಗೆ ಹೇಳುತ್ತಿದ್ದಾರೆ. ಅವನನ್ನು ಗೋಪಾಲನಂತೆ ಕಾಣುತ್ತಿದ್ದಾರೆ.

(ನಿತ್ಯಗೋಪಾಲನಿಗೆ ಉಪದೇಶ, ತ್ಯಾಗಿಗಳಿಗೆ ಹೆಂಗುಸರ ಸಂಗವು ಸರ್ವಥಾ ಕೂಡದು.)

ನಿತ್ಯಗೋಪಾಲನು ಪ್ರಸಾದಸ್ವೀಕಾರಮಾಡಿದ ಬಳಿಕ, ಭಗವಾನರು ತಮ್ಮ ಕೊಟ್ಟಡಿಯ ಪಶ್ಚಿಮದ ಗುಂಡಾದ ವರಾಂಡಾವಿಗೆ ಅವನನ್ನು ಕರೆದುಕೊಂಡು ಹೋಗಿ, ಅವನೊಡನೆ ಮಾತಾಡತೊಡಗಿದರು ಸುಮಾರು ೨೨-೨೩ ವರ್ಷ ವಯಸ್ಸುಳ್ಳ, ಪರಮಭಕ್ತಳಾದ ಒಬ್ಬ ಹೆಂಗುಸು, ಭಗವಾನ್ ಶ್ರೀರಾಮಕೃಷ್ಣರ ಹತ್ತಿರಕ್ಕೆ ಪ್ರಾಯಃ ಆಗಾಗ ಬರುತ್ತಿದ್ದಾಳೆ. ಅವಳು ಭಗವಾನರಲ್ಲಿ ಅತಿಶಯವಾದ ಭಕ್ತಿಯನ್ನು ಇಟ್ಟಿದ್ದಾಳೆ. ಅವಳು ಈ ಭಕ್ತನಾದ ನಿತ್ಯಗೋಪಾಲನ ಭಾವಾವಸ್ಥೆಯನ್ನು ನೋಡಿ, ಅವನನ್ನು ತನ್ನ ಮಗುವಿನಂತೆ ಪ್ರೀತಿಸುತ್ತ, ಅಡಿಗಡಿಗೆ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು.

ಶ್ರೀರಾಮಕೃಷ್ಣ :—(ಭಕ್ತನನ್ನು ಕುರಿತು) ನೀನು ಅಲ್ಲಿಗೆ ಹೋಗುತ್ತೀಯಾ ?

ನಿತ್ಯಗೋಪಾಲ :—(ಬಾಲಕನಂತೆ) ಹೌದು, ಹೋಗುತ್ತೇನೆ. ಅವಳ ಕಡೆಯವರು ಬಂದು ಕರೆದುಕೊಂಡು ಹೋಗುತ್ತಾರೆ.

ಶ್ರೀರಾಮಕೃಷ್ಣ :—ಎಲೈ ಸಾಧು, ಎಚ್ಚರಿಕೆ! ಆವಾಗಲಾದರೂ ಒಂದಾವರ್ತಿ ಹೋಗು. ಬಹಳವಾಗಿ ಹೋಗಬೇಡ. ಬಿದ್ದು ಹೋಗುತ್ತೀಯೆ. ಕಾಮಿನೀ ಕಾಂಚನವೇ ಮಾಯೆ. **ಸಾಧುಗಳು ಹೆಂಗುಸರನ್ನು ಬಿಟ್ಟು, ಬಹಳ ದೂರದಲ್ಲಿ ನಿಲ್ಲಬೇಕು. ಅಲ್ಲಿ ಎಲ್ಲರೂ ಮುಳುಗಿ ಹೋಗುತ್ತಾರೆ. ಅಲ್ಲಿ ಬ್ರಹ್ಮ ವಿಷ್ಣುಗಳೇ ಬಿದ್ದುಹೋಗಿ, ಮೇಲಕ್ಕೆ ಏಳುವುದಕ್ಕೆ ಏದುತ್ತಾರೆ.**

ನಿತ್ಯಗೋಪಾಲನು ಎಲ್ಲವನ್ನೂ ಕೇಳಿದನು.

ಮಾಸ್ಟರ್ :—(ತನ್ನಷ್ಟಕ್ಕೆ ತಾನೇ) ಏನಾಶ್ಚರ್ಯ! ಈ ಭಕ್ತನಿಗೆ ಪರಮಹಂಸನ ಅವಸ್ಥೆಯೆಂದು ಭಗವಾನರೇ ಆಗಾಗ ಹೇಳುತ್ತಾರೆ. ಇಂಥ ಮೇಲಾದ ಅವಸ್ಥೆಯಲ್ಲಿ ಇರುವವನಿಗೂ ವಿಪತ್ತಿನ ಸಂಭವವುಂಟೇ? ಸಾಧುಗಳಿಗೆ ಎಷ್ಟು ಕಠಿಣವಾದ ನಿಯಮವನ್ನು ಮಾಡಿದ್ದಾರೆ! ಸಾಧುಗಳು ಹೆಂಗುಸರೊಂದಿಗೆ ಸೇರಿದ ಮಾತ್ರದಿಂದಲೇ ಪತಿತರಾಗುವ ಸಂಭವವುಂಟೆ? ಈ ಸನ್ಯಾಸಿಗಳ ಉಚ್ಚವಾದ ದೃಷ್ಟಾಂತವಿಲ್ಲದಿದ್ದರೆ, ಜೀವರು ಉದ್ಧಾರವಾಗುವ ಬಗೆ ಹೇಗೆ? ಆ ಹೆಂಗುಸೋ, ಅಷ್ಟೊಂದು ಭಕ್ತಿಯುಳ್ಳವಳು. ಆದರೂ ಭಯವೇ? ಶ್ರೀ ಚೈತನ್ಯನು ಚಿಕ್ಕ ಹರಿದಾಸನ ಮೇಲೆ ಅಷ್ಟೊಂದು ಕಠಿಣವಾದ ಶಾಸನವನ್ನು ಮಾಡಿದ್ದುದು ಏಕೆಂದು ಈಗ ಗೊತ್ತಾಯಿತು. ಶ್ರೀ ಚೈತನ್ಯದೇವನು ಹೆಂಗುಸರ ಸಂಗವ ಮಾತಾಡಕೂಡದೆಂದು ಸನ್ಯಾಸಿಗಳಿಗೆಲ್ಲರಿಗೂ ಕಟ್ಟುಮಾಡಿದ್ದನು. ಚಿಕ್ಕ ಹರಿದಾಸನು

ಶ್ರೀ ರಾಮಕೃಷ್ಣದೇವರ ಮುಖ್ಯರಾದ ಭಕ್ತರು.



(೧) ಮಾಸ್ಟರು (೩) ಕಾಳೀ (೫) ಶರತ್ (೬) ಮಣಿಮಲ್ಲಿಕ (೭) ಗಂಗಾಧರ (೮) ನವಗೋಪಾಲ (೧೧) ತಾರಕ (೧೩) ದೊಡ್ಡ ಗೋಪಾಲ

ಒಬ್ಬ ಭಕ್ತವಿಧವೆಯೊಂದಿಗೆ ಮಾತಾಡಿದನು. ಹರಿದಾಸನು ಸನ್ಯಾಸಿ. ಆದುದರಿಂದ ಶ್ರೀ ಚೈತನ್ಯನು ಅವನನ್ನು ತ್ಯಾಗಮಾಡಿದನು. ಏನು ಶಾಸನ! ಸನ್ಯಾಸಿಗೆ ಎಷ್ಟು ಕಠಿಣವಾದ ನಿಯಮ! ಈ ಭಕ್ತನಾದ ನಿತ್ಯ ಗೋಪಾಲನ ಮೇಲೆ ಶ್ರೀರಾಮಕೃಷ್ಣರಿಗೆ ಎಷ್ಟೊಂದು ಪ್ರೀತಿ! ಮುಂದೆ ಅವನಿಗೆ ಏನಾದರೂ ವಿಪತ್ತು ಸಂಭವಿಸೀತೆಂದು, ಮುಂಚಿತವಾಗಿಯೇ ಎಚ್ಚರಿಕೆಯನ್ನು ಕೊಡುತ್ತಾರೆ.

ಭಕ್ತರೆಲ್ಲರೂ, '**ಸಾಧು, ಎಚ್ಚರಿಕೆ!**' ಎಂಬ ಮೇಘಗಂಭೀರವಾದ ಈ ಧ್ವನಿಯನ್ನು ಕೇಳಿ ಆಶ್ಚರ್ಯಪಡುತ್ತಾರೆ.

ತೃತೀಯ ಪರಿಚ್ಛೇದ

ಭಗವಾನ್ ಶ್ರೀರಾಮಕೃಷ್ಣರಿಗೆ ರಾಮನಾಮದಲ್ಲಿ ಸಮಾಧಿ.

ಈಗ ಭಗವಾನ್ ಶ್ರೀರಾಮಕೃಷ್ಣರು ಭಕ್ತರೊಡನೆ ಕೊಟ್ಟಡಿಯ ಈಶಾನ್ಯದ ವರಾಂಡಾವಿಗೆ ಬಂದಿದ್ದಾರೆ. ಭಕ್ತರ ಮಧ್ಯದಲ್ಲಿ ದಕ್ಷಿಣೇಶ್ವರ ನಿವಾಸಿಯಾದ ಒಬ್ಬ ಗೃಹಸ್ಥನೂ ಕುಳಿತಿದ್ದಾನೆ. ಅವನು ಮನೆಯಲ್ಲಿ ವೇದಾಂತವನ್ನು ಓದುತ್ತಾನೆ. ಈಗ ಭಗವಾನರ ಮುಂದೆ ಶ್ರೀಯುಕ್ತ ಕೇದಾರ ಚಾಟುರ್ಜಿಯೊಡನೆ ಶಬ್ದಬ್ರಹ್ಮ ವಿಷಯವಾಗಿ ಮಾತಾಡುತ್ತಿದ್ದಾನೆ.

(ಅವತಾರವಾದ ಮತ್ತು ಸರ್ವಧರ್ಮ ಸಮನ್ವಯ)

ದಕ್ಷಿಣೇಶ್ವರವಾಸೀ:—ಈ ಪ್ರಣವಶಬ್ದವು ಒಳಗೂ ಹೊರಗೂ, ಆವಾಗಲೂ ಆಗುತ್ತಿದೆ.

ಶ್ರೀರಾಮಕೃಷ್ಣ:—ಬರಿಯ ಶಬ್ದದಿಂದ ಏನೂ ಆಗುವುದಿಲ್ಲ. ಶಬ್ದಪ್ರತಿಪಾದ್ಯನು ಒಬ್ಬನಿದ್ದಾನೆ. ನಿನ್ನ ಹೆಸರಿನಿಂದ ಮಾತ್ರವೇ ನನಗೆ ಆನಂದವಾಗುತ್ತದೆಯೇ? ನಿನ್ನನ್ನು ನೋಡದಿದ್ದರೆ ಪೂರ್ಣವಾದ ಆನಂದವಾಗುವುದಿಲ್ಲ.

ದಕ್ಷಿಣೇಶ್ವರ ನಿವಾಸೀ:—ಈ ಪ್ರಣವಶಬ್ದವೇ ಬ್ರಹ್ಮ, ಇದೇ ಅನಾಹತಶಬ್ದ.

ಶ್ರೀರಾಮಕೃಷ್ಣ:—(ಕೇದಾರನನ್ನು ಕುರಿತು) ಓ ತಿಳಿಯಿತೇ? ಇದು ಋಷಿಗಳ ಮತ. ಋಷಿಗಳು, 'ಹೇ ರಾಮ, ನೀನು ದಶರಥನ ಪುತ್ರನೆಂಬುದು ನಮಗೆ ಗೊತ್ತು. ಭರದ್ವಾಜಾದಿ ಋಷಿಗಳು ನಿನ್ನನ್ನು ಅವತಾರ ಪುರು

ಷನೆಂದು ಪೂಜಿಸುತ್ತಾರೆ. ನಮಗೆ ಅಖಂಡಸಚ್ಚಿದಾನಂದನೇ ಬೇಕು,' ಎಂದು ರಾಮಚಂದ್ರನಿಗೆ ಹೇಳಿದರು. ರಾಮಚಂದ್ರನು ಆ ಮಾತನ್ನು ಕೇಳಿ, ನಗುತ್ತಾ ಹೊರಟುಹೋದನು.

ಕೇದಾರ:—ಋಷಿಗಳು ರಾಮಚಂದ್ರನನ್ನು ಅವತಾರಪುರುಷನೆಂದರಿಯರು. ಅವರು ದಡ್ಡರು.

ಶ್ರೀರಾಮಕೃಷ್ಣ:—(ಗಂಭೀರಭಾವದಲ್ಲಿ) ನೀನು ಇಂಥ ಮಾತಾಡಬೇಡ. ಅವರಿಗೆ ರುಚಿಯಿದ್ದಂತೆ, ಅವರವರ ಹೊಟ್ಟೆಗೆ ತಕ್ಕಂತೆ, ಅವರವರ ದೇವರ ಪೂಜೆಗಳೂ, ಊಟಗಳೂ ಆಗಬೇಕು.

ಮನೆಗೆ ಮತ್ಸ್ಯವನ್ನು ತಂದಿದ್ದಾರೆ. ತಾಯು ಮಕ್ಕಳ ಹೊಟ್ಟೆಗೂ, ರುಚಿಗೂ ತಕ್ಕಂತೆ, ಕೆಲವರಿಗೆ ಮತ್ಸ್ಯದ ಪಲಾವನ್ನೂ, ಕೆಲವರಿಗೆ ಸಾರನ್ನೂ, ಕೆಲವರಿಗೆ ಹುಳಿಯನ್ನೂ, ಇನ್ನು ಕೆಲವರಿಗೆ ಬೋಂಡಾವನ್ನೂ ನಾನಾ ವಿಧವಾಗಿ ಮಾಡಿ ಬಡ್ಡಿಸುತ್ತಾಳೆ. (ಎಲ್ಲರೂ ನಗುತ್ತಾರೆ)

ಋಷಿಗಳು ಜ್ಞಾನಿಗಳಾಗಿದ್ದುದರಿಂದ, ಅಖಂಡ ಸಚ್ಚಿದಾನಂದನನ್ನೇ ಅಪೇಕ್ಷಿಸುತ್ತಾರೆ. ಭಕ್ತರು ಭಕ್ತಿಯನ್ನು ಆಸ್ವಾದನಮಾಡುವುದಕ್ಕಾಗಿ ಅವತಾರವನ್ನು ಅಪೇಕ್ಷಿಸುತ್ತಾರೆ. ಭಗವಂತನನ್ನು ದರ್ಶನಮಾಡಿದರೆ ಮನಸ್ಸಿನ ಅಂಧಕಾರವು ದೂರಕ್ಕೆ ಹೋಗುತ್ತದೆ. 'ರಾಮಚಂದ್ರನು ಸಭೆಗೆ ಬಂದಾಗ ಸಭೆಯು ನೂರಾರು ಸೂರ್ಯರು ಉದಯಿಸಿದಂತೆ ಆಯಿತು,' ಎಂದು ಪುರಾಣದಲ್ಲಿದೆ. 'ಹಾಗಾದರೆ ಸಭೆಯಲ್ಲಿದ್ದ ಜನಗಳು ಏತಕ್ಕೆ ಸುಟ್ಟು ಹೋಗಲಿಲ್ಲ?' ಎಂದರೆ, 'ರಾಮಚಂದ್ರನ ಜ್ಯೋತಿಸ್ಸು ಜಡಜ್ಯೋತಿಸ್ಸಲ್ಲ,' ಎಂದು ಉತ್ತರ. ಸಭೆಯಲ್ಲಿದ್ದವರೆಲ್ಲರ ಹೃತ್ಪದ್ಮಗಳು ವಿಕಸಿತವಾದುವು. ಸೂರ್ಯನು ಹುಟ್ಟಿದರೆ ಪದ್ಮಗಳು ವಿಕಸಿತವಾಗುವುದಿಲ್ಲವೇ ?

ಭಗವಾನರು ನಿಂತುಕೊಂಡು ಈ ಮಾತನ್ನು ಭಕ್ತರಿಗೆ ಹೇಳಿದರು. ಹೇಳುತ್ತಿರುವಾಗ ಒಂದೇ ಸಲಕ್ಕೆ ಮನಸ್ಸು ಈ ಬಾಹ್ಯರಾಜ್ಯವನ್ನು ಬಿಟ್ಟು, ಅಂತರ್ಮುಖವಾಯಿತು. ಹೃತ್ಪದ್ಮವು ವಿಕಸಿತವಾಯಿತೆಂಬೀ ಮಾತು ಹೊರಟಿತೋ, ಇಲ್ಲವೋ ಎಂಬುವಷ್ಟರಲ್ಲಿ, ಭಗವಾನರು ಒಮ್ಮೆಯೇ ಸಮಾಧಿಸ್ಥರಾದರು.

ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿದ್ದಾರೆ. ಈ ಸಮಾಧಿಯಲ್ಲಿ ಭಗವಂತನ ದರ್ಶನವನ್ನು ಮಾಡಿ ಅವರ ಹೃತ್ಪದ್ಮವು ಪ್ರಸ್ಫುಟಿತವಾಗಿದೆಯೋ ?

ಪರಮಹಂಸರು ಚಿತ್ರದಲ್ಲಿ ಬರೆದ ಗೊಂಬೆಯಂತೆ ಒಂದೇ ಭಾವದಲ್ಲಿ ಬಾಹ್ಯಶೂನ್ಯರಾಗಿ ನಿಂತಿದ್ದಾರೆ. ಅವರ ಮುಖವು ಉಜ್ವಲವಾಗಿಯೂ, ಹಾಸದಿಂದ ಕೂ

ಡಿದುದಾಗಿಯೂ ಇದೆ. ಭಕ್ತರಲ್ಲಿ ಕೆಲವರು ನಿಂತುಕೊಂಡು, ಕೆಲವರು ಕುಳಿತು ಕೊಂಡು, ಅದ್ಭುತವಾದ ಪ್ರೇಮರಾಜ್ಯದ ಪಥವನ್ನು, ಎಂದೂ ನೋಡದ ಈ ಸಮಾಧಿಚಿತ್ರವನ್ನು, ಆಶ್ಚರ್ಯದಿಂದ ನೋಡುತ್ತಿದ್ದಾರೆ. ತುಂಬ ಹೊತ್ತಿನ ಮೇಲೆ ಸಮಾಧಿಭಂಗವಾಯಿತು.

ಭಗವಾನರು ದೀರ್ಘನಿಶ್ವಾಸವನ್ನು ಬಿಟ್ಟು, 'ರಾಮ,' ಎಂಬೀ ನಾಮವನ್ನೇ ಬಾರಿಬಾರಿಗೂ ಉಚ್ಚಾರಣಮಾಡಿದರು. ರಾಮನಾಮದ ಒಂದೊಂದು ವರ್ಣ ದಲ್ಲಿಯೂ ಅಮೃತವು ಸುರಿಯುತ್ತಿದೆಯೋ, ಎಂಬಂತಿದ್ದಿತು. ಅವರು ಕುಳಿತರು. ಭಕ್ತರು ನಾಲ್ಕು ಕಡೆಯಲ್ಲಿಯೂ ಕುಳಿತು, ಒಂದೇ ದೃಷ್ಟಿಯಿಂದ ಅವರನ್ನು ನೋಡುತ್ತಾರೆ.

ಶ್ರೀರಾಮಕೃಷ್ಣ:—(ಭಕ್ತರನ್ನು ಕುರಿತು) ಅವತಾರಪುರುಷನು ಆವಾಗ ಬರುತ್ತಾನೆಂಬುದು ಸಾಧಾರಣಜನರಿಗೆ ಗೊತ್ತಾಗುವುದಿಲ್ಲ. ಅವನು ರಹಸ್ಯವಾಗಿಯೇ ಬರುತ್ತಾನೆ. ಅವನು ಬರುವುದನ್ನು ಮೂರು ನಾಲ್ಕು ಮಂದಿ ಅಂತರಂಗಭಕ್ತರು ಮಾತ್ರ ತಿಳಿದುಕೊಳ್ಳಬಲ್ಲರು.

'ರಾಮನು ಪೂರ್ಣ ಬ್ರಹ್ಮ, ಪೂರ್ಣಾವತಾರ,' ಎಂಬೀ ವಿಷಯವು ಹನ್ನೆರಡು ಮಂದಿ ಋಷಿಗಳಿಗೆ ಮಾತ್ರ ಗೊತ್ತು. ಮಿಕ್ಕ ಋಷಿಗಳಿಗೆ ಗೊತ್ತಿಲ್ಲ. ಆದುದರಿಂದ, ಅವರು, 'ಹೇ ರಾಮ, ನಾವು ನಿನ್ನನ್ನು ದಶರಥನ ಮಗ ನೆಂದು ತಿಳಿದುಕೊಂಡಿದ್ದೇವೆ,' ಎಂದು ಹೇಳಿದರು.

ಅಖಂಡಸಚ್ಚಿದಾನಂದನನ್ನು ಎಲ್ಲರೂ ತಿಳಿಯುವುದಕ್ಕೆ ಸಾಧ್ಯವೇ ? ಆದರೆ ನಿತ್ಯವಿಭೂತಿಯಿಂದ ಎದ್ದು, ವಿಲಾಸಕ್ಕಾಗಿ ಲೀಲೆಗೆ ಬರುವದಲ್ಲಿಯೇ ಪಕ್ವ ವಾದ ಭಕ್ತಿಯಿರುತ್ತದೆ. ಇಂಗ್ಲೆಂಡಿನಲ್ಲಿ ರಾಣಿಯನ್ನು ನೋಡಿ ಬಂದ ವರು, ರಾಣಿಯ ಮಾತನ್ನೂ, ಕಾರ್ಯವನ್ನೂ ವರ್ಣಿಸಬಲ್ಲರು. ಆಗ ರಾಣಿ ಯ ವಿಷಯವಾದ ಅವರ ಮಾತುಗಳೆಲ್ಲವೂ ಸತ್ಯವಾಗಿರುತ್ತವೆ.

'ಹೇ ರಾಮ, ನೀನು ಅಖಂಡಸಚ್ಚಿದಾನಂದನು, ನೀನು ನಮ್ಮ ಹತ್ತಿರಕ್ಕೆ ಮನುಷ್ಯರೂಪದಿಂದ ಬಂದಿದ್ದೀಯೆ ; ವಸ್ತುತಃ ನೀನು ನಿನ್ನ ಮಾಯೆ ಯನ್ನು ಆಶ್ರಯಮಾಡಿಕೊಂಡು ಮನುಷ್ಯನಂತೆ ಕಾಣಿಸಿಕೊಳ್ಳುತ್ತೀಯೆ,' ಎಂದು ಭರದ್ವಾಜಾದಿಋಷಿಗಳು ರಾಮನನ್ನು ಸ್ತೋತ್ರಮಾಡಿದರು. ಭರದ್ವಾಜಾದಿ ಋಷಿಗಳು ರಾಮನಿಗೆ ಪರಮಭಕ್ತರು. ಅವರ ಭಕ್ತಿಯು ಪಕ್ವವಾದ ಭಕ್ತಿ.

ಚತುರ್ಥ ಪರಿಚ್ಛೇದ

(ಕೀರ್ತನಾನಂದ ಮತ್ತು ಸಮಾಧಿ)

ಭಕ್ತರು ಅವತಾರ ತತ್ತ್ವವನ್ನು ಆಶ್ಚರ್ಯದಿಂದ ಕೇಳುತ್ತಾರೆ. 'ಇದೇನು ಆಶ್ಚರ್ಯ! ವೇದದಲ್ಲಿ ಆರನ್ನು ವಾಕ್ಕಿಗೂ ಮನಸ್ಸಿಗೂ, ಅತೀತನೆಂದು ಹೇಳಿದೆಯೋ, ಆ ಅಖಂಡಸಚ್ಚಿದಾನಂದಪುರುಷನೇ ನಮ್ಮಿದಿರಿಗೆ ಮೂರೂವರೆ ಮೊಳದುದ್ದದ ಪುರುಷನಾಗಿ ಬಂದಿದ್ದಾನೆಯೋ? ಭಗವಾನ್ ಶ್ರೀರಾಮಕೃಷ್ಣರು ಹೇಳುವುದೆಲ್ಲವೂ ಸತ್ಯ, ಹಾಗಿಲ್ಲದಿದ್ದರೆ, 'ರಾಮ, ರಾಮ,' ಎಂದು ಆಡಿದ ಮಾತ್ರದಿಂದ ಈ ಮಹಾಪುರುಷರಿಗೆ ಸಮಾಧಿಯು ಏತಕ್ಕೆ ಉಂಟಾಗುತ್ತದೆ? ಇವರು ನಿಜವಾಗಿಯೂ ಹೃತ್ಪದ್ಮದಲ್ಲಿ ರಾಮರೂಪವನ್ನು ದರ್ಶನಮಾಡಿದ್ದಾರೆ,' ಎಂದು ಕೆಲವರು ಭಾವಿಸಿಕೊಂಡರು.

ಈ ಸಮಯದಲ್ಲಿ ಕೊನ್ನಗರದಿಂದ ಭಕ್ತರು ತಾಳವನ್ನು ಬಾಜಿಸುತ್ತಾ, ಸಂಕೀರ್ತನವನ್ನು ಮಾಡಿಕೊಂಡು, ತೋಟಕ್ಕೆ ಬಂದು ಸೇರಿದರು. ಮನಮೋಹನ, ನವಾಯೀ, ಮತ್ತು ಅನೇಕ ಭಕ್ತರು ನಾಮಸಂಕೀರ್ತನವನ್ನು ಮಾಡುತ್ತಾ, ಭಗವಾನರ ಹತ್ತಿರ ಈಶಾನ್ಯವರಾಂಡದಲ್ಲಿ ಬಂದು ನಿಂತರು. ಶ್ರೀರಾಮಕೃಷ್ಣರು ಪ್ರೇಮೋನ್ಮತ್ತರಾಗಿ ಅವರೊಡನೆ ಸಂಕೀರ್ತನವನ್ನು ಮಾಡುತ್ತಾರೆ.

ಭಗವಾನರಿಗೆ ನರ್ತನಮಾಡುವಾಗ ಮಧ್ಯೇಮಧ್ಯೇ ಸಮಾಧಿಯುಂಟಾಗುತ್ತದೆ. ಸಂಕೀರ್ತನದ ನಡುವೆ ಅವರು ಚಿತ್ರಾರ್ಪಿತಪ್ರತಿಮೆಯಂತೆ ನಿಂತಿದ್ದಾರೆ. ಆ ಅವಸ್ಥೆಯಲ್ಲಿರುವ ಭಗವಾನರನ್ನು, ಭಕ್ತರು ದೊಡ್ಡದೊಡ್ಡ ದಂಡೆಯಾದ ಪುಷ್ಪಮಾಲಿಕೆಗಳಿಂದಲೂ, ಪುಷ್ಪಗಳಿಂದಲೂ ಅಲಂಕರಿಸಿ, ಗೌರಾಂಗನು ಇದಿರಿಗೆ ನಿಂತಿದ್ದಾನೆಯೋ ಎಂಬಂತೆ, ನೋಡುತ್ತಿದ್ದಾರೆ. ಭಗವಾನರು ಗಭೀರವಾದ ಭಾವಸಮಾಧಿಯಲ್ಲಿ ಮಗ್ನರಾಗಿದ್ದಾರೆ. ಶ್ರೀ ಗೌರಾಂಗನು ಕೆಲವು ವೇಳೆ ಅಂತರ್ದಶೆಯಲ್ಲಿ ಚಿತ್ರಾರ್ಪಿತಪ್ರತಿಮೆಯಂತೆ ಜಡನಾಗಿಯೂ, ಬಾಹ್ಯಶೂನ್ಯನಾಗಿಯೂ ಇರುತ್ತಿದ್ದನು; ಮತ್ತೆ ಕೆಲವು ವೇಳೆ, ಅರ್ಧಬಾಹ್ಯದಶೆಯಲ್ಲಿ ಪ್ರೇಮಾವಿಷ್ಟನಾಗಿ ನರ್ತನಮಾಡುತ್ತಿದ್ದನು. ಇನ್ನೂ ಕೆಲವು ವೇಳೆ, ಬಾಹ್ಯದಶೆಯಲ್ಲ ಭಕ್ತರ ಸಂಗಡ ಸಂಕೀರ್ತನ ಮಾಡುತ್ತಿದ್ದನು. ಈ ಮೂರು ಅವಸ್ಥೆಗಳಲ್ಲಿಯೂ ಇವನಂತೆಯೇ ಶ್ರೀರಾಮಕೃಷ್ಣರೂ ಇರುತ್ತಾರೆ.

ಪರಮಹಂಸರು ಸಮಾಧಿಸ್ಥರಾಗಿ ನಿಂತಿದ್ದಾರೆ. ಅವರ ಕೊರಳಲ್ಲಿ ಮಾಲೆಯಿದೆ. ಒಬ್ಬ ಭಕ್ತನು, 'ಎಲ್ಲಿ ಬಿದ್ದು ಬಿಡುತ್ತಾರೆಯೋ,' ಎಂದು ಅವರನ್ನು ಹಿಡಿದುಕೊಂಡಿದ್ದಾನೆ. ಭಕ್ತರು ಸುತ್ತಲೂ ನಿಂತುಕೊಂಡು ತಾಳವನ್ನು ಹಾಕುತ್ತಾ, ಮೃದಂಗವನ್ನು ಬಾಜಿಸುತ್ತಾ, ಸಂಕೀರ್ತನವನ್ನು ಹಾಡುತ್ತಾರೆ. ಭಗವಾನರು ಪಶ್ಚಿಮಾಸ್ಯ

ರಾಗಿದ್ದಾರೆ. ಅವರ ದೃಷ್ಟಿಯು ಸ್ಥಿರವಾಗಿದೆ. ಮುಖವು ಚಂದ್ರನಂತೆ ಪ್ರೇಮಾನುರಂಜಿತವಾಗಿದೆ. ಈ ಆನಂದಮೂರ್ತಿಯನ್ನು ಭಕ್ತರು ಬಲು ಹೊತ್ತು ನೋಡಿದರು.

ಭಗವಾನರಿಗೆ ಸಮಾಧಿಭಂಗವಾಯಿತು. ಆಮೇಲೆ ಸಂಕೀರ್ತನವು ಮುಗಿಯಿತು. ಭಗವಾನರು ಕೊಂಚ ವಿಶ್ರಮಿಸಿಕೊಂಡು, ನೂತನವಾದ ಪೀತಾಂಬರವನ್ನು ಧರಿಸಿ, ಚಿಕ್ಕ ಮಂಚದಮೇಲೆ ಕುಳಿತರು. ಪೀತಾಂಬರಧಾರಿಯಾದ, ಆನಂದಮಯನಾದ, ಜ್ಯೋತಿರ್ಮಯನಾದ, ಭಕ್ತಚಿತ್ತಕ್ಕೆ ವಿನೋದವನ್ನುಂಟು ಮಾಡುವ, ಆ ಮಹಾಪುರುಷನ ಅಪರೂಪವಾದ ಈ ರೂಪನ್ನು ಭಕ್ತರು ನೋಡಿದರು. ಆ ದೇವ ದುರ್ಲಭನಾದ, ಪವಿತ್ರನಾದ, ಮೋಹನಮೂರ್ತಿಯ ದರ್ಶನವನ್ನು ಮಾಡಿ ಭಕ್ತರ ನಯನಗಳು ತೃಪ್ತಿಯನ್ನೇ ಪಡೆಯಲಿಲ್ಲ. ಆ ರೂಪಸಾಗರದಲ್ಲಿ ಮಗ್ನರಾಗಿ, 'ಇನ್ನೂ ನೋಡಬೇಕು, ಇನ್ನೂ ನೋಡಬೇಕು,' ಎಂಬ ಇಚ್ಛೆಯೇ ಭಕ್ತರಲ್ಲಿ ತುಂಬಿದ್ದಿತು. ಬಲು ಹೊತ್ತಾಗಿದೆ. ಭಗವಾನರು ಭೋಜನಕ್ಕೆ ಕುಳಿತರು. ಭಕ್ತರೂ ಆನಂದದಿಂದ ಪ್ರಸಾದವನ್ನು ಸ್ವೀಕರಿಸಿದರು.

ಪಂಚಮ ಪರಿಚ್ಛೇದ.

ಗೋಸ್ವಾಮಿಯೊಡನೆ ಸರ್ವಧರ್ಮಸಮನ್ವಯ ಪ್ರಸಂಗ

ಭೋಜನವಾದ ಬಳಿಕ, ಶ್ರೀರಾಮಕೃಷ್ಣರವರು ಚಿಕ್ಕ ಮಂಚದ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದಾರೆ. ಕೊಟ್ಟಡಿಯಲ್ಲಿ ಜನರ ಗುಂಪು ಹೆಚ್ಚುತ್ತಿದೆ. ಕೊಟ್ಟಡಿಯ ಹೊರಗಣ ವರಾಂಡದಲ್ಲಿಯೂ ಜನರು ತುಂಬಿದ್ದಾರೆ. ಒಳಗೆ ಭಕ್ತರು ನೆಲದ ಮೇಲೆ ಕುಳಿತು ಭಗವಾನರನ್ನು ಒಂದೇ ದೃಷ್ಟಿಯಿಂದ ನೋಡುತ್ತಿದ್ದಾರೆ. ಕೇದಾರ, ಸುರೇಶ, ರಾಮ, ಮನೋಮೋಹನ, ಗಿರೀಂದ್ರ, ರಾಖಾಲ, ಭವನಾಥ, ಮಾಸ್ಟರ್ ಮುಂತಾದ ಅನೇಕರು ಕೊಟ್ಟಡಿಯಲ್ಲಿದ್ದಾರೆ. ರಾಖಾಲನ ತಂದೆಯೂ ಕುಳಿತಿದ್ದಾನೆ. ಒಬ್ಬ ವೈಷ್ಣವಗೋಸ್ವಾಮಿಯೂ ಬಂದಿದ್ದಾನೆ. ಭಗವಾನರು ಅವನೊಡನೆ ಮಾತನಾಡುತ್ತಿದ್ದಾರೆ. ಗೋಸ್ವಾಮಿಗಳನ್ನು ಕಂಡರೆ ಪರಮಹಂಸರು ತಲೆಯನ್ನು ಬಗ್ಗಿಸಿ ನಮಸ್ಕಾರ ಮಾಡುತ್ತಾರೆ, ಒಂದೊಂದು ವೇಳೆ ಇವರಿಗೆ ಕಂಡರೆ ಸಾಷ್ಟಾಂಗನಮಸ್ಕಾರವನ್ನೂ ಮಾಡುತ್ತಾರೆ.

(ನಾಮಮಾಹಾತ್ಮ್ಯ ಹೆಚ್ಚೋ ? ಅನುರಾಗ ಹೆಚ್ಚೋ ? ಅಜಾಮಿಲ.)

ಶ್ರೀರಾಮಕೃಷ್ಣ:—ಒಳ್ಳೆಯದು. ನೀವು ಏನ ಹೇಳುತ್ತೀರಿ ? ಭಗವಲ್ಲಾಭಕ್ಕೆ ಉಪಾಯವೇನು ?

ಗೋಸ್ವಾಮೀ:—ಸ್ವಾಮೀ, ನಾಮದಿಂದಲೇ ಆಗುತ್ತದೆ. ಕಲಿಯಲ್ಲಿ ನಾಮ ಮಾಹಾತ್ಮ್ಯ.

ಶ್ರೀರಾಮಕೃಷ್ಣ:—ನಿಜ, ನಾಮದಲ್ಲಿ ಹೆಚ್ಚು ಮಾಹಾತ್ಮ್ಯವು ಇದೆ. ಅದೇನೋ ಸರಿ. ಆದರೆ ಅನುರಾಗವಿಲ್ಲವಿದ್ದರೆ, ಏನಾಗುತ್ತದೆ? ಈಶ್ವರನಿಗಾಗಿ ಪ್ರಾಣತ್ಯಾಗವನ್ನಾದರೂ ಮಾಡಿಕೊಳ್ಳುವಷ್ಟು ವ್ಯಾಕುಲತೆಯಿರಬೇಕು. ಬರಿಯ ನಾಮವನ್ನು ಉಚ್ಚಾರಣಮಾಡಿ, ಕಾಮಿನೀಕಾಂಚನದಲ್ಲಿ ಮನಸ್ಸನ್ನು ಇಟ್ಟಿದ್ದರೆ, ಅಂಥ ನಾಮೋಚ್ಚಾರಣದಿಂದ ಏನು ಪ್ರಯೋಜನ? ಚೇಳು ಅಥವಾ ಜೇಡರ ಹುಳುವು ಕಚ್ಚಿದರೆ, ಬರಿಯ ಮಂತ್ರದಿಂದ ಗುಣವಾಗುವುದಿಲ್ಲ. ಬೆರಣಿಯ ಬೂದಿಯನ್ನೂ ಹಾಕಿ ತಿಕ್ಕಬೇಕು.

ಗೋಸ್ವಾಮೀ:—ಹಾಗಾದರೆ ಅಜಾಮಿಳನ ವಿಷಯವೇನು? ಅವನು ಮಹಾಪಾತಕನು. ಅವನು ಮಾಡದ ಪಾಪವೇ ಇಲ್ಲ. ಆದರೆ ಸಾಯುವಾಗ, 'ನಾರಾಯಣ,' ಎಂದು ಮಗನನ್ನು ಕೂಗಿದ ಮಾತ್ರದಿಂದ, ಅವನು ಉದ್ಧಾರವಾಗಲಿಲ್ಲವೇ?

ಶ್ರೀರಾಮಕೃಷ್ಣ:—ಆದರೆ ಅಜಾಮಿಳನು ಪೂರ್ವಜನ್ಮದಲ್ಲಿ ಬಹುಶಃ ಅನೇಕ ಸತ್ಕರ್ಮಗಳನ್ನು ಮಾಡಿದ್ದನು; ಅವನು, 'ನಾರಾಯಣ,' ಎಂದು ಕೂಗಿದ ಬಳಿಕ, ಕೆಲವು ಕಾಲ ಜೀವಿಸಿ, ತಪಸ್ಸ ಮಾಡಿದನೆಂದು, ಶ್ರೀಮದ್ಭಾಗವತದಲ್ಲಿದೆ. ಅವನ ನಾರಾಯಣ ಸ್ಮರಣವು, ಅವನ ಅಂತ್ಯಕಾಲದ ಸ್ಮರಣವೆಂದೂ ಹೇಳಬಹುದು. ಅಂಥ ಅಂತಿಮಕಾಲದ ಸ್ಮರಣದಿಂದಲೂ ಸದ್ಗತಿಯುಂಟಾಗುತ್ತದೆ. ಆನೆಗೆ ಸ್ನಾನಮಾಡಿಸಿದರೆ, ಏನು ಪ್ರಯೋಜನ? ಅದು ಪುನಃ ಧೂಳನ್ನೂ, ಮಣ್ಣನ್ನೂ, ತಲೆಗೆ ಎರಚಿಕೊಂಡು ಮೊದಲಿನಂತೆಯೇ ಆಗುತ್ತದೆ. ಆದುದರಿಂದ ಆ ಪಾಪಿಯಾದ ಆನೆಯ ಮೆಯ್ಯನ್ನು ತೊಳೆದು, ಗುಡಿಸಿದ ಒಳ್ಳೆಯ ತಾವಿನಲ್ಲಿ ಅದನ್ನು ಕಟ್ಟಿದರೆ, ಅದರ ಮೆಯ್ಯು ಶುದ್ಧವಾಗಿಯೇ ಇರುತ್ತದೆ.

ಭಗವನ್ನಾಮೋಚ್ಚಾರಣದಿಂದ ಒಂದು ವೇಳೆ ಶುದ್ಧನಾಗುತ್ತಾನೆ. ಆದರೆ, 'ಇನ್ನುಮೇಲೆ ಪಾಪವನ್ನು ಮಾಡುವುದಿಲ್ಲ,' ಎಂದು ಪ್ರತಿಜ್ಞೆಯನ್ನು ಮಾಡುವುದಕ್ಕೆ ಮನಸ್ಸಿನಲ್ಲಿ ಬಲವಿಲ್ಲ. ಉತ್ತರ ಕ್ಷಣದಲ್ಲಿಯೇ ನಾನಾ ಪಾಪಗಳಿಂದ ಲಿಪ್ತನಾಗಬಹುದು. ಗಂಗಾಸ್ನಾನಮಾಡಿದರೆ ಪಾಪವೆಲ್ಲವೂ ಹೋಗುತ್ತದೆ. ಒಂದು ಸಲ ಹೋದರೇನಾಯಿತು? 'ಪಾಪಗಳು ಗಿಡದ ಮೇಲೆ ಕುಳಿತು ಕಾದಿರುತ್ತವೆ; ಗಂಗೆಯಲ್ಲಿ ಸ್ನಾನಮಾಡಿ ಹಿಂತಿರುಗಿ ಬರುವಾಗ ಅವು ಗಿಡದಿಂದ ಹಾರಿ, ಅವನ ಬೆನ್ನ ಮೇಲೆಯೇ ತಿರುಗಿ

ಪತ್ತಿಕೊಳ್ಳುತ್ತವೆ,' ಎಂದು ಜನರು ಹೇಳುತ್ತಾರೆ. (ಎಲ್ಲರೂ ನಗುತ್ತಾರೆ.) ಆ ಹಿಂದಿನ ಪಾಪಗಳೇ, ಸ್ನಾನಮಾಡಿ ಒಂದೆರಡು ಹಜ್ಜೆ ಹಿಂತಿರುಗುವಷ್ಟರಲ್ಲಿಯೇ ತಿರುಗಿ ಬೆನ್ನಿನ ಮೇಲೆ ಹತ್ತಿಕೊಳ್ಳುತ್ತವೆ.

ಆದುದರಿಂದ, ನಾಮೋಚ್ಚಾರಣಮಾಡಿರಿ. ಈಶ್ವರನಲ್ಲಿ ಅನುರಾಗವನ್ನುಂಟುಮಾಡಿಕೊಡುವಂತೆಯೂ, ಹಣ, ಮಾನ, ದೇಹಸುಖ ಇವುಗಳು ನಶ್ವರವಾದುದರಿಂದ ಇವುಗಳ ಮೇಲಣ ಪ್ರೀತಿಯು ಕಮ್ಮಿಯಾಗುವಂತೆಯೂ ಪ್ರಾರ್ಥನೆಯನ್ನು ಮಾಡಿರಿ.

(ವೈಷ್ಣವಧರ್ಮ, ಸಾಂಪ್ರದಾಯಿಕತೆ, ಸರ್ವಧರ್ಮಸಮನ್ವಯ)

ಶ್ರೀರಾಮಕೃಷ್ಣ:—(ಗೋಸ್ವಾಮಿಯನ್ನು ಕುರಿತು) ಅಂತರಂಗವು ಶುದ್ಧವಾಗಿದ್ದರೆ ಎಲ್ಲ ಧರ್ಮದಿಂದಲೂ ಭಗವಂತನನ್ನು ಪಡೆಯಬಹುದು. ವೈಷ್ಣವರೂ ಭಗವಂತನನ್ನು ಪಡೆಯುತ್ತಾರೆ, ಶಾಕ್ತರೂ ಪಡೆಯುತ್ತಾರೆ, ವೇದಾಂತವಾದಿಗಳೂ, ಬ್ರಹ್ಮಜ್ಞಾನಿಗಳೂ, ಮುಸಲ್ಮಾನರೂ, ಕ್ರಿಸ್ತರೂ ಭಗವಂತನನ್ನು ಪಡೆಯುತ್ತಾರೆ. ಅಂತರಂಗವು ಶುದ್ಧವಾಗಿದ್ದರೆ ಎಲ್ಲರೂ ಪಡೆಯುತ್ತಾರೆ. ಕೆಲವರು, 'ನಮ್ಮ ಕೃಷ್ಣನನ್ನು ಭಜಿಸದಿದ್ದರೆ ಏನೂ ಆಗುವುದಿಲ್ಲ,' ಎಂದೂ ; ಕೆಲವರು, 'ನಮ್ಮ ಕಾಲಿಯನ್ನು ಭಜಿಸದಿದ್ದರೆ ಏನೂ ಆಗುವುದಿಲ್ಲ,' ಎಂದೂ ; ಮತ್ತೆ ಕೆಲವರು, 'ನಮ್ಮ ಕ್ರಿಸ್ತಧರ್ಮವನ್ನು ಆಚರಿಸದಿದ್ದರೆ ಏನೂ ಆಗುವುದಿಲ್ಲ,' ಎಂದೂ ಜಗಳವಾಡುತ್ತಾ ಕುಳಿತಿರುತ್ತಾರೆ. ಈ ಸಾಂಪ್ರದಾಯಿಕತೆಯು ತಪ್ಪು.

'ನಮ್ಮ ಧರ್ಮವೇ ಸರಿ, ಮಿಕ್ಕುವೆಲ್ಲವೂ ಸುಳ್ಳು,' ಎಂಬೀ ಬುದ್ಧಿಯು ಕೆಟ್ಟ ಬುದ್ಧಿ, ಅದು ಸಂಕುಚಿತಬುದ್ಧಿ. ಭಗವಂತನನ್ನು ನಾನಾ ದಾರಿಯಿಂದ ಸೇರಬಹುದು.

ಇನ್ನು ಕೆಲವರು, 'ಈಶ್ವರನು ಸಾಕಾರ, ಅವನು ನಿರಾಕಾರನಲ್ಲ,' ಎಂದು ಹೇಳಿ ಜಗಳವಾಡುತ್ತಾರೆ. ವೈಷ್ಣವರು ಹೀಗೆ ವೇದಾಂತವಾದಿಗಳೊಡನೆ ಜಗಳವಾಡುತ್ತಾರೆ.

ಈಶ್ವರಸಾಕ್ಷಾತ್ಕಾರವಾಗಿದ್ದರೆ, ಆಗ ಸರಿಯಾಗಿ ಹೇಳಬಹುದು. ಈಶ್ವರದರ್ಶನಮಾಡಿದವನು, 'ಈಶ್ವರನು ಸಾಕಾರನು ಮತ್ತು ನಿರಾಕಾರನು. ಭಗವಂತನು ಇನ್ನೂ ನಾನಾ ರೀತಿಯುಳ್ಳವನಾಗಿರುತ್ತಾನೆ. ಆದರೆ ಅದನ್ನು ಹೇಳುವುದಕ್ಕೇ ಆಗುವುದಿಲ್ಲ,' ಎಂದು ಚೆನ್ನಾಗಿ ಬಲ್ಲನು.

ಕೆಲವರು ಕುರುಡರು ಒಂದು ಆನೆಯ ಬಳಿಗೆ ಬಂದು ಸೇರಿದರು. ಅವರನ್ನು ನೋಡಿ ಬೇರೊಬ್ಬನು, 'ಈ ಪ್ರಾಣಿಯು ಹೆಸರು ಆನೆ,' ಎಂದು ಹೇಳಿದನು. ಆಗ ಕುರುಡರು, 'ಆನೆಯು ಹೇಗಿದೆ,' ಎಂದು ವಿಚಾರಮಾಡಿ, ಆನೆಯನ್ನು ಮುಟ್ಟಿದರು. ಒಬ್ಬನು ಆನೆಯ ಕಾಲನ್ನು ಮುಟ್ಟಿ, 'ಆನೆಯು ಕಂಬದಂತೆ ಇದೆ,' ಎಂದು ಹೇಳಿದನು. ಇದೇ ರೀತಿ ಸೊಂಡಿಲನ್ನೂ, ಹೊಟ್ಟೆಯನ್ನೂ ಮುಟ್ಟಿ ನಾನಾರೀತಿಯಾಗಿ ಹೇಳತೊಡಗಿದರು. ಹಾಗೆಯೇ ಆರಾರು ಈಶ್ವರನ ವಿಷಯವಾಗಿ ಎಷ್ಟೆಷ್ಟು ನೋಡಿದ್ದಾರೆಯೋ ಅವರು ಅಷ್ಟನ್ನೇ ಮನಸ್ಸಿನಲ್ಲಿಟ್ಟುಕೊಂಡು, 'ಈಶ್ವರನ ಸ್ವಭಾವವು ಇಷ್ಟೇ. ಬೇರೆ ಏನೂ ಇಲ್ಲ,' ಎಂದು ಹೇಳುತ್ತಾರೆ.

ಒಬ್ಬನು ಹೊರಗೆ ಹೋಗಿಬಂದು, 'ಆ ಗಿಡದ ಮೇಲೆ ಒಂದು ಸುಂದರವಾದ ಕೆಂಪಾದ ಗೋಸುಂಬೆಯನ್ನು ನೋಡಿದೆನು,' ಎಂದು ಹೇಳಿದನು. ಮತ್ತೊಬ್ಬನು, 'ನಿನಗಿಂತಲೂ ಮುಂಚೆ ಆ ಗಿಡದ ಹತ್ತಿರಕ್ಕೆ ಹೋಗಿದ್ದೆನು. ಅದು ಹಸುರು. ನಾನು ಕಣ್ಣಿನಿಂದ ನೋಡಿದ್ದೇನೆ,' ಎಂದು ಹೇಳಿದನು. ಇನ್ನೊಬ್ಬನು ಬಂದು, 'ನಾನು ಚೆನ್ನಾಗಿ ಬಲ್ಲೆ. ನಿಮ್ಮಿಬ್ಬರಿಗಿಂತಲೂ ಮುಂಚಿತವಾಗಿಯೇ ಆ ಗಿಡದ ಬಳಿಗೆ ಹೋಗಿದ್ದೆನು. ಆ ಪ್ರಾಣಿಯು ಕೆಂಪೂ ಅಲ್ಲ. ಹಸುರೂ ಅಲ್ಲ. ನಾನೂ ಕಣ್ಣಿನಿಂದ ನೋಡಿ ಬಂದಿದ್ದೇನೆ. ಅದು ನೀಲ,' ಎಂದು ಹೇಳಿದನು. ಇನ್ನೂ ಇಬ್ಬರು ಬಂದು, 'ಅದು ಹಳದಿ, ಕಿತ್ತಿಳಿಯ ಬಣ್ಣ,' ಎಂದು ನಾನಾ ಬಣ್ಣವನ್ನು ಹೇಳಿದರು. ಕೊನೆಗೆ ಒಬ್ಬರಿಗೊಬ್ಬರಿಗೆ ಜಗಳವಾಯಿತು. ಎಲ್ಲರೂ, 'ತಾವು ನೋಡಿದುದೇ ಸರಿ,' ಎಂದು ತಿಳಿದುಕೊಂಡಿದ್ದಾರೆ. ಈ ಜಗಳವನ್ನು ಕೇಳಿ ಮತ್ತೊಬ್ಬನು ಬಂದು, 'ಏನು ವಿಷಯ?' ಎಂದು ವಿಚಾರಮಾಡಿದನು. ಎಲ್ಲರ ವರ್ಣನೆಯನ್ನೂ ಕೇಳಿ, 'ನಾನು ಆ ಗಿಡದ ಬುಡದಲ್ಲಿಯೇ ಇರುತ್ತೇನೆ. ಆ ಪ್ರಾಣಿಯು ನನಗೆ ಚೆನ್ನಾಗಿ ಗೊತ್ತು. ನೀವು ಒಬ್ಬೊಬ್ಬರು ಹೇಳಿದ ಬಣ್ಣಗಳೆಲ್ಲವೂ ನಿಜ; ಆ ಗೋಸುಂಬೆಯು ಒಂದು ಕಾಲದಲ್ಲಿ ಹಸುರಾಗಿಯೂ, ಮತ್ತೊಂದು ಕಾಲದಲ್ಲಿ ನೀಲವಾಗಿಯೂ, ಈ ರೀತಿ ನಾನಾ ಬಗೆಯಾಗಿ ಕಾಣಿಸಿಕೊಳ್ಳುತ್ತದೆ; ಒಂದೊಂದು ವೇಳೆ ಅದಕ್ಕೆ ಆವ ಬಣ್ಣವೂ ಇರುವುದಿಲ್ಲ, ನಿರ್ಗುಣ,' ಎಂದು ಹೇಳಿದನು.

(ಸಾಕಾರ ಅಥವಾ ನಿರಾಕಾರ)

(ಗೋಸ್ವಾಮಿಯನ್ನು ಕುರಿತು) 'ಈಶ್ವರನು ಸಾಕಾರನೇ,' ಎಂದು ಹೇಳಿದ ಮಾತ್ರದಿಂದ ಏನಾಯಿತು? ಆವನು ಶ್ರೀಕೃಷ್ಣನಂತೆ ಮಾನುಷದೇಹವನ್ನು

ಧಾರಣೆಮಾಡಿ ಬರುತ್ತಾನೆ. ಅದೂ ಸತ್ಯ. ನಾನಾರೂಪವನ್ನು ಎತ್ತಿ ಭಕ್ತರಿಗೆ ಕಾಣಿಸಿಕೊಳ್ಳುತ್ತಾನೆ, ಅದೂ ಸತ್ಯ. ಮತ್ತು ಅವನು ನಿರಾಕಾರ, ಅಖಂಡಸಚ್ಚಿದಾನಂದ, ಅದೂ ಸತ್ಯ. ಅವನನ್ನೇ ಸಾಕಾರನೆಂದೂ, ನಿರಾಕಾರನೆಂದೂ, ಸಗುಣ ಮತ್ತು ನಿರ್ಗುಣನೆಂದೂ, ವೇದದಲ್ಲಿ ಹೇಳಿದೆ. ಹೇಗೆ ಗೊತ್ತೋ? ಸಚ್ಚಿದಾನಂದಸ್ವರೂಪವು ಅನಂತಸಾಗರದಂತೆ ಇದೆ. ಶೀತವು ಸಂಬಂಧಿಸಿದೆಡೆಯಲ್ಲಿ, ಸಾಗರದ ನೀರು ಗಡ್ಡೆಯಾಗಿ, ನಾನಾ ರೂಪದಿಂದ ಸಾಗರದ ಜಲದ ಮೇಲೆ ತೇಲುತ್ತದೆ. ಹಾಗೆಯೇ ಭಕ್ತಿಯೆಂಬ ಹಿಮವಿದ್ದರೆ ಸಚ್ಚಿದಾನಂದಸಾಗರದಲ್ಲಿ ಸಾಕಾರಮೂರ್ತಿ ದರ್ಶನವಾಗುತ್ತದೆ. ಭಕ್ತರಿಗಾಗಿಯೇ ಭಗವಂತನು ಸಾಕಾರನು. ಮತ್ತೆ ಜ್ಞಾನಸೂರ್ಯನು ಹುಟ್ಟಿದರೆ, ಗಡ್ಡೆಯು ಕರಗಿ ಹಿಂದಿನ ನೀರಿನಂತೆ ನೀರಾಗುತ್ತದೆ. ಕೆಳಗೂ ಮೇಲೂ ಪರಿಪೂರ್ಣವಾದ ನೀರು. ನೀರಿನಲ್ಲಿ ನೀರು. ಆದುದರಿಂದ, 'ಭಗವಂತನೇ', ನೀನೇ ಸಾಕಾರನು, ನೀನೇ ನಿರಾಕಾರನು. ನಮ್ಮಂತೆ ನೀನು ಮನುಷ್ಯನಾಗಿ ತಿರುಗಾಡುತ್ತೀಯೆ. ಆದರೆ ವೇದದಲ್ಲಿ ನಿನ್ನನ್ನೇ ವಾಙ್ಮನಸ್ಸಿಗೆ ಅತೀತನೆಂದು ಹೇಳಿದೆ,' ಎಂದು ಭಾಗವತದಲ್ಲಿ ಸ್ತೋತ್ರವಿದೆ.

ಮತ್ತು ಸಾಗರದಲ್ಲಿ ಕೆಲವು ಸ್ಥಲಗಳಿವೆ, ಅಲ್ಲಿ ನೀರು ಗಡ್ಡೆಯಾಗಿ ಸರ್ವದಾ ಸ್ಫಟಿಕಾಕಾರವಾಗಿ ಇದ್ದುಕೊಂಡು ಕರಗುವುದೇ ಇಲ್ಲ. ಹಾಗೆಯೇ ಕೆಲವು ಭಕ್ತರ ಪಕ್ಷದಲ್ಲಿ ಭಗವಂತನೂ ನಿತ್ಯಸಾಕಾರನಾಗಿ ಇದ್ದುಕೊಂಡಿದ್ದಾನೆಂದು ಹೇಳಬಹುದು.

ಕೇದಾರ :—ಸ್ವಾಮೀ, ವ್ಯಾಸರು ಶ್ರೀಮದ್ಭಾಗವತದಲ್ಲಿ, ಮೂರು ದೋಷಗಳಿಗಾಗಿ ಭಗವಂತನ ಬಳಿಯಲ್ಲಿ ಕ್ಷಮೆಯನ್ನು ಬೇಡುತ್ತಾರೆ.

ರೂಪಂ ರೂಪವಿವರ್ಜಿತಸ್ಯ ಭವತಾ ಧ್ಯಾನೇನ ಯತ್ಕಲ್ಪಿತಂ।
ಸ್ತುತ್ಯಾನಿರ್ವಚನೀಯತಾಖಿಲಗುರೋ ದೂರೀಕೃತಾ ಯನ್ಮಯಾ॥
ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥಯಾತ್ರಾದಿನಾ।
ಕ್ಷಂತವ್ಯಂ ಜಗದೀಶ ತದ್ವಿಕಲತಾ ದೋಷತ್ರಯಂ ಮತ್ಕೃತಂ॥

ಹೇ ಭಗವಂತ, ರೂಪವಿಲ್ಲದ ನಿನಗೆ ರೂಪವನ್ನು ಧ್ಯಾನದಲ್ಲಿ ಕಲ್ಪಿಸಿಕೊಂಡೆನು. ಅನಿರ್ವಚನೀಯನಾದ ನಿನ್ನನ್ನು ಬಾಯಿಂದ ಸ್ತೋತ್ರವಮಾಡಿದೆನು. ತೀರ್ಥಯಾತ್ರಾ ಪ್ರಶಂಸೆಯಿಂದ ನಿನ್ನ ಸರ್ವವ್ಯಾಪಿತ್ವವನ್ನು ನಿರಾಕರಿಸಿದೆನು ನನ್ನ ಈ ಮೂರು ತಪ್ಪುಗಳನ್ನೂ ಕ್ಷಮಿಸು. ಇವೆಲ್ಲವೂ ನಿನ್ನ ಕೇವಲ ಲೀಲೆಯು ಎಂದರೆ, ಸಾಕಾರರೂಪದ ವರ್ಣನೆಯಾದುವು.

ಶ್ರೀರಾಮಕೃಷ್ಣ:—ಅಹುದು, ಈಶ್ವರನು ಸಾಕಾರ ಮತ್ತು ನಿರಾಕಾರ, ಸಾಕಾರನಿರಾಕಾರಗಳಿಂದಲೂ ಅತೀತನು. ಅವನನ್ನು ಹೀಗೆಂದು ತಿಳಿಯುವುದಕ್ಕೆ ಆಗುವುದಿಲ್ಲ.

ಷಷ್ಠ ಪರಿಚ್ಛೇದ

ನಿತ್ಯಸಿದ್ಧ ಮತ್ತು ಬಾಲ್ಯದಿಂದಲೂ ವೈರಾಗ್ಯ

ರಾಖಾಲನಿಗೆ ತಾಯಿ ಇಲ್ಲ. ಅವನ ತಂದೆಯು ಎರಡನೆಯ ವಿವಾಹವನ್ನು ಮಾಡಿಕೊಂಡಿದ್ದಾನೆ. ರಾಖಾಲನಿಗೆ ಪರಮಹಂಸರ ಮೇಲೆ ಬಹಳ ಪ್ರೀತಿ. ಈಗ ಅವನು ಅವರೊಂದಿಗೆ ವಾಸಮಾಡಿಕೊಂಡಿದ್ದಾನೆ. ಇದಕ್ಕೆ ಅವನ ತಂದೆಯು ಅಡ್ಡಿ ಮಾಡುವುದಿಲ್ಲ. ತಂದೆಯು ಧನಿಕ ಮತ್ತು ವಿಷಯಾಸಕ್ತ. ಕೋರ್ಟಿಗೂ ಕಛೇರಿಗೂ ಸದಾ ತಿರುಗಾಡುತ್ತಾ ಇದ್ದಾನೆ. ಭಗವಾನರ ಹತ್ತಿರಕ್ಕೆ ಅನೇಕ ವಕೀಲರೂ ಜಡ್ಜಿಗಳೂ ಬರುತ್ತಾರೆ. ಮೊಖದ್ದಮೆಯ ವಿಷಯವಾಗಿ ಮಾತಾಡುವುದಕ್ಕೂ, ಅವರ ಸಲಹೆಯನ್ನು ಕೇಳುವುದಕ್ಕೂ ಅವನು ಆಗಾಗ ಬರುತ್ತಿರುತ್ತಾನೆ. ಈ ದಿನ ಅವನೂ ಬಂದು ಕುಳಿತಿದ್ದಾನೆ. ಭಗವಾನ್ ಶ್ರೀರಾಮಕೃಷ್ಣರು ಅವನ ಕಡೆಗೆ ಆಗಾಗ ನೋಡುತ್ತಿದ್ದಾರೆ. ರಾಖಾಲನು ತಮ್ಮ ಬಳಿಯಲ್ಲಿಯೇ ದಕ್ಷಿಣೇಶ್ವರದಲ್ಲಿ ಇರಬೇಕೆಂದು ಅವರಿಗೆ ಇಚ್ಛೆ.

ಶ್ರೀರಾಮಕೃಷ್ಣ:–(ರಾಖಾಲನ ತಂದೆಯನ್ನೂ ಭಕ್ತರನ್ನೂ ಕುರಿತು) ಆಹಾ, ಈಗ ರಾಖಾಲನ ಸ್ವಭಾವವು ಎಷ್ಟು ಚೆನ್ನಾಗಿದೆ! ಅವನ ಮುಖವನ್ನು ನೋಡಿದರೇನೇ ಅದನ್ನು ತಿಳಿದುಕೊಳ್ಳಬಹುದು. ಆಗಾಗ ಅವನ ತುಟಿಯು ಅಲ್ಲಾಡುತ್ತಾ ಇದೆ. ಅವನು ಅಂತರಂಗದಲ್ಲಿ ಈಶ್ವರನ ನಾಮಜಪವನ್ನು ಮಾಡುತ್ತಿದ್ದಾನೆ. ಆದುದರಿಂದಲೇ ತುಟಿಯು ಅಲ್ಲಾಡುತ್ತಿದೆ.

ಈ ಹುಡುಗರೆಲ್ಲರೂ ನಿತ್ಯಸಿದ್ಧರು. ಇವರು ಈಶ್ವರನ ಜ್ಞಾನವನ್ನು ಇಟ್ಟುಕೊಂಡೇ ಹುಟ್ಟಿದ್ದಾರೆ. ಸಂಸಾರವು ಮೆಯ್ಯಿಗೆ ಅಂಟಿಕೊಂಡರೆ ನಮಗೆ ಮುಂದೆ ಗತಿಯಿಲ್ಲವೆಂದು ಇವರು ಸ್ವಲ್ಪ ವಯಸ್ಸಾದರೇನೇ ತಿಳಿದುಕೊಳ್ಳಬಲ್ಲರು, ವೇದದಲ್ಲಿ ಹೋಮಾಪಕ್ಷಿಯ ಕಥೆಯಿದೆ. ಅದು ನೆಲಕ್ಕೆ ಬರುವುದೇ ಇಲ್ಲ. ಆಕಾಶದಲ್ಲಿಯೇ ಇರುತ್ತ ಇದೆ. ಅಲ್ಲಿಯೇ ಮೊಟ್ಟೆ ಹಾಕುತ್ತದೆ. ಮೊಟ್ಟೆಯು ಬೀಳುತ್ತಾ, ಒಡೆದು ಮರಿಯಾಗುತ್ತದೆ. ರೆಕ್ಕೆಯು ಹುಟ್ಟುತ್ತದೆ. ಕಣ್ಣು ತೆರೆಯುತ್ತದೆ. ಆಗ

ಅದು, 'ನಾನು ನೆಲಕ್ಕೆ ಬಿದ್ದರೆ ಸತ್ತುಹೋಗುತ್ತೇನೆ,' ಎಂದು ತಿಳಿದುಕೊಂಡು, ತನ್ನ ತಾಯಿ ಇರುವ ಕಡೆಗೆ ನೆಟ್ಟಗೆ ಮೇಲಕ್ಕೆ ಹಾರಿಹೋಗುತ್ತದೆ. ತಾಯಹತ್ತಿರ ಹೋಗಿ ಸೇರಬೇಕೆಂಬುದೇ ಅದರ ಗುರಿ. ಈ ಹುಡುಗರ ಮಾದರಿಯೂ ಹಾಗೆಯೇ. ಇವರಿಗೆ ಚಿಕ್ಕಂದಿನಿಂದಲೂ ಸಂಸಾರವನ್ನು ಕಂಡರೆ ಭಯ. 'ಹೇಗೆ ತಾಯ ಹತ್ತಿರಕ್ಕೆ ಹಿಂತಿರುಗಿ ಹೋಗುವೆನು; ಹೇಗೆ ಈಶ್ವರಲಾಭವಾಗುತ್ತದೆ', ಎಂಬುದೊಂದೇ ಚಿಂತೆ.

"ವಿಷಯಾಸಕ್ತರ ಮಧ್ಯದಲ್ಲಿ ಇದ್ದುಕೊಂಡು, ಅವರ ಉದರದಲ್ಲಿಯೇ ಜನಿಸಿದರೂ, ಇಂಥ ಭಕ್ತಿಯೂ, ಇಂಥ ಜ್ಞಾನವೂ, ಇವರಿಗೆ ಹೇಗೆ ಬಂದಿತು?' ಎಂದರೆ ಇದಕ್ಕೆ ಸಮಾಧಾನವಿದೆ. ತಿಪ್ಪೆಯ ಗುಂಡಿಯಲ್ಲಿ ಬಿದ್ದ ತೊಗರಿಯ ಕಾಳಿಂದಲೂ ತೊಗರಿಯ ಗಿಡವೇ ಹುಟ್ಟುತ್ತದೆ. ಆ ತೊಗರಿಯ ಬೀಜದಿಂದ ಎಷ್ಟೋ ಪ್ರಯೋಜನವಿದೆ. ಅದು ತಿಪ್ಪೆಯ ಗುಂಡಿಯಲ್ಲಿ ಬಿದ್ದಮಾತ್ರದಿಂದ ಅದರಲ್ಲಿ ಬೇರೆಯ ಗಿಡವು ಹುಟ್ಟೀತೇ?

ಆಹಾ! ರಾಖಾಲನ ಸ್ವಭಾವವು ಈಗ ಎಷ್ಟು ಚೆನ್ನಾಗಿದೆ! ಹಾಗೆ ಏಕೆ ಆಗಬಾರದು? ಸುವರ್ಣಗಡ್ಡೆಯು ಚೆನ್ನಾಗಿದ್ದರೆ, ಅದರ ಮೊಳಕೆಯೂ ಚೆನ್ನಾಗಿರುತ್ತದೆ. (ಎಲ್ಲರೂ ನಗುತ್ತಾರೆ) ತಂದೆಯಂತೆ ಮಗ.

ಮಾಸ್ಟರ್ :—(ರಹಸ್ಯವಾಗಿ ಗಿರೀಂದ್ರನನ್ನು ಕುರಿತು) ಸಾಕಾರ ನಿರಾಕಾರದ ಮಾತನ್ನು ಇವರು ಎಷ್ಟು ಚೆನ್ನಾಗಿ ತಿಳಿಸಿದರು. ವೈಷ್ಣವರು ದೇವರನ್ನು ಸಾಕಾರನೆಂದೇ ತಿಳಿದುಕೊಂಡಿದ್ದಾರೆಯೇ, ಏನು?

ಗಿರೀಂದ್ರ :—ಇರಬಹುದು. ಅವರು ಏಕಪಕ್ಷಾವಲಂಬಿಗಳು. ಅವರಲ್ಲಿ ಸಾಂಪ್ರದಾಯಿಕತೆ ಹೆಚ್ಚು.

ಮಾಸ್ಟರ್ :—ನಿತ್ಯಸಾಕಾರವೆಂಬುದೂ, ಸ್ಫಟಿಕದ ಮಾತೂ, ನಿನಗೆ ಗೊತ್ತಾಯಿತೋ? ನನಗೆ ಚೆನ್ನಾಗಿ ತಿಳಿಯಲಿಲ್ಲ.

ಶ್ರೀರಾಮಕೃಷ್ಣ :—(ಮಾಸ್ಟರನ್ನು ನೋಡಿ) ಅಯ್ಯಾ, ನೀವೇನ ಮಾತಾಡುತ್ತಿದ್ದೀರಿ. (ಮಾಸ್ಟರೂ, ಗಿರೀಂದ್ರನೂ ನಕ್ಕು ಸುಮ್ಮನಾದರು.)

ಬೃಂದೆ:—(ರಾಮಲಾಲನನ್ನು ಕುರಿತು) ಸ್ವಾಮೀ, ರಾಮಲಾಲರೇ, ಇವನಿಗೆ ಮೊದಲು ತಿಂಡಿಯನ್ನು ಕೊಟ್ಟು ಕಳುಹಿಸಿರಿ. ಆ ಮೇಲೆ ನನಗೆ ಕೊಡುವಿರಂತೆ.

ಶ್ರೀರಾಮಕೃಷ್ಣ :—ಬೃಂದೆಗೆ ಇನ್ನೂ ತಿನ್ನುವುದಕ್ಕೆ ಕೊಡಲಿಲ್ಲವೇ?

ಸಪ್ತಮ ಪರಿಚ್ಛೇದ

ಪಂಚವಟಿಯ ಸ್ಥಲದಲ್ಲಿ ಕೀರ್ತನಾನಂದ

ಅಪರಾಹ್ಣದಲ್ಲಿ ಭಕ್ತರು ಪಂಚವಟಿಯ ಬುಡದಲ್ಲಿ ಕೀರ್ತನವನ್ನು ಮಾಡುತ್ತಿದ್ದಾರೆ. ಭಗವಾನ್ ಶ್ರೀರಾಮಕೃಷ್ಣರೂ ಅವರ ಹತ್ತಿರಕ್ಕೆ ಹೋದರು. ಈಗ ಭಕ್ತರೊಡನೆ ಕಾಳಿಯ ನಾಮವನ್ನು ಕೀರ್ತನಮಾಡುತ್ತಾ ಆನಂದದಲ್ಲಿ ತೇಲಿದರು.

॥ ಗಾನ॥

ಶ್ಯಾಮಾಪಾದ। ವ್ಯೋಮದ ಹಾರುವು। ದೀಮನವೆಂಬುವ ಪಟವೀಗ॥
ತಾಮಸವೆಂದೆಂ। ಬಾ ಮಾರುತನದ। ಭೂಮಿಗೆ ತಳ್ಳಿತು ಬಲು ಬೇಗ ॥೧॥

ಹಾರದಿರುವ ವೊಲು। ಭಾರವ ಬೀಳಿಸಿ। ಮೇರೆಯ ತಪ್ಪಿಸಿತದ ಮಾಯೆ॥
ಹಾರಿಸುವೆನೆ ಸುತ। ದಾರಾಮೋಹದ। ದಾರದೆ ಸಿಲುಕಿತು ನಾನರಿಯೆ ॥೨॥

ಕಿತ್ತಿತು ಸೂತ್ರವು। ಮಸ್ತಕ ಮುರಿಯಿ। ತ್ತೆತ್ತ ಹಾರಿಸುವೆನಾನದನು॥
ಸುತ್ತ ಜತೆಯೊಳಿ। ದ್ದಾರು ಪಟಂಗಳಿ। ಯೊತ್ತಿ ಗೆಲಿದುವಿದಕಿನ್ನೇನು ॥೩॥

ನಿರವಗ್ರಹತೆಯ। ವರಸೂತ್ರವು ತಾ। ನಿರುತಿರ್ದುದು ಹಾರಿಸುವಾಗ॥
ಮುರಿಯಲು ತಲೆಯಾ। ನರೇಶಚಂದ್ರನು। ಹಿರಿದಳಲುವನಾಟಕ್ಕೀಗ ॥೪॥

ಮತ್ತೂ ಗಾನವಾಗುತ್ತದೆ. ಗಾನದೊಡನೆ ತಾಳವನ್ನೂ ಹಾಕುತ್ತಾರೆ. ಭಗವಾನರು ಭಕ್ತರೊಡನೆ ನರ್ತನಮಾಡುತ್ತಿದ್ದಾರೆ

ಗಾನ

('ಒಂದೇ ನಾಮದೊಳಡಗಿದುದು' ಎಂಬಂತೆ)

ಚೇತೋಭ್ರಮರವಡಗಿದ್ದುದು। ಅಡಗಿದುದು। ಶ್ರೀ।
ಮಾತೆಯ ಪಾದಕಮಲಯುಗದೊಳಗೆ॥
ಆಸೆಯೆಂಬುವ ಹೂಗಳಲ್ಲಿ। ವಿಷಯವಿ
ಶೇಷಮರಂದಪಾನವನು ಮಾಡಲಿಕೆ॥
ಆಸೆಯ ತಳೆಯದೆ ಶ್ಯಾಮಾ। ಚರಣಕು।
ಶೇಶಯರಸವನು ಪಾನಮಾಡುತ್ತೆ ॥೧॥

ಕರಿಯವು ಚರಣಯುಗಲವು। ಭ್ರಮರವು।
ಕರಿದು ಬೆರಸಿತು ಕರಿದಿನೊಳು ಕರಿದು॥
ಮೆರೆಯುವ ತತ್ವಂಗಳೈದು। ಪ್ರಕೃತಿಯು।
ಭರದಿಂದಲೋಡಿಪೋದುವು ನಿಲ್ಲದಂತೆ ॥೨॥

ಕಮಲಾಕಾಂತನ ಚಿತ್ತದಾಶೆ ಯಿಂದಿಗೆ।
ಯಮವು ಸಂಪೂರ್ಣತೆಯಾಂತು ತೋರಿದುದು ॥
ಕ್ರಮದೊಳಾನಂದಸಾಗರವು ಹೆಚ್ಚಲು ।
ವಿಮನನೆಂದೆನಿಪನು ಸುಖದುಃಖಗಳಿಗೆ ॥೩॥

ಕೀರ್ತನವಾಗುತ್ತಿದೆ. ಭಕ್ತರು ಗಾನಮಾಡುತ್ತಾರೆ.

ಗಾನ.

(“ ವೃಂದಾವನದೊಳಾಡುವನಾರೇ” ಎಂಬಂತೆ)

ಮಾಡಿದಳೈದು ಮೊಳದ ಯಂತ್ರ । ಅದ ।
ನಾಡಿಸುತಿರುವಳು ಮಾತೆ ಸ್ವತಂತ್ರೆ ॥
ಕುಳಿತು ಯಂತ್ರದ ಒಳಗಡೆಯುವಳು । ಮನ।
ಕೊಲಿದಂತೆಯುದನು ತಿರುಗಿಸುವಳು ॥
ನಲಿಯುತೆ ತಾನೆಯಾಡುವೆನೆಂದು । ಯಂತ್ರ।
ತಿಳಿದುದಿನ್ನಾಡಿಪರಿಲ್ಲೆಂದು ॥೧॥

ತನ್ನನಾಡಿಸುವರಿನ್ನುಂಟೆಂದು। ಯಂತ್ರ।
ಮುನ್ನವರಿಯೆ ಯಂತ್ರವಲ್ಲೆಂದ ॥
ತನ್ನೊಳಗಿರುವಳ ಭಕ್ತಿಯು। ಸಂ।
ಪನ್ನಗುಣದೆ ಬಿಗಿವುದು ಯಂತ್ರ ॥೨॥

ಭಕ್ತರು ಆನಂದಪಟ್ಟರು. ಕೀರ್ತನವು ಸ್ವಲ್ಪ ನಿಂತ ಬಳಿಕ ಭಗವಾನರು ಎದ್ದರು. ಕೊಟ್ಟಡಿಯಲ್ಲಿ ಅಕ್ಕಪಕ್ಕದಲ್ಲಿಯೂ ಬಹಳ ಮಂದಿ ಭಕ್ತರು ನೆರೆದಿದ್ದಾರೆ.

ಭಗವಾನ್ ಶ್ರೀರಾಮಕೃಷ್ಣರು ಪಂಚವಟಿಯಿಂದ ದಕ್ಷಿಣಾಸ್ಯರಾಗಿ ತಮ್ಮ ಕೊಟ್ಟಡಿಗೆ ಬರುತ್ತಿದ್ದಾರೆ. ಜತೆಯಲ್ಲಿ ಮಾಸ್ಟರು ಇದ್ದಾನೆ. ವಕುಲತಲದ ಹತ್ತಿರಕ್ಕೆ ಬಂದ ಮೇಲೆ ತ್ರೈಲೋಕ್ಯನನ್ನು ಕಂಡರು. ಅವನು ಇವರಿಗೆ ನಮಸ್ಕಾರವನ್ನು ಮಾಡಿದನು.

ಶ್ರೀರಾಮಕೃಷ್ಣ :—(ತ್ರೈಲೋಕ್ಯನನ್ನು ಕುರಿತು) ಪಂಚವಟಿಯಲ್ಲಿ ಅವರು ಗಾನಮಾಡುತ್ತಿದ್ದಾರೆ. ಹೋಗೋಣ ಬಾ.

ತ್ರೈಲೋಕ್ಯ :—ಹೋಗಿ ಏನ ಮಾಡಬೇಕು ?

ಶ್ರೀರಾಮಕೃಷ್ಣ :—ಚೆನ್ನಾಗಿದೆ. ಒಂದು ಸಲ ನೋಡಬಾರದೇ ?

ತ್ರೈಲೋಕ್ಯ :—ಆಗಲೇ ನೋಡಿ ಬಂದೆನು.

ಶ್ರೀರಾಮಕೃಷ್ಣ :—ಒಳ್ಳೆಯದು. ಹಾಗಾದರೆ ಒಳ್ಳೆಯದು.

ಅಷ್ಟಮ ಪರಿಚ್ಛೇದ

ಗೃಹಸ್ಥ ಧರ್ಮ.

ಸುಮಾರು ಐದೂವರೆ, ಆರುಗಂಟೆಯಾಯಿತು. ಭಗವಾನರು ಭಕ್ತರೊಂದಿಗೆ ತಮ್ಮ ಕೊಟ್ಟಡಿಯ ಆಗ್ನೇಯದ ವರಾಂಡಾದಲ್ಲಿ ಕುಳಿತು ಭಕ್ತರ ಕಡೆಯನ್ನು ನೋಡುತ್ತಿದ್ದಾರೆ.

ಶ್ರೀರಾಮಕೃಷ್ಣ :—(ಕೇದಾರಾದಿಭಕ್ತರನ್ನು ಕುರಿತು) ಸಂಸಾರತ್ಯಾಗಮಾಡಿದ 'ಸಾಧುವು ಹರಿನಾಮದ ಜಪವನ್ನು ಮಾಡಿಯೇ ಮಾಡುತ್ತಾನೆ. ಅವನಿಗೆ ಇನ್ನು ಬೇರೆ ಕೆಲಸವೇ ಇಲ್ಲ. ಅವನು ಈಶ್ವರಚಿಂತೆಯನ್ನು ಮಾಡುವುದೇನೂ ಆಶ್ಚರ್ಯವಲ್ಲ. ಈಶ್ವರಚಿಂತೆಯನ್ನೂ, ಹರಿನಾಮದ ಜಪವನ್ನೂ, ಮಾಡದಿದ್ದರೆ ಜನರೆಲ್ಲರೂ ಅವನನ್ನು ನಿಂದಿಸುತ್ತಾರೆ.

ಸಂಸಾರಿಯು ಹರಿನಾಮಜಪವನ್ನು ಮಾಡಿದರೆ ಅದೀಗ ದೊಡ್ಡದು. ನೋಡು, ಜನಕಮಹಾರಾಜನೀಗ ಬಹು ಶ್ರೇಷ್ಠನು. ಅವನು ಜ್ಞಾನಕರ್ಮಗಳೆಂಬ ಎರಡು ಕತ್ತಿಗಳನ್ನೂ ತಿರುಗಿಸುತ್ತಿದ್ದನು. ಇತ್ತ ಕಡೆ ಪೂರ್ಣ ಬ್ರಹ್ಮಜ್ಞಾನಿ, ಅತ್ತ ಕಡೆ ಸಂಸಾರಕರ್ಮಗಳೆಲ್ಲವನ್ನೂ ಬಲು ಚೆನ್ನಾಗಿ ಮಾಡುತ್ತಿದ್ದನು. ಕೆಟ್ಟ ಹೆಂಗುಸು ಮನೆಯ ಕೆಲಸವನ್ನೆಲ್ಲಾ ಬಲು ನಾಜೋಕಾಗಿ ಮಾಡುತ್ತಾಳೆ. ಆದರೆ ಅವಳಿಗೆ ಆವಾಗಲೂ ಉಪಪತಿಯ ಮೇಲೆಯೇ ಮನಸ್ಸು.

ಸಾಧುಸಂಗವು ಸದಾ ಆವಶ್ಯಕ. ಸಾಧುವು ಭಕ್ತರನ್ನು ಈಶ್ವರನ ಜತೆಯಲ್ಲಿ ಮಾತನಾಡುವ ಹಾಗೆ ಮಾಡಿಕೊಡುತ್ತಾನೆ.

ಕೇದಾರ :—ಸ್ವಾಮೀ, ಅಹುದು. ರೈಲಿನ ಇಂಜನ್ನು ಹಿಂದುಗಡೆ ಕಟ್ಟಿದ ಬಂಡಿಗಳೆಲ್ಲವನ್ನೂ ಎಳೆದುಕೊಂಡು ಹೋಗುತ್ತದೆ. ನದಿ, ಕೆರೆ ಇವುಗಳು ಎಷ್ಟೋ ಜೀವರ ಬಾಯಾರಿಕೆಯನ್ನು ಅಡಗಿಸುತ್ತವೆ. ಹಾಗೆಯೇ ಮಹಾಪುರುಷರು ಜೀವರ ಉದ್ಧಾರಕ್ಕಾಗಿಯೇ ಬರುತ್ತಾರೆ.

ಕ್ರಮವಾಗಿ ಭಕ್ತರೆಲ್ಲರೂ ತಮ್ಮ ತಮ್ಮ ಮನೆಗೆ ಹಿಂತಿರುಗುವುದಕ್ಕೆ ಸಿದ್ಧರಾದರು. ಒಬ್ಬೊಬ್ಬರಾಗಿ ಎಲ್ಲರೂ ಭಗವಾನರಿಗೆ ನಮಸ್ಕಾರವನ್ನು ಮಾಡಿ ಅವರ ಪಾದಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿದರು.

ಭಗವಾನರು ಭವನಾಥನಿಗೆ, ' ಈಗ ನೀನು ಹೋಗಬೇಡ. ನಿನ್ನನ್ನು ನೋಡಿದರೇನೇ ನನಗೆ ಉದ್ದೀಪನವಾಗುತ್ತದೆ,' ಎಂದು ಹೇಳಿದರು. ಭವನಾಥನು ಇನ್ನೂ ಸಂಸಾರಕ್ಕೆ ಪ್ರವೇಶಮಾಡಿರಲಿಲ್ಲ. ಅವನಿಗೆ ಹತ್ತೊಂಭತ್ತು ಇಪ್ಪತ್ತು ವಯಸ್ಸು. ಅವನು ಗೌರವರ್ಣ, ಸುಂದರವಾದ ದೇಹ, ಈಶ್ವರನಾಮವನ್ನು ಕೇಳಿದರೆ ಅವನ

ಕಣ್ಣುಗಳಿಂದ ನೀರು ಬರುತ್ತಿದ್ದಿತು. ಭಗವಾನರು ಅವನನ್ನು ಸಾಕ್ಷಾನ್ನಾರಾಯಣ ನಂತೆ ಕಾಣುತ್ತಿದ್ದರು.

ಹದಿನಾಲ್ಕನೆಯ ಖಂಡ

ದಕ್ಷಿಣೇಶ್ವರದ ಕಾಲೀದೇವಾಲಯದಲ್ಲಿ ಶ್ರೀಯುಕ್ತ ಅಮೃತ,
ಶ್ರೀಯುಕ್ತ ತ್ರೈಲೋಕ್ಯ ಪ್ರಭೃತಿ ಬ್ರಾಹ್ಮಸಮಾಜದವರೊಡನೆ ಮಾತು.

ಪ್ರಥಮ ಪರಿಚ್ಛೇದ

ಸಮಾಧಿ.

ಈ ದಿನ ಬೃಹಸ್ಪತಿವಾರ, ೧೮೮೩ ನೆಯ ಮಾರ್ಚಿ ತೇದಿ ೨೯. ಮಧ್ಯಾಹ್ನ ಭೋಜನವಾದ ಮೇಲೆ, ಭಗವಾನ್ ಶ್ರೀರಾಮಕೃಷ್ಣರು ಸ್ವಲ್ಪ ವಿಶ್ರಮಿಸಿಕೊಳ್ಳುತ್ತಿದ್ದಾರೆ. ದಕ್ಷಿಣೇಶ್ವರದ ಕಾಲೀದೇವಾಲಯದ ಪೂರ್ವಪರಿಚಿತವಾದ ಅದೇ ಕೊಟ್ಟಡಿ. ಪಶ್ಚಿಮದಲ್ಲಿ ಇದಿರಿಗೆ ಗಂಗೆ. ಚೈತ್ರಮಾಸದ ಗಂಗೆ. ಎರಡು ಗಂಟೆಯ ಸಮಯ. ನದಿಯು ಉಕ್ಕುವುದಕ್ಕೆ ಪ್ರಾರಂಭವಾಗಿದೆ. ಕೆಲವರು ಭಕ್ತರು ಬಂದಿದ್ದಾರೆ. ಬ್ರಾಹ್ಮಸಮಾಜದ ಅಮೃತನೂ ಮಧುರಕಂಠನಾದ ತ್ರೈಲೋಕ್ಯನೂ ಇದ್ದಾರೆ. ತ್ರೈಲೋಕ್ಯನು ಕೇಶವನ ಬ್ರಾಹ್ಮಸಮಾಜದಲ್ಲಿ ಭಗವಲ್ಲೀಲಾಗುಣಗಾನವನ್ನು ಮಾಡಿ, ಎಷ್ಟೋ ಆವೃತ್ತಿ ಅಲ್ಲದ್ದ ಆಬಾಲವೃದ್ಧರ ಮನಸ್ಸನ್ನು ಹರಣಮಾಡಿದ್ದಾನೆ. ರಾಖಾಲನಿಗೆ ಮೈಯ್ಯು ಸರಿಯಾಗಿಲ್ಲವೆಂಬದಾಗಿ ಶ್ರೀರಾಮಕೃಷ್ಣರು ಭಕ್ತರಿಗೆ ಹೇಳುತ್ತಿದ್ದಾರೆ.

ಶ್ರೀರಾಮಕೃಷ್ಣ :—ಇಗೋ ಸೋಡಿರಿ. ರಾಖಾಲನಿಗೆ ಅನಾರೋಗ್ಯ. ಸೋಡಾಕುಡಿದರೆ ಅವನಿಗೆ ಗುಣವಾದೀತೇ? ಅಯ್ಯೋ, ಏನಾಗುತ್ತದೆಯೋ? ರಾಖಾಲ, ನೀನು ಜಗನ್ನಾಥದ ಪ್ರಸಾದವನ್ನು ತಿನ್ನು.

ಈ ರೀತಿ ಹೇಳುತ್ತಾ, ಭಗವಾನರು ಅದ್ಭುತವಾದ ಭಾವದಿಂದ ಉನ್ಮತ್ತರಾದರು. 'ಸಾಕ್ಷಾನ್ನಾರಾಯಣನೇ ಬಾಲಕರಾಖಾಲನ ದೇಹವನ್ನು ಧಾರಣೆಮಾಡಿ ಇದಿರಿಗೆ ಬಂದಿದ್ದಾನೆಯೋ,' ಎಂದು ಭಗವಾನರು ಆಲೋಚಿಸುವಂತೆ ಇದೆ.

ಇತ್ತ ಕಾಮಿನೀಕಾಂಚನವನ್ನು ತ್ಯಾಗಮಾಡಿ, ಶುದ್ಧಾತ್ಮನಾದ ಬಾಲಕ ಭಕ್ತ ರಾಖಾಲ; ಅತ್ತ ಈಶ್ವರಪ್ರೇಮದಿಂದ ಅಹರಹಃ ಮತ್ತರಾದ ಶ್ರೀರಾಮ

ಕೃಷ್ಣರ ಪ್ರೇಮಚಕ್ಷುಸ್ಸು. ಇವೆರಡೂ ಸೇರಿ ವಾತ್ಸಲ್ಯವು ಸಹಜವಾಗಿ ಉದಯವಾಗಿದೆಯೋ, ಎಂಬಂತಿದೆ. ಅವರು ಬಾಲಕರಾಖಾಲನನ್ನು ವಾತ್ಸಲ್ಯಭಾವದಿಂದ ನೋಡುತ್ತ, 'ಗೋವಿಂದ, ಗೋವಿಂದ,' ಎಂದು ಪ್ರೇಮಾತಿಶಯದಿಂದ ಹೇಳ ತೊಡಗಿದರು. ಶ್ರೀಕೃಷ್ಣನನ್ನು ನೋಡಿದರೆ ಯಶೋದೆಗೆ ಆವ ಭಾವೋದಯವಾಗುತ್ತಿದ್ದಿತೋ, ಅದೇ ಭಾವವು ಭಗವಾನರಿಗೆ ಉಂಟಾಗಿರಬೇಕೆಂದು ತೋರುತ್ತದೆ. ಭಕ್ತರು ಈ ಅದ್ಭುತವ್ಯಾಪಾರವನ್ನು ನೋಡಿದರು. ಆಗ ಶ್ರೀರಾಮಕೃಷ್ಣರು ನಿಶ್ಚಂಚಲ; ಗೋವಿಂದ ನಾಮೋಚ್ಚಾರಣವನ್ನು ಮಾಡುತ್ತಾ, ಭಕ್ತಾವತಾರರಾದ ಅವರು ಸಮಾಧಿಸ್ಥರಾಗಿದ್ದಾರೆ. ಶರೀರವು ಚಿತ್ರದಲ್ಲಿ ಬರೆದಂತೆ ಅಲ್ಲಾಡದೆ ಇದೆ. ಬಾಹ್ಯೇಂದ್ರಿಯಗಳ ವ್ಯಾಪಾರವೇ ನಿಂತು ಹೋಗಿದೆ. ದೃಷ್ಟಿಯು ನಾಸಿಕೆಯ ಅಗ್ರದಲ್ಲಿ ಸ್ಥಿರವಾಗಿದೆ. ನಿಶ್ವಾಸವು ಹೊರಡುತ್ತಿದೆಯೋ ಇಲ್ಲವೋ, ಎಂಬಂತೆ ಇದೆ. ಅವರ ಪಾಂಚಭೌತಿಕವಾದ ಶರೀರವೊಂದೇ ಇಹಲೋಕದಲ್ಲಿ ಬಿದ್ದಿದೆ. ಆದರೆ ಆತ್ಮವೆಂಬ ಪಕ್ಷಿಯು ಎಲ್ಲಿಯೋ ಚಿದಾಕಾಶದಲ್ಲಿ ಸಂಚಾರಮಾಡುತ್ತಲಿದೆ. ಅವರು ಇಲ್ಲಿಯ ತನಕ ರಾಖಾಲನಲ್ಲಿ ಹೆತ್ತ ತಾಯಂತೆ ಕಾತರರಾಗಿದ್ದರು. ಈಗ ಎಲ್ಲಿಗೆ ಹೋಗಿದ್ದಾರೆ? ಈ ಅದ್ಭುತವಾದ ಭಾವಾಂತರವನ್ನೇ ಸಮಾಧಿಯೆನ್ನುತ್ತಾರೆಯೇ?

ಇದೇ ಸಮಯದಲ್ಲಿ ಕಾವಿಯ ಬಟ್ಟೆಯನ್ನು ಉಟ್ಟ ಅಪರಿಚಿತನಾದ ಒಬ್ಬ ಬಂಗಾಳೀ ಮನುಷ್ಯನು ಬಂದು ಕುಳಿತನು.

ದ್ವಿತೀಯ ಪರಿಚ್ಛೇದ

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಸ್ಸ ಉಚ್ಯತೇ ॥ ಗೀತಾ ೩-೬

[ಕರ್ಮೇಂದ್ರಿಯಗಳನ್ನು ನಿಗ್ರಹಿಸಿ, ಮನದಲ್ಲಿ ವಿಷಯಗಳನ್ನು ಸ್ಮರಿಸುವವನನ್ನು ಮೂಢಾತ್ಮನೆಂದೂ, ಸದಾಚಾರವಿಲ್ಲದವನೆಂದೂ, ಹೇಳಬೇಕು.]

ಪರಮಹಂಸದೇವರ ಸಮಾಧಿಯು ಕ್ರಮವಾಗಿ ಭಂಗವಾಗುತ್ತ ಬಂದಿತು. ಅವರು ಭಾವದಲ್ಲಿ ಇದ್ದುಕೊಂಡೇ ತಮ್ಮಷ್ಟಕ್ಕೆ ತಾವೇ ಮಾತನಾಡುತ್ತಿದ್ದಾರೆ.

(ಕಾವಿಯ ಬಟ್ಟೆಯೇ ಸನ್ಯಾಸವೇ? ಅಭಿನಯದಲ್ಲಿಯೂ ಸುಳ್ಳು ಒಳ್ಳೆಯದಲ್ಲ.)

ಶ್ರೀರಾಮಕೃಷ್ಣ :—(ಕಾವಿಯನ್ನು ದೃಷ್ಟಿಸಿ) ಕಾವಿಯು ಏತಕ್ಕೆ? ಅದು ಒಂದನ್ನು ಧರಿಸಿದ ಮಾತ್ರದಿಂದ ಎಲ್ಲಾ ಆಯಿತೋ? (ನಗುತ್ತಾರೆ.)

'ಚಂಡೀಗಾನವನ್ನು ಬಿಟ್ಟು ಮದ್ದಲೆ ಬಾಜಿಸುವನಾದೆನು,' ಎಂದು ಒಬ್ಬನು ಹೇಳಿದನು. ಹಿಂದೆ ಚಂಡಿಯ ಗಾನವನ್ನು ಹಾಡುತ್ತಿದ್ದವನು, ಈಗ ಮದ್ದಲೆಯನ್ನು ಬಾಜಿಸುತ್ತಾನೆ. (ಎಲ್ಲರೂ ನಗುವರು.)

ವೈರಾಗ್ಯವು ಮೂರು ನಾಲ್ಕು ವಿಧಗಳು. ಸಂಸಾರ ಜ್ವಾಲೆಯಿಂದ ಬೆಂದು, ಕಾವಿಯ ಬಟ್ಟೆಯನ್ನು ಧರಿಸುವುದು ಒಂದು ರೀತಿ. ಈ ವೈರಾಗ್ಯವು ಬಹಳ ದಿವಸ ನಿಲ್ಲುವುದಿಲ್ಲ. ಇಂಥವರು ಬಹುಶಃ ತಮ್ಮ ಊರಲ್ಲ ಎಲ್ಲಿಯೂ ಕೆಲಸವು ಸಿಕ್ಕದುದರಿಂದ, ಕಾವಿಯನ್ನು ಧರಿಸಿ ಕಾಶಿಗೆ ಹೋಗುತ್ತಾರೆ. ಮೂರು ತಿಂಗಳ ಬಳಿಕ, 'ನನಗೆ ಒಂದು ಕೆಲಸ ಸಿಕ್ಕಿದೆ, ಸ್ವಲ್ಪ ದಿವಸಗಳ ತರುವಾಯ ಮನೆಗೆ ಬರುತ್ತೇನೆ, ನೀವು ಯೋಚಿಸಬೇಡಿ,' ಎಂದು ಮನೆಗೆ ಕಾಗದ ಬರೆಯುತ್ತಾರೆ. ಇನ್ನೊಂದು ರೀತಿಯ ವೈರಾಗ್ಯವಿದೆ. ಅದರಲ್ಲಿ ಮನುಷ್ಯನಿಗೆ ಆವುದಕ್ಕೂ ಕೊರತೆಯಿಲ್ಲ. ಬೇಕಾದಷ್ಟು ಐಶ್ವರ್ಯವಿದೆ. ಆದರೆ ಅವನಿಗೆ ಅವೆಲ್ಲವೂ ಮನಸ್ಸಿಗೆ ಚೆನ್ನಾಗಿ ಕಾಣುವುದಿಲ್ಲ. ಭಗವಂತನನ್ನು ನೋಡಬೇಕೆಂದು ಅವನು ಏಕಾಕಿಯಾಗಿ ಅಳುತ್ತಾನೆ. ಈ ವೈರಾಗ್ಯವೀಗ ಯಥಾರ್ಥವಾದ ವೈರಾಗ್ಯ.

ಸುಳ್ಳು ಕೊಂಚವೂ ಒಳ್ಳೆಯದಲ್ಲ. ಸುಳ್ಳಿನ ವೇಷವೂ ಒಳ್ಳೆಯದಲ್ಲ. ವೇಷಕ್ಕೆ ತಕ್ಕಂತೆ ಮನಸ್ಸು ಇರದಿದ್ದರೆ, ಎಲ್ಲವೂ ಕ್ರಮವಾಗಿ ನಾಶವಾಗುತ್ತವೆ. ಸುಳ್ಳನ್ನು ಹೇಳಿದರೂ, ಸುಳ್ಳುಸುಳ್ಳಾಗಿ ನಡೆದರೂ, ಅದರಲ್ಲಿ ಬರುತ ಬರುತ ಭಯವು ತಪ್ಪಿಹೋಗುತ್ತದೆ. ವೇಷಕ್ಕಾಗಿ ಧರಿಸುವ ಕಾವಿಯ ಬಟ್ಟೆಗಿಂತ, ಬಿಳಿಯ ಬಟ್ಟೆಯೇ ಲೇಸು. ಮನಸ್ಸಿನಲ್ಲಿ ವಿಷಯಾಸಕ್ತಿ; ಆಗಾಗ ಒಳಗೆ ಕೆಟ್ಟ ಕೆಲಸವನ್ನು ಮಾಡುತ್ತಿರುವುದು, ಹೊರಗೆ ಕಾವಿಯ ಬಟ್ಟೆ; ಇದರಿಂದ ಅವನಿಗೆ ತುಂಬಾ ಕೆಡಕಾಗುತ್ತದೆ.

(ಕೇಶವನ ಮನೆಗೆ ಹೋಗುವಿಕೆ, ನವಬೃಂದಾವನದರ್ಶನ)

ಇಷ್ಟೇ ಅಲ್ಲ. ಅಭಿನಯದಲ್ಲಿಯೂ ಸುಳ್ಳುಮಾತನ್ನು ಆಡುವುದಾಗಲಿ, ಸುಳ್ಳು ಕೆಲಸಮಾಡುವುದಾಗಲಿ, ಸರಿಯಲ್ಲ. ಕೇಶವಸೇನನ ಮನೆಯಲ್ಲಿ ನವಬೃಂದಾವನನಾಟಕವನ್ನು ನೋಡುವುದಕ್ಕೆ ಹೋಗಿದ್ದೆನು. ಅವನೋ ಒಬ್ಬನು ಶಿಲುಬೆಯನ್ನು ತೆಗೆದುಕೊಂಡು ಬಂದನು. ಶಾಂತಿ ಜಲವೆಂದು ನೀರನ್ನು ಪ್ರೋಕ್ಷಿಸಿದನು. ಒಬ್ಬನನ್ನು ನೋಡಿದೆನು, ಅವನು ಕುಡುಕನ ವೇಷವನ್ನು ಹಾಕಿ ಕೊಂಡು ಬಂದನು.

ಬ್ರಾಹ್ಮಭಕ್ತ :—ಕೂ—ಬಾಬುವೋ ?

ಶ್ರೀರಾಮಕೃಷ್ಣ:—ಭಕ್ತರಿಗೆ ಈ ರೀತಿಯ ವೇಷ ಕೂಡ ಒಳ್ಳೆಯದಲ್ಲ. ಇಂಥ ವಿಷಯದಲ್ಲಿ ಮನಸ್ಸನ್ನು ಬಲು ಹೊತ್ತು ಇಟ್ಟರೆ, ದೋಷವುಂಟಾಗುತ್ತದೆ. ಮನಸ್ಸು ಬಣ್ಣಗಾರನ ಮನೆಯ ಬಟ್ಟೆಯಂತೆ. ಬಟ್ಟೆಯನ್ನು ಅವನು ಆವ ಬಣ್ಣದಲ್ಲಿ ಅದ್ದುತ್ತಾನೆಯೋ, ಆ ಬಣ್ಣವು ಅದಕ್ಕೆ ಬರುತ್ತದೆ. ಮನಸ್ಸು ಸುಳ್ಳಿನಲ್ಲಿ ಬಹುಕಾಲ ಇದ್ದರೆ, ಅದಕ್ಕೆ ಮಿಥ್ಯೆಯ ಬಣ್ಣವು ಅಂಟಿಕೊಳ್ಳುತ್ತದೆ.

ಇನ್ನೊಂದು ದಿವಸ 'ಚೈತನ್ಯದೇವನ ಸನ್ಯಾಸ' ಎಂಬ ನಾಟಕವನ್ನು ಕೇಶವನ ಮನೆಯಲ್ಲಿ ನೋಡುವುದಕ್ಕೆ ಹೋಗಿದ್ದೆನು. ಕೇಶವನ ಹೊಗಳುಭಟ್ಟರಾದ ಕೆಲವರು ಶಿಷ್ಯರು ನಾಟಕವನ್ನು ಕೆಡಿಸಿಬಿಟ್ಟರು. 'ನೀನು ಈ ಕಲಿಕಾಲದ ಚೈತನ್ಯನಾಗಿದ್ದೀಯೆ,' ಎಂದು ಅವರು ಕೇಶವನನ್ನು ಸ್ತೋತ್ರ ಮಾಡಿದರು. ಕೇಶವನಾದರೋ ನನ್ನನ್ನು ನೋಡಿ ನಗುತ್ತಾ, 'ಹಾಗಾದರೆ ಇವರು ಆರು?' ಎಂದು ಕೇಳಿದನು. 'ನಿಮ್ಮ ದಾಸರ ದಾಸನು ; ರೇಣುವಿನ ರೇಣು', ಎಂದು ನಾನು ಹೇಳಿದೆನು. ಕೇಶವನಿಗೆ ಲೋಕಮಾನ್ಯನಾಗಬೇಕೆಂಬ ಇಚ್ಛೆಯಿದ್ದಿತು.

(ನರೇಂದ್ರಪ್ರಭೃತಿ ನಿತ್ಯಸಿದ್ಧರು. ಅವರ ಭಕ್ತಿಯೂ ಆಜನ್ಮ)

ಶ್ರೀರಾಮಕೃಷ್ಣ:—(ಅಮೃತ ಮತ್ತು ತ್ರೈಲೋಕ್ಯನನ್ನು ಕುರಿತು) ನರೇಂದ್ರ, ರಾಖಾಲ ಈ ಹುಡುಗರೆಲ್ಲರೂ ನಿತ್ಯಸಿದ್ಧರು. ಇವರು ಜನ್ಮಜನ್ಮದಲ್ಲಿಯೂ ಭಗವಂತನ ಭಕ್ತರು. ಎಷ್ಟೋ ಸಾಧನವನ್ನು ಮಾಡಿದರೆ ಅನೇಕರಿಗೆ ಸ್ವಲ್ಪ ಭಕ್ತಿಯುಂಟಾಗುತ್ತದೆ. ಇವರಿಗಾದರೋ ಈಶ್ವರನಲ್ಲಿ ಆಜನ್ಮಸಿದ್ಧವಾದ ಪ್ರೀತಿ. ಇವರು ಉದ್ಭವಲಿಂಗಗಳು; ಕೃತ್ರಿಮ ಲಿಂಗವಲ್ಲ.

ನಿತ್ಯಸಿದ್ಧರ ತರಗತಿಯೇ ಬೇರೆ. ಎಲ್ಲಾ ಪಕ್ಷಿಗಳ ಕೊಕ್ಕೂ ಬಗ್ಗಿರುವುದಿಲ್ಲ. ಇವರು ಪ್ರಹ್ಲಾದನ ಹಾಗೆ, ಆವಾಗಲೂ ಸಂಸಾರದಲ್ಲಿ ಆಸಕ್ತರಾಗುವುದಿಲ್ಲ. ಸಾಧಾರಣಜನರು ಸಾಧನವನ್ನು ಮಾಡಿ ಈಶ್ವರನಲ್ಲಿ ಭಕ್ತಿಯನ್ನು ಪಡೆಯುತ್ತಾರೆ. ಆದರೆ ಸಂಸಾರದಲ್ಲಿ ಆಸಕ್ತರಾಗಿದ್ದಾರೆ; ಕಾಮಿನೀಕಾಂಚನದಲ್ಲಿ ಮುಗ್ಧರಾಗಿದ್ದಾರೆ. ನೊಣವು ಒಂದೊಂದು ವೇಳೆ ಹೂವಿನಲ್ಲಿಯೂ, ಮತ್ತೊಂದು ವೇಳೆ ಮಿಠಾಯಿಯಲ್ಲಿಯೂ, ಇನ್ನೊಂದು ವೇಳೆ ವಿಷ್ಠೆಯಲ್ಲಿಯೂ ಕುಳಿತುಕೊಳ್ಳುತ್ತದೆ. ಇದರಂತೆಯೇ ಸಾಧಾರಣ ಸಾಧಕರೂ. (ಎಲ್ಲರೂ ಸ್ತಬ್ಧರಾಗಿದ್ದಾರೆ.)

ನಿತ್ಯಸಿದ್ಧರು ಜೇನುನೊಣದಂತೆ. ಅದು ಹೂವಿನ ಮೇಲೆಯೇ ಕುಳಿತುಕೊಂಡು ಮಧುಪಾನಮಾಡುತ್ತದೆ, ಅನ್ಯತ್ರ ಹೋಗುವುದಿಲ್ಲ. ನಿತ್ಯಸಿದ್ಧರು ಹರಿ

ರಸವನ್ನು ಪಾನಮಾಡುತ್ತಾರೆ. ವಿಷಯರಸದ ಕಡೆಗೇ ಹೋಗುವುದಿಲ್ಲ.

ಸಾಧ್ಯಸಾಧನದಿಂದ ಉಂಟಾಗುವ ಭಕ್ತಿಯಂತೆ ಇವರ ಭಕ್ತಿಯು ಅಲ್ಲ. 'ಇಷ್ಟೊಂದು ಜಪಮಾಡಬೇಕು, ಈ ರೀತಿ ಪೂಜೆಮಾಡಬೇಕು,' ಎಂಬ ಇವೆಲ್ಲವೂ ವಿಧಿವಾದಿಗಳ ಭಕ್ತಿ. ಗದ್ದೆಯಲ್ಲಿ ಪೈರಿದ್ದಾಗ ಅದನ್ನು ದಾಟಬೇಕಾದರೆ, ಬದುವಿನ ಮೇಲೆ ಸುತ್ತಿಕೊಂಡು ಹೋಗಬೇಕು. ಮತ್ತು ಹೀಗೆಯೇ ಇದಿರಿಗಿರುವ ಗ್ರಾಮಕ್ಕೆ ಹೋಗಬೇಕಾದರೆ, ಮಧ್ಯದಲ್ಲಿ ಸೊಟ್ಟ ನದಿಯಿದ್ದರೆ, ಅದನ್ನು ಸುತ್ತಿಕೊಂಡು ಹೋಗಬೇಕು.

ರಾಗಾಭಕ್ತಿ, ಪ್ರೇಮಾಭಕ್ತಿ, ಈಶ್ವರನಲ್ಲಿ ಆತ್ಮೀಯರಂತೆ ಪ್ರೀತಿ, ಇವು ಬಂದರೆ, ಆವ ವಿಧಿನಿಯಮಗಳೂ ನಿಲ್ಲುವುದಿಲ್ಲ. ಆಗ ಪೈರನ್ನು ಕೊಯ್ದ ಗದ್ದೆಯಲ್ಲಿ ಹೇಗೆ ಹೋಗಬಹುದೋ ಹಾಗೆ, ಬದುವಿನ ಮೇಲೆ ಹೋಗಬೇಕಾದುದಿಲ್ಲ, ನೆಟ್ಟಗೇ ಹೋಗಬಹುದು.

ಪ್ರವಾಹವು ಬಂದರೆ ನದಿಯಲ್ಲಿ ಸೊಟ್ಟಾಗಿ ಹೋಗಬೇಕಾದುದಿಲ್ಲ. ಆಗ ಪಕ್ಕದ ಗದ್ದೆಯ ಮೇಲೆ ಒಂದು ಜಲ್ಲೆಯುದ್ದದ ನೀರು, ನೆಟ್ಟಗೆ ದೋಣಿಯನ್ನು ಬಿಡಬಹುದು. ಈ ರಾಗಾಭಕ್ತಿ, ಅನುರಾಗ, ಪ್ರೀತಿ ಇವುಗಳು ಬಾರದೆ ಇದ್ದರೆ, ಈಶ್ವರಲಾಭವಾಗುವುದಿಲ್ಲ.

(ಸಮಾಧಿತತ್ವ, ಸವಿಕಲ್ಪ ಮತ್ತು ನಿರ್ವಿಕಲ್ಪ)

ಅಮೃತ:—ಮಹಾಶಯರೇ, ನಿಮಗೆ ಸಮಾಧಿಯಲ್ಲಿ ಏನು ತಿಳಿಯುತ್ತದೆ?

ಶ್ರೀರಾಮಕೃಷ್ಣ:—ಜೇರಲೆಯನ್ನು ತಿನ್ನುವ ಹುಳುವು ತಾನೂ ಜಿರಲೆಯಾಗಬೇಕೆಂದು ಚಿಂತಿಸಿತಂತೆ. ಇದನ್ನು ಕೇಳಿದ್ದೀಯಾ? ಅದು ಹೇಗೆ ಗೊತ್ತೋ? ಮಡಕೆಯಲ್ಲಿರುವ ಮೀನನ್ನು ಗಂಗೆಗೆ ಬಿಟ್ಟಂತೆ.

ಅಮೃತ:—ಸ್ವಲ್ಪವೂ ಅಹಂಕಾರ ನಿಲ್ಲುವುದಿಲ್ಲವೋ?

ಶ್ರೀರಾಮಕೃಷ್ಣ:—ಇಹುದು, ನನಗೆ ಪ್ರಾಯಃ ಸ್ವಲ್ಪ ನಿಲ್ಲುತ್ತದೆ. ಸ್ವರ್ಣದ ಗಟ್ಟಿಯನ್ನು ಒರೆಗಲ್ಲಿನ ಮೇಲೆ ಎಷ್ಟು ಉಜ್ಜಿದರೂ, ಕೆಯ್ಯಲ್ಲಿ ಸ್ವಲ್ಪ ಭಾಗ ನಿಂತೇ ನಿಲ್ಲುತ್ತದೆ. ದೊಡ್ಡ ಬೆಂಕಿಯೂ ಅದರ ಕಿಡಿಯೂ ಹೇಗೋ ಹಾಗೆ, ಬಾಹ್ಯಜ್ಞಾನವು ಹೋಗುತ್ತದೆ. ಆದರೆ ಪ್ರಾಯಃ ಮನುಷ್ಯನ ವಿಲಾಸಕ್ಕಾಗಿ ಭಗವಂತನು ಸ್ವಲ್ಪ ಅಹಂಕಾರವನ್ನು ನಿಲ್ಲಿಸಿಕೊಡುತ್ತಾನೆ, 'ನಾನೂ, ನೀನೂ,' ಇಂತಹೇನೇ ರುಚಿ ತಿಳಿಯುತ್ತದೆ.

ಕೆಲವು ವೇಳೆ ಅವನು ಈ ಸ್ವಲ್ಪ ಅಹಂಕಾರವನ್ನೂ ಎತ್ತಿ ಬಿಸಾಡುತ್ತಾನೆ. ಇದರ ಹೆಸರೇ ಜಡಸಮಾಧಿ. ನಿರ್ವಿಕಲ್ಪಸಮಾಧಿ. 'ಆಗ ಆವ ಅವಸ್ಥೆ,' ಎಂಬುದನ್ನು ಬಾಯಿಂದ ಹೇಳುವುದಕ್ಕೆ ಆಗುವುದಿಲ್ಲ. ಉಪ್ಪಿನ ಗೊಂಬೆಯು ಸಮುದ್ರವನ್ನು ಅಳೆಯುವುದಕ್ಕೆ ಹೋಯಿತು. ಸ್ವಲ್ಪ ಇಳಿದು ಅದರೊಡನೆಯೇ ಸೇರಿ ಹೋಯಿತು, ತದಾಕಾರವಾಗಿ ಮಾಡಲ್ಪಟ್ಟಿತು. ಆಗ, 'ಸಮುದ್ರವು ಇಷ್ಟು ಆಳ,' ಎಂದು ಆರು ತಾನೇ ಮೇಲಕ್ಕೆ ಬಂದು ವರ್ತಮಾನವನ್ನು ಕೊಡುತ್ತಾರೆ?

---o---

ಹದಿನೈದನೆಯ ಖಂಡ

ಬಲರಾಮನ ಮನೆಯಲ್ಲಿ ನರೇಂದ್ರ ರಾಖಾಲ ಮುಂತಾದ ಭಕ್ತರು.

ಪ್ರಥಮ ಪರಿಚ್ಛೇದ

ನರೇಂದ್ರಾದಿ ಭಕ್ತರೊಂದಿಗೆ ಕೀರ್ತನಾನಂದ

ಭಗವಾನ್ ಶ್ರೀರಾಮಕೃಷ್ಣರು ಬಲರಾಮನ ಮನೆಯಲ್ಲಿ ದಿವಾನ್‌ಖಾನೆಯ ಈಶಾನ್ಯದ ಕೊಟ್ಟಡಿಯಲ್ಲಿ ಭಕ್ತರ ಸಂಗಡ ಕುಳಿತಿದ್ದಾರೆ. ಸುಮಾರು ಒಂದು ಗಂಟೆಯ ಸಮಯ. ನರೇಂದ್ರ, ಭವನಾಥ, ರಾಖಾಲ, ಬಲರಾಮ, ಮಾಸ್ಟರೂ ಅವರ ಜತೆಯಲ್ಲಿ ಕುಳಿತಿದ್ದಾರೆ.

ಈ ದಿವಸ ಅಮಾವಾಸ್ಯೆ, ಶನಿವಾರ, ೧೮೮೩ ನೆಯ ಕ್ರಿಸ್ತಶಕ ಏಪ್ರಿಲ್ ೭ನೆಯ ತೇದಿ. ಭಗವಾನರು ಪ್ರಾತಃಕಾಲ ಬಲರಾಮನ ಮನೆಗೆ ಬಂದು, ಮಧ್ಯಾಹ್ನದ ಭೋಜನವನ್ನು ಅಲ್ಲಿಯೇ ಮಾಡಿದರು. 'ನರೇಂದ್ರ ಭವನಾಥಾದಿಭಕ್ತರಿಗೆ ಭೋಜನವನ್ನು ಮಾಡಿಸಿದರೆ ಅನೇಕ ಸಾಧುಗಳಿಗೆ ಭೋಜನಮಾಡಿಸಿದಂತೆ ಆಗುತ್ತದೆ. ಆದುದರಿಂದ ಅವರನ್ನೂ ಕರೆಯಿಸು,' ಎಂದು ಭಗವಾನರು ಬಲರಾಮನಿಗೆ ಹೇಳಿದ್ದರು. ಹಾಗೆಯೇ ಬಲರಾಮನು ಅವರನ್ನೂ ಕರೆದಿದ್ದನು. ಅವರೂ ಬಂದು ಭಗವಾನರ ಸಂಗಡ ಭೋಜನವನ್ನು ಮಾಡಿದರು.

ಕೆಲವು ದಿನಗಳ ಹಿಂದೆ, ಭಗವಾನರು ಶ್ರೀಯುಕ್ತ ಕೇಶವಸೇನನ ಮನೆಗೆ ನವ ಬೃಂದಾವನ ನಾಟಕವನ್ನು ನೋಡುವುದಕ್ಕೆ ಹೋಗಿದ್ದರು. ಜತೆಯಲ್ಲಿ ನರೇಂದ್ರನೂ

ರಾಖಾಲನೂ ಇದ್ದರು. ನರೇಂದ್ರನೂ ನಾಟಕಮಾಡುವುದಕ್ಕೆ ಸೇರಿದ್ದನು. ಕೇಶವನು ಪಾವಾರಿಬಾಬಾವಿನ ವೇಷವನ್ನು ಹಾಕಿಕೊಂಡಿದ್ದನು.

ಶ್ರೀರಾಮಕೃಷ್ಣ :—(ನರೇಂದ್ರಾದಿ ಭಕ್ತರನ್ನು ಕುರಿತು) ಕೇಶವಸೇನನು ಸಾಧುವಿನ ವೇಷವನ್ನು ಹಾಕಿಕೊಂಡು ಶಾಂತಿಜಲವನ್ನು ಪ್ರೋಕ್ಷಿಸಿದನು. ಅದು ನನಗೆ ಚೆನ್ನಾಗಿ ಕಾಣಲಿಲ್ಲ. ಅಭಿನಯದಲ್ಲಿಯೂ ಶಾಂತಿಜಲವೇ?

ಮತ್ತೊಬ್ಬನು ಪಾಪಪುರುಷನ ವೇಷವನ್ನು ಹಾಕಿಕೊಂಡಿದ್ದನು. ಈ ರೀತಿ ವೇಷ ಹಾಕುವುದೂ ಒಳ್ಳೆಯದಲ್ಲ. ತಾನು ಪಾಪಮಾಡುವುದೂ ಒಳ್ಳೆಯದಲ್ಲ. ಪಾಪದ ಅಭಿನಯವೂ ಒಳ್ಳೆಯದಲ್ಲ. ನರೇಂದ್ರನಿಗೆ ಮೈಯ್ಯಲ್ಲಿ ಸ್ವಲ್ಪ ಸರಿಯಾಗಿರಲಿಲ್ಲ. ಆದರೂ ಅವನ ಗಾನವನ್ನು ಕೇಳಬೇಕೆಂದು ಭಗವಾನರಿಗೆ ಬಹಳ ಇಚ್ಛೆ. 'ನರೇಂದ್ರ, ಇವರು ನಿನ್ನ ಗಾನವನ್ನು ಕೇಳಬೇಕಂತೆ. ಕೊಂಚ ಹಾಡುವೆಯಾ?' ಎಂದು ಭಗವಾನರು ಕೇಳಿದರು.

ನರೇಂದ್ರನು ತಂಬೂರಿಯನ್ನು ಹಿಡಿದುಕೊಂಡು ಹಾಡತೊಡಗಿದನು.

ವೃತ್ತ॥ ಭಗವತ್ಕಲ್ಪಕುಜಾಶ್ರಯಂಗೆಯು ಲಸದ್ಧರ್ಮಾರ್ಥಕಾಮೋರುಮು।
ಕ್ತಿಗಳಂ ಪಕ್ವಫಲಂಗಳಂ ಪಡೆದಪೈ ಹೇ ಪ್ರಾಣಪಕ್ಷೀ ತದೀ॥
ಯಗುಣಾಭಿಖ್ಯೆಯನೆಯ್ದೆ ಪಾಡೊಲವಿನಿಂದಾಲಸ್ಯಮಂ ಮಾಣ್ದು ಚಾ।
ದಗೆ ಧಾರಾಧರಮುಕ್ತವಾಃಕಣಮುಮಂ ತಾನೀಂಟಲಾಟಿಪ್ಪವೋಲ್ ॥೧॥

ಕಂದ॥ ಅನವರತಂ ಮುಚ್ಚಿತ್ತದೆ।
ಮನೆಮಾಡಿದ ಜೀವವಿಹಗ ಕೂಗಾತ್ಮಾರಾ॥
ಮನೆಯೆನ್ನ ಪ್ರಾಣಾರಾ।
ಮನೆಯೆನುತುಂ ತೃಷಿತನಾಗಿ ಪರಮಪ್ರಭುವಂ ॥೨॥

ಸಕಲಭುವನರಂಜಕ ಪರ।
ಮಕೃಪಾಕರ ಲೋಕನಾಥ ಜನಜೀವನದಾ॥
ಯಕ ಪರಮಜ್ಯೋತಿಯೆ ಕಾ।
ಲಕಲಾತೀತನೆ ಸಮಸ್ತದೇವಾಧೀಶಾ ॥೩॥

ಕಂದ॥ ಅಳುರ್ವೀ ಸಂಸಾರದವಾ।
ನಳದಗ್ಧನನೆನ್ನನರ್ಪಿಸಿದೆನೀಗಳೆ ನಿ॥
ನ್ನಲಘುಕ್ರಮಯುಗಳದೆ ತೋ।
ರೊಲವಿಂ ನೀನೆನಗೆ ರಾಜರಾಜೇಶ್ವರನೇ ॥೧॥

ಹೃದಯಂ ಪಂಕಾಂಕಿತಮಾ।
ದುದು ಮೋಹವಿಮೂಢನಾಗಿ ಮೃತನಂತಿರ್ಪೆಂ॥

ಸದಯನೆ ನಿನ್ನಮೃತಾಲೋ।
ಕದಿನೆನ್ನಂ ವಿಗತಪಾಪ್ಮನೆನಿಸೆಲೆ ದೇವ ॥೩॥

ಗಾನ॥ ಗಗನದಾ ಹಣತೆಯಲಿ ರವಿಶಶಿಗಳೆಂಬ ದೀ।
ವಿಗೆಗಳುರಿಯುತ್ತಿರುವುವತಿಕಾಂತಿಯಿಂದ ॥೧॥

ಗಾನ॥ ಪ್ರೇಮಪೂರ್ಣಚಂ। ದ್ರಮನುದಯಿಪು ಚಿ। ದ್ವ್ಯೋಮದೆ ತಾನಾಗೆ ॥೧॥

ನರೇಂದ್ರನ ಗಾನವಾದ ಮೇಲೆ ಭವನಾಥನನ್ನು, 'ನೀನೂ ಹಾಡು,' ಎಂದು ಭಗವಾನರು ಹೇಳಿದರು. ಭವನಾಥನೂ ಹಾಡಿದನು.

ಕಂದ॥ ಆರೆನಗೆ ನಿನ್ನ ವೋಲ್ ಹಿತ।
ಕಾರಿಗಳೆಲೆ ದುಃಖಸುಖದೆ ಸಮರೆನಿಸುತ್ತುಂ॥
ಧಾರಿಣಿಯೊಳ್ ಭಯದುರಿತನಿ।
ವಾರಕರೆಂದೆನಿಪ ಕೆಳೆಯರಾರ್ ನಿನ್ನಿಂದಂ॥

ನರೇಂದ್ರ :—(ನಗುತ್ತಾ) ಇವನು (ಭವನಾಥನು) ಎಲೆಯಡಕೆ ಮೀನುಗಳನ್ನು ತ್ಯಾಗಮಾಡಿದ್ದಾನೆ.

ಶ್ರೀರಾಮಕೃಷ್ಣ :—(ಭವನಾಥನನ್ನು ಕುರಿತು, ನಗುತ್ತಾ) ರೇ, ಅದೇನು, ಎಲೆಯಡಕೆ ಮೀನುಗಳನ್ನು ಬಿಟ್ಟುದರಿಂದ ಏನಾಯಿತು? ಕಾಮಿನೀಕಾಂಚನಗಳ ತ್ಯಾಗವೇ ತ್ಯಾಗ. ರಾಖಾಲನೆಲ್ಲಿ?

ಒಬ್ಬ ಭಕ್ತ :—ಸ್ವಾಮೀ, ರಾಖಾಲನು ನಿದ್ದೆಮಾಡುತ್ತಿದ್ದಾನೆ.

ಭಗವಾನರು :—(ನಗುತ್ತಾ) ಒಬ್ಬನು ಚಾಪೆಯನ್ನು ಕಂಕುಳಲ್ಲಿ ಇರುಕಿಕೊಂಡು ದೊಂಬೀದಾಸರ ಕುಣಿತವನ್ನು ನೋಡುವುದಕ್ಕೆ ಹೋದನು. ಅದು ಹೊತ್ತಾಗುತ್ತದೆಂದು ತಿಳಿದು ಚಾಪೆಯನ್ನು ಹಾಸಿಕೊಂಡು ನಿದ್ದೆಮಾಡಿದನು. ಅವನು ಎದ್ದು ನೋಡಿದಾಗ, ಎಲ್ಲವೂ ಮುಗಿದು ಹೋಗಿದ್ದಿತು. (ಎಲ್ಲರೂ ನಗುತ್ತಾರೆ) ಆಮೇಲೆ ಅವನು ಚಾಪೆಯನ್ನು ಕಂಕುಳಲ್ಲಿ ಇರುಕಿಕೊಂಡು ಹಿಂತಿರುಗಿ ಮನೆಗೆ ಹೋದನು. (ನಗುತ್ತಾರೆ)

ರಾಮದಯಾಳನಿಗೆ ದೇಹಸ್ಥಿತಿಯು ಸರಿಯಿಲ್ಲ. ಅವನು ಮತ್ತೊಂದು ಕೊಟ್ಟಡಿಯಲ್ಲಿ ಮಲಗಿದ್ದಾನೆ. ಭಗವಾನರು ಅಲ್ಲಿಗೆ ಹೋಗಿ, 'ನಿನಗೆ ಈಗ ಹೇಗಿದೆ?' ಎಂದು ವಿಚಾರಿಸಿದರು.

(ವೇದಾಂತಶಾಸ್ತ್ರ ಪ್ರಸಂಗ, ಸಂಸಾರಿ ಮತ್ತು ಶಾಸ್ತ್ರಾರ್ಥ)

ಸುಮಾರು ನಾಲ್ಕು ಗಂಟೆ. ದಿವಾನ್‌ಖಾನೆಯಲ್ಲಿ ಭಗವಾನರು ನರೇಂದ್ರ, ರಾಖಾಲ, ಮಾಸ್ಟರ್, ಭವನಾಥ ಮುಂತಾದ ಭಕ್ತರೊಂದಿಗೆ ಕುಳಿತಿದ್ದಾರೆ. ಕೆಲವು

ಬ್ರಾಹ್ಮಭಕ್ತರು ಅಲ್ಲಿಗೆ ಬಂದಿದ್ದಾರೆ. ಅವರೊಂದಿಗೆ ಭಗವಾನರು ಮಾತಾಡುತ್ತಿದ್ದಾರೆ.

ಬ್ರಾಹ್ಮಭಕ್ತ:—ಮಹಾಶಯರೇ, ತಾವು ಪಂಚದಶಿಯನ್ನು ನೋಡೋಣವಾಗಿದೆಯೇ?

ಶ್ರೀರಾಮಕೃಷ್ಣ:—ಇದೆಲ್ಲವನ್ನೂ ಒಂದಾವೃತ್ತಿ ಮೊತ್ತಮೊದಲು ಕೇಳಬೇಕು. ಮೊತ್ತಮೊದಲು ಒಂದು ಸಲ ವಿಚಾರಮಾಡಿ ತಿಳಿಯಬೇಕು. ಬಳಿಕ

ಕಂದ॥ ಶ್ಯಾಮೆಯನತಿಯತ್ನದೆ ಹೃದ।
ಯಾಮಲಮಂದಿರದೊಳಿರಿಸು ಮನವೇ ನೋಳ್ಪಂ॥
ಶ್ರೀಮಾತೆಯನಾಮುಳಿದ।
ರ್ಗೇನಾತೋ ತಿಳಿವರೆಂತುಟವರೀ ತೆರನಂ॥

ಸಾಧನಾವಸ್ಥೆಯಲ್ಲಿ ಎಲ್ಲವನ್ನೂ ಕೇಳಬೇಕು. ಭಗವಂತನನ್ನು ಪಡೆದ ಬಳಿಕ ಜ್ಞಾನಕ್ಕೇನೂ ಕಮ್ಮಿಯಿಲ್ಲ. ಕಾಳಿಯು ಜ್ಞಾನವನ್ನು ರಾಶಿರಾಶಿಯಾಗಿ ಎಲ್ಲಿಂದಲೋ ತಳ್ಳಿಕೊಡುತ್ತಾಳೆ.

ಮೊದಲು ಕಾಗುಣಿತವನ್ನು ಬರೆಯಬೇಕು. ಬಳಿಕ ಸುಮ್ಮನೆ ಗೀಚಿದರೂ ಅಕ್ಷರವಾಗುತ್ತದೆ. ಚಿನ್ನವನ್ನು ಕರಗಿಸುವಾಗ, ಒಂದು ಕಯ್ಯಲ್ಲಿ ತಿದಿಯನ್ನೂ, ಮತ್ತೊಂದು ಕಯ್ಯಲ್ಲಿ ಬೀಸಣಿಗೆಯನ್ನೂ, ಬಾಯಲ್ಲಿ ಊದುವ ಕೊಳವಿಯನ್ನೂ, ಇಟ್ಟುಕೊಂಡು ಕಷ್ಟಪಡಬೇಕು. ಆ ಚಿನ್ನವನ್ನು ಕರಗಿಸಿ, ಅಚ್ಚಿನಲ್ಲಿ ಸುರಿದ ಒಡನೆಯೇ ನಿಶ್ಚಿಂತೆ.

ಬರಿಯ ಶಾಸ್ತ್ರವನ್ನು ಓದಿದ ಮಾತ್ರದಿಂದ, ಏನೂ ಆಗುವುದಿಲ್ಲ. ಮನಸ್ಸು ಕಾಮಿನೀಕಾಂಚನಗಳಲ್ಲಿ ಇದ್ದರೆ, ಅವು ಶಾಸ್ತ್ರದ ಮರ್ಮವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಸಂಸಾರದ ಆಸಕ್ತಿಯಿಂದ ಅಜ್ಞಾನವು ಮುಚ್ಚಿಕೊಳ್ಳುತ್ತದೆ.

ಕಂದ॥ ಅರಿದೆಂ ಸ್ವಾದಿಸಲಾಂ ಕಾ।
ವ್ಯರಸಮನಕಟಕಟ ಬಧಿರನೊಳ್ ಮಚ್ಚಿತ್ತಂ॥
ಎರಕಂದಳೆದುದರಿಂ ಸ।
ರ್ವರಸಂಗಳುಮಿಂಗಿಪೋದುವೇನಂ ಪೇಳ್ವೆಂ॥

(ಎಲ್ಲರೂ ನಗುತ್ತಾರೆ) ಬ್ರಾಹ್ಮಭಕ್ತರೊಂದಿಗೆ ಶ್ರೀಯುಕ್ತ ಕೇಶವನ ಮಾತನ್ನಾಡುತ್ತಾ, 'ಕೇಶವನು ಭೋಗಿಯೂ ಅಹುದು. ಯೋಗಿಯೂ ಅಹುದು. ಸಂಸಾರದಲ್ಲಿ ಇದ್ದರೂ, ಭಗವಂತನಲ್ಲಿ ಮನಸ್ಸನ್ನು ಇಟ್ಟಿದ್ದಾನೆ.' ಎಂದರು.

ಒಬ್ಬ ಭಕ್ತ :—ವಿಶ್ವವಿದ್ಯಾನಿಲಯದ ಪಂಡಿತರ ವಾರ್ಷಿಕ ಸಭೆಗೆ ಹೋಗಿದ್ದೆನು. ಅಲ್ಲಿ ಬಹು ಜನರು ಸೇರಿದ್ದರು, ಲೋಕಾರಣ್ಯವಾಗಿದ್ದಿತು.

ಶ್ರೀರಾಮಕೃಷ್ಣ :—ಅನೇಕರು ಒಟ್ಟಾಗಿರುವುದನ್ನು ಕಂಡರೆ, ಈಶ್ವರನ ಉದ್ದೀಪನವಾಗುತ್ತದೆ. ನಾನು ನೋಡಿದ್ದರೆ ವಿಹ್ವಲನಾಗುತ್ತಿದ್ದೆನು.

———o———

ಹದಿನಾರನೆಯ ಖಂಡ

ದಕ್ಷಿಣೇಶ್ವರದ ಕಾಳೀದೇವಾಲಯದಲ್ಲಿ

ಶ್ರೀಯುತ ಆಧರ ಸೇನನಿಗೆ ಭಗವಾನ್ ಶ್ರೀರಾಮಕೃಷ್ಣರ ಪ್ರಥಮ ದರ್ಶನ.

ಪ್ರಥಮ ಪರಿಚ್ಛೇದ

ಮಣಿಲಾಲಮಲ್ಲಿಕ ಮತ್ತು ಕಾಳೀದರ್ಶನ

ಅಣ್ಣ, ಈ ದಿನ ದಕ್ಷಿಣೇಶ್ವರಕ್ಕೆ ಹೋಗಿ ಶ್ರೀರಾಮಕೃಷ್ಣರನ್ನು ದರ್ಶನಮಾಡಿಕೊಂಡು ಬರೋಣ ಬಾ. ಅವರು ಭಕ್ತರೊಡನೆ ಹೇಗೆ ಆನಂದದಿಂದಿದ್ದಾರೆ? ಅವರು ಹೇಗೆ ಸದಾ ಈಶ್ವರಭಾವದೊಳಗೆ ಸಮಾಧಿಯಲ್ಲಿದ್ದಾರೆ? ನೋಡೋಣ. ಅವರು ಒಮ್ಮೆ ಸಮಾಧಿಸ್ಥಿತಿಯಲ್ಲಿಯೂ, ಒಮ್ಮೆ ಈಶ್ವರಭಾವದ ಮದದಲ್ಲಿಯೂ, ಇನ್ನೊಮ್ಮೆ ಸಾಮಾನ್ಯರೋಪಾದಿಯಲ್ಲಿ ಭಕ್ತರೊಡನೆ ಮಾತಿನಲ್ಲಿಯೂ, ಇರುತ್ತಾರೆ. ಅವರ ಶ್ರೀಮುಖದಿಂದ ಈಶ್ವರನ ಮಾತಲ್ಲದೆ, ಮಿಕ್ಕ ಮಾತುಗಳಾವುವೂ ಬರುವುದಿಲ್ಲ. ಅವರ ಮನಸ್ಸು ಸರ್ವದಾ ಅಂತರ್ಮುಖವಾಗಿಯೇ ಇದೆ. ಉಸಿರನ್ನು ಬಿಡುವಾಗಲೆಲ್ಲ ಅವರು ಶ್ರೀಕಾಳಿಯ ನಾಮವನ್ನು ಉಚ್ಚರಿಸುತ್ತಾರೆ. ಅವರ ವ್ಯವಹಾರವೆಲ್ಲ ಐದು ವಯಸ್ಸಿನ ಬಾಲಕನಂತೆ. ಅವರಲ್ಲಿ ಅಭಿಮಾನವೆಂಬುದು ಒಮ್ಮೆಯೇ ತೊಲಗಿಹೋಗಿದೆ. ಐದು ವರ್ಷದ ಬಾಲಕನಿಗೆ ವಿಷಯದಲ್ಲಿ ಆಸಕ್ತಿಯಿದ್ದೀತೇ ? ಅವನು ಸದಾನಂದನಾಗಿಯೂ, ಸರಳನಾಗಿಯೂ, ಉದಾರಿಯಾಗಿಯೂ 'ಇರುತ್ತಾನೆ. ಭಗವಾನರ ಬಾಯಲ್ಲಿ, 'ಈಶ್ವರನೊಬ್ಬನೇ ಸತ್ಯ, ಮಿಕ್ಕುವು ಅನಿತ್ಯ, ಎರಡು ದಿನದ ಬಾಳು,' ಎಂಬುದೀಗ ಸದಾ ಮಾತು. ಬಾಲಕೋಪಮರಾದ, ಪ್ರೇಮೋನ್ಮತ್ತರಾದ, ಆ ಮಹಾಪುರುಷರ ಸಂದರ್ಶನಮಾಡಿಕೊಂಡು ಬರೋಣ, ನಡೆ. ಅವರು ಮಹಾಯೋಗಿ ; ಅನಂತಸಾಗರತೀರದಲ್ಲಿ ಏಕಾಕಿಯಾಗಿ ಸಂಚರಿಸು

ತ್ತಿದ್ದಾರೆ. ಆ ಸಚ್ಚಿದಾನಂದ ಸಮುದ್ರದೊಳಗೆ ಅವರು ಆವುದನ್ನು ನೋಡುತ್ತ ಪ್ರೇಮೋನ್ಮಾದದಿಂದ ಸಂಚರಿಸುತ್ತಿದ್ದಾರೆ?

ಈ ದಿನ ಭಾನುವಾರ. ಚೈತ್ರ ಶುದ್ಧ ಪಾಡ್ಯ. ನಿನ್ನೆ ಶನಿವಾರ, ಅಮಾವಾಸ್ಯೆ. ಭಗವಾನರು ಬಲರಾಮನ ಮನೆಗೆ ಹೋಗಿದ್ದರು. ಅಮಾವಾಸ್ಯೆಯು ಕಗ್ಗತ್ತಲ ನಿಶೆಯಲ್ಲಿ ಶ್ರೀಕಾಳಿಯು ಮಹಾಕಾಲನೊಡನೆ ಏಕಾಂತದಲ್ಲಿ ವಿಹರಿಸುತ್ತಾಳೆ. ಆದುದರಿಂದಲೇ ಆ ದಿನ ಭಗವಾನರು ಸ್ಥಿರವಾಗಿರುವುದಿಲ್ಲ; ಬಾಲಕರ ಅವಸ್ಥೆಯಲ್ಲಿ ಇರುತ್ತಾರೆ. ತಾಯಿ ಹತ್ತಿರವಿರದಿದ್ದರೆ ಆರಿಗೆ ಏನೂ ನಡೆವುದಿಲ್ಲವೋ, ಅವರೀಗ ಬಾಲಕರು. ಬಾಲಕನು ಸರ್ವದಾ ತಾಯಿ ಬಳಿಯಲ್ಲಿ ಇರುವಂತೆಯೇ, ಭಗವಾನರೂ ಹಗಲೂ ಇರುಳೂ, ಕಾಳಿಯನ್ನು ದರ್ಶನಮಾಡುತ್ತಿರುತ್ತಾರೆ.

ಇಂದು ೧೮೮೩ನೆಯ ಕ್ರಿಸ್ತಾಬ್ದದ ಏಪ್ರಿಲ್ ತಿಂಗಳ ೮ನೆಯ ತೇದಿ. ಚೈತ್ರ ಮಾಸ, ಪ್ರಾತಃಕಾಲ; ಭಗವಾನರು ಬಾಲಕರಂತೆ ಕುಳಿತಿದ್ದಾರೆ. ಹತ್ತಿರದಲ್ಲಿ ಭಕ್ತನಾದ ಬಾಲಕರಾಖಾಲನೂ ಕುಳಿತಿದ್ದಾನೆ.

ಮಾಸ್ಟರು ಬಂದು ಸಾಷ್ಟಾಂಗನಮಸ್ಕಾರಮಾಡಿದನು. ಭಗವಾನರ ಅಣ್ಣನ ಮಗ ರಾಮಲಾಲನೂ ಇದ್ದನು. ಕಿಶೋರಿಯೂ ಇನ್ನಿಬ್ಬರು ಭಕ್ತರೂ ಬಂದು ಸೇರಿದರು. ಪುರಾತನಬ್ರಹ್ಮಸಮಾಜದ ಭಕ್ತನಾದ ಮಣಿಲಾಲಮಲ್ಲಿಕನೂ ಅಲ್ಲಿಗೆ ಬಂದು ಭಗವಾನರಿಗೆ ಪ್ರಣಾಮವನ್ನು ಮಾಡಿದನು.

ಮಣಿಮಲ್ಲಿಕನು ಕಾಶಿಗೆ ಹೋಗಿದ್ದನು. ಅವನ, ವ್ಯಾಪಾರಿ. ಅವನಿಗೆ ಕಾಶಿಯಲ್ಲಿ ಮನೆಯೊಂದಿದೆ.

ಶ್ರೀರಾಮಕೃಷ್ಣ :—(ಮಣಿಮಲ್ಲಿಕನೊಡನೆ) ಅಯ್ಯಾ, ನೀನು ಕಾಶಿಗೆ ಹೋಗಿದ್ದೆಯಲ್ಲ, ಅಲ್ಲಿ ಸಾಧುಗಳನ್ನು ಆರನ್ನಾದರೂ ನೋಡಿಕೊಂಡು ಬಂದೆಯಾ?

ಮಣಿಮಲ್ಲಿಕ :—ಅಲ್ಲಿ ತ್ರೈಲಿಂಗಸ್ವಾಮಿ, ಭಾಸ್ಕರಾನಂದ ಮುಂತಾದವರನ್ನು ನೋಡಿಕೊಂಡು ಬಂದೆನು.

ಶ್ರೀರಾಮಕೃಷ್ಣ .—ಹೇಗೆ ನೋಡಿದೆ? ಹೇಳಯ್ಯ,

ಮಣಿಮಲ್ಲಿಕ :—ತ್ರೈಲಿಂಗಸ್ವಾಮಿಯು ಮಣಿಕರ್ಣಿಕಾಘಟ್ಟದ ವೇಣೀಮಾಧವದೇವಾಲಯದ ಹತ್ತಿರ ಇದ್ದಾರೆ. ಅವರಿಗೆ ಪೂರ್ವದಲ್ಲಿ ಹೆಚ್ಚಾಗಿ ಭಾವಾವಸ್ಥೆಯಾಗುತ್ತಿದ್ದಿತಂತೆ. ಅವರು ಅದ್ಭುತವಾದ ಪವಾಡಗಳನ್ನೆಲ್ಲ ಮಾಡುತಿದ್ದರಂತೆ. ಈಗ ಅದೆಲ್ಲ ಕಮ್ಮಿಯಾಗಿ ಹೋಗಿದೆಯಂತೆ. ಇದೀಗ ಅವರ ವಿಚಾರವಾಗಿ ಜನರು ಆಡಿಕೊಳ್ಳುವ ಮಾತು.

ಶ್ರೀರಾಮಕೃಷ್ಣ :—ಇವೆಲ್ಲವೂ ವಿಷಯಾಸಕ್ತರು ಹೇಳುವ ನಿಂದೆ.

ಮಣಿಮಲ್ಲಿಕ:—ಭಾಸ್ಕರಾನಂದರು ಎಲ್ಲರ ಸಂಗದಲ್ಲಿ ಸೇರುತ್ತಾರೆ. ಅವರು ತ್ರೈಲಿಂಗಸ್ವಾಮಿಯಂತಲ್ಲ. ತ್ರೈಲಿಂಗಸ್ವಾಮಿಯು ಶುದ್ಧಾಂಗವಾಗಿ ಮೌನಿಯಾಗಿದ್ದಾರೆ

(ಸಿದ್ಧರ ಪಕ್ಷದಲ್ಲಿ ಈಶ್ವರನೇ ಕರ್ತಾ, ಇತರರ ಪಕ್ಷದಲ್ಲಿ ಪಾಪಪುಣ್ಯಗಳು, ಸ್ವೇಚ್ಛೆಯೆಂದರೇನು?)

ಶ್ರೀರಾಮಕೃಷ್ಣ :—ಭಾಸ್ಕರಾನಂದರೊಡನೆ ನೀನೇನಾದರೂ ಮಾತಾಡಿದೆಯಾ?

ಮಣಿಮಲ್ಲಿಕ :—ಸ್ವಾಮೀ, ನನಗೂ ಅವರಿಗೂ ತುಂಬ ಮಾತು ನಡೆಯಿತು. ನಡುವೆ ಪುಣ್ಯಪಾಪಗಳ ಮಾತೂ ಬಂದಿತು. 'ನೀನು ಪಾಪದ ಹಾದಿಯಲ್ಲಿ ಹೋಗಬೇಡ; ಪಾಪಚಿಂತೆಯನ್ನು ಮಾಡಬೇಡ. ಇದೇ ಈಶ್ವರಾಜ್ಞೆ. ಪುಣ್ಯವುಂಟಾಗುವ ಕರ್ಮಗಳನ್ನೇ ಮಾಡು,' ಎಂದು ನನಗೆ ಅವರು ಉಪದೇಶಮಾಡಿದರು.

ಶ್ರೀರಾಮಕೃಷ್ಣ :—ಹೌದು, ಐಹಿಕದಲ್ಲಿ ಇದೊಂದು ದಾರಿ. ಆರಿಗೆ ಭಗವಂತನ ಜ್ಞಾನವುಂಟಾಗಿದೆಯೋ, ಆರು, 'ಈಶ್ವರನೊಬ್ಬನೇ ಸತ್, ಉಳಿದುವು ಅಸತ್,' ಎಂದು ತಿಳಿದುಕೊಂಡಿದ್ದಾರೆಯೋ, ಅವರ ಭಾವದ ರೀತಿಯೇ ಬೇರೆ. 'ಈಶ್ವರನೊಬ್ಬನೇ ಕರ್ತನು, ಮಿಕ್ಕವರು ಕರ್ತರಲ್ಲ,' ಎಂದು ಅವರು ತಿಳಿದುಕೊಂಡಿದ್ದಾರೆ. ಆರಿಗೆ ಭಗವಜ್ಜ್ಞಾನವುಂಟಾಗಿದೆಯೋ ಅವರ ಕಾಲು ತಾಳಕ್ಕೆ ತಪ್ಪಿ ಬೀಳುವುದಿಲ್ಲ. ಅವರು ಗುಣಿಸುತ್ತ ಪಾಪತ್ಯಾಗ ಮಾಡಬೇಕಾದುದಿಲ್ಲ. ಈಶ್ವರನಲ್ಲ ಅತ್ಯಂತಭಕ್ತಿಯುಳ್ಳವರಾದುದರಿಂದ, ಅವರು ಆವ ಕರ್ಮವನ್ನು ಮಾಡಿದರೂ, ಸತ್ಕರ್ಮವೇ ಆಗುತ್ತದೆ. 'ಈ ಕರ್ಮಕ್ಕೆ ನಾನು ಎಷ್ಟುಮಟ್ಟಿಗೂ ಕರ್ತನಲ್ಲ, ನಾನು ಈಶ್ವರನ ದಾಸನು, ಅವನು ನಿಯಾಮಕನು, ನಾನು ನಿಯಾಮ್ಯನು. ಅವನು ನುಡಿಸಿದಂತೆ ನುಡಿಯುತ್ತೇನೆ, ನಡೆಯಿಸಿದಂತೆ ನಡೆಯುತ್ತೇನೆ, ಮಾಡಿಸಿದಂತೆ ಮಾಡುತ್ತೇನೆ,' ಎಂದು ಅವರು ಚೆನ್ನಾಗಿ ಬಲ್ಲರು.

ಆರಿಗೆ ಜ್ಞಾನವುಂಟಾಗಿದೆಯೋ, ಅವರು ಪುಣ್ಯಪಾಪಾತೀತರು. ಎಲ್ಲವನ್ನೂ ಈಶ್ವರನೇ ನಡೆಸುತ್ತಾನೆಂದು ಅವರು ಬಲ್ಲರು.

ಒಂದು ಕಡೆಯಲ್ಲಿ ಮಠವೊಂದಿದ್ದಿತು. ಅಲ್ಲಿಯ ಸಾಧುಗಳು ಮಾಧೂಕರಿ ಭಿಕ್ಷೆಗೆ ಹೋಗುತ್ತಿದ್ದರು. ಒಂದು ದಿನ ಒಬ್ಬ ಸಾಧುವು ಭಿಕ್ಷೆಗೆ ಹೊರಟನು. ಹಾದಿಯಲ್ಲಿ ಜಮೀನುದಾರನೊಬ್ಬನು ಒಬ್ಬನನ್ನು ಚೆನ್ನಾಗಿ

ಪ್ರಹರಿಸುತ್ತಿದ್ದನು. ಸಾಧುವು ಪರಮದಯಾಳು. ಹೊಡೆಯುವುದನ್ನು ಕಂಡು ಅವನು, 'ಅವನನ್ನು ಏಕೆ ಹೊಡೆಯುತ್ತೀಯೆ?' ಎಂದು ಜಮೀನು ದಾರನನ್ನು ಕೇಳಿದನು. ಜಮೀನುದಾರನು ಬಹು ಕೋಪದಿಂದ, ಆ ಸಾಧು ವನ್ನು ಚೆನ್ನಾಗಿ ಪ್ರಹರಿಸಿದನು. ಆ ಪೆಟ್ಟನ್ನು ತಾಳಲಾರದೆ ಸಾಧುವು ಮೂರ್ಛಿತನಾದನು. ಅದನ್ನು ಆರೋ ನೋಡಿ, ಮಠಕ್ಕೆ ಹೋಗಿ, 'ನಿಮ್ಮ ಸನ್ಯಾಸಿಯೊಬ್ಬರನ್ನು ಜಮೀನುದಾರನು ತುಂಬ ಹೊಡೆದು ಗಾಯ ಗೊಳಿಸಿದ್ದಾನೆ,' ಎಂದು ಹೇಳಿದರು. ಕೂಡಲೇ, ಮಠದಲ್ಲಿದ್ದ ಸಾಧು ಗಳೆಲ್ಲರೂ ಓಡಿ ಬಂದು ನೋಡಿದರು. ಸನ್ಯಾಸಿಯು ಪೆಟ್ಟತಿಂದು ಜ್ಞಾನ ವಿಲ್ಲದೆ ಬಿದ್ದಿದ್ದನು. ಅವರು ಅವನನ್ನು ಮಠಕ್ಕೆ ಎತ್ತಿಕೊಂಡು ಹೋಗಿ, ಮಲಗಿಸಿ, ಅವನ ಸುತ್ತಲೂ ಕುಳಿತು ವ್ಯಥೆಪಡುತ್ತಿದ್ದರು. ಕೆಲವರು ಅವನಿಗೆ ಬೀಸುತ್ತಿದ್ದರು. ಮತ್ತೆ ಕೆಲವರು ಅವನ ಬಾಯಿಗೆ ಹಾಲ ಬಿಟ್ಟು ನೋಡೋಣವೆಂದು ಹೇಳಿ, ಕೊಂಚ ಹಾಲನ್ನು ಬಿಟ್ಟರು. ಹೊಟ್ಟೆಗೆ ಹಾಲು ಇಳಿದ ಮೇಲೆ, ಅವನು ಕಣ್ಣು ತೆರೆದು ನೋಡಿದನು. ಇವನಿಗೆ ಜ್ಞಾನವು ಬಂದಿದೆಯೋ ಇಲ್ಲವೋ, ನೋಡೋಣವೆಂದುಕೊಂಡು ಒಬ್ಬನು, 'ಮಹಾರಾಜ, ನಿನಗೆ ಹಾಲ ಕೊಟ್ಟವರು ಆರು?' ಎಂದು ಗಟ್ಟಿಯಾಗಿ ಕೇಳಿದನು. ಆ ಮಾತಿಗೆ ಆ ಸಾಧುವು, 'ಅಪ್ಪ, ನನ್ನನ್ನು ಆವನು ಹೊಡೆ ದನೋ, ಅವನೇ ನನಗೆ ಹಾಲನ್ನು ಕೊಟ್ಟನು,' ಎಂದು ಹೇಳಿದನು.

ಈಶ್ವರಲಾಭವಾಗದಿದ್ದವರಿಗೆ ಈ ರೀತಿಯಾದ ಭಾವವು ಉಂಟಾಗುವುದಿಲ್ಲ.

ಮಣಿಲಾಲ :—ಸ್ವಾಮೀ, ತಾವು ಅಪ್ಪಣೆಕೊಡಿಸಿದುದು ಭಾರಿಯ ಅವಸ್ಥೆಯ ಮಾತು. ಭಾಸ್ಕರಾನಂದರೊಡನೆ ಅನೇಕವಾಗಿ ಇಂತಹ ಮಾತು ನಡೆಯಿತು.

ಶ್ರೀರಾಮಕೃಷ್ಣ :—ಅವನು ಆರ ಮನೆಯಲ್ಲಿಯಾದರೂ ಇದ್ದಾನೆಯೋ?

ಮಣಿಲಾಲ :—ಹೂಂ, ಅವನೋ ಒಬ್ಬನ ಮನೆಯಲ್ಲಿ ಇದ್ದಾರೆ.

ಶ್ರೀರಾಮಕೃಷ :—ಅವನಿಗೇನು ವಯಸ್ಸು?

ಮಣಿಲಾಲ :—ಐವತ್ತ ಐದು ಇರಬಹುದು.

ಶ್ರೀರಾಮಕೃಷ್ಣ :—ಇನ್ನಾವ ಮಾತು ನಡೆಯಿತು?

ಮಣಿಲಾಲ :—'ಭಕ್ತಿಯು ಹೇಗೆ ಉಂಟಾಗುತ್ತದೆ?' ಎಂಬದಾಗಿ ಕೇಳಿದನು. ಅದಕ್ಕೆ ಅವರು, 'ರಾಮ, ರಾಮ,' ಎಂದು ಹೇಳು, 'ನಾಮವನ್ನು ಜಪ ಮಾಡು,' ಎಂದು ಹೇಳಿದರು.

ಶ್ರೀರಾಮಕೃಷ್ಣ :—ಅದು ಒಳ್ಳೆಯ ಮಾತು.

———

ದ್ವಿತೀಯ ಪರಿಚ್ಛೇದ

ಗೃಹಸ್ಥನೂ ಕರ್ಮಯೋಗವೂ

ಶ್ರೀ ಭವತಾರಿಣೀ, ರಾಧಾಕಾಂತ, ಹನ್ನೆರಡು ಶಿವದೇವಾಲಯಗಳಲ್ಲಿಯೂ ಪೂಜೆಯು ಮುಗಿದು, ಭೋಗಾರತಿಯ ಗಂಟೆಯಾಯಿತು. ಚೈತ್ರಮಾಸ, ಹನ್ನೆರಡು ಗಂಟೆಯ ಸಮಯ, ತುಂಬ ಬಿಸಿಲು, ಈಗ ತಾನೇ ನದಿಯ ಉಬ್ಬರವು ಮೊದಲಾಗಿದೆ. ಪವಿತ್ರಜಲವುಳ್ಳ ಭಾಗೀರಥಿಯು ಉತ್ತರಮುಖವಾಗಿ ಹರಿಯುತ್ತಿದೆ. ದಕ್ಷಿಣದಿಂದ ಗಾಳಿಯು ಬೀಸುತ್ತಿದೆ. ಭೋಜನವಾದ ಮೇಲೆ ಭಗವಾನರು ಕೊಟ್ಟಡಿಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾರೆ.

ವಸಿರಘಾಟ ಹತ್ತಿರ ರಾಖಾಲನ ಊರು. ಬಿಸಿಲ ಕಾಲದಲ್ಲಿ ಆವೂರೊಳಗೆ ತುಂಬ ನೀರಿನ ಕಷ್ಟ.

ಶ್ರೀರಾಮಕೃಷ್ಣ :—(ಮಣಿಮಲ್ಲಿಕನನ್ನು ನೋಡಿ), ರಾಖಾಲನು ತಮ್ಮೂರಲ್ಲಿ ನೀರಿಗೆ ತುಂಬ ಕಷ್ಟವೆಂದು ಹೇಳಿದನು. ನೀನು ಅಲ್ಲಿ ಒಂದು ಕೊಳವನ್ನು ತೋಡಿಸಬಾರದೇ? ಹಾಗೆ ಮಾಡಿದರೆ ಬಹುಮಂದಿಗೆ ಉಪಕಾರವಾಗುತ್ತದೆ. (ನಗುತ್ತ) ನಿನಗೆ ತುಂಬ ಹಣವಿದೆ. ಅದನ್ನು ಇಟ್ಟುಕೊಂಡು ಏನ ಮಾಡುತ್ತೀಯೆ. ಗಾಣಿಗರು ಲೆಕ್ಕಾಚಾರದವರೆಂದು ಕೇಳಿದ್ದೇನೆ. (ಭಗವಾನರೂ ಭಕ್ತರೂ ನಗುತ್ತಾರೆ.)

ಕಲಿಕತಾವಿನ ಸಿಂದೂರಿಯಾಪಟಿಯಲ್ಲಿ ಮಣಿಲಾಲ ಮಲ್ಲಿಕನ ಮನೆಯಿದೆ. ಸಿಂದೂರಿಯಾಪಟಿಯ ಬ್ರಾಹ್ಮಸಮಾಜದ ವಾರ್ಷಿಕೋತ್ಸವದ ವ್ಯಾಜದಿಂದ ಮಣಿ ಮಲ್ಲಿಕನು ಬಹುಜನರನ್ನು ಕರೆಯಿಸುತ್ತಾನೆ. ಶ್ರೀರಾಮಕೃಷ್ಣರನ್ನೂ ಅವನು ಕರೆಯಿಸುತ್ತಾನೆ. ಮಣಿಲಾಲಮಲ್ಲಿಕನಿಗೆ ವರಾಹನಗರದಲ್ಲಿ ಒಂದು ತೋಟವಿದೆ. ಅವನು ಅಲ್ಲಿಗೆ ಪ್ರಾಯಶಃ ಏಕಾಕಿಯಾಗಿಯೇ ಹೋಗುತ್ತಾನೆ. ಹಾಗೆಯೇ ದಕ್ಷಿಣೇಶ್ವರಕ್ಕೆ ಬಂದು, ದೇವರ ದರ್ಶನವನ್ನು ಮಾಡಿಕೊಂಡು ಬರುತ್ತಾನೆ. ಮಣಿಲಾಲನು ನಿಜವಾಗಿಯೂ ಲೆಕ್ಕಾಚಾರದ ಮನುಷ್ಯ. ಅವನು ಪೂರಾ ಬಂಡಿಯನ್ನು ಮಾಡಿಕೊಂಡು ವರಾಹನಗರಕ್ಕೆ ಹೋಗುವುದಿಲ್ಲ. ಟ್ರಾಂ ಬಂಡಿಯಲ್ಲಿ ಶೋಭಾ ಬಾಜಾರಿಗೆ ಬಂದು, ಅಲ್ಲಿಂದ ಇನ್ನು ಮೂರು ಮಂದಿಯನ್ನು ಸೇರಿಸಿಕೊಂಡು, ಬಂಡಿಯಲ್ಲಿ ವರಾಹನಗರಕ್ಕೆ ಹೋಗುತ್ತಾನೆ. ಅವನಿಗೆ ಹಣಕ್ಕೇನೂ ಕಮ್ಮಿಯಿಲ್ಲ. ಕೆಲವು ವರ್ಷಗಳ ಹಿಂದೆ, ಅವನು ದರಿದ್ರವಿದ್ಯಾರ್ಥಿಗಳ ಪೋಷಣೆಗಾಗಿ ಇಪ್ಪತ್ತಯ್ದು ಸಹಸ್ರ ರೂಪಾಯಿಗಳನ್ನು ಕೊಟ್ಟುಬಿಟ್ಟನು.

ಮಣಿಲಾಲನು ಸುಮ್ಮನೆ ಕುಳಿತಿದ್ದನು. ಕೊಂಚ ಹೊತ್ತಿನ ಮೇಲೆ ಆವುದೋ ಮಾತುಗಳಾಡುತ್ತ, ಅವನು, "ಮಹಾಶಯರೇ, ತಾವು ಕೊಳವನ್ನು ತೋಡಿಸುವ ಮಾತನ್ನು ಆಡೋಣವಾಯಿತು. ಅದೇನೋ ಸರಿ. ತರುವಾಯ, 'ಗಾಣಿಗ, ಗೀಣಿಗ,' ಎಂದು ಏನನ್ನೋ ಹೇಳಿದಿರಿ. ಅದೇಕೆ?" ಎಂದು ಕೇಳಿದನು.

ಕೆಲವರು ಭಕ್ತರು ಮುಖವನ್ನು ಆ ಕಡೆ ಮಾಡಿಕೊಂಡು ನಕ್ಕರು. ಭಗವಾನರೂ ನಕ್ಕರು.

ತೃತೀಯ ಪರಿಚ್ಛೇದ

ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರೂ ಬ್ರಾಹ್ಮಗಣವೂ, ಪ್ರೇಮತತ್ವ.

ಕೊಂಚ ಹೊತ್ತಾದ ಮೇಲೆ ಕಲಿಕತೆಯಿಂದ ಪುರಾತನಬ್ರಾಹ್ಮಭಕ್ತರು ಕೆಲವರು ಬಂದರು. ಅವರ ಸಂಗಡ ಶ್ರೀಯುತ ಠಾಕೂರಸೇನನೂ ಇದ್ದನು. ಕೊಟ್ಟಡಿಯಲ್ಲಿ ಭಕ್ತರು ತುಂಬಿದ್ದಾರೆ. ಭಗವಾನರು ಬಾಲಕರಂತೆ ನಗೆಮೊಗದೊಡನೆ ಬ್ರಾಹ್ಮಭಕ್ತರ ಸಂಗಡ ಮಾತನಾಡುತ್ತ, ಸಣ್ಣ ಮಂಚದ ಮೇಲೆ ಉತ್ತರಮುಖವಾಗಿ ಕುಳಿತಿದ್ದಾರೆ.

ಶ್ರೀರಾಮಕೃಷ್ಣ:—(ಬ್ರಾಹ್ಮಭಕ್ತರನ್ನೂ ಮಿಕ್ಕವರನ್ನೂ ಕುರಿತು) ನೀವು 'ಪ್ರೇಮ, ಪ್ರೇಮ,' ಎನ್ನುತ್ತೀರಿ. ಪ್ರೇಮವೇನು ಸಾಮಾನ್ಯವಾದುದೆಂದಿದ್ದೀರಾ? ಚೈತನ್ಯದೇವನಿಗೆ ಪ್ರೇಮವಿದ್ದಿತು. ಪ್ರೇಮಕ್ಕೆ ಎರಡು ಲಕ್ಷಣ. ಬಾಹ್ಯಶೂನ್ಯನಾಗುವಂತೆ ಈಶ್ವರನಲ್ಲಿ ಪ್ರೀತಿಯನ್ನಿರಿಸಿ ಜಗತ್ತನ್ನೇ ಮರೆತುಬಿಡುವುದು ಒಂದು ರೀತಿ. ಚೈತನ್ಯದೇವನು ವನವನ್ನೇ ವೃಂದಾವನವೆಂದೂ, ಸಮುದ್ರವನ್ನೇ ಯಮುನೆಯೆಂದೂ ಭಾವಿಸುತ್ತಿದ್ದನು.

ಮನುಷ್ಯನಿಗೆ ದೇಹವು ಅತ್ಯಂತ ಪ್ರಿಯವಸ್ತು. ಅದರಲ್ಲಿ ಕೂಡ ಮಮತೆಯಿಲ್ಲದಿರುವುದು ಎರಡನೆಯ ಲಕ್ಷಣ. ಈ ಸ್ಥಿತಿಯಲ್ಲಿ ದೇಹಾತ್ಮಬುದ್ಧಿಯು ಒಮ್ಮೆಯೇ ಹೋಗಿ ಬಿಡುತ್ತದೆ. ಈಶ್ವರಲಾಭವಾದುದಕ್ಕೆ ಎಷ್ಟೋ ಲಕ್ಷಣಗಳಿವೆ. ಆರಲ್ಲಿ ಅನುರಾಗವು ಅತಿಶಯವಾಗಿ ಪ್ರಕಾಶಿಸುತ್ತದೆಯೋ, ಅವರಿಗೆ ಭಗವಲ್ಲಾಭವು ವಿಲಂಬವಾಗುವುದಿಲ್ಲ. ಅನುರಾಗಸಮೃದ್ಧಿಯಾವುದು? ವಿವೇಕ, ವೈರಾಗ್ಯ, ಭೂತದಯಾ, ಸಾಧುಸೇವೆ, ಸತ್ಸಹವಾಸ, ಭಗವನ್ನಾಮೋಚ್ಚಾರಣ, ಗುಣಕಥನ, ಕೀರ್ತನ, ಸತ್ಯವಾಕ್, ಎಂಬಿವೆಲ್ಲವೂ ಅನುರಾಗದ ಸಮೃದ್ಧಿ. ಈ ಅನುರಾಗಲಕ್ಷಣಗಳನ್ನು ನೋಡಿದನಂತರ ಮುಂದೆ ಭಗವದ್ದರ್ಶನವು ತಡವಾಗುವುದಿಲ್ಲವೆಂದು ಹೇಳಬಹುದು.

ಆಳಿನ ಮನೆಯ ಪರಿಷ್ಕಾರವನ್ನು ನೋಡಿದರೆ, ಯಜಮಾನನು ಅಲ್ಲಿಗೆ ಬರುತ್ತಾನೆಂದು ಹೇಳಬಹುದು. ಆಳು, ಮೊತ್ತಮೊದಲು ಮನೆಯ ಹತ್ತಿರವಿರುವ ಸೊಪ್ಪು ಸದೆಗಳನ್ನು ಕಿತ್ತುಹಾಕಿ, ಮನೆಯನ್ನೆಲ್ಲ ಚೆನ್ನಾಗಿ ಸಾರಿಸಿ, ಗುಡಿಸಿ, ಅಲಂಕಾರಮಾಡುತ್ತಾನೆ. ಬಳಿಕ ಯಜಮಾನನು ಅಲ್ಲಿಗೆ ತನ್ನ ಮನೆಯಿಂದ ರತ್ನಗಂಬಳಿಯನ್ನೂ, ಗುಡುಗುಡಿಯನ್ನೂ ಕಳುಹಿಸಿಕೊಡುತ್ತಾನೆ. ಇದನ್ನು ನೋಡಿ ಜನರು, ಇನ್ನು ಈ ಮನೆಗೆ ಯಜಮಾನನು ಬರುತ್ತಾನೆಂದು ತಿಳಿದುಕೊಳ್ಳುತ್ತಾರೆ.

ಒಬ್ಬ ಭಕ್ತ :—ಸ್ವಾಮೀ, ವಿಚಾರಮಾಡಿ ಇಂದ್ರಿಯವನ್ನು ನಿಗ್ರಹಿಸಬೇಕೋ?

ಶ್ರೀರಾಮಕೃಷ್ಣ :—ಅದೂ ಒಂದು ಮಾರ್ಗ. ಅದನ್ನು ವಿಚಾರಮಾರ್ಗವೆನ್ನುತ್ತಾರೆ. ಆದರೆ ಭಕ್ತಿಮಾರ್ಗದಲ್ಲಿ ತಾನಾಗಿಯೇ ಅಂತರಿಂದ್ರಿಯದ ನಿಗ್ರಹವಾಗುತ್ತದೆ. ಆ ಮಾರ್ಗವು ಕಠಿಣವಾದುದಲ್ಲ. ಭಗವಂತನಲ್ಲಿ ಭಕ್ತಿಯು ಹೆಚ್ಚುತ್ತ ಬಂದ ಹಾಗೆಲ್ಲ, ನಮಗೆ ಇಂದ್ರಿಯಸುಖದಲ್ಲಿ ಅಭಿರುಚಿಯು ಕಮ್ಮಿಯಾಗುತ್ತ ಬರುತ್ತದೆ.

ಮಗುವು ಸತ್ತು ಹೋದ ದಿವಸ ಉಂಟಾಗುವ ದುಃಖಾತಿರೇಕದಲ್ಲಿ, ತಾಯಿ ತಂದೆಗಳಿಗೆ ದೇಹಸುಖದ ಮೇಲೆ ಮನಸ್ಸು ಓಡುತ್ತದೆಯೇ?

(ನಾಮಮಾಹಾತ್ಮ್ಯ)

ಶ್ರೀರಾಮಕೃಷ್ಣ :—ಭಗವನ್ನಾಮೋಚ್ಚಾರಣೆಯನ್ನು ಮಾಡಿದರೆ, ಪಾಪಗಳೆಲ್ಲವೂ ನಿವೃತ್ತಿಯಾಗುತ್ತವೆ. ಕಾಮ, ಕ್ರೋಧ, ದೇಹಸುಖೇಚ್ಛೆಗಳೆಲ್ಲವೂ ತೊಲಗಿ ಹೋಗುತ್ತವೆ.

ಭಕ್ತ :—ಭಗವನ್ನಾಮೋಚ್ಚಾರಣೆಯಲ್ಲಿ ರುಚಿಯುಂಟಾಗಬೇಕಾದರೆ, ಏನ ಮಾಡಬೇಕು?

ಶ್ರೀರಾಮಕೃಷ್ಣ :—'ನಿನ್ನ ನಾಮೋಚ್ಚಾರಣೆಯಲ್ಲಿ ರುಚಿಯುಂಟಾಗುವಂತೆ ಮಾಡಿಕೊಡು,' ಎಂದು ವ್ಯಾಕುಲನಾಗಿ ಭಗವಂತನನ್ನು ಪ್ರಾರ್ಥಿಸು. ಸಕಲಾಭೀಷ್ಟಗಳನ್ನೂ ಪೂರ್ತಿಮಾಡಿಕೊಡುತ್ತಾನೆ. ಎಂದು ಹೇಳಿ, ಜೀವಿಗಳ ದುಃಖದಲ್ಲಿ ಮರುಕವುಳ್ಳವರಾಗಿ, ಪಾಮರರ ದುಃಖವನ್ನು ಆರೋಪಿಸಿಕೊಂಡು, ಭಗವಾನರು ಭಗವತಿಯ ಸನ್ನಿಧಿಯಲ್ಲಿ ತಮ್ಮ ಹೃದಯವೇದನೆಯನ್ನು ದೇವದುರ್ಲಭವಾದ ಕಂಠದಿಂದ ವಿಜ್ಞಾಪಿಸಿಕೊಳ್ಳುತ್ತಿದ್ದಾರೆ.

ಗಾನ

('ನೀನೆ ದಯಾಳು ನಿರ್ಮಲಚಿತ್ತ ಗೋವಿಂದ' ಎಂಬಂತೆ)

ದೂರುವೆನಾರ ಕಂ। ತೀರವಪಾಹನೆ। ದೂರಿಗೆ ಗುರಿಯಿನ್ನು॥
ಆರು ನಾನಗೆದಿಪ್ಪ। ನೀರಲಿ ನಾ। ಬಿದ್ದು ಮಾರಣವನು ಹೊದ್ದಿ। ಹೋರಟೆಗೊಂಬಾಗ॥೧॥

ಷಡರಿಗಳೆಂಬ ಗುಪ್ತಲಿಯನು ಪಿಡಿದು ನಾ। ನೊಡನೆ ಸುಕ್ಷೇತ್ರಮಧ್ಯದಲಿ॥
ಒಡನೆ ಬಾವಿಯ ತೋಡಿ। ಲೆಡಬಿಡದಂತೆಯೆ। ನ್ನೊಡತಿ ಕಾಲನ ರೂಪ।
ಜಡರಾಶಿ ತೀವಿತು ॥೨॥
ಮುಂದೆನ್ನ ಗತಿಯೇನು। ನೊಂದೆ ನಾನೆಲೆ ತಾಯೆ। ಯಿಂದೆನ್ನ ಹಗೆಯೆ ನಾನಾದೆ॥
ಬಂದೆನ್ನ ಮುಳುಗಿಸಿ। ಕೊಂದು ಕೂಗುವ ನೀರ। ಬಂಧಿಸುಪರ ಕಾಣೆ।
ಬಂಧನಹಾರಿಣಿ ॥೩॥
ಕಾಲರೂಪದ ನೀರು। ಮೇಲೆ ಮೇಲುಕ್ಕುತೆ। ಬೀಳುಗೆಡಹುತಿಹುದು॥
ಕಾಲವಿನೋದಿನಿ। ಕಾಲ ಪಿಡಿವೆನಂಬ। ಪಾಲಿಪುದೆನ್ನ ದ। ಯಾಲೋಕದೆ ನಿನ್ನ॥

ಜೀವರ ಸಂಸಾರವೆಂಬ ಸನ್ನಿಪಾತ್ಯ ಕಂಡು, ಭಗವನ್ನಾಮಸ್ಮರಣೆಯಲ್ಲಿ ರುಚಿಯುಂಟಾದರೆ, ಅದು ಪರಿಹಾರವಾಗುವುದೆಂದು, ಮತ್ತೊಂದು ಕೀರ್ತನೆ ಹಾಡುತ್ತಾರೆ.

ಎಂತಹ ಸನ್ನಿಯಿದೆನ್ನದು ತಾಯೆ।
ಅಂತಿರೆ ತವಪದಕಾರುಣ್ಯ ವೈದ್ಯನ॥
ಅನುದಿನವಿರದ ಗೌರವಜ್ವರವಾಂತು।
ಎನತೇತೆಂಬುವ ಮೋಹವೆ ನಿಂತು
ಧನಜನರೆಂಬುವ ತೃಷೆಯಿರಲಿಂತು।
ಜನನಿ ಜೀವನವೆನ್ನದುಳಿಯುವುದೆಂತು ॥೧॥
ಹುರುಳಿಲಿಯಾಲಾಪ ಪಾಪಪ್ರಲಾಪ।
ಬರಿಯ ಮಾಯಾಶಾಕನಿದ್ರೆಯ ರೂಪು
ಇರೆ ದಾಶರಥಿಯ ಕಣ್ಣೊಳಗನುದಿನವು।
ಹರನ ಮೋಹದ ರಾಣಿಯಿಹುದೆ ಜೀವನವು ॥೨॥
ಉದರದೊಳಗೆ ಹಿಂಸೆಯೆಂಬುವ ಕ್ರಿಮಿಯು।
ಒದಗದ ಕಾರ್ಯಕೋಡಾಡುವ ಭ್ರಮೆಯು।
ಬದುಕುವೆನೋ ಬದುಕೆನೊ ನಿನ್ನ ಹೆಸರು
ಮಧುರವೆನಿಸದೆನಗೇಕದನುಸಿರು ॥೩॥

ಶ್ರೀರಾಮಕೃಷ್ಣ :—'ನಿನ್ನ ಹೆಸರು ಮಧುರವೆನಿಸದು', ಸನ್ನಿ ಬಂದಾಗ ನಾಲಗೆಯ ರುಚಿ ಕೆಟ್ಟುಹೋದರೆ ಬದುಕುವ ದಾರಿಯೇ ಇಲ್ಲ. ಕೊಂಚವಾದರೂ ರುಚಿಯಿದ್ದರೆ ಬದುಕುವ ಆಸೆಯುಂಟು. ಆದಕಾರಣ ಭಗವಂತನ ನಾಮದಲ್ಲಿ ರುಚಿಯಿರಬೇಕು. ಈಶ್ವರನ ನಾಮವನ್ನು ಜಪಿಸಬೇಕು. ದುರ್ಗಾನಾಮ, ಕೃಷ್ಣನಾಮ, ಶಿವನಾಮ, ಎಂಬ ಆವ ನಾಮದಿಂದ ತಾನೇ ಮೊರೆಯಿಡಕೂಡದು? ನಾಮವನ್ನು ಜಪಿಸುವುದರಲ್ಲಿ ದಿನದಿನವೂ ಅನುರಾಗವು ಹೆಚ್ಚುತ್ತ ಬಂದರೆ, ಆನಂದವುಂಟಾಗುತ್ತ ಬಂದರೆ, ಆಗ ಏನೂ ಭಯವಿಲ್ಲ. ಸನ್ನಿಯು ಮುರಿದೇ ಹೋಗುತ್ತದೆ, ಭಗವಂತನ ದಯೆಯು ಬಂದೇಬರುತ್ತದೆ.

(ಆಂತರಿಕಭಕ್ತಿ ಮತ್ತು ಡಾಂಭಿಕಭಕ್ತಿ, ಈಶ್ವರನು ಮನಸ್ಸನ್ನು ನೋಡುತ್ತಾನೆ.)

ಭಾವಕ್ಕೆ ತಕ್ಕ ಲಾಭ ಇಬ್ಬರು ಗೆಳೆಯರು ಒಂದು ಹಾದಿಯಲ್ಲಿ ಹೋಗುತ್ತಿದ್ದರು. ಒಂಡೆಡೆಯಲ್ಲಿ ಭಾಗವತವನ್ನು ಓದುತ್ತಿದ್ದರು. ಒಬ್ಬನು, ಇನ್ನೊಬ್ಬನನ್ನು ನೋಡಿ, 'ಅಣ್ಣಾ, ಬಾ, ಸ್ವಲ್ಪ ಭಾಗವತವನ್ನು ಕೇಳೋಣ,' ಎಂದನು. ಇನ್ನೊಬ್ಬನು, ಅತ್ತ ಕಡೆ ಇಣಕಿ ನೋಡಿಬಿಟ್ಟು, ಸೂಳೆಯ ಮನೆಗೆ ಹೋದನು. ಅಲ್ಲಿ ಅವನಿಗೆ ಕೊಂಚ ಕಾಲದ ಮೇಲೆ ವೈರಾಗ್ಯ ವುಂಟಾಗಿ, 'ಛೀ! ನನ್ನ ಗೆಳೆಯನು ಹರಿಕಥೆಯನ್ನು ಕೇಳುತ್ತ ಇದ್ದಾನೆ. ನಾನು ಇಲ್ಲಿ ಬಿದ್ದಿದ್ದೇನೆ,' ಎಂದು ತನ್ನನ್ನು ಬಯ್ದುಕೊಂಡನು ಅತ್ತ ಭಾಗವತವನ್ನು ಕೇಳುತ್ತಿದ್ದವನು, 'ಅಯ್ಯೋ, ನಾನು ಎಂತಹ ಹುಚ್ಚ! ಈ ಪುರಾಣೀಕನು ಏನೇನನ್ನೋ ಹರಟುತ್ತಾನೆ. ನಾನು ಇಲ್ಲಿ ಸುಮ್ಮನೆ ಕುಳಿತಿದ್ದೇನೆ. ನನ್ನ ಸ್ನೇಹಿತನು ಎಷ್ಟೋ ಸುಖವಾಗಿ ಆನಂದ ಪಡುತ್ತಿದ್ದಾನೆ,' ಎಂದು ತನ್ನನ್ನು ನಿಂದಿಸಿಕೊಂಡನು. ಇವರಿಬ್ಬರ ಕಾಲಾನಂತರದಲ್ಲಿ ಭಾಗವತ ಕೇಳಿದವನನ್ನು ಯಮದೂತರು ಎಳೆದುಕೊಂಡು ಹೋದರು. ಸೂಳೆಯ ಮನೆಯಲ್ಲಿದ್ದವನು ವಿಷ್ಣುದೂತರೊಡನೆ ವೈಕುಂಠವನ್ನು ಸೇರಿದನು.

ಭಗವಂತನು ಮನಸ್ಸನ್ನು ನೋಡುತ್ತಾನೆ. 'ಜನರು ಎಲ್ಲಿ ಬಿದ್ದಿದ್ದಾರೆ? ಆವ ಕೆಲಸದಲ್ಲಿ ಇದ್ದಾರೆ?' ಎಂಬುದನ್ನು ನೋಡುವುದಿಲ್ಲ. 'ಭಾವಗ್ರಾಹೀ ಜನಾರ್ದನಃ.'

ಕರ್ತಾಭಜಾರರು ಮಂತ್ರೋಪದೇಶಮಾಡುವಾಗ, 'ಮಂತೋರ್', ಎಂದು ಹೇಳುತ್ತಾರೆ. ಇದರ ಅರ್ಥವೇನೆಂದರೆ, 'ಈ ಮಂತ್ರವು ಇನ್ನು ಮುಂದೆ ನಿನ್ನ ಮನಸ್ಸಿನ ಪ್ರಯತ್ನದಂತೆ ಫಲವನ್ನು ಕೊಡುತ್ತದೆ. ಮನಸ್ಸು ಸರಿಯಾಗಿ ಇದ್ದರೆ, ಅವರ ಕೆಲಸಗಳೂ ಸರಿಯಾಗಿಯೇ ಇರುತ್ತವೆ. ಅವರಿಗೆ ಸರಿಯಾದ ಲಾಭವೂ ಉಂಟಾಗುತ್ತದೆ,' ಎಂಬದಾಗಿ ಅವರು ಹೇಳುತ್ತಾರೆ.

ಮನಸ್ಸಿನ ಬಲದಿಂದಲೇ, ಹನುಮಂತನು ಕಡಲನ್ನು ದಾಟಿದನು. 'ನಾನು ರಾಮನ ದಾಸನು, ರಾಮನಾಮವನ್ನು ಜಪಿಸುತ್ತೇನೆ, ನನಗೆ ಆವುದು ತಾನೇ ಅಸಾಧ್ಯ,' ಎಂದು ಅವನು ಧೃಢವಾಗಿ ನಂಬಿಕೊಂಡಿದ್ದನು.

(ಈಶ್ವರದರ್ಶನವು ಏಕೆ ಆಗುವುದಿಲ್ಲ ? ಅಹಂಕಾರದಿಂದ)

ಪಸುಗಳು, 'ಹಂಭಾ, ಹಂಭಾ,' ಎಂದು ಕೂಗುತ್ತವೆ. ಆಡುಗಳು 'ಮ್ಯಾ, ಮ್ಯಾ,' ಎನ್ನುತ್ತವೆ. ಆದುದರಿಂದಲೇ, ಅವುಗಳಿಗೆ ಅತ್ಯಂತ ಕಷ್ಟ.

ಕಟುಕನು ಅವನ್ನು ಕಡಿಯುತ್ತಾನೆ. ಅವುಗಳ ಶ್ರಮಕ್ಕೆ ಕೊನೆಯೇ ಇಲ್ಲ. ಅವುಗಳ ತೊಗಲಿಂದ ಜೋಡನ್ನೂ, ಡೋಳಿನ ಚರ್ಮವನ್ನೂ ಮಾಡುತ್ತಾರೆ. ಹಿಂದಿಯಲ್ಲಿ 'ಹಂ' ಎಂದರೂ, 'ಮ್ಯಾ' ಎಂದರೂ, 'ನಾನು' ಎಂದು ಅರ್ಥ. 'ನಾನು,' 'ನಾನು', ಎಂದರೆ ಎಷ್ಟು ಕರ್ಮಭೋಗ! ಅವುಗಳ ಹೊಟ್ಟೆಯ ನರಗಳಿಂದ ಹತ್ತಿಯೆಕ್ಕುವನ ಬಿಲ್ಲಿನ ಮಿಣಿಯು ಆಗುತ್ತದೆ. ಹತ್ತಿಯೆಕ್ಕುವನ ಬಳಿಯಲ್ಲಿ ಅದು 'ತುಹೂಂ,' 'ತುಹೂಂ' ಎಂದರೆ 'ನೀನು,' 'ನೀನು', ಎಂದು ಸದ್ದು ಮಾಡುತ್ತದೆ. 'ನೀನು,' 'ನೀನು,' ಎಂದ ಮೇಲೆಯೇ ಅವಕ್ಕೆ ಬಿಡುಗಡೆ. ಆ ಮೇಲೆ ಪೆಟ್ಟು ಬೀಳುವುದಿಲ್ಲ.

"ಹೇ ಈಶ್ವರ, ನೀನೇ ಕರ್ತನು, ನಾನು ಅಕರ್ತನು,' ಎಂಬ ತಿಳುವಳಿಕೆಯೇ ಜ್ಞಾನವೆನ್ನಿಸಿಕೊಳ್ಳುತ್ತದೆ.

ನಮ್ರತೆಯಿಂದ ಉನ್ನತಿಯುಂಟಾಗುತ್ತದೆ. ಚಾತಕಪಕ್ಷಿಯು ಹಳ್ಳದಲ್ಲಿ ವಾಸ ಮಾಡುತ್ತದೆ. ಆದರೆ ಅದು ಬಲು ಎತ್ತರದಲ್ಲಿ ಹಾರುತ್ತದೆ. ದಿಣ್ಣೆಯ ಮೇಲಣ ಹೊಲದಲ್ಲಿ ಚೆನ್ನಾಗಿ ಬೆಳೆಯಾಗುವುದಿಲ್ಲ. ಹಳ್ಳದ ಹೊಲಕ್ಕೆ ನೀರು ಬಂದು ಚೆನ್ನಾಗಿ ಬೆಳೆಯಾಗುತ್ತದೆ.

(ಗೃಹಸ್ಥರಿಗೆ ಸಾಧುಸಂಗದಿಂದ ಪ್ರಯೋಜನ, ನಿಜವಾದ ದರಿದ್ರರು ಆರು?)

ಸ್ವಲ್ಪ ಶ್ರಮಪಟ್ಟು, ಸತ್ಸಂಗವನ್ನು ಮಾಡಬೇಕು. ಮನೆಯಲ್ಲಿ ಬರಿಯ ಸಂಸಾರದ ಮಾತು. ರೋಗವೇನೋ ಅಂಟಿಕೊಂಡೇ ಇರುತ್ತದೆ. ಗಿಣಿಯನ್ನು ಗೂಡಿನಲ್ಲಿ ಕಟ್ಟಿಹಾಕಿರುವವರೆಗೆ, ಅದು 'ರಾಮ, ರಾಮ,' ಎನ್ನುತ್ತದೆ. ತನ್ನಿಷ್ಟಕ್ಕೆ ವನದಲ್ಲಿ ಹಾರುತ್ತಿದ್ದರೆ, ಅದು 'ಕ್ಯಾ, ಕ್ಯಾ', ಎಂದು ಮೊದಲಿದ್ದಂತೆಯೇ ಕೂಗಿಕೊಳ್ಳುತ್ತದೆ.

ಹಣವಿದ್ದ ಮಾತ್ರಕ್ಕೇ ಜನರು ದೊಡ್ಡವರಾಗುವುದಿಲ್ಲ. ದೊಡ್ಡವರ ಮನೆಯೆಂಬುದಕ್ಕೆ ಒಂದು ಕುರುಹುಂಟು. ಮನೆಯ ಎಲ್ಲ ಕೊಟ್ಟಡಿಗಳಲ್ಲಿಯೂ ದೀಪವುರಿಯುತ್ತಿದೆ. ಬಡವರು ಅಷ್ಟೊಂದು ಎಣ್ಣೆಯನ್ನು ವೆಚ್ಚಮಾಡಲಾರರು. ಆದುದರಿಂದ ಅಷ್ಟೊಂದು ದೀಪಗಳನ್ನು ಅವರು ಉರಿಸಲಾರರು. ಈ ದೇಹಮಂದಿರವನ್ನು ಅಂಧಕಾರದಲ್ಲಿ ಇರಿಸಕೂಡದು. ಜ್ಞಾನದೀಪವನ್ನು ಹೊತ್ತಿಸಿ ಇಡಬೇಕು. ನಿನ್ನ ಮಂದಿರದಲ್ಲಿ ಜ್ಞಾನದೀಪವನ್ನು ಹೊತ್ತಿಸಿ ಇಟ್ಟು, ಬ್ರಹ್ಮಮಯಿಯ ಮುಖದರ್ಶನವನ್ನು ಏಕೆ ಮಾಡುತ್ತವಿಲ್ಲ?

(ಪ್ರಾರ್ಥನಾತತ್ವ, ಜ್ಞಾನಿಯ ಲಕ್ಷಣ.)

ಎಲ್ಲರೂ ಜ್ಞಾನವನ್ನು ಸಂಪಾದಿಸಬಹುದು. ಜೀವಾತ್ಮ ಪರಮಾತ್ಮಗಳು ಇವೆ. ಪ್ರಾರ್ಥನೆಮಾಡು. ಆ ಪರಮಾತ್ಮನೊಡನೆ ಜೀವಾತ್ಮನನ್ನು ಸೇರಿಸಬಹುದು. ಗ್ಯಾಸಿನ ನಲ್ಲಿಯು ಎಲ್ಲ ಮನೆಯ ಮುಂದೆಯೂ ಹೋಗುತ್ತಿದೆ. ಗ್ಯಾಸಿನ ಕಂಪೆನಿಯಿಂದ ಗ್ಯಾಸನ್ನು ಪಡೆಯಬಹುದು. ಕಂಪೆನಿಯವರಿಗೆ ಬರೆದುಕೊಂಡರೆ, ಅವರು ಮನೆಗೆ ಗ್ಯಾಸನ್ನು ಬಿಟ್ಟುಕೊಡುತ್ತಾರೆ. ಅದರಿಂದ ಮನೆಗೆ ದೀಪಹೊತ್ತಿಸಿ ಬೆಳಕನ್ನು ಮಾಡಬಹುದು. ಕಂಪೆನಿಯ ಕಾರ್ಯಾಲಯವು ಸಿಯಾಲದಾವಿನಲ್ಲಿ ಇದೆ. (ಎಲ್ಲರೂ ನಗುತ್ತಾರೆ)

ಕೆಲವರು ಜ್ಞಾನಿಗಳಾಗಿದ್ದಾರೆ. ಅವರಿಗೆ ಒಂದು ಕುರುಹು ಉಂಟು. ಅವರು ಭಗವಂತನ ವಿಚಾರವಲ್ಲದೆ ಬೇರೆ ಮಾತ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ಆ ಮಾತನ್ನು ಬಿಟ್ಟು, ಬೇರೆ ಮಾತನ್ನು ಹೇಳುವುದಕ್ಕೂ ಅವರು ಒಡಂಬಡರು. ಏಳು ಸಾಗರಗಳೂ, ಗಂಗಾ ಯಮುನಾ ಮುಂತಾದ ನದಿಗಳೂ ಜಲಭರಿತವಾಗಿರುತ್ತಿದ್ದರೂ, ಚಾತಕಪಕ್ಷಿಯು ಆ ಜಲವೊಂದನ್ನೂ ಕುಡಿಯುವುದೇ ಇಲ್ಲ. ನೀರಡಕೆಯಿಂದ ಎದೆಯೊಡೆದು ಹೋಗುವುದಾದರೂ, ಅದು ಮೋಡದಿಂದ ಬೀಳುವ ಮಳೆಯ ನೀರನ್ನೇ ಕುಡಿಯುತ್ತದೆ.

ಚತುರ್ಥಪರಿಚ್ಛೇದ

ಶ್ರೀರಾಮಲಾಲ ಮುಂತಾದವರ ಗಾನವೂ, ಶ್ರೀರಾಮಕೃಷ್ಣರ ಸಮಾಧಿಯೂ

ಭಗವಾನರು ಹಾಡಿರೆಂದು ಹೇಳಿದರು. ರಾಮಲಾಲನೂ, ಕಾಳೀದೇವಾಲಯದಲ್ಲಿ ಕೆಲಸಮಾಡುವ ಬ್ರಾಹ್ಮಣನೂ ಹಾಡುತ್ತಿದ್ದಾರೆ. ಜತೆಗೆ ಮೃದಂಗವನ್ನು ಬಾಜಿಸುತ್ತಿದ್ದಾರೆ.

ಗಾನ॥ ಇಂದಿರೆಯರಸ ಬಾರೋ ಎನ್ನಯ ಚಿತ್ತ ವೃಂದಾವನವ ಸೇರೋ।
ಕಂದರ್ಪಜನಕ ಪುರಂದರಮುಖಸುರ ವೃಂದವಂದಿತ್ತಪವ ನಂದಗೋಪನ
ಕಂದ ॥ಪಲ್ಲವಿ॥

ಭಕ್ತಿಯೆರೆಯನೆ ಕೇಳೋ ನಿನ್ನೊಡನೆನ್ನ ಭಕ್ತಿರಾಧೆಯನು ಕೊಳ್ಳೋ।
ಮುಕ್ತಿಕಾಮುಪೆ ವೃಂದೆ ಸಕ್ತಿಯತೋದೆ ವಿ। ರಕ್ತಿಯೊಡಲೆ ನಂದಗೇಹ
ವೆಂದೆನ್ನುತೆ ॥೧॥

ಪಾಪಗೋವರ್ಧನದಾ ಬೆಟ್ಟವನೀಗ ನೀ ಪಿಡಿದೆತ್ತೊ ದೇವ।
ತಾಪಿಸುವರಿಷಟ್ಕ ರೂಪಕಂಸನ ಭೃತ್ಯ। ರೀಪೊಡವಿಯೊಳಿರ ದಾಪರಿ ನಾಶಿಸೋ ॥೨॥

ಮುರುಕದ ಕೊಳಲನೂದೋ ಎನ್ನಯ ಚಿತ್ತ। ಸುರಭಿಯ ವಶವ ಮಾಡೋ।
ನಿರುತವೆನ್ನಯ ಜೀವ ವರಗೋಷ್ಠದೊಳು ನಿಂದು। ಪರಿಪರಿಯಾಶೆಯ
ನೆರಕದಿ ಪೂರಿಸೊ ॥೩॥

ಪ್ರೇಮರಸದ ಯಮುನಾ ತಟನೀತಟ। ಸೀಮೆಯಾಶಾವಟದ।
ಭೂಮಿಯೊಳಗೆ ಕರು ಹಾಮುಯದೃಶೆಯಿಂದ। ಸ್ವಾಮಿ ಸುಳಿಯುತಿರು
ಕಾಮಿತದಾಯಕ ॥೪॥

ಗೊಲ್ಲವೆಂಗಳ ಪ್ರೇಮದಾ ಬಂಧವು ವ್ರಜದಲ್ಲಿ ನಿಲ್ಲಿಸೆ ನಿನ್ನನು।
ಗೊಲ್ಲಿತಿಯಹನೆಲೊ ದಾಶರಥಿಯು ನಿನ ಗುಲ್ಲಾಸದಿಂದು ತ್ಫುಲ್ಲಲೋಚನ ಪೊರೆ॥೫॥

ಮತ್ತೆ

ಗಾನ॥ ಕರಿಯ ಮುಗಿಲ ಬಣ್ಣ ದೆರೆಯನ ನೀನೀಗ ನಿರುಕಿಸಿದೆಯೊ ಸಖಿಯೇ।
ಕರದೆ ಪೊಂಗೊಳಲಾಂತು ಕಿರುನಗೆಯಧರದೆ। ಮಿಗೆ ಮೂಜಗವನು
ಮರುಳುಮಾಡುತಲಿಹ ॥ ೧

ಸುತ್ತಿದ ಪೀತಾಂಬರದಲ್ಲಿ ಮಿಂಚಿನ ವೊತ್ತ ರಂಜಿಸುತಿರಲು।
ಮತ್ತೆ ಕೊರಲ ವನಮಾಲೆ ಪಾದಂಗಳ ಮುತ್ತಿಟ್ಟು ತೊನೆತೊನೆ
ಯುತ್ತುಮಿರುತಲಿಹ ॥ ೨

ಕಾಳಿಂದೀ ತಟವನು ಡಾಳದಿಂ ತೊಳಗುತೆ ಲೋಲಾಕ್ಷಿಯರ ಶೀಲವ।
ಕೋಳುಗೊಳುತೆ ನಂದ ಬಾಲಚಂದ್ರನೆನಿಸಿ ಲೀಲೆಯಿಂದಿಂದುವ
ವೋಲು ವಿಹರಿಸುವ ॥ ೩

ಶ್ಯಾಮಸುಂದರನನು ಹೃದಯಮಂದಿರದಲ್ಲಿ ನಾಮುನ್ನ ನೋಡಿದೆನು।
ನೇಮಜ್ಞಾನಂಗಳ ನಮ್ಮ ಮನಂಗಳ ಪ್ರೇಮದಿಂ ಕೊಳಲೂದಿ
ತಾಮಿಗೆ ಕೋಳ್ಗೊಂಡ ॥ ೪

ಸಂಗಡಿತಿಯೆ ನೀರನು ತರೆ ಯಮುನೆಗೆ ಪೊಂಗೊಡವಾಂತು ಪೋಗಿ।
ಗಂಗಾನಾರಾಯಣ ನಿಂಗೊದವಿರುವ ದುಃಖಂಗಳ ಸೊಲ್ಲಿಸಿ
ಭಂಗವಡಿಸು ತಾಯೆ॥ ೫

ಮತ್ತೆ

ಹಾಡು

ಶ್ಯಾಮಾಪಾದ ವ್ಯೋಮದೆ ಹಾರುವು।
ದೀಮನವೆಂಬುವ ಪಟವೀಗ॥
ತಾಮಸವೆಂದೆನಿ ಪಾಮಾರುತನದ।
ಭೂಮಿಗೆ ತಳ್ಳಿತು ಬಲು ಬೇಗೆ॥ ೧

ಹಾರದಿರುವವೊಲು ಭಾರವ ಬೀಳಿಸಿ।
ನೋರೆಯ ತಪ್ಪಿಸಿತದ ಮಾಯೆ॥

ಹಾರಿಸುವೆನೆ ಸುತ। ದಾರಾಮೋಹದ।
ದಾರದೆ ಸಿಲುಕಿತು ನಾನರಿಯೆ॥ ೨

ಕಿತ್ತಿತು ಸೂತ್ರವು। ಮಸ್ತಕ ಮುರಿಯಿತು।
ತ್ತೆತ್ತ ಹಾರಿಸುವೆನದ ನಾನು॥
ಮತ್ತೆ ಜತೆಯೊಳಿದ್ದಾರು ಪಟಂಗಳ।
ಯೊತ್ತಿ ಗೆಲಿದುವಿದಕಿನ್ನೇನು॥ ೩

ನಿರವಗ್ರಹತೆಯು। ವರಸೂತ್ರವೆ ತಾ।
ನಿರುತಿರ್ದುದು ಹಾರಿಸುವಾಗ॥
ಮುರಿಯಲು ತಲೆಯಾ। ನರೇಶಚಂದ್ರನು।
ಹಿರಿದಳಲುವನಾಟಕ್ಕೇನ॥ ೪

ಈಶ್ವರಲಾಭೋಪಾಯ, ಅನುರಾಗ, ಗೋಪೀಪ್ರೇಮ, ಅನುರಾಗವು ಹುಲಿಯಂತೆ.)

ಶ್ರೀರಾಮಕೃಷ್ಣ:—(ಭಕ್ತರನ್ನು ಕುರಿತು) ಹುಲಿಯು ಮೃಗಗಳನ್ನು ಹಿಡಿದು, ಗಬಗಬವೆಂದು ಅಗಿದು ನುಂಗುವಂತೆ, ಅನುರಾಗವೆಂಬ ಹುಲಿಯು ಕಾಮಕ್ರೋಧಾದಿಶತ್ರುಮೃಗಗಳನ್ನೆಲ್ಲ ಹಿಡಿದು. ತಿಂದುಬಿಡುತ್ತದೆ. ಈಶ್ವರನಲ್ಲಿ ಒಂದು ಸಲ ಅನುರಾಗವುಂಟಾದರೆ, ಕಾಮಕ್ರೋಧ ಮುಂತಾದುವು ನಿಲ್ಲುವುದಿಲ್ಲ. ಕೃಷ್ಣನಲ್ಲಿ ಗೋಪಿಯರಿಗೆ ಇಂಥ ಅನುರಾಗಾವಸ್ಥೆಯು ಇದ್ದಿತು.

ಮತ್ತೆ ಅನುರಾಗವೆಂಬ ಅಂಜನವು ಉಂಟು. ಶ್ರೀಮತೀ ರಾಧೆಯು ಗೆಳತಿಯರನ್ನು ನೋಡಿ, 'ಸಖಿಯರೇ, ನನಗೆ ಎಲ್ಲ ಕಡೆಯೂ ಕೃಷ್ಣಮಯವಾಗಿ ಕಾಣುತ್ತದೆ,' ಎಂದಳು. ಆ ಮಾತಿಗೆ ಗೋಪಿಯರು ಅವಳೊಡನೆ, 'ಸಖೀ, ನೀನು ಅನುರಾಗವೆಂಬ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡಿದ್ದೀಯೆ. ಆದುದರಿಂದ ನಿನಗೆ ಹಾಗೆ ಕಾಣುತ್ತಿದೆ,' ಎಂದು ಹೇಳಿದರು.

'ಕಪ್ಪೆಯ ತಲೆಯನ್ನು ಸುಟ್ಟು, ಕಾಡಿಗೆಯನ್ನು ಮಾಡಿ, ಕಣ್ಣಿಗೆ ಹಚ್ಚಿಕೊಂಡರೆ, ಎಲ್ಲ ಕಡೆಯೂ ಸರ್ಪಮಯವಾಗಿ ಕಾಣುತ್ತದೆ,' ಎಂಬದಾಗಿ ಜನರು ಹೇಳುತ್ತಾರೆ.

ಸದಾ ಹೆಣ್ಣು ಹೊನ್ನುಗಳಲ್ಲಿಯೇ ಆಸಕ್ತರಾಗಿ, ಒಮ್ಮೆ ಕೂಡ ಭಗವಂತನನ್ನು ಭಾವಿಸದೆ ಇರುವವರು, ಬದ್ಧಜೀವರೆಂದೆನ್ನಿಸಿಕೊಳ್ಳುತ್ತಾರೆ. ಅಂಥವರಿಂದ ಯಾವ ಮಹತ್ಕಾರ್ಯವು ತಾನೇ ಆದೀತು? ಕಾಗೆಯು ಕುಕ್ಕಿದ ಮಾವಿನ ಹಣ್ಣನ್ನು ದೇವರಿಗೂ ಅರ್ಪಿಸುವುದಿಲ್ಲ; ನಾವು ತಿನ್ನುವುದಕ್ಕೂ ಸಂದೇಹ.

ಬದ್ಧಜೀವರು, ಸಂಸಾರಿಜೀವರು ಎಂದರೇನು? ಅವರು ರೇಶಿಮೆಯ ಹುಳುವಿನಂತೆ. ಆಹುಳುವು ಇಷ್ಟವಾದರೆ, ಗೂಡನ್ನು ಕತ್ತರಿಸಿಕೊಂಡು ಹೊರಗೆ ಬರುತ್ತದೆ. ಆದರೆ, 'ನಾನು ಕಟ್ಟಿದ ಮನೆ,' ಎಂಬ ಅಭಿಮಾನದಿಂದ, ಅದು ಗೂಡಿನಿಂದ ಹೊರಗೆ ಬರುವುದಿಲ್ಲ; ಅಲ್ಲಿಯೇ ಸಾಯುತ್ತದೆ.

ಮುಕ್ತಜೀವರು ಕಾಮಿನೀಕಾಂಚನಗಳಿಗೆ ವಶರಾಗುವುದಿಲ್ಲ. ಎಲ್ಲಿಯೋ ಒಂದೆರಡು ರೇಶಿಮೆಯ ಹುಳುಗಳು ಮಾತ್ರ, ಪ್ರಯತ್ನಪೂರ್ವಕವಾಗಿ ಗೂಡನ್ನು ಕತ್ತರಿಸಿಕೊಂಡು ಹೊರಗೆ ಬರುತ್ತವೆ. ಮುಕ್ತಜೀವರನ್ನು ಅಂಥ ಹುಳುಗಳಿಗೆ ಹೋಲಿಸಬಹುದು.

ಮಾಯೆಯು ಆತ್ಮಸ್ವರೂಪವನ್ನು ಮರೆಸಿಬಿಡುತ್ತದೆ. ಮನುಷ್ಯರಲ್ಲಿ ಎಲ್ಲಿಯೋ ಒಬ್ಬಿಬ್ಬರು ಮಾತ್ರ ಜ್ಞಾನಿಗಳಾಗಿರುತ್ತಾರೆ. ಅವರು ಮಾಯೆಯ ಇಂದ್ರಜಾಲದಿಂದ ವಂಚಿತರಾಗುವುದಿಲ್ಲ; ಕಾಮಿನೀಕಾಂಚನಗಳಿಗೆ ವಶರಾಗುವುದೇ ಇಲ್ಲ.

ಹೆರಿಗೆಯ ಮನೆಯ ಮುಂದೆ ಇರಿಸಿರುವ ದೂಳಿನ ಮಡಕೆಯ ಚೂರನ್ನು ತುಳಿದವರಿಗೆ, ಐಂದ್ರಜಾಲಿಕನ ಬುಡುಬುಡಿಕೆಯ ಸದ್ದು ಮರುಳನ್ನು ಉಂಟುಮಾಡುವುದಿಲ್ಲ. ಅವನ ಮಾಯೆಗಳನ್ನೆಲ್ಲ ಅವರು ಯಥಾವಸ್ಥಿತವಾಗಿಯೇ ತಿಳಿದುಕೊಳ್ಳುತ್ತಾರೆ.

ಸಿದ್ಧರು, ಸಾಧನಸಿದ್ಧರೆಂದೂ, ಕೃಪಾಸಿದ್ಧರೆಂದೂ. ಎರಡು ವಿಧ.

ಕೆಲವರು ತುಂಬ ದುಡಿದು ದುಡಿದು, ಗದ್ದೆಗೆ ನೀರನ್ನು ತರುತ್ತಾರೆ. ಅದರಿಂದ ಅವರಿಗೆ ದವಸವು ಬೆಳೆಯುತ್ತದೆ. ಇನ್ನು ಕೆಲವರು ಆ ರೀತಿ ಕಷ್ಟಪಡುವುದಿಲ್ಲ. ಅವರ ಗದ್ದೆಯು ಮಳೆಯ ನೀರಿಂದ ತೇಲಿಹೋಗುತ್ತದೆ. ಮಾಯಾಪಾಶದಿಂದ ಬಿಡಿಸಿಕೊಂಡು ಹೋಗುವುದಕ್ಕಾಗಿ, ಸಾಧನಸಿದ್ಧರು ಬಹುವಾಗಿ ಸಾಧನೆಮಾಡಬೇಕು. ಕೃಪಾಸಿದ್ಧರು ಆ ರೀತಿ ಸಾಧನೆಮಾಡಬೇಕಾದುದಿಲ್ಲ. ಅಂಥವರು ಬಹುವಿರಳರು.

ನಿತ್ಯಸಿದ್ಧರೆಂಬ ಮೂರನೆಯ ತರಗತಿಯೊಂದುಂಟು. ಅವರು ಜನ್ಮಜನ್ಮಾಂತರಗಳಲ್ಲಿಯೂ ಜ್ಞಾನಿಗಳಾಗಿಯೇ ಇದ್ದಾರೆ. ಅವರನ್ನು ಮುಚ್ಚಿಹೋದ ಬುಗ್ಗೆಗಳಿಗೆ ಹೋಲಿಸಬಹುದು. ಬುಗ್ಗೆಗಳನ್ನು ಹುಡುಕುತ್ತ ನೆಲವನ್ನು ಅಗೆಯುತ್ತ ಹೋದರೆ, ಎಲ್ಲಿಯೋ ಒಂದು ಕಡೆಯಿಂದ ನೀರು ಭರಭರ ಎಂದು ನುಗ್ಗುತ್ತದೆ. ಅದೇ ರೀತಿಯಾಗಿ ನಿತ್ಯಸಿದ್ಧರಾದವರಲ್ಲಿ ತಲೆದೋ

ರುವ ಈಶ್ವರಪ್ರಥಮಾನುರಾಗವನ್ನು ಕಂಡು, ‘ಇವರಿಗೆ ಇಷ್ಟೊಂದು ಪ್ರೇಮ, ಭಕ್ತಿ, ವೈರಾಗ್ಯಗಳು ಎಲ್ಲಿದ್ದುವು?’ ಎಂದು ಜನರು ಆಶ್ಚರ್ಯ ಪಡುತ್ತಾರೆ.

ಭಗವಾನರು ಅನುರಾಗದ ವಿಷಯವಾಗಿ ಮಾತೆತ್ತಿದರು. ಗೋಪಿಗಳ ಅನುರಾಗದ ಮಾತು ಬಂದಿತು. ಆಗ ಗಾನವಾಗತೊಡಗಿತು. ರಾಮಲಾಲನು ಈ ರೀತಿ ಹಾಡಿದನು.

(‘ಹೋಗದಿರೆಲೊ ರಂಗ ಬಾಗಿಲಿಂದಾಚೆಗೆ’ ಎಂಬಂತೆ)

ನೀನೆಯೆನಗೆಯೆಲ್ಲ ನೀನಲ್ಲದಿನ್ನಿಲ್ಲ।
ಶ್ರೀನಾಥ ಲಾಲಿಸು ಮೂರು ಲೋಕದೊಳು ॥ಪಲ್ಲವಿ॥

ನೀನೇ ಪ್ರಾಣಾಧಾರ ನೀನೆ ಸಾರಾಸಾರ।
ನೀನೆ ಶಾಂತಿಯು ಸುಖ ಸಾಹ್ಯ ಸಂಬಳವು॥
ನೀನೆಯೆನ್ನಯ ಧನ ನೀನೆಯೆನ್ನಯ ಬಲ।
ನೀನೆಯೆನ್ನಯ ವರ್ತಮಾನವಾಗಿರುತಿಹೆ॥ ೧

ಜ್ಞಾನಬುದ್ಧಿಯು ನೀನೆ ನೂನಗೇಹವು ನೀನೆ।
ನೀನೆ ವಿವೇಕವು ನೀನೆ ಸಂಪದವು॥
ನೀನೆ ಮುಂದಣ ಕಾಲ ನೀನೆ ಪರಿತ್ರಾಣ।
ನೀನೆಯೆನ್ನಯ ಬಂಧು ನೀನೆ ಗೆಳೆಯನಯ್ಯ॥ ೨

ಗುರುಕಲ್ಪತರು ನೀನೆ ಹಿರಿಯ ಶಾಸ್ತ್ರವು ನೀನೆ।
ಪರಿಪರಿ ಸುಖಗಳಿಗಾಧಾರ ನೀನೇ॥
ಇರುವ ಕಾಲವು ನೀನೆ ಸುರಧಾಮವು ನೀನೆ।
ಪರಮೋಪಾಯವು ನೀನೆಯುದ್ದೇಶ್ಯ ನೀನೇ॥ ೩

ಹುಟ್ಟಿಸುವನು ನೀನೆ ಮುಟ್ಟಿಮಾಡುವ ನೀನೆ।
ನೆಟ್ಟನುಪಾಸ್ಯನು ದಂಡಪಾತನು ನೀನು॥
ಸೃಷ್ಟಿಯೊಳಗೆ ನೀನೆ ಮಾತೆ ಭವಾಬ್ಧಿಯ।
ನೆಟ್ಟನೆ ದಾಟಿಪ ಕರ್ಣಧಾರನು ನೀನು॥ ೪

ಶ್ರೀರಾಮಕೃಷ್ಣ :—(ಭಕ್ತರನ್ನು ಕುರಿತು) ಆಹಾ, ಎಂತಹ ಗಾನ! ‘ನೀನೆಯೆನಗೆಯೆಲ್ಲ.’ ಅಕ್ರೂರನು ಬಂದ ತರುವಾಯ, ಗೋಪಿಯರು ಶ್ರೀಮತೀರಾಧೆಯೊಡನೆ,’ ‘ತಾಯೇ, ಅಕ್ರೂರನು ನಿನ್ನ ಸರ್ವಸ್ವವನ್ನೂ ಅಪಹರಿಸುವುದಕ್ಕೆ ಬಂದಿದ್ದಾನೆ,’ ಎಂದು ಹೇಳಿದರು. ಈ ಸರ್ವಸ್ವವೆಂಬುದೇ ಪ್ರೀತಿ, ಇದೀಗ ಭಗವಂತನಿಗಾಗಿ ಪಡುವ ವ್ಯಾಕುಲತೆ. (ಮತ್ತೆ ಗಾನವಾಗುತ್ತಿದೆ.)

ಗಾನ॥ ತೇರ ಚಕ್ರವ ನೀನು ಹಿಡಿಯದಿರು ಹಿಡಿಯದಿರು ।
ತೇರನೇಂ ಮುಂದಕ್ಕೆ ಚಕ್ರ ನಡೆಸುವುದೇ ॥
ತೇರ ಚಕ್ರಕೆ ಚಕ್ರವಾಗಿರುವನೈ ಹರಿಯು ।
ಮೂರು ಲೋಕವು ಚಲಿಪುದಾಚಕ್ರದಿಂದ ॥
ಗಾನ॥ ಆರಿಗಾಗಿ ಮಾಡುತಿರುವೆ। ಹಾರವನ್ನು ಹೇಳು ಸಖಿಯೆ ॥

ಗಾನವನ್ನು ಕೇಳುತ್ತ ಕೇಳುತ್ತ, ಶ್ರೀರಾಮಕೃಷ್ಣರು ಗಭೀರವಾದ ಸಮಾಧಿ ಸಾಗರದಲ್ಲಿ ಮಗ್ನರಾದರು. ಭಕ್ತರೆಲ್ಲರೂ ಏಕದೃಷ್ಟಿಯಿಂದ ಆಶ್ಚರ್ಯ ಚಕಿತರಾಗಿ ಭಗವಾನರನ್ನೇ ನೋಡುತ್ತಿದ್ದರು. ಕೊಂಚವಾಗಲಿ ಅಲ್ಲಾಡುವ ಸದ್ದಿಲ್ಲ. ಭಗವಾನರು ಸಮಾಧಿಸ್ಥರಾಗಿ, ಕಯ್ಗಳೆರಡನ್ನೂ ಜೋಡಿಸಿಕೊಂಡು, ಫೋಟೋದಲ್ಲಿರುವ ಚಿತ್ರಡೋಪಾದಿಯಲ್ಲಿ ಕುಳಿತಿದ್ದರು. ಅವರ ಕಡೆಗಣ್ಣಳೆರಡರಿಂದಲೂ ಆನಂದಬಾಷ್ಪವು ಹರಿಯುತ್ತಿದ್ದಿತು.

(ಈಶ್ವರನೊಂದಿಗೆ ಶ್ರೀರಾಮಕೃಷ್ಣರ ಮಾತು,
ಕೃಷ್ಣನು ಸರ್ವಮಯನಾಗಿ ಶ್ರೀರಾಮಕೃಷ್ಣರಿಗೆ ಕಾಣಿಸಿದುದು.)

ಬಲು ಹೊತ್ತಿನ ಮೇಲೆ ಭಗವಾನರು ಸ್ವಲ್ಪ ಪ್ರಕೃತಿಸ್ಥರಾದರು. ಸಮಾಧಿ ಮಧ್ಯದಲ್ಲಿ, ಅವರು ಆರನ್ನು ದರ್ಶನಮಾಡಿದರು? ಅವರ ಸಂಗಡ ಏನ ಮಾತಾಡಿದರು? ಅವರ ಈ ಸಲ್ಲಾಪದ ಅರೆಮಾತುಗಳು ಮಾತ್ರ, ಭಕ್ತರ ಕಿವಿಗೆ ಬೀಳುತ್ತಿದ್ದುವು. ಭಗವಾನರು ತಮ್ಮಷ್ಟಕ್ಕೆ ತಾವೇ, 'ನೀನೇ ನಾನು, ನಾನೇ ನೀನು, ನೀನು ತಿನ್ನು, ನೀನೂ ನಾನೂ ತಿನ್ನೋಣ, ——— ನೀನು ಮಾಡುವುದು ಬಲು ಚೆನ್ನಾಗಿದೆ,—"--ಇದೆಲ್ಲಿಯ ಗಲಿಬಿಲಿ, ನಾನು ನಿನ್ನನ್ನು ಎಲ್ಲೆಲ್ಲಿಯೂ ಕಾಣುತ್ತೇನೆ. ಕೃಷ್ಣಾ! ಎಲೈ ದೀನಬಂಧೂ! ಪ್ರಾಣವಲ್ಲಭ! ಗೋವಿಂದ!' ಎಂದು ಹೇಳುತ್ತಿದ್ದರು.

ಹೀಗೆ ಹೇಳುತ್ತ, ಭಗವಾನರು ಮತ್ತೆ ಸಮಾಧಿಸ್ಥರಾದರು. ಕೋಣೆಯು ನಿಶ್ಶಬ್ದವಾಯಿತು. ಭಕ್ತರು ಮಹಾ ಭಾವಮಯರಾದ ಭಗವಾನರನ್ನು ಅತೃಪ್ತ ನಯನರಾಗಿ, ಅಡಿಗಡಿಗೆ ನೋಡುತ್ತಿದ್ದಾರೆ.

ಪಂಚಮ ಪರಿಚ್ಛೇದ

ಶ್ರೀರಾಮಕೃಷ್ಣರವರ ಈಶ್ವರಾವೇಶ. ಅವರ ಮೂಲಕ ಭಗವದ್ವಾಣೀ.

ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿ ಚಿಕ್ಕ ಮಂಚದ ಮೇಲೆ ಕುಳಿತಿದ್ದಾರೆ. ಅವರ ಸುತ್ತಲೂ ಭಕ್ತರು ಕುಳಿತಿದ್ದಾರೆ. ಶ್ರೀಯುತ ಅಧರಸೇನನು ಕೆಲವರು ಸ್ನೇಹಿತರೊಡನೆ ಭಗವಾನರನ್ನು ದರ್ಶನಮಾಡುವದಕ್ಕೆ ಬಂದಿದ್ದಾನೆ. ಅವನಿಗೆ ೨೯-೩೦

ಮನುಷ್ಯ. ಅವನು ಡೆಪ್ಯುಟಿ ಮ್ಯಾಜಿಸ್ಟ್ರೇಟು. ಅವನಿಗೆ ಇದೇ ಭಗವಾನರ ಪ್ರಥಮ ದರ್ಶನ. ಅವನಸ್ನೇಹಿತ ಶಾರದಾಚರಣನು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಾಗಿದ್ದು, ಈಗ ಪಿಂಛನ್ ತೆಗೆಯುತ್ತಿದ್ದಾನೆ. ಶಾರದಾಚರಣನು ಬಹುದಿನಗಳಿಂದಲೂ ಸಾಧನೆ ಭಜನೆಗಳನ್ನು ಮಾಡುತ್ತಿದ್ದನು. ದೊಡ್ಡ ಮಗನು ಕಾಲಾಧೀನನಾದುದರಿಂದ ಅವನು ದುರ್ನಿವಾರ್ಯವೆನಿಸಿದ ದುಃಖದಿಂದ ಪೀಡಿತನಾಗಿದ್ದಾನೆ. ಬಹುಕಾಲದಿಂದಲೂ ಶ್ರೀರಾಮಕೃಷ್ಣರನ್ನು ದರ್ಶನಮಾಡಬೇಕೆಂದು, ಅಧರನು ಬಯಸುತ್ತಿದ್ದನು. ಈಗ ಅವನು ಪುತ್ರಶೋಕಪೀಡಿತನಾದ ಶಾರದಾಚರಣನನ್ನು ಸಂಗಡ ಕರೆದುಕೊಂಡು ಬಂದಿದ್ದಾನೆ.

ಭಗವಾನರಿಗೆ ಸಮಾಧಿಭಂಗವಾಯಿತು. ಅವರು ಕಣ್ಣು ತೆರೆದು, ಅಷ್ಟು ಮಂದಿಯೂ ಕುತೂಹಲದಿಂದ ತಮ್ಮನ್ನೇ ನೋಡುತ್ತಿರುವುದನ್ನು ಕಂಡರು. ಆಗ ಅವರು ತಮಗೆ ತಾವೇ ಮಾತನಾಡಿಕೊಳ್ಳುತ್ತಿದ್ದರು.

ಅವರ ಮುಖದಿಂದ ಭಗವಂತನೇ ಮಾತಾಡುತ್ತಿದ್ದಾನೆಯೋ? ಇಲ್ಲವೇ ಉಪದೇಶಮಾಡುತ್ತಿದ್ದಾನೆಯೋ?

ಶ್ರೀರಾಮಕೃಷ್ಣ:—ವಿಷಯೀಜನರ ಜ್ಞಾನವು ಒಮ್ಮೊಮ್ಮೆ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ. ಅದು ದೀವಿಗೆಯ ಶಿಖೆಯಂತೆ ಇದೆ. ಅಲ್ಲ,. ಅಲ್ಲ, ಗೋಡೆಯ ಸಂದಿನಿಂದ ಒಳಗೆ ಬೀಳುವ ಸೂರ್ಯಕಿರಣದಂತೆ ಇರುತ್ತದೆ. ಅವರು ಈಶ್ವರನ ಹೆಸರನ್ನು ಹೇಳುತ್ತಾರೆ,ಆದರೆ ಅನುರಾಗವಿಲ್ಲ. ಅವರಿಗೆ ಹಠವೂ ಇಲ್ಲ. ಮಕ್ಕಳು 'ದೇವರಾಣೆ,' ಎಂದು ಹೇಳುವ ಹಾಗೆ. ಅವರಿಗೆ ದೇವರೆಂದರೂ ತಿಳಿಯದು, ಆಣೆಯೆಂದರೂ ಗೊತ್ತಿಲ್ಲ. ಮನೆಯ ಚಿಕ್ಕಮ್ಮ ದೊಡ್ಡಮ್ಮಂದಿರ ಜಗಳದಲ್ಲಿ, 'ದೇವರಾಣೆ,' ಎಂದು ಹೇಳುವುದನ್ನು ಕೇಳಿ ಕಲಿತುಕೊಂಡಿದ್ದಾರೆ.

ಅವರು ಬಾದು ಪೇಳಿ ಜಪತಪಾದಿಗಳನ್ನು ಮಾಡಿದರೂ, 'ಆದರೆ ಆಗಲಿ; ಹೋದರೆ ಹೋಗಲಿ,' ಎಂಬ ಉದಾಸೀನಬುದ್ಧಿಯಿಂದ ಮಾಡುತ್ತಾರೆ. ನೀರಿಗೆ ಬಹುಕಷ್ಟ. ಅದಕ್ಕಾಗಿ ಬಾವಿಯನ್ನು ತೋಡುತ್ತಾರೆ. ಅಲ್ಲಿ ಬಂಡೆಯೇನಾದರೂ ಸಿಕ್ಕಿದರೆ, ಇನ್ನೊಂದು ಕಡೆಯಲ್ಲಿ ತೋಡುವುದಕ್ಕೆ ಉಪಕ್ರಮಿಸುತ್ತಾರೆ. ಅಲ್ಲಿ ಮರಳೇನಾದರೂ ಸಿಕ್ಕಿದರೆ, ಆ ಸ್ಥಲವನ್ನು ಬಿಟ್ಟು ಇನ್ನೊಂದು ಕಡೆ ಅಗೆಯುವುದಕ್ಕೆ ತೊಡಗುತ್ತಾರೆ. ಮೊದಲು ತೋಡಿದೆಡೆಯಲ್ಲಿಯೇ ಬಿಡದೆ ತೋಡುತ್ತ ಬಂದಿದ್ದರೆ, ಈ ವೇಳೆಗೆ ನೀರು ಸಿಕ್ಕಿಬಿಡುತ್ತಿದ್ದಿತು.

ಜೀವನು ಆವ ರೀತಿ ಕೆಲಸಮಾಡುತ್ತಾನೆಯೋ, ಅದಕ್ಕೆ ತಕ್ಕ ಫಲವನ್ನು ಪಡೆಯುತ್ತಾನೆ. ಇದೇ ಮಾತು ಗಾನದಲ್ಲಿಯೂ ಇದೆ, ಎಂದು ಹಾಡ ತೊಡಗಿದರು.

ಗಾನ

('ನೀನೆ ದಯಾಳು ನಿರ್ಮಲಚಿತ್ತ ಗೋವಿಂದ,' ಎಂಬಂತೆ)

ದೂರುವೆನಾರ ಕಂಠೀರವವಾಹನೆ ದೂರಿಗೆ ಗುರಿಯಿನ್ನು।
ಆರು ನಾನಗೆದಿಪ್ಪ ನೀರಲಿ ನಾ ಬಿದ್ದು ಮಾರಣವನ್ನು ಹೊದ್ದಿ
ಹೋರಟಿಗೊಂಬಾಗ॥ ೧

ಷಡರಿಗಳೆಂಬ ಗುದ್ದಲಿಯನು ಪಿಡಿದು ನಾ ನೊಡಲೆಂಬ ಕ್ಷೇತ್ರಮಧ್ಯದಲಿ।
ಬಿಡದೆ ಬಾವಿಯ ತೋಡ ಲೆಡೆಬಿಡದಂತೆಯೆ ನ್ನೊಡತಿ ಕಾಲನ ರೂಪ
ಜಡರಾಶಿ ತೀವಿತು॥ ೨

ಮುಂದೆನ್ನ ಗತಿಯೇನು ನೊಂದೆ ನಾನೆಲೆ ತಾಯೆ ಯಿಂದೆನ್ನ ಹಗೆಯೆ ನಾನಾದೆ।
ಬಂದೆನ್ನ ಮುಳುಗಿಸಿ ಕೊಂದು ಕೂಗುವ ನೀರ ಬಂಧಿಸುವರ ಕಾಣೆ ಬಂಧನ
ಹಾರಿಣಿ॥ ೩

ಕಾಲರೂಪದ ನೀರು ಮೇಲೆ ಮೇಲುಕ್ಕುತೆ ಬೀಳುಗೆಡಹುತಿಹುದು।
ಕಾಲವಿನೋದಿನಿ ಕಾಲ ಪಿಡಿವೆನೆಂಬ ಪಾಲಿಪುದೆನ್ನ ಕೃಪಾಲೋಕದೆನಿನ್ನ ೪

'ನಾನು, ನನ್ನದು', ಎಂದು ಹೇಳುವುದು ಅಜ್ಞಾನ, ಆವುದನ್ನು 'ನಾನು ನಾನು,' ಎನ್ನುತ್ತೇವೆಯೋ ಅದು ಆತ್ಮನೇ ಹೊರತು ಬೇರಾವುದೂ ಅಲ್ಲ.

ವಿಚಾರಮಾಡಿ ನೋಡು. 'ನಾನು', ಎಂಬುದು ಆವುದು, ಮೈಯ್ಯೇ? ಮೂಳೆಯೇ? ಮಾಂಸವೇ? ಮತ್ತೇನಾದರೂ ಇರಬಹುದೇ? ಇದಾವುದೂ ಅಲ್ಲವೆಂದು ಆವಾಗ ನಿನಗೆ ಗೊತ್ತಾಗುತ್ತದೆ. ನಿನಗೆ ಆವ ಉಪಾಧಿಯೂ ಇಲ್ಲ, ಆಗ, 'ನಾನು ಏನನ್ನೂ ಮಾಡಿಲ್ಲ. ಗುಣ, ದೋಷ, ಪಾಪಪುಣ್ಯಗಳಾವುವೂ ಇಲ್ಲ,' ಎಂದು ನೀನು ತಿಳಿಯುತ್ತೀಯೆ.

'ಇದು ಹಿತ್ತಳೆ, ಇದು ಚಿನ್ನ,' ಎನ್ನುವುದು ಅಜ್ಞಾನ, 'ಎಲ್ಲವೂ ಚಿನ್ನ,' ಎನ್ನುವುದೀಗ ಜ್ಞಾನ.

(ಈಶ್ವರದರ್ಶನಲಕ್ಷಣ, ಶ್ರೀರಾಮಕೃಷ್ಣರು ಅವತಾರಪುರುಷ)

ಈಶ್ವರದರ್ಶನವಾದರೆ ವಿಚಾರವು ನಿಂತುಹೋಗುತ್ತದೆ. ಆದರೂ ಕೆಲವರು ಈಶ್ವರಲಾಭವಾದ ಮೇಲೆಯೂ, ವಿಚಾರ ಮಾಡುವುದು ಉಂಟು. ಅವರು ಭಕ್ತಿಯನ್ನಿಟ್ಟುಕೊಂಡು ಭಗವಂತನ ನಾಮ ಗುಣಗಳನ್ನು ಗಾನಮಾಡುತ್ತಾರೆ.

ಕೂಸು ಎಷ್ಟು ಹೊತ್ತು ಅಳುತ್ತದೆ? ಸ್ತನ್ಯವು ಸಿಕ್ಕುವ ವರೆಗೆ. ಅದು ದೊರೆತ ಕೂಡಲೇ, ಅಳುವು ನಿಂತು ಹೋಗುತ್ತದೆ. ಆಗ ಕೇವಲ ಆನಂದ. ಸ್ತನ್ಯವನ್ನು ಕುಡಿಯುತ್ತ ಕುಡಿಯುತ್ತ, ಕೂಸು ನಡುನಡುವೆ ನಗುತ್ತ ಆಟವಾಡುವುದೂ ಉಂಟು.

ಭಗವಂತನೇ ಸಕಲವೂ ಆಗಿದ್ದಾನೆ. ಆದರೆ ಅವನು ಮನುಷ್ಯರಲ್ಲಿ ಬಹುವಾಗಿ ಪ್ರಕಾಶಿಸುತ್ತಾನೆ. ಎಲ್ಲಿ ನಗುತ್ತಲೂ, ಅಳುತ್ತಲೂ, ಕುಣಿಯುತ್ತಲೂ, ಹಾಡುತ್ತಲೂ, ಬಾಲಕರ ಸ್ವಭಾವದಂತೆ ಶುದ್ಧಸತ್ವವಿದೆಯೋ ಅಲ್ಲಿ ಭಗವಂತನೇ ಸಾಕ್ಷಾತ್ತಾಗಿ ವಾಸಮಾಡುತ್ತಾನೆ.

ಭಗವಾನರು ಅಧರನನ್ನು ವಿಚಾರಿಸಿದರು. ಅಧರನು ಸ್ನೇಹಿತನ ಪುತ್ರಶೋಕದ ವಿಷಯವನ್ನು ತಿಳಿಸಿದನು. ಆಗ ಭಗವಾನರು ಹೀಗೆ ಗಾನಮಾಡಿದರು.

(ಪುತ್ರಶೋಕ, ಮಾನವ! ಯುದ್ಧಕ್ಕೆ ಸಿದ್ಧನಾಗು)

ಸಿದ್ಧನಾಗೋ ಮನುಜ ಸಿದ್ಧನಾಗೋ। ॥ಪಲ್ಲವಿ॥
ಹೊದ್ದಿ ದೇಹಗೃಹವನದರೊ। ಇದ್ದ ಜೀವಧನವನೀಗ।
ಕದ್ದ ಕಾಲಚೋರನೊಡನೆ। ಯುದ್ಧವನ್ನು ಮಾಡೆ ಬೇಗ॥ ೧
ನೀನು ಭಕ್ತಿರಥವನೇರಿ। ಜ್ಞಾನತೂಣವನ್ನು ಬಿಗಿದು।
ಮೋಣು ಜಿಹ್ವೆಯೆಂಬ ಬಿಲ್ಗೆ। ಜಾಣ ಪ್ರೀತಿಗುಣವ ಕಟ್ಟು॥ ೨
ಬ್ರಹ್ಮಮಯಿಯ ನಾಮವೆಂಬ। ಬ್ರಹ್ಮಶರವನೊಡನೆ ಹೂಡಿ।
ರಂಹದಿಂದೆ ಗುರಿಯನೆಚ್ಚು। ಸಂಹರಿಸಲು ಕಾಲಖಳನ॥ ೩
ಲೇಸೆನಿಸುವ ಗಂಗೆಯಾ ಪ್ರ। ದೇಶದಲ್ಲಿ ಯುದ್ಧಮಾಡೆ॥
ಜೈಸಬಹುದೆನುತ್ತಲೊರೆದ। ದಾಶರಥಿಯ ಮಾತ ಕೇಳೆ॥ ೪

ನೀನು ಏನ ಮಾಡಬಲ್ಲೆ? ಈ ಕಾಲನಿಗಾಗಿ ಸಿದ್ಧಪಡಿಸಿಕೋ. ಕಾಲನು ನಿನ್ನ ಮನೆಯನ್ನು ಹೊಕ್ಕಿದ್ದಾನೆ, ಭಗವಂತನ ನಾಮರೂಪಗಳೆಂಬ ಅಸ್ತ್ರಗಳನ್ನು ಹಿಡಿದು, ಅವನ ಸಂಗಡ ನೀನು ಯುದ್ಧಮಾಡಬೇಕು. ಭಗವಂತನೇ ಕರ್ತನು. 'ತಾಯೇ, ನೀನು ಮಾಡಿಸುವಂತೆ ಮಾಡುತ್ತೇನೆ. ನೀನು ಹೇಳಿಸುವಂತೆ ಹೇಳುತ್ತೇನೆ. ನಾನು ಯಂತ್ರ, ನೀನು ಯಂತ್ರಿ; ನಾನು ಗೃಹ, ನೀನು ಗೃಹಿಣೀ; ನಾನು ಎಂಜನ್, ನೀನು ಎಂಜಿನಿಯರ್,' ಎಂದು ನಾನು ಪ್ರಾರ್ಥಿಸುತ್ತೇನೆ.

ಭಗವತಿಗೆ ಮೊಖ್ತ್ಯಾರ ನಾಮೆಯನ್ನು ಕೊಡು, ಒಳ್ಳೆಯವರ ಮೇಲೆ ಭಾರವನ್ನು ಹಾಕಿದರೆ ಅಮಂಗಲವಾಗುವುದಿಲ್ಲ. ಅವಳು ಇಷ್ಟಬಂದಂತೆ ಮಾಡಲಿ.

ದುಃಖವಾಗುವುದಿಲ್ಲವೇ? ಹೊಟ್ಟೆಯಲ್ಲಿ ಹುಟ್ಟಿದ ಮಗ. ರಾವಣನು ಸತ್ತು ಹೋದನು. ಆಗ ಲಕ್ಷ್ಮಣನು ಓಡಿಹೋಗಿ ನೋಡಿದನು. ಮೆಯ್ಯಲ್ಲಿ ಛಿದ್ರವಿಲ್ಲದ ಎಲುಬೇ ಇಲ್ಲ. ಬಳಿಕ ಲಕ್ಷ್ಮಣನು ರಾಮನನ್ನು ನೋಡಿ, 'ರಾಮ, ನಿನ್ನ ಬಾಣಗಳು ಅಮೋಘವಾದುವು. ರಾವಣನ ಮೆಯ್ಯಲ್ಲ, ಅವುಗಳಿಂದ ಛಿನ್ನವಾಗದ ಭಾಗವೇ ಇಲ್ಲ,' ಎಂದು ಹೇಳಿದನು. ಆ ಮಾತಿಗೆ ರಾಮನು, 'ತಮ್ಮಾ, ರಾವಣನ ಮೆಯ್ಯಲ್ಲಿ ಇರುವ ಛಿದ್ರಗಳು ನನ್ನ ಬಾಣಗಳಿಂದ ಆದುವಲ್ಲ. ದುಃಖದಿಂದ ಆದುವು. ಅವನ ಮೂಳೆಗಳು ವಿದೀರ್ಣವಾದುದಕ್ಕೆ ಅವನ ಶೋಕವೇ ಕಾರಣವಪ್ಪ,' ಎಂದು ಉತ್ತರವನ್ನು ಕೊಟ್ಟನು.

ಆದುದರಿಂದಲೇ ಇವುಗಳೆಲ್ಲವೂ ನಶ್ವರವಾದುವು. ಹೆಂಡಿರು, ಮನೆ, ಮಕ್ಕಳು, ಇವೆಲ್ಲವೂ ಮೂರು ದಿನದ ಬಾಳು. ತಾಳೆಯ ಗಿಡವೀಗ ಸತ್ಯ. ಅದರಿಂದ ಒಂದೆರಡು ಮಟ್ಟೆಗಳು ಬಿದ್ದುಹೋದರೆ ಅಳುವುದೇಕೆ?

ಈಶ್ವರನು ಸೃಷ್ಟಿ, ಸ್ಥಿತಿ, ಲಯಗಳೆಂಬ ಮೂರು ಕಾರ್ಯಗಳನ್ನೂ ಮಾಡುತ್ತಾನೆ. ಮರಣವು ಇದ್ದೇ ಇರುತ್ತದೆ. ಪ್ರಲಯಕಾಲದಲ್ಲಿ ಎಲ್ಲವೂ ನಾಶವಾಗಿ, ಒಂದೂ ಉಳಿಯುವುದಿಲ್ಲ. ಮಾತೆಯು ಸೃಷ್ಟಿಗೆ ಬೇಕಾದ ಬೀಜಗಳನ್ನೆಲ್ಲ ಕೂಡಿಸಿ ಇಡುತ್ತಾಳೆ. ಹೊಸದಾಗಿ ಸೃಷ್ಟಿಯಾಗುವಾಗ, ಅವುಗಳನ್ನೆಲ್ಲ ಹೊರಗೆ ತೆಗೆಯುತ್ತಾಳೆ. ಗೃಹಿಣಿಯರು ತರಕಾರಿಯ ಬೀಜ, ಸಮುದ್ರದ ನೊರೆ, ನೀಲಿಯ ಗುಳಿಗೆ ಮುಂತಾದ ಪೊಟ್ಟಣಗಳನ್ನು ಜೋರಯಾಗಿ ಕಟ್ಟಿ, ಗುಡಾಣದಲ್ಲಿ ಇಟ್ಟಿದ್ದು, ಬೇಕಾದಾಗ ಈಚೆಗೆ ತೆಗೆಯುವುದಿಲ್ಲವೇ? (ಎಲ್ಲರೂ ನಗುತ್ತಾರೆ.)

ಷಷ್ಠ ಪರಿಚ್ಛೇದ

ಅಧರನಿಗೆ ಪ್ರಥಮೋಪದೇಶ, ಇದಿರಿಗೆ ಮೃತ್ಯು.

ಭಗವಾನರು ಈಶಾನ್ಯಭಾಗದ ವರಾಂಡದಲ್ಲಿ ನಿಂತುಕೊಂಡು ಅಧರನೊಂದಿಗೆ ಮಾತನಾಡುತ್ತಿದ್ದಾರೆ.

ಶ್ರೀರಾಮಕೃಷ್ಣ :—(ಅಧರನನ್ನು ಕುರಿತು) ಅಯ್ಯಾ, ನೀನು ಡೆಪ್ಯುಟಿ. ಈ ಪದವಿಯು ನಿನಗೆ ಭಗವದನುಗ್ರಹದಿಂದ ದೊರೆತಿದೆ. ಭಗವಂತನನ್ನು ಎಲ್ಲಿಯಾದರೂ ಮರೆತೀಯೆ!

*ಸಕಲರೂ ಒಂದೇ ಹಾದಿಯಲ್ಲಿಯೇ ಒಂದು ದಿವಸ ಹೋಗಬೇಕು, ನೋಡಿ ಕೋ. ಈ ಲೋಕವು ಎರಡು ದಿನದ ಬಾಳು. ಹಳ್ಳಿಗಳಿಂದ ಜನರು ಕೆಲಸಮಾಡುವುದಕ್ಕೋಸ್ಕರ ಕಲಿಕತೆಗೆ ಬರುವ ಹಾಗೆ, ನಾವೂ ಈ ಲೋಕವೆಂಬ ಕರ್ಮಭೂಮಿಯಲ್ಲಿ, ಕರ್ಮಗಳನ್ನು ಮಾಡುವುದಕ್ಕೆ ಬಂದಿದ್ದೇವೆ.

ಅವಶ್ಯವಾಗಿ ಸಾಧನೆಯನ್ನು ಮಾಡಬೇಕು. ಕರ್ಮಗಳನ್ನು ಬೇಗ ಬೇಗ ಮಾಡಿ ತೀರಿಸಿಬಿಡಬೇಕು. ಅಕ್ಕಸಾಲೆಯು ಚಿನ್ನವನ್ನು ಕರಗಿಸುವಾಗ ತಿದಿಯನ್ನು ಒತ್ತುತ್ತಾನೆ, ಬೀಸಣಿಗೆಯಿಂದಲೂ ಬೀಸುತ್ತಾನೆ, ಬಾಯಲ್ಲಿ ಊದುವ ಕೊಳವಿಯನ್ನಿಟ್ಟುಕೊಂಡು ಊದುತ್ತಲೂ ಇರುತ್ತಾನೆ. ಹೀಗೆ ಅವನು ಬೆಂಕಿಯನ್ನು ಪಟುಮಾಡಿ, ಚಿನ್ನವನ್ನು ಕರಗಿಸುತ್ತಾನೆ. ಚಿನ್ನವು ಕರಗಿದ ಬಳಿಕ, ಹೊಗೆಸೊಪ್ಪನ್ನು ಸೇದುವುದಕ್ಕೆ ಅಣಿಮಾಡಿಕೊಳ್ಳುತ್ತಾನೆ. ಇದುವರೆಗೂ ಅವನ ಹಣೆಯಲ್ಲಿ ಬೆವರು ಹರಿಯುತ್ತಿದ್ದಿತು ಕೆಲಸವನ್ನು ಮುಗಿಸಿದ ಮೇಲೆಯಲ್ಲವೇ ಅವನಿಗೆ ಹೊಗೆಸೊಪ್ಪನ್ನು ಸೇದಲಿಕ್ಕೆ ವಿರಾಮ ?

ತುಂಬ ಹಟವಿರಬೇಕು, ದೃಢಪ್ರತಿಜ್ಞೆಯೊಂದಿಗೆ ಸಾಧನೆಯನ್ನು ಮಾಡಬೇಕು. ಭಗವಂತನ ನಾಮದ ಬೀಜದೊಳಗೆ ಅತಿಶಯವಾದ ಶಕ್ತಿಯಿದೆ. ಅದರಿಂದ ಅಜ್ಞಾನವು ನಾಶವಾಗಿಹೋಗುತ್ತದೆ. ಬೀಜವೂ ಬಹು ಮೃದು, ಮೊಳಕೆಯೂ ತುಂಬ ಮೃದು. ಆದರೂ ಅದು ಗಟ್ಟಿ ನೆಲವನ್ನೂ ಒಡೆದುಕೊಂಡು ಮೇಲಕ್ಕೆ ಬರುತ್ತದೆ.

ಕಾಮಿನೀಕಾಂಚನಗಳಲ್ಲಿ ಬಹು ದಿವಸ ನಿಂತರೆ, ಮನಸ್ಸು ಅವುಗಳಿಂದ ತುಂಬ ಸೆಳೆಯಲ್ಪಡುತ್ತದೆ. ಆದುದರಿಂದ, ನೀನು ಬಲು ಎಚ್ಚರಿಕೆಯಾಗಿರಬೇಕು. ಸಂಸಾರವನ್ನು ತ್ಯಾಗಮಾಡಿದವರಿಗೆ ಅಷ್ಟು ಭಯವಿಲ್ಲ. ಒಳ್ಳೆಯ ತ್ಯಾಗಿಗಳು ಕಾಮಿನೀಕಾಂಚನಗಳನ್ನು ಬಿಟ್ಟು, ಬಹಳ ದೂರದಲ್ಲಿ ನಿಲ್ಲುತ್ತಾರೆ. ಆದುದರಿಂದಲೇ ಅವರು ಸಾಧನೆಮಾಡುತ್ತ, ತಮ್ಮ ಮನಸ್ಸನ್ನು ಭಗವಂತನಲ್ಲಿ ಇಡಬಲ್ಲರು. ದುಂಬಿಗಳು ಕೇವಲ ಪುಷ್ಪದ ಮೇಲೆ ಕುಳಿತು, ಮಧು

---

* ಈ ಮಾತು ನಡೆದ ಹದಿನೆಂಟು ತಿಂಗಳೊಳಗಾಗಿ ಅಧರಸೇನನು ಸತ್ತುಹೋದನು. ಆ ದುಃಖವಾರ್ತೆಯನ್ನು ಶ್ರೀರಾಮಕೃಷ್ಣರವರು ಕೇಳಿ ಮಹಾಮಾತೆಯ ಸನ್ನಿಧಿಯಲ್ಲಿ ಬಲು ಹೊತ್ತು ಗಟ್ಟಿಯಾಗಿ ಅತ್ತರು. ಅಧರನು ಭಗವಾನರಿಗೆ ಪರಮಭಕ್ತ; 'ನೀನು ನನ್ನವನೇ,' ಎಂದು ಭಗವಾನರು ಅವನಿಗೆ ಹೇಳುತ್ತಿದ್ದರು.

ವನ್ನು ಪಾನಮಾಡುತ್ತವೆ. ಹಾಗೆಯೇ ನಿಜವಾಗಿಯೂ ತ್ಯಾಗಿಗಳಾದವರು ಸರ್ವದಾ ಈಶ್ವರನಲ್ಲಿಯೇ ಮನಸ್ಸನ್ನಿಡಬಲ್ಲರು.

ಆದರೆ ಕಾಮಿನೀಕಾಂಚನಗಳಲ್ಲಿ ಆಸಕ್ತರಾಗಿರುವ ಸಂಸಾರಿಗಳೂ ಒಂದೊಂದು ವೇಳೆ ಭಗವಂತನಲ್ಲಿ ತಮ್ಮ ಮನಸ್ಸನ್ನು ಇಡಬಲ್ಲರು. ಅವರ ಮನವು ಮರಳಿ ಕಾಮಿನೀಕಾಂಚನಗಳಲ್ಲಿಯೇ ಬಂದು ಸೇರುತ್ತದೆ. ಸಾಧಾರಣ ವಾದ ನೊಣವು ಒಂದೊಂದು ವೇಳೆ ಮಿಠಾಯಿ ಮೇಲೆ ಕುಳಿತುಕೊಳ್ಳುತ್ತದೆ. ಒಂದೊಂದು ವೇಳೆ ಮಲದ ಮೇಲೆಯೂ ವ್ರಣದ ಮೇಲೆಯೂ ಕುಳಿತು ಕೊಳ್ಳುತ್ತದೆಯಲ್ಲವೇ?

ನಿನ್ನ ಮನವನ್ನು ಸದಾ ಭಗವಂತನಲ್ಲಿ ಇರಿಸು. ಮೊದಲು ಮೊದಲು ಸ್ವಲ್ಪ ಕಷ್ಟಪಟ್ಟು ಕೆಲಸಮಾಡಬೇಕು. ಆ ಮೇಲೆ ಪೆನ್ಷನ್ ಸಿಕ್ಕುತ್ತದೆ.

ಅಧರನ ಮನೆಯು ಕಲಿಕತೆಯ ಶೋಭಾಬಾಜಾರದ ಬೇಣೀತೋಲಾದಲ್ಲಿದೆ. ಅವನಿಗೆ ಗಂಡು ಮಕ್ಕಳಿಲ್ಲ, ಹೆಣ್ಣುಮಕ್ಕಳು ವಿವಾಹಿತರಾಗಿ ಬೇರೆಯಿದ್ದಾರೆ. ಶ್ರೀಶ್ಯಾಮಲಾಲ್, ಹೀರಲಾಲ್ ಮುಂತಾದ ತಮ್ಮಂದಿರು ಈಗ ಅಲ್ಲಿ ವಾಸಮಾಡುತ್ತಿದ್ದಾರೆ. ಭಗವಾನರು ಹೋಗಿಬರುತ್ತಿದ್ದುದರಿಂದ, ಅವರ ಮನೆಯು ಈಗ ಯಾತ್ರಾಸ್ಥಳವಾಗಿದೆ.

ಹದಿನೇಳನೆಯ ಖಂಡ

ಪ್ರಥಮಪರಿಚ್ಛೇದ

ಭಗವಾನ್ ಶ್ರೀರಾಮಕೃಷ್ಣರು ಸುರೇಂದ್ರನ ಮನೆಯ ಉತ್ಸವಮಂದಿರದಲ್ಲಿ

ಸುರೇಂದ್ರನ ಮನೆಯ ಅಂಗಳದಲ್ಲಿ ಭಗವಾನ್ ಶ್ರೀರಾಮಕೃಷ್ಣರು ಸಭೆಯನ್ನು ಪ್ರಕಾಶಗೊಳಿಸುತ್ತಾ ಕುಳಿತಿದ್ದಾರೆ. ಸಾಯಂಕಾಲ, ಆರು ಗಂಟೆಯಾಗಿದ್ದಿತು.

ಅಂಗಳದಿಂದ ಪೂರ್ವಾಸ್ಯರಾಗಿ ದೇವರ ಕೋಣೆಗೆ ಹತ್ತಿ ಹೋಗಬೇಕು. ದೇವರ ಕೋಣೆಯಲ್ಲಿ ಬಹುಸುಂದರವಾದ ದೇವರ ಪ್ರತಿಮೆಯೊಂದಿದೆ.

ಕಾಳಿಯು ದೇವರ ಕೋಣೆಯನ್ನು ಪ್ರಕಾಶಗೊಳಿಸುತ್ತಾ ಇದ್ದಾಳೆ. ಅವಳ ಪಾದಪದ್ಮದಲ್ಲಿ ಜಪಾಪುಷ್ಪಗಳೂ, ಬಿಲ್ವದಳಗಳೂ, ಕೊರಲಲ್ಲಿ ಪುಷ್ಪಮಾಲೆಗಳೂ ಶೋಭಿಸುತ್ತಿವೆ.

ಈ ದಿವಸ ಶ್ರೀ ಶ್ರೀ ಅನ್ನಪೂರ್ಣಾಪೂಜೆ. ೧೮೮೩ ನೆಯ ಕ್ರಿಸ್ತಾಬ್ದ ಏಪ್ರೆಲ್ ೧೫ನೆಯ ತೇದಿ, ಭಾನುವಾರ. ಸುರೇಂದ್ರನು ಅನ್ನಪೂರ್ಣಾಕಾಳಿಯ ಪೂಜೆಗೆ ಏರ್ಪಾಡಮಾಡಿದ್ದಾನೆ. ಆದುದರಿಂದಲೇ ಭಗವಾನರನ್ನೂ ಕರೆದಿದ್ದಾನೆ. ಭಗವಾನರು ಭಕ್ತರ ಕೂಡ ಬಂದು, ದೇವರ ಕೋಣೆಗೆ ಹೋಗಿ, ದೇವರ ದರ್ಶನವನ್ನು ಮಾಡಿ, ನಮಸ್ಕರಿಸಿದರು. ಬಳಿಕ ಕಾಳಿಯ ಇದಿರಿಗೆ ನಿಂತುಕೊಂಡು, ಬೆರಲನ್ನು ಎಣಿಸುತ್ತಾ, ಮೂಲಮಂತ್ರವನ್ನು ಜಪಮಾಡಿದರು. ಭಕ್ತರು ದೇವರ ದರ್ಶನವನ್ನು ಮಾಡಿ, ನಮಸ್ಕರಿಸಿ, ಭಗವಾನರ ಹತ್ತಿರ ನಿಂತುಕೊಂಡರು.

ಭಗವಾನರು ಭಕ್ತರೊಡನೆ ಅಂಗಳಕ್ಕೆ ಬಂದರು. ಅಲ್ಲಿ ರತ್ನಗಂಬಳಿಯನ್ನು ಹಾಸಿ, ಅದರ ಮೇಲೆ ದಿಂಬುಗಳನ್ನು ಇಟ್ಟಿದ್ದಾರೆ. ಒಂದು ಕಡೆಯಲ್ಲಿ ಒಬ್ಬ ವೈಷ್ಣವನು ಮೃದಂಗವನ್ನೂ, ತಾಳವನ್ನೂ ಇಟ್ಟುಕೊಂಡು, ಸಂಕೀರ್ತನವನ್ನು ಮಾಡುವುದಕ್ಕೆ ಕುಳಿತಿದ್ದಾನೆ.

ಭಕ್ತರೆಲ್ಲರೂ ಭಗವಾನರ ಸುತ್ತಲೂ ಕುಳಿತುಕೊಂಡರು.

ದಿಂಬನ್ನು ಒರಗಿಕೊಂಡು ಕುಳಿತುಕೊಳ್ಳುವಂತೆ ಭಕ್ತರು ಭಗವಾನ್ ಶ್ರೀರಾಮಕೃಷ್ಣರಿಗೆ ಹೇಳಿದರು. ಅವರು ದಿಂಬಿನ ಹತ್ತಿರ ಕುಳಿತುಕೊಳ್ಳದೆ, ಅದನ್ನು ಆಚೆಗೆ ಸರಿಸಿ ಕುಳಿತುಕೊಂಡರು.

ಶ್ರೀರಾಮಕೃಷ್ಣ :—(ಭಕ್ತರ ಕಡೆಗೆ) ದಿಂಬನ್ನು ಒರಗಿಕೊಂಡು ಕುಳಿತುಕೊಳ್ಳುವುದೇ, ಏನ ಹೇಳಲಿ? ಅಭಿಮಾನವನ್ನು ಬಿಡುವುದು ಬಹುಕಷ್ಟ. ನಾನು ಅಹಂಕಾರವನ್ನು ಬಿಟ್ಟಿದ್ದೇನೆಂದು ತಿಳಿದುಕೊಂಡರೂ, ಅದು ಎಲ್ಲಿಂದಲೋ ಬಂದು ಸೇರಿಯೇ ಸೇರುತ್ತದೆ.

ಆಡನ್ನು ಕತ್ತರಿಸಿ ಬಿಸಾಡಿದ್ದರೂ, ಅದರ ಅಂಗ ಪ್ರತ್ಯಂಗಗಳು ಇನ್ನೂ ಅಲ್ಲಾಡುತ್ತವೆ.

ನೀನು ಭಯಂಕರವಾದ ಸ್ವಪ್ನವನ್ನು ಕಂಡರೆ, ಚೆನ್ನಾಗಿ ಎಚ್ಚರಗೊಂಡಿದ್ದರೂ, ನಿನ್ನ ಎದೆಯು, 'ಡವ, ಡವ', ಎಂದು ಹೊಡೆದುಕೊಳ್ಳುತ್ತದೆ. ಅಭಿಮಾನವೂ ಇದೇ ರೀತಿ. ಅದನ್ನು ಹೊಡೆದು ಅಟ್ಟಿದರೂ, ಅದು ಜೋಲು ಮೋರೆಯನ್ನು ಹಾಕಿಕೊಂಡು ಬಂದು, 'ನನ್ನನ್ನು ದಯವಿಟ್ಟು ಸ್ವೀಕರಿಸು' ಎನ್ನುತ್ತ, ಹೇಗೋ ಬಂದು ಸೇರಿಕೊಳ್ಳುತ್ತದೆ.

ಕೇದಾರ :—'ತೃಣಾದಪಿ ಸುನೀಚೇನ ತರೋರಿವ ಸಹಿಷ್ಣುನಾ,' ಎಂಬಂತೆ, ಜನರು ಹುಲ್ಲಿಗಿಂತ ಕಡೆಯೆಂದು ತಿಳಿದುಕೊಳ್ಳಬೇಕು, ವೃಕ್ಷದಂತೆ ಸಹನವುಳ್ಳವರಾಗಿರಬೇಕು.

ಶ್ರೀರಾಮಕೃಷ್ಣ :—ನಾನು ಭಕ್ತರ ರೇಣುವಿನ ರೇಣು.

ಆಗ ಕಲಿಕತಾ ಹೈಕೋರ್ಟ್ ವಕೀಲನಾದ ವೈದ್ಯನಾಥನು ಬಂದು, ಭಗವಾನರಿಗೆ ಕೈ ಮುಗಿದು ನಮಸ್ಕಾರಮಾಡಿ, ಒಂದು ಕಡೆಯಲ್ಲಿ ಕುಳಿತನು. ಅವನು ವಿದ್ಯಾವಂತ.

ಸುರೇಂದ್ರ :—(ಶ್ರೀರಾಮಕೃಷ್ಣರ ಕಡೆಗೆ) ಇವನು ನನ್ನ ಬಂಧು.

ಶ್ರೀರಾಮಕೃಷ್ಣ :—ಹಾಗೆಯೇ? ಇವನ ಸ್ವಭಾವವು ಚೆನ್ನಾಗಿದೆ.

ಸುರೇಂದ್ರ :—ಇವನು ತಮ್ಮ ಸಂಗಡ ಮಾತನಾಡಬೇಕೆಂದು ಬಂದಿದ್ದಾನೆ.

ಶ್ರೀರಾಮಕೃಷ್ಣ :—(ವೈದ್ಯನಾಥನ ಕಡೆಗೆ) ನಮಗೆ ಕಾಣುವುದೆಲ್ಲವೂ ಭಗವಂತನ ಶಕ್ತಿ. ಅವನ ಶಕ್ತಿಗೆ ವಿರುದ್ಧವಾಗಿ, ಆರೂ ಏನನ್ನ ಮಾಡುವುದಕ್ಕಾಗುವುದಿಲ್ಲ. ಆದರೆ ಒಂದು ಮಾತಿದೆ, ಅವನ ಶಕ್ತಿಯು ಎಲ್ಲಾ ಕಡೆಯಲ್ಲಿಯೂ ಒಂದೇ ರೀತಿಯಾಗಿ ಇಲ್ಲ. 'ಈಶ್ವರನು ಕೆಲವರಿಗೆ ಹೆಚ್ಚು ಶಕ್ತಿಯನ್ನು ಕೊಡುತ್ತಾನೆಯೋ?' ಎಂದು ವಿದ್ಯಾಸಾಗರನು ನನ್ನನ್ನು ಕೇಳಿದನು. ಅದಕ್ಕೆ ನಾನು, 'ಕೆಲವರಿಗೆ ಹೆಚ್ಚು ಶಕ್ತಿಯನ್ನು ಕೊಡದಿದ್ದರೆ, ನಿನ್ನನ್ನು ನೋಡುವುದಕ್ಕೆ ನಾವು ಏತಕ್ಕೆ ಇಲ್ಲಿಗೆ ಬರುತ್ತಿದ್ದೆವು? ನಿನಗೆ ಎರಡು ಕೊಂಬು ಹುಟ್ಟಿವೆಯೇ?' ಎಂದು ಉತ್ತರಕೊಟ್ಟೆನು. ಭಗವಂತನು ವಿಭುರೂಪದಲ್ಲಿ ಸರ್ವಭೂತಗಳಲ್ಲಿಯೂ ಇದ್ದಾನೆ. ಆದರೆ ಶಕ್ತಿ ವಿಶೇಷ.

(ಇಚ್ಛೆಯು ಜನರ ಅಧೀನವೋ? ಈಶ್ವರಾಧೀನವೋ?)

ವೈದ್ಯನಾಥ :—ಸ್ವಾಮೀ, ನನಗೆ ಒಂದು ಸಂದೇಹ, ಅದೇನೆಂದರೆ, ಇಚ್ಛೆಯು ನಮ್ಮ ಅಧೀನವೇ? ಒಳ್ಳೆಯ ಕೆಲಸವನ್ನು ಮಾಡಬೇಕೆಂದು ನಾವು ಯೋಚಿಸಿದರೆ, ಒಳ್ಳೆಯ ಕೆಲಸವನ್ನೇ ಮಾಡಬಲ್ಲೆವು; ಕೆಟ್ಟ ಕೆಲಸವನ್ನು ಮಾಡಬೇಕೆಂದು ಯೋಚಿಸಿದರೆ, ಕೆಟ್ಟ ಕೆಲಸವನ್ನೇ ಮಾಡಬಲ್ಲೆವು,' ಎಂದು ತೋರುತ್ತದೆಯಲ್ಲ. ಇದೇನು ಸತ್ಯವೇ? ಸತ್ಯವಾಗಿಯೂ ಇಚ್ಛೆಯು ನಮ್ಮ ಅಧೀನವೇ?

ಶ್ರೀರಾಮಕೃಷ್ಣ :—ಎಲ್ಲವೂ ಭಗವದಧೀನ. ಅವನದೇ ಲೀಲೆ. ಅವನೇ ನಾನಾ ಜಾತಿಯ ಪದಾರ್ಥಗಳನ್ನು ಮಾಡುತ್ತಾನೆ. ಚಿಕ್ಕವ, ದೊಡ್ಡವ, ಬಲಿಷ್ಠ, ದುರ್ಬಲ, ಒಳ್ಳೆಯದು, ಕೆಟ್ಟುದು, ಒಳ್ಳೆಯವ, ಕೆಟ್ಟವ, ಇವೆಲ್ಲವೂ ಅವನ ಮಾಯೆ, ಅವನ ಆಟ. ಇಗೋ ನೋಡು. ತೋಟದಲ್ಲಿರುವ ಗಿಡುಗಳೆಲ್ಲವೂ ಒಂದೇ ರೀತಿಯಾಗಿವೆಯೇ?

ಭಗವಂತನ ಲಾಭವಾಗದೆ ಇರುವ ತನಕ, ಇಚ್ಛೆಯು ನಮ್ಮ ಅಧೀನವೆಂದು ಮನಸ್ಸಿಗೆ ತೋರುತ್ತದೆ. ಈ ಭ್ರಮವನ್ನೂ ಅವನೇ ಇರಿಸಿದ್ದಾನೆ. ಇಲ್ಲದಿದ್ದರೆ ಪಾಪದಲ್ಲ ಬುದ್ಧಿಯು ಹೋಗುತ್ತಿದ್ದಿತು, ಭಯವಿರುತ್ತಿರಲಿಲ್ಲ, ಅದಕ್ಕೆ ಶಿಕ್ಷೆಯೂ ಇರುತ್ತಿರಲಿಲ್ಲ.

ಈಶ್ವರಲಾಭವಾದವನ ಭಾವವೆಂಥದು, ಗೊತ್ತೋ?

ನಾನು ಯಂತ್ರ, ನೀನು ಯಂತ್ರೀ, ನಾನು ಮನೆ, ನೀನು ಮನೆಯ ಯಜಮಾನ; ನಾನು ರಥ, ನೀನು ರಥೀ; ನೀನು ನಡೆಯಿಸಿದ ಹಾಗೆ ನಡೆಯುತ್ತೇನೆ, ನೀನು ಹೇಳಿಸಿದ ಹಾಗೆ ಹೇಳುತ್ತೇನೆ.

(ಈಶ್ವರದರ್ಶನವು ಒಂದು ದಿನಕ್ಕೆ ಆಗುತ್ತದೆಯೇ? ಸಾಧುಸಂಗದ ಪ್ರಯೋಜನ.)

ಶ್ರೀರಾಮಕೃಷ್ಣ:—(ವೈದ್ಯನಾಥನನ್ನು ನೋಡಿ) ತರ್ಕಮಾಡುವುದು ಒಳ್ಳೆಯದಲ್ಲ. ನೀನೇನ ಹೇಳುತ್ತೀಯೆ?

ವೈದ್ಯನಾಥ:—ಸ್ವಾಮೀ, ಅಹುದು. ಜ್ಞಾನವು ಹುಟ್ಟಿದರೆ, ತರ್ಕಮಾಡಬೇಕೆಂಬ ಭಾವವು ನಿಲ್ಲುವುದಿಲ್ಲ.

ಶ್ರೀರಾಮಕೃಷ್ಣ:—Thank you. (ನಿನಗೆ ಬಹು ಧನ್ಯವಾದಗಳು.) (ಎಲ್ಲರೂ ನಗುತ್ತಾರೆ) ನಿನಗೆ ಈಶ್ವರಲಾಭವಾಗುತ್ತದೆ. ಈಶ್ವರನ ಮಾತನ್ನು ಹೇಳಿದರೆ, ಜನರು ನಂಬುವುದಿಲ್ಲ. ಮಹಾಪುರುಷರು, 'ಭಗವಂತನನ್ನು ನಾನು ನೋಡಿದ್ದೇನೆ,' ಎಂದು ಹೇಳಿದರೂ, ಸಾಧಾರಣ ಜನರು ನಂಬುವುದಿಲ್ಲ. 'ಈಶ್ವರನನ್ನು ನೋಡಿದ್ದರೆ, ನಮಗೂ ಈಶ್ವರನನ್ನು ತೋರಿಸಲಿ,' ಎಂದು ಮನಸ್ಸಿನಲ್ಲಿ ಹೇಳಿ ಕೊಳ್ಳುತ್ತಾರೆ. ಆದರೆ ಒಂದೇ ದಿನದಲ್ಲಿ ನಾಡೀ ಪರೀಕ್ಷೆಯನ್ನು ಕಲಿಸುವುದಕ್ಕಾದೀತೇ? ನಾಡೀ ಪರೀಕ್ಷೆಯನ್ನು ತಿಳಿದವರ ಸಂಗವನ್ನು ಮಾಡಿ, ಅವರ ಹಿಂದೆ ಮುಂದೆ, ಬಹು ದಿವಸಗಳು ತಿರುಗಿ ಕಷ್ಟಪಟ್ಟರೆ, ಇದು ಕಫನಾಡೀ, ಇದು ಪಿತ್ತನಾಡೀ, ಇದು ವಾತನಾಡೀ, ಎಂಬುದನ್ನು ಹೇಳಬಹುದು. (ಎಲ್ಲರೂ ನಗುತ್ತಾರೆ).

ಇದು ಇಷ್ಟನೆಯ ನಂಬರಿನ ನೂಲೆಂದು ಹೇಳುವುದಕ್ಕೆ ಎಲ್ಲರಿಗೂ ಸಾಧ್ಯವೇ? ನೂಲು ವ್ಯಾಪಾರಿಯ ಅಂಗಡಿಯಲ್ಲಿ ಕೆಲವು ದಿವಸಗಳಿದ್ದು, ತಿಳಿದುಕೊಂಡ ಬಳಿಕ, ನೂಲನ್ನು ನೋಡಿದ ಕ್ಷಣವೇ, 'ಇದು ನಲವತ್ತನೆಯ ನಂಬರಿನ ನೂಲು. ಇದು ನಲವತ್ತೊಂದನೆಯ ನಂಬರಿನ ನೂಲು,' ಎಂದು ಹೇಳಬಹುದು.

ದ್ವಿತೀಯ ಪರಿಚ್ಛೇದ

ಭಕ್ತರ ಸಂಗಡ ಕೀರ್ತನ ಮತ್ತು ಸಮಾಧಿ.

ಈಗ ಕೀರ್ತನವು ಪ್ರಾರಂಭವಾಗುತ್ತದೆ. ಮೃದಂಗವನ್ನು ಬಾಜಿಸುತ್ತಿದ್ದಾರೆ. ಇನ್ನೂ ಗಾನವು ಆರಂಭವಾಗಿಲ್ಲ. ಮೃದಂಗದ ಮಧುರಧ್ವನಿಯೂ, ಗೌರಾಂಗನ ಮಂಗಲವೂ, ನಾಮಸಂಕೀರ್ತನವೂ ಉದ್ದೀಪನವನ್ನುಂಟುಮಾಡುತ್ತಿವೆ. ಭಗವಾನರು ಭಾವದಲ್ಲಿ ಮಗ್ನರಾಗಿದ್ದಾರೆ. ಆಗಾಗ ಮೃದಂಗವನ್ನು ನೋಡುತ್ತಾ, 'ಹಾ, ನಾನು ಹೋದೆ. ನಾನು ಹೋದೆ. ನನಗೆ ರೋಮಾಂಚವಾಗುತ್ತದೆ,' ಎಂದು ಹೇಳುತ್ತಿದ್ದಾರೆ.

ಗಾಯಕರು 'ಆವ ಹಾಡನ್ನು ಹಾಡೋಣ?' ಎಂದು ಕೇಳಿದರು. ಶ್ರೀರಾಮಕೃಷ್ಣರು ವಿನಯದಿಂದ, 'ಗೌರಾಂಗನ ಹಾಡನ್ನು ಹಾಡಿರಿ,' ಎಂದು ಉತ್ತರವನ್ನು ಇತ್ತರು.

ಕೀರ್ತನವು ಆರಂಭವಾಯಿತು. ಮೊದಲು ಗೌರಚಂದ್ರಿಕೆ, ಬಳಿಕ ಬೇರೆ ಹಾಡು.

ಕಂದ ಕರಗಿದ ಕುಂದಣದಂತಿರೆ।
ಮಿರುಮಿರುಗುವ ದೇಹಕಾಂತಿಯಿಂದಂ ಕರುಣಾ॥
ವರುಣಾಲಯಮೆನೆ ತೊಳಗುವ।
ವರಮುಖರುಚಿಯಿಂದೆ ರಂಜಿಪಂ ಗೌರಾಂಗಂ ॥೧॥
ಗೌರಾಂಗವದನ ಹಸಿತಂ।
ಮೂರುಂ ಲೋಕಂಗಳಂ ಕರಂ ಬೆಳಗುತಿರಲ್ ॥೨॥
ಶಾರದಶಶಧರಕೋಟಿ ಮಿ।
ಚಾರಿಸಲತ್ಯಂತಮಂದದೀಪ್ತಿಯೆನಿಕ್ಕುಂ॥

ಕೀರ್ತನದಲ್ಲಿ ಗೌರಾಂಗನ ರೂಪವರ್ಣನವು ನಡೆಯಿತು. ಕೀರ್ತನಿಯರು ಒತ್ತು ಹಾಡನ್ನು ಹಾಡಿದರು.

ಕಂದ ಕಂದಿಲ್ಲದ ಕುಂದಿಲ್ಲದ।
ಚೆಂದದ ಸಂಪೂರ್ಣಚಂದ್ರನಂ ಮಾನಸಕಾ॥
ನಂದದನಂ ನಿರುಕಿಸಿದೆಂ।
ಸುಂದರಿ ಕೇಳೆನ್ನ ಕೆಳದಿ ಚಂದಿರವದನೇ॥

ಕೀರ್ತನಿಯರು ಮತ್ತೆ ಹಾಡುತ್ತಾರೆ.

ಗಾನ॥ ನಿಟಲದ ಮಧ್ಯದೆ ಕೋಟಿಚಂದ್ರರಾ।
ಪಟುಪೀಯೂಷವೆ ತೋರುತಿರ್ಪುದೈ॥

ಈ ಹಾಡನ್ನು ಕೇಳುತ್ತಾ ಭಗವಾನರು ಸಮಾಧಿಸ್ಥರಾದರು. ಗಾನವಾಗುತ್ತಿದೆ. ಭಗವಾನರಿಗೆ ಸ್ವಲ್ಪ ಹೊತ್ತಿನಮೇಲೆ ಸಮಾಧಿಯು ತಿಳಿಯಿತು. ಅವರು ಭಾವದಲ್ಲಿ ಮಗ್ನರಾಗಿ ನಿಂತುಕೊಂಡು, ಪ್ರೇಮೋನ್ಮತ್ತರಾದ ಗೋಪಿಯರಂತೆ ಶ್ರೀಕೃಷ್ಣನ ರೂಪವನ್ನು ವರ್ಣಿಸುತ್ತಾ, ಕೀರ್ತನೀಯರೊಡನೆ ಒತ್ತು ಹಾಡನ್ನು ಹಾಡಿಪರು.

ಇದು ರೂಪದ ದೋಷವೊ ಚಿ।
ತ್ತದ ದೋಷವೊ ಸಖಿಯೆ ಸೊಲ್ಲಿಸವನಂ ತಾ ನೋ॥
ಡಿದಪೆಂ ತ್ರಿಭುವನವುಂ ಕಾ।
ಣ್ಬುದೆನಗೆ ಕೇಳ್ ಶ್ಯಾಮಮಯಮೆನಿಸುತೆತ್ತೆತ್ತಂ॥

ಭಗವಾನರು ನರ್ತನಮಾಡುತ್ತಾ, ಒತ್ತು ಹಾಡ ಹಾಡುವುದನ್ನು ಭಕ್ತರು ಆಶ್ಚರ್ಯದಿಂದ ನೋಡಿದರು.

ಕೀರ್ತನೀಯರು ಹಾಡಿದರು.

ಗೋಪಿಯರ ಮಾತು

ಗಾನ॥ ಮುರಳಿಯೆ ಮೊರೆಯುತಿರುವೆಯೇಕೆ। ನಿದ್ರೆ।
ಯೊರಗಿಸದಯೋ ನಿನ್ನನಿಂತೇಕೆ॥

ಒತ್ತು ಹಾಡನ್ನು ಹಾಡಿದರು.

ಗಾನ॥ ಎಂತೆಲೆಗೇ ಮಲಗುವೆ ನೀನು। ಶ್ರೀ।
ಕಾಂತಸುಪಾಣಿಶಯ್ಯೆಯೊಳಿರುತ॥
ಅಂತು ಶ್ರೀಮುಖಸುಧೆಯೊಳ್ಪಣಿಸ। ಆ।
ಶ್ರಾಂತಮಂಗುಳಿಯ ಸೇವೆಯ ಕೊಳುತ॥

ಭಗವಾನರು ಮತ್ತೆ ಕುಳಿತರು. ಕೀರ್ತನೆಯಾಗುತ್ತಿದ್ದಿತು. ಶ್ರೀಮತಿಯು ಹೇಳುತ್ತಾಳೆ.

ಕಂದ॥ ಕಿವಿ ಕಣ್ ಮೂಗೆನಿಪೀ ಕರ।
ಣವೆಲ್ಲಮನವಲ್ಲಿ ಪೋಗಿ ನಿಂದುವು ನಾಂ ಮಾ।
ಡುವೆನೇನನಿಲ್ಲಿಯೇಕಾ।
ಕಿ ವಿರಹದಿಂ ಬೇಯಲೆನುತುಮೋನಿರಿಸಿದನೋ॥

ಕೊನೆಗೆ ಶ್ರೀರಾಧಾಕೃಷ್ಣರ ಮಿಲನಗಾನವಾಯಿತು.

ಕುಸುಮಷಟ್ಪದಿ.

ಶ್ಯಾಮನುದ್ಗ್ರೀವಕಳಿ।
ರಾಮವಹುದೆಂದು ಸುಮ।
ನೋವಮಾಲೆಯುಂ ರಚಿಸುತಿರಲು ಧನಿಯು॥
ಶ್ಯಾಮನುದ್ಯದ್ಗಣಾ।
ರಾಮನಭಿಮಾಖಕತಿ।
ಪ್ರೇಮದಿಂದಾಗಳೇ ತಾಂ ಬಂದನು॥

ಯುಗಳಮಿಲನ

ಪರಿವರ್ಧಿನಿ॥ ಶ್ಯಾಮವಿನೋದಿನಿಯುರೆ ನಿಧುವನದು।
ದ್ದಾಮಜ್ಯೋತಿಗಳವರ್ಗಳ ಜೆಲ್ವಿಂ।
ಗಾಮಹನೀಯರ ಮಹದನುರಾಗಕಮುಪಮೆಯುಜೀನುಂಟು॥
ಹೇಮದ್ಯುತಿಯುರೆ ಮೆಯ್ಯಿಂದಿರಮಣಿ।
ಧಾಮಮದರೆ ಮೆಯ್ ಕಂಠಾರ್ಧದೆ ಸುಮ।
ನೋವಮಾಲಿಕೆಯಿನ್ನರ್ಧದೆ ಗಜಮಸ್ತಕಮೌಕ್ತಿಕಮಾಲೆ ॥೧॥
ಮಕರಸುಕುಂಡಲಮೊರ್ಕಿವಿಯೊಳ್ ರ।
ತ್ನಕಲಾಪದ್ಯುತಿಯಿತರಶ್ರವಣದೆ।
ಮುಖದರ್ಧದೆ ರವಿರುಚಿಯುಪರಾರ್ಧದೆ ತಾರಾಪತಿಕಾಂತಿ॥
ಪ್ರಕಟಸುಪಿಂಛಾಚೂಡಕಮಾಮ।
ಸ್ತಕದರ್ಧದೆ ಹಿಣಿಲರೆದಲೆಯೊಳ್ ಕರ।
ದಕಳಂಕದ್ಯುತಿಯುಂ ಬೀರುವ ಮಣಿಗಳನೀಯುವ ಫಣಿಯು ॥೨॥

ಕೀರ್ತನವು ಮುಗಿಯಿತು. ಭಗವಾನರು, 'ಭಾಗವತ, ಭಕ್ತ, ಭಗವಾನ್, ಮೂರೂ ಒಂದೇ', ಎಂಬ ಮಂತ್ರವನ್ನು ಅನೇಕಾವೃತ್ತಿ ಉಚ್ಚರಿಸುತ್ತಾ, ಸಾಷ್ಟಾಂಗ ಪ್ರಣಾಮವನ್ನು ಮಾಡಿ, ನಾಲ್ಕು ಕಡೆಯಲ್ಲಿಯೂ ಭಕ್ತರಿಗೆ ನಮಸ್ಕಾರವನ್ನು ಮಾಡಿ, ಕೀರ್ತನಭೂಮಿಯ ಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿದರು.

ತೃತೀಯ ಪರಿಚ್ಛೇದ

ಭಗವಾನ್ ಶ್ರೀರಾಮಕೃಷ್ಣ. ಸಾಕಾರ, ನಿರಾಕಾರ.

ರಾತ್ರೆ ಸುಮಾರು ಒಂಭತ್ತೂವರೆ ಗಂಟೆಯ ಸಮಯ. ಶ್ರೀ ಅನ್ನಪೂರ್ಣಾ ದೇವಿಯು ದೇವರ ಕೋಣೆಯನ್ನು ಪ್ರಕಾಶಗೊಳಿಸುತ್ತಾ ಇದ್ದಾಳೆ. ಮುಂದುಗಡೆ

ಭಗವಾನರು ಭಕ್ತರ ಸಂಗಡ ನಿಂತಿದ್ದಾರೆ. ಸುರೇಂದ್ರ, ರಾಖಾಲ, ಕೇದಾರ, ಮಾಸ್ಟರ್, ರಾಮ, ಮನೋಮೋಹನ, ಇನ್ನೂ ಇತರಭಕ್ತರೂ ಇದ್ದಾರೆ. ಅವರೆಲ್ಲರೂ ಭಗವಾನರ ಜತೆಯಲ್ಲಿ ಪ್ರಸಾದಸ್ವೀಕಾರಮಾಡಿದರು. ಸುರೇಂದ್ರನು ಸರ್ವರಿಗೂ ಸಂತೋಷವಾಗುವಂತೆ ಭೋಜನಮಾಡಿಸಿದನು. ಈಗ ಭಗವಾನ್ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ತೋಟಕ್ಕೆ ಹಿಂತಿರುಗುತ್ತಾರೆ. ಭಕ್ತರೂ ತಮ್ಮ ತಮ್ಮ ಮನೆಗಳಿಗೆ ಹೊರಡುತ್ತಾರೆ. ಎಲ್ಲರೂ ದೇವರ ಮನೆಗೆ ಬಂದು ಸೇರಿದ್ದಾರೆ.

ಸುರೇಂದ್ರ :—(ಶ್ರೀರಾಮಕೃಷ್ಣರನ್ನು ನೋಡಿ) ಈಗ ಕಾಳಿಯ ಗಾನವು ಸ್ವಲ್ಪವೂ ನಡೆಯಲಿಲ್ಲವಲ್ಲ.

ಶ್ರೀರಾಮಕೃಷ್ಣ :—(ದೇವರ ಪ್ರತಿಮೆಯನ್ನು ನೋಡುತ್ತ) ಆಹಾ! ದೇವರ ಮನೆಯು ಎಷ್ಟು ಶೋಭಿಸುತ್ತದೆ! ಕಾಳಿಯು ಹೇಗೆ ಬೆಳಗುತ್ತಿದ್ದಾಳೆ? ಈ ರೂಪವನ್ನು ನೋಡಿದರೆ ಎಷ್ಟು ಆನಂದವಾಗುತ್ತದೆ! ಸುಖಾಪೇಕ್ಷೆಯೂ ದುಃಖವೂ ತೊಲಗಿಹೋಗುತ್ತದೆ. ಆದರೆ, ನಿರಾಕಾರದರ್ಶನವೇನು ಆಗುವುದಿಲ್ಲವೇ? ಹಾಗಲ್ಲ. ವಿಷಯಬುದ್ಧಿಯು ಸ್ವಲ್ಪವಿದ್ದರೂ ಆಗುವುದಿಲ್ಲ. ಋಷಿಗಳು ಎಲ್ಲವನ್ನೂ ತ್ಯಾಗಮಾಡಿ, ಅಖಂಡಸಚ್ಚಿದಾನಂದನ ಧ್ಯಾನವನ್ನು ಮಾಡುತ್ತಿದ್ದರು.

ಈಗಿನ ಬ್ರಹ್ಮಜ್ಞಾನಿಗಳು ಅಚಲಘನನೆಂದು ಹಾಡುತ್ತಾರೆ. ಅದು ನನಗೆ ನೀರಸವಾಗಿ ತೋರುತ್ತದೆ.

ಈ ಗಾನಮಾಡುವವರು ಇನ್ನೂ ಬ್ರಹ್ಮಾನಂದದ ರಸಾಸ್ವಾದವನ್ನು ಮಾಡಿಲ್ಲ. ಜೋನಿಯ ಬೆಲ್ಲದ ಪಾನಕವನ್ನು ಕುಡಿದು, ಮತ್ತೆಲ್ಲವನ್ನೂ ಮರೆತು, ಅಲ್ಲಿಯೇ ನಿಂತಿರುವವರಿಗೆ, ಅದಕ್ಕಿಂತಲೂ ಶ್ರೇಷ್ಠವಾದ ಕಲ್ಲು ಸಕ್ಕರೆಯ ಪಾನಕವನ್ನು ಹುಡುಕುವುದಕ್ಕೆ ಇಚ್ಛೆಯೇ ಹುಟ್ಟುವುದಿಲ್ಲ.

ಈ ವಿಗ್ರಹವನ್ನು ದರ್ಶನಮಾಡಿ ಎಷ್ಟು ಆನಂದಪಡುತ್ತಿದ್ದೀರಿ? ಇದನ್ನು ನೀವೇ ನೋಡಿರಿ. ದೇವರನ್ನು ನಿರಾಕಾರನೆಂದು ಹೇಳುವರಿಗೆ ಈ ಆನಂದವೆಲ್ಲಿಯದು? ಅವರಿಗೆ ಹೊರಗೂ ಇಲ್ಲ, ಒಳಗೂ ಇಲ್ಲ.

ಗಾನ॥ ದಯೆ ಬಾರದೇ ದಯಾ। ಮಯೆಯೆನ್ನ ಮೇಲೆ ತಾಯೆ।
ಭಯಹಾರಿಣೀ ಶಿವಾ। ಶ್ರಯವಲ್ಲದಿಲ್ಲ ಬೇರೆ ॥ಪಲ್ಲವಿ॥

ಯಮನೆನ್ನ ಪಾಪಿಯೆಂದ। ಕ್ರಮದಲ್ಲಿ ಕಾಡುತಿಹನು।
ಹಿಮಶೈಲನಂದಿನೀ ಪಾ। ಪಮನೊಂದನರಿಯೆನಾನು ॥೧॥

ಅವಿರಾಮದಿಂ ಭವಾನೀ। ತವದಿವ್ಯನಾಮಗಳನು।
ಭವದಿಂದತೀತನಿನ್ನಾ। ಗುವೆನೆಂದು ಕೀರ್ತಿಸುವೆನು ॥೨॥

ಸಂಸಾರಸಾಗರದಲಿ । ನೀಂ ಸುಮ್ಮನೆನ್ನ ನೂಂಕೆ ।
ಕಂಸಾರಿಸೋದರೀ ಪೇಳೇಂ ಸಂತಸಂ ಗಡಾಯ್ತು ॥೩॥

ದಿನರಾತ್ರಿಯೆನ್ನದಾನು । ಜನನೀ ಭವಾಬ್ಧಿಯಲ್ಲಿ
ಅನಿಗಾಲ ನಿನ್ನನೇ ನಾಂ । ನೆನೆಯುತ್ತೆ ತೇಲುತಿಹೆನು ॥೪॥

ಬಗೆಯಲ್ಲಿ ನಿನ್ನ ನಾಮಾ। ಳಿಗಳನ್ನು ನೆನೆಯುತಿರಲು ।
ದುಗುಡಂಗಳೆನ್ನನೇಕೀ । ವಗೆಯಲ್ಲಿ ಕಾಡುತಿಹುವು ॥೫॥

ಹರಸುಂದರೀ ಕೇಳು । ಮರಣಂ ಗಡಾಗಲೆನಗೆ।
ಧರೆಯಲ್ಲಿ ನಿನ್ನ ನಾಮಾ । ಕ್ಷರವನ್ನು ಪೇಳ್ವರಾರು ॥೬॥

ಗಾನ॥ ನೆನೆವೆ ನೀಗಳೇ ದುರ್ಗಾ ।
ವಿನುತನಾಮವ ॥ಪಲ್ಲವಿ॥
ನೆನೆಯೆ ದುರ್ಗೆಯನ್ನು ಶೂಲಿ।
ಯನವರತವು ಪೊರೆಯುತಿಹನು ॥ಅನುಪಲ್ಲವಿ॥

ನೀನೆ ದಿನವು ನೀನೆ ಸಂಜೆ।
ನೀನೆ ರಾತ್ರಿಯೆನಿಸಿ ತೋರ್ಪೆ॥
ನೀನೆ ಪ್ರಕೃತಿಯೆನಿಸುತಿರುವೆ।
ನೀನೆ ಪುರುಷನಾಗಿ ಮೆರೆವೆ ॥೧॥

ಜಯವು ದುರ್ಗೆಗೆನುತೆ ಕೂಗಿ।
ರಯದೆ ಕಾಲ ಕಡಗವಾಗಿ ॥
ಭಯವಿದೂರೆ ನಿನ್ನ ಪಾದಾ ।
ಶ್ರಯವ ಮಾಡುತಿರುವೆನೆಂಬ ॥೨॥

ಪುರಹರಾರ್ಧದೇಹೆ ನೀನು।
ಗರುಡನಾಗಿ ನಭದೆ ಹಾರೆ॥
ಚರಿಸಿ ಮೀನನಾಗಿ ನಿನ್ನ।
ಚರಣ ನಖವ ಸಾರ್ವೆನಂಬ ॥೩॥

ಉಗುರ ಹೊಯ್ಲೊಳೆನ್ನ ಜೀವ।
ವಗಲೆ ದೇಹದಿಂದಲಂದು।
ಅಗಜೆ ದಯೆಯಿನೆನ್ನ ಬಿಡದೆ।
ಹುಗಿಸು ನಿನ್ನ ಚರಣಯುಗದೆ ॥೪॥

ಭಗವಾನ್ ಶ್ರೀರಾಮಕೃಷ್ಣರು ಮತ್ತೆ ಪ್ರತಿಮೆಯ ಇದಿರಿಗೆ ಪ್ರಣಾಮಮಾಡಿದರು. ಮೆಟ್ಟಿಲಿಂದ ಇಳಿಯುವಾಗ, ‘ಎಲೈ, ರಾಖಾಲ್, ಜೋ—(ಡು) ಇದೆಯೋ? ಇಲ್ಲ, ಆರಾದರೂ ಹಾರಿಸಿಕೊಂಡು ಹೋದರೋ?’ ಎಂದು ಕೇಳಿದರು.

ಭಗವಾನರು ಬಂಡಿಯನ್ನು ಏರಿದರು. ಸುರೇಂದ್ರನೂ, ಇತರಭಕ್ತರ
ಅವರಿಗೆ ಪ್ರಣಾಮಮಾಡಿದರು. ಹಾದಿಯಲ್ಲಿ ಬೆಳುದಿಂಗಳು ಇದ್ದಿತು. ಭಗವಾನ
ಬಂಡಿಯು ದಕ್ಷಿಣೇಶ್ವರದ ಕಡೆಗೆ ಹೋಯಿತು.

———o———

ಹದಿನೆಂಟನೆಯ ಖಂಡ

ನಂದನವನದ ಬ್ರಾಹ್ಮಸಮಾಜದಲ್ಲಿ ರಾಖಾಲ, ಮಾಸ್ಟರ್ ಮುಂತಾದ ಭಕ್ತರೊಂದಿಗೆ

ಪ್ರಥಮ ಪರಿಚ್ಛೇದ

ಶ್ರೀಮಂದಿರದ ದರ್ಶನ ಮತ್ತು ಉದ್ದೀಪನ, ರಾಧೆಯ ಪ್ರೇಮೋನ್ಮಾದ

ಭಗವಾನ್ ಶ್ರೀರಾಮಕೃಷ್ಣರು ನಂದನವನದ ಬ್ರಾಹ್ಮಸಮಾಜಮಂದಿರದ
ಭಕ್ತರೊಂದಿಗೆ ಕುಳಿತು ಮಾತುಗಳನ್ನು ಆಡುತ್ತಿದ್ದಾರೆ. ಜತೆಯಲ್ಲಿ ರಾಖಾಲ
ಮಾಸ್ಟರು ಮುಂತಾದವರು ಇದ್ದಾರೆ. ಐದು ಗಂಟೆಯ ಸಮಯ.

ಕಾಶೀಶ್ವರಮಿತ್ರನ ಮನೆಯು ನಂದನವನದಲ್ಲಿದೆ. ಅವನು ಮೊದಲು
ಸರ್ಕಾರದ ಉದ್ಯೋಗದಲ್ಲಿದ್ದನು. ಅವನು ಆದಿಬ್ರಹ್ಮಸಮಾಜದ ಭಕ್ತನು, ಬ್ರಹ್ಮ
ಜ್ಞಾನಿ. ಅವನು ತನ್ನ ಮನೆಯ ಮಹಡಿಯ ಮೇಲಿನ ದೊಡ್ಡ ಕೊಟ್ಟಡಿಯಲ್ಲಿ, ಭಗ
ವಂತನ ಉಪಾಸನೆಯನ್ನು ಮಾಡುತ್ತಿದ್ದನು. ಇತರ ಭಕ್ತರನ್ನೂ ಕರೆಯಿಸಿ, ಆಗಾಗ
ಉತ್ಸವವನ್ನೂ ಮಾಡುತ್ತಿದ್ದನು. ಅವನು ಸ್ವರ್ಗಸ್ಥನಾದ ಬಳಿಕ, ಶ್ರೀನಾಥ
ಯಜ್ಞನಾಥರೆಂಬ ಅವನ ಪುತ್ರರು, ಕೆಲವು ದಿವಸ ಈ ಉತ್ಸವವನ್ನು ನಡೆಸುತ್ತಿದ್ದರು
ಅವರು ಭಗವಾನರನ್ನು ಬಹಳ ಆದರದಿಂದ ಬರಮಾಡಿಕೊಂಡಿದ್ದರು. ಭಗವಾನರು
ಬಂದು, ಮೊದಲು ಕೆಳಗಿನ ಒಂದು ದಿವಾನ್‌ಖಾನೆಯಲ್ಲಿ ಕುಳಿತಿದ್ದರು. ಅಲ್ಲಿಗೆ ಬ್ರಾಹ
ಭಕ್ತರು ಕ್ರಮವಾಗಿ ಬಂದು ಸೇರಿದರು. ಶ್ರೀರವೀಂದ್ರ ಠಾಕೂರರು ಮುಂತಾದ
ಠಾಕೂರವಂಶದ ಭಕ್ತರೂ ಆ ಉತ್ಸವಕ್ಕೆ ಬಂದಿದ್ದರು.

ಭಗವಾನರು ಆಹೂತರಾಗಿ ಭಕ್ತರೊಂದಿಗೆ ಮಹಡಿಯ ಮೇಲಣ ಉಪಾಸನಾ
ಮಂದಿರದಲ್ಲಿ ಹೋಗಿ ಕುಳಿತರು.

ಉಪಾಸನಾಗೃಹದ ಪೂರ್ವಭಾಗದಲ್ಲಿ ಒಂದು ಜಗಲಿ ಮಾಡಿದ್ದಾರೆ. ನೈಋತ್ಯ
ಮೂಲೆಯಲ್ಲಿ ಪಿಯಾನೋ ಎಂಬ ವಾದ್ಯವೊಂದು ಇದೆ. ಕೊಟ್ಟಡಿಯು ಉತ್ತರ

ರ್ಶ್ವದಲ್ಲಿ, ಕೆಲವು ಕುರ್ಚಿಗಳನ್ನು ಹಾಕಿದ್ದಾರೆ. ಅದಕ್ಕೆ ಪೂರ್ವದಲ್ಲಿ, ಅಂತಃಪುರ ಹೋಗುವ ಬಾಗಿಲು ಒಂದಿದೆ.

ಸಂಧ್ಯಾಕಾಲದ ಉಪಾಸನೆಯು ಆರಂಭವಾಯಿತು. ಆದಿಬ್ರಹ್ಮಸಮಾಜದ ೀಯುಕ್ತ ಭೈರವವಂದ್ಯೋಪಾಧ್ಯಾಯನು, ಒಬ್ಬಿಬ್ಬರು ಭಕ್ತರೊಂದಿಗೆ ವೇದಿಯಲ್ಲಿ ಳಿತು, ಉಪಾಸನಾಕಾರ್ಯಗಳನ್ನು ಆರಂಭಿಸುತ್ತಾನೆ.

ಗ್ರೀಷ್ಮಕಾಲ, ಈ ದಿವಸ ಬುಧವಾರ ೧೮೮೩ ನೇ ಕ್ರಿಸ್ತಾಬ್ದ ಮೇ ೨ ನೆಯ ೇದಿ. ಅನೇಕ ಬ್ರಾಹ್ಮಭಕ್ತರು, ಕೆಳಗಿನ ದೊಡ್ಡ ಅಂಗಳದಲ್ಲಿಯೂ, ವಾರಾಂಡ ಯೂ ತಿರುಗಾಡುತ್ತಿದ್ದಾರೆ. ಶ್ರೀಯುಕ್ತ ಜಾನಕೀ ಘೋಷಾಲ್ ಪ್ರಭೃತಿ ಭಕ್ತರು, ಗವಾನ್ ಶ್ರೀರಾಮಕೃಷ್ಣರ ಮುಖದಿಂದ ಹೊರಡುವ ಈಶ್ವರವಿಷಯಕವಾದ ಾತುಗಳನ್ನು ಕೇಳಬೇಕೆಂದು ಉಪಾಸನಾಗೃಹಕ್ಕೆ ಬಂದು ಅವರ ಹತ್ತಿರ ಕುಳಿತರು.

ಭಗವಾನರು ಕೊಟ್ಟಡಿಗೆ ಪ್ರವೇಶಿಸಿ, ವೇದಿಗೆ ಅಭಿಮುಖವಾಗಿ ಪ್ರಣಾಮ ನ್ನು ಮಾಡಿ ಕುಳಿತರು.

ಶ್ರೀರಾಮಕೃಷ್ಣ :—(ರಾಖಾಲ್, ಮಾಸ್ಟರ್ ಮುಂತಾದ ಭಕ್ತರ ಕಡೆಗೆ) ಸಮಾಜಮಂದಿರಕ್ಕೆ ಪಕ್ಕೆ ನಮಸ್ಕಾರಮಾಡಬೇಕೆಂದು ನರೇಂದ್ರನು ನನ್ನನ್ನು ಒಂದು ಸಲ ಕೇಳಿದನು. ಮಂದಿರವನ್ನು ನೋಡಿದರೆ ಭಗವಂತನೇ ಮನಸ್ಸಿನಲ್ಲಿ ಬೀಳುತ್ತಾನೆ. ಉದ್ದೀಪನವಾಗುತ್ತದೆ. ಎಲ್ಲಿ ಭಗವಂತನ ಮಾತು ನಡೆಯುತ್ತದೆಯೋ, ಅಲ್ಲಿ ಭಗವಂತನು ಆವಿರ್ಭವಿಸುತ್ತಾನೆ; ಸಕಲ ತೀರ್ಥಗಳ ಸಮಾಗಮವೂ ಆಗುತ್ತದೆ: ಆ ಸ್ಥಲವನ್ನು ನೋಡಿದರೆ ಭಗವಂತನೇ ಮನಸ್ಸಿಗೆ ಬೀಳುತ್ತಾನೆ. ಒಬ್ಬ ಭಕ್ತನು ಜಾಲಿಯ ಗಿಡವನ್ನು ತಂದನು. 'ಇದರ ಕೊಂಬೆಯಿಂದ ರಾಧಾಕಾಂತದೇವರ ತೋಟಕ್ಕೆ ಉಪಯೋಗವಾಗುವ ಕೊಡಲಿಯ ಕಾವು ಆಗುತ್ತದೆ', ಎಂದು ಯೋಚಿಸಿ, ಭಾವಾವಿಷ್ಟನಾದನು. ಮತ್ತೊಬ್ಬ ಭಕ್ತನು, ತನ್ನ ಗುರುವಿನ ಊರಿಂದ ಬಂದ ಜನರನ್ನು ನೋಡಿ, ಗುರುಭಕ್ತಿಯಲ್ಲಿ ಮಗ್ನನಾದನು. ಮೇಘ, ನೀಲವಸ್ತ್ರ, ಚಿತ್ರಪಟಗಳನ್ನು ಕಂಡರೆ, ರಾಧೆಗೆ ಕೃಷ್ಣನ ಉದ್ದೀಪನವಾಗುತ್ತಿದ್ದಿತು. ಅವಳು ಇವುಗಳನ್ನು ನೋಡಿ, ಹುಚ್ಚಳಂತೆ, 'ಎಲ್ಲಿ ಕೃಷ್ಣ' ಎಂದು ವ್ಯಾಕುಲಳಾಗುತ್ತಿದ್ದಳು.

ಘೋಷಾಲ :—ಉನ್ಮಾದವು ಒಳ್ಳೆಯದಲ್ಲ.

ಶ್ರೀರಾಮಕೃಷ್ಣ :—ಅದೇಕಪ್ಪಾ, ಅಜ್ಞೈತನ್ಯವಾಗುವುದಕ್ಕೆ ಇದೇನು ವಿಷಯ ಚಿಂತೆಯಿಂದ ಉಂಟಾದ ಉನ್ಮಾದವೇ? ಇದು ಭಗವಚ್ಚಿಂತೆಯಿಂದ ಉಂಟಾದುದು. ಇದು ಪ್ರೇಮೋನ್ಮಾದ, ಜ್ಞಾನೋನ್ಮಾದ, ನೀನು ಕೇಳಿಲ್ಲವೇ?

(ಈಶ್ವರನಲ್ಲಿ ಪ್ರೀತಿಯೇ ಉಪಾಯ, ಷಡ್ರಿಪುಗಳನ್ನು ತಿರುಗಿಸುವುದು)

ಬ್ರಾಹ್ಮಭಕ್ತ :—ಭಗವಂತನನ್ನು ಪಡೆಯುವ ಉಪಾಯವೇನು ?

ಶ್ರೀರಾಮಕೃಷ್ಣ:—ಭಗವಂತನಲ್ಲಿ ಪ್ರೀತಿ ಮತ್ತು, 'ಈಶ್ವರನೇ ಸತ್ಯ, ಜಗತ್ತು ಅನಿತ್ಯ,' ಎಂಬ ವಿಚಾರವನ್ನು ಸದಾ ಮಾಡುತ್ತಿರುವುದೇ. ಅಶ್ವತ್ಥವೇ ಸತ್ಯ, ಫಲವು ಎರಡು ದಿವಸದ್ದು.

ಬ್ರಾಹ್ಮಭಕ್ತ :—ಕಾಮಕ್ರೋಧಾದಿಗಳು ಇರುತ್ತವೆಯಲ್ಲ, ಅದಕ್ಕೇನ ಮಾಡಬೇಕು ?

ಶ್ರೀರಾಮಕೃಷ್ಣ:—ಆ ಅರಿಷಡ್ವರ್ಗಗಳನ್ನು ಭಗವಂತನ ಕಡೆಗೆ ತಿರುಗಿಸಿ ಬಿಡಬೇಕು. ಹೇಗೆಂದರೆ ಭಗವಂತನೊಡನೆ ರಮಿಸುವುದೇ ಕಾಮನಾ. ಭಗವಂತನ ದಾರಿಗೆ ತಡೆಮಾಡುವವರ ಮೇಲೆ ಸಿಟ್ಟು ; ಭಗವಂತನನ್ನು ಪಡೆಯುವುದಕ್ಕಾಗಿ ಲೋಭ; 'ನನ್ನ ಕೃಷ್ಣ, ನನ್ನ ರಾಮ,' ಎಂದು ಭಗವಂತನಲ್ಲಿಯೇ ಮಮಕಾರ; 'ನಾನು ರಾಮನಿಗೆ ನಮಸ್ಕಾರಮಾಡಿದ್ದೇನೆ. ಈ ತಲೆಯು ಇತರರಿಗೆ ಬಗ್ಗುವುದಿಲ್ಲ,' ಎಂಬ ವಿಭೀಷಣನ ಅಹಂಕಾರದಂತಹ ಅಹಂಕಾರ.

ಬ್ರಾಹ್ಮಭಕ್ತ :—ಭಗವಂತನೇ ಎಲ್ಲವನ್ನೂ ಮಾಡಿಸುವುದಾದರೆ, ಪಾಪಕ್ಕೆ ನಾನು ಹೇಗೆ ಗುರಿಯಾಗುವೆನು?

ಶ್ರೀರಾಮಕೃಷ್ಣ:—'ತ್ವಯಾ ಹೃಷೀಕೇಶ ಹೃದಿಸ್ಥಿತೇನ ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ' ಎಂದರೆ 'ಎಲೈ ಭಗವಂತನೇ, ನೀನು ಹೃದಯಮಧ್ಯದಲ್ಲಿ ಇದ್ದುಕೊಂಡು ಆವ ರೀತಿ ಪ್ರೇರಿಸುತ್ತೀಯೋ, ಅದೇ ರೀತಿ ನಾನು ನಡೆಯುತ್ತೇನೆ,' ಎಂದು ಹೇಳುತ್ತ, ದುರ್ಯೋಧನನು ಎಷ್ಟೋ ಪಾಪಗಳನ್ನು ಮಾಡುತ್ತಿದ್ದನು.

'ಈಶ್ವರನೇ ಕರ್ತೃ, ನಾನು ಅಕರ್ತೃ,' ಎಂಬ ವಿಶ್ವಾಸವುಳ್ಳವನು ಪಾಪಕಾರ್ಯಗಳನ್ನು ಮಾಡುವುದೇ ಇಲ್ಲ. ನರ್ತನವನ್ನು ಚೆನ್ನಾಗಿ ಕಲಿತವನು ತಾಳ ತಪ್ಪಿ ಒಂದು ಹಜ್ಜೆಯನ್ನೂ ಇಡುವುದಿಲ್ಲ. ಅಂತಶ್ಶುದ್ಧಿಯಿಲ್ಲದಿದ್ದರೆ ಈಶ್ವರನಿದ್ದಾನೆಂಬ ವಿಶ್ವಾಸವೇ ಉಂಟಾಗಲಾರದು.

(ಉಪಾಸನಾಗೃಹದಲ್ಲಿ ನೆರೆದ ಜನಗಳನ್ನು ನೋಡಿ) ಆಗಾಗ ಈ ರೀತಿ ಒಟ್ಟಾಗಿ ಸೇರಿ ಭಗವಚ್ಚಿಂತನೆಯನ್ನೂ ಅವನ ನಾಮಗುಣಕೀರ್ತನವನ್ನೂ ಮಾಡುವುದು ಬಲು ಒಳ್ಳೆಯದು.

ಬೆಂದ ಲೋಹದ ಮೇಲೆ ಚಿಮುಕಿಸಿದ ನೀರು ನಿಲ್ಲುವುದು ಹೇಗೆ ಕ್ಷಣಿಕವೋ, ಹಾಗೆಯೇ ಸಂಸಾರಿಗಳಿಗೆ ಭಗವಂತನ ಮೇಲೆ ಅನುರಾಗವು ನಿಲ್ಲುವುದೂ ಕ್ಷಣಿಕ.

(ಬ್ರಹ್ಮೋಪಾಸನೆ)

ಇನ್ನುಮೇಲೆ ಉಪಾಸನೆಯು ಪ್ರಾರಂಭವಾಗುತ್ತದೆ. ಉಪಾಸನೆಯ ದೊಡ್ಡ ಂಗಳದಲ್ಲ ಬ್ರಾಹ್ಮಭಕ್ತರು ತುಂಬಿದ್ದಾರೆ. ಕೆಲವರು ಬ್ರಾಹ್ಮಸಮಾಜದ ಹೆಂಗುಸರು ಯ್ಯಲ್ಲಿ ಸಂಗೀತಪುಸ್ತಕವನ್ನು ಇಟ್ಟುಕೊಂಡು, ಕೊಟ್ಟಡಿಯ ಉತ್ತರಪಾರ್ಶ್ವದಲ್ಲಿ ರ್ಚಿಗಳ ಮೇಲೆ ಕುಳಿತಿದ್ದಾರೆ.

ಪಿಯಾನೋ, ಹಾರ್ಮೋನಿಯಂ ವಾದ್ಯಗಳೊಂದಿಗೆ ಬ್ರಾಹ್ಮಸಂಗೀತವು ಆಗ ೊಡಗಿತು. ಸಂಗೀತವನ್ನು ಕೇಳಿ, ಭಗವಾನರಿಗೆ ಅಪಾರವಾದ ಸಂತೋಷವು ಉಂಟಾಯಿತು. ಕ್ರಮವಾಗಿ ಉದ್ಬೋಧನ, ಪ್ರಾರ್ಥನಾ, ಉಪಾಸನಾ, ಇವುಗಳು ಡೆಯುತ್ತವೆ. ವೇದಿಯ ಮೇಲೆ ಆಚಾರ್ಯಗಣವು ಕುಳಿತು, ವೇದಮಂತ್ರವನ್ನು ಠನಮಾಡತೊಡಗಿತು.

'ಓಂ ಪಿತಾನೋಸಿ, ಪಿತಾನೋ ಬೋಧಿ, ನಮಸ್ತೇಸ್ತು, ಮಾ ಮಾಹಿಂ ್ರೀಃ,' 'ನೀನು ನನ್ನ ತಂದೆ, ನಮಗೆ ಒಳ್ಳೆಯ ಬುದ್ಧಿಯನ್ನು ಕೊಡು, ನಿನಗೆ ್ರಣಾಮ. ನಮಗೆ ವಿನಾಶವನ್ನು ಉಂಟುಮಾಡಬೇಡ.' 'ಓಂ ಸತ್ಯಂ ಜ್ಞಾನಮ ನಂತಂ ಬ್ರಹ್ಮ,' 'ಆನಂದರೂಪಮಮೃತಂ ಯದ್ವಿಭಾತಿ,' 'ಶಾನ್ತಂ ಶಿವಮ ದ್ವೈತಂ, ಶುದ್ಧಮಪಾಪವಿದ್ಧಂ,' ಎಂದು ಬ್ರಾಹ್ಮಭಕ್ತರೆಲ್ಲರೂ ಆಚಾರ್ಯರೊಂದಿಗೆ ಹೇಳಿದರು.

'ಓಂ ನಮಸ್ತೇ ಸತೇ ತೇ ಜಗತ್ಕಾರಣಾಯ। ನಮಸ್ತೇ ಚಿತೇ ಸರ್ವಲೋ ಕಾಶ್ರಯಾಯ.' ಇತ್ಯಾದಿಸ್ತೋತ್ರಗಳನ್ನು ಆಚಾರ್ಯಗಣವು ಮಾಡಿತು.

ಸ್ತೋತ್ರವಾದ ಬಳಿಕ, ಆಚಾರ್ಯರು, 'ಅಸತೋ ಮಾಸದ್ಗಮಯ, ತಮ ಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾಮೃತಂ ಗಮಯ, ಆವಿರಾವಿರ್ಮ ಏಧಿ, ರುದ್ರ ಯತ್ತೇ ದಕ್ಷಿಣ ಮುಖಂ ತೇನ ಮಾಂ ಪಾಹಿ, ನಿತ್ಯಂ,' 'ಅಸತ್ತಾದ ಜಗತ್ತಿನಿಂದ, ಸತ್ತಾದ ನಿನ್ನಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು; ಈ ಕತ್ತಲೆ ಯಿಂದ, ಜ್ಯೋತಿರ್ಮಯನಾದ ನಿನ್ನಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು; ಮೃತ್ಯುವಶವಾದ ಇಲ್ಲಿಂದ, ನನ್ನನ್ನು ಅಮೃತನಾದ ನಿನ್ನೆಡೆಗೆ ಕರೆದುಕೊಂಡು ಹೋಗು; ನನ್ನನ್ನು ಪುನಃ ಪುನಃ, ಈ ಜಗತ್ತಿಗೆ ತಂದು ಹಾಕಬೇಡ; ನಿನ್ನ ವಿನಾಶ ವುಂಟುಮಾಡುವ ದಕ್ಷಿಣಮುಖದಿಂದ ನನ್ನನ್ನು ಆವಾಗಲೂ ಕಾಪಿಡು;' ಎಂದು ಪ್ರಾರ್ಥನೆಯನ್ನು ಮಾಡಿದರು.

ಭಗವಾನರು ಸ್ತೋತ್ರಪಾಠಗಳನ್ನು ಕೇಳಿ, ಭಾವಾವಿಷ್ಟರಾದರು. ಈಗ ಆಚಾ ರ್ಯರು ಪ್ರಬಂಧವನ್ನು ಪಠನಮಾಡಿದರು.

(ಶ್ರೀರಾಮಕೃಷ್ಣರು. ಅಕ್ರೋಧಪರಮಾನಂದರು. ಅಹೇತುಕಕೃಪಾಸಿಂಧು.)

ಉಪಾಸನೆಯು ಮುಗಿಯಿತು. ಭಕ್ತರಿಗೆ ಫಲಾಹಾರದ ಏರ್ಪಾಡು ನಡೆಯ ತ್ತಿದೆ. ಅನೇಕ ಭಕ್ತರು ಕೆಳಗಿನ ಅಂಗಳದಲ್ಲಿಯೂ, ವಾರಾಂಡದಲ್ಲಿಯೂ, ವಾಯ ಸೇವನೆಯನ್ನು ಮಾಡುತ್ತಿದ್ದಾರೆ.

ರಾತ್ರೆ ಒಂಭತ್ತು ಗಂಟೆಯಾಯಿತು. ಭಗವಾನರು ದಕ್ಷಿಣೇಶ್ವರಕ್ಕೆ ಹಿಂ ರುಗಿ ಹೋಗಬೇಕು. ಮನೆಯ ಯಜಮಾನರು, ತಾವು ಕರೆದಿರುವ ಸಂಸಾ ಭಕ್ತರನ್ನು ವಿಚಾರಿಸುವ ಗಲಾಟೆಯಲ್ಲಿ, ಭಗವಾನರನ್ನು ಮರೆತೇ ಬಿಟ್ಟರು.

ಶ್ರೀರಾಮಕೃಷ್ಣ :—(ರಾಖಾಲ ಮುಂತಾದವರ ಕಡೆಗೆ) ಇದೇನಪ್ಪಾ, ನಮ ನ್ನು ಆರೂ ಕೂಗಲೇ ಇಲ್ಲ.

ರಾಖಾಲ :—(ಕೋಪದಿಂದ) ಸ್ವಾಮೀ, ದಕ್ಷಿಣೇಶ್ವರಕ್ಕೆ ಹೊರಟು ಹೋ ಗೋಣ, ಬನ್ನಿರಿ.

ಶ್ರೀರಾಮಕೃಷ್ಣ :—(ನಗುತ್ತಾ) ಏ, ನಿಲ್ಲು. ಮೂರು ರೂಪಾಯಿ ಎರಡಾ ಬಂಡಿಯ ಬಾಡಿಗೆಯನ್ನು ಕೊಡುವರು ಆರು? ಸಿಟ್ಟು ಮಾಡಿದ ಏನೂ ಉಪಯೋಗವಿಲ್ಲ. ಕಯ್ಯಲ್ಲಿ ಒಂದು ಕಾಸೂ ಇಲ್ಲ, ಈ ಅಪ್ರ ಯೋಜಕವಾದ ಸಿಟ್ಟು ಏತಕ್ಕೆ? ನಾವು ಹೊರಟು ಹೋಗಿ ಬಿಟ್ಟರೆ, ಅವೇಳೆಯಲ್ಲಿ ನಮಗೆ ತಿಂಡಿಯೆಲ್ಲಿ?

ಬಲು ಹೊತ್ತಿನ ಮೇಲೆ, 'ಎಲೆ ಹಾಕಿದೆ,' ಎಂಬ ಶಬ್ದವು ಕೇಳಿಸಿತು. 'ಎ ರೂ ಬನ್ನಿರಿ,' ಎಂದು ಭಕ್ತರನ್ನು ಒಂದೇ ಸಲ ಕೂಗಿದರು. ಆ ಗುಂಪಿನ ಭಗವಾನರೂ, ರಾಖಾಲನೊಂದಿಗೆ ಫಲಾಹಾರಮಾಡುವುದಕ್ಕೆ ಮಹಡಿಯ ಮೇಲಕ ಹೋದರು. ಕುಳಿತುಕೊಳ್ಳುವುದಕ್ಕೆ ಸರಿಯಾದ ಸ್ಥಲವು ದೊರೆಯಲಿಲ್ಲ. ಬಹ ಕಷ್ಟದಿಂದ ಒಂದು ಅಪರಿಷ್ಕೃತವಾದ ಸ್ಥಲದಲ್ಲಿ ಭಗವಾನರು ಕುಳಿತರು. ಅಡುಗೆಯ ಹೆಂಗುಸು ಪಲ್ಯವನ್ನು ಬಡ್ಡಿಸುವುದಕ್ಕೆ ಬಂದಳು. ಭಗವಾನರಿಗೆ ಪಲ್ಯವು ಇಷ್ಟವಿಲ್ಲ ಅವರು ಉಪ್ಪನ್ನು ಎದ್ದಿಕೊಂಡು ಪೂರಿಯನ್ನೂ, ಸ್ವಲ್ಪ ಪಾಯಸವನ್ನೂ ಸ್ವೀ ರಿಸಿದರು.

ಭಗವಾನರು ದಯಾಸಿಂಧು. ಮನೆಯ ಯಜಮಾನರು ಇನ್ನೂ ಚಿಕ್ಕವಯಸ್ಸಿ ನವರು; ಭಗವಾನರನ್ನು ಆವ ರೀತಿ ಪೂಜಿಸಬೇಕೆಂಬುದೇ ಅವರಿಗೆ ತಿಳಿಯದು ಇದಕ್ಕಾಗಿ ಭಗವಾನರು ಕೋಪಿಸಿಕೊಳ್ಳುವರೇ? ಅವರು ಭೋಜನಮಾಡದ ಹೊರಟುಹೋಗಿದ್ದರೆ, ಮನೆಯ ಯಜಮಾನರಿಗೆ ಅಮಂಗಲವಾಗುತ್ತಿದ್ದಿತು ಮತ್ತು ಅವರು ಭಗವಂತನನ್ನು ಉದ್ದೇಶಿಸಿ ಈ ಎಲ್ಲ ಏರ್ಪಾಡನ್ನೂ ಮಾಡಿದ್ದಾರೆ

ಭೋಜನವಾದ ಬಳಿಕ, ಭಗವಾನರು ಬಂಡಿಯಲ್ಲಿ ಕುಳಿತರು. ಬಂಡಿಯ ಬಾಡಿಗೆಯನ್ನು ಆರು ಕೊಡುವವರು? ಮನೆಯ ಯಜಮಾನರನ್ನು ಕಂಡು ಹಿಡಿಯುವುದೇ ಕಷ್ಟ. ಭಗವಾನರು ಬಂಡಿಯ ಬಾಡಿಗೆಯ ವಿಷಯವಾಗಿ, ಭಕ್ತರ ಸಂಗಡ ಆನಂದದಿಂದ ಮಾತಾಡುತ್ತಿದ್ದಾರೆ.

ಒಬ್ಬ ಭಕ್ತನು ಬಾಡಿಗೆಯನ್ನು ಕೇಳುವುದಕ್ಕೆ ಹೋದನು. ಮನೆಯ ಯಜಮಾನನು ಅವನನ್ನು ಮೊದಲು ಅಟ್ಟಿಬಿಟ್ಟನು. ಪುನಃ ಬಹಳ ಕಷ್ಟಪಟ್ಟು, ಅವನು ಮನೆಯ ಯಜಮಾನನಿಂದ ಮೂರು ರೂಪಾಯಿಗಳನ್ನು ಮಾತ್ರ ತೆಗೆದುಕೊಂಡನು. ಉಳಿದ ಎರಡಾಣೆಯು ದೊರೆಯಲೇ ಇಲ್ಲ. 'ಇಷ್ಟೇ ಸಾಕು,' ಎಂದು ಯಜಮಾನನು ಹೇಳಿಬಿಟ್ಟನು.

ಹತ್ತೊಂಬತ್ತನೆಯ ಖಂಡ

ವರಾಹನಗರದ ಮಠ

ನರೇಂದ್ರರಾಖಾಲಪ್ರಭೃತಿ ಮಠದ ಸನ್ಯಾಸಿಗಳು ಶಿವರಾತ್ರಿಯ ವ್ರತವನ್ನು ಮಾಡುವುದು

ಈ ದಿವಸ ಸೋಮವಾರ, ಶಿವರಾತ್ರಿ. ೧೮೮೭ ನೆಯ ಕ್ರಿಸ್ತಾಬ್ದದ ಫೆಬ್ರುವರಿಯ ೨೭ ನೆಯ ತೇದಿ. ಶ್ರೀರಾಮಕೃಷ್ಣರವರು ಪರಂಧಾಮವನ್ನೆಯ್ದಿ ಸುಮಾರು ಆರು ತಿಂಗಳಾಗಿವೆ. ನರೇಂದ್ರ, ರಾಖಾಲ, ಮುಂತಾದ ಭಕ್ತರು ತೀವ್ರವೈರಾಗ್ಯದಿಂದ ಕೂಡಿ, ವರಾಹನಗರದಲ್ಲಿ ಮಠಮಾಡಿಕೊಂಡು, ಸನ್ಯಾಸಾಶ್ರಮವನ್ನು ಸ್ವೀಕರಿಸಿದ್ದಾರೆ. ಒಂದು ದಿನ ರಾಖಾಲನನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕೆ ಅವನ ತಂದೆಯು ಬಂದಿದ್ದನು. 'ತಾವೇಕೆ ಸುಮ್ಮಗೆ ಕಷ್ಟಪಟ್ಟುಕೊಂಡು ಬಂದಿರಿ? ನಾನು ಇಲ್ಲಿಯೇ ನೆಮ್ಮದಿಯಾಗಿದ್ದೇನೆ. ತಾವು ನನ್ನನ್ನು ಮರೆತು ಬಿಡಿರಿ; ನಾನು ತಮ್ಮನ್ನು ಮರೆತುಬಿಡುವಂತೆ ಆಶೀರ್ವಾದಮಾಡಿರಿ,' ಎಂದು ರಾಖಾಲನು ತಂದೆಗೆ ಹೇಳಿ, ಅವನನ್ನು ಕಳುಹಿಸಿಬಿಟ್ಟನು. ಎಲ್ಲರಿಗೂ ತೀವ್ರವಾದ ವೈರಾಗ್ಯ; ಎಲ್ಲರೂ ಸಾಧನೆಭಜನೆಗಳನ್ನು ಮಾಡುತ್ತಿದ್ದಾರೆ, ಹೇಗಾದರೂ ಭಗವದ್ದರ್ಶನವಾಗಬೇಕೆಂಬುದೊಂದೇ ಅವರ ಉದ್ದೇಶ್ಯ.

ನರೇಂದ್ರಾದಿ ಭಕ್ತರು ಕೆಲವು ವೇಳೆ ಜಪಮಾಡುತ್ತಲೂ, ಕೆಲವು ವೇಳೆ ಧ್ಯಾನ ಮಾಡುತ್ತಲೂ, ಮಿಕ್ಕ ವೇಳೆಗಳಲ್ಲಿ ಶಾಸ್ತ್ರವೋದುತ್ತಲೂ ಇದ್ದರು. 'ಈ ಪೂಜಾಜಪಧ್ಯಾನಗಳೇ ಗೀತೆಯಲ್ಲಿ ಹೇಳಿರುವ ನಿಷ್ಕಾಮಕರ್ಮಗಳು; ಇನ್ನೇನೂ ಇಲ್ಲ,' ಎಂದು ನರೇಂದ್ರನು ಹೇಳುತ್ತಿದ್ದನು.

ನರೇಂದ್ರನ ತಾಯನ್ನು ಮನೆಯಿಂದ ಹೊರಡಿಸಿಬಿಡಬೇಕೆಂದು, ಅವನ ಜ್ಞಾ ಗಳು ಹೈಕೋರ್ಟಿನಲ್ಲಿ ವ್ಯಾಜ್ಯಹೂಡಿದ್ದರು. ಅದರಲ್ಲಿ ಸಾಕ್ಷಿಹೇಳಲಿಕ್ಕೆ ನರೇಂದ್ರನ ಈ ದಿನ ಬೆಳಿಗ್ಗೆ ಕಲಿಕತೆಗೆ ಹೋಗಿದ್ದನು.

ಒಂಬತ್ತು ಗಂಟೆಯ ಸಮಯದಲ್ಲಿ ಮಾಸ್ಟರು ಮಠಕ್ಕೆ ಬಂದನು. ಅವನನ ಕಂಡು ತಾರಕನು ಆನಂದದಿಂದ 'ಥಾಥೈಯ, ಥಾಥೈಯ ಎನ್ನುತೆ ಶಿವ ಕುಣಿದ ಎಂದು ಹಾಡಿದನು. ರಾಖಾಲನೂ ಜತೆಯಲ್ಲಿ ಹಾಡುವುದಕ್ಕೆ ಸೇರಿಕೊಂಡನು ಹಾಡುತ್ತ ಹಾಡುತ್ತ, ಇಬ್ಬರೂ ಕುಣಿಯುತ್ತಿದ್ದಾರೆ. ನರೇಂದ್ರನು ಈಚೆಗೆ ಈ ಹಾಡನ್ನು ಮಾಡಿದ್ದಾನೆ.

ಹಾಡು

ಥಾಥೈಯ ಥಾಥೈಯ ಎನ್ನುತೆ ಶಿವ ಕುಣಿದ ॥ಪಲ್ಲವಿ॥

ಕರದೊಳು ಡಮರುಗ ಡಿಮಿಡಿಮಿಯೆನುತಿರೆ।
ಕೊರಲ ರುಂಡಮಾಲಿಕೆ ತೊನೆಯುತ್ತಿರೆ।
ಶಿರದ ಜಡೆಯೊಳಗೆ ಬದ್ಧವೆನಿಸಿದಾ।
ಸುರಧುನಿ ತೆರೆಮಸಗುತೆ ಗರ್ಜಿಸುತಿರೆ ॥೧॥

ಶೂಲದಿ ದಳ್ಳುರಿ ತಾ ಮಸಗುತ್ತಿರೆ।
ಮೌಳಿಬಂಧವದು ಧಕಧಕಿಸುತ್ತಿರೆ।
ಫಾಲದೊಳಗೆ ಶಶಿ ತಳತಳಿಸುತ್ತಿರೆ।
ಮೇಲೆ ಭೂತಗಣ ಬೊಬ್ಬಿರಿಯುತ್ತಿರೆ ॥೨॥

ಈ ದಿವಸ ಮಠದ ಸನ್ಯಾಸಿಗಳೆಲ್ಲರೂ ಉಪವಾಸಮಾಡುತ್ತಾರೆ. ಈ ನರೇಂದ್ರ, ರಾಖಾಲ, ನಿರಂಜನ, ಶರತ್, ಶಶೀ, ಕಾಳೀ, ಬಾಬೂರಾಮ, ಹರೀಶ ತಾರಕ, ಸಿಂತಿಯ ಗೋಪಾಲ, ಶಾರದ ಮತ್ತು ಮಾಸ್ಟರು ಎಲ್ಲರೂ ಇದ್ದಾರೆ ಯೋಗೀನ್, ಲಾಟೂ ಇಬ್ಬರೂ ವೃಂದಾವನಕ್ಕೆ ಹೋಗಿದ್ದಾರೆ. ಅವರು ಈ ಮ ವನ್ನು ನೋಡಿಯೇ ಇಲ್ಲ. ಬರುವ ಶನಿವಾರ ಶರತ್, ಕಾಳೀ, ನಿರಂಜನ, ಶಾರದ ಇವರು ಜಗನ್ನಾಥನ ದರ್ಶನಕ್ಕಾಗಿ ಪೂರೀಕ್ಷೇತ್ರಕ್ಕೆ ಯಾತ್ರೆಹೋಗಬೇಕೆಂದಿದ್ದಾರ ಶ್ರೀಯುತ ಶಶಿಯು ಹಗಲೂ, ಇರುಳೂ, ಶ್ರೀರಾಮಕೃಷ್ಣಪರಮಹಂಸದೇವ ಸೇವೆಯನ್ನು ಮಾಡುತ್ತಿದ್ದಾನೆ.

ಮಧ್ಯಾಹ್ನದ ಪೂಜೆಯಾಯಿತು. ಶರತ್ತು ತಂಬೂರಿಯನ್ನು ತೆಗೆದುಕೊಂಡ ಮೀಟುತ್ತ, ಹಾಡುತ್ತಾನೆ.

ಹಾಡು

ಕೈಲಾಸಪತಿಯೆ ಶಿವನೆ ಭಂಭಂ। ಹರ।
ಶೂಲಪಾಣಿಯೆ ಶಂಭುವೆ ಭಂಭಂ ॥ಪಲ್ಲವಿ॥

ನಡುವಳು ಹುಲಿದೊಗಲಿನ ಚೇಲ। ಕೊರ।
ಲೆಡೆಯೊಳು ದಂದಶೂಕದ ಮಾಲೆ।
ಉಡುಪತಿಕಲೆಯುದು ತಲೆಮೇಲೆ। ಕೆಂ।
ಗಿಡಿಗಣ್ಣಿನೊಳಗಿಪ್ಪ ಕೆಂಬಣ್ಣದಾಲಿ।

ನರೇಂದ್ರನು ಈಗ ತಾನೇ ಕಲಿಕತೆಯಿಂದ ಬಂದಿದ್ದಾನೆ. ಅವನಿಗೆ ಇನ್ನೂ ಸ್ನಾನವಿಲ್ಲ. 'ವ್ಯಾಜ್ಯದ ವಿಷಯವೇನು?' ಎಂದು ಕಾಳಿಯು ನರೇಂದ್ರನನ್ನು ಕೇಳಿದನು.

ನರೇಂದ್ರ:—(ಕೋಪದಿಂದ) ಆ ಮಾತೆಲ್ಲ ನಿನಗೇಕೆ?

ನರೇಂದ್ರನು ಗುಡಿಗುಡಿಯನ್ನು ಸೇದುತ್ತ, ಮಾಸ್ಟರು ಮುಂತಾದವರೊಡನೆ ಮಾತನಾಡುತ್ತಿದ್ದಾನೆ.

ನರೇಂದ್ರ:—ಕಾಮಿನೀಕಾಂಚನತ್ಯಾಗಮಾಡದಿದ್ದರೆ, ಏನೂ ಆಗುವುದಿಲ್ಲ. ಕಾಮಿನಿಯೇ ನರಕದ ಬಾಗಿಲು. ಎಷ್ಟೋ ಜನರು ಹೆಂಗುಸರಿಗೆ ವಶವಾಗಿ ಹೋಗಿದ್ದಾರೆ! ಆದರೆ ಶಿವ ಮತ್ತು ಕೃಷ್ಣ ಇವರಿಬ್ಬರ ಮಾತೇ ಬೇರೆ. ಶಿವನು ಶಕ್ತಿಯನ್ನು ದಾಸಿಯನ್ನಾಗಿ ಮಾಡಿಕೊಂಡಿದ್ದನು. ಶ್ರೀ ಕೃಷ್ಣನು ಸಂಸಾರಮಾಡಿಕೊಂಡಿದ್ದುದು ನಿಜ. ಆದರೆ ಅವನು ಎಷ್ಟು ನಿರ್ಲಿಪ್ತ! ಹುಸ್ಸೆಂದು ವೃಂದಾವನವನ್ನೇ ತ್ಯಜಿಸಿಬಿಟ್ಟನು.

ರಾಖಾಲ:—ದ್ವಾರಕೆಯನ್ನು ಕೂಡ ಹೇಗೆ ತ್ಯಾಗಮಾಡಿಬಿಟ್ಟನು!

ನರೇಂದ್ರನು ಗಂಗಾಸ್ನಾನ ಮಾಡಿಕೊಂಡು ಬಂದನು. ಕಯ್ಯಲ್ಲಿ ಒದ್ದೆಯ ಪಂಚೆಯೂ, ವಸ್ತ್ರವೂ ಇವೆ. ಶಾರದನು ಮೆಯ್ಗೆ ಮಣ್ಣನ್ನು ಉಜ್ಜಿಕೊಂಡು ಬಂದು, ನರೇಂದ್ರನಿಗೆ ನಮಸ್ಕಾರಮಾಡಿದನು. ಅವನೂ ಶಿವರಾತ್ರೆಗಾಗಿ ಉಪವಾಸಮಾಡಿದ್ದಾನೆ. ಈಗ ಗಂಗಾಸ್ನಾನಕ್ಕೆ ಹೋಗುತ್ತಾನೆ. ನರೇಂದ್ರನು ದೇವರ ಮನೆಗೆ ಹೋಗಿ, ಭಗವಂತನಿಗೆ ಪ್ರಣಾಮಮಾಡಿ, ಅಲ್ಲಿಯೇ ಕೊಂಚ ಹೊತ್ತು ಕುಳಿತು, ಧ್ಯಾನಮಾಡಿದನು.

ಭವನಾಥನ ಪ್ರಸ್ತಾಪವು ಬಂದಿದೆ. ಅವನು ಮದುವೆಮಾಡಿಕೊಂಡಿದ್ದಾನೆ. ಎಲ್ಲಿಯಾದರೂ ಉದ್ಯೋಗಕ್ಕೆ ಸೇರಿಕೊಳ್ಳಬೇಕಾಗಿದೆ. 'ಆ ಸಂಸಾರೀ ಕೀಟಗಳು,' ಎಂದು ನರೇಂದ್ರನು ಹೇಳಿದನು.

ಅಪರಾಹ್ಣವಾಯಿತು. ಶಿವರಾತ್ರೆಯ ಪೂಜೆಗೆ ಏರ್ಪಾಡಾಗುತ್ತಿದೆ. ಬಿಲ್ವಪತ್ರವೂ ಸಮಿತ್ತೂ ಬಂದಿವೆ. ಪೂಜೆಯಾದ ಮೇಲೆ ಹೋಮವಾಗಬೇಕು.

ಸಂಜೆಯಾಯಿತು. ಶಶಿಯು ದೇವರ ಮನೆಯಲ್ಲಿ ಧೂಪಹಾಕಿ, ಅದನ್ನು ತೆಗೆದುಕೊಂಡು, ಒಂದೊಂದು ದೇವದೇವಿಯರ ಪಟದ ಬಳಿಗೂ ಹೋಗಿ, ಪ್ರಣಾಮ ಮಾಡಿ, ಬಹುಭಕ್ತಿಭಾವದಿಂದ, " ಶ್ರೀ ಶ್ರೀಗುರುದೇವಾಯ ನಮಃ, ಶ್ರೀಕಾಳಿಕಾಯೈ ನಮಃ ಶ್ರೀಜಗನ್ನಾಥಸುಭದ್ರಾಬಲರಾಮೇಭ್ಯೋನಮಃ, ಶ್ರೀಷಡ್ಭುಜಾಯ ನಮಃ, ಶ್ರೀರಾಧಾವಲ್ಲಭಾಯ ನಮಃ, ಶ್ರೀನಿತ್ಯಾನಂದಾಯ, ಶ್ರೀ ಅದ್ವೈತಾಯ, ಭಕ್ತೇಭ್ಯೋನಮಃ, ಶ್ರೀಗೋಪಾಲಾಯ, ಶ್ರೀಯಶೋದಾಯೈನಮಃ, ಶ್ರೀರಾಮಾಯ, ಶ್ರೀಲಕ್ಷ್ಮಣಾಯ, ಶ್ರೀವಿಶ್ವಾಮಿತ್ರಾಯ ನಮಃ " ಎಂದು ನಾಮೋಚ್ಚಾರಣೆಯನ್ನು ಮಾಡಿದನು.

ಮಠದ ವೇಲತಲದ ಹತ್ತಿರ ಶಿವಪೂಜೆಯು ಏರ್ಪಾಡಾಗುತ್ತಿದೆ. ಈಗ ಒಂಬತ್ತು ಗಂಟೆ. ಮೊದಲನೆಯ ಪೂಜೆಯಾಗಬೇಕು. ೧೧|| ಗಂಟೆಗೆ ಎರಡನೆಯ ಪೂಜೆ. ನಾಲ್ಕು ಪ್ರಹರಗಳಲ್ಲಿಯೂ ನಾಲ್ಕು ಪೂಜೆ, ಎಂದರೆ ಎರಡು ಗಂಟೆಗೊಮ್ಮೆಯೂ, ಐದು ಗಂಟೆಗೊಮ್ಮೆಯೂ ಪೂಜೆಯಾಗಬೇಕು. ಮಠದ ಸನ್ಯಾಸಿಗಳೂ, ಇತರ ಭಕ್ತರೂ ವೇಲತಲಕ್ಕೆ ಬಂದುಸೇರಿದರು. ಅವರೊಳಗೆ ಒಬ್ಬನು ಪೂಜೆಮಾಡುತ್ತಾನೆ.

ಕಾಳಿಯು ಗೀತೆಯನ್ನು ಓದುತ್ತಾನೆ. ಸೈನ್ಯದರ್ಶನ, ಸಾಂಖ್ಯಯೋಗ ಕರ್ಮಯೋಗಗಳು ಮುಗಿದುವು. ಓದುತ್ತ ನರೇಂದ್ರನೊಂದಿಗೆ ವಿಚಾರಮಾಡುತ್ತಿದ್ದಾನೆ.

ಕಾಳೀ :—ಎಲ್ಲವೂ ನಾನೇ, ನಾನೇ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತೇನೆ.

ನರೇಂದ್ರ :—' ನಾನು ಸೃಷ್ಟಿ ಮಾಡುತ್ತೇನೆ,' ಎನ್ನುವುದು ಹೇಗಾದೀತು ? ಮತ್ತೊಂದು ಶಕ್ತಿಯು ನನ್ನಿಂದ ಮಾಡಿಸುತ್ತದೆ. ಭಗವಂತನೇ ಚಿಂತಾಪರ್ಯಂತ ಎಲ್ಲ ಕಾರ್ಯಗಳನ್ನೂ ಮಾಡಿಸುತ್ತಾನೆ.

ಮಾಸ್ಟರ್ .—(ಸ್ವಗತ) ' ನಾನು ಧ್ಯಾನಮಾಡುತ್ತೇನೆ,' ಎನ್ನುವ ಜ್ಞಾನವಿರುವ ವರೆಗೂ, ಆದ್ಯಾಶಕ್ತಿಯ ಅಧೀನವೆಂದು ಭಗವಾನರವರು ಅಪ್ಪಣೆಕೊಡಿಸುತ್ತಿದ್ದರು. ಶಕ್ತಿಯನ್ನು ನಂಬಲೇ ಬೇಕು.

ಕಾಳೀ :—(ನಿಸ್ತಬ್ಧನಾಗಿ ಕೊಂಚ ಆಲೋಚಿಸಿ) ಕಾರ್ಯವೆನ್ನುತ್ತೀಯಲ್ಲ, ಅದೇ ಮಿಥ್ಯೆ. ಚಿಂತೆಯೂ ಇಲ್ಲ. ಇದನ್ನು ಆಲೋಚಿಸಿದರೇ ನಗೆಯು ಬರುತ್ತದೆ.

ನರೇಂದ್ರ :—' ಸೋಹಂ, ' ಎಂಬುದರ ' ನಾನು, ' ಈ ' ನಾನು, ' ಅಲ್ಲ ; ಮನಸ್ಸು, ದೇಹ, ಎಲ್ಲವನ್ನೂ ಬಿಟ್ಟರೆ ಆವುದು ಉಳಿಯುತ್ತದೆಯೋ ಅದು.

ಗೀತಾಪಾಠದ ಕೊನೆಯಲ್ಲಿ ಕಾಳಿಯು, ' ಓಂ ಶಾಂತಿಶ್ಶಾಂತಿಶ್ಶಾಂತಿಃ ,' ಎಂದನು.

ಈಗ ನರೇಂದ್ರಾದಿಭಕ್ತರೆಲ್ಲರೂ ಎದ್ದು ನಿಂತು ಹಾಡುತ್ತ, ದರ್ಶನಮಾಡುತ್ತ, ಬಿಲ್ವವೃಕ್ಷವನ್ನು ಬಲು ಸಾರಿ ಪರಿಕ್ರಮಣಮಾಡಿದರು. ಮಧ್ಯೇ, ಮಧ್ಯೇ, 'ಶಿವಗುರು, ಶಿವಗುರು,' ಎಂಬ ಮಂತ್ರವನ್ನು ಸಮಸ್ವರದಲ್ಲಿ ಉಚ್ಚರಿಸುತ್ತಿದ್ದರು. ಅಂದು ಕೃಷ್ಣಪಕ್ಷ ಚತುರ್ದಶೀ, ಗಭೀರವಾದ ರಾತ್ರಿ, ನಾಲ್ಕು ದಿಕ್ಕಿನಲ್ಲಿಯೂ ಅಂಧಕಾರ, ಜೀವಜಂತುಗಳೆಲ್ಲವೂ ನಿಸ್ತಬ್ಧವಾಗಿದ್ದುವು. ಗೈರಿಕವಸ್ತ್ರಧಾರಿಗಳಾದ, ತೀವ್ರವೈರಾಗ್ಯದಿಂದೊಡಗೂಡಿದ ಈ ಬಾಲಕ ಭಕ್ತಗಣದ ಕಂಠದಿಂದ ಉಚ್ಚರಿತವಾದ, 'ಶಿವಗುರು, ಶಿವಗುರು,' ಎಂಬ ಮಹಾಮಂತ್ರಸ್ವರವು, ಮೇಘಗಂಭೀರ ಧ್ವನಿಯಿಂದ ಅನಂತವಾದ ಆಕಾಶದಲ್ಲಿ ಎದ್ದು, ಅಖಂಡಸಚ್ಚಿದಾನಂದದಲ್ಲಿ ಲೀನವಾಗಿ ಹೋಯಿತು.

ಪೂಜೆಯು ಮುಗಿಯಿತು. ಅರುಣೋದಯವಾಗುತ್ತ ಬಂದಿತು. ನರೇಂದ್ರಾದಿ ಭಕ್ತರು ಬ್ರಾಹ್ಮಮುಹೂರ್ತದಲ್ಲಿ ಮತ್ತೆ ಗಂಗಾಸ್ನಾನಮಾಡಿದರು.

ಬೆಳಗಾಯಿತು. ಸ್ನಾನಮಾಡಿದ ಬಳಿಕ, ಭಕ್ತರು ಮಠದಲ್ಲಿ ದೇವರ ಮನೆಗೆ ಹೋಗಿ, ದೇವರಿಗೆ ನಮಸ್ಕಾರಮಾಡಿ, ಒಬ್ಬೊಬ್ಬರಾಗಿ ಕೂರುವ ಮನೆಗೆ ಬಂದು ಕುಳಿತುಕೊಂಡರು. ನರೇಂದ್ರನು ನೂತನಸುಂದರಗೈರಿಕವಸನವನ್ನು ಧಾರಣೆಮಾಡಿದ್ದಾನೆ. ಆ ಕಾವಿಯ ಬಟ್ಟೆಯ ಜತೆಗೆ ಅವನ ಮುಖದಲ್ಲಿಯೂ, ಮೆಯ್ಯಲ್ಲಿಯೂ, ತಪಸ್ಸಿಂದುಂಟಾದ ಅಪೂರ್ವವಾದ ಸ್ವರ್ಗೀಯಜ್ಯೋತಿಯೂ ಸೇರಿದೆ. ಮುಖಮಂಡಲವು ಪ್ರೇಮಾನುರಂಜಿತವಾಗಿಯೂ ತೇಜಃಪುಂಜಿತವಾಗಿಯೂ ಇದೆ. ಅಖಂಡಸಚ್ಚಿದಾನಂದಸಾಗರದ ಒಂದು ತುಣಕು, ಜನರಿಗೆ ಭಕ್ತಿಜ್ಞಾನಗಳನ್ನು ಉಪದೇಶಿಸಿ, ಶ್ರೀರಾಮಕೃಷ್ಣರ ಅವತಾರಲೀಲೆಯ ಸಾಹ್ಯಕ್ಕಾಗಿ ಈ ರೀತಿ ದೇವದೇಹದಿಂದ ಬಂದಿದೆಯೋ ಎಂಬಂತೆ ಅವನು ಕಾಣುತ್ತಿದ್ದಾನೆ. ಅವನನ್ನು ನೋಡುತ್ತಿದ್ದ ಭಕ್ತರ ಕಣ್ಣುಗಳು ಬೇರೆ ಕಡೆಗೆ ತಿರುಗಲಾಗಲಿಲ್ಲ. ನರೇಂದ್ರನಿಗೆ ಆಗ ಸರಿಯಾಗಿ ಇಪ್ಪತ್ತನಾಲ್ಕು ವಯಸ್ಸು. ಇದೇ ವಯಸ್ಸಿನಲ್ಲಿಯೇ ಚೈತನ್ಯದೇವನೂ ಸಂಸಾರವನ್ನು ತ್ಯಾಗಮಾಡಿದನು.

ಭಕ್ತರು ಪಾರಣೆಮಾಡಲೆಂದು ಬಲರಾಮನು ತನ್ನ ಮನೆಯಿಂದ ಫಲಗಳನ್ನೂ, ಪಾಯಸ, ಮಿಠಾಯಿಗಳನ್ನೂ ಕಳುಹಿಸಿಕೊಟ್ಟಿದ್ದನು.

ರಾಖಾಲ ಮುಂತಾದ ಒಬ್ಬೊಬ್ಬರು ಭಕ್ತರ ಸಂಗಡ ನರೇಂದ್ರನು ಓಡಾಡುತ್ತ, ನಿಂತುಕೊಂಡಹಾಗೆಯೇ ಫಲಾಹಾರಮಾಡಿದನು. ಅವನು ಒಂದೆರಡು ಪದಾರ್ಥಗಳನ್ನು ಭುಜಿಸಿ, ಸಂತಸದಿಂದ ಹಾಸ್ಯಮಾಡುತ್ತ, 'ಧನ್ಯಬಲರಾಮ, ಧನ್ಯಬಲರಾಮ,' ಎಂದು ಹೇಳಿದನು. (ಎಲ್ಲರೂ ನಗುತ್ತಾರೆ)

ಈಗ ನರೇಂದ್ರನು ಬಾಲಕರಂತೆ ವಿನೋದಮಾಡುತ್ತಾನೆ. ಬಾಯಲ್ಲಿ ಮಿಠಾಯನ್ನಿಟ್ಟುಕೊಂಡು, ಅವನು ಒಂದೇ ಸಲಕ್ಕೆ ಅಲ್ಲಾಡದೆ ನಿಂತುಬಿಟ್ಟನು. ಕಣ್ಣುಗಳು ತೆರೆದಿವೆ. ಎವೆಯಾಡುವುದಿಲ್ಲ. ಅವನ ಈ ಅವಸ್ಥೆಯನ್ನು ನೋಡಿ ಭಕ್ತನೊಬ್ಬನು 'ಇವನೆಲ್ಲಿ ಬಿದ್ದುಬಿಡುತ್ತಾನೆಯೋ,' ಎಂದು ಓಡಿಬಂದು ಅವನನ್ನು ಹಿಡಿದುಕೊಂಡನು.

ಕೊಂಚ ಹೊತ್ತಿನ ಮೇಲೆ, ನರೇಂದ್ರನು ಕಣ್ಣುಮುಚ್ಚಿಕೊಂಡು, ಬಾಯಲ್ಲಿ ಮಿಠಾಯನ್ನು ಇರಿಸಿಕೊಂಡೇ, 'ನಾನು—ಚೆನ್ನಾಗಿ—ಇದ್ದೇನೆ,' ಎಂದನು. (ಎಲ್ಲರೂ ನಗುತ್ತಾರೆ.)

ಮಾಸ್ಟರಿಗೂ, ಮಿಕ್ಕ ಭಕ್ತರಿಗೂ ಸಿದ್ಧಿ, ಮಿಠಾಯಿ, ಪಾಯಸ ಮುಂತಾದ ಪ್ರಸಾದವು ಕೊಡಲ್ಪಟ್ಟುವು.

ಮಾಸ್ಟರು ಆನಂದದ ಸಂತೆಯನ್ನು ನೋಡುತ್ತಿದ್ದಾನೆ. ಭಕ್ತರೆಲ್ಲರೂ 'ಜಯ ಗುರುಮಹಾರಾಜ, ಜಯ ಗುರುಮಹಾರಾಜ,' ಎಂದು ಜಯಧ್ವನಿಯನ್ನು ಮಾಡುತ್ತಿದ್ದಾರೆ.

ಶುದ್ಧಾಶುದ್ಧ ಪತ್ರ

ಪಂಕ್ತಿ	ಅಶುದ್ಧ	ಶುದ್ಧ
೧೩	ಕ್ಷುಧಿರಾ	ಕ್ಷುಧಿ
೨೭	ಯಾವ	ಆವ
೨೮	ಆವನು	ಅವನು
೧೫	ವೇಳೆಯಲಿ	ವೇಳೆಯಲ್ಲಿ
೨೩	ಕೊಟಡಿಯಲ್ಲಿ	ಕೊಟ್ಟಡಿಯಲ್ಲಿ
೨೬	ಕೊಟಡಿಗೆ	ಕೊಟ್ಟಡಿಗೆ
೧೧	ಯಿರುತ್ತದ	ಯಿರುತ್ತದೆ
೧೫	ಕೊಟಡಿ	ಕೊಟ್ಟಡಿ
೨೭	,,	,,
೪	,,	,,
೮	,,	,,
೨೭	ಯಾರೂ	ಆರೂ
೬	ನೆಮ್ಮದಿಯಾಗಿದ್ದೇವೆ	ನೆಮ್ಮದಿಯಾಗಿದ್ದೇವೆ
ಕೊನೆಯದು	ದ್ಧಾರೆ	ದ್ದಾರೆ
೧೦	ತ್ತಾರೆ	ತ್ತಾನೆ
೧೩	ಪಾಪವನ್ನು	ಪಾಪವನ್ನೂ
ಕೆಳಗಿಂದ ೫	ಕೊಟಡಿ	ಕೊಟ್ಟಡಿ
,, ೧೦	ಯಾವಾಗ	ಆವಾಗ
೧೧	ಕೆಲಸವನ್ಸು	ಕೆಲಸವನ್ನು
೭	ಹೆಬ್ಬಾಲಿಗೂ	ಹೆಬ್ಬಾಗಿಲಿಗೂ
೨೦	ಆವಿದ್ಯಾ	ಅವಿದ್ಯಾ
೨೪	ರಾಮಕೃಷ್ಣ	ಶ್ರೀರಾಮಕೃಷ್ಣ
೧	ಆವನ್ನು	ಅವನ್ನು
೧೨	ಶ್ರೀರಾಮಕೃಷ	ಶ್ರೀರಾಮಕೃಷ್ಣ
೧೯	ತ್ತಿದ್ದಾನೆ	ತ್ತಿದ್ದಾನೆ
೭	ಸಿದ್ದೀರಿ	ಸಿದ್ದೀರಿ
೪	ವುದರಿಂದ	ವುದರಿಂದ'
೧೩	ಅದ್ಭುತಾ	ಆದ್ಭುತಾ
೩	ಶ್ರೀ	ಶ್ರೀ

೮೨	ಕೆಳಗಿಂದ ೪	ಸ್ರೀ	ಸ್ತ್ರೀ
೮೯	,, ೫	ಕೇಳಿದನು	ಕೇಳಿದೆನು
೯೦	೧೨	ಯಲ್ಲಯೇ	ಯಲ್ಲಿಯೇ
೯೧	೧ ನೆಯ ಪದ್ಯ	ವೋಹನಮೂರ್ತಿ	ಮೋಹನಮೂ…
೯೨	೬ ,,	ನಾಢ	ನಾಥ
೯೬	ಕೆಳಗಿಂದ ೭	ಬಂದು	ಒಂದು
೯೭	ಮೇಲುಗಡೆಯ ಮೂಲೆ	ಅಕ್ಟೋಬರು ೧೬	ಅಕ್ಟೋಬರು …
೯೯	,,	,,	,,
೧೦೧	,,	,,	,,
೧೦೩	,,	,,	,,
,,	೫	ವುದಕ್ಯೆ	ವುದಕ್ಕೆ
೧೦೪	೫	ಶ್ರೀಭಗವಾನ್	ಭಗವಾನ್ ಶ್ರೀ…
೧೧೧	೨	ಎಲ್ಲಿದ್ದಿ ಯೋ	ಎಲ್ಲಿದ್ದೀಯೋ
೧೧೮	ಮೇಲು ಮೂಲೆ		೧೮೮೨
೧೧೯	ಕೆಳಗಿಂದ ೭ ನೆಯ ಪಂಗ್ತಿ	ಆಪೇಕ್ಷಿಸು	ಅಪೇಕ್ಷಿಸು
೧೨೩	,, ೬ ,,	ಕೊಂಡು ಎಂಬುದನ್ನು ತೆಗೆದು, ಎನ್ನು… ತರುವಾಯ ಓದ…	
೧೩೭	,, ೬ ,,	ಸ್ಥಾನವನು	ಸ್ಥಾನವನ್ನು
೧೩೭	,, ೯ ,,	ಆಸ್ತತ್ರೆ	ಆಸ್ಪತ್ರೆ
೧೩೮	೧೦	ಬಳ್ಳೆಯದು	ಒಳ್ಳೆಯದು
,,	ಕೆಳಗಿಂದ ೪	ಕೇಶವನ್ನೆಲ್ಲಿ	ಕೇಶವನೆಲ್ಲಿ
೧೪೧	೩	ದಕ್ಷಿಣೆಶ್ವರ	ದಕ್ಷಿಣೇಶ್ವರ
೧೫೧	ಮೇಲು ಮೂಲೆ	೨೭	೨೮
೧೫೩	೨೦	ಬಳ್ಳಿ	ಒಳ್ಳೆ
೧೫೭	ಶ್ಲೋಕ	ದೃಷ್ಟಾಟಿ	ದೃಷ್ಟಾಟವ
೧೫೮	೧	ಪಡ್ಧತಿ	ಪದ್ಧತಿ
,,	೧೮	ಬುದಿ	ಬುದ್ಧಿ
,,	೧೯	ಲಕ್ಷಿ	ಲಕ್ಷ್ಮಿ
೧೬೦	೧	ಹೇಳಿದಾರೆ	ಹೇಳಿದ್ದಾರೆ
,,	ಕೆಳಗಿಂದ ೧೪	ಬಿದ್ಧಿದ್ದುವು	ಬಿದ್ದಿದ್ದುವು
೧೬೨	,, ೨	ಗಿದ್ಧಾನೆ	ಗಿದ್ದಾನೆ
೧೬೬	೧	ಅವುಗಳನು	ಅವುಗಳನ್ನು

,,	೯	ತ್ಯಾಗವನು	ತ್ಯಾಗವನ್ನು
೧೬೯	ಕೆಳಗಿಂದ ೩	ಆಚಲ	ಅಚಲ
೧೭೩	೧೧	ವಾಜ್ಯ	ವ್ಯಾಜ್ಯ
೧೭೫	ಕೆಳಗಿಂದ ೧೨	ಆಂಚಿನ	ಅಂಚಿನ
೧೮೧	,, ೮	ಇಚ್ಛೆ	ಇಚ್ಛೆ
೧೮೨	೫	ವೊಸ	ಮೋಸ
೧೮೩	ಕೆಳಗಿಂದ ೬	ವಿದ್ದರೂ	ವಿದ್ದರೂ
೧೮೮	೧೪	ಕಣ್ಣು	ಕಣ್ಣ
೧೯೨	೧೮	ಶ್ರೀರಾಮಕೃಷ	ಶ್ರೀರಾಮಕೃಷ್ಣ
೧೯೪	ಕೆಳಗಿಂದ ೫	ಆದು	ಅದು
೨೦೦	೩	ಹೊರಡುವುದೆಕ್ಕೆ	ಹೊರಡುವುದಕ್ಕೆ
೨೦೯	೧೩	ಓದುತ್ತಾನ್ಮೆ	ಓದುತ್ತಾನೆ
,,	೧೪	ಶಬ್ದಬ್ರಹ	ಶಬ್ದಬ್ರಹ್ಮ
೨೧೫	ಶಿರೋಲೇಖನ	ಸಾಂಪ್ರದಾಯಕತೆ	ಸಾಂಪ್ರದಾಯಿಕತೆ
೨೧೬	೧೧	ಗೊಸುಂಬೆ	ಗೋಸುಂಬೆ
೨೧೮	ಕೆಳಗಿಂದ ೧೧	ಮುಖವನು	ಮುಖವನ್ನು
೨೧೯	೧೦	ತಿಪೆಯು	ತಿಪ್ಪೆಯು
೨೨೩	೨	ಕಾಣುತ್ತಿದ್ದರು	ಕಾಣುತ್ತಿದ್ದರು
೨೨೪	೧೪	ಅದ್ಭುತ	ಅದ್ಭುತ
೨೩೩	೧೭	ಅವನ,	ಅವನು
೨೩೪	ಕೆಳಗಿಂದ ೬	ಆವರು	ಅವರು
೨೩೯	ಪದ್ಯ ೨	ಎಡಬಿಡದಂತೆ	ಎಡೆಬಿಡದಂತೆ
,,	,, ೩	ಬಂಧಿಸುಪರ	ಬಂಧಿಸುವರ
೨೪೪	ಕೆಳಗಿಂದ ೯	ಕೊಂಡಿದ್ದೇಯೆ	ಕೊಂಡಿದ್ದೀಯೆ
೨೫೦	,, ೧೦	ನಿನ	ನಿನ್ನ
೨೫೮	೧	ಕೀರ್ತನಿಯು	ಕೀರ್ತನೀಯು
,,	ಕೆಳಗಿಂದ ೩	ಮನವಲ್ಲಿ	ಮವನಲ್ಲಿ
,,	ಮೇಲು ಮೂಲೆ	೧೮೬೩	೧೮೮೩
